ಕೊಡಗು ಗೌಡ ವಿದ್ಯಾ ಸಂಘ

ಮಡಿಕೇರಿ

ಕದಿರು

ಶತಮಾನದ ಸ್ಮರಣೆ

೧೯೦೮-೨೦೦೮



ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ, ಮಡಿಕೇರಿ.

ಕೊಡಗು ಗೌಡ ವಿದ್ಯಾ ಸಂಘ (ರಿ.)

ಗುಡ್ಡೆ ಮನೆ ಅಪ್ಪಯ್ಯ ಗೌಡ ರಸ್ತೆ, ಮಡಿಕೇರಿ

ಕದಿರು

ಶತಮಾನದ ಸ್ಮರಣೆ

: ಶತಮಾನೋತ್ಸವ ಸಮಾರಂಭದ ಸ್ಥಳ :

ಗುಡ್ಡೆಮನೆ ಹುತಾತ್ಮ ಅಪ್ಪಯ್ಯ ಗೌಡ ಸಭಾಂಗಣ

ಕುಂಭಗೌಡನ ದಿ.ಕುಶಾಲಪ್ಪ ಗೌಡ ವೇದಿಕೆ,

ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ - 571 201

7.3.2009 ಶನಿವಾರ ಮತ್ತು 8.3.2009 ಭಾನುವಾರ

ಕೊಡಗು ಗೌಡ ವಿದ್ಯಾ ಸಂಘದ

ಶತಮಾನದ ಸ್ಮರಣೆಗಾಗಿ

ಹೊರತರಲಾದ ನೆನಪಿನ ಸಂಚಿಕೆ

ಕದಿರು


ಸಮಾರಂಭದ ದಿನಾಂಕ : 7-03-2009
ಮತ್ತು
8-03-2009

ಮುದ್ರಣ : ಶಕ್ತಿ ಪ್ರಿಂಟರ್ಸ್
ಕೈಗಾರಿಕಾ ಬಡಾವಣೆ
ಮಡಿಕೇರಿ
ದೂರವಾಣಿ : (08272) - 228382-229202
ಫ್ಯಾಕ್ಸ್ : (08272) - 228875
ಈಮೇಲ್ : shakthidaily@rediffmail.com
shakticoncern@yahoo.com

ಮುಖಪುಟ ವಿನ್ಯಾಸ : ಶ್ರೀ ಬಿ.ಆರ್. ಸತೀಶ್
ವೀರಾಜಪೇಟೆ

ಬೆಲೆ : ರೂ. 50.00

ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ
ಆದಿಚುಂಚನ ಗಿರಿ ಮಹಾಸಂಸ್ಥಾನ



ಶುಭ ಸಂದೇಶ


ಗಿರಿ ಕಂದರಗಳ ಸುಂದರ ಪರಿಸರದ ಕೊಡಗು ಜಿಲ್ಲೆ ಶ್ರೀ ಕಾವೇರಿ ಮಾತೆಯ ಉಗಮದ ಕೇಂದ್ರ.

ನಾನಾ ಕಾರಣಗಳಿಂದ ಕೊಡಗು ಜಿಲ್ಲೆ ವಿಶ್ವಾದ್ಯಂತ ಹೆಸರುವಾಸಿಯಾಗಿದೆ. ವಿದ್ಯಾ ಪ್ರಗತಿಗಾಗಿ ಶ್ರಮಿಸುತ್ತಿರುವ ಕೊಡಗು ಗೌಡ ವಿದ್ಯಾ ಸಂಘದ ಕೆಲಸ ಶ್ಲಾಘನೀಯ.

ವಿದ್ಯೆ ನೀಡುವುದು ಪರಮ ಪೂಜನೀಯ ಕಾರ್ಯವಾಗಿದೆ. ಇಂತಹ ಪೂಜನೀಯ ಕಾರ್ಯದಲ್ಲಿ ಕೊಡಗು ಗೌಡ ವಿದ್ಯಾ ಸಂಘ ತನ್ನನ್ನು ತೊಡಗಿಸಿಕೊಂಡು ಇದೀಗ ನೂರು ವರ್ಷಗಳನ್ನು ಪೂರೈಸಿ ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವ ಈ ಶುಭ ಸಂದರ್ಭದಲ್ಲಿ ಶುಭಾಶಯಗಳು.

ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ

ಶ್ರೀ ಬಿ.ಎಸ್. ಯಡ್ಯೂರಪ್ಪ
ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ



ಶುಭ ಸಂದೇಶ

ಕೊಡಗು ಕರ್ನಾಟಕದ ಒಂದು ವಿಶಿಷ್ಟ ಜಿಲ್ಲೆ. ಜೀವನದಿ ಕಾವೇರಿಗೆ, ವೀರಕಲಿಗಳ ಪರಂಪರೆಗೆ ಕೊಡಗು ಪ್ರಸಿದ್ಧ. ನಿಸರ್ಗ ರಮಣೀಯತೆಗೂ, ವಾಣಿಜ್ಯ ಬೆಳೆಗಳಿಗೂ ಕೊಡಗು ಪ್ರಖ್ಯಾತ.


ಇಂತಹ ಕೊಡಗಿನಲ್ಲಿ 1908ರಲ್ಲಿ ವಿದ್ಯಾಭಿವೃದ್ಧಿಗೆಂದು ಸ್ಥಾಪನೆಗೊಂಡ ಕೊಡಗು ಗೌಡ ವಿದ್ಯಾ ಸಂಘ ಈಗ 100 ಸಂವತ್ಸರಗಳನ್ನು ಮೀರಿ, ಹೊಸ ಎತ್ತರದೊಂದಿಗೆ ಮುನ್ನಡೆಯುತ್ತಿರುವದು ಶ್ಲಾಘನೀಯ.

ಈ ದಿಸೆಯಲ್ಲಿ ಹೊರಬರುತ್ತಿರುವ 'ಕದಿರು' ಎಂಬ ಶತಮಾನದ ಸ್ಮರಣೆಯ ಸಂಗ್ರಹ ಸಂಚಿಕೆ ಸಾರ್ಥಕ ಮತ್ತು ಅನ್ವರ್ಥಕ.

ವಿದ್ಯಾ ಸಂಘದ ಉದ್ದೇಶಗಳು ಮತ್ತು ಬೆಳವಣಿಗೆ ಅಗಾಧ ಯಶಸ್ಸು ಕಾಣಲಿ ಎಂದು ಹಾರೈಸುತ್ತೇನೆ.

ಬಿ.ಎಸ್. ಯಡ್ಯೂರಪ್ಪ

ಡಿ.ವಿ. ಸದಾನಂದ ಗೌಡ
ಬಿ.ಎಸ್ಸಿ., ಎಲ್.ಎಲ್.ಬಿ.
ಸಂಸದರು
ಮಂಗಳೂರು, ದಕ್ಷಿಣ ಕನ್ನಡ, ಕರ್ನಾಟಕ
ಮಂಗಳೂರು : 0824 - 2448888
ಪುತ್ತೂರು (ಮನೆ) : 08251 - 233249
ಡೆಲ್ಲಿ : 011 - 23795006
ಮೊಬೈಲ್ ಪುತ್ತೂರು : 94481 - 23249
ಮೊಬೈಲ್ ಡೆಲ್ಲಿ : 98681 - 80269



ಶುಭ ಸಂದೇಶ


ಸಂಖ್ಯೆಯಲ್ಲಿ ವಿರಳವಾಗಿದ್ದರೂ ಅನನ್ಯ ಭಾಷೆ, ಸಂಸ್ಕೃತಿ, ವೀರ ಪರಂಪರೆ ಹೊಂದಿರುವ ಕೊಡಗು ಗೌಡ ಸಮುದಾಯದ ಹೆಮ್ಮೆಯ ವಿದ್ಯಾಸಂಘ ಶತಮಾನೋತ್ಸವ ಆಚರಿಸಿಕೊಳ್ಳುತ್ತಿರುವುದು ಅಭಿಮಾನ ವಿಚಾರ. ಸಮಾಜದ ಮುಖ್ಯವಾಹಿನಿಯಲ್ಲಿ ಗಣನೀಯ ಸಾಧನೆ ಮಾಡಲು ಹಲವು ತಲೆಮಾರುಗಳಿಗೆ ಸಹಾಯವಿತ್ತ ಸಂಘದ ತತ್ಪರತೆ ಅನುಕರಣೀಯ.

ಧನ್ಯ ಶತಮಾನದ ಸ್ಮರಣೆಯಲ್ಲಿ ಹೊರಬರುತ್ತಿರುವ "ಕದಿರು" ವಿಶೇಷ ಸಂಚಿಕೆ ಅರ್ಥಪೂರ್ಣ.

ವಿದ್ಯಾ ಸಂಘದ ಸಾಧನೆಗಳು ಇನ್ನಷ್ಟು ವ್ಯಾಪಕವಾಗಲಿ. ಹೊಸ ಶಿಕ್ಷಣ ಸಂಸ್ಥೆಗಳೂ ಬೆಳೆದು ನಿಲ್ಲಲಿ. ಜನಾಂಗದ ಸರ್ವಾಂಗೀಣ ಅಭ್ಯುದಯವಾಗಲಿ.

ಡಿ.ವಿ. ಸದಾನಂದ ಗೌಡ

ಕೆ.ಜಿ. ಬೋಪಯ್ಯ
ಬಿ.ಎಸ್ಸಿ., ಎಲ್.ಎಲ್.ಬಿ.
ಉಪ ಸಭಾಪತಿಗಳು
ವಿಧಾನಸಭೆ, ಕರ್ನಾಟಕ ಸರಕಾರ
ಬೆಂಗಳೂರು
ದೂರವಾಣಿ : 08272-229670 (R)
08272-594270 (O)
080 - 22359011 (L.H)
ನಂ. 23/232, "ವುಡ್ ಲ್ಯಾಂಡ್ ಸನ್"
ಕೌಂಟಿ ಕ್ಲಬ್ ಸಮೀಪ, ಮಡಿಕೇರಿ



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘವು ಏಳುಬೀಳುಗಳನ್ನು ಲೆಕ್ಕಿಸದೆ ಮುನ್ನಡೆದು, ನೂರು ಸಂವತ್ಸರಗಳನ್ನು ಯಶಸ್ವಿಯಾಗಿ ಪೂರೈಸಿದ್ದು, ಶತಮಾನೋತ್ಸವ ಆಚರಿಸುತ್ತಿರುವುದು ಅತೀವ ಹೆಮ್ಮೆಯ ವಿಚಾರವಾಗಿದೆ. ಈ ವಿದ್ಯಾ ಸಂಘವನ್ನು ಹುಟ್ಟು ಹಾಕಿದ ಹಿರಿಯರು ಧನ್ಯರಾಗಿದ್ದಾರೆ.

ಶತಮಾನೋತ್ಸವ ಆಚರಣೆ ಸಂದರ್ಭದಲ್ಲಿ "ಕದಿರು" ಎಂಬ ಸ್ಮರಣ ಸಂಚಿಕೆ ಹೊರ ತರುತ್ತಿರುವುದು ಸಂತಸ ತಂದಿದೆ. ಸಮಾರಂಭ ಸಂಭ್ರಮೋಲ್ಲಾಸಗಳಿಂದ ನೆರವೇರಲಿ. ಈ ವಿದ್ಯಾ ಸಂಘದ ಮೂಲಕ ಪ್ರತಿಭಾವಂತರು ಅನವರತ ಮೂಡಿಬರುತ್ತಿರಲಿ ಎಂಬ ಸದಾಶಯಗಳೊಂದಿಗೆ,

ಕೆ.ಜಿ. ಬೋಪಯ್ಯ

ಎಸ್.ಎಂ. ಕೃಷ್ಣ
ಸಂಸತ್ ಸದಸ್ಯರು (ರಾಜ್ಯಸಭಾ)
ನಂ. 143, 5ನೇ ಅಡ್ಡ ರಸ್ತೆ, 9ನೇ ಮುಖ್ಯರಸ್ತೆ
ಸದಾಶಿವನಗರ, ಬೆಂಗಳೂರು - 560 080
ದೂರವಾಣಿ : 2361 4000 / 2361 6000
ಫ್ಯಾಕ್ಸ್ : 2361 4400

सत्यमेव जयते



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘವು ಶತಮಾನೋತ್ಸವ ಸ್ಮರಣ ಸಂಚಿಕೆ ಸಮಿತಿಯ ವತಿಯಿಂದ ಶತಮಾನೋತ್ಸವ ಆಚರಣೆಯ ಸಂಭ್ರಮದಲ್ಲಿ "ಕದಿರು" ಎಂಬ ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು ಸಂತಸದ ಸಂಗತಿ.

ಈ ಸಂಚಿಕೆಯು ಹಲವಾರು ಲೇಖಕರನ್ನೊಳಗೊಂಡು, ಓದುಗರಿಗೆ ಪ್ರಯೋಜನವಾಗಲಿ ಹಾಗೂ ಕೊಡಗು ಗೌಡ ವಿದ್ಯಾ ಸಂಘದ ಎಲ್ಲಾ ಸಂಪಾದಕ ಮಂಡಳಿಯವರಿಗೂ ಶುಭವಾಗಲೆಂದು ತುಂಬು ಹೃದಯದಿಂದ ಹಾರೈಸುತ್ತೇನೆ.

ವಂದನೆಗಳೊಂದಿಗೆ,

ಎಸ್.ಎಂ. ಕೃಷ್ಣ

ಹೆಚ್.ಡಿ. ಕುಮಾರ ಸ್ವಾಮಿ
ಮಾಜಿ ಮುಖ್ಯಮಂತ್ರಿಗಳು
ಕರ್ನಾಟಕ ಸರಕಾರ
ಹಾಗೂ ಹಾಲಿ ಶಾಸಕರು
ವಿಧಾನಸೌಧ, ಬೆಂಗಳೂರು



ಶುಭ ಸಂದೇಶ


ಕೊಡಗು ಗೌಡ ವಿದ್ಯಾ ಸಂಘ ವಿದ್ಯಾಭಿವೃದ್ಧಿಯ ನಿಟ್ಟಿನಲ್ಲಿ ಸಾರ್ಥಕ ಶತಮಾನ ಪೂರೈಸಿರುವದು ನಿಜವಾದ ಅರ್ಥದಲ್ಲಿ ಒಂದು ಸಮಾಜಮುಖಿ ಚಳುವಳಿ. ವಿದ್ಯಾ ಸಂಘದ ಆಶ್ರಯದಲ್ಲಿ ನಾಡಿಗೆ ಹಲವು ಪ್ರತಿಭಾನ್ವಿತರ ಸಮರ್ಥ ಸೇವೆ ಸಂದಿದೆ.

ಶತಮಾನದ ಸ್ಮರಣೆಗಾಗಿ ಹೊರಬರುತ್ತಿರುವ 'ಕದಿರು' ಸಂಚಿಕೆ ಹೆಸರಿಗೆ ತಕ್ಕಂತೆ ಸಮೃದ್ಧವಾಗಿ, ಜ್ಞಾನ ಸಂಪನ್ನತೆಯಿಂದ ಕೂಡಿರುತ್ತದೆ ಎಂಬ ವಿಶ್ವಾಸ ನನ್ನದು.

ವಿದ್ಯಾ ಸಂಘದ ಭವಿತವ್ಯ ಉಜ್ವಲವಾಗಲಿ. ವಿದ್ಯಾಭಿಮಾನಿಗಳ ಸಾಧನೆ ಆದರ್ಶಪ್ರಾಯವಾಗಲಿ ಎಂಬ ಸದಾಶಯಗಳೊಂದಿಗೆ,

ಹೆಚ್.ಡಿ. ಕುಮಾರಸ್ವಾಮಿ

ACADEMY OF LIBERAL EDUCATION (R.)
Estd. 1967
Jurunjibag - 574 327, Sullia
Dakshina Kannada, Karnataka, India
Office : (08257)-230608
Res : 230308 / 230908
Mobile : 9341126067



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘದ ಶತಮಾನೋತ್ಸವ ಆಚರಣೆಯ ಸಂಭ್ರಮದ ಈ ಶುಭ ಸಂದರ್ಭದಲ್ಲಿ "ಕದಿರು" ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು ತುಂಬಾ ಸ್ತುತ್ಯಾರ್ಹವಾಗಿದೆ.


1908ರಲ್ಲಿ ಮಡಿಕೇರಿಯಲ್ಲಿ ಜನಾಂಗದ ಹಿರಿಯರ ಮಾರ್ಗದರ್ಶನದಲ್ಲಿ ಘನ ಉದ್ದೇಶಗಳೊಂದಿಗೆ ಸ್ಥಾಪಿತವಾದ ಕೊಡಗು ಗೌಡ ವಿದ್ಯಾ ಸಂಘವು ಇದೀಗ 100 ವಸಂತಗಳನ್ನು ದಾಟಿ ಶತಮಾನೋತ್ಸವವನ್ನು ಆಚರಿಸುತ್ತಿರುವುದು ಸಂತೋಷವನ್ನುಂಟುಮಾಡಿದೆ. ಸಂಘದ ಶೈಕ್ಷಣಿಕ ಹಾಗೂ ಸಾಮಾಜಿಕ ಸೇವಾ ಕಾರ್ಯಗಳು ಇನ್ನುಷ್ಟು ವಿಸ್ತಾರಗೊಂಡು ಕೊಡಗಿನ ಜನಾಂಗದ ಸರ್ವತೋಮುಖ ಅಭಿವೃದ್ಧಿಗೆ ಕಾರಣವಾಗಲಿದೆ ಎಂದು ಹಾರೈಸುತ್ತೇನೆ.

ಈ ಸಂದರ್ಭದಲ್ಲಿ ಹೊರತರಲಿರುವ ಸ್ಮರಣ ಸಂಚಿಕೆಯು ಸ್ಮರಣ ಸಂಚಿಕೆಯು ವೈವಿಧ್ಯಮಯವಾದ ವಿಚಾರಪೂರ್ಣ ಲೇಖನಗಳಿಂದ ಹಾಗೂ ನಾಡಿನ ಜನತೆಗೆ ಮಾರ್ಗದರ್ಶನವಾಗಬಲ್ಲ ಬರಹಗಳಿಂದ ಕೂಡಿ ಸರ್ವಾಂಗ ಸುಂದರವಾಗಿ ಮೂಡಿ ಬರಲಿ ಎಂದು ಆಶಿಸುತ್ತೇನೆ.

ಈ ದಿಸೆಯಲ್ಲಿ ಸಂಪಾದಕ ಮಂಡಳಿಯ ಪ್ರಯತ್ನ-ಸಫಲವಾಗಲಿ ಎಂದು ಶ್ರೀ ದೇವರಲ್ಲಿ ಪ್ರಾರ್ಥಿಸುತ್ತೇನೆ.

ಡಾ. ಕುರುಂಜಿ ವೆಂಕಟ್ರಮಣ ಗೌಡ

ಎಂ.ಪಿ. ಅಪ್ಪಚ್ಚುರಂಜನ್
ವಿಧಾನ ಸಭಾ ಸದಸ್ಯರು
ಮಡಿಕೇರಿ ಕ್ಷೇತ್ರ
ಬಹಾದ್ದೂರ್ ಎಸ್ಟೇಟ್, ಮಾದಾಪುರ
ದೂರವಾಣಿ (08276 -275138) ನಿವಾಸ




ಶುಭ ಸಂದೇಶ

ಬಡ ಮಕ್ಕಳ ಅಭ್ಯುದಯ, ವಿದ್ಯಾರ್ಜನೆಗೆ ಸಹಾಯ ಮಾಡುವ ನಿಟ್ಟಿನಲ್ಲಿ ಸ್ಥಾಪಿತಗೊಂಡ ಕೊಡಗು ಗೌಡ ವಿದ್ಯಾ ಸಂಘ ಶತಮಾನೋತ್ಸವದ ಸಂಭ್ರಮದಲ್ಲಿರುವದು ಹೆಮ್ಮೆಯ ಸಂಗತಿ. ಮತ್ತಷ್ಟು ಪ್ರಗತಿಯೊಂದಿಗೆ ಯಶಸ್ಸು ಗಳಿಸುತ್ತಾ ಜನಾಂಗದ ಏಳಿಗೆಗೆ ಸಹಕಾರಿಯಾಗಲಿ. ಈ ಸುಸಂದರ್ಭದಲ್ಲಿ ಸಂಭ್ರಮದ ಸವಿನೆನಪಿನಲ್ಲಿ ಸಂಚಿಕೆಯೊಂದನ್ನು ಹೊರತರುತ್ತಿರುವುದು ಅರ್ಥಪೂರ್ಣ. ಶತಮಾನೋತ್ಸವ ಯಶಸ್ವಿಯಾಗಿ ನಾಡಿನ ಜನತೆಯ ಸ್ಮೃತಿ ಪಟಲದಲ್ಲಿ ಚಿರಾಯುವಾಗಿರಲಿ.

ಎಂ.ಪಿ. ಅಪ್ಪಚ್ಚು ರಂಜನ್

ಎಂ.ಸಿ. ನಾಣಯ್ಯ
ವಿಧಾನ ಪರಿಷತ್ ಸದಸ್ಯರು
ಕರ್ನಾಟಕ ವಿಧಾನ ಪರಿಷತ್
ಬೆಂಗಳೂರು
ಕೊಡಗು, ಮಡಿಕೇರಿ
ದೂರವಾಣಿ ನಿವಾಸ
ಮೊಬೈಲ್



ಶುಭ ಸಂದೇಶ

ಮಲೆನಾಡಿನ ಪ್ರಕೃತಿ ಸೌಂದರ್ಯಕ್ಕೆ ಪ್ರಸಿದ್ಧಿ ಪಡೆದಿರುವ ಮಡಿಕೇರಿಯಲ್ಲಿ ಕೊಡಗು ಗೌಡ ವಿದ್ಯಾ ಸಂಘ ಶತಮಾನೋತ್ಸವ ಹೊಂಬೆಳಕನ್ನು ಕಾಣುತ್ತಿರುವುದು ಸಂತಸಕರ-ಅಭಿನಂದನೀಯ.


ಈ ಉದಾತ್ತ ವಿದ್ಯಾ ಸಂಘ ಕಳೆದ 100 ವರ್ಷಗಳಲ್ಲಿ ಸಹಸ್ರಾರು ಬಡ ಮಕ್ಕಳ ವಿದ್ಯಾಭ್ಯಾಸದ ಭವ್ಯ ಭವಿಷ್ಯಕ್ಕೆ ಆರ್ಥಿಕ ನೆರವನ್ನು ನೀಡುವುದರ ಮೂಲಕ ಇವರ ಬದುಕಿನಲ್ಲಿ ಬೆಳಕಿನ ಹೊಂಗಿರಣವನ್ನು ಕಾಣಲು ಜನಾಂಗದ ಹಿರಿಯರು ತೋರಿಸಿದ ದೂರದರ್ಶಿತ್ವದ ಹಿನ್ನೆಲೆಯಲ್ಲಿ ಅಸ್ತಿತ್ವಕ್ಕೆ ತಂದ ಈ ಪರೋಪಕಾರಿ ಸಂಸ್ಥೆ ಈಗ ಮಾಡುತ್ತಿರುವ ಸೇವೆ ಮತ್ತಷ್ಟು ಇಮ್ಮಡಿಯಾಗಲಿ. ಆ ಮೂಲಕ ಗೌಡ ಜನಾಂಗದ ಎಲ್ಲಾ ಅರ್ಹ ಪ್ರಭಾವಿ ಮತ್ತು ಬಡ ದುರ್ಬಲ ಮಕ್ಕಳ ವಿದ್ಯಾರ್ಜನೆಗೆ ಒಂದು ವೇದಿಕೆಯಾಗಿ ವಿಜೃಂಭಿಸುವಂತಾಗಲೆಂದು ತುಂಬು ಮನದಿಂದ ಹಾರೈಸುತ್ತಿದ್ದೇನೆ.

ಪ್ರಸ್ತುತ ಈ ಶತಮಾನೋತ್ಸವದ ಸುದಿನದಂದು ಬೆಳಕು ಚೆಲ್ಲುವ "ಕದಿರು" ಸ್ಮರಣ ಸಂಚಿಕೆ ನಾಡಿಗೆ ಕೈಗನ್ನಡಿಯಾಗಲೆಂಬುದೇ ನನ್ನ ಹಾರೈಕೆ

ಆದರದ ವಂದನೆಗಳು

ಎಂ.ಸಿ. ನಾಣಯ್ಯ

ಎಸ್.ಜಿ. ಮೇದಪ್ಪ
ವಿಧಾನ ಪರಿಷತ್ ಸದಸ್ಯರು
ಬೆಂಗಳೂರು
ಶಾಂತಳ್ಳಿ ಗ್ರಾಮ, ಸೋಮವಾರಪೇಟೆ ತಾಲೂಕು
ದೂರವಾಣಿ : 08276-288055 (ನಿವಾಸ)




ಶುಭ ಸಂದೇಶ

ಕೊಡಗು ಜಿಲ್ಲೆಯಲ್ಲಿ ನೆಲೆಸಿ, ತಮ್ಮದೇ ಸಂಸ್ಕೃತಿ, ಭಾಷೆ, ಆಚಾರ ವಿಚಾರಗಳಿಂದ, ಗಮನ ಸೆಳೆದಿರುವ ವಿಶಿಷ್ಟ ಗೌಡ ಜನಾಂಗದವರು, ಸುಮಾರು ನೂರು ವರ್ಷಗಳ ಹಿಂದೆ ಕಟ್ಟಿ ಬೆಳೆಸಿದ ಕೊಡಗು ಗೌಡ ವಿದ್ಯಾಸಂಘ, ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯವಾಗಿದೆ. ಈ ಸುಸಂದರ್ಭದಲ್ಲಿ ಸಮಾರಂಭದ ಸವಿನೆನಪನ್ನು ಅಲ್ಲದೆ, ಜನಾಂಗದ ಅನಿಸಿಕೆಗಳನ್ನು ಮುಂದಿನ ತಲೆಮಾರಿಗೆ ತಲುಪಿಸುವ ಉದ್ದೇಶದಿಂದ, ಹೊರತರುತ್ತಿರುವ ಹೊತ್ತಿಗೆ 'ಕದಿರು' ಜನಾಂಗವನ್ನು ಪ್ರಗತಿ ಪಥದತ್ತ ಕೊಂಡೊಯ್ಯಲಿ ಎಂದು ಶುಭ ಹಾರೈಸುತ್ತೇನೆ.

ಸಮಸ್ತ ಕೊಡಗು ಗೌಡ ಜನಾಂಗದವರಿಗೂ ಮತ್ತು 'ಕದಿರು' ಸಂಚಿಕೆಯ ಸಂಪಾದಕ ಮಂಡಳಿಯವರಿಗೂ ನನ್ನ ಶುಭಾಶಯಗಳು

ಎಸ್.ಜಿ. ಮೇದಪ್ಪ

ರಾಮಚಂದ್ರಗೌಡ
ವೈದ್ಯಕೀಯ ಶಿಕ್ಷಣ ಸಚಿವರು
ಕರ್ನಾಟಕ ಸರಕಾರ, ಬೆಂಗಳೂರು



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘವು ಶತಮಾನೋತ್ಸವ ಆಚರಿಸುತ್ತಿರುವುದು ಸಂತಸದ ವಿಚಾರ. ಈ ಶುಭ ಸಂದರ್ಭದಲ್ಲಿ "ಕದಿರು" ಎಂಬ ವಿಶೇಷ ಸಂಚಿಕೆ ಹೊರಬರುತ್ತಿರುವುದು ಸಮಯೋಚಿತ.

ಸಮಾರಂಭವು ಅತ್ಯಂತ ಯಶಸ್ವಿಯಾಗಿ ನೆರವೇರಲಿ ಎಂಬ ಹಾರೈಕೆಗಳೊಂದಿಗೆ,

ರಾಮಚಂದ್ರ, ಗೌಡ

ಕು. ಶೋಭಾ ಕರಂದ್ಲಾಜೆ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು
ಕರ್ನಾಟಕ ಸರಕಾರ, ಬೆಂಗಳೂರು




ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘವು ತನ್ನ 100ನೇ ವರ್ಷದ ಸಮಾರಂಭದ ಆಚರಣೆಯಲ್ಲಿರುವುದು ಅತೀವ ಹರ್ಷದಾಯಕ. ಕೊಡಗು ಗೌಡ ಜನಾಂಗದ ಕೀರ್ತಿ ಕಲಶಕ್ಕೆ ಗರಿ ಮೂಡಿದಂತಾಗಿದೆ.

ಈ ಶುಭ ಸಂದರ್ಭದಲ್ಲಿ "ಕದಿರು" ಸ್ಮರಣ ಸಂಚಿಕೆ ಬಿಡುಗಡೆಗೊಳ್ಳುತ್ತಿರುವುದು ಸಮಯೋಚಿತ ಹಾಗೂ ಹರ್ಷದಾಯಕ. ಸಮಾರಂಭಕ್ಕೆ ಶುಭಕಾಮನೆಗಳು.

ಕು. ಶೋಭಾ ಕರಂದ್ಲಾಜೆ

ಆರ್. ಅಶೋಕ್
ಸಾರಿಗೆ ಸಚಿವರು
ಕರ್ನಾಟಕ ಸರಕಾರ, ಬೆಂಗಳೂರು



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘವು ನೂರು ಸಂವತ್ಸರಗಳನ್ನು ಪೂರೈಸಿ ಶತಮಾನದ ಸಂಭ್ರಮದಲ್ಲಿರುವ ವಿಚಾರ ತಿಳಿದು ಹರ್ಷಗೊಂಡಿದ್ದೇನೆ.

ವಿದ್ಯಾ ಪ್ರಗತಿಗಾಗಿ ಶ್ರಮಿಸುತ್ತಿರುವ ವಿದ್ಯಾ ಸಂಘವು ಯಶಸ್ವಿಯಾಗಿ ಮುನ್ನಡೆದು ತನ್ನದೇ ಆದ ಛಾಪನ್ನು ಮೂಡಿಸುವಂತಾಗಲಿ.

ಶುಭಾಶಯಗಳು

ಆರ್. ಅಶೋಕ್

ಕರುಣಾಕರ ರೆಡ್ಡಿ
ಕಂದಾಯ ಸಚಿವರು
ಕರ್ನಾಟಕ ಸರಕಾರ
ಬೆಂಗಳೂರು



ಶುಭ ಸಂದೇಶ


ಕೊಡಗು ಗೌಡ ವಿದ್ಯಾ ಸಂಘ ತನ್ನ ಧ್ಯೇಯೋದ್ದೇಶಗಳನ್ನು ಸಮರ್ಥವಾಗಿ ಪೋಷಿಸಿಕೊಂಡು ಸಾರ್ಥಕ ಶತಮಾನವನ್ನು ಪೂರೈಸಿರುವದು ನಾಡಿನ ಹೆಮ್ಮೆ.

ಈ ನಿಟ್ಟಿನಲ್ಲಿ 'ಕದಿರು' ಎಂಬ ಸ್ಮರಣ ಸಂಚಿಕೆ ಹೊರ ಬರುತ್ತಿರುವದು ಅರ್ಥಪೂರ್ಣ.

ವಿದ್ಯಾ ಸಂಘದ ಏಳಿಗೆ ಉಜ್ವಲವಾಗಲಿ. ವಿದ್ಯಾ ಸಂಘಕ್ಕೂ, ವಿದ್ಯಾಕಾಂಕ್ಷಿ ಸಮುದಾಯಕ್ಕೂ ಭವಿಷ್ಯ ಹಸನಾಗಲಿ ಎಂಬ ಹಾರೈಕೆಯೊಂದಿಗೆ,

ಕರುಣಾಕರ ರೆಡ್ಡಿ

ಜೆ. ಕೃಷ್ಣ ಪಾಲೇಮಾರ್
ಜೀವಿಶಾಸ್ತ್ರ, ಪರಿಸರ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು
ದೂರವಾಣಿ : 22034009
22034010
22371240
ಕೊಠಡಿ ಸಂಖ್ಯೆ : 141, 142
1ನೇ ಮಹಡಿ, ವಿಕಾಸ ಸೌಧ
ಬೆಂಗಳೂರು



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘ (ರಿ.) ಶತಮಾನೋತ್ಸವ ಆಚರಿಸುತ್ತಿರುವುದು ಸಂತೋಷದ ಸಂಗತಿ. ಇದೇ ಸಂದರ್ಭದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತು ವಿಚಾರ ಸಂಕಿರಣವನ್ನು ಆಯೋಜಿಸಿರುವುದು ಹಾಗೂ ಈ ಒಂದು ಶುಭ ಸಂದರ್ಭದ ನೆನಪಿಗಾಗಿ ಸ್ಮರಣ ಸಂಚಿಕೆಯನ್ನು ಹೊರತರುತ್ತಿರುವುದು ಸ್ತುತ್ಯಾರ್ಹವಾದುದು. ಸಂಸ್ಥೆಯ ಗೌಡ ಸಂಸ್ಕೃತಿ ಹಾಗೂ ಜನಾಂಗದ ಒಳಿತಿಗಾಗಿ ಇನ್ನೂ ಹೆಚ್ಚಿನ ಸೇವೆಯನ್ನು ಮಾಡುವಂತಾಗಲಿ ಹಾಗೂ ಈ ಒಂದು ಸ್ಮರಣ ಸಂಚಿಕೆಯು ಗೌಡ ಸಂಸ್ಕೃತಿ ಹಾಗೂ ಜನಾಂಗದ ಒಂದು ಉಪಯುಕ್ತ ಗ್ರಂಥವಾಗಲೆಂದು ಶುಭ ಕೋರುತ್ತೇನೆ.

ಜೆ. ಕೃಷ್ಣ ಪಾಲೇಮಾರ್



ಶ್ರೀ ಶ್ರೀ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು

ಅರಮೇರಿ ಕಳಂಚೇರಿ ಮಠ


ಅರಮೇರಿ, ವೀರಾಜಪೇಟೆ

ಶುಭ ಸಂದೇಶ

ತಮ್ಮ ವಿದ್ಯಾ ಸಂಘ ಶತಮಾನೋತ್ಸವ ಆಚರಿಸುತ್ತಿರುವದು ಅತ್ಯಂತ ಸಂತಸದಾಯಕ.

ಸಾಮಾಜಿಕ ವ್ಯವಸ್ಥೆಯಲ್ಲಿ ಸಮಾಜ, ಸಂಘಟನೆ ಇವೆಲ್ಲಾ ಕೂಡಿ ತಮ್ಮದೇ ಆದಂತಹ ಮಹತ್ತರ ಪಾತ್ರ ವಹಿಸುತ್ತಿವೆ. ಈ ನಿಟ್ಟಿನಲ್ಲಿ ಕೊಡಗು ಗೌಡ ವಿದ್ಯಾ ಸಂಘದ ಶತಮಾನೋತ್ಸವ ಆಚರಣೆ ಸಮಾಜಮುಖಿ ಆಲೋಚನೆ ಮುಂದಿಟ್ಟುಕೊಂಡು ಸಮಾಜವನ್ನು ಸಂಘಟಿಸುವಲ್ಲಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

ಶ್ರೀ ಶ್ರೀ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು



ಶ್ರೀ ಶ್ರೀ ಶ್ರೀ ಸ್ವಾಮಿ ಜಗದಾತ್ಮಾನಂದಜಿ
ಅಧ್ಯಕ್ಷರು, ರಾಮಕೃಷ್ಣ ಶಾರದಾಶ್ರಮ
ಪೊನ್ನಂಪೇಟೆ

ಆಶೀರ್ವಚನ

ನೀವು ಕಳಿಸಿದ ವಿಜ್ಞಾಪನಾ ಪತ್ರ ತಲುಪಿ ಸಂತೋಷವಾಯಿತು. ಕೊಡಗು ಗೌಡ ವಿದ್ಯಾಸಂಘದ ಪ್ರಯತ್ನ ಸ್ತುತ್ಯಾರ್ಹ.

ಶತಮಾನದ ಸ್ಮರಣೆಯಲ್ಲಿ ಹೊರತರುತ್ತಿರುವ 'ಕದಿರು' ಎಂಬ ಸಂಗ್ರಾಹ್ಯ ಸಂಚಿಕೆ ರಚನಾತ್ಮಕ ಲೇಖನಗಳನ್ನು ಒಳಗೊಂಡಿರಲಿ. ಸಂಸ್ಥೆಯ ಕಾರ್ಯಕ್ರಮಗಳು ಸಮಾಜಕ್ಕೆ ಒಳಿತನ್ನು ಮಾಡಲಿ ಎಂದು ಹಾರೈಕೆ.

ಎಲ್ಲರಿಗೂ ಶುಭವಾಗಲಿ.

ಶ್ರೀ ಶ್ರೀ ಶ್ರೀ ಸ್ವಾಮಿ ಜನದಾತ್ಮಾನಂದಜಿ

ಬಿ.ಎ. ಜೀವಿಜಯ
ಮಾಜೀ ಸಚಿವರು
ಬಿಳಿಗೇರಿ ಗ್ರಾಮ
ಸೋಮವಾರಪೇಟೆ
ಕೊಡಗು



ಶುಭ ಸಂದೇಶ


ಒಂದು ನೂರು ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, ಇನ್ನಷ್ಟು ಹುರುಪಿನಿಂದ ಹೊಸ ಆಯಾಮಗಳೊಂದಿಗೆ ಮುನ್ನುಗ್ಗುತ್ತಿರುವ ಕೊಡಗು ಗೌಡ ವಿದ್ಯಾ ಸಂಘದ ಸಾಧನೆ ಅಭಿನಂದನೀಯ.

ಇದೇ ಸಂದರ್ಭದಲ್ಲಿ ಹೊರ ಬರುತ್ತಿರುವ ಸಂಗ್ರಾಹ್ಯ ಸ್ಮರಣ ಸಂಚಿಕೆ - "ಕದಿರು" ವೈಚಾರಿಕವಾಗಿ, ರಚನಾತ್ಮಕವಾಗಿ ಮೂಡಿ ಬರಲಿ.

ವಿದ್ಯಾ ಸಂಘದ ಅಭಿವೃದ್ಧಿ ನಿರಂತರವಾಗಿರಲಿ ಎಂಬ ಹಾರೈಕೆಯೊಂದಿಗೆ,

ಬಿ.ಎ. ಜೀವಿಜಯ

ಬಿ.ಎನ್. ಬಚ್ಚೇಗೌಡ
ಕಾರ್ಮಿಕ ಸಚಿವರು
ಕರ್ನಾಟಕ ಸರಕಾರ
ಬೆಂಗಳೂರು



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘವು ಶತಮಾನೋತ್ಸವ ಆಚರಣೆಯ ಸಂಭ್ರಮದಲ್ಲಿರುವ ವಿಚಾರ ತಿಳಿದು ಸಂತೋಷವಾಗಿದೆ. ಕೊಡಗು ಗೌಡ ಜನಾಂಗ ಸಮುದಾಯಕ್ಕೆ ಅಭಿನಂದನೆಗಳು. ಈ ಸಂದರ್ಭದಲ್ಲಿ "ಕದಿರು" ಎಂಬ ವಿಶೇಷ ಸಂಚಿಕೆ ಹೊರಬರುತ್ತಿರುವುದು, ಸಂಭ್ರಮದ ಸಮಾರಂಭಕ್ಕೆ ಕಳಶಪ್ರಾಯವಾಗಿದೆ. ಜನಾಂಗ ಬಾಂಧವರಿಗೆ ಹಾಗೂ ಸಮಾರಂಭಕ್ಕೆ ಮನಃದುಂಬಿದ ಶುಭ ಹಾರೈಕೆಗಳು.

ಬಿ.ಎನ್. ಬಚ್ಚೆಗೌಡ

ವಿ ದೀರ್ಘಕೇಶಿ ಶಿವಣ್ಣ
ಅಧ್ಯಕ್ಷರು
ಕೊಡಗು ಜಿಲ್ಲಾ ಪಂಚಾಯತ್
ಮಡಿಕೇರಿ -571201
ಕಛೇರಿ: 08272-225902
ನಿವಾಸ: 02872-232270
ಮೊಬೈಲ್: 9448406399



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘವು ಶತಮಾನೋತ್ಸವ ಸಮಾರಂಭವನ್ನು ಆಚರಿಸುತ್ತಿದ್ದು, ಈ ಶುಭ ಸಂದರ್ಭದಲ್ಲಿ "ಕದಿರು" ಎಂಬ ಸ್ಮರಣ ಸಂಚಿಕೆಯನ್ನು ಹೊರ ತರುತ್ತಿರುವುದು ತುಂಬಾ ಸಂತೋಷದ ವಿಷಯ. ಕೊಡಗು ಗೌಡ ವಿದ್ಯಾ ಸಂಘವು ಇನ್ನು ಮುಂದೆಯೂ ಹೆಚ್ಚು ಪ್ರವರ್ಧಮಾನಕ್ಕೆ ಬೆಳೆದು ಜಿಲ್ಲೆ ಹಾಗೂ ರಾಜ್ಯದಲ್ಲಿಯೇ ಉತ್ತಮ ಹೆಸರು ಗಳಿಸಲಿ ಎಂದು ಹಾರೈಸುತ್ತಾ ಈ ಶುಭ ಸಂದೇಶವನ್ನು ಕಳುಹಿಸುತ್ತಿದ್ದೇನೆ.

ವಂದನೆಗಳೊಂದಿಗೆ,

ವಿ. ದೀರ್ಘಕೇಶಿ ಶಿವಣ್ಣ

ಎಂ.ಕೆ. ಬಲದೇವಕೃಷ್ಣ *ಭಾ.ಆ.ಸೇ.*
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ
ಕೊಡಗು ಜಿಲ್ಲೆ, ಮಡಿಕೇರಿ - 571 201
ಕರ್ನಾಟಕ
ದೂರವಾಣಿ ಕಛೇರಿ : 225500
ನಿವಾಸ : 225700, 222997
ಫ್ಯಾಕ್ಸ್ : 225900
ಇಮೇಲ್ : dckodagu@kar.nic.in
ವೆಬ್‌ಸೈಟ್ : http ://www.kodagu.nic.in



ಶುಭ ಸಂದೇಶ

ಕೊಡಗು ಗೌಡ ವಿದ್ಯಾ ಸಂಘ (ರಿ) ಈಗ 100 ಸಂವತ್ಸರಗಳನ್ನು ಪೂರೈಸಿದ್ದು, ಇದರ ಸವಿ ನೆನಪಿಗಾಗಿ ದಿನಾಂಕ : 7-3-2009 ಮತ್ತು 8-3-2009 ರಂದು ಶತಮಾನೋತ್ಸವವನ್ನು ಆಚರಿಸಿಕೊಳ್ಳುತ್ತಿರುವುದು ತುಂಬಾ ಸಂತಸವಾಗಿದೆ. ವಿದ್ಯಾರ್ಜನೆಯ ಹಾದಿಯಲ್ಲಿ ಗೌಡ ಜನಾಂಗದ ಸಾಧನೆ ಶ್ಲಾಘನೀಯ.

ಸಂಘವು ಶತಮಾನೋತ್ಸವವನ್ನು ಆಚರಿಸುತ್ತಿರುವ ಈ ಶುಭ ಸಂದರ್ಭದಲ್ಲಿ ಸಂಘವು ನಡೆದು ಬಂದ ದಾರಿಯನ್ನು ಹಾಗೂ ಇತರ ಚಟುವಟಿಕೆಗಳನ್ನು ಬಿಂಬಿಸುವ "ಕದಿರು" ಎಂಬ ಹೆಸರಿನ ಸ್ಮರಣ ಸಂಚಿಕೆಯನ್ನು ಹೊರ ತರುತ್ತಿರುವುದು ತುಂಬಾ ಔಚಿತ್ಯಪೂರ್ಣವಾಗಿದೆ. ಸ್ಮರಣ ಸಂಚಿಕೆಯು ಸಂಘದ ಸಮಗ್ರ ಮಾಹಿತಿಗಳ ನ್ನೊಳಗೊಂಡು ಸುಂದರವಾಗಿ ಮೂಡಿ ಬರಲಿ ಹಾಗೂ ಮುಂದೆಯೂ ಉತ್ತಮವಾದ ಕಾರ್ಯನಿರ್ವಹಣೆಯಿಂದ ಇನ್ನಷ್ಟು ಅಭಿವೃದ್ಧಿಯ ಪಥದಲ್ಲಿ ಸಾಗಲಿ ಎಂದು ಶುಭ ಹಾರೈಸುತ್ತೇನೆ.

ಎಂ.ಕೆ. ಬಲದೇವಕೃಷ್ಣ

ಕೊಡಗು ಗೌಡ ವಿದ್ಯಾ ಸಂಘದ ಆಡಳಿತ ಮಂಡಳಿ

2005 - 2010



ಕುಳಿತವರು ಎಡದಿಂದ ಬಲಕ್ಕೆ : ಶ್ರೀಮತಿ ತೆಕ್ಕಡೆ ಗುಲಾಬಿ ಜನಾರ್ಧನ್ (ನಿರ್ದೇಶಕರು), ಶ್ರೀ ಪೊನ್ನಚ್ಚನ ಸೋಮಣ್ಣ(ಖಜಾಂಚಿ), ಶ್ರೀ ಕೋಡಿ ಚಂದ್ರಶೇಖರ (ಕಾರ್ಯದರ್ಶಿ), ಶ್ರೀ ಹೊಸೂರು ರಮೇಶ್ ಜೋಯಪ್ಪ (ಅಧ್ಯಕ್ಷರು), ಶ್ರೀ ದಂಬೆಕೋಡಿ ಆನಂದ್ (ಉಪಾಧ್ಯಕ್ಷರು), ಶ್ರೀ ಕೋಳುಮುಡಿಯನ ಅನಂತ್‌ಕುಮಾರ್ (ನಿರ್ದೇಶಕರು), ಶ್ರೀಮತಿ ಅಮೆ ಕಮಲಾ ಗಣಪತಿ (ನಿರ್ದೇಶಕರು)

ನಿಂತವರು ಎಡದಿಂದ ಬಲಕ್ಕೆ : ಶ್ರೀ ಸೆಟ್ಟೆಜನ ಮುತ್ತಪ್ಪ (ವಾಚ್‌ಮೆನ್), ಶ್ರೀ ಅಂಬೆಕಲ್ಲು ನವೀನ್ ಕುಶಾಲಪ್ಪ (ಸಹ ಕಾರ್ಯದರ್ಶಿ), ಶ್ರೀ ಕಟ್ಟೆಮನೆ ಸೋನಾಜಿತ್, ಶ್ರೀ ಕೊಡಪಾಲು ಗಣಪತಿ (ಗಪ್ಪು), ಶ್ರೀಮತಿ ಕುದುಪಜೆ ಶಾಂತಿ ಬೋಜಪ್ಪ, ಶ್ರೀ ಕೆದಂಬಾಡಿ ಚಂದ್ರಶೇಖರ, ಶ್ರೀ ತುಂತಜೆ ತಿಮ್ಮಯ್ಯ, ಶ್ರೀ ಮೊಟ್ಟನ ಜ್ಯೋತಿ ಶಂಕರ್,(ನಿರ್ದೇಶಕರುಗಳು) ಶ್ರೀ ಕಾಳೇರಮ್ಮನ ವಸಂತ್‌ಕುಮಾರ್ (ವ್ಯವಸ್ಥಾಪಕರು), ಶ್ರೀ ಅರಂಬೂರು ವಸಂತಕುಮಾರ್ (ನಿರ್ದೇಶಕರು).



'ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ' ಎನ್ನುವ ಮೆರವಣಿಗೆ ಸಮಿತಿ



ಶತಮಾನದ ಸ್ಮರಣೆಗಾಗಿ ಸ್ಮರಣ ಸಂಚಿಕೆ ಬೇಡವೆ?
ಹೌದು, ಬೇಕೇ ಬೇಕೆಂದು ರಚನೆಗೊಂಡ ಸ್ಮರಣ ಸಂಚಿಕೆ ಸಮಿತಿ



ವಾದ-ವಿವಾದ-ನಾವ್ ಬಗೆ ಹರಿಸುವೆವು ಎನ್ನುವ ಕಾನೂನು ಸಮಿತಿ




ಸಮಯಕ್ಕೆ ಸರಿಯಾಗಿ ಸಭೆಗೆ ಬನ್ನಿ
ಕ್ಷೇಮವಾಗಿ ಸ್ಥಳ ತಲುಪಿ ಎನ್ನುವ
ಸಾರಿಗೆ ಸಮಿತಿ



ಓಡ್ರಾ, ಹಾರ್‌ರಾ, ಹೊಡಿರಾ, ಎಳಿರಾ
ಓಡಿನೆ, ಹಾರ್ನೆ, ಹೊಡಿನೆ, ಎಳಿನೆ
ಪ್ರೈಸ್ ನಾವ್ ಕೊಟ್ಟವೆ, ಪ್ರೈಸ್ ಬಾತ್ಲೆನಾ ?
ಬುಡಿ, ಬೇರೆವ್ ತಕ್ಕಣ್ಲೆ....... .
ಪ್ರೋತ್ಸಾಹ ಕೊಡಲೆಂದು ರಚನೆಗೊಂಡ ಕ್ರೀಡಾ ಸಮಿತಿ



ಆರೋಗ್ಯವೇ ಭಾಗ್ಯ. ಬನ್ನಿ, ನೆರಳಿನೆಡೆಗೆ
ನೀವೆಲ್ಲರೂ ಕ್ಷೇಮವಾಗಿರುವಿರಿ ತಾನೆ?
ಎಂದು ವಿಚಾರಿಸಲು ನೇಮಕಗೊಂಡ ಆರೋಗ್ಯ ಸಮಿತಿ



ಬನ್ನಿ ಬನ್ನಿ ನಮಸ್ಕಾರ
ದೂರ ದೂರದ ಊರಿಂದ ಬಂದಿದ್ದೀರಿ
ಬನ್ನಿ ಕುಳಿತುಕೊಳ್ಳಿ, ಎಂದು ಸರ್ವರನ್ನು ಸ್ವಾಗತಿಸಲು ಸಜ್ಜಾದ ಸ್ವಾಗತ ಸಮಿತಿ



ಅನ್ನದೇವರ ಮುಂದೆ ಇನ್ನು ದೇವರುಂಟೆ ?
ಹೊಟ್ಟೆ ಗಟ್ಟಿ ಇದ್ದರಲ್ಲವೆ ರಟ್ಟೆ ಗಟ್ಟಿ ?
ಬನ್ನಿ, ಬಾಯಿ ಚಪ್ಪರಿಸಿ ಎಂದು ಸ್ವಾಗತಿಸುವ ಆಹಾರ ಸಮಿತಿ



ಸೌಂದರ್ಯ ಪ್ರಜ್ಞೆ ಎಲ್ಲರಲ್ಲೂ ಇರಬೇಕೆನ್ನುವ ಅಲಂಕಾರ ಸಮಿತಿ



ಬದುಕಿನಲ್ಲಿ ಸಾಧನೆ ಮಾಡಿದವರು ಬಹು ಮಂದಿ ಇದ್ದಾರೆ. ಹಲವರಲ್ಲಿ ಕೆಲವರನ್ನು ಆಯ್ಕೆ ಮಾಡುವ ಹೊಣೆ ಹೊತ್ತು ಸನ್ಮಾನ ಮಾಡಲು ಮುಂದೆ ಬಂದ ಸನ್ಮಾನ ಸಮಿತಿ



ದುಡ್ಡೇ ದೊಡ್ಡಪ್ಪ! ಹಣ ಇಲ್ಲದಿದ್ದರೆ ಎಲ್ಲಾ ಭಣ ಭಣ. ಸಂಪತ್ತು ಕ್ರೋಢೀಕರಿಸುವ ಎದೆಗಾರಿಕೆ ತೋರಿದ ಹಣಕಾಸು ಸಮಿತಿ




ನೀವ್ ತಯಾರಿಸಿದ್ದು, ನೀವೇ ಸಂಗ್ರಹಿಸಿದ್ದು.
ತನ್ನಿ, ನಾವ್ ಪ್ರದರ್ಶಿಸಲು ಅವಕಾಶ ಕೊಡುತ್ತೇವೆ ಎನ್ನುವ ವಸ್ತು ಪ್ರದರ್ಶನ ಸಮಿತಿ



ನಾವ್ ಸಾಂಸ್ಕೃತಿಕ ವೈಭವಕ್ಕೆ ಮೆರುಗು ಕೊಡುತ್ತೇವೆ ಎಂದು ಮುಕ್ತವಾಗಿ
ಆಹ್ವಾನಿಸುತ್ತಿರುವ ಸಾಂಸ್ಕೃತಿಕ ಸಮಿತಿ



ಕೊಡಗು ಗೌಡ ವಿದ್ಯಾ ಸಂಘವು ಮೈಸೂರಿನ ಜಯಲಕ್ಷ್ಮಿ ಪುರಂನಲ್ಲಿ ಕಟ್ಟಿದ ವಿದ್ಯಾರ್ಥಿ ನಿಲಯದ ನೂತನ ಕಟ್ಟಡ




ಸಾಂಸ್ಕೃತಿಕ ನಗರ ಮೈಸೂರು- ಇಲ್ಲಿನ ಜಯಲಕ್ಷ್ಮೀಪುರಂನಲ್ಲಿ ತಲೆಯೆತ್ತಿದ ಕೊಡಗು ಗೌಡ ವಿದ್ಯಾ ಸಂಘದ ವಿದ್ಯಾರ್ಥಿ ನಿಲಯದ ಮೊದಲಿನ ಕಟ್ಟಡ



ಕೊಡಗು ಗೌಡ ವಿದ್ಯಾ ಸಂಘವು ಕಟ್ಟಿದ ವಿದ್ಯಾರ್ಥಿ ನಿಲಯದ ಮುಂದುವರಿದ ಕಟ್ಟಡದ ಸುಂದರ ನೋಟ

ಸಂಪಾದಕೀಯ ...



'ಕೊಡಗು ಗೌಡ ವಿದ್ಯಾ ಸಂಘ ' ಎಂಬ ಸಂಘಟನೆಯನ್ನು ಹುಟ್ಟು ಹಾಕಬೇಕೆಂಬ ಯೋಚನೆ ಅಂದು ಮೂಡಿ ಬಂದುದು ನಮ್ಮೆಲ್ಲರ ಸೌಭಾಗ್ಯ . ಆಗ ಅದು ಆರಂಭಗೊಂಡದ್ದಕ್ಕೆ ಈಗ ಈ ಸಂಭ್ರಮ. ಸಂಘವನ್ನು ಆರಂಭಿಸಿದ ಆ ಮಹಾನುಭಾವರಿಗೆ ನಮ್ಮೆಲ್ಲರ ಸಾಷ್ಟಾಂಗ ಪ್ರಣಾಮಗಳು.

ಅಂದು ೧೯೦೮. ಇಂದು ೨೦೦೯. ನಡುವಿನ ಅಂತರ ಒಂದು ನೂರು ವರುಷಗಳ ಮೇಲೆ ಒಂದು ! ವಿದ್ಯೆ ಎನ್ನುವುದು ಮೊಗೆದಷ್ಟು ಮುಗಿಯದ ಪುಣ್ಯ ತೀರ್ಥ! ಬದುಕಿನ ಸಂಜೀವಿನಿ. ಕದ್ದು ಹೋಗದ, ಬಿದ್ದು ಹೋಗದ ಸಂಪತ್ತು. ಅಂತಹ ಶಾಶ್ವತ ಸಂಪತ್ತನ್ನು ಒದಗಿಸಿಕೊಡುವ ಸಲುವಾಗಿಯೇ ಆರಂಭಗೊಂಡದ್ದು 'ಕೊಡಗು ಗೌಡ ವಿದ್ಯಾ ಸಂಘ'.

ಸಮಾಜ ಸೇವೆಗೆ ಇಳಿದವರು 'ಚಿನ್ನದ ಸೂಜಿ ' ಯಿಂದ ಚುಚ್ಚಿಸಿ ಕೊಳ್ಳುವವರೇ. ಅಂದೂ ಅಷ್ಟೇ , ಇಂದೂ ಅಷ್ಟೇ. ಸಮಯ ಹಾಳು , ಆರ್ಥಿಕ ನಷ್ಟ. ಅಷ್ಟೇ ಅಲ್ಲ ಬಾಯಿಗೊಂದು ಮಾತು. ಹಂಡೆಯ ಬಾಯಿ ಮುಚ್ಚಬಹುದು , ದೊಂಡೆಯ ಬಾಯಿಗೆ ಮುಚ್ಚಳವಿಲ್ಲ. ದೃಷ್ಟಿಯಂತೆ ಸೃಷ್ಟಿ ಅಲ್ವೆ? ಸಮಾಜ ಸೇವೆಗಿಳಿದವರು ಅವಹೇಳನವನ್ನು ಮೆಟ್ಟಿ ನಿಲ್ಲುವುದರಲ್ಲಿ ಸೇವೆಯ ಸಾರ್ಥಕತೆ ಅಡಗಿದೆ. ಹಾಗೆ ದೃಢತೆಯಿಂದ ನಿಲ್ಲದೇ ಹೋದರೆ ಯಾವ ಸಂಘಟನೆಯಾಗಲಿ, ಸಂಸ್ಥೆಗಳಾಗಲಿ ಉಳಿಯುವುದಿಲ್ಲ, ಬೆಳೆಯುವುದಿಲ್ಲ.

೧೯೦೮ರ ಹೊತ್ತಿನಲ್ಲಿ ಕೊಡಗು ಹೇಗಿದ್ದಿರಬಹುದು? ಪರದಾಸ್ಯದಲ್ಲಿ ನರಳುತಿತ್ತು. 'ಹರಿವ ನೀರಿಗೆ ದೊಣ್ಣೆನಾಯಕನ ಅಪ್ಪಣೆ' ಯಂತೆ ನಾವು ನಾವಾಗಿ ತಲೆಯೆತ್ತಲಾರದ ಸ್ಥಿತಿಯಿತ್ತು. ಅಂತಹ ಸ್ಥಿತಿಯಲ್ಲಿ ವಿದ್ಯೆಯ ಬೆಳವಣಿಗೆಯೇ ಮುಖ್ಯ ಎಂದು ಅಂದನ್ನಿಸಿತಲ್ಲ! ಬಡಮಕ್ಕಳಿಗೆ ವಿದ್ಯೆ ಕಲಿಸುವ ಮಹದಾಸೆಯ ಕನಸು ಕಂಡರಲ್ಲ, ಅದು ನಮ್ಮೆಲ್ಲರ ಪುಣ್ಯ.

ಇಂದು ಹೇಗಿದೆ? ಮುಂದೇನು? ಯೋಚಿಸಬೇಕು, ಯೋಜನೆ ರೂಪಿರಿಸಬೇಕು, ಯೋಜನೆ ಕಾರ್ಯರೂಪಕ್ಕೆ ಬರಬೇಕು, ಮಾತಿಗಿಂತ ಕೃತಿ ಲೇಸು. ಕೆಲಸ ಮಾಡುವವರ ಸಂಖ್ಯೆ ಬೇಕೇ ಹೊರತು ಮಾತುಗಾರರದ್ದಲ್ಲ.

ವಿದ್ಯಾ ಸಂಘದ ಆಡಳಿತ ಮಂಡಲಿ ಬದಲಾಗುತ್ತಾ ಅಲ್ಲಿಂದ ಇಲ್ಲಿವರೆಗೂ ಸಮಾಜ ಸೇವೆ ಮಾಡುತ್ತಾ ಅನೂಚಾನವಾಗಿ ನಡೆದು ಬಂದಿದೆ. ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸುತ್ತಾ ನೆರವು ನೀಡುತ್ತಾ ಬಂದಿದೆ. ಸಂಘ ಬೆಳೆದು ಬಂದ ಬಗೆಯನ್ನು ಶ್ರೀ ಕುಲ್ಲಚನ ಕಾರ್ಯಪ್ಪನವರು ಮತ್ತು ಶ್ರೀ ಕೋಳುಮುಡಿಯನ ಅನಂತಕುಮಾರ್ ಅವರು ಈ ಸಂಚಿಕೆಯಲ್ಲಿ ಚೆನ್ನಾಗಿ ಬರೆದಿದ್ದಾರೆ.

ಹತ್ತು , ಇಪ್ಪತ್ತೈದು, ಐವತ್ತು , ಅರವತ್ತು, ಎಪ್ಪತ್ತೈದು ಹಾಗೂ ನೂರು ಎನ್ನುವ ಕಾಲಗಳನ್ನು ಬಹು ಮುಖ್ಯ ಕಾಲ ಘಟ್ಟಗಳೆನ್ನುತ್ತಾರೆ. ಆ ಕಾಲಗಳನ್ನು ಗೌರವಿಸಿ ಆಚರಿಸುವುದಾದರೆ ಕ್ರಮವಾಗಿ ದಶಮಾನೋತ್ಸವ, ರಜತ ಮಹೋತ್ಸವ, ಸುವರ್ಣ ಮಹೋತ್ಸವ , ಷಷ್ಠ್ಯಬ್ದ, ಅಮೃತ ಮಹೋತ್ಸವ, ಹಾಗೂ ಶತಮಾನೋತ್ಸವ ಎನ್ನುತ್ತಾರೆ.

ಮೇಲೆ ಹೇಳಿದ ಕಾಲಗಳಲ್ಲಿ ಈ ವಿದ್ಯಾ ಸಂಘ ನೂರಾರು ಏಳು ವರುಷಗಳ ಮೀರಿ ನೂರರ ಘಟ್ಟವನ್ನು

ದಾಟಿದೆ. ಆ ನೂರು ವರುಷಗಳ ಕಾಲದಲ್ಲಿ ಆಡಳಿತ ನಡೆಸಿದವರೆಷ್ಟೋ? ಅವರಲ್ಲಿ ಉಳಿದುಕೊಂಡವರೆಷ್ಟು? 'ನಾವು ಯಾರು' ಎನ್ನುವುದಕ್ಕಿಂತ ನಾವು ಏನು ಮಾಡಿದ್ದೇವೆನ್ನುವುದು ಮುಖ್ಯ. ನಿನ್ನೆಯದು ಇಂದಿಗೆ ಇತಿಹಾಸವಾದಂತೆ ಇಂದು ನಾಳೆಗೆ ಇತಿಹಾಸವಾಗುತ್ತದೆ. ಹಿರಿಯರು ಕಿರಿಯರಿಗೆ ಬಿಟ್ಟು ಹೋಗುವುದು ಅವರ ಒಳ್ಳೆಯತನವನ್ನು. ಆ ಒಳ್ಳೆಯತನ ಎಂಬುದು ' ಇಂಥದ್ದೇ ' ಎಂದು ಹೇಳುವುದು ಕಷ್ಟ. ಅದನ್ನು ಹುಡುಕಿ ತಿಳಿದುಕೊಳ್ಳುವ ಸೂಕ್ಷ್ಮತೆ ನಮ್ಮಲ್ಲಿರಬೇಕು.

ಯಾವುದೇ ಕೆಲಸ ಇನ್ನೊಬ್ಬರನ್ನು ಮೆಚ್ಚಿಸಲು ಅಥವಾ ಸ್ಪರ್ಧಿಸಲು ಎಂಬಂತಾಗಬಾರದು. ಮಾಡುವ ಕೆಲಸ 'ಸಮಾಜ ಮುಖಿ'ಯಾಗಬೇಕು. ಆ ಮೂಲಕ ಮಾದರಿ ಆಗಬೇಕು. ಸ್ವಪ್ರತಿಷ್ಠೆ ಬದಿಗೆ ಸರಿಯಬೇಕು. ಒಣ ಜಂಭ ಎಲ್ಲೂ ಸುಳಿಯಬಾರದು . ತೊಡರುಗಾಲು ಹಾಕುವವರಿಗೆ ತೊಡಕೇ ಹೆಚ್ಚು.

ವಿದ್ಯಾಸಂಘ ಸ್ಥಾಪನೆ ಆದ ಬಳಿಕ ಅದರ-ರೆಂಬೆ ಕೊಂಬೆಗಳೋ ಎನ್ನುವಂತೆ ಹಲವೆಡೆ ಗೌಡ ಸಮಾಜ ಸ್ಥಾಪನೆಗೊಂಡಿದೆ. ಗೌಡ ಫೆಡರೇಶನ್, ವಿದ್ಯಾರ್ಥಿ ನಿಲಯ, ಯುವ ಒಕ್ಕೂಟಗಳು, ಅರೆಭಾಷಾ ಅಭಿವೃದ್ಧಿ ಸಮಿತಿ, ಗೌಡ ನಿವೃತ್ತ ನೌಕರರ ಸಂಘ ಮುಂತಾದ ಸಂಘಟನೆಗಳು ರಚನೆಗೊಂಡಿವೆ. ಸಾಂಸ್ಕೃತಿಕ ಅಕಾಡೆಮಿ, ಮಹಿಳಾ ಒಕ್ಕೂಟ ರಚನೆಗೊಂಡಿದೆ. ಅವುಗಳು ಮೌಲ್ಯಯುತ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಸಮಾಜ ಸೇವೆಯಲ್ಲಿ ತೊಡಗಿ ಬೆಳೆದು ಉಳಿಯಲಿ ಎಂಬುದೇ ಎಲ್ಲರ ಆಶಯ .

೧೯೧೧ ರಲ್ಲಿ ಮಡಿಕೇರಿ ತಾಲೂಕಿನ ಬೆಟ್ಟಗೇರಿಯಲ್ಲಿ ಶ್ರೀ ಪಟ್ಟಡ ಬಿದ್ದಪ್ಪನವರು ಶಾಲೆಯೊಂದನ್ನು ಆರಂಭಿಸಿದರು. ಪಟ್ಟಡ ಕುಟುಂಬವು ಆ ಶಾಲೆಯನ್ನು ಇಂದಿಗೂ 'ಪಟ್ಟಡ ಸ್ಕೂಲ್ ' ಎಂದೇ ಸ್ಮರಿಸುತ್ತಿದೆ. ಅವರ ಮೊಮ್ಮಕ್ಕಳಾದ ಶ್ರೀ ಜಯರಾಮ ಮತ್ತು ಅವರ ಸಹೋದರರು ಅಲ್ಲದೆ, ಶ್ರೀ ಪ್ರಭಾಕರ ಹಾಗೂ ಅವರ ಸಹೋದರರು ಒಟ್ಟಿನಲ್ಲಿ ಆ ಕುಟುಂಬದ ಪಟ್ಟೆದಾರರ ನೇತೃತ್ವದಲ್ಲಿ ಮತ್ತು ಬಂಧು ಬಾಂಧವರ ನೆರವಿನಲ್ಲಿ ೨೦೧೧ ರಲ್ಲಿ ಬಹು ಪ್ರೀತಿಯಿಂದ ಹಾಗೂ ಅತ್ಯಂತ ಗೌರವದಿಂದ ಆ ಶಾಲೆಯ ಶತಮಾನೋತ್ಸವವನ್ನು ಆಚರಿಸುವ ಸಂಭ್ರಮದಲ್ಲಿ ದ್ದಾರೆಂದು ತಿಳಿದು ಬಂದಿದೆ.

ಸುಮಾರು ೧೯೪೬-೪೭ ರ ಆಸುಪಾಸಿಲ್ಲಿ ಮದೆನಾಡಿನಲ್ಲಿ ಶ್ರೀ ಹುದೇರಿ ಬೆಳ್ಳಿಯಪ್ಪ ಎಂಬವರು ಗೋಳಿ ಮರದ ಅಡಿಯಲ್ಲಿ ಪಾಠ ಹೇಳಿ ಕೊಡುತ್ತಿದ್ದರು. ನಂತರದ ವರ್ಷಗಳಲ್ಲಿ ಅಲ್ಲೊಂದು ಕಟ್ಟಡ ತಲೆಯೆತ್ತಿತು.ಇಂದು ಅದು 'ಗೋಳಿಕಟ್ಟೆ ಶಾಲೆ' ಯೆಂದೇ ಪ್ರಸಿದ್ಧಿಯಾಗಿದೆ.

ಮೂರ್ನಾಡು ಸಮೀಪದ ಕುಂಬಳದಾಳು ಎಂಬಲ್ಲಿ ೧೯೧೨ ರಲ್ಲಿ ಕರಣೈಯನ ಶ್ರೀ ಅಣ್ಣಯ್ಯ ಎಂಬವರು ಶಾಲೆಯೊಂದನ್ನು ಆರಂಭಿಸಿ ಇಂದಿಗೂ ಪ್ರಸಿದ್ಧಿಯಲ್ಲಿದೆ ಎಂಬುದನ್ನು ಇಲ್ಲಿ ಸ್ಮರಿಸಬಹುದು.

ನಂಗಾರು ಶ್ರೀ ಮುತ್ತಣ್ಣನವರು ಮತ್ತು ಮೂಡಗದ್ದೆ ಶ್ರೀ ವಿಜಯೇಂದ್ರನವರ ಶಿಕ್ಷಣ ಸೇವೆಯನ್ನು ಸ್ಮರಿಸಬೇಕು. ಪೂಳಕಂಡ ಶ್ರೀ ಮುತ್ತಪ್ಪನವರಿಗೂ ಕೊಡಗು ಗೌಡ ವಿದ್ಯಾ ಸಂಘದ ಕಟ್ಟಡಕ್ಕೂ ಎಲ್ಲಿಲ್ಲದ ನಂಟು. ಶ್ರೀಯುತರು ಆರಂಭಿಸಿದ ಡಿಇಡಿ ಕಾಲೇಜು ಇದೇ ಕಟ್ಟಡದಲ್ಲಿ ಕಾರ್ಯ ನಿರ್ವಹಿಸಿ ಈಗ ಸ್ವಂತ ಕಟ್ಟಡದಲ್ಲಿ ಮುಂದುವರೆಯುತ್ತಿದೆ ಎನ್ನಲು ಹರ್ಷವಾಗುತ್ತದೆ.

ಕೊಡಗಿನ ಅಳಿಯ 'ಶಿಕ್ಷಣ ಶಿಲ್ಪಿ' ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್‌ನ ಸ್ಥಾಪಕಾಧ್ಯಕ್ಷರಾದ ಡಾ. ಕುರುಂಜಿ ವೆಂಕಟರಮಣ ಗೌಡರು ದ. ಕನ್ನಡ ಜಿಲ್ಲೆಯ ಸುಳ್ಯದಲ್ಲಿ ಆರಂಭಿಸಿದ ಶಿಕ್ಷಣ ಸಂಸ್ಥೆ ಒಂದೆರಡಲ್ಲ.

ಆದರ ಹಾಗೂ ಅವರ ಖ್ಯಾತಿ ಲೋಕಪ್ರಸಿದ್ಧಿ.

ಕೊಡಗಿನವರು ಬೇರೆ ಜಿಲ್ಲೆಗಳಲ್ಲಿ ವಾಸಿಸುತ್ತಿದ್ದರೂ ವಿದ್ಯಾ ಪ್ರಗತಿಗಾಗಿ ದುಡಿಯುತ್ತಿದ್ದಾರೆ.

ಕೊಡಗು ಎಜುಕೇಷನಲ್ ಅಕಾಡೆಮಿ ಮೂಲಕ ಬೆಂಗಳೂರಿನಲ್ಲಿ ವಿದ್ಯಾ ಸಂಸ್ಥೆಯನ್ನು ಆರಂಭಿಸಿ ಮುನ್ನಡೆಯುತ್ತಿದೆ.

ಶ್ರೀ ಅಮ್ಮಾಜಿ ಪೊನ್ನಪ್ಪನವರು 'ಕಾವೇರಿ ನಾಡು' ಶಾಲೆಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಿ ಪ್ರಗತಿಯಲ್ಲಿದೆ.

ಈ ಎಲ್ಲಾ ಚಟುವಟಿಕೆಗಳು ಪ್ರಗತಿಯ ಸಂಕೇತ. ಹಿರಿಯರ ದೂರ ದೃಷ್ಟಿಯ ಫಲ 'ಎಲೆ ಮರೆಯ ಕಾಯಿ'ಯಂತೆ ಇನ್ನೆಷ್ಟೋ ಮಂದಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ ಸೇವೆ ಸಲ್ಲಿಸುತ್ತಿರಬಹುದು. ಅವರೆಲ್ಲರಿಗೂ ಧನ್ಯವಾದಗಳು.

ನಾವೆಲ್ಲರೂ ಮುಗಿಯದ ಹಾದಿಯ ಪಯಣಿಗರು ಇಂದು ಹುಟ್ಟಿದ ಮಕ್ಕಳು ಕೊಡಗು ಗೌಡ ವಿದ್ಯಾ ಸಂಘದ ದ್ವಿ ಶತಮಾನೋತ್ಸವ ಆಚರಿಸುವಂತಾಗಲಿ. ಇನ್ನಷ್ಟು, ಮತ್ತಷ್ಟು ಶಿಕ್ಷಣ ಸಂಸ್ಥೆಗಳು ಬೆಳೆದು ಮುಂದುವರೆಯಲಿ . ಸರ್ವ ಜನಾಂಗದ ಶಾಂತಿಯ ತೋಟವಾಗಲಿ.

ಎಲ್ಲರಿಗೂ ಶತಮಾನೋತ್ಸವದ ಶುಭಾಶಯಗಳು

- ಪ್ರಧಾನ ಸಂಪಾದಕರು

ಸ್ಮರಣ ಸಂಚಿಕೆ ಕುರಿತು

ಕೊಡಗು ಗೌಡ ವಿದ್ಯಾ ಸಂಘ ಶತಮಾನೋತ್ಸವ ಸಮಾರಂಭವನ್ನು ಆಚರಿಸುವ ಸಲುವಾಗಿ ವರ್ಷದ ಹಿಂದೆ ಕರೆದ ಸಭೆಯಲ್ಲಿ ವಿವಿಧ ಉಪ ಸಮಿತಿಗಳ ರಚನೆ ಆಯಿತು. ಅದೇ ಸಭೆಯಲ್ಲಿ ಸ್ಮರಣ ಸಂಚಿಕೆಯನ್ನು ಹೊರತರುವ ಕುರಿತು ಚರ್ಚೆ ನಡೆಯಿತು.

ಕರ್ನಾಟಕ ವಿಧಾನ ಸಭಾ ಉಪ ಸಭಾಪತಿಗಳಾದ ಮಾನ್ಯಶ್ರೀ ಕೊಂಬಾರನ ಜಿ. ಬೋಪಯ್ಯನವರಿದ್ದ ಆ ಸಭೆಯಲ್ಲಿ ಸ್ಮರಣ ಸಂಚಿಕೆ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ನನ್ನ ಹೆಸರನ್ನು ಸೂಚಿಸಲಾಯಿತು. 'ನನಗಿಂತಲೂ ಹಿರಿಯರಿದ್ದಾರೆ, ಅವರನ್ನು ಆಯ್ಕೆ ಮಾಡುವಂತೆ' ನಾನು ಕೋರಿಕೊಂಡೆ. ಅಂತಿಮವಾಗಿ ಆ ಸ್ಥಾನಕ್ಕೆ ನನ್ನನ್ನೇ ಆಯ್ಕೆ ಮಾಡಲಾಯಿತು. ನನ್ನ ಮೇಲಿಟ್ಟ ಅಭಿಮಾನ ಮತ್ತು ವಿಶ್ವಾಸಕ್ಕೆ ಅಂದಿನ ಸಭೆಯಲ್ಲಿದ್ದ ಸರ್ವರಿಗೂ ನಾನು ಕೃತಜ್ಞನಾಗಿದ್ದೇನೆ.

ಅದೇ ಸಭೆಯಲ್ಲಿ ಸಮಿತಿಯ ಗೌರವ ಅಧ್ಯಕ್ಷರನ್ನಾಗಿ ಶ್ರೀ ತೇನನ ರಾಜೇಶ್ ಅವರನ್ನು ಆಯ್ಕೆ ಮಾಡಲಾಯಿತು. ರಾಜೇಶ್‌ನವರು ಸಭೆಗೆ ಬರದಿದ್ದರೂ ಸಾಕಷ್ಟು ಜಾಹೀರಾತು ಸಂಗ್ರಹಿಸಿ ಕೊಟ್ಟು ಉಪಕಾರ ಮಾಡಿದ್ದಾರೆ.

ನಂತರ ೦೫-೦೨-೨೦೦೮ ರಂದು ವಿದ್ಯಾ ಸಂಘದ ಆವರಣದಲ್ಲಿ ಸ್ಮರಣ ಸಂಚಿಕೆ ಸಮಿತಿಯ ಮೊದಲ ಸಭೆ ನಡೆಯಿತು. ಆ ಸಭೆಯಲ್ಲಿ ಹತ್ತು ಮಂದಿ ಸದಸ್ಯರಿದ್ದರು. ಅಂದು ಸಂಚಿಕೆಯ ಗೌ. ಸಂಪಾದಕ, ಪ್ರಧಾನ ಸಂಪಾದಕ, ಕಾರ್ಯದರ್ಶಿ, ಸಹ ಕಾರ್ಯದರ್ಶಿ, ಸಹ ಸಂಪಾದಕರು, ಉಪ ಸಂಪಾದಕರು ಹಾಗೂ ಸದಸ್ಯರ ಆಯ್ಕೆ ನಡೆಯಿತು.

ಆ ಸಭೆಯಲ್ಲಿ ಪ್ರಧಾನ ಸಂಪಾದಕನನ್ನಾಗಿ ನನ್ನನ್ನೇ ಆಯ್ಕೆ ಮಾಡಲಾಯಿತು. ಒಬ್ಬನಿಗೆ ಎರಡು ಹುದ್ದೆ ಬೇಡವೆಂದರೂ ನನಗೆ ಪ್ರಧಾನ ಸಂಪಾದಕನ ಗೌರವ ನೀಡಿ ಆಯ್ಕೆ ಮಾಡಿದರು. ಅವರ ಅಭಿಮಾನಕ್ಕೆ ನಾನು ಋಣಿಯಾಗಿದ್ದೇನೆ.

ಗೌ. ಸಂಪಾದಕರನ್ನಾಗಿ ಶ್ರೀ ಪಟ್ಟಡ ಪ್ರಭಾಕರನವರನ್ನು, ಕಾರ್ಯದರ್ಶಿಯನ್ನಾಗಿ ಶ್ರೀ ಅಮೆ ಕೃ. ಪಾಲಾಕ್ಷನವರನ್ನು ಆಯ್ಕೆ ಮಾಡಲಾಯಿತು.

ಸಂಪಾದಕರನ್ನಾಗಿ ಶ್ರೀ ಕುಡೆಕಲ್ ಆರ್. ವಿದ್ಯಾಧರ, ಶ್ರೀ ಅಮೆ ಕೃ. ಪಾಲಾಕ್ಷ, ಶ್ರೀ ಪಟ್ಟಡ ಶಿವಕುಮಾರ್, ಶ್ರೀ ಕುದುಕುಳಿ ಭರತ, ಶ್ರೀ ಸೂದನ ಈರಪ್ಪನವರನ್ನು ಆಯ್ಕೆ ಮಾಡಿತು. (ವಿದ್ಯಾಧರನವರು ತಮ್ಮನ್ನು ಕೈಬಿಡುವಂತೆ ನಂತರ ಕೋರಿಕೊಂಡರು).

ನಂತರ ಸಹ ಸಂಪಾದಕರು, ಉಪ ಸಂಪಾದಕರು ಮತ್ತು ಸದಸ್ಯರ ಆಯ್ಕೆ ನಡೆಯಿತು.

೧೬-೦೩-೨೦೦೮ರಂದು ನಡೆದ ಸಮಿತಿ ಸಭೆಯಲ್ಲಿ ಸಂಚಿಕೆಗೊಂಡ ಹೆಸರನ್ನು ಸೂಚಿಸುವ ಚರ್ಚೆ ನಡೆಯಿತು. ಹತ್ತು ಮಂದಿ ಇದ್ದ ಆ ಸಭೆಯಲ್ಲಿ ಶತದಲ, ಶತ ಸಂಭ್ರಮ, ಶತಪದಿ, ಪ್ರತಿಬಿಂಬ, ದರ್ಪಣ, ನೆಳಲು, ಬಿಳಲು, ಕದಿರು, ತೆನೆ, ಶತಮಾನದ ಸೌರಭ, ಶತ ಸೌರಭ, ನೂರು ಹೆಜ್ಜೆ, ಗೆಜ್ಜೆನಾದ ಎಂಬ ಹೆಸರುಗಳು ಸೂಚಿತಗೊಂಡವು.

೨೦-೦೩-೨೦೦೮ರಂದು ನಡೆದ ಸಭೆಯಲ್ಲಿ ಉಪ ಸಂಪಾದಕರಾದ ಡಾ. ಕೋರನ ಸರಸ್ವತಿ ಪ್ರಕಾಶ್‌ನವರು ಸೂಚಿಸಿದ 'ಕದಿರು' ಎಂಬ ಹೆಸರನ್ನು ಆಯ್ಕೆ ಮಾಡಲಾಯಿತು. ಒಳ್ಳೆಯ ಹೆಸರನ್ನು ಸೂಚಿಸಿದ ಶ್ರೀಮತಿ ಸರಸ್ವತಿಯವರಿಗೆ ಧನ್ಯವಾದಗಳು. ಆ ಸಭೆಯಲ್ಲಿ ೧೬ ಮಂದಿ ಪದಾಧಿಕಾರಿಗಳಿದ್ದರು.

೧೯-೧೦-೦೮ರಂದು ಸಹ ಕಾರ್ಯದರ್ಶಿ ಶ್ರೀಮತಿ ಪುದಿನೆರವನ ರೇವತಿ ರಮೇಶ್‌ನವರ ಮನೆಯಲ್ಲಿ ಸಭೆ ನಡೆಯಿತು. (ವಿದ್ಯಾ ಸಂಘದ ಕಟ್ಟಡದಲ್ಲಿ ಮದುವೆ ಸಮಾರಂಭ ಇದ್ದುದರಿಂದ) ಒಂಭತ್ತು ಮಂದಿ ಇದ್ದ ಸಭೆಯಲ್ಲಿ ಸಂಚಿಕೆಯ ಪ್ರಗತಿ ಬಗ್ಗೆ ಚರ್ಚೆ ನಡೆಯಿತು.

೦೩-೧೧-೦೮ರಂದು ಸಮಿತಿ ಸದಸ್ಯರಾದ ಶ್ರೀ ಬೈತಡ್ಕ ಬೆಳ್ಳಿಯಪ್ಪನವರ ಮನೆಯಲ್ಲಿ ಸಭೆ ನಡೆಯಿತು. (ಆ ದಿನವೂ ವಿದ್ಯಾ ಸಂಘದಲ್ಲಿ ಮದುವೆ ಸಮಾರಂಭವಿತ್ತು) ಅಂದಿನ ಸಭೆಯಲ್ಲಿ ೧೪ ಮಂದಿ ಪದಾಧಿಕಾರಿಗಳಿದ್ದರು.

ನಂತರ ೨೧-೧೨-೦೮ರಂದು ಶ್ರೀಮತಿ ರೇವತಿ ರಮೇಶ್‌ನವರ ಮನೆಯಲ್ಲಿ (ಅಂದೂ ಕೂಡ ವಿದ್ಯಾ ಸಂಘದಲ್ಲಿ ಮದುವೆ ಸಮಾರಂಭವಿತ್ತು) ಕಾನೂನು ಸಮಿತಿಯ ಅಧ್ಯಕ್ಷರಾದ ಶ್ರೀ ಯಾಲದಾಳು ಕೇಶವಾನಂದನವರ ಅಧ್ಯಕ್ಷತೆಯಲ್ಲಿ ನಡೆದ ಮಹತ್ತರ ಸಭೆಯಲ್ಲಿ ಕಾನೂನು ಸಮಿತಿಯ ಸದಸ್ಯರು ಹಾಗೂ ಸ್ಮರಣ ಸಂಚಿಕೆ ಸಮಿತಿಯ ಪದಾಧಿಕಾರಿಗಳಿದ್ದು 'ವಿವಾದಿತ ಲೇಖನ'ದ ಬಗ್ಗೆ ಎರಡೂ ಕಡೆಯವರನ್ನು ಬರಮಾಡಿಕೊಂಡು ಚರ್ಚಿಸಿ ನಂತರ ಆ ಲೇಖನವನ್ನು ಕೈ ಬಿಡುವಂತೆ ತೀರ್ಮಾನಿಸಲಾಯಿತು. ಎರಡೂ ಕಡೆಯವರು ಆ ತೀರ್ಮಾನಕ್ಕೆ ಸಹಿ ಮಾಡಿರುತ್ತಾರೆ.

ಸಂಚಿಕೆ ಕುರಿತು ವ್ಯವಹರಿಸಲು ಸ್ಥಳ ಬೇಕು. ಏಕೆಂದರೆ ಆ ಕೆಲಸ ಒಂದೆರಡು ದಿನಗಳದ್ದಲ್ಲ. ಎಲ್ಲಿ ಕಾರ್ಯ ನಿರ್ವಹಿಸುವುದು? ವಿದ್ಯಾ ಸಂಘದ ಕಚೇರಿಯಲ್ಲಿಯೆ? ಅಥವಾ ಕೆಳಗಿನ ಕಟ್ಟಡದಲ್ಲೆ? ಅಥವಾ ಬಾಡಿಗೆ ಕೊಠಡಿಯೆ? ಸಮಸ್ಯೆ ಬಗೆ ಹರಿಯಲಿಲ್ಲ. ಆಗ ಸಮಿತಿಯ ಕಾರ್ಯದರ್ಶಿ ಹಾಗೂ ಸಂಪಾದಕರೂ ಆಗಿರುವ ಶ್ರೀ ಅಮೆ ಪಾಲಾಕ್ಷನವರು ತಮ್ಮ ಅರ್ಚನಾ ಎಂಟರ್‌ಪ್ರೈಸಸ್‌ನ ಕೊಠಡಿಯ ಒಂದು ಭಾಗವನ್ನು ಬಹು ಪ್ರೀತಿಯಿಂದ ಬಿಟ್ಟು ಕೊಟ್ಟು ಉಪಕಾರ ಮಾಡಿದರು. ಅಲ್ಲಿ ನಾವು ಯಾವಾಗೆಂದರೆ ಆವಾಗ ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶವಾಯಿತು. ಉಚಿತವಾಗಿ ಬಿಟ್ಟುಕೊಟ್ಟು, ಬೆಳಕಿನ ವ್ಯವಸ್ಥೆಯನ್ನು ಮಾಡಿ ನಮ್ಮೆಲ್ಲರ ಕಿರಿಕಿರಿಗಳನ್ನು ಸಹಿಸಿಕೊಂಡು ಅದರೊಡನೆ ಸಂಚಿಕೆಯ ಬಹುಪಾಲಿನ ಜವಾಬ್ದಾರಿಯನ್ನು ನಿಬಾಯಿಸಿ ಸಂಚಿಕೆಗೊಂದು ನೆಲೆಗಟ್ಟನ್ನು ಒದಗಿಸಿದ್ದಾರೆ. ಅವರಿಗೆ ಅನಂತಾನಂತ ಧನ್ಯವಾದಗಳು.

ಸಹ ಸಂಪಾದಕರಾದ ಶ್ರೀ ಕೋರನ ಸುನಿಲ್‌ನವರು ಪ್ರತಿ ಹಂತದಲ್ಲೂ ನೆರವಿಗೆ ಬಂದಿದ್ದಾರೆ. 'ನೀವು ಯಾವಾಗ ಹೇಳುತ್ತೀರಾ ಆವಾಗ' ಬರುತ್ತೇನೆಂದುದು ಮಾತ್ರವಲ್ಲ ಹಾಗೆ ನಡೆದುಕೊಂಡರು.

ಶ್ರೀಮತಿ ಬೈತಡ್ಕ ಜಾನಕಿ, ಶ್ರೀಮತಿ ರೇವತಿ ರಮೇಶ್, ಶ್ರೀ ಪಟ್ಟಡ ಶಿವಕುಮಾರ್ ಕರಡು ತಿದ್ದಲು ಸಹಕರಿಸಿದ್ದಾರೆ.

ಗೌ. ಸಂಪಾದಕರಾದ ಶ್ರೀ ಪಟ್ಟಡ ಪ್ರಭಾಕರನವರು ಸಲಹೆ ನೀಡಿದ್ದಾರೆ. ಶ್ರೀಯುತರಾದ ಕುಲ್ಲಚನ ಕಾರ್ಯಪ್ಪ, ಕುದುಕುಳಿ ಭರತ, ಕುಡೆಕಲ್ ಸಂತೋಷ್, ಕುಯ್ಯಮುಡಿ ಸುನಿಲ್, ಬೈತಡ್ಕ ಬೆಳ್ಳಿಯಪ್ಪ, ಸೂದನ ಗೋಪಾಲ, ಕೋಳುಮುಡಿಯನ ಅನಂತಕುಮಾರ್, ಶ್ರೀಮತಿ ತಳೂರು ಸ್ವರ್ಣ ಕಿಶೋರ್, ಕು. ಯಾಲದಾಳು ಜಯಲಕ್ಷ್ಮಿ ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಹಕರಿಸಿದ್ದಾರೆ. ಶ್ರೀ ಗುಡ್ಡೆಮನೆ ರಮೇಶ್, ಶ್ರೀ ಸೂದನ ಈರಪ್ಪ ಮತ್ತು ಶ್ರೀ ಕೀಜನ ಲಕ್ಷ್ಮಣ ಇವರು ಒಂದೆರಡು ಸಭೆಗೆ ಬಂದಿದ್ದರು.

ಸಂಚಿಕೆಗೆ ಬರಹಗಳನ್ನು ಆಹ್ವಾನಿಸುವಂತೆ ಪತ್ರಿಕೆ ಹಾಗೂ ಆಕಾಶವಾಣಿ ಮೂಲಕ ಪ್ರಚಾರ ಮಾಡಲಾಯಿತು. ಕೆಲವರು ಮಾತ್ರ ಶಿಸ್ತುಬದ್ಧರಾಗಿ ಸಮಯಕ್ಕೆ ಸರಿಯಾಗಿ ಬರಹವನ್ನು ತಲುಪಿಸಿದರು. ಕೆಲವರಿಗೆ ಬರಹವನ್ನು ಕಳುಹಿಸಿಕೊಡುವಂತೆ ಪತ್ರ ಬರೆದೆವು. ಆ ಪ್ರಕಾರ ಲೇಖನಗಳನ್ನು ಕೆಲವರು ಕಳುಹಿಸಿ ಉಪಕಾರ ಮಾಡಿದ್ದಾರೆ.

ಉದಯೋನ್ಮುಖ ಬರಹಗಾರರಿಗೆ ಪ್ರೋತ್ಸಾಹ ಕೊಡುವವರು ಯಾರು? ಅವಕಾಶ ಕೊಡದೆ ಅನುಭವ ಬರುವುದಾದರೂ ಹೇಗೆ? ಈ ಸಂಚಿಕೆ ಮೂಲಕವಾದರೂ ಚಾಲನೆ ಸಿಗಲಿ ಎಂಬ ಕಾರಣದಿಂದ ಬಹುಪಾಲು ಬರಹಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ. ಸಂಗ್ರಹ ಮಾಡಿಕೊಡುವುದಕ್ಕಿಂತ ಸ್ವಂತ ಬರವಣಿಗೆಯಲ್ಲಿ ತೊಡಗಿಸಿಕೊಳ್ಳದಿದ್ದರೆ ಬರಹಗಾರರಾಗಲು ಸಾಧ್ಯವಿಲ್ಲ. ಬರಹಗಾರರು ಸ್ವಂತಿಕೆಯಿಂದ ಬರೆಯಲು ಪ್ರಯತ್ನಿಸಿದರೆ ಖಂಡಿತ ಒಳ್ಳೆಯ ಬರಹಗಾರರಾಗುವ ಲಕ್ಷಣಗಳಿವೆ. ಸಂಚಿಕೆಯಲ್ಲಿ ಪುಟಗಳ ಮಿತಿ ಇರುವುದರಿಂದ ದೀರ್ಘ ಲೇಖನಗಳನ್ನು ಬಳಸಿಕೊಳ್ಳಲಾಗಿಲ್ಲ.

ಇನ್ನು ಜಾಹೀರಾತು? 'ಹಾಗೆ-ಹೀಗೆ' ಎನ್ನುತ್ತಿರುವಂತೆ ಸಾಕಷ್ಟು ಜಾಹೀರಾತುಗಳನ್ನು ಅಭಿಮಾನಿ ಬಳಗ ಸಂಗ್ರಹಿಸಿ ಸಂಚಿಕೆಗೊಂದು ಮೆರಗು ಹಾಗೂ ಆರ್ಥಿಕ ಕೊರಗನ್ನು ನಿವಾರಿಸಿದ್ದಾರೆ. ಇವರಿಗೆ ನಮ್ಮ ಧನ್ಯವಾದಗಳು.

ಜಾಹೀರಾತು ಪತ್ರಿಕೆಯ ಜೀವಾಳ. ನಮ್ಮ ಈ ಸಂಚಿಕೆಗೆ ಬಹು ಸಂತೋಷದಿಂದ ಅತೀ ಆಕರ್ಷಕ ರೀತಿಯಲ್ಲಿ ಜಾಹೀರಾತು ನೀಡಿ ನಮ್ಮ ಬೆನ್ನು ತಟ್ಟಿದ್ದಾರೆ. ಜಾಹೀರಾತು ನೀಡಿದ ಇವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ.

ಸ್ಮರಣ ಸಂಚಿಕೆಯ ಹೆಸರು 'ಕದಿರು'. ಅದು ಬದುಕಿನ ಸಂಕೇತ, ಬೆಳವಣಿಗೆಯ ಸೂಚಕ. ಮಣ್ಣಿನ ಫಲವತ್ತತೆಯ ಪ್ರತೀಕ. ಕಾಳೊಂದು ಮೊಳೆತರೆ, ಸಸಿಯಾಗಿ ಬೆಳೆದು ತೆನೆ ಬಾಗಿದರೆ ಅದರಲ್ಲಿರುವ ಕಾಳುಗಳೆಷ್ಟು? ಅದರಂತೆ ಇಡೀ ಕದಿರಿನ ಕಾಳನ್ನು ಬಿತ್ತಿದರೆ? ಆಯೆಲ್ಲಾ ಕಾಳುಗಳನ್ನು ಮತ್ತೆ ಬಿತ್ತಿದರೆ? ಅಸಂಖ್ಯಾ ಅಗಣಿತ. ಈ ಸಂಚಿಕೆಯ ಮುಖ ಪುಟದಲ್ಲಿ ಬಾಗಿದಂತಿರುವ ಎರಡು ದೊಡ್ಡ ಕದಿರಿನಲ್ಲಿ ಒಂದು ನೂರು ಕಾಳುಗಳಿವೆ. ಅಂದರೆ ವಿದ್ಯಾ ಸಂಘ ಸವೆಸಿದ ಶತಮಾನದ ಹೆಜ್ಜೆ ಗುರುತನ್ನು ಅದು ಸೂಚಿಸುತ್ತದೆ. ಕಾಳು ಉರುಳಿದಂತೆ ಕಾಲ ಉರುಳುತ್ತದೆ. ಬೆಳೆ ಬೆಳೆಯುತ್ತದೆ. ಹಾಗೆ ವಿದ್ಯೆ ಮುಂದುವರೆಯುತ್ತದೆ. ಹಿರಿಯರು ಮರೆಯಾಗುತ್ತಾರೆ, ಕಿರಿಯರು ಬೆಳಗುತ್ತಾರೆ.

ಮುಖಪುಟದ ನಮ್ಮ ಕಲ್ಪನೆಗೆ ಆಕರ್ಷಕ ರೂಪ ನೀಡಿದ ಕಲಾವಿದ ಶಿಕ್ಷಕ ಶ್ರೀ ಬಿ.ಆರ್. ಸತೀಶ್‌ನವರಿಗೆ ಕೃತಜ್ಞತೆಗಳು. ಈ ನಿಟ್ಟಿನಲ್ಲಿ ಪ್ರಯತ್ನಿಸಿದ ಕು. ಚರಿತಾರವರಿಗೆ ನಾವು ಋಣಿಗಳು.

ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮುದ್ರಿಸಿದ ಶಕ್ತಿ ಪ್ರಿಂಟರ್ಸ್‌ನ ಮಾಲೀಕರಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ನಾವು ಕೃತಜ್ಞರು.

ಸಮಿತಿಯಲ್ಲಿದ್ದುಕೊಂಡು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ದುಡಿದು ಸಹಕರಿಸಿದ, ಹೊರಗಿನಿಂದ ಬೆಂಬಲವಾಗಿ ನಿಂತು ಉಪಕಾರ ಮಾಡಿದ, ಸಭೆ ನಡೆಯಲು ಅನುವು ಮಾಡಿಕೊಟ್ಟ, ವಿವಾದವನ್ನು ಬಗೆ ಹರಿಸಿದ, ಲೇಖನ ಕಳುಹಿಸಿ ಉಪಕಾರ ಮಾಡಿದ, ಜಾಹೀರಾತು ಸಂಗ್ರಹಿಸಿದ ಹಾಗೂ ಜಾಹೀರಾತು ನೀಡಿದ ಸರ್ವರಿಗೂ ಅಲ್ಲದೆ, ಶತಮಾನೋತ್ಸವ ಸಮಿತಿಯ ಸಕಲರಿಗೂ ಧನ್ಯವಾದಗಳು.

- ಬಾರಿಯಂಡ ಆರ್. ಜೋಯಪ್ಪ

ಪ್ರಧಾನ ಸಂಪಾದಕ

ಶತಮಾನದ ಹೊಸ್ತಿಲಲ್ಲಿ ಕೊಡಗು ಗೌಡ ವಿದ್ಯಾಸಂಘ

ಹತ್ತು ಕುಟುಂಬ ಹದಿನೆಂಟು ಗೋತ್ರಜರೂ, ಅರೆಭಾಷಿಕರೂ ಆದ ಕೊಡಗಿನ ಗೌಡರು ಇಪ್ಪತ್ತನೆಯ ಶತಮಾನದವರೆಗೂ ಅಸಂಘಟಿತರಾಗಿದ್ದು, ತಮ್ಮ ಪ್ರಗತಿಗೆ ಸಂಘಟನೆಯ ಅನಿವಾರ್ಯತೆಯನ್ನು ಮನಗಂಡು ಮಡಿಕೇರಿಯಲ್ಲಿ ಒಂದು ವಿದ್ಯಾಸಂಘವನ್ನು ಸ್ಥಾಪಿಸಲು ಕಂಕಣಬದ್ಧರಾದರು. ಇದರ ಫಲಶ್ರುತಿಯಾಗಿ 1908 ರಲ್ಲಿ ಸ್ಥಾಪಿತವಾದ ಕೊಡಗು ಗೌಡ ವಿದ್ಯಾಸಂಘ ನಮ್ಮವರ ಪಾಲಿಗೆ ಒಂದು ಮುಖ್ಯ ಚಾರಿತ್ರಿಕ ಘಟನೆಯಾಗಿದೆ. ಈ ಸಂಘದ ಸ್ಥಾಪಕರಾದ ದಿವಂಗತ ಕುಂಬಗೌಡನ ಕುಶಾಲಪ್ಪನವರು ಈ ಸಂಘದ ಇತಿಹಾಸದಲ್ಲಿ ಪ್ರಕಾಶಿಸುವ ಧ್ರುವತಾರೆ ಎಂದರೆ ಅತಿಶಯೋಕ್ತಿಯಲ್ಲ.

ದೂರದರ್ಶಿಯೂ, ಧೀಮಂತ ನಾಯಕರೂ ಆದ ಕುಂಬಗೌಡನ ಕುಶಾಲಪ್ಪನವರು ತಮ್ಮ ಒಡನಾಡಿಗಳಾದ ತೆಕ್ಕಡ ಸುಬ್ಬಯ್ಯ, ಕೆದಂಬಾಡಿ ಸುಬ್ರಾಯ, ತೆಕ್ಕಡ ಕಾಳಪ್ಪ, ಕೋರನ ಮಾದಯ್ಯ, ಪೊಡನೋಳನ ಐಯ್ಯಪ್ಪ, ಮೂಟೇರ ಅಣ್ಣಯ್ಯ, ಕರ್ಣಯ್ಯನ ಅಪ್ಪಚ್ಚ ಮೊದಲಾದವರ ಸಹಕಾರದೊಂದಿಗೆ ಈ ಸಂಘದ ಸ್ಥಾಪನೆಗೆ ಕಾರಣಕರ್ತರಾದರು. ದಿವಂಗತ ಕುಂಬಗೌಡನ ಕುಶಾಲಪ್ಪನವರು ದಕ್ಷಿಣ ಕನ್ನಡ ಗೌಡ ವಿದ್ಯಾಸಂಘದ ಸ್ಥಾಪನೆಗೂ ಪ್ರೇರಕ ಶಕ್ತಿಯಾಗಿದ್ದರು. ಇದಲ್ಲದೆ, ಕೊಡಗು ಗೌಡ ವಿದ್ಯಾಸಂಘದಲ್ಲಿ ಹತ್ತು ವರ್ಷಗಳಷ್ಟು ಸುಧೀರ್ಘ ಅವಧಿಗೆ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ. ಈ ಸಂಘದ ಸ್ಥಾಪನೆಯು ನಮ್ಮ ಸಮಾಜ ಬಾಂಧವರಲ್ಲಿ ಒಂದು ಬಗೆಯ ಸಂಚಲನವನ್ನು ಮೂಡಿಸುವಲ್ಲಿ ಸಫಲವಾಯಿತು.

ಕೊಡಗು ಗೌಡ ವಿದ್ಯಾಸಂಘದ ಹೆಸರೇ ಸೂಚಿಸುವಂತೆ ಇದು ನಮ್ಮ ಜನಾಂಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಿದ್ಯಾಭಿವೃದ್ಧಿ ಗುರಿಯ ಸಾಧನೆಗಾಗಿ ಸ್ಥಾಪಿತವಾಯಿತು. ಆ ಕಾಲದಲ್ಲಿ ನಮ್ಮ ಜನಾಂಗದ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಿದ್ಯಾರ್ಜನೆಗಿದ್ದ ಎರಡು ಮುಖ್ಯ ತೊಡಕುಗಳೆಂದರೆ ಮಡಿಕೇರಿಯಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ನಿಲಯಗಳ ಕೊರತೆ ಮತ್ತು ಅವರ ಪೋಷಕರ ಹಣಕಾಸಿನ ತೊಂದರೆಗಳು.

ವಿದ್ಯಾರ್ಥಿ ನಿಲಯದ ಸ್ಥಾಪನೆ

ತೆಕ್ಕಡ ಸುಬ್ಬಯ್ಯನವರು ಈ ಸಂಘದ ಅಧ್ಯಕ್ಷರಾಗಿದ್ದ ಅವಧಿ (1919-1922)ಯಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮೇಲ್ಭಾಗದಲ್ಲಿ ಈಗ ವಿದ್ಯಾಸಂಘದ ಕಾರ್ಯಾಲಯವಿರುವ ಕಟ್ಟಡದಲ್ಲಿ ಗ್ರಾಮೀಣ ವಿದ್ಯಾರ್ಥಿಗಳ ಬಹುದಿನದ ಕನಸಾಗಿದ್ದ ಗೌಡ ವಿದ್ಯಾರ್ಥಿ ನಿಲಯವು ಶುಭಾರಂಭ ಮಾಡಿತು.

ವಿದ್ಯಾರ್ಥಿನಿಯರ ನಿಲಯದ ಸ್ಥಾಪನೆ

ಮೂರು ಬಾರಿ ಈ ಸಂಘದ ಅಧ್ಯಕ್ಷರಾಗಿದ್ದ ನಿಡ್ಯಮಲೆ ಮುದ್ದಪ್ಪನವರ ಮೊದಲ ಕಾಲಾವಧಿ (1926-1927)ಯಲ್ಲಿ ಗೌಡ ವಿದ್ಯಾರ್ಥಿನಿಯರಿಗಾಗಿ ಒಂದು ವಿದ್ಯಾರ್ಥಿನಿ ನಿಲಯವನ್ನು ನಿರ್ಮಿಸಲು ಸ್ವಜಾತಿ ಬಾಂಧವರಿಂದ ನಿಧಿ ಸಂಗ್ರಹಿಸುವ ಕಾರ್ಯ ಕೈಗೊಳ್ಳಲಾಯಿತು. ಆನಂತರ ತೆಕ್ಕಡೆ ಆನಂದಯ್ಯನವರು ಅಧ್ಯಕ್ಷರಾಗಿದ್ದ ಕಾಲಾವಧಿ (1934-1936)ಯಲ್ಲಿ ಈ ವಿದ್ಯಾರ್ಥಿನಿ ನಿಲಯವು ಸಾಕಾರಗೊಂಡಿತು. ಇದಕ್ಕೆ ಅಗತ್ಯವಾದ ಮರಮುಟ್ಟುಗಳನ್ನು ಮುತ್ತಾರ್ಮುಡಿ ಗ್ರಾಮದ ಕೊಡೆಕಲ್ಲು ಕುಟುಂಬಸ್ಥರು ಉದಾರವಾಗಿ ದಾನ ಮಾಡಿರುತ್ತಾರೆ. ಈಗ ಈ ಕಟ್ಟಡವನ್ನು ಕೆಡವಿ ಆ ಸ್ಥಳವನ್ನು ಸಂಘದ ಸೋದರ ಸಂಸ್ಥೆಯಾದ ಗೌಡ

ಸಮಾಜಕ್ಕೆ ವಹಿಸಲಾಗಿದೆ. ಹೀಗೆ ವಿದ್ಯಾರ್ಥಿಗಳು ಎದುರಿಸುತ್ತಿದ್ದ ಮೊದಲನೆಯ ತೊಡಕು ನಿವಾರಣೆಯಾದಂತಾಯಿತು.

ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು

ವಿದ್ಯಾರ್ಥಿಗಳು ಎದುರಿಸುತ್ತಿದ್ದ ಎಡನೆಯ ತೊಡಕೆಂದರೆ ಹಣಕಾಸಿನ ತೊಂದರೆಗಳು. ಇದನ್ನು ನಿವಾರಿಸುವ ಸಲುವಾಗಿ ಸಂಘವು ತನ್ನ ಸಹಾಯ ಹಸ್ತವನ್ನು ನೀಡಲು ಮುಂದಾಯಿತು. ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಮ್ಮ ವ್ಯಾಸಂಗವನ್ನು ಮುಂದುವರಿಸಲು ಸಂಘವು ಮೊದಲಿಗೆ ಸಾಲ ರೂಪದಲ್ಲಿ ಆರ್ಥಿಕ ನೆರವನ್ನು ನೀಡುವ ನಿರ್ಧಾರ ಕೈಗೊಂಡಿತ್ತು.

ದತ್ತಿನಿಧಿಗಳ ಸ್ಥಾಪನೆ

1977 ರಿಂದೀಚೆಗೆ ಈ ಸಾಲ ಯೋಜನೆಯನ್ನು ಸ್ಥಗಿತಗೊಳಿಸಿ ಸಂಘದ ಆಶ್ರಯದಲ್ಲಿ ಉದಾರಿಗಳ ನೆರವಿನಿಂದ ಶಾಶ್ವತ ದತ್ತಿನಿಧಿಗಳನ್ನು ವ್ಯವಸ್ಥೆಗೊಳಿಸಲಾಗಿದೆ. 1977 ರಲ್ಲಿ ಸ್ಥಾಪನೆಯಾದ ಪಟ್ಟಡ ನೀಲವ್ವ ಮುತ್ತಣ್ಣ ಸ್ಮಾರಕ ನಿಧಿ ದತ್ತಿನಿಧಿಗಳ ಸರಮಾಲೆಗೆ ನಾಂದಿ ಹಾಡಿತು. ಈ ನಿಟ್ಟಿನಲ್ಲಿ ವಿದ್ಯಾಸಂಘವು ಸಹ ಉತ್ಸುಕತೆಯನ್ನು ಪ್ರದರ್ಶಿಸಿ ತನ್ನದೇ ಆದ ದತ್ತಿನಿಧಿಗಳನ್ನು ಸ್ಥಾಪಿಸಿದೆ. ಈ ತನಕ 176 ದಾನಿಗಳ ಕೊಡುಗೆ ಮತ್ತು ವಿದ್ಯಾಸಂಘದ ದೇಣಿಗೆಯೂ ಸೇರಿ 4,19,000 ರೂಪಾಯಿಗಳ ಬೃಹತ್ ಮೊತ್ತವನ್ನು ಸಂಗ್ರಹಿಸಲಾಗಿದೆ. ಈ ದತ್ತಿ ನಿಧಿಗಳ ಬಡ್ಡಿಯನ್ನು ಪ್ರತಿ ವರ್ಷ ಅರ್ಹ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನವಾಗಿ ವಿತರಿಸಲಾಗುತ್ತದೆ.

ಮಡಿಕೇರಿಯಲ್ಲಿ ಗೌಡರ ರುದ್ರಭೂಮಿ

ಮಡಿಕೇರಿ ನಿವಾಸಿಗಳಾದ ಗೌಡರು ಮೃತಪಟ್ಟಾಗ ಅವರ ಅಂತ್ಯ ಸಂಸ್ಕಾರವನ್ನು ನೆರವೇರಿಸುವ ಸಲುವಾಗಿ ವಿದ್ಯಾಸಂಘವು ಸರ್ಕಾರದಿಂದ ಅರ್ಧ ಎಕ್ರೆ ಸ್ಥಳವನ್ನು ಪಡೆದು ಅದನ್ನು ಸ್ಮಶಾನವಾಗಿ ಬಳಸುವ ವ್ಯವಸ್ಥೆ ಮಾಡಿರುತ್ತಾರೆ.

ಮೈಸೂರಿನಲ್ಲಿ ಗೌಡ ವಿದ್ಯಾರ್ಥಿ ನಿಲಯ

1960ರಲ್ಲಿ ಮೈಸೂರಿನಲ್ಲಿ ನೆಲೆಸಿರುವ ಕೊಡಗಿನ ಗೌಡರು 'ಕೊಡಗು ಗೌಡ ವಿದ್ಯಾಸಂಘ, ಮೈಸೂರು' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಇದು ಮಡಿಕೇರಿಯ ಕೊಡಗು ಗೌಡ ವಿದ್ಯಾಸಂಘದ ಶಾಖೆಯಾಗಿ ಅಸ್ತಿತ್ವಕ್ಕೆ ಬಂದಿತು. ಈ ಸಂಘವು ಮೈಸೂರಿನ ಜಯಲಕ್ಷ್ಮಿ ಬಡಾವಣೆಯಲ್ಲಿ ಒಂದು ನಿವೇಶನವನ್ನು ಖರೀದಿಸಿ 1979ರಲ್ಲಿ ಅಲ್ಲೊಂದು ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿ ಉನ್ನತ ವ್ಯಾಸಂಗಕ್ಕಾಗಿ ಮೈಸೂರಿಗೆ ಆಗಮಿಸುವ ಕೊಡಗಿನ ಗೌಡ ವಿದ್ಯಾರ್ಥಿಗಳಿಗೆ ನೆರವಾಗಿದ್ದಾರೆ.

ವಿದ್ಯಾಸಂಘದಿಂದ ಸದಸ್ಯತ್ವ ಆಂದೋಲನ

ವಿದ್ಯಾ ಸಂಘವು ತನ್ನ ಕಾರ್ಯ ಚಟುವಟಿಕೆಗಳನ್ನು ವಿಸ್ತರಿಸುವಲ್ಲಿ ಬಂಡವಾಳದ ಕೊರತೆ ಎದುರಾಗದಂತೆ 1981ರಿಂದ ಸದಸ್ಯತ್ವ ಆಂದೋಲವನ್ನು ಕೈಗೆತ್ತಿಕೊಂಡಿತು. ಕುದುಪಜೆ ಕೃಷ್ಣಪ್ಪನವರು ಅಧ್ಯಕ್ಷರಾಗಿದ್ದ ಕಾಲಾವಧಿಯಲ್ಲಿ (1981-1994) ಹಮ್ಮಿಕೊಂಡ ಸದಸ್ಯತ್ವ ಆಂದೋಲನ ಅವರ ದಣಿವರಿಯದ ದುಡಿಮೆಯ

ಫಲವಾಗಿ ವಿದ್ಯಾಸಂಘದ ಸದಸ್ಯರ ಸಂಖ್ಯೆ ಹೆಚ್ಚಾಗ ತೊಡಗಿತು. 1981ರಲ್ಲಿ ಸದಸ್ಯರ ಸಂಖ್ಯೆ ಕೇವಲ 300 ಆಗಿದ್ದಿತು. 1985ರ ಹೊತ್ತಿಗೆ ಇದು 1500 ರಷ್ಟಾಯಿತು. ಸಂಘದ ಹಾಲಿ ಅಧ್ಯಕ್ಷರಾಗಿರುವ ಶ್ರೀ ಹೊಸೂರು ರಮೇಶ್ ಜೋಯಪ್ಪ ನವರು ಸದಸ್ಯತ್ವ ಆಂದೋಲನಕ್ಕೆ ಒತ್ತು ನೀಡಿ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿದ್ದಲ್ಲದೆ ಕೊಡಗು ಗೌಡ ವಿದ್ಯಾಸಂಘದ ಮೈಸೂರು ಶಾಖೆಯ ಸದಸ್ಯರನ್ನು ಮಡಿಕೇರಿ ಪ್ರಧಾನ ಸಂಘಕ್ಕೆ ವರ್ಗಾಯಿಸುವದರ ಮೂಲಕ ಸಂಘದ ಸದಸ್ಯರ ಸಂಖ್ಯೆಯನ್ನು ಗಣನೀಯವಾಗಿ ಹೆಚ್ಚಿಸಿರುತ್ತಾರೆ. ಪ್ರಸ್ತುತ ಈ ಸಂಖ್ಯೆ 2700ರಷ್ಟಾಗಿದೆ. ಸದಸ್ಯತ್ವ ಶುಲ್ಕದ ಮೊತ್ತ 2,70,000 ರೂಪಾಯಿಗಳಷ್ಟಾಗಿದೆ.

ಸಂಘದ ಉಪನಿಯಮಗಳ ರಚನೆ

ಬಡ್ಡನ ಮುತ್ತಣ್ಣನವರು ಅಧ್ಯಕ್ಷರಾಗಿದ್ದ ಕಾಲಾವಧಿ (1932-1933)ಯಲ್ಲಿ ಸಂಘಕ್ಕೊಂದು ಉಪನಿಯಮಗಳನ್ನು ರಚಿಸಿ ಸಂಘವನ್ನು ನೋಂದಣಿ ಮಾಡಲಾಯಿತು.

ಮಡಿಕೇರಿಯಲ್ಲಿ ಗೌಡ ಕಲ್ಯಾಣ ಮಂಟಪದ ನಿರ್ಮಾಣ

ಚೆರಿಯಮನೆ ಪೊನ್ನಪ್ಪನವರು ಅಧ್ಯಕ್ಷರಾಗಿದ್ದ ಕಾಲಾವಧಿ (1958-1961)ಯಲ್ಲಿ ಗೌಡ ವಿದ್ಯಾರ್ಥಿನಿಯರ ನಿಲಯದ ಸುತ್ತಲಿನ ಸ್ಥಳವನ್ನು ಸರಕಾರದಿಂದ ಪಡೆಯುವ ಸಲುವಾಗಿ ಪ್ರಯತ್ನಗಳು ನಡೆದು ದಂಬೆಕೋಡಿ ಚಿಣ್ಣಪ್ಪನವರು ಅಧ್ಯಕ್ಷರಾಗಿದ್ದ ಕಾಲಾವಧಿ (1961-1964) ಯಲ್ಲಿ ಸಂಘದ ಪ್ರಯತ್ನ ಕೈ ಗೂಡಿತು. ಹೀಗೆ ವಿದ್ಯಾರ್ಥಿನಿಯರ ನಿಲಯವಿದ್ದ ಸ್ಥಳವನ್ನೊಳಗೊಂಡು 1 ಏಕ್ರೆ 20ಸೆಂಟು ಜಾಗ ಸಂಘದ ವಶಕ್ಕೊಳಪಟ್ಟಿತು.

ಹಲವಾರು ವರ್ಷಗಳಿಂದ ಮಡಿಕೇರಿಯಲ್ಲಿ ಲಗ್ನ ಕಾರ್ಯಗಳಿಗಾಗಿ ಗೌಡ ಕಲ್ಯಾಣ ಮಂಟಪವನ್ನು ನಿರ್ಮಿಸಬೇಕೆಂಬ ಯೋಜನೆ ಇತ್ತಾದರೂ 1980ರವರೆಗೆ ಈ ಯೋಜನೆ ಕಾರ್ಯರೂಪಕ್ಕೆ ಬಂದಿರಲಿಲ್ಲ. ಆದ್ದರಿಂದ ಸಂಘವು ಮೇಲ್ಕಾಣಿಸಿದ 1ಎಕ್ರೆ 20ಸೆಂಟು ಜಾಗದಲ್ಲಿ 30ಸೆಂಟು ಜಾಗವನ್ನು ಈ ಉದ್ದೇಶಕ್ಕಾಗಿ ಗೌಡ ಸಮಾಜಕ್ಕೆ ಬಿಟ್ಟುಕೊಟ್ಟಿತು. 1980ರಲ್ಲಿ ಗೌಡ ಸಮಾಜದ ಮೊದಲ ಅಧ್ಯಕ್ಷರಾಗಿ ತೋಟಂಬೈಲು ಚೆಂಗಪ್ಪನವರು ಚುನಾಯಿತರಾಗುವುದರ ಮೂಲಕ ಅದು ತನ್ನ ಪ್ರತ್ಯೇಕ ಅಸ್ತಿತ್ವವನ್ನು ಗಳಿಸಿಕೊಂಡಿತು. ಗೌಡ ಕಲ್ಯಾಣ ಮಂಟಪಕ್ಕೆ ಕರ್ನಾಟಕ ರಾಜ್ಯದ ಆಗಿನ ಮುಖ್ಯಮಂತ್ರಿಗಳಾಗಿದ್ದ ಆರ್. ಗುಂಡೂರಾವ್‌ರವರು 12-10-1980ರಲ್ಲಿ ಶಂಕುಸ್ಥಾಪನೆ ನೆರವೇರಿಸಿದರು. ಇದಾಗಿ ಒಂಭತ್ತು ವರ್ಷಗಳ ನಂತರ 29-5-1989ರಲ್ಲಿ ಕಲ್ಯಾಣ ಮಂಟಪವು ಉದ್ಘಾಟನೆಗೊಂಡಿತು.

ವಿದ್ಯಾಸಂಘದ ವಶದಲ್ಲಿದ್ದ ಜಾಗವನ್ನು ಗೌಡ ಸಮಾಜಕ್ಕೆ ಹಸ್ತಾಂತರಿಸಿದ್ದಕ್ಕೆ ಪ್ರತಿಫಲವಾಗಿ ಗೌಡ ಸಮಾಜವು ನೆಲ ಬಾಡಿಗೆ ರೂಪದಲ್ಲಿ ತನ್ನ ಗಳಿಕೆಯ ಶೇಖಡಾ ಹತ್ತರಷ್ಟು ಹಣವನ್ನು ಕೊಡಗು ಗೌಡ ವಿದ್ಯಾಸಂಘಕ್ಕೆ ಸಂದಾಯ ಮಾಡುತ್ತಿದೆ. ಹೀಗೆ ಭವ್ಯವಾದ ಕಲ್ಯಾಣ ಮಂಟಪ ನಿರ್ಮಾಣವಾಗಿ ಗೌಡ ಸಮಾಜದ ಉಸ್ತುವಾರಿಯಲ್ಲಿದೆ.

ಗೌಡ ವಿದ್ಯಾಸಂಘದಿಂದ ಸಮಾರಂಭಗಳಿಗಿರುವ ಸೌಲಭ್ಯಗಳು

ಸಂಘದ ವತಿಯಿಂದ ಗೌಡರಿಗಲ್ಲದೆ ಇತರರಿಗೂ ನಿಶ್ಚಿತಾರ್ಥ, ವಿವಾಹ, ನಾಮಕರಣ, ಹುಟ್ಟುಹಬ್ಬ, ತಿಥಿ ಕರ್ಮಾಂತರ ಇತ್ಯಾದಿ ಸಮಾರಂಭಗಳನ್ನು ನಡೆಸಲು ಸಕಲ ಅನುಕೂಲತೆಗಳನ್ನು ಏರ್ಪಡಿಸಲಾಗಿದೆ.

ಇದಲ್ಲದೆ ಮಡಿಕೇರಿಯಲ್ಲಿ ಸ್ಥಾಪಿತವಾಗಿರುವ ನಮ್ಮವರ ಇತರ ಸಂಸ್ಥೆಗಳಾದ ಕೊಡಗು ಗೌಡ ಮಹಿಳಾ

ಒಕ್ಕೂಟ (ಸ್ಥಾಪನೆ 3-11-1997)ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ (ಸ್ಥಾಪನೆ 7-11-1997) ಮತ್ತು ಕೊಡಗು ಗೌಡ ನಿವೃತ್ತ ನೌಕರರ ಸಂಘ (ಸ್ಥಾಪನೆ 15-1-2002) ಗಳ ಸಭೆ ಸಮಾರಂಭಗಳಿಗೆ ವೇದಿಕೆಯಾಗಿ ಕಾರ್ಯನಿರ್ವಹಿಸುತ್ತದೆ.

ಪರಿಸಮಾಪ್ತಿ


ಕೊಡಗು ಗೌಡ ವಿದ್ಯಾ ಸಂಘ ಯಾವುದೋ ಒಂದು ಅಮೃತ ಘಳಿಗೆಯಲ್ಲಿ ಸ್ಥಾಪಿತವಾಗಿರಬೇಕು. ಯಾಕೆಂದರೆ ಅದರಿಂದ ಸ್ಫೂರ್ತಿ ಹೊಂದಿ ಕೊಡಗಿನ ವಿವಿಧೆಡೆ ಗೌಡ ಸಮಾಜಗಳು ಮತ್ತು ಕಲ್ಯಾಣ ಮಂಟಪಗಳು ಅಸ್ತಿತ್ವಕ್ಕೆ ಬಂದಿವೆ. ಇದಲ್ಲದೆ ಗ್ರಾಮಾಂತರ ಪ್ರದೇಶಗಳಲ್ಲಿ ಹಲವು ಗೌಡ ಮಹಿಳಾ ಒಕ್ಕೂಟಗಳು ಸ್ಥಾಪನೆಯಾಗಿವೆ.

ಮಡಿಕೇರಿಯ ಸುತ್ತಮುತ್ತಲ ಊರುಗಳಿಂದಲ್ಲದೆ ದೂರದ ಭಾಗಮಂಡಲ, ಚೆಟ್ಟಿಮಾನಿ, ಕೋಪಟ್ಟಿ ಇತ್ಯಾದಿ ದೂರದ ಊರುಗಳಿಂದ ಕಾಲ್ನಡಿಗೆಯಲ್ಲಿ ಮಡಿಕೇರಿಗೆ ಬಂದು ವಿದ್ಯಾಸಂಘವನ್ನು ಕಟ್ಟಿ ಬೆಳೆಸಲು ಶ್ರಮಿಸಿ ಕಣ್ಮರೆಯಾದ ನಮ್ಮ ಪ್ರಾತಃಸ್ಮರಣೀಯ ನಾಯಕರಿಗೆ ನಮ್ಮ ನಮನಗಳು ಸಲ್ಲಬೇಕು. ಇವರ ಪರಿಶ್ರಮದ ಫಲವಾಗಿ ನಮ್ಮ ಜನಾಂಗದ ಬಹಳಷ್ಟು ಜನರು ಉನ್ನತ ವ್ಯಾಸಂಗವನ್ನು ಪಡೆದು ಉನ್ನತ ಉದ್ಯೋಗಗಳಲ್ಲಿ ವಿಜೃಂಭಿಸುತ್ತಿರುವದು ಸ್ತುತ್ಯಾರ್ಹ. ಇದರಿಂದ ನಮ್ಮ ಜನಾಂಗದವರ ಮುನ್ನಡೆಗೆ ದಾರಿ ಸುಗಮವಾಗಿರುವದಲ್ಲದೆ ನಮ್ಮವರ ಆತ್ಮ ಪ್ರತ್ಯಯವನ್ನು ಹೆಚ್ಚಿಸಲು ಸಹಕಾರಿಯಾಗಿದೆ.

- ಕುಲ್ಲಚನ ಕಾರ್ಯಪ್ಪ

ಕುಂಬಳದಾಳು

ಕಿರು ಪರಿಚಯ



ಶ್ರೀಮತಿ ಕೇಕಡ ನೀಲಮ್ಮ

ವಿದ್ಯಾ ಸಂಘದ ಶತಮಾನೋತ್ಸವ ಸಮಾರಂಭದ "ಶತಮಾನದ ಕಳಸ" ಇವರು. ತಲಕಾವೇರಿಯಲ್ಲಿ ತೀರ್ಥೋದ್ಭವದ ಸಂಭ್ರಮ ಒಂದೆಡೆಯಾದರೆ ಅಚ್ಚುಪಟ್ಟೀರ ಶ್ರೀ ಸಣ್ಣಪ್ಪ ಮತ್ತು ಶ್ರೀಮತಿ ಸಣ್ಣಮ್ಮ ಆಹಾ! ದಂಪತಿಗಳ ಹೆಸರು ನೋಡಿ! ಆ ಹೆಸರಿನ ಸ್ವಾರಸ್ಯವೋ ಎನ್ನುವಂತೆ ಒಂದನೇ ಮೊಣ್ಣಂಗೇರಿಯ ಆ ಮನೆಯಲ್ಲೊಂದು ಸಂಭ್ರಮ!

17-10-1905ರ ಆ ದಿನ ಅವರ ಮನೆಯ ಸುದಿನ. ಅಂದು ಜನಿಸಿದ ಕೂಸು ನೂರು ವರ್ಷಗಳನ್ನು ನೂಕಿ ನೂರಾ ನಾಲ್ಕನೇ ವರುಷವನ್ನು ಬಾಚಿ ತಬ್ಬಿಕೊಂಡವರು. ವಾರೆವ್ಹಾ-ಬೇಷ್ ಅಮ್ಮಾ ನೀಲಮ್ಮ. ಆರು ಮಂದಿಯ ಹೆತ್ತೊಡಲು, ಹದಿನಾಲ್ಕು ಮೊಮ್ಮಕ್ಕಳನ್ನು ಎತ್ತಿ ಮುದ್ದಾಡಿದ ಸೌಭಾಗ್ಯೆ. ಅಷ್ಟೇ ಅಲ್ಲ, ಹನ್ನೊಂದು ಮರಿ ಮಕ್ಕಳನ್ನು ಲಲ್ಲೆಗರೆದ ಅಜ್ಜಿ, ಮುತ್ತಜ್ಜಿ- ನಮ್ಮೆಲ್ಲರ ಮಹಾತಾಯಿ. ನಿಮಗಿದೋ ಸಾಷ್ಟಾಂಗ ಪ್ರಣಾಮಗಳ

ಭಾಗಮಂಡಲದ ಕೊಟ್ಟೂರಿನ ಕೇಕಡ ಶ್ರೀ ಕುಟ್ಟಪ್ಪನವರೊಡನೆ ವಿವಾಹವಾಗಿ ತುಂಬು ಸಂಸಾರ ಜೀವ.. ನಡೆಸಿದ ಇವರು ಆದರ್ಶ ಸಮಾಜ ಸೇವಕಿ. ಹಸಿದು ಬಂದವರಿಗೆ ತುತ್ತು ಕೊಟ್ಟವರು. ಅಕ್ಕಿ, ಭತ್ತ, ಹಣ ಕೊಟ್ಟು ಬಡವರ ಕಣ್ಣೀರು ಒರೆಸಿದವರು.

ಮಡಿಕೇರಿ ತಾಲೂಕು ಪಂಚಾಯಿತಿ ವತಿಯಿಂದ ಕುಡಿವ ನೀರಿಗಾಗಿ ರಸ್ತೆ ಬದಿ ಬೋರ್‌ವೆಲ್ ತೆಗೆಸಿದವರು. ಕಡಗದಾಳು ಗ್ರಾಮದಿಂದ ಕಗ್ಗೋಡ್ಲು ಗ್ರಾಮದ ಮೂಲಕ ಮೂರ್ನಾಡಿನ ದಾರಿಗೆ ಸಂಪರ್ಕ ದಾರಿ ಕಲ್ಪಿಸಲು ಹೋರಾಟ ಮಾಡಿದವರು. ಅಮಾಯಕರಿಗೆ ಶಿಕ್ಷೆ ತಪ್ಪಿಸಲು ಹೋರಾಡಿದ ಧೀರೆ.


ಈ ಇಳಿ ವಯಸ್ಸಿನಲ್ಲಿ ತನಗೆ ಬೇಕಾದ ಆಹಾರವನ್ನು ತಾವೇ ತಯಾರಿಸಿಕೊಂಡು ನಮ್ಮಂಥವರಿಗೆ ಮಾದರಿಯಾದವರು. ನಿತ್ಯದ ಕೆಲಸ ಮುಗಿಸಿ ಅಷ್ಟು ದೂರ ನಡೆದು ಕಾಣಲು ಸಿಕ್ಕಿದವರೊಡನೆ ಮಾತನಾಡಿ ಕಷ್ಟ-ಸುಖ ವಿಚಾರಿಸಿ ಬೀಳ್ಕೊಳ್ಳುವರು.

ಕಣ್ಣಿನ ಕಾಂತಿಗಾಗಲಿ, ಕಿವಿಯ ಸೂಕ್ಷ್ಮತೆಗಾಗಲಿ, ನೂರು ವರುಷದ ಹಿಂದಿನ ನೆನಪಿಗಾಗಲಿ ವಯಸ್ಸಿನ ಹಂಗಿಲ್ಲ, ಮುಪ್ಪಿನ ಅರಿವಿಲ್ಲ.

ಇವರ ಒಳ್ಳೆತನವೇ ಇವರ ದೀರ್ಘಾಯುಷ್ಯದ ಗುಟ್ಟು ಎಂದು ಭಾವಿಸೋಣವೇ? ಅಮ್ಮಾ ನೀಲಮ್ಮ ನಿಮಗೆ ಶುಭವಾಗಲಿ. ಒಪ್ಪಿ ನಮ್ಮಲ್ಲಿಗೆ ಬಂದು ಸನ್ಮಾನ ಸ್ವೀಕರಿಸಿ, ನಮ್ಮ ಕಣ್ಮನ ತಣಿಸಿದ ನಿಮಗೆ ಕೃತಜ್ಞತೆಗಳು.

- ಪ್ರ. ಸಂ.

ಕಿರು ಪರಿಚಯ



ಪ್ರೊ. ಪೂಜಾರಿ ಮೊಣ್ಣಪ್ಪ, *ಎಂ.ಎ., D.P.M.RE, B.Ed., B.L.,*


ಪ್ರೊ. ಪೂಜಾರಿ ಮೊಣ್ಣಪ್ಪನವರು, ಬಿಳಿಗೇರಿ ಗ್ರಾಮದಲ್ಲಿ 09-01-1930ರಂದು ಪೂಜಾರಿ ಅಚ್ಚಯ್ಯ ಮತ್ತು ಮುದ್ದವ್ವ ದಂಪತಿಗಳ ಮಗನಾಗಿ ಜನಿಸಿದರು. ರಾಷ್ಟ್ರೀಯ ವಿದ್ಯಾಶಾಲೆ, ಬಿಳಿಗೇರಿ ಲೋಕಲ್ ಫೌಂಡ್ ಶಾಲೆ, ಬೆಟ್ಟಗೇರಿ, ಮೂರ್ನಾಡು ಮತ್ತು ಸಂತ ಮೈಕಲರ ಶಾಲೆ, ಮಡಿಕೇರಿ. ಇಲ್ಲಿ ಪ್ರಾಥಮಿಕ ಶಿಕ್ಷಣ ಪಡೆದ ಶ್ರೀಯುತರು, ಮಡಿಕೇರಿಯ ಸೆಂಟ್ರಲ್ ಸ್ಕೂಲ್ ಮತ್ತು ಅಜ್ಮೀರ್‌ನ ಇಂಟರ್ ಮೀಡಿಯೆಟ್ ಸಂಸ್ಥೆಯಲ್ಲಿ ಪ್ರೌಢ ಶಿಕ್ಷಣವನ್ನು ಪಡೆದಿದ್ದಾರೆ. ಮದ್ರಾಸ್ ವಿಶ್ವ ವಿದ್ಯಾಲಯದಿಂದ ಬಿ.ಎ., ಪದವಿ ಮುಗಿಸಿದ ಶ್ರೀಯುತರು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ.ಎ., ಪದವಿ ಪಡೆದರು. ಬೆಂಗಳೂರಿನಲ್ಲಿ D.P.M.R. ಪದವಿ ಪಡೆದು, ನಂತರ ಬಿ.ಎಡ್., ಪದವಿಯನ್ನು ಪಡೆದರು. ನಂತರ ಕಾನೂನು ಪದವಿಯನ್ನು ಗಳಿಸಿದರು.

ಹಾಕತ್ತೂರಿನಲ್ಲಿ ಅಧ್ಯಾಪಕರಾಗಿ ಸೇವಾ ಜೀವನಕ್ಕೆ ಕಾಲಿಟ್ಟ ಇವರು, ಪಶು ಸಂಗೋಪನಾ ಇಲಾಖೆ, ಕಂದಾಯ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ, ಸೋಮವಾರಪೇಟೆಯಲ್ಲಿ ವಿಸ್ತರಣಾಧಿಕಾರಿಯಾಗಿ ಸೇವೆ ಸಲ್ಲಿಸಿದರು. ನಂತರ ಬೆಂಗಳೂರಿನಲ್ಲಿ ನೆಲೆ ನಿಂತ ಇವರು, ಕಾಲೇಜು ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ ಬಳಿಕ, ಹೈಕೋರ್ಟ್‌ನಲ್ಲಿ ವಕೀಲ ವೃತ್ತಿ ಆರಂಭಿಸಿ, ತದನಂತರ ವಿವೇಕಾನಂದ ಕಾನೂನು ಕಾಲೇಜಿನ ಪ್ರಾಧ್ಯಾಪಕರಾದರು. ನಂತರ ಬೆಂಗಳೂರಿನಲ್ಲಿ ಪಬ್ಲಿಕ್ ನೋಟರಿ ಆಗಿ ಕಾರ್ಯನಿರ್ವಹಿಸಿದರು.

ಸಮಾಜ ಸೇವೆಯಲ್ಲಿ ಇವರದು ಸದಾ ಎತ್ತಿದ ಕೈ. 1967-68ರಲ್ಲಿ ಕೊಡಗು ಗೌಡ ಸಮಾಜದ ಅಧ್ಯಕ್ಷರಾಗಿ, ಗೌಡ ಸಂಸ್ಕೃತಿ ಪುಸ್ತಕ ಬಿಡುಗಡೆ ಮಾಡಿದರು. ಗೌಡ ಸಮಾಜದ ಬೈಲಾ ರಚಿಸಿದರು. 1970ರಿಂದ 1975ರವರೆಗೆ ಕೊಡಗು ಗೌಡ ವಿದ್ಯಾ ಸಂಘದ ಗೌರವ ಕಾರ್ಯದರ್ಶಿಯಾಗಿದ್ದುಕೊಂಡು, ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ವ್ಯವಸ್ಥೆ ಕಲ್ಪಿಸಿದರು. 1980ರಲ್ಲಿ ಬೆಂಗಳೂರಿನಲ್ಲಿ ಕೆಂಪೇಗೌಡ ಗ್ರಾಮೀಣ ಗೃಹ ನಿರ್ಮಾಣ ಸಂಘದ ಸ್ಥಾಪಕಾಧ್ಯಕ್ಷರಾಗಿ ಸೇವೆ ಸಲ್ಲಿಸಿ ಸುಮಾರು 264 ನಿವೇಶನಗಳನ್ನು ಕೊಡಲು ವ್ಯವಸ್ಥೆ ಮಾಡಿದರು. 1994-95ರಲ್ಲಿ ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದ ಉಪಾಧ್ಯಕ್ಷರಾಗಿ ನಂತರ ಅಧ್ಯಕ್ಷರಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ಗೌಡ ಸಂಸ್ಕೃತಿ ಕೈಪಿಡಿಯನ್ನು ಹೊರ ತಂದಿದ್ದಾರೆ. ಮಹಿಳಾ ಘಟಕವನ್ನೂ ಸ್ಥಾಪಿಸಿದರು.

1997ರಲ್ಲಿ 'ಗೌಡ ಕೇಸರಿ' ನಿಡ್ಯಮಲೆ ಮುದ್ದಪ್ಪನವರ ಶತಮಾನೋತ್ಸವವನ್ನು ಆಚರಿಸಿ ಅವರ ಬಗ್ಗೆ ಕಿರು ಹೊತ್ತಿಗೆಯನ್ನು ಪ್ರಕಟಿಸಲಾಯಿತು. 1837ರ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಸ್ವಾತಂತ್ರ್ಯ ಸಂಗ್ರಾಮ ಕುರಿತು ಕಿರುಹೊತ್ತಿಗೆಯನ್ನು 1984ರಲ್ಲಿ ಪ್ರಕಟಿಸಿದರು. "ಹಾಲು ಒಕ್ಕಲು ಮಕ್ಕಳು ಯಾನೆ ಗೌಡರ ಚರಿತ್ರೆ ಮತ್ತು ಸಂಸ್ಕೃತಿ" ಎಂಬ ಲೇಖನವನ್ನು ಇವರು ಬರೆದಿದ್ದು, ಬೆಂಗಳೂರು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜದವರು ಅದನ್ನು ಮುದ್ರಿಸಿ ಇಷ್ಟರಲ್ಲೇ ಬಿಡುಗಡೆ ಮಾಡಲಿದ್ದಾರೆ.

ಕಿರು ಪರಿಚಯ



ಶ್ರೀ ದಂಬೆಕೋಡಿ ಮಾದಪ್ಪ

ದಂಬೆಕೋಡಿ ಮಾದಪ್ಪ ಕೊಡಗು ಕಂಡ ಜನಪ್ರಿಯ ಮುತ್ಸದ್ದಿಗಳಲ್ಲೊಬ್ಬರು. ತನ್ನ ವಿಶಿಷ್ಟ ವ್ಯಕ್ತಿತ್ವ ಮತ್ತು ಸಂಘಟನಾ ಚಾತುರ್ಯದಿಂದ ಕೊಡಗಿನ ಮನೆಮಾತಾದ ಇವರು ಸಮಾಜದ ಪ್ರತಿಷ್ಠಿತರಾದ ದಂಬೆಕೋಡಿ ಸುಬ್ರಾಯ-ರಾಮಕ್ಕ ದಂಪತಿಗಳ ಪುತ್ರ.

ತುಂಬು ಕುಟುಂಬದ 12 ಮಂದಿ ಮಕ್ಕಳಲ್ಲಿ ಮಾದಪ್ಪ 5ನೇಯವರು. 1943 ಮೇ 22 ರಂದು ಜನನ. ಪ್ರಾಥಮಿಕ ಶಿಕ್ಷಣವನ್ನು ತವರೂರು ಚೆಟ್ಟಳ್ಳಿಯಲ್ಲಿ ಪಡೆದ ಶ್ರೀಯುತರು, ಪ್ರೌಢ ಶಿಕ್ಷಣವನ್ನು ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಪೂರೈಸಿದರು. ಹಾಸನದ ಮಲ್ನಾಡ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಪಡೆದ ಇವರು, ತದನಂತರ ವೃತ್ತಿ ಜೀವನಕ್ಕೆ ಕಾಲಿಟ್ಟಿದ್ದು ಭಾರತದ ನೆರೆ ರಾಷ್ಟ್ರ ಭೂತಾನ್‌ನಲ್ಲಿ. ಅರಸೊತ್ತಿಗೆಯ ಭೂತಾನ್ ಆಡಳಿತದಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಆಗಿ ಅಮೂಲ್ಯ ಅನುಭವ.

1980ರ ದಶಕದಲ್ಲಿ ಸಮಾಜ ಸೇವೆಗೆ ಪದಾರ್ಪಣೆ. ಪ್ರಾರಂಭಿಕ ಹಂತದಲ್ಲೇ ಅಸಾಮಾನ್ಯ ಸಂಘಟನಾ ಶಕ್ತಿಯ ಪ್ರದರ್ಶನ ಮತ್ತು ಅಗಾಧ ಜನ ಬೆಂಬಲ. ಪಕ್ಷೇತರನಾಗಿ ಸ್ಪರ್ಧಿಸಿ ಅಂದಿನ ಘಟಾನುಘಟಿ ರಾಜಕೀಯ ನಾಯಕರಿಗೆ ತಲ್ಲಣ ಉಂಟು ಮಾಡಿದವರು. ಹಲವು ರಾಜಕೀಯ ಸಂಘಟನೆಗಳಿಂದ ಆಹ್ವಾನ ಪಡೆವ ಮಟ್ಟಕ್ಕೆ ಬೆಳೆದ ಇವರು, ನೆಲೆ ಕಂಡುಕೊಂಡಿದ್ದು, ಅಂದು ಬಹುತೇಕ ಅಪರಿಚಿತವೇ ಆಗಿದ್ದ ಭಾರತೀಯ ಜನತಾ ಪಾರ್ಟಿಯಲ್ಲಿ. ಕೊಡಗಿನ ನೆಲದಲ್ಲಿ ಬಿಜೆಪಿಗೊಂದು ಭದ್ರ ಬೇರುಮಟ್ಟದ ಬೆಂಬಲ ಒದಗಿಸಿದ್ದು, ಮಾದಪ್ಪರವರ ಸಾಮರ್ಥ್ಯಕ್ಕೆ ಸಾಕ್ಷಿ.

ಮುಂದೆ 1994ರಲ್ಲಿ ಕೊಡಗಿನಿಂದ ಮೊಟ್ಟಮೊದಲ ಭಾರತೀಯ ಜನತಾ ಪಕ್ಷದ ಶಾಸಕರಾಗಿ ಮಡಿಕೇರಿಯಿಂದ ಆಯ್ಕೆ. ಪ್ರತಿಪಕ್ಷದ ಸದಸ್ಯರಾಗಿ ಗಮನ ಸೆಳೆಯುವ ನಾಯಕತ್ವ. ಮುಂದೆ ಪಲ್ಲಟಗೊಂಡ ರಾಜಕೀಯ ಬೆಳವಣಿಗೆಗಳ ಪರಿಸ್ಥಿತಿಯಲ್ಲಿ ಮತ್ತೆ ಪಕ್ಷೇತರರಾಗಿ ಸ್ಪರ್ಧೆ. ಮುಂದಿನ ಎರಡೂ ಬಾರಿಯ ಚುನಾವಣೆಗಳಲ್ಲಿ ಅತ್ಯಲ್ಪ ಅಂತರದಲ್ಲಿ ತನ್ನ ಸ್ವಂತ ಸಾಮರ್ಥ್ಯದಿಂದ ದ್ವಿತೀಯ ಸ್ಥಾನ ಪಡೆದವರು ಮಾದಪ್ಪ. ಕೊಡಗಿನ ನೆಲದಲ್ಲಿ ಶ್ರೀ ಮಾದಪ್ಪ ಅವರಿಗೆ ಇರುವ ಜನ ಬೆಂಬಲ ಮತ್ತೋರ್ವ ವ್ಯಕ್ತಿಗೆ ಇರಲು ಸಾಧ್ಯವಿಲ್ಲವೇನೋ ಎಂಬ ಮಾತಿನಲ್ಲಿ ಖಂಡಿತಾ ಅತಿಶಯೋಕ್ತಿಯಿಲ್ಲ. 66ರ ಹರೆಯದಲ್ಲಿರುವ ಶ್ರೀಯುತರಲ್ಲಿ ಇಂದಿಗೂ 26 ರ ಅತ್ಯುತ್ಸಾಹ. ಕಾಲ್ನಡಿಗೆಯಲ್ಲಿ ಹೊರಟರೆ ಅವರ ಜೊತೆ ಅಪಾರ ಅಭಿಮಾನಿ ಯುವಕರ ಕೂಟವೇ ಇರುತ್ತದೆ. ಮಾದಪ್ಪನವರ ಧರ್ಮಪತ್ನಿ ಶ್ರೀಮತಿ ಮೀನಾ,ಈಗ ದಿವಂಗತರು. ಓರ್ವ ಪುತ್ರ ಹಾಗೂ ಓರ್ವ ಪುತ್ರಿ ಮಾದಪ್ಪನವರ ಕುಟುಂಬ.

ಜನಾನುರಾಗಿ ದಂಬೆಕೋಡಿ ಮಾದಪ್ಪನವರಿಗೆ ಕೊಡಗು ಗೌಡ ವಿದ್ಯಾ ಸಂಘ ಶುಭ ಹಾರೈಸುತ್ತದೆ.

ಕಿರು ಪರಿಚಯ



ಶ್ರೀ ಕೋಳಿಬೈಲು ಬೆಳ್ಳಿಯಪ್ಪ

1966ರಿಂದ 2001ರವರೆಗೆ ಸರಕಾರದ ವಿವಿಧ ಇಲಾಖೆಗಳಲ್ಲಿ ಅವಿರತವಾಗಿ ದುಡಿದು ಇಂದು ಆಧ್ಯಾತ್ಮಿಕ ಜೀವನ ನಡೆಸುತ್ತಿರುವ ಶ್ರೀ ಬೆಳ್ಳಿಯಪ್ಪನವರು ಶ್ರೀ ಅಚ್ಚಯ್ಯ ಮತ್ತು ನೀಲಮ್ಮ ದಂಪತಿಗಳ ಪುತ್ರರು.

1986ರಲ್ಲಿ ಐ.ಎ.ಎಸ್. ಗೆ ಬಡ್ತಿ ಪಡೆದ ಶ್ರೀಯುತರು ಭಾಗಮಂಡಲದ ತಾವೂರು ಗ್ರಾಮದವರು.

1941ರ ನವೆಂಬರ್ ಎಂಟರಂದು ಜನಿಸಿದ ಶ್ರೀ ಬೆಳ್ಳಿಯಪ್ಪನವರು ಭಾಗಮಂಡಲ, ನಾಪೋಕ್ಲು, ಮಡಿಕೇರಿ ಇಲ್ಲೆಲ್ಲಾ ವಿದ್ಯಾಭ್ಯಾಸ ಪಡೆದವರು.

1956ರಲ್ಲಿ ಹೈಯರ್ ಎಲಿಮೆಂಟರಿ ಪರೀಕ್ಷೆಯಲ್ಲಿ ಚಿನ್ನದ ಪದಕ ಪಡೆದ ಪ್ರತಿಭಾವಂತರಿವರು.

ಬೆಂಗಳೂರಿನ ಯೂನಿವರ್ಸಿಟಿ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿ ಬಿ.ಇ. ವ್ಯಾಸಂಗ ಮಾಡಿದ ಇವರು ವಿದ್ಯುತ್ ವಿಭಾಗದಲ್ಲಿ ವಿಶ್ವವಿದ್ಯಾಲಯಕ್ಕೆ ಪ್ರಥಮರಾದವರು.

ಜೋಗದ ಎಲೆಕ್ಟ್ರಿಸಿಟಿ ಬೋರ್ಡಿನಲ್ಲಿ 1966ರಲ್ಲಿ ಉದ್ಯೋಗಕ್ಕೆ ಸೇರಿದರು. ಇವರು ಹಂತಹಂತವಾಗಿ ಮೇಲೇರುತ್ತಾ 1978ರಲ್ಲಿ ಜಂಟಿ ನಿರ್ದೇಶಕರಾಗಿ ಪದೋನ್ನತಿ ಪಡೆದರು.

ಶಿವಮೊಗ್ಗ, ದ. ಕನ್ನಡ, ಬೆಂಗಳೂರು, ಕೋಲಾರ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸಿದ ಶ್ರೀಯುತರು 1989-90ರ ಅವಧಿಯಲ್ಲಿ ಹಾಸನದಲ್ಲಿ ಜಿಲ್ಲಾಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದಾರೆ. 1991-92ರಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರದಲ್ಲಿದ್ದರು.

1992-93ರಲ್ಲಿ ಕರ್ನಾಟಕ ಸಿಲ್ಕ್ ಬೋರ್ಡಿನಲ್ಲಿ ಜನರಲ್ ಮ್ಯಾನೇಜರ್ ಆಗಿ, 1993-96ರಲ್ಲಿ ಕರ್ನಾಟಕ ಸೋಪ್ಸ್ ಮತ್ತು ಡಿಟರ್ಜೆಂಟ್ ಕಾರ್ಖಾನೆಯಲ್ಲಿ ಸಿ.ಎಂ.ಡಿ ಆಗಿ, ಕರ್ನಾಟಕ ಹಣಕಾಸು ಸಂಸ್ಥೆಯಲ್ಲಿ ಎಂ.ಡಿ. ಆಗಿ, ಕರ್ನಾಟಕ ವಿಧಾನ ಸೌಧದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿ ಸೆಕ್ರೆಟರಿ -2 ಆಗಿ ಸೇವೆ ಸಲ್ಲಿಸಿದ್ದಾರೆ.

ಹೀಗೆ ಕೊಡಗಿನ ಕಣ್ಮಣಿ ಶ್ರೀ ಬೆಳ್ಳಿಯಪ್ಪನವರು ವಿವಿಧ ಇಲಾಖೆಗಳಲ್ಲಿ ಬೆಳ್ಳಿಯಂತೆ ಬೆಳಗಿ ಕೊಲಿಜಿಯೇಟ್ ಎಜುಕೇಷನ್ ಇಲಾಖೆಯಲ್ಲಿ ಕಮೀಷನರ್ ಆಗಿ 2001ರ ನವೆಂಬರ್‌ನಲ್ಲಿ ನಿವೃತ್ತರಾದರು.

ಇವರ ನಿವೃತ್ತ ಜೀವನ ಸುಖಮಯವಾಗಿರಲೆಂದು ನಾವು ಹಾರೈಸುತ್ತೇವೆ.

- ಪ್ರ. ಸಂ.

ಕಿರು ಪರಿಚಯ



ಶ್ರೀ ಎನ್.ಎಸ್. ದೇವಿಪ್ರಸಾದ್

ಮಡಿಕೇರಿ ತಾಲೂಕು ಸಂಪಾಜೆ ಗ್ರಾಮದ ಶ್ರೀ ಎನ್.ಎಸ್.ದೇವಿಪ್ರಸಾದ್ ಬಹುಮುಖ ಪ್ರತಿಭೆಯ ವ್ಯಕ್ತಿತ್ವದವರು. ಪ್ರತಿಷ್ಠಿತ ನಂಜಯ್ಯನ ಮನೆಯ ಸಣ್ಣಯ್ಯ ಪಟೇಲ್ ಮತ್ತು ಮೂವಮ್ಮನವರ ಮಗನಾಗಿ 27.4.1942ರಲ್ಲಿ ಜನನ.


1990ರ ದಶಕದಲ್ಲಿ ಕೊಡಗಿನಲ್ಲಿ ಪ್ರತ್ಯೇಕತಾವಾದ ಭುಗಿಲೆದ್ದಾಗ ಅದರ ವಿರುದ್ಧ ಜನಸಂಘಟನೆ ಮಾಡಿ ಶಾಂತಿ ನೆಲೆ ನಿಲ್ಲುವಂತೆ ಮಾಡಿರುವುದು ಶ್ರೀ ಎನ್.ಎಸ್.ದೇವಿಪ್ರಸಾದ್ ಕೊಡಗಿನ ಮಣ್ಣಿಗೆ, ಇಲ್ಲಿನ ಬಹು ಸಂಸ್ಕೃತಿಯ ವಾಸ್ತವತೆಗೆ ನೀಡಿರುವ ಚಿರಕಾಲ ನೆನಪಲ್ಲಿ ಉಳಿಯುವ ಕೊಡುಗೆ. ಆ ಸಂದರ್ಭ ಕೊಡಗಿನಲ್ಲಿ ಪ್ರತ್ಯೇಕತೆಯ ಹೋರಾಟವನ್ನು ವಿರೋಧಿಸುವ ಛಾತಿಯನ್ನು ತೋರಿದವರು ಬಹಳ ವಿರಳ. ಸಾಮಾನ್ಯ ಜನ ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿಯನ್ನು ಕಳೆದುಕೊಂಡಿದ್ದಂಥ ಸಮಯವದು. ಅಂತಹ ಸಂಕಷ್ಟದ, ಅಸಹನೀಯ ದಿನಗಳಲ್ಲಿ ಶ್ರೀ ಎನ್.ಎಸ್.ದೇವಿಪ್ರಸಾದ್ ನೀಡಿದ ನಾಯಕತ್ವ ಅದ್ಭುತವಾದುದು, ಅಸದೃಶವಾದುದು. ಮೊದಲು 'ಕೊಡಗು ಕನ್ನಡಿಗರು' ಎಂಬ ಸಂಘಟನೆಯನ್ನು ಸ್ಥಾಪಿಸಿ ಅನ್ಯಾಯದ ಹೋರಾಟದ ವಿರುದ್ಧ ಜನರನ್ನು ಎಚ್ಚರಿಸಲು ಆರಂಭಿಸಿದ ಶ್ರೀ ಎನ್.ಎಸ್.ದೇವಿಪ್ರಸಾದ್ ನಂತರ 'ಕೊಡಗು ಪ್ರಜಾವೇದಿಕೆ' ಸ್ಥಾಪನೆಗೊಂಡಾಗ ಅತ್ಯಂತ ಅರ್ಹವಾಗಿ ಅದರ ಪ್ರಧಾನ ಸಂಚಾಲಕರಾದರು. ಕೊಡಗಿನ ಸಮಸ್ಯೆಯನ್ನು ರಾಜ್ಯಮಟ್ಟದಲ್ಲಿ ಮತ್ತು ಸರಕಾರದ ಮಟ್ಟದಲ್ಲಿ ಅವರು ಪ್ರತಿನಿಧಿಸಿದ ರೀತಿ ಅಪ್ರತಿಮವಾದುದು. ಶ್ರೀ ಎನ್.ಎಸ್.ದೇವಿಪ್ರಸಾದ್ ನಾಯಕತ್ವದ ಅವಧಿಯಲ್ಲಿ 1998ನೇ ವರ್ಷ ಸೋಮವಾರಪೇಟೆಯಲ್ಲಿ ಒಂದು ಅಭೂತಪೂರ್ವ ಸಮಾವೇಶವನ್ನು ಆಯೋಜಿಸಲಾಯಿತು. ಅಲ್ಲಿಗೆ ಪ್ರತ್ಯೇಕತಾವಾದಿಗಳ ಜಂಘಾಬಲವೇ ಉಡುಗಿತು. ತದನಂತರ ಶ್ರೀ ಎನ್.ಎಸ್.ದೇವಿಪ್ರಸಾದ್ ಕೊಡಗು ಪ್ರಜಾವೇದಿಕೆಯ ಗೌರವಾಧ್ಯಕ್ಷರಾಗಿ ನಿಯುಕ್ತಿಗೊಂಡರು. ಆಗ ಮಡಿಕೇರಿಯಲ್ಲಿ ಇನ್ನೊಂದು ಅದ್ದೂರಿಯ ಸಮಾವೇಶವನ್ನು ನಡೆಸಲಾಯಿತು.

ಶ್ರೀ ಎನ್.ಎಸ್.ದೇವಿಪ್ರಸಾದ್‌ರವರ ಆಸಕ್ತಿಯ ಕ್ಷೇತ್ರಗಳು ಹಲವು. ನಾಟಕ ರಚನೆ ಮತ್ತು ರಂಗಪ್ರಯೋಗ, ಜಾನಪದ ಕ್ಷೇತ್ರಕಾರ್ಯ, ಚಲನಚಿತ್ರ ನಿರ್ಮಾಣ, ಕಥಾಲೇಖನ, ಚರಿತ್ರೆ ಸಂಶೋಧನೆ, ವಿದ್ಯಾಕ್ಷೇತ್ರ ಹೀಗೆ ವಿಭಿನ್ನ ಬಗೆಯ ವಲಯಗಳಲ್ಲಿ ಕ್ರಿಯಾಶೀಲತೆಯಿಂದ ತೊಡಗಿಕೊಳ್ಳುವ ಅವರು ಪ್ರತಿಯೊಂದು ಕ್ಷೇತ್ರಗಳಲ್ಲೂ ಹೊಸತನದ, ವಿಶಿಷ್ಟತೆಯ ಅನ್ವೇಷಣೆಯ ಗುಣವುಳ್ಳವರು.

ಚಲನಚಿತ್ರ ನಿರ್ಮಾಪಕರಾಗಿ ಒಂದು ರಾಷ್ಟ್ರ ಪ್ರಶಸ್ತಿ, ಐದು ರಾಜ್ಯ ಪ್ರಶಸ್ತಿಗಳನ್ನು ಗಳಿಸಿರುವ ಶ್ರೀ ಎನ್.ಎಸ್.ದೇವಿಪ್ರಸಾದ್ 'ಅಮರ ಸುಳ್ಯದ ಸ್ವಾತಂತ್ರ್ಯ ಸಮರ' ಮತ್ತು 'ಕೊಡಗಿನಲ್ಲಿ ಜಾತೀಯತೆ' ಎಂಬ ಕೃತಿಗಳನ್ನು ರಚಿಸಿದ್ದಾರೆ. ಅಲ್ಲದೆ 'ಶಿರಾಡಿ ಭೂತ' ಎಂಬ ನಾಟಕವನ್ನು ಬರೆದು ರಂಗದ ಮೇಲೆ ಯಶಸ್ವಿಯಾಗಿ ಪ್ರದರ್ಶಿಸಿದ್ದಾರೆ. ಇವರ ಸಂಪಾದಿತ ಗ್ರಂಥಗಳು ನವನೀತ, ಉದ್ಘಾಟನೆ ಮತ್ತು ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ.

ಶ್ರೀ ಎನ್.ಎಸ್.ದೇವಿಪ್ರಸಾದ್ 2004ರಲ್ಲಿ ನಡೆದ ಸುಳ್ಯ ತಾಲೂಕು 11ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದರು. ರಂಗಭೂಮಿಗೆ ಸಲ್ಲಿಸಿದ ಗಣನೀಯ ಸೇವೆಗಾಗಿ 2007ರಲ್ಲಿ ಸುವರ್ಣ ಕರ್ನಾಟಕ ಗೌರವ ಪ್ರಶಸ್ತಿ ಇವರಿಗೆ ಸಂದಿದೆ.

ಕಿರು ಪರಿಚಯ



ಶ್ರೀ ಕುಯ್ಯಮುಡಿ ಕೆ. ಪೂರ್ಣಯ್ಯ

ಕೊಡಗು ಗೌಡ ಜನಾಂಗದಲ್ಲಿ ಕುಯ್ಯಮುಡಿ ಕೆ. ಪೂರ್ಣಯ್ಯನವರ ಹೆಸರು ಚಿರಪರಿಚಿತ. ಕುಯ್ಯಮುಡಿ ಕಾಳಪ್ಪ ಮತ್ತು ಅಮ್ಮಯ್ಯ ದಂಪತಿಗಳ ಮಗನಾಗಿರುವ ಇವರು, ಮಡಿಕೇರಿ ಸರ್ಕಾರಿ ಕಾಲೇಜಿನಲ್ಲಿ ಬಿ.ಎಸ್.ಸಿ., ಪದವಿ ಮುಗಿಸಿದ ಇವರು, ಐ.ಟಿ.ಐಯ ಕೋರ್ಸನ್ನು ಮುಗಿಸಿ, ಐ.ಟಿ.ಐ. ಇನ್‌ಸ್ಪಕ್ಟರ್ ಆಗಿ ಸೇವೆ ಸಲ್ಲಿಸಿದ್ದಾರೆ. 1969-70ರಲ್ಲಿ ಯುವ ಕಾಂಗ್ರೆಸ್‌ಗೆ ಸೇರ್ಪಡೆಗೊಂಡ ಇವರು ಕಾಂಗ್ರೆಸ್ ಪಕ್ಷದಲ್ಲಿ ಸುದೀರ್ಘ ಸೇವೆ ಸಲ್ಲಿಸಿ, ಪಕ್ಷದ ವಿವಿಧ ಪದಾಧಿಕಾರಿ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ಸರ್ಕಾರದ ಯೋಜನೆಯಾದ 20ಅಂಶ ಕಾರ್ಯಕಾರಿ ಸಮಿತಿ ಸದಸ್ಯರಾಗಿ, ಕೊಡಗು ಜಿಲ್ಲಾ ಆಸ್ಪತ್ರೆಯ ಸಂದರ್ಶಕ ಮಂಡಳಿ ಸದಸ್ಯರಾಗಿ, ಅರಣ್ಯ ಇಲಾಖೆ ಮರ ಮೌಲ್ಯ ಮಾಪನ ಸಮಿತಿ ಸದಸ್ಯರಾಗಿ ಹಾಗೂ ಲ್ಯಾಂಡ್ ಟ್ರಿಬ್ಯುನಲ್ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. 1983 ರಿಂದ 1988ರ ವರೆಗೆ ಮಡಿಕೇರಿ ಪುರಸಭೆಯ ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷರಾಗಿ 1995ರಿಂದ2000ದವರೆಗೆ ಕಾರ್ಯನಿರ್ವಹಿಸಿದ್ದಾರೆ. ಮಡಿಕೇರಿ ಲಯನ್ಸ್ ಕ್ಲಬ್ ಸದಸ್ಯರಾಗಿ ಮಕ್ಕಳ ಕಲ್ಯಾಣ ಕೇಂದ್ರದ ಖಜಾಂಚಿಯಾಗಿ, ಸದ್ಭಕ್ತ ಮಂಡಳಿಯ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿ, ಮಡಿಕೇರಿ ಟೌನ್ ಬ್ಯಾಂಕ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಾಲಿ ಗೌರಿಶಂಕರ ದೇವಾಲಯದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಇವರಿಗೆ ದೇವರು ಇನ್ನಷ್ಟು ಆಯುರಾರೋಗ್ಯ ನೀಡಲೆಂದು ನಾವು ಆಶಿಸುತ್ತೇವೆ.

ಕಿರು ಪರಿಚಯ



ಶ್ರೀ ಮಂದ್ರೀರ ಡಿ. ನಾಣಯ್ಯ

1945, ಮಾ. 23ರಂದು ಜನಿಸಿದ ಶ್ರೀ ನಾಣಯ್ಯನವರು ಕಗ್ಗೋಡ್ಲು ಗ್ರಾಮದ ಶ್ರೀ ಟಿ. ದೇವಯ್ಯ ಮತ್ತು ಶ್ರೀಮತಿ ಕಾವೇರಮ್ಮನವರ ಸುಪುತ್ರರು. ಹಾಕತ್ತೂರು ಮತ್ತು ಮಡಿಕೇರಿಯ ಹಿರಿಯ ಪ್ರೌಢ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದವರು. ಎಸ್.ಎಸ್.ಎಲ್.ಸಿ. ವರೆಗಿನ ವಿದ್ಯಾಭ್ಯಾಸಕ್ಕೆ ತನ್ನ ಓದನ್ನು ನಿಲ್ಲಿಸಿ ವ್ಯವಸಾಯದತ್ತ ಆಕರ್ಷಿತರಾದವರು.

ಇವರು ಮುಖ್ಯವಾಗಿ ಭತ್ತ, ಕಾಫಿ, ಏಲಕ್ಕಿ, ಕರಿಮೆಣಸು, ಅಡಿಕೆ, ತೆಂಗು, ಕಿತ್ತಾಳೆ, ಶುಂಠಿ, ಆಂಥೋರಿಯಂ, ಮೀನುಗಾರಿಕೆ, ಪಶುಸಂಗೋಪನೆ, ಜೇನುಸಾಕಾಣಿಕೆ, ಕೋಳಿ ಹಾಗೂ ಬಾತುಕೋಳಿ ಸಾಕಣೆ ಹೀಗೆ ಸಾಕಷ್ಟು ಕೃಷಿಯಲ್ಲಿ ಅನುಭವವನ್ನು ಪಡೆದಿದ್ದಾರೆ. ಇವರು ದನ ಗೊಬ್ಬರದ ಬಳಕೆಯಿಂದ ಈ ಕೃಷಿಯಲ್ಲಿ ಉತ್ತಮ ಇಳುವರಿಯನ್ನು ಪಡೆದಿರುತ್ತಾರೆ.

ಭತ್ತದ ಕೃಷಿಯಲ್ಲಿ ಮುಖ್ಯವಾಗಿ ಬಿ.ಕೆ.ಬಿ., ಇಂಟಾನ್, ಬಾಸುಮತಿ, ಹೇಮಾವತಿ, ಬಿ.ಟಿ.ಪಿ.ಎಸ್.-1, ಕರ್ತ, ರಾಜಮುಡಿ ತಳಿಯ ಬೆಳೆಯನ್ನು ಬೆಳೆದಿದ್ದು, ಬೇಸಿಗೆಯಲ್ಲಿ ಎರಡನೇ ಬೆಳೆಯಾಗಿ C.H- 45, I.R. -20, I.R.-8, I.R. -64, ತಾಯಿ ಚುಂಗ್ ತಳಿಯನ್ನು ಬೆಳೆದಿರುತ್ತಾರೆ. ಇವರಿಗೆ 2001-2002ನೇ ಇಸವಿಯಲ್ಲಿ ತಾಲೂಕು ಮಟ್ಟದಲ್ಲಿ ಒಂದು ಹೆಕ್ಟೇರಿಗೆ 65.858 ಕ್ವಿಂಟಾಲ್ ಇಳುವರಿ ಪಡೆದು ಪ್ರಥಮ ಸ್ಥಾನಕ್ಕೆ ಆಯ್ಕೆಯಾಗಿದ್ದರು. ಇವರ ತೋಟದಲ್ಲಿ ಸಾಕಷ್ಟು ಇಳುವರಿಯನ್ನು ಕೊಡುವ ಕಾಫಿ ಗಿಡಗಳಿಂದ ಕಂಬದ ಚಿಗುರುಗಳನ್ನು ಕಸಿ ಮಾಡಲು ಸತತವಾಗಿ 3 ವರ್ಷಗಳ ಕಾಲ ಕಾಫಿ ಮಂಡಳಿಯವರು ತೆಗೆದುಕೊಂಡು ಹೋಗಿರುತ್ತಾರೆ. ಏಲಕ್ಕಿಯು ಇವರ ಮುಖ್ಯ ಬೆಳೆಯಾಗಿದ್ದು, ವಿವಿಧ ತಳಿಯಲ್ಲಿ ಸಾವಯವ ಗೊಬ್ಬರ ಬಳಕೆಯಿಂದ ಉತ್ತಮ ಇಳುವರಿಯನ್ನು ಪಡೆದಿರುತ್ತಾರೆ. ಆಂಥೋರಿಯಂ ಕೃಷಿಗೆ ತೋಟಗಾರಿಕೆ ಇಲಾಖೆಯಿಂದ ಬಹುಮಾನ ಪಡೆದಿರುತ್ತಾರೆ.

ಒಂದೆಡೆ ಕೃಷಿ, ಇನ್ನೊಂದೆಡೆ ಸಮಾಜ ಸೇವೆ. ಈ ಅವಿರತ ಸೇವೆ ಅವರಿಗೆ ತೃಪ್ತಿ ನೀಡಿದೆ. ಕಗ್ಗೋಡ್ಲುವಿನ ಸಿ.ಸಿ.ಎಸ್ ಮತ್ತು ಜಿ.ಬಿ. ಸಹಕಾರ ಸಂಘದಲ್ಲಿ ತನ್ನ ಹತ್ತೊಂಬತ್ತನೇ ವಯಸ್ಸಿನಲ್ಲಿ ನಿರ್ದೇಶಕರಾದವರು. ನಂತರ ಅದರಲ್ಲೇ ಅಧ್ಯಕ್ಷರಾಗಿ, ಹಾಕತ್ತೂರಿನ ಸಹಕಾರ ಬ್ಯಾಂಕಿನಲ್ಲಿ ಉಪಾಧ್ಯಕ್ಷರಾದರು. ಹಾಕತ್ತೂರು ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ, ಕಗ್ಗೋಡ್ಲು ಪ್ರಾಥಮಿಕ ಶಾಲೆಯ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ಸೇವೆಗೆ ಸಂದವರು. ನಂತರ ಹಾಕತ್ತೂರು ಪ್ರೌಢಶಾಲೆಯ ಅಭಿವೃದ್ಧಿ ಸಮಿತಿಯ ನಿರ್ದೇಶಕರಾದರು.

1991ರಿಂದ 2000ದವರೆಗೆ ಕೊಡಗು ಗೌಡ ಸಮಾಜ, ಮಡಿಕೇರಿ, ಇಲ್ಲಿ ನಿರ್ದೇಶಕರಾಗಿ, ಕಗ್ಗೋಡ್ಲುವಿನ ಶ್ರೀ ಭಗವತಿ ದೇವಾಲಯದ ಆಡಳಿತ ಸಮಿತಿಯಲ್ಲಿಯೂ ಕಾರ್ಯನಿರ್ವಹಿಸಿದ ಸಮಾಜ ಸೇವಕರಿವರು.

ಶ್ರೀ ಭಗವತಿ ದೇವಾಲಯ ಕಗ್ಗೋಡ್ಲು, ಶ್ರೀ ಗೌರಿಶಂಕರ ದೇವಾಲಯ ಮೇಕೇರಿ, ಶ್ರೀ ಅರ್ಧನಾರೀಶ್ವರ ದೇವಾಲಯ ಬಿಳಿಗೇರಿ, ಶ್ರೀ ಪಾರ್ವತಿ ಪರಮೇಶ್ವರ ದೇವಾಲಯ ಮರಗೋಡು, ಶ್ರೀ ಭದ್ರಕಾಳಿ ದೇವಾಲಯ ಕಟ್ಟೆಮಾಡು ಇಲ್ಲಿಗೆಲ್ಲಾ ಧನ ಸಹಾಯ ಮಾಡಿದ ದಾನಿಗಳಿವರು. ಕಗ್ಗೋಡ್ಲು ಶಾಲೆಗೆ ಒಂದು ಕೊಠಡಿ, ಹಾಕತ್ತೂರು ಪ್ರೌಢಶಾಲೆಗೆ ಧನ ಸಹಾಯ ಹಾಗೂ ದತ್ತಿ ನಿಧಿ ಸ್ಥಾಪಕರು. ಮದೆನಾಡಿನ ಮಹೇಶ್ವರ ಕಾಲೇಜಿಗೆ, ಮರಗೋಡು ಕಾಲೇಜಿಗೆ ಧನ ಸಹಾಯ ಮಾಡಿದ್ದಾರೆ. ಮೇಕೇರಿ ಶಾಲೆಗೆ ಬೆಂಚು ಹಾಗೂ ಡೆಸ್ಕ್‌ಗಳನ್ನು ನೀಡಿರುತ್ತಾರೆ. ಮೂರ್ನಾಡು, ಮರಗೋಡು, ಪಾರಾಣೆ, ಮಡಿಕೇರಿ, ಭಾಗಮಂಡಲ, ಸೋಮವಾರಪೇಟೆ, ಕುಶಾಲನಗರ, ಪಿರಿಯಾಪಟ್ಟಣ, ಮೈಸೂರು, ಬೆಂಗಳೂರು ಹಾಗೂ ಹಾಸನ ಗೌಡ ಸಮಾಜಗಳಿಗೆ ಧನ ಸಹಾಯ ಮಾಡಿರುತ್ತಾರೆ.

- ಪ್ರ. ಸಂ.

ಕಿರು ಪರಿಚಯ



ಶ್ರೀ ಹೊಸೂರು ಕೆ. ಸೀತಾರಾಮ

ಭಾಗಮಂಡಲ ನಾಡು ಚೇರಂಗಾಲ ಗ್ರಾಮದ ಹೊಸೂರು ಶ್ರೀಮತಿ ಪೂವಮ್ಮ ಮತ್ತು ಶ್ರೀ ಕುಕ್ಕಪ್ಪನವರ ದ್ವಿತೀಯ ಪುತ್ರರಾದ ಶ್ರೀ ಸೀತಾರಾಮ ಇವರು ದಿನಾಂಕ 12.08.1952ರಲ್ಲಿ ಜನಿಸಿದರು.

ಪ್ರಸ್ತುತ ನೈರುತ್ಯ ರೈಲ್ವೆ ವಿಭಾಗದ ಇಲಾಖೆಯಲ್ಲಿ ಮೈಸೂರಿನಲ್ಲಿ ಸೇವೆ ಸಲ್ಲಿಸುತ್ತಿರುವ ಇವರು, ಕ್ರೀಡಾ ಲೋಕದ ಮೂಲಕ ತಮ್ಮನ್ನು ಪರಿಚಯಿಸಿಕೊಂಡಿರುವುದು ಜನಾಂಗಕ್ಕೆ ಹೆಮ್ಮೆಯ ವಿಚಾರ. ಅಂತಾರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಅಚ್ಚುಮೆಚ್ಚಿನ ಮೆರಾಥಾನ್ ಓಟದಲ್ಲಿ ಭಾರತವನ್ನು ಪ್ರತಿನಿಧಿಸಿ ರಾಷ್ಟ್ರಕ್ಕೆ ಕೀರ್ತಿ ತಂದ ದಿಗ್ಗಜ ಕೊಡಗಿನ ಸುಪುತ್ರ, ಜನಾಂಗದ ಹೆಮ್ಮೆಯ ಪುತ್ರ ಎನ್ನಲು ಹರ್ಷಿಸುತ್ತೇವೆ. ಶ್ರೀಯುತರ ಕ್ರೀಡಾ ಸಾಧನೆಗಳ ಸಂಕ್ಷಿಪ್ತ ವಿವರ ಈ ರೀತಿ ಇದೆ. ಪ್ರಾಥಮಿಕ ಶಿಕ್ಷಣ- ಚೇರಂಗಾಲ ಗ್ರಾಮ, ಪ್ರೌಢಶಾಲಾ ಶಿಕ್ಷಣ - ಭಾಗಮಂಡಲ. ನಂತರ ಪದವಿಪೂರ್ವ ಶಿಕ್ಷಣವನ್ನು 1973ರಲ್ಲಿ ಭಾಗಮಂಡಲದ ಶ್ರೀ ಕಾವೇರಿ ಜೂನಿಯರ್ ಕಾಲೇಜಿನಲ್ಲಿ ಪೂರೈಸಿದರು.

ವಿದ್ಯಾರ್ಥಿಯಾಗಿದ್ದಾಗ 1500 ಮೀಟರ್ ಹಾಗೂ 800 ಮೀಟರ್ ಓಟದಲ್ಲಿ ತಮ್ಮ ಕಾಲೇಜನ್ನು ಪ್ರತಿನಿಧಿಸಿದ್ದರು. ಜೂನಿಯರ್ ಕಾಲೇಜು ವ್ಯಾಸಂಗ ಪೂರೈಸುತ್ತಿದ್ದಂತೆಯೇ 1973ರಲ್ಲಿ ತಮ್ಮ 22ನೇ ವಯಸ್ಸಿನಲ್ಲಿ ಭಾರತ ಭೂ ಸೇನೆಯ Corps of Signals ದಳಕ್ಕೆ ಆಯ್ಕೆಯಾದರು. 1978ರಲ್ಲಿ ಭೂಸೇನೆ, ವಾಯುಸೇನೆ ಹಾಗೂ ನೌಕಾ ಸೇನೆಗಳ ಮಟ್ಟದಲ್ಲಿ ನಡೆದ 12 ಕಿ.ಮೀ. ದೂರದ ಗುಡ್ಡಗಾಡು (ಕ್ರಾಸ್ ಕಂಟ್ರಿ) ಓಟದಲ್ಲಿ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕ ಗೆದ್ದುಕೊಂಡರು. ಅದೇ ವರ್ಷ ಮೀರತ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಕ್ರಾಸ್ ಕಂಟ್ರಿ ಓಟ ಹಾಗೂ 1979ರಲ್ಲಿ ಭೂಸೇನೆ ಪ್ರತಿನಿಧಿಸಿ ರಾಜಸ್ಥಾನದಲ್ಲಿ ನಡೆದ ಕ್ರಾಸ್‌ಕಂಟ್ರಿ ಓಟದಲ್ಲಿ ಪ್ರಥಮ ಸ್ಥಾನ ಗಳಿಸಿ ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡರು.

1981ರಲ್ಲಿ ಸೇನೆಯಿಂದ ಸ್ವಯಂ ನಿವೃತ್ತಿ ಮೆರಾಥಾನ್ ಓಟದ ಸತತ ಅಭ್ಯಾಸ. ಅದೇ ವರ್ಷ ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸಿ, 42.195 ಕಿ.ಮೀ. ದೂರವನ್ನು 2 ಗಂಟೆ, 15 ನಿಮಿಷ, 10 ಸೆಕೆಂಡುಗಳಲ್ಲಿ ಕ್ರಮಿಸಿ ದಾಖಲೆ ನಿರ್ಮಾಣ. ಅದೇ ವರ್ಷ ಕೇರಳದ ಕ್ಯಾಲಿಕಟ್‌ನಲ್ಲಿ ನಡೆದ ರಾಷ್ಟ್ರಮಟ್ಟದ 42.195 ಕಿ.ಮೀ. ಮೆರಾಥಾನ್ ಓಟದಲ್ಲಿ ಚಿನ್ನದ ಪದಕ. ಇವರ ಕ್ರೀಡಾಕೂಟ ಪ್ರತಿಭೆಯನ್ನು ಗುರುತಿಸಿ ಭಾರತ ರೈಲ್ವೆ ಇಲಾಖೆಯಲ್ಲಿ ಉದ್ಯೋಗ. ರಾಷ್ಟ್ರೀಯ ರೈಲ್ವೆ ಕ್ರೀಡಾ ಕೂಟದಲ್ಲಿ ಚಿನ್ನದ ಪದಕ.

1982ರಲ್ಲಿ ಪುನಃ ರಾಷ್ಟ್ರ ಮಟ್ಟದ ಕ್ರೀಡಾಕೂಟದಲ್ಲಿ ರೈಲ್ವೆ ಇಲಾಖೆಯನ್ನು ಪ್ರತಿನಿಧಿಸಿ ಚಿನ್ನದ ಪದಕ. ಅದೇ ವರ್ಷ ದೆಹಲಿಯಲ್ಲಿ ನಡೆದ 9ನೇ ಏಷ್ಯಾಡ್ ಕ್ರೀಡಾಕೂಟದಲ್ಲಿ ಭಾರತವನ್ನು ಪ್ರತಿನಿಧಿಸಿ, 42.195 ಕಿ.ಮೀ. ಮೆರಾಥಾನ್ ಓಟದಲ್ಲಿ ಕಂಚಿನ ಪದಕ. 1983ರಲ್ಲಿ ದಕ್ಷಿಣ ಕೊರಿಯಾದಲ್ಲಿ ನಡೆದ ಮೆರಾಥಾನ್ ಓಟದಲ್ಲಿ 6ನೇ ಸ್ಥಾನ.

1987ರಲ್ಲಿ ಅಥ್ಲೆಟಿಕ್ಸ್ ತರಬೇತಿ ಕೋರ್ಸ್ ಪೂರ್ಣಗೊಳಿಸಿದರು. ನಂತರ ಅನೇಕ ಮಂದಿ ಕ್ರೀಡಾಪಟುಗಳಿಗೆ ತರಬೇತಿ ನೀಡಿ ರಾಜ್ಯ ಹಾಗೂ ರಾಷ್ಟ್ರೀಯ ಕ್ರೀಡಾಲೋಕಕ್ಕೆ ಕೊಡುಗೆ ನೀಡಿದ ಕೀರ್ತಿ ಇವರದ್ದು.

ಶ್ರೀಯುತರ ಅಂತಾರಾಷ್ಟ್ರಮಟ್ಟದ ಕ್ರೀಡಾ ಪ್ರತಿಭೆಯನ್ನು ಗುರುತಿಸಿದ ಭಾರತ ಸರಕಾರ 2005ರಲ್ಲಿ ಮೆಚ್ಚುಗೆಯಾಗಿ ಮಾಸಿಕ 6000 ರೂ. ಗಳ ಜೀವಾವಧಿ ಪಿಂಚಣಿ ಮಂಜೂರು ಮಾಡಿದ್ದಾರೆ.

ಶ್ರೀಯುತರಿಗೆ ಅಭಿನಂದನೆಗಳು,

- ಸಂ.



ಸ್ವಾಗತ



ಸ್ವಾಗತ.... ಸ್ವಾಗತ... ಸ್ವಾಗತ...
ಶತಮಾನ ಸಂಭ್ರಮದ ಶುಭೋದಯಕೆ ಸ್ವಾಗತ
ಸ್ವಾಗತ... ಸ್ವಾಗತ ... ಸ್ವಾಗತ...

ಮಲೆನಾಡ್ ಕೊಡಗ್‌ಲಿ ಯಾಲಕ್ಕಿ ಘಮಿಸ್ಯುಟ್ಟು
ಕಾವೇರಿ ನಾಡ್‌ಲಿ ಶ್ರೀಗಂಧ ಘಮಿಸ್ಯುಟ್ಟು
ತಂಪು ಗಾಳಿ ಹೊತ್ತ್ ತರ್ವ ಪರಿಮಳ ಅನವರತ
ಶತಮಾನ ಸಂಭ್ರಮದ ಶುಭೋದಯಕೆ ಸ್ವಾಗತ
ಸ್ವಾಗತ... ಸ್ವಾಗತ... ಸ್ವಾಗತ...

ಜೀವ ಹೊಳೆ ಕಾವೇರಿ ಹುಟ್ಟಿ ಹರ್ದ ನಾಡಿದ್
ಋಷಿ ಮುನಿ ಪುಂಗವರ ತಪದ ಫಲದ ಬೀಡಿದ್
ಕೆಚ್ಚೆದೆ ಕಲಿಗಳಿಗೆ ದೇಶಲೆ ಕೀರ್ತಿ ತಂದ
ಶತಮಾನ ಸಂಭ್ರಮದ ಶುಭೋದಯಕೆ ಸ್ವಾಗತ
ಸ್ವಾಗತ... ಸ್ವಾಗತ... ಸ್ವಾಗತ ...

ಎಲ್ಲೆಲ್ಲಿ ನೋಡಿರು ಸಂಪಿಗೆ ಮಲ್ಲಿಗೆ
ಯಾಲಕ್ಕಿ ಕಂಪಿಗೆ ಹೊಂಬಾಳೆ ಬಾಗ್ಯುಟ್ಟು.
ಮಲೆ ನಾಡ್ ತಂಪುಗಾಳಿ ಸುಖಾಗಮನ ಹೇಳಿಟ್ಟು
ಶತಮಾನ ಸಂಭ್ರಮದ ಶುಭೋದಯಕೆ ಸ್ವಾಗತ
ಸ್ವಾಗತ... ಸ್ವಾಗತ... ಸ್ವಾಗತ...

ಕೊಡಗ್ ಗೌಡ ವಿದ್ಯಾ ಸಂಘ ಶತಮಾನ ಸಂಭ್ರಮಕೆ
ಬಂದ ನೆಂಟರಿಷ್ಟರೆಲ್ಲವುಕು ಸ್ವಾಗತ
ತಾಯ್ನಾಡ್ ಕೊಡಗ್‌ಲಿ ಶುಭೋದಯ ಮೊಳಗಿಸಿ
ಸಂಘ ಜೀವನಂದ ಬದ್‌ಕ್‌ನ ಬೆಳಗಿಸಿ
ಸ್ವಾಗತ... ಸ್ವಾಗತ... ಸ್ವಾಗತ...

ಶತಮಾನ ಸಂಭ್ರಮದ ಶುಭೋದಯಕೆ ಸ್ವಾಗತ
ಸ್ವಾಗತ... ಸ್ವಾಗತ... ಸ್ವಾಗತ...

ರಚನೆ : **ಅಮೆ ಕೃ ಪಾಲಾಕ್ಷ**
ಸಂಪಾದಕರು
ಸ್ಮರಣ ಸಂಚಿಕೆ ಸಮಿತಿ

ಪರಿವಿಡಿ

ಮಾನ್ಯ ಓದುಗರ ಗಮನಕ್ಕೆ - ಹೀಗೆ ಓದಿಕೊಳ್ಳುವುದು :

- ಕೊಡಗು ಎಜುಕೇಶನಲ್ ಅಕಾಡೆಮಿ -'ಎ' ಅಕ್ಷರ ಬಿಟ್ಟು ಹೋಗಿದೆ 35
- ಚುಟುಕುಗಳು - ಮಣ್ಣಿನ ಮಕ್ಕಳು, ಕತ್ತಲೆ ಬೆಳಕು, ಉರುಳು ಸೇವೆ, ನೆನಪುಗಳು - ಕುಲ್ಲಚನ ಕಾರ್ಯಪ್ಪ 61
- ಗೆಳೆಯ, ನೆನಪು - ಬೊಳ್ಳುಮಾನಿ ಗಾಯತ್ರಿ ಅಪ್ಪಯ್ಯ 106
- ಮೂರು ಮಾತು - ಸಂಗ್ರಹ: ಕುದುಪಜೆ ಶಾಂತಿ ಬೋಜಪ್ಪ 126

ಕೆಲವು ಬರಹಗಾರರ ಭಾವಚಿತ್ರ ಆಕಸ್ಮಿಕ ಬಿಟ್ಟು ಹೋಗಿರುತ್ತದೆ

ಗೌಡರು ನಡೆದು ಬಂದ ದಾರಿ

-ಲೇಖಕರು: ಪ್ರೊ. ಪೂಜಾರಿ ಮೊಣ್ಣಪ್ಪ
ಕೃಪೆ : ಕೊಡಗು ಸಂಗಾತಿ

ಗೌಡರು ಅಥವಾ ಗೌಡೂ ಜನಾಗಂದ ಬಹುತೇಕ ಜನರು ವ್ಯವಸಾಯಗಾರರು ಹಾಗೂ ಪಶು ಸಂಗೋಪಕರು. ಗೌಡ ಹಾಗೂ ಗೌಡು ಎಂಬುದು ವಾಸ್ತವವಾಗಿ ಬೇರೆ ಬೇರೆ ವರ್ಗಕ್ಕೆ ಅಥವಾ ಜೊತೆಗೆ ಸೇರಿದ ಶಬ್ದಗಳು ಗೌಡರು ಕನ್ನಡಿಗರು. ಗೌಡೂ ಉರಿಯ ಭಾಷೆಯನ್ನಾಡುವವರು. ಎರಡೂ ಹೆಸರುಗಳನ್ನು ಎರಡೂ ರೀತಿಯಲ್ಲೂ ಉಚ್ಚರಿಸಬಹುದು. ಈ ಎರಡೂ ಹೆಸರುಗಳು ಶಬ್ದಗಳ ಅರ್ಥಶಾಸ್ತ್ರದ ಪ್ರಕಾರ ಒಂದೇ ಆಗಿದೆ.

ಸಾಮಾನ್ಯವಾಗಿ ಇವು ಸಂಸ್ಕೃತ ಪದ ಗೋ- ಹಸು ಎಂಬ ಪದದಿಂದ ಬಂದದ್ದು ಎಂಬುದಾಗಿ ಶ್ರೀ ಹೆಚ್. ಸ್ಟುವರ್ಟ್ ಹೇಳುತ್ತಾರೆ. ಆದರೆ ಡಾ. ಗೋಟವ್ ಅಪ್ಪೋರ್ಟರವರ ತತ್ವದಂತೆ ಗೌಡ ಎಂಬುದು ಸರಿಯಾಗಿದೆ. ಸ್ಟುವರ್ಟ್‌ರವರು ಈ ಗೌಡರನ್ನು ಹಾಲು ಒಕ್ಕಲು ಮಕ್ಕಳು ಎಂಬುದಾಗಿ ಕರೆಯುತ್ತಾರೆ ಎಂದು ಹೇಳುತ್ತಾರೆ.

(ಶೃಂಗೇರಿ ಜಗದ್ಗುರುಗಳು 1913ರಲ್ಲಿ ಕೊಟ್ಟ ನಿರೂಪದಲ್ಲೂ ಹಾಲುವೊಕ್ಕಲು ಮಕ್ಕಳು ಯಾನೆ ಗೌಡರು ಎಂದು ನಿರೂಪಿಸಲಾಗಿದೆ) ಅಂದರೆ ಹಾಲಿನ ಪಂಗಡದ ಮಕ್ಕಳು. ಇವರ ಸಂಖ್ಯೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದೆ. ಪ್ರತಿ ಗ್ರಾಮದಲ್ಲಿ ಇಬ್ಬರು ಮುಖ್ಯಸ್ಥರು ಇರುತ್ತಾರೆ. ಇವರಿಗೆ ಗ್ರಾಮ ಗೌಡ ಮತ್ತು ಗೊತ್ತು ಗೌಡ ಎಂಬುದಾಗಿ ಕರೆಯುತ್ತಾರೆ. ಮಾಗಣನೆಗೆ ಒಬ್ಬ ಮುಖ್ಯಸ್ಥನಿದ್ದು, ಅವನನ್ನು ಮಾಗಣೆಗೌಡ ಎಂಬುದಾಗಿ ಕರೆಯುತ್ತಾರೆ. ಅವರ ಮೇಲೆ ಕಟ್ಟೆಮನೆಯವ ಎಂಬುದಾಗಿರುತ್ತದೆ.

ಡ್ರಾವಿಡರು ಭರತ ಖಂಡಕ್ಕೆ ಸುಮಾರು 7000ವರ್ಷದ ಹಿಂದೆ ಬಂದಿರಬಹುದೆಂದು ಚರಿತ್ರೆಕಾರರು ಅಭಿಪ್ರಾಯ ಪಡುತ್ತಾರೆ. ಭೂ ಮಧ್ಯ ಸಮುದ್ರದ ಸುತ್ತಮುತ್ತಲಿನ ಜನರಿಗೂ ಡ್ರಾವಿಡರಿಗೂ ತುಂಬಾ ಸಾಮ್ಯವಿದೆ ಎಂದು ಯುರೋಪಿಯನ್ ವಿದ್ವಾಂಸರ ಅಭಿಪ್ರಾಯ. ಈ ಡ್ರಾವಿಡರಲ್ಲಿ ನಂದಿಧ್ವಜರು, ವೆಳ್ಳರು, ಗೌಡ, ಗೌಳರು, ಹಟ್ಟಿಕಾರರ ಪಂಗಡಕ್ಕೆ ಸೇರಿದವರೆಂದೂ ಇವರಲ್ಲಿ ಕುರು (0) ಮತ್ತು ತರುವಸರೆಂಬ ಪಂಗಡಕ್ಕೆ ಗೌಡ, ಗೌಳರು ಸೇರಿದ್ದಾರೆಂದು ಹೇಳುತ್ತಾರೆ. ಋಗ್ವೇದ ಹಾಗೂ ಪುರಾಣಗಲ್ಲಿ ತರ್ವಸರು ಹೆಸರನ್ನು ಹೇಳುತ್ತಾರೆ.

ಆದ್ದರಿಂದ ಯುರೋಪಿನ ವಿದ್ವಾಂಸರು ಗೌಡಗೌಳರು ದ್ರಾವಿಡ ಜನಾಂಗಕ್ಕೆ ಸೇರಿದವರೆಂದೂ ಇವರು ಹಟ್ಟಿಕಾರ ಪಂಗಡಕ್ಕೆ ಸೇರಿದವರೆಂದು ಹಟ್ಟಿಕಾರರಲ್ಲಿ ವೆಳ್ಳರು, ನಂದಿಧ್ವಜರು ಮೂಲವಂಶಜರು. ಇವರನ್ನು ಪುರಾಣದಲ್ಲಿ ಹಾಗೂ ಋಗ್ ವೇದದಲ್ಲಿ ತರ್ವಸರು ಎಂದು ಕರೆದಿದ್ದಾರೆ ಎಂದು ಇತಿಹಾಸಜ್ಞರು ಹೇಳುತ್ತಾರೆ. ವಸು ಎಂದರೆ ಧನ ಎಂದರ್ಥ. ತರ್ವಿನ ವಸು ಎಂದರೆ ಧನ ಉಳ್ಳ ಜನಾಂಗದವರೆಂದು ಅರ್ಥ. ಹಟ್ಟಿಕಾರರ ಒಂದು ಶಾಖೆ ಗೋವಳರಾಗಿ ದೇಶ ಪೃಥ್ವಿಪಾಲಕರೆಂದು ಹೇಳುತ್ತಾರೆ. ಧನಗಾರಿಕೆ ಯುಗದಲ್ಲಿ ಗೋಪನು ಭೂಪನಾದನು.

ಗೋವನ್ನು ಸಾಕಿ ಹಾಲು ಉತ್ಪಾದಿಸುವುದರಿಂದ ಇವರು ಗೋಪರಾದರು. ಶ್ರೀ ಹೆಚ್.ಎ. ಟ್ರಸ್ಟಿರಿ ಪ್ರಕಾರ ಇವರು ಗೋವಿಗೆ ಸಂಬಂಧ ಇರುವುದರಿಂದ ಗೌಡರಾದರೆಂದು ಆದುದರಿಂದ ಇವರ ಜಾತಿಯ ಹೆಸರು ಹಾಲು

ಒಕ್ಕಲು ಮಕ್ಕಳೆಂದಾಯಿತು ಎನ್ನುತ್ತಾರೆ.

ಡಾ. ರಾಮಪ್ರಸಾದ ಚಂದಾರವರ ಅಭಿಪ್ರಾಯದಂತೆ ಯದುತರ್ವಸರು ಭೂಮಧ್ಯ ಸಮುದ್ರದ ಹತ್ತಿರ ಇರುವ ಪ್ರದೇಶದಿಂದ ಭಾರತಕ್ಕೆ ಸಮುದ್ರದ ಮಾರ್ಗವಾಗಿ ಸಿಂಧೂ ನದಿ ಕಣಿವೆಗೆ ಬಂದು ಹರಪ್ಪಾ ಮತ್ತು ಮಹೆಂಜದಾರೋ ಪ್ರದೇಶದಲ್ಲಿ ಅರೆ ಉನ್ನತ ನಾಗರೀಕತೆಯನ್ನು ಪಡೆದಿದ್ದರೆಂದು ಹೇಳುತ್ತಾರೆ. ಚರಿತ್ರೆ ಪ್ರಸಿದ್ಧಿ ಎಲ್ಲರಿಗೂ ತಿಳಿದ ವಿಷಯ. ಈ ರೀತಿ ನಾಗರೀಕತೆಯನ್ನು ಪಡೆದ ಈ ಸ್ಥಳದಲ್ಲಿ ನಟರಾಜ ಪ್ರತಿಮೆ 1916ರಲ್ಲಿ ಜಾನ್ ಮಾರ್ಷಲ್‌ರವರ ನೇತೃತ್ವದಲ್ಲಿ ಸದ್ರಿ ಜಾಗವನ್ನು ಸಂಶೋಧಿಸಿದಾಗ ಕಂಡು ಹಿಡಿದು ಹರಪ್ಪಾ ಮಹೆಂಜಾದರೋ ಜನರು ನಟರಾಜನನ್ನು ಪೂಜಿಸುತ್ತಿದ್ದರೆಂಬುದಕ್ಕೆ ಅಲ್ಲಿ ಸಿಕ್ಕಿದ ನಟರಾಜ ವಿಗ್ರಹವೇ ಸಾಕ್ಷಿ. ಇದೂ ಅಲ್ಲದೆ ಅಲ್ಲಿ ಕಟ್ಟಿದ ಗೋಡೆಗಳಲ್ಲಿ ಗೋವಿನ ಚಿತ್ರಗಳಿರುವುದರಿಂದ ಇವರು ಗೋಪಾಲಕರೆನ್ನುವುದಕ್ಕೆ ಸಾಕ್ಷಿಯಾಗಿದೆ. ಆದರೆ ಈ ಜನರಿಗೆ ಆಪತ್ತು ಕಾದಿತ್ತು. ಇವರಿದ್ದ ಸ್ಥಳಕ್ಕೆ ಆರ್ಯರು ಧಾಳಿ ಮಾಡಿ ಯುದ್ಧ ಮಾಡಿ ಕೆಲವರು ಸತ್ತರು. ಉಳಿದವರು ಯಮುನಾ ನದಿ ಕಡೆಗೆ ಹೋದರು. ಅಲ್ಲಿಯೂ ಇವರನ್ನು ಆರ್ಯರು ಬೆನ್ನಟ್ಟಿ ಇವರನ್ನು ಅಲ್ಲಿಂದಲೂ ಓಡಿಸಿದ್ದರಿಂದ ಗಂಗಾ ನದಿ ತೀರಕ್ಕೆ ಹೋಗಿ ನೆಲೆಸಿದರು. ಅಲ್ಲಿಗೂ ಆರ್ಯರು ಬಂದಾಗ ಆರ್ಯರಲ್ಲಿ ಪರಿವರ್ತನೆ ಪ್ರಾರಂಭವಾಗಿ ದ್ರಾವಿಡರೊಡನೆ ವಿವಾಹ ಸಂಬಂಧ ಪ್ರಾರಂಭವಾಯಿತು. ಇದೇ ಸಮಯ ಆರ್ಯ ದ್ರಾವಿಡರ ಮಿಲನದಿಂದಾಗಿ ಹಿಂದೂ ಮತದ ಉದಯವಾಯಿತೆನ್ನಬಹುದು. ಆರ್ಯರ ದೇವತೆಗಳಾದ ಸೂರ್ಯ, ಅಗ್ನಿ, ನೀರು, ಚಂದ್ರ ಹಾಗೂ ದ್ರಾವಿಡರ ದೇವತೆಗಳಾದ ಸರ್ಪ ಹಾಗೂ ಲಿಂಗ ಶಿವನ ಅವತಾರದಲ್ಲಿ ಕಾಣುವಂತಾಯಿತು. ಶಿವನ ಹಣೆಗಣ್ಣು ಅಗ್ನಿಯಾದರೆ ಆರ್ಯರ ದೇವತೆಯಾದ ಚಂದ್ರ ಮತ್ತು ಗಂಗೆ ಶಿವನ ಜಡೆಯಲ್ಲೂ ತಲೆ ಮೇಲೆ ಚಂದ್ರನೂ ದ್ರಾವಿಡ ದೇವತೆಯಾದ ಸರ್ಪ ಶಿವನ ಕತ್ತಿನ ಮೇಲೂ ಲಿಂಗ ಶಿವನ ಎದೆಯಲ್ಲಿ ಕಾಣುವಂತಾಯಿತು.

ಇದಾದ ಕೆಲವು ಶತಮಾನಗಳಲ್ಲಿ ಈ ತರ್ವಸರು ಬಂಗಾಳದ ಕಡೆ ಸರಿದು ಬಂಗಾಳದಲ್ಲಿ ನೆಲಸಿದರು. ಆಗ ಆ ದೇಶವನ್ನು ಗೌಡ ದೇಶವೆಂದು ಕರೆಯುತ್ತಿದ್ದರು. ಗೂಡ್ ಅಂದರೆ ಬೆಲ್ಲ. ಗೂಡ್ ದೇಶ ಗೌಡದೇಶವಾಯಿತೆಂದು ಬಲ್ಲವರು ಹೇಳುತ್ತಾರೆ. ಹರ್ಷವರ್ಧನನ ಅಣ್ಣ ಪ್ರಭಾಕರ ವರ್ಧನನನ್ನು ಗೌಡರಾಜನಾದ ಶಶಾಂಕನು ಯುದ್ಧದಲ್ಲಿ ಕೊಂದನೆಂದು ಚರಿತ್ರೆಯಲ್ಲಿ ಪ್ರತೀತಿ ಇದೆ. ಗೌಡ ದೇಶದಿಂದ ಬಂದವರೆಲ್ಲರೂ ಗೌಡರೆಂದು ಕರೆಯಲ್ಪಟ್ಟರು. ಆದರೆ ಈ ಗೌಡರನ್ನು ಅವರ ಗ್ರಹಚಾರ ಬೆನ್ನಟ್ಟುತ್ತಾ ಇತ್ತು. ಗೌಡ ದೇಶದಲ್ಲಿ ಬೌದ್ಧ ಮತದ ಪ್ರಾಬಲ್ಯ ಬೆಳೆಯುತ್ತಾ ಇತ್ತು.ಅದ್ದರಿಂದ ಅಲ್ಲಿದ್ದವರು ತಾವು ಬೌದ್ಧ ಮತ ಅವಲಂಬಿಗಳಾಗಬೇಕಾಗುತ್ತದೆ ಎಂದು ಬೆದರಿ ಕೆಲವರು ದೇವಗಿರಿ ಕಡೆಗೂ ಇನ್ನೂಕೆಲವರು ಒರಿಸ್ಸಾದ ಕಡೆಗೂ ಬಂದಿರಬೇಕು. ಒರಿಸ್ಸಾದ ಗಂಜಾಮ್ ಜಿಲ್ಲೆಯಲ್ಲಿ ಗೌಡಲು ಎಂಬ ಪಂಗಡದವರಿದ್ದರೆಂದೂ ಅವರ ಕಸುಬು ಹಾಲು ಉತ್ಪಾದನೆ ಎಂದೂ ವ್ಯವಸಾಯವೂ ಅವರ ಕಸುಬು ಎಂದೂ ಇವರು ಬಲಾಢ್ಯವಾಗಿದ್ದು ಸಂಪತ್ತಿನಿಂದ ಕೂಡಿದ ಜನಾಂಗದವರೆಂದು ಇಡ್‌ಗರ್ ಬರ್ಸ್ಟ್ ಮತ್ತು ಕೆ. ರಂಗಾಚಾರಿಯವರು ದಕ್ಷಿಣ ಭಾರತದ ಜಾತಿ ಮತ್ತು ಪರಿಶಿಷ್ಟ ವರ್ಗವೆಂಬ ಗ್ರಂಥದಲ್ಲಿ ಬರೆದಿದ್ದಾರೆ. ಇವರ ಕಸುಬು ಗೌಡರ ಕಸುಬನ್ನೆ ಅನುಸರಿಸುತ್ತಿದೆ. ಆದರೆ ಇವರು ಒರಿಯಾ ಭಾಷೆಯನ್ನಾಡುತ್ತಾರೆ. ಗೌಡರು ಕನ್ನಡವನ್ನಾಡುತ್ತಾರೆ. ಆದುದರಿಂದ ಇವರ ಜಾತಿ ಬೇರೆಯಾಗಿರಬೇಕೆಂದು ಊಹಿಸುತ್ತಾರೆ. ನನ್ನ ಅಭಿಪ್ರಾಯದಲ್ಲಿ ಈ ಎರಡು ಪಂಗಡದವರು ಬೇರೆ ಭಾಷೆಯಾಡುವುದರಿಂದ ಬೇರೆ ಜಾತಿ ಎಂಬುದಾಗಿ ಹೇಳುವುದಕ್ಕಾಗುವುದಿಲ್ಲ. ಕಾರಣವೇನೆಂದರೆ ಹಳೇ ಮೈಸೂರಿನ

ಮರಸು ಒಕ್ಕಲಿಗರು ಒಂದೇ ಜಾತಿ ಆದರೂ ಒಂದು ಪಂಗಡವದರು ಕನ್ನಡ ಮಾತಾಡುತ್ತಾರೆ. ಇನ್ನೊಂದು ಪಂಗಡದವರು ತೆಲುಗು ಭಾಷೆ ಮಾತಾಡುತ್ತಾರೆ. ಅದೇ ರೀತಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಗೌಡರು ಕೆಲವರು ಅರೆಭಾಷೆಯನ್ನು ಇನ್ನು ಕೆಲವರು ತುಳು ಭಾಷೆಯನ್ನು ಆಡುತ್ತಾರೆ. ಇವರು ಬೇರೆ ಬೇರೆ ಭಾಷೆಯನ್ನು ಆಡುವುದರಿಂದ ಇವರು ಬೇರೆ ಬೇರೆ ಜಾತಿಯವರೆಂದು ಹೇಳಲು ಸಾಧ್ಯವಿಲ್ಲ. ಆದುದರಿಂದ ಗೌಡರ ಸಂತತಿಯವರು ಒರಿಸ್ಸಾದ ಗಂಜಾಮ್ ಜಿಲ್ಲೆಯಲ್ಲಿ ಇದ್ದಾರೆಂದು ಹೇಳಬಹುದು.

ಇನ್ನೊಂದು ಶಾಖೆಯವರು ದೇವಗಿರಿಗೆ ಹೋಗಿ ನೆಲಸಿದಾಗ ಅಲ್ಲಿ ರಾಮಚಂದ್ರ ಎಂಬ ರಾಜ ರಾಜ್ಯ ವಾಳುತ್ತಿದ್ದನೆಂದೂ ಅವನು ಹಾಲಿಗೆ ಸಂಬಂಧಪಟ್ಟ ಮತದವನೆಂದೂ ತಿಳಿದು ಬರುತ್ತದೆ. ರಾಮಚಂದ್ರನನ್ನು ಮಹಮದ್ ಬಿನ್ ತೊಗಲಕ್‌ನ ಸೇನಾಧಿಪತಿ ಮಲ್ಲಿಕಾಫರನು ಸೋಲಿಸಿ ಕೊಂದು ಹಾಕಿದುದರಿಂದ ಈ ಗೌಡರು ಮುಸಲ್ಮಾನ ವಶದಲ್ಲಿ ದೇವಗಿರಿಯಲ್ಲಿ ಉಳಿದರೆ ತಾವೂ ಮುಸಲ್ಮಾನರಾಗಬಹುದೆಂಬ ಭಯದಿಂದ ಅಲ್ಲಿಂದ ಈಗಾಗಲೇ ವಿಜಯನಗರವನ್ನು ಕಟ್ಟಲು ಶ್ರಮ ಪಡುತ್ತಿದ್ದ ಹಾಲಿನ ಸಂಬಂಧವಿದ್ದ ಹಕ್ಕಬುಕ್ಕರ ರಾಜ್ಯಕ್ಕೆ ಬಂದು ನೆಲೆಸಿದರು. ಇಲ್ಲಿ ಇವರು ತಾಳಿಕೋಟೆ ಯುದ್ಧ ನಡೆದು ವಿಜಯನಗರದ ಅರಸರು ಬಹುಮನೀ ಸುಲ್ತಾನರಿಂದ ಸೋಲಿಸಲ್ಪಡುವವರೆಗೆ ಅಲ್ಲಿಯೇ ಇದ್ದರು ಎಂದು ತಿಳಿದು ಬರುತ್ತದೆ.

ಈ ಸಮಯದಲ್ಲಿಯೇ ಈ ಗೌಡರು ವಿದ್ಯಾರಣ್ಯರ ಮೂಲಕ ಶೃಂಗೇರಿ ಮಠದ ಸಂಪರ್ಕ ಪಡೆದರು. ಅದೇ ರೀತಿ ಇಲ್ಲಿದ್ದಾಗಲೇ ಇವರು ಶಿವನನ್ನು ಪೂಜಿಸುತ್ತಿದ್ದವರು ವಿಜಯ ನಗರದ ರಾಜರ ಮನೆದೇವರಾದ ಶ್ರೀ ವೆಂಕಟರಮಣ ಸ್ವಾಮಿಯನ್ನು ಪೂಜಿಸಿ ವೆಂಕಟರಮಣ ಸ್ವಾಮಿಯ ಮುಡುಪನ್ನು ಮನೆಗಳಲ್ಲಿ ತಂದಿಟ್ಟು ಹರಿಸೇವೆಯನ್ನು ಮಾಡಲು ಪ್ರಾರಂಭಿಸಿದರು ಎಂದು ತಿಳಿಯುತ್ತದೆ. ಶ್ರೀ ಶೃಂಗೇರಿ ಮಠದ ಸಂಪರ್ಕ ಪಡೆದುದರಿಂದ ತಮ್ಮ ಜಾತಿ ಪದ್ಧತಿಗಳ ಕಟ್ಟು ಪಾಡುಗಳನ್ನು ಶೃಂಗೇರಿ ಜಗದ್ಗುರುಗಳ ನಿರ್ದೇಶನದ ಮೇಲೆ ರೂಪಿಸಿದರೆನ್ನಬಹುದು. ಅದೇ ರೀತಿ ಶೃಂಗೇರಿಯ ಶಾರದಾಂಬೆ (ಸಬ್ಬಮ್ಮ) ದೇವರಿಗೆ ಮದುವೆಯಲ್ಲಿ ಹರಕೆ ಹಣ ಕಟ್ಟುವ ಪದ್ಧತಿ ಪ್ರಾರಂಭವಾಯಿತೆನ್ನಬಹುದು.

ತಾಳಿಕೋಟೆ ಯುದ್ಧ ನಂತರ ತಾವು ವಿಜಯನಗರದ ಹತ್ತಿರ ತಮ್ಮ ವಾಸವನ್ನು ಮುಂದುವರೆಸಿದರೆ ತಾವು ಬಹುಮನಿ ಸುಲ್ತಾನರ ಬಲತ್ಕಾರದಿಂದ ಮುಸಲ್ಮಾನರಾಗಬಹುದೆಂಬ ಹೆದರಿಕೆಯಿಂದ ತಮ್ಮ ರಾಜರನ್ನು ಕೇಳಿದಾಗ ನೀವು ನನ್ನ ಸ್ನೇಹಿತರೂ, ಸಾಮಂತರೂ ಆಗಿರುವ ಇಕ್ಕೇರಿ ವಂಶದ ರಾಜರಲ್ಲಿಗೆ ಹೋಗಿ ನೆಲೆಸಿರೆಂದು ಹೇಳಿದ ಪ್ರಕಾರ ಈಗಿನ ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಯ ಇಕ್ಕೇರಿ ರಾಜ್ಯಕ್ಕೆ ಬಂದು ನೆಲೆಸಿದಾಗ ಈ ಗೌಡರಿಗೆ ಗ್ರಹಚಾರ ಕೆಟ್ಟದಾಗಿ ಅಲ್ಲಿ ಬಲಿಷ್ಠ ಜನಾಂಗವಾದ ಲಿಂಗಾಯುತರು ಇವರನ್ನು ಲಿಂಗಾಯಿತರಾಗಬೇಕೆಂದು ಬಲತ್ಕರಿಸಿದಾಗ ಇಕ್ಕೇರಿ ರಾಜರ ನಿರ್ದೇಶನದ ಮೇರೆಗೆ ಹಾಸನದ ಐಗೂರು ಸೀಮೆಗೆ ಬಂದು ನೆಲೆಸಿ ಸ್ವಲ್ಪ ಸಮಯವಿದ್ದು, ಅಲ್ಲಿಯು ಸರಿ ಬಾರದ ಕಾರಣ ಇಕ್ಕೇರಿ ರಾಜರನ್ನು ಕೇಳಿಕೊಂಡಾಗ ಈಗಿನ ದಕ್ಷಿಣ ಕನ್ನಡ ಜಿಲ್ಲೆ ಇಕ್ಕೇರಿ ವಂಶದ ರಾಜರ ಅಧೀನದಲ್ಲಿದ್ದುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಭಾಗದಲ್ಲಿ ಹವೀಕ ಬ್ರಾಹ್ಮಣರು ಈಗಾಗಲೇ ನೆಲೆಸಿದ್ದರಿಂದ ಕೃಷಿಯಲ್ಲಿ ಹಾಗೂ ದನಗಳನ್ನು ಸಾಕುವುದರಲ್ಲಿ ನಿಪುಣರಾದ ಗೌಡರನ್ನು ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟಕ್ಕೆ ಒತ್ತಾಗಿರುವ ಸುಳ್ಯ, ಪುತ್ತೂರು, ಬೆಳ್ತಂಗಡಿ ಹಾಗೂ ಬಂಟ್ವಾಳ ತಾಲೂಕುಗಳಲ್ಲಿ ನೆಲಸುವಂತೆ ಮಾಡಿದರು. ಕೆಲವು ಸಮಯದ ನಂತರ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದಿಂದ ಪಾಣೆಮಂಗಳೂರಿನವರೆಗೂ ಬೆಳ್ತಂಗಡಿ ಸುಬ್ರಮಣ್ಯದವರೆಗೂ ನಂತರ ಕೊಡಗು ರಾಜರ ಸ್ವಾಧೀನಕ್ಕೆ ಬಂತು.

ಗೌಡರು ದಕ್ಷಿಣ ಕನ್ನಡ ಜಿಲ್ಲೆಗೆ ಸಾಧಾರಣ 1600ರಲ್ಲಿ ಬಂದಿರಬಹುದೆಂದು ಊಹಿಸಲಾಗಿದೆ. ಇದನ್ನು ನಮ್ಮ ಸಂಶೋಧಕರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಕಟ್ಟೆಮನೆಗಳ ಅಥವಾ ಇತರ ಕುಟುಂಬದ ನಿರೂಪಯಾ ತಾಮ್ರದ ಪತ್ರ ಮುಂತಾದವುಗಳನ್ನು ಪರಿಶೀಲಿಸಿದರೆ ದೃಢವಾದ ಸಮಯವನ್ನು ಕಂಡು ಹಿಡಿಯಬಹುದು. ಅದೂ ಅಲ್ಲದೆ ಇಕ್ಕೇರಿ ವಂಶದ ರಾಜಮನೆತನದ ಚರಿತ್ರೆ ಹಾಗೂ ಇಕ್ಕೇರಿ ರಾಜ್ಯಕ್ಕೆ ಸೇರಿದ ಊರುಗಳು ಹಾಗೂ ಇಕ್ಕೇರಿ (ನಾಯಕರು) ರಾಜರು ಯಾವುದೇ ಆಸ್ತಿಗಳನ್ನು ತನ್ನ ಪ್ರಜೆಗಳಿಗೆ ಕೊಟ್ಟ ವಿಷಯವನ್ನು ಪರಿಶೀಲಿಸಿದರೆ ಗೌಡರ ಇತಿಹಾಸಕ್ಕೆ ಹೊಸ ಬೆಳಕನ್ನು ಚೆಲ್ಲಿದಂತಾಗುವುದು ಖಂಡಿತ.

ಈ ರೀತಿ ಗೌಡರು ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ನೆಲೆಸಿದ ಸ್ವಲ್ಪ ಸಮಯದಲ್ಲಿ ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ ಗೌಡ ಪ್ರದೇಶದಲ್ಲಿ ಹೆಚ್ಚಿನ ಭಾಗ 1834ರ ಹಿಂದೆ ಕೊಡಗು ರಾಜ್ಯಕ್ಕೆ ಸೇರಿರುವುದು ಚಾರಿತ್ರಿಕ ಸತ್ಯ. ಇತ್ತ ಕೊಡಗಿನಲ್ಲಿ ಇಕ್ಕೇರಿ ವಂಶದವರೇ ಆದ ವೀರರಾಜರಿಂದ ಸ್ಥಾಪಿತವಾದ ಹಾಲೇರಿ ವಂಶದ ರಾಜ್ಯಭಾರವು 1600ನೇ ಇಸವಿಯಿಂದ ಪ್ರಾರಂಭವಾಗಿ 1785ರಲ್ಲಿ ಟಿಪ್ಪು ಸುಲ್ತಾನನು ಕೊಡಗಿಗೆ ದೊಡ್ಡ ಸೈನ್ಯವನ್ನು ತಂದು 80,000ಕೊಡಗರನ್ನು (ಕೊಡಗು ನಿವಾಸಿ) ಸೆರೆ ಹಿಡಿದು ಶ್ರೀರಂಗಪಟ್ಟಣಕ್ಕೆ ಕರೆದೊಯ್ದು ಅವರನ್ನೆಲ್ಲಾ ಮುಸಲ್ಮಾನರನ್ನಾಗಿ ಪರಿವರ್ತಿಸಿದ್ದುದರಿಂದ ಈ ರೀತಿ ಕರೆದುಕೊಂಡು ಹೋದ ಸ್ಥಳಗಳಾದ ನಾಲ್ಕುನಾಡು, ಪಾಡಿನಾಲ್ಕು ನಾಡು, ಕಡಿಯತ್ ನಾಡು, ತಾವೂ ನಾಡು, ಕುಯ್ಯಂಗೇರಿ, ಕಾಂತೂರು- ಮೂರ್ನಾಡು, ಕಗ್ಗೋಡುನಾಡು, ಬೇಂಗ್ ನಾಡು, ಹೊರ ಮಲೆ ನಾಡು, ನೂರೊಕ್ಲು ನಾಡು ಮುಂತಾದ ಸ್ಥಳಗಳಲ್ಲಿ ಜನರೇ ಇಲ್ಲದೆ ಭೂಮಿ ಪಾಳು ಬಿದ್ದು ಮಲೇರಿಯಾದ ಕಾಟ ಹೆಚ್ಚಾಗಿ 1788ರಲ್ಲಿ ಟಿಪ್ಪು ಸುಲ್ತಾನನು ಕೊಡಗಿನ ರಾಜನಾದ ದೊಡ್ಡ ವೀರರಾಜೇಂದ್ರ ಒಡೆಯನನ್ನು ಪಿರಿಯ ಪಟ್ಟಣ ಕೋಟೆಯಲ್ಲಿ ಬಂಧಿಸಿಟ್ಟದನ್ನು ತಪ್ಪಿಸಿಕೊಂಡು ಪುನಃ ರಾಜ್ಯವನ್ನು ಗೆದ್ದು ಕೊಂಡ ನಂತರ ರಾಜ್ಯದಲ್ಲಿ ಪಾಳು ಬಿದ್ದ ಭೂಮಿಯನ್ನು ರೂಢಿಸಲು 1799ರಿಂದ 1808ರವರೆಗೆ ಕನ್ನಡ ಜಿಲ್ಲೆಯಿಂದ ಒಂದೊಂದು ಗ್ರಾಮದಿಂದ 15ಜನರಂತೆ ಜನರನ್ನು ಕರೆ ತಂದು ಅವರಿಗೆ ಜಮ್ಮ ಭೂಮಿಯನ್ನು ಕೊಟ್ಟು ನೆಲೆ ನಿಲ್ಲಿಸಿ ಮೊತ್ತ ಮೊದಲು 1799ರಲ್ಲಿ ಈ ರೀತಿ ಆಮಂತ್ರಿಸಿ ಕರೆ ತಂದವರಲ್ಲಿ ಹೆಚ್ಚಿನವರು ಗೌಡರಾಗಿದ್ದರು. ಇವರನ್ನು ತೊಡಿಕಾನಕ್ಕಾಗಿ ಭಾಗಮಂಡಲದ ಮಾರ್ಗವಾಗಿ ದೇವಟು ಪರಂಬಿದಲ್ಲಿ ಸೇರಿಸಿ ಅಲ್ಲಿದ್ದ ಉಳಿದಕೊಡವರನ್ನು ಇನ್ನಿತರ ಜನರನ್ನು ಬರಮಾಡಿ ಪರಂಬಿನ ಸುತ್ತಲೂ ಕೂರಿಸಿ ದಕ್ಷಿಣ ಕನ್ನಡ ಜಿಲ್ಲೆಯಿಂದ ಬಂದವರಿಗೆಲ್ಲಾ ಕುಪ್ಪಸ ದಟ್ಟಿ ರುಮಾಲೆಯನ್ನು ಕೊಟ್ಟು ಇನ್ನು ಮುಂದೆ ಮಡಿಕೇರಿ ಅರಮನೆಗೆ ಬರುವಾಗ ಕುಪ್ಪಸ, ದಟ್ಟಿ, ರುಮಾಲೆ ಹಾಕಿ ಬರಬೇಕೆಂದು ಬಂದವರಿಗೆ ಜಮ್ಮ ಭೂಮಿಯನ್ನು ಕೊಟ್ಟು ನಿರೂಪವನ್ನು ಕೊಟ್ಟರು. ಎಲ್ಲರೂ ಅಣ್ಣ ತಮ್ಮಂದಿರಂತೆ ಸೌಹಾರ್ದದಿಂದ ನಡೆದು ಕೊಳ್ಳಬೇಕೆಂದು ತಾಕೀತು ಮಾಡಿದರು. ಅಂದು 1834ರ ಹಿಂದೆ ವಿಶಾಲ ಕೊಡಗಿನ ವ್ಯಾಪ್ತಿಯು ಪಶ್ಚಿಮಕ್ಕೆ ಈಗಿನ ದಕ್ಷಿಣ ಜಿಲ್ಲೆಯ ಪಾಣೆ ಮಂಗಳೂರಿನತನಕವೂ, ಪೂರ್ವಕ್ಕೆ ಪೆರಿಯಾ ಪಟ್ಟಣ ತಾಲೂಕು, ಉತ್ತರಕ್ಕೆ ಅರಕಲಗೋಡು ತಾಲೂಕು, ಮಂಜರಾಬಾದ್ ಮತ್ತು ಐಗೂರು ಸೀಮೆಗಳು ಸೇರಿದ್ದವು. ಈ ಪ್ರದೇಶಗಳು ವಿಶಾಲ ಕೊಡಗಿನ ವ್ಯಾಪ್ತಿಯಲ್ಲಿಯೇ ಇದ್ದವೆಂದು ತಿಳಿಯುವುದು.

ವರ್ಷಂಪ್ರತಿ ಭೂ ಕಂದಾಯವನ್ನು ಅರಮನೆಗೆ ಸಲ್ಲಿಸಬೇಕೆಂದು ಪ್ರತಿಯೊಬ್ಬ ಜಮ್ಮ ರೈತರು ರಾಜನ ಕಾರ್ಯಗಳಲ್ಲಿ ಸಹಾಯಕರಾಗಬೇಕೆಂದು ಅರಮನೆಗೆ ಬರುವಾಗ ಕುಪ್ಪಸ ದಟ್ಟಿ ಹಾಕಿ ಬರಬೇಕೆಂದು ತಾಕೀತು ಮಾಡಲಾಗಿತ್ತು.ಆ ದಿನ ಅಲ್ಲಿಗೆ ಬಂದವರಿಗೆಲ್ಲಾ ಕೈಲ್ ಮುಹೂರ್ತ ಹಬ್ಬದ ಅಡುಗೆಯನ್ನು ಬಡಿಸಿದರು

ಎಂಬುದಾಗಿ ನನ್ನ ಮನೆಯ ಹಿರಿಯರು ಹೇಳುತ್ತಿದ್ದರು.

ಆದ್ದರಿಂದ ನಮ್ಮ ಹಿರಿಯರು ತಮ್ಮ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಸಿಂಧೂ ನದಿ ಕಣಿವೆಯಿಂದ ಹಿಡಿದು ಗೌಡ ದೇಶ, (ಬಂಗಾಳ) ದೇವಗಿರಿ, ವಿಜಯನಗರ, ಇಕ್ಕೇರಿ, ಐಗೂರು, ಕನ್ನಡ ಜಿಲ್ಲೆ, ಕೊಡಗು ಪ್ರದೇಶಗಳಿಗೆ ಪಸರಿಸಿ ಬಂದರು. ಓಡೋಡಿ ಹೋಗಿರುವ ತಮ್ಮ ಸಂಸ್ಕೃತಿಯನ್ನು ಉಳಿಸಿಕೊಂಡು ಗೌಡರ ಸಂಸ್ಕೃತಿ ಈಗ ಸುಮಾರು 50-60 ವರ್ಷಗಳಿಂದ ಪಾಶ್ಚಾತ್ಯ ನಾಗರೀಕತೆಯ ಪ್ರಭಾವದಿಂದಲೋ ಅಥವಾ ವಿದ್ಯಾವಂತರ ನಿರ್ಲಕ್ಷ್ಯದ ಕಾರಣವೋ ಮುಕ್ಕಾಲು ಭಾಗ ಕೆಟ್ಟು ಹೋಗಿದೆ ಎನ್ನಬಹುದು. ನಿಜವಾಗಿಯೂ ಗೌಡರ ಪದ್ಧತಿಗಳು ಹಲವಾರು ಶತಮಾನಗಳಿಂದ ವಿವಿಧ ಪ್ರದೇಶಗಳ ಜನರ ಮಿಳಿತದಿಂದ ಮಾರ್ಪಾಡಾದ ಸುವ್ಯವಸ್ಥೆಯ ಸಂಸ್ಕೃತಿ. ಬೇರೆ ಜಾತಿ ಪದ್ಧತಿಗಿಂತಲೂ ಯಾವ ರೀತಿಯಲ್ಲಿ ಕಡಿಮೆ ಇಲ್ಲ. ಹಿಂದೂ ಮತದ ವಿವಾಹ ಪದ್ಧತಿ ಹುಟ್ಟಿನಿಂದ ಸಾವಿನವರೆಗಿರುವ ಎಲ್ಲಾ ಹಂತದ ಪದ್ಧತಿಗಳನ್ನು ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಶಂಕರಾಚಾರ್ಯರ ಮಾರ್ಗದರ್ಶನದಲ್ಲಿ ಅವರು ಕಾಲ ಕಾಲಕ್ಕೆ ಕೊಟ್ಟ ನಿರೂಪಗಳ ಪ್ರಕಾರ ಕ್ರಮಬದ್ಧವಾಗಿಯೂ, ವೈಜ್ಞಾನಿಕವಾಗಿ ನಡೆದುಕೊಂಡು ಬಂದ ಪದ್ಧತಿಗಳು ಶಾಸ್ತ್ರದ ಸಮಗಟ್ಟುಗಳು ಧರ್ಮವೆಂಬ ಮಧುರ ಲೇಪನದಲ್ಲಿ ಗಂಡು ಹೆಣ್ಣಿನ ಮಧುರ ಸಂಬಂಧ, ಆರೋಗ್ಯ ಕಾಪಾಡಲು ಬೇಕಾದ ಕಟ್ಟು ಪಾಡುಗಳು, ಗುರು ಹಿರಿಯರಿಗೆ, ತಂದೆ ತಾಯಿಗಳಿಗೆ, ಮಾವ ಅತ್ತೆಯರಿಗೆ, ಪ್ರೀತಿ ಗೌರವ ಕಲಿಸುವ ಮಾತುಗಳಿಂದ ಕೂಡಿದ ಸೋಬಾನೆಗಳು ಹಿಂದೂ ವೈದಿಕ ಧರ್ಮದ ಹಿಂದೂ ಧರ್ಮ ಶಾಸ್ತ್ರಜ್ಞರ ಋಷಿಗಳ ಸೂತ್ರಗಳನ್ನು ಈ ಪದ್ಧತಿಗಳಲ್ಲಿ ಅಳವಡಿಸಿದ ಮಾರ್ಗದರ್ಶನ ಮಾಡಿದ ನಮ್ಮ ಗುರುಗಳಾದ ಶ್ರೀ ಶ್ರೀ ಶಂಕರಚಾರ್ಯರಿಗೆ ಗೌಡ ಸಮಾಜ ಚಿರಋಣಿಯಾಗಬೇಕಿದೆ.

ಈ ರೀತಿಯ ಅವನತಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಾ ಹೋದರೆ ನಮ್ಮ ಮುಂದಿನ ಪೀಳಿಗೆ ದಿಕ್ಕುಗೆಟ್ಟು ತಾವು ಯಾವ ರೀತಿಯ ಪದ್ಧತಿಗಳನ್ನು ಅನುಸರಿಸಬೇಕೆಂಬ ಪ್ರಶ್ನೆ ಅವರಲ್ಲಿ ಉದ್ಭವಿಸುವುದರಲ್ಲಿ ಯಾವ ಸಂಶಯವೂ ಇಲ್ಲ.

ಇದಕ್ಕೆ ಜನಾಂಗದ ಹಿತೈಷಿಗಳು, ಮುಖಂಡರು ಸಮಾಜಗಳು ಹಾಗೂ ಎಲ್ಲಾ ಇತರ ಸಂಸ್ಥೆಗಳು ಮನಸಾ ವಾಚಾ ಪ್ರಯತ್ನ ಪಡಬೇಕಾಗಿದೆ.

ಗೌಡರ ಚರಿತ್ರೆಯಲ್ಲಿ ಮುಖ್ಯ ಘಟನೆಗಳ ಪಟ್ಟಿ

1. ದ್ರಾವಿಡ ಜನಾಂಗದವರು ಭಾರತಕ್ಕೆ ವಲಸೆ ಬಂದದ್ದು- ಕ್ರಿ. ಪೂ. 5000ರಿಂದ 4ಸಾವಿರ ವರ್ಷಗಳ ಅವಧಿಯಲ್ಲಿ.
2. ಆರ್ಯರು ಭಾರತಕ್ಕೆ ಬಂದ ಸಮಯ - ಕ್ರಿ.ಪೂ. 3000ದಿಂದ 2000ವರ್ಷ.
3. ದ್ರಾವಿಡರು ಸಿಂಧೂ ನದಿ ಕಣಿವೆಯಲ್ಲಿ ಉನ್ನತ ನಾಗರೀಕತೆಯನ್ನು ಹೊಂದಿದ ಸಮಯ -ಕ್ರಿ.ಪೂ. 4000ದಿಂದ 3000ವರ್ಷದವರೆಗೆ.
4. ತರ್ವಸರು ಸೇರಿದಂತೆ ದ್ರಾವಿಡರು ಯಮುನಾ ನದಿ ಬಯಲಿಗೆ ಸಿಂಧೂ ನದಿ ಬಯಲಿನಿಂದ ವಲಸೆ ಬಂದದ್ದು-ಕ್ರಿ.ಪೂ. 3000ರಿಂದ 2000ವರ್ಷದವರೆಗೆ.

5. ತರ್ವಸರು ಸೇರಿದಂತೆ ದ್ರಾವಿಡರು ಯಮುನಾ ನದಿ ಬಯಲಿನಿಂದ ಗಂಗಾ ನದಿ ಬಯಲಿಗೆ ವಲಸೆ ಬಂದ ಸಮಯ- ಕ್ರಿ.ಪೂ. 2000ವರ್ಷದಿಂದ 1000ವರ್ಷದವರೆಗೆ.

6. ತರ್ವಸರು ದ್ರಾವಿಡರು ಸೇರಿದಂತೆ ಗಂಗಾನದಿ ತೀರದಿಂದ(ಬಂಗಾಳ) ಗೌಡ ದೇಶಕ್ಕೆ ವಲಸೆ ಬಂದ ಸಮಯ -ಕ್ರಿ. ಪೂ. 1000ದಿಂದ ಕ್ರಿ. ಶ.500ರವರೆಗೆ.

7. ತರ್ವಸರು ಗೌಡ ದೇಶಕ್ಕೆ ಬಂದ ಮೇಲೆ ಗೌಡ ಎಂಬ ಹೆಸರಿನಿಂದ ಕರೆಯಲ್ಪಟ್ಟರು. -ಕ್ರಿ. ಶ. 500ರಿಂದ 1000ರವರೆಗೆ.

8. ಗೌಡ ರಾಜ್ಯದ ಶಶಾಂಕನು ಪ್ರಭಾಕರವರ್ಧನನ್ನು ಕೊಂದದ್ದು -ಕ್ರಿ. ಶ. 605.

9. ಹರ್ಷವರ್ಧನನು ಗೌಡ ರಾಜ ಶಶಾಂಕನನ್ನು ಕೊಂದದ್ದು-ಕ್ರಿ. ಶ. 640.

10. ಗೌಡರು ಬೌದ್ಧರ ಮತಾಂತರದ ಹಿಂಸೆಯನ್ನು ತಾಳಲಾರದೆ ದೇವಗಿರಿಗೆ ವಲಸೆ ಹೋದ ಸಮಯ-ಕ್ರಿ.ಶ. 700ರಿಂದ 1000ರವರೆಗೆ.

11. ದೇವಗಿರಿಯಲ್ಲಿ ಹಾಲು ಸಂಬಂಧದ ರಾಜರ ಆಶ್ರಯ ಪಡೆದದ್ದು-ಕ್ರಿ. ಶ. 1000ದಿಂದ 1320-27ರವರೆಗೆ.

12. ರಾಜ ರಾಮಚಂದ್ರನನ್ನು ಮಹಮದ್‌ಬಿನ್ ತೊಗಲಕ್‌ನ ಸೇನಾನಿ ಮಲ್ಲಿಕಾಫರನು ಕೊಂದು ಹಾಕಿದ್ದು- ಕ್ರಿ.ಶ. 1327.

13. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯನ್ನು ಸಂಗಮರು ಮಾಡಿದ್ದು-ಕ್ರಿ. ಶ. 1300.

14. ಸಂಗಮ ವಂಶದ ಹಕ್ಕನ ರಾಜ್ಯಭಾರ-ಕ್ರಿ.ಶ. 1350.

15. ರಾಮಚಂದ್ರ ರಾಜನು ಸತ್ತ ನಂತರ ಗೌಡರು ತಾವು ಮುಸಲ್ಮಾನರಾಗಬಹುದೆಂಬ ಹೆದರಿಕೆಯಿಂದ- ಕ್ರಿ.ಶ. 1356.

16. ವಿಜಯನಗರದ ಕಡೆ ಹಾಲು ಸಂಬಂಧದ ರಾಜರಾದ ಹಕ್ಕನ ಆಶ್ರಯ- ಕ್ರಿ.ಶ. 1327ರಿಂದ 1400ರವರೆಗೆ.

17. ತಾಳಿಕೋಟೆ ಯುದ್ಧದಿಂದ ವಿಜಯನಗರದ ಪತನ -ಕ್ರಿ. ಶ. 1565.

18. ತಾಳಿಕೋಟೆ ಪತನದಿಂದ ಗೌಡರು ಅವರ ಮತವನ್ನು ಮಹಮದೀಯರು ಕೆಡಿಸಬಹುದೆಂದು ಹೆದರಿಕೆಯಿಂದ ಇಕ್ಕೇರಿ ರಾಜ್ಯಕ್ಕೆ ವಲಸೆ ಬಂದದ್ದು-ಕ್ರಿ.ಶ. 1565ರಿಂದ 1580ವರೆಗೆ.

19. ಗೌಡರು ಇಕ್ಕೇರಿಯಿಂದ ತಾವು ಲಿಂಗಾಯಿತರ ಪ್ರಭಾವಕ್ಕೆ ಬಿದ್ದು ಲಿಂಗಾಯಿತರಾಗಬಹುದೆಂಬ ಭಯದಿಂದ ಇಕ್ಕೇರಿಯಿಂದ ಐಗೂರಿಗಾಗಿ ಕನ್ನಡ ಜಿಲ್ಲೆಗೆ ಬಂದದ್ದು-ಕ್ರಿ.ಶ. 1600ರಿಂದ 1650ರವರೆಗೆ.

20. ಕೊಡಗು ನಾಶವಾದಾಗ ಗೌಡರನ್ನು ದೊಡ್ಡ ವೀರರಾಜೇಂದ್ರ ಒಡೆಯರು ಕೊಡಗಿಗೆ ಆಮಂತ್ರಿಸಿದ್ದು - ಕ್ರಿ.ಶ. 1799.

ಗ್ರಂಥ ಋಣ

1. ಕರ್ನಾಟಕ ಪೂರ್ವೇತಿಹಾಸ- ಡಾ. ಶಾಂಭಾಜೋಷಿ

2. Cast and Tribe in South India- 2nd year texts on T.K. Rangachari
3. Indus Vally civilization- prof. Ponnu Swamy
4. ಹಾಲು ಒಕ್ಕಲು ಮಕ್ಕಳು ಯಾನೆ ಗೌಡರ ನಿರೂಪ- ಸಂಗ್ರಹ: ಕಟ್ಟೆಮನೆ, ಕೂಜುಗೋಡು ಪದ್ಮಯ್ಯ ಗೌಡರು.
5. Ancient History of India -Prof. Neelakanta Shastri.
6. Gazetes of Karnataka State - Depended of Karnataka Gazeteer
7. ಕೊಡಗಿನಲ್ಲಿ ಗೌಡ ಜನಾಂಗದವರು -ದಿ.ಡಿ.ಯನ್. ಕೃಷ್ಣಯ್ಯ.
8. ಹಿರಿಯರು ಹೇಳಿದ ಮಾತುಗಳು.

ಕವನ

ವರದಕ್ಷಿಣೆ

ಹೃದಯವೆಂಬ ಮಂಟಪದಲ್ಲಿ
ಕಂಡಳು ಅವಳ ದೇವರನ್ನು
ಪ್ರೀತಿಯೆಂಬ ಹೂವಲ್ಲಿ
ಆರಾಧಿಸಿ ಪೂಜಿಸಿದಳು.
ಪ್ರೀತಿಯೆಂಬ ಬೆಸುಗೆಯಲ್ಲಿ
ಜೊತೆಯಾಗಿ ಮೈ ಮರೆತಳು,
ಪ್ರೀತಿಯೆಂಬ ಹೊನಲು
ಹಣವೆಂಬ ತಿರುಳು,
ಒಲಿದನು ಅವನು ವರದಕ್ಷಿಣೆಗಾಗಿ
ಅವನ್ನೊಪ್ಪಿದನು ಹಣಕ್ಕಾಗಿ,
ಅವಳು ವಂಚಿತಳಾದಳು ಪ್ರೀತಿಯಿಂದ
ದೂರವಾದನು ಅವಳಿಂದ.
ದಿನವಿಡಿ ಪರಿತಪಿಸುವಳು
ತನ್ನನ್ನು ಪ್ರೀತಿಸುವವರಿಗಾಗಿ,
ಮುದುಡಿ ಕುಳಿತಿರುವಳು
ಪ್ರಿಯತಮನಿಗಾಗಿ ಕಡಲ ತೀರದಲಿ.
ಉದಯಾಸ್ತವಾಯ್ತು
ಕಡಲ ಮರೆಯಂಚಿನಲ್ಲಿ,
ಕನಸಾಗಿ ಉಳಿಯಿತು
ಪ್ರೀತಿಯೆಂಬ ಕುರುಡು.

-ಆಜಡ್ಕ ರಾಣಿ ಬಾಲಕೃಷ್ಣ,
ಕುಶಾಲನಗರ.

◆◆◆◆◆

ಗೌಡ ಗಾರುಡಿಗ-ಶ್ರೀ ಕುರುಂಜಿ



- ಶ್ರೀಮತಿ ಸ್ವರ್ಣ ಕಿಶೋರ್, ತಳೂರು.
ಉಪನ್ಯಾಸಕಿ, ಅರ್ಥಶಾಸ್ತ್ರ ವಿಭಾಗ,
ಶ್ರೀ ಶಾರದಾ ಪ.ಪೂ. ಮಹಿಳಾ ಕಾಲೇಜು, ಸುಳ್ಯ ದ.ಕ.

"**ಸಾ**ಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಮಗು, ಆದರೆ ಸಾಧಿಸುವ ಛಲ ಮನುಷ್ಯನಿಗಿರಬೇಕು. ತಾನು ಹಿಡಿದ ಕಾರ್ಯದಲ್ಲಿ ಅಚಲವಾದ ನಂಬಿಕೆ, ದೃಢ ಮನಸ್ಸು, ಸತತ ಪ್ರಯತ್ನ ಅತೀ ಅವಶ್ಯ" ಇದು ರನ್ನ ಗುರು ಅಜಿತ, ಸೇನಾಚಾರ್ಯರ ನುಡಿಮುತ್ತು. ಆ ಗುರು ನುಡಿ ಇವರು ಬಲ್ಲರೋ ತಿಳಿಯದು. ಆದರೆ ಛಲವನ್ನೇ ಉಸಿರಾಗಿಸಿಕೊಂಡು ನಿರಂತರ ಪ್ರಯತ್ನದ ಮೂಲಕ ತನ್ನೆಲ್ಲಾ ಕನಸುಗಳನ್ನು ಸಾಕ್ಷಾತ್ಕಾರಗೊಳಿಸಿ ಸಾಧನೆಯ ಶಿಖರವೇರಿ ವಿರಾಜಮಾನರಾಗಿದ್ದಾರೆ ಇವರು. ಯಾರೆಂಬ ಕುತೂಹಲವೇ? ಗುರುನುಡಿಗೆ ಅನ್ವರ್ಥವೆಂಬಂತೆ ತನ್ನ ಪ್ರಯತ್ನ ಮಾತ್ರದಿಂದ ಸಕಲವನ್ನೂ ಸಾಧಿಸಿ ಮಾನವ ಕುಲಕೋಟಿಗೆ ಮಾದರಿಯಾಗಿರುವ ಇವರೇ ಗೌಡಕುಲಜ್ಯೋತಿ ಶ್ರೀ ಕುರುಂಜಿ ವೆಂಕಟ್ರಮಣ ಗೌಡರು. ಅಸಾಧ್ಯವೆಂದದ್ದೆಲ್ಲವನ್ನು ತನ್ನ ಅಚಲ ನಂಬಿಕೆ, ದೃಢ ಮನಸ್ಸು, ಸತತ ಪ್ರಯತ್ನದಿಂದ ಸಾಧ್ಯವಾಗಿಸಿದ 'ಛಲದಂಕಮಲ್ಲ.ದಿಟವಾಗಿಯೂ ಇವರೊಬ್ಬರು 'ಗಾರುಡಿಗ' ಗೌಡ ಜನಾಂಗಕ್ಕೊಂದು ಮುಕುಟಮಣಿ.

ಅನಾಕಾರವನ್ನು ಆಕಾರದಲ್ಲಿ ಚಿತ್ರಿಸುವುದು ಕಷ್ಟ. ಬಾನೆತ್ತರಕ್ಕೆ ಬೆಳೆದ ವ್ಯಕ್ತಿತ್ವವನ್ನು ಶಬ್ದಗಳಲ್ಲಿ ಹಿಡಿದಿಡುವುದು ಅಷ್ಟೇ ಶ್ರಮದಾಯಕ ಹಾಗೂ ಅ ಪರಿಪೂರ್ಣ ಕೂಡಾ. ಕುರುಂಜಿಯವರ ಜೀವನ ಹಾಗೂ ಒಟ್ಟು ಸಾಧನೆಗಳನ್ನು ಬರಹದಲ್ಲಿ ಬಂಧಿಸಿಡುವುದು ಕಷ್ಟಸಾಧ್ಯ. ಕೇವಲ ಪಕ್ಷಿನೋಟವನ್ನ ನೀಡುವ ಪ್ರಯತ್ನವಷ್ಟೇ ಈ ಲೇಖನ. ವೆಂಕಟ್ರಮಣ ಗೌಡರು ಮಲೆನಾಡಿನ ತೀರಾ ಹಿಂದುಳಿದ ಸುಳ್ಯ ತಾಲೂಕಿನ ಕುರುಂಜಿ ಮನೆತನದವರು ತಂದೆ ಶಿಕ್ಷಕ, ಕಲಾಪ್ರೇಮಿ ಶ್ರೀ ಮಹಾಲಿಂಗ ಮಾಸ್ತರ್, ತಾಯಿ ಶ್ರೀಮತಿ ಲಕ್ಷ್ಮೀ ಇವರ ಸುಪುತ್ರನಾಗಿ ಜನಿಸಿದ ಗೌಡರು ಚಿನ್ನದ ಚಮಚದೊಂದಿಗೆ ಜನಿಸಿದವರಲ್ಲವಾದರೂ ಎಳವೆಯಿಂದಲೇ ಛಲವನ್ನು ರೂಢಿಸಿಕೊಂಡವರು. ಆರ್ಥಿಕ ಬಡತನವಿದ್ದರೂ ಬುದ್ಧಿವಂತಿಕೆಗೆ ಇವರಲ್ಲಿ ಕೊರತೆಯಿರಲಿಲ್ಲ. ಛಲ ಮತ್ತು ಬುದ್ಧಿವಂತಿಕೆಯ ಸಮಾನ ಮಿಳಿತ ಅಸಾಧ್ಯವೆಂಬ ಪದವನ್ನು ಅವರಿಂದ ಬಾಲ್ಯದಿಂದಲೇ ದೂರಮಾಡಿದ್ದವು.

ಬಾಲ್ಯದಲ್ಲಿ ಆರ್ಥಿಕ ಕೊರತೆಯನ್ನು ನೀಗಿಸಿಕೊಳ್ಳುವುದೇ ಕುರುಂಜಿಯವರ ಹಂಬಲವಾಗಿತ್ತು. ಆತ್ಮವಿಶ್ವಾಸದ ಸೆಲೆ, ಕಠಿಣ ಪರಿಶ್ರಮಿಯಾಗಿದ್ದ ಅವರಿಗೆ ಗುರಿ ತಲುಪಲು ಬಹುಕಾಲ ಬೇಕಾಗಲಿಲ್ಲ. ಒಂದೆಡೆ ಮನೆಯ ಸುತ್ತಮುತ್ತಲ ಬರಡು ಭೂಮಿ ಈ ಕರ್ಮಯೋಗಿಯ ದುಡಿಮೆಯಿಂದ ಕಂಗು, ತೆಂಗಿನ ತೋಟವಾಗಿ ಕಂಗೊಳಿಸಿ ಫಲ ನೀಡಲಾರಂಭಿಸಿದರೆ, ಇನ್ನೊಂದೆಡೆ ವ್ಯಾಪಾರ ವೃತ್ತಿ ಕೂಡಾ ಅವರ ಬಯಕೆಗೆ ಸಕಾರಾತ್ಮಕವಾಗಿಯೇ ಸ್ಪಂದಿಸಿತು, ಜತೆಗೆ ಮಿತವ್ಯಯ ಹಾಗೂ ಉಳಿತಾಯವೆಂಬ ಅವರ ಆರ್ಥಿಕ ನೀತಿಯಿಂದಾಗಿ ಅವರು ಗಳಿಸಿದುದೆಲ್ಲವೂ ದುಪ್ಪಟ್ಟು, ನೂರು ಪಟ್ಟಾಗಿ ಆರಂಭಿಕ ಗುರಿ ಈಡೇರಿದಾಗ ಸಮಾಜಸೇವೆಯ ಹಂಬಲ ಅವರಲ್ಲಿ ಚಿಗುರೊಡೆದದ್ದು ನಮ್ಮ ಭಾಗ್ಯವಲ್ಲದೆ ಮತ್ತೇನು?

" ಈ ಭೂಮಿಗೆ ಬರುವಾಗ ನಾವೇನನ್ನೂ ತರುವುದಿಲ್ಲ. ಈ ಭೂಮಿಯಿಂದ ನಿರ್ಗಮಿಸಿದಾಗ ಏನನ್ನೂ

ಕೊಂಡೊಯ್ಯಲಾಗುವುದಿಲ್ಲ ಆದ್ದರಿಂದ ಎಲ್ಲಿಯವರೆಗೆ ಇಲ್ಲಿರುತ್ತೇವೆಯೋ ಅಲ್ಲಿಯವರೆಗೆ ಈ ಸಮಾಜದ ಒಳಿತಿಗಾಗಿ ಏನನ್ನಾದರೂ ಮಾಡಬೇಕು" ಇದು ಕುರುಂಜಿಯವರ ಜೀವನ ಧ್ಯೇಯ. ತನ್ನ ಶ್ರಮದ ಗಳಿಕೆ ಕೇವಲ ಸ್ವಾರ್ಥಕ್ಕೆ ಸೀಮಿತವಾಗದೇ ಸಮಷ್ಟಿ ಏಳಿಗೆಗೆ ಬಳಕೆಯಾಗಬೇಕೆಂಬುದೇ ಅವರ ನಿಲುವು. "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆದವರಂತೆ ಕಾಣಿರೋ, ಹರಿಯ ಕರುಣೆಯೊಳಾದ ಭಾಗ್ಯವ ಹರಿಸಮರ್ಪಣೆ ಮಾಡಿರೋ, ಸಮಾಜದಿಂದ ಪಡೆದುದನ್ನು ಸಮಾಜೋನ್ನತಿಗೆ ವ್ಯಯಿಸುತ್ತಾ ಧನ್ಯತೆಯನ್ನು ಅನುಭವಿಸುವ ಶ್ರೀ ಕುರುಂಜಿಯವರ ಪರಿ ಅಪೂರ್ವ.

ಶ್ರೀಯುತರ ಸಮಾಜಸೇವಾ ಕೈಂಕರ್ಯದ ಆರಂಭಿಕ ಆಯ್ಕೆ ರಾಜಕೀಯ ಕ್ಷೇತ್ರವಾದರೂ, ಅದು ನೆಲೆಗೊಂಡದ್ದು, ಶಿಕ್ಷಣ ಕ್ಷೇತ್ರದಲ್ಲಿ. ರಾಜಕೀಯ ಧುರೀಣನಾಗಿ ಸುಳ್ಯವನ್ನು ತಾಲೂಕಾಗಿ ಪರಿವರ್ತಿಸುವಲ್ಲಿ, ಇತರ ಬೇಡಿಕೆಗಳಾಗಿದ್ದ ಬಸ್ ನಿಲ್ದಾಣ, ರಸ್ತೆ ಸೌಲಭ್ಯ, ನೀರು ಪೂರೈಕೆ, ಖಜಾನೆ ಮಂಜೂರಾತಿ, ಆರೋಗ್ಯ ಕೇಂದ್ರ ಹಾಗೂ ನ್ಯಾಯಾಲಯದ ಆರಂಭ ಇವೆಲ್ಲವುಗಳನ್ನು ಈಡೇರಿಸುವಲ್ಲಿ ಬಹುಪಾಲು ಶ್ರಮವನ್ನು ವ್ಯಯಿಸಿದ್ದರೂ ಸಾರ್ಥಕತೆಯನ್ನು ಪಡೆದದ್ದು ಶಿಕ್ಷಣ ಸೇವೆಯಿಂದ. ಮಹಾತ್ಮಗಾಂಧಿ ಸುಳ್ಯಕ್ಕೆ ಆಗಮಿಸಿದ್ದ ಸಂದರ್ಭದಲ್ಲಿ ಅವರ ಭಾಷಣವನ್ನು ಆಲಿಸಿದ್ದ ಹನ್ನೊಂದರ ಹರೆಯದ ಕುರುಂಜಿಯವರು ಶಿಕ್ಷಣದ ಮಹತ್ವವನ್ನು ಒತ್ತಿ ಹೇಳಿದ್ದ ಗಾಂಧಿಯವರ ಮಾತಿನಿಂದ ಪ್ರೇರೇಪಿತರಾಗಿದ್ದರು. ಅನಿವಾರ್ಯತೆಯಿಂದಾಗಿ ತಾನು ಹೆಚ್ಚಿನ ಶಿಕ್ಷಣದಿಂದ ವಂಚಿತನಾಗಿದ್ದರೂ ತನ್ನ ಊರಿನ ಜನತೆಗೆ ಉತ್ತಮ, ಗುಣಮಟ್ಟದ, ಉನ್ನತ ಶಿಕ್ಷಣ ಲಭಿಸುವಂತಾಗಬೇಕೆಂಬ ಅವರ ಆಶಯ ಮತ್ತು ಆ ನಿಟ್ಟಿನಲ್ಲಿ ಅವರ ಶ್ರಮ ನಿಜವಾಗಿಯೂ ಅವರ ಔನ್ನತ್ಯದ ದ್ಯೋತಕ.

ಆ ಔನ್ನತ್ಯದ ಫಲವಾಗಿ ಇಂದು ಸುಳ್ಯ ಜಾಗತಿಕ ಶಿಕ್ಷಣ ಕೇಂದ್ರವಾಗಿ ಭಾರತದ ಭೂಪಟದಲ್ಲಿ ಕಂಗೊಳಿಸುತ್ತಿದೆ. ನೆಹರೂ ಸ್ಮಾರಕ ಕಾಲೇಜು, ವೆಂಕಟ್ರಮಣ ಗೌಡರ ಮೊದಲ ಕನಸಿನ ಕೂಸು. ತದನಂತರ ಹುಟ್ಟಿದವು ವೃತ್ತಿಪರ ಸಂಸ್ಥೆಗಳು. ಪ್ರಸ್ತುತ ಕೆವಿಜಿ ಪ್ಲೇ ಹೋಂ ನಿಂದ ಹಿಡಿದು ಮೆಡಿಕಲ್ ಕಾಲೇಜುವರೆಗೆ ಸುಮಾರು ಅರ್ಧಶತಕಕ್ಕಿಂತಲೂ ಮಿಕ್ಕು ವಿವಿಧ ಶೈಕ್ಷಣಿಕ ಸಂಸ್ಥೆಗಳು, ಶಿಕ್ಷಣ ದಾಹಿಗಳ ದಾಹವನ್ನು ತಣಿಸುತ್ತಿವೆಯಲ್ಲದೇ ಬದುಕಿಗೆ ಭದ್ರತೆಯನ್ನು ಒದಗಿಸಿವೆ. ಮಾತ್ರವಲ್ಲದೇ ಜನರಿಗೆ ಆರೋಗ್ಯ ಭಾಗ್ಯವನ್ನು ನೀಡುತ್ತಿವೆ. ಶ್ರೀಯುತರ ಕೊಡುಗೆಗಳು ಸುಳ್ಯಕ್ಕೆ ಸೀಮಿತವಾಗಿರದೇ ಶಿಕ್ಷಣ ಸಂಸ್ಥೆಗಳು ಕಲ್ಯಾಣ ಮಂಟಪಗಳ ರೂಪದಲ್ಲಿ ಕೊಡಗು, ಬೆಂಗಳೂರನ್ನು ತಲುಪಿ ಇದೀಗ ದೇಶದ ರಾಜಧಾನಿಯವರೆಗೆ ವಿಸ್ತರಿಸಲ್ಪಡುತ್ತಿರುವುದು ಅವರ ಅಸಾಧಾರಣ ಕಾರ್ಯವೈಖರಿಗೊಂದು ನಿದರ್ಶನ. "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಈ ನಾಣ್ನುಡಿಯನ್ನು ಸ್ಪಷ್ಟವಾಗಿ ಅರ್ಥೈಸಿಕೊಂಡಿರುವ ಇವರು ಸ್ತ್ರೀಯರನ್ನು ಸುಶಿಕ್ಷಿತೆಯರನ್ನಾಗಿಸುವ ಉದ್ದೇಶದಿಂದ ದ.ಕ. ಗೌಡ ವಿದ್ಯಾಸಂಘ, ಇದರ ಆಶ್ರಯದಲ್ಲಿ ಶ್ರೀ ಶಾರದಾ ಮಹಿಳಾ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ ಪ್ರತ್ಯೇಕ ಶಿಕ್ಷಣ ವ್ಯವಸ್ಥೆಯನ್ನು ಬಯಸುವ ಹೆಣ್ಣುಮಕ್ಕಳಿಗೆ ಗುಣಮಟ್ಟದ ಪರಿಪೂರ್ಣ ವಿದ್ಯೆಯನ್ನು ಒದಗಿಸುತ್ತಿದ್ದಾರೆ.

"ಆಡು ಮುಟ್ಟದ ಸೊಪ್ಪಿಲ್ಲ... " ವೆಂಬಂತೆ ಕುರುಂಜಿಯವರು ದುಡಿಯದ ಕ್ಷೇತ್ರವೇ ಇಲ್ಲ. ಶೈಕ್ಷಣಿಕ ಕ್ಷೇತ್ರ ಕೇಂದ್ರರಂಗವಾದರೂ ರಾಜಕೀಯ , ಸಾಮಾಜಿಕ , ಸಾಹಿತ್ಯ, ಕಲೆ ಕ್ರೀಡೆಗಳ ಸಹಿತ ಧಾರ್ಮಿಕ ರಂಗದಲ್ಲಿಯೂ ಇವರ ಕಾಯಕದ ಕೈ ದುಡಿದಿದೆ. "ಅವನು(ದೇವರು) ಕೊಟ್ಟದ್ದನ್ನು ನಿಮಗೆ ತಲುಪಿಸುವವ ನಾನು" ಎಂದು ವಿನೀತ ನುಡಿಯನ್ನಾಡುವ ಇವರು ಸುಳ್ಯ ಕ್ಷೇತ್ರ ದೇವಸ್ಥಾನದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡ

ಪರಿ ಅನನ್ಯವಾದದ್ದು. ಶಿಥಿಲಗೊಂಡಿದ್ದ ಚೆನ್ನಕೇಶವ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಜನರನ್ನು ಸಂಘಟಿಸಿ ಲಕ್ಷಾಂತರ ಹಣವನ್ನು ವ್ಯಯಿಸಿ, ಆಧುನೀಕರಸಿ ಸುಳ್ಯದ ಜನತೆಯಲ್ಲಿ ಧಾರ್ಮಿಕತೆಯನ್ನು ಬೆಳೆಸಿದ ಧರ್ಮನಿಷ್ಠರು ಇವರು."ಗೌಡರು ಅಡಿಯಿಟ್ಟಲ್ಲಿ ಅಭಿವೃದ್ಧಿ" ಎನ್ನುವುದು ಅನ್ವರ್ಥ.

ಇಂದು ಕುರುಂಜಿಯವರು 80ರ ಇಳಿವಯಸ್ಸಿನಲ್ಲಿದ್ದಾರೆ. ಆದರೆ ಚಟುವಟಿಕೆಯಲ್ಲಿ, ಜೀವನೋತ್ಸಾಹದಲ್ಲಿ ಅವರದ್ದು ಯೌವನಾವಸ್ಥೆಯೇ. ದುರ್ವ್ಯಸನಗಳಿಗೆ ಬಲಿಯಾಗದೆ, ಅಷ್ಟ ಗುಣಗಳನ್ನು ರೂಢಿಸಿಕೊಂಡು ಶ್ರಮದಿಂದ ಶ್ರೇಷ್ಠತೆಯನ್ನು ಗಳಿಸಿದ ಓರ್ವ ಅಪರೂಪದ ವ್ಯಕ್ತಿಯಾಗಿರುವ ಅವರು ಅದಕ್ಕಾಗಿ ಹಲವು ರಾಷ್ಟ್ರೀಯ, ಅಂತರಾಷ್ಟ್ರೀಯ, ಪ್ರಶಸ್ತಿ, ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಸುಳ್ಯದ ಸುಪುತ್ರ, ಕೊಡಗಿನ ಅಳಿಯ ಓರ್ವ ಪುತ್ರಿ ಹಾಗೂ ಈರ್ವರು ಪುತ್ರರ ತಂದೆ. ಇವರು ನಮ್ಮವರೆಂಬುದು ನಮಗೆ ಹೆಮ್ಮೆ. ಹೌದು ,ಗೌಡ ಜನಾಂಗದಲ್ಲಿ ಜನಿಸಿ ತನ್ನ ಛಲ ಹಾಗೂ ಶ್ರಮದಿಂದ ದೇಶವ್ಯಾಪಿಯಾಗಿ ಬೆಳೆದ ಪೂಜ್ಯ ಶ್ರೀ ಡಾ. ಕುರುಂಜಿ ವೆಂಕಟ್ರಮಣ ಗೌಡರು. ಗೌಡ ಕುಲರತ್ನ, ಇವರು 'ಭಾರತರತ್ನ'ವಾಗಲಿ ಎಂಬುದೇ ನಮ್ಮ ಆಶಯ.

ಕವನ

ಬಾಳುಗೋಳು

ಏತಕೆ ಬೇಕೋ ಈ ಬಾಳು
ತುಂಬಿದೆ ಇದರಲಿ ಬರಿ ಗೋಳು
ಎಲ್ಲವೂ ಇದ್ದು ಇಲ್ಲದಂತಾಗಿದೆ
ಜೀವನವೂ ಬಲು ಭಾರವಾಗಿದೆ
ಸುಖ-ಸಂತೋಷ ಬರಿ ಕನಸಾಗಿದೆ
ಮನಸೆಲ್ಲಾ ಬರಿ ಮಸಣದ ತವರಾಗಿದೆ
ಹಗಲೂ ಇರುಳೂ ಚಿಂತಿಸುವೆ
ದಾರಿಯ ಕಾಣದೆ ಬಳಲಿರುವೆ
ನನ್ನೀ ಮೊರೆ ಕೇಳಿಸದೇ
ಏತಕೆ ನೀ ಸುಮ್ಮನಿರುವೆ

ಎನಿತು ದುಡಿದರೂ ದಿನವೆಲ್ಲಾ
ಅಯ್ಯೋ ಎನ್ನುವ ಕರುಳಿಲ್ಲಾ
ಸುರಿಸುವೆ ಕಣ್ಣೀರು ಇರುಳೆಲ್ಲಾ
ನೆಮ್ಮದಿ ಎಂಬುದು ಈ ಜೀವಕ್ಕಿಲ್ಲಾ
ಕಾಯುವೆ ಎಂದೆಂದೂ ಶುಭ ದಿನವ
ಆದರೆ ಕಾದಿದೆ ಸೋಲೋ ಪ್ರತಿದಿನ
ಬೆಂದಿದೆ ಈ ಮೈಮನ
ಸುಖ ಸಿಗುವುದೆ ನಾ ಆದಾಗ ಹೆಣ.

-ಹೊಸೂರು ರುಕ್ಮಿಣಿ ಮೋಹನ್,
ಮಡಿಕೇರಿ.

◆◆◆◆◆

ಕೊಡಗು ಗೌಡ ವಿದ್ಯಾ ಸಂಘದ ಹಿನ್ನೋಟ



*ಸಂಗ್ರಹ: **ಕೋಳುಮುಡಿಯನ ಆರ್. ಅನಂತ ಕುಮಾರ್***
ನಿರ್ದೇಶಕರು, ಕೊ. ಗೌ.ವಿ. ಸಂಘ, ಮಡಿಕೇರಿ

ಸನ್ 1908ನೇ ಇಸವಿಯಲ್ಲಿ ಸ್ಥಾಪಿತವಾದ ಕೊಡಗು ಗೌಡ ವಿದ್ಯಾ ಸಂಘಕ್ಕೆ ಹಲವು ಕಾರಣಗಳಿವೆ. ಗೌಡ ಜನಾಂಗ ಹಲವಷ್ಟು ವರ್ಷಗಳಿಂದ ಕೊಡಗು ದೇಶದಲ್ಲಿ ಕೃಷಿಯನ್ನು ಅವಲಂಭಿಸಿಕೊಂಡು ಜಮ್ಮ, ಜಹಗೀರ್, ಉಂಬಳಿ, ಸಾಗು ಎಂಬ ಜಮೀನನ್ನು ಹೊಂದಿಕೊಂಡು ಉತ್ತಮ ರೀತಿಯಲ್ಲಿ ಕೃಷಿ ಮಾಡಿಕೊಂಡು ಬಂದಿದ್ದ ಜನಾಂಗವಾಗಿತ್ತು. ಆದರೆ ನಮ್ಮ ಕೆಲವು ಹಿರಿಯರು ನಮ್ಮ ಜನಾಂಗದಲ್ಲಿನ ವಿದ್ಯಾ ಹೀನತೆ ಮತ್ತು ಬಡತನವನ್ನು ಮನಗಂಡು ಸರ್ವಾಂಗಿಣ ವಿದ್ಯೆ ಪಡೆಯುವುದರಿಂದ ಮಾತ್ರ ನಮ್ಮ ಬಡತನವನ್ನು ಹೋಗಲಾಡಿಸಲು ಸಾಧ್ಯವೆಂದು ಅಭಿಪ್ರಾಯಿಸಿ ಕೆಲವು ಮುಖಂಡರನ್ನೊಳಗೊಂಡು ಕುಂಬಗೌಡನ ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ಒಂದು ವಿದ್ಯಾ ಸಂಘವನ್ನು ಕೊಡಗಿನಲ್ಲಿ ಸ್ಥಾಪಿಸಲಾಯಿತು. ಮೊದ ಮೊದಲಿಗೆ ಸಂಘದ ಸಭೆಗಳನ್ನು ನಡೆಸಲು ಕೆಲವು ಹಿತ ಚಿಂತಕರ ಮನೆಯಲ್ಲಿ ಬೇರೆ ಬೇರೆ ಗ್ರಾಮಗಳಲ್ಲಿ ನಡೆಸಿ ಜನರಲ್ಲಿ ವಿದ್ಯೆಯ ಬಗ್ಗೆ ತಿಳುವಳಿಕೆ ಮೂಡಿಸುವ ಪ್ರಯತ್ನ ನಡೆಸಲಾಗುತ್ತಿತ್ತು. ತದ ನಂತರ ಅವರ ಸಭೆಗಳನ್ನು ಗ್ರಾಮ ಗ್ರಾಮದ (ನಮ್ಮ ಜನಾಂಗದವರು ಹೆಚ್ಚಾಗಿ ಇರುವ ಕಡೆ) ಧವಸ ಭಂಡಾರದ ಆಶ್ರಯದಲ್ಲಿ ನಡೆಸಿ ಜನರಲ್ಲಿ ವಿದ್ಯೆಯ ಆಂದೋಲವನ್ನು ಮಾಡಲಾಗಿದೆ.

ಇಂತಹ ಸಂದರ್ಭದಲ್ಲಿ ಸಮಿತಿಯವರು ವಿದ್ಯಾರ್ಥಿಗಳ ವಸತಿಗಾಗಿ ಒಂದು ಕಟ್ಟಡವನ್ನು ಕೊಂಡುಕೊಳ್ಳುವ ಅಭಿಪ್ರಾಯಕ್ಕೆ ಬಂದು ಒಟ್ಟು ರೂಪಾಯಿ 4000 ಕ್ಕೆ ನಾಗರತ್ನ ಪಿಳ್ಳೆ ಎಂಬುವವರಿಂದ (ಈಗಿನ ಗೌಡ ಸಮಾಜದ ಕಟ್ಟಡದ ಆವರಣ) ಒಂದು ಮನೆಯನ್ನು ಖರೀದಿಸಲಾಯಿತು. ಇದಕ್ಕಾಗಿ ಸರ್ಕಾರದಿಂದ ರೂ. 2000 ಧನ ಸಹಾಯವಾಗಿಯೂ 10 ಮಂದಿ ವಿದ್ಯಾಭಿಮಾನಿಗಳಿಂದ ತಲಾ 100 ರೂ. ಯಂತೆ 1000 ಕ್ರೋಢಿಕರಿಸಿ ಒಟ್ಟು ರೂ. 3000 ಕ್ಕೆ ಪಡೆದಿರುತ್ತಾರೆ. ಒಪ್ಪಚಾರದಂತೆ ರೂ. 1000 ವನ್ನು ನಾಗರತ್ನ ಪಿಳ್ಳೆಯವರು ಬಿಟ್ಟುಕೊಟ್ಟಿರುತ್ತಾರೆ.

ಮೇಲ್ಕಂಡ ಹಳೆ ಮನೆಯ ಆವರಣದಲ್ಲಿ ಎರಡು ಕಟ್ಟಡಗಳು ಇದ್ದು, ಸಮಿತಿಯ ಅಭಿಪ್ರಾಯದಲ್ಲಿ ಒಂದು ಕಟ್ಟಡವನ್ನು ತೆಕ್ಕಡೆ ಸುಬ್ಬಯ್ಯ ಎಂಬುವವರಿಗೆ ಮಾರಿ ಬಂದಂತ ಹಣದಲ್ಲಿ ಈ ಹಿಂದೆ ಇದ್ದಂತ ಕಾಲೇಜು (ಸೆಂಟ್ರಲ್ ಸ್ಕೂಲ್) ರಸ್ತೆಯ ಬೋರ್ಡಿಂಗ್ ಬಳಿ ನಾಗರತ್ನ ಪಿಳ್ಳೆಯವರ ಇನ್ನೊಂದು ಕಟ್ಟಡವನ್ನು ಖರೀದಿಸಲಾಗಿದೆ. (ವಿಷಯವೆಂದರೆ ಕಾಲದಲ್ಲಿ ಮೊದಲು ಖರೀದಿಸಿದ ಕಟ್ಟಡದ ಬಳಿ ಅರಣ್ಯವಿತ್ತು.) ಅದರಲ್ಲಿ ವಿದ್ಯಾರ್ಥಿಗಳಿಗೆ ವಸತಿಯನ್ನು ಕಲ್ಪಿಸಲಾಗಿತ್ತು. ದುರದೃಷ್ಟವಶಾತ್ 1925ನೇ ಇಸವಿಯಲ್ಲಿ ಸರ್ಕಾರವು ಆ ಸ್ಥಳವನ್ನು ಮಿಲಿಟರಿಯವರ ಅನುಕೂಲಕ್ಕಾಗಿ ನಮ್ಮಿಂದ ಪಡೆದುಕೊಂಡು ಈಗಿನ ವಿದ್ಯಾ ಸಂಘದ ಕಟ್ಟಡವನ್ನು ನಮಗೆ ಬಿಟ್ಟುಕೊಟ್ಟಿರುತ್ತಾರೆ. ಆ ಕಟ್ಟಡದಲ್ಲಿ ವಿದ್ಯಾರ್ಥಿಗಳಿಗೆ ಮುಂದಿನ ಆಡಳಿತ ಮಂಡಳಿಯವರು ವಸತಿ ಶಾಲೆಯನ್ನು ನಡೆಸಿಕೊಂಡು ಬಂದಿರುತ್ತಾರೆ. 1933ರಲ್ಲಿ ಬಡ್ಡನ ಮುತ್ತಣ್ಣನವರ ಅಧ್ಯಕ್ಷತೆಯಲ್ಲಿ ವಿದ್ಯಾ ಸಂಘವನ್ನು ರಿಜಿಸ್ಟರ್ ಮಾಡಲಾಗಿದೆ. ಸ್ಥಳದ ಬಗ್ಗೆ ಎಲ್ಲಾ ಮಹಾಸಭೆಗಳಲ್ಲಿ ವರದಿಯಾಗಿದೆ.

1934ರಲ್ಲಿ ಮೊಟ್ಟ ಮೊದಲಿಗೆ ಸಂಘವು ಖರೀದಿಸಿದ ಮಣ್ಣಿನ ಗೋಡೆಯ ಕಟ್ಟಡವನ್ನು ಕೆಡವಿ ಇಟ್ಟಿಗೆ ಗೋಡೆಯಿಂದ ಹೊಸ ಮನೆಯನ್ನು ಕಟ್ಟುವ ಅಭಿಪ್ರಾಯಕ್ಕೆ ಬಂದಿದೆ. ಈ ಕಟ್ಟಡ ನಿರ್ಮಾಣಕ್ಕಾಗಿ ಸಂಘದ ಖಾತೆಯಲ್ಲಿ ಪೂರ್ತಿ ಹಣ ಲಭ್ಯವಿಲ್ಲದರಿಂದ ರೂ. 2057-11 ಆಣೆ -6ಪೈ, ಸಂಘದಿಂದ ಖರ್ಚಾಗಿದ್ದು, ಮಿಕ್ಕಿದ ಹಣಕ್ಕಾಗಿ ಕಟ್ಟಡವನ್ನು ಗಿರ್ವಿ ಆಧಾರದ ಮೇಲೆ ರೂ. 500 ಪಡೆದು ಉಳಿದ ಹಣಕ್ಕಾಗಿ ಚೆಟ್ಟಿಮಾಡ ತಿಮ್ಮಯ್ಯನವರ ಮೂಲಕ 130 ಭಟ್ಟಿ ಭತ್ತ, 63ರೂ. ವನ್ನು, ಚೆರಿಯಮನೆ ಕೃಷ್ಣಪ್ಪನವರ ಮೂಲಕ 18 ಬಟ್ಟಿ ಭತ್ತ 24ರೂ. ವನ್ನು ಸಂಗ್ರಹಮಾಡಿ ಸಂಘಕ್ಕೆ ಕೊಡಲಾಗಿದೆ. ಆದರೂ ಸಂಘದಿಂದ ವಿದ್ಯಾರ್ಥಿಗಳ ಪೋಷಕರು ಪಡೆದಂತಹ ಹಣವು ಕಾಲ ಕಾಲಕ್ಕೆ ಸರಿಯಾಗಿ ಮರುಪಾವತಿಯಾಗದಿರುವದರಿಂದ ಹೊಸ ಕಟ್ಟಡದ ನಿರ್ಮಾಣಕ್ಕೆ ತುಂಬಾ ಅಡಚಣೆಯಾಗಿರುವುದು ಕಂಡು ಬರುತ್ತದೆ.

ಈ ಕಟ್ಟಡ ನಿರ್ಮಾಣವು ಬಡ್ಡನ ಮುತ್ತಣ್ಣ ಮತ್ತು ಉಳುವಾರನ ಅಪ್ಪಯ್ಯನವರ ಅಧ್ಯಕ್ಷಗಿರಿಯಲ್ಲಿ 1935ರಲ್ಲಿ ನೆರವೇರಿಸಲಾಗಿದೆ. ಇದಕ್ಕೆ ಹೊಸ ರೀಡಿಂಗ್ ರೂಂ ಎಂದು ಹೆಸರಿಡಲಾಗಿದೆ. ಈ ಕಟ್ಟಡಕ್ಕೆ ಕುಡೆಕಲ್ ಮನೆಸ್ಥಾನದವರು ಮರಮುಟ್ಟನ್ನು ಉಚಿತವಾಗಿ ಕೊಟ್ಟಿರುವುದರಿಂದ ಅವರ ಕುಟುಂಬದ ಹೆಸರಿನಲ್ಲಿ ಶಿಲಾಶಾಸನವನ್ನು ಇಟ್ಟಿರುವರು. ಈ ಕಟ್ಟಡದ ಒಟ್ಟು ಖರ್ಚು ರೂ. 2146-1ಆಣೆ-6ಪೈ. ಎಂಬುವುದು ವರದಿಯಾಗಿದೆ.

1937ರಲ್ಲಿ ನೂತನ ಆಡಳಿತ ಮಂಡಳಿ ರಚನೆ:

1. ಅಧ್ಯಕ್ಷರಾಗಿ ನಿಡ್ಯಮನೆ ಸೋಮಣ್ಣ, 2. ಉಪಾಧ್ಯಕ್ಷರಾಗಿ ತೆಕ್ಕಡೆ ಆನಂದಯ್ಯ, 3. ಖಜಾಂಚಿಯಾಗಿ ದಂಬೆಕೋಡಿ ಅಪ್ಪಚ್ಚ , 4. ಕಾರ್ಯದರ್ಶಿಯಾಗಿ ಮೂಟೆ ಪೊನ್ನಪ್ಪ , ಸದಸ್ಯರಾಗಿ: 5.ತೆಕ್ಕಡೆ ಪೂವಯ್ಯ, 6. ಕೆದಂಬಾಡಿ ಸೋಮಪ್ಪ, 7. ತೋಟಂಬೈಲು ಮಾದಪ್ಪ, 8. ಯಂಕನ ಅಣ್ಣಯ್ಯ, 9. ಪರ್ಚನ ಅಣ್ಣಯ್ಯ, 10. ಮುಕ್ಕಾಟಿ ಮೇದಪ್ಪ, 11. ತೆಕ್ಕಡೆ ಬೋಪಯ್ಯ, 12. ಪಟ್ಟಡ ಮುತ್ತಣ, 13. ಗೌಡ್ರ ಗಣಪತಿ, 14. ಕೆದಂಬಾಡಿ ಗಣಪತಿ, 15. ಚೆರಿಯ ಮನೆ ಪೊನ್ನಪ್ಪ, 16.ಯಾಲದಾಳು ಚಂಗಪ್ಪ, 17. ಕುಂಬುಗೌಡನ ಬೆಳ್ಳಿಯಪ್ಪ ಎಂಬುವುದಾಗಿ ರಚನೆಗೊಂಡು ಇವರ ಕಾಲಾವಧಿಯಲ್ಲಿ ಜನಾಂಗದ ಬಡ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಜನಾಂಗದ ಪ್ರತಿಯೊಬ್ಬ ಸರ್ಕಾರಿ ನೌಕರಿಯಲ್ಲಿರುವವರು ಕಡ್ಡಾಯವಾಗಿ ರೂ. 2 ನ್ನು ಸದಸ್ಯರಲ್ಲದವರಿಂದ ರೂ. 1ನ್ನು ಕ್ರೋಢೀಕರಿಸುವಂತೆ ನಿರ್ಣಯವನ್ನು ತರಲಾಯಿತು.

ನಿಡ್ಯಮಲೆ ಸೋಮಣ್ಣನವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲಿಗೆ ಮಡಿಕೇರಿಯ ಮುಖ್ಯ ಪಟ್ಟಣದಲ್ಲಿ ಪದ್ಮನಾಭ್ ಮೊದಲಿಯರ್ ಎಂಬುವರಿಂದ ಒಂದು ಕಟ್ಟಡವನ್ನು ಬಾಡಿಗೆ ಪಡೆದು ಮಹಿಳಾ ವಸತಿ ಗೃಹ ಸ್ಥಾಪಿಸಲಾಯಿತು. ಇವರಲ್ಲಿ ಕೇವಲ ನಾಲ್ಕು ವಿದ್ಯಾರ್ಥಿನಿಯರು ಮಾತ್ರ ವಿದ್ಯಾರ್ಜನೆ ಮಾಡಿದ್ದರು. ಅವರೆಂದರೆ ಪಿ.ಡಿ. ಸೀತಮ್ಮ, ವೈ.ಎ. ಕಮಲಮ್ಮ, ಸಿ.ಪಿ. ಘನಾವತಿ ಮತ್ತು ವೈ.ಪಿ. ಲೀಲಾವತಿ. ಈ ವಸತಿ ಗೃಹವನ್ನು ಶ್ರೀ ಚರಿಯಮನೆ ಪೊನ್ನಪ್ಪನವರು ನೋಡಿಕೊಳ್ಳುತ್ತಿದ್ದರು.

1944ರಲ್ಲಿ ಆಡಳಿತ ಮಂಡಳಿಯನ್ನು ವಿನೂತನಗೊಳಿಸಲಾಗಿ, ಅಧ್ಯಕ್ಷರನ್ನಾಗಿ ನಿಡ್ಯಮಲೆ ಮುದ್ದಪ್ಪನವರನ್ನು ಉಪಾಧ್ಯಕ್ಷರನ್ನಾಗಿ ಶ್ರೀ ಕೋರನ ದೇವಯ್ಯನವರನ್ನು, ಚೆರಿಯಮನೆ ಪೊನ್ನಪ್ಪನವರನ್ನು ಕಾರ್ಯದರ್ಶಿಯನ್ನಾಗಿ ಮತ್ತು ನಿರ್ದೇಶಕರನ್ನಾಗಿ ಸರ್ವಶ್ರೀಗಳಾದ ಯಂಕನ ಮಾದಯ್ಯ, ಪೇರಿಯನ ಎಂ. ಪೂವಯ್ಯ ಕೆ.ಆರ್.

ಪುಟ್ಟಪ್ಪ, ಯಂಕನ ಮುತ್ತಪ್ಪ, ಕಟ್ರತನ ಗಣಪಯ್ಯ, ಬೊಳ್ತಜಿ ಸುಬ್ಬಯ್ಯ, ಕೇಕಡ ಅಚ್ಚಯ್ಯ, ಅಯ್ಯಂಡ್ರ ರಾಮಪ್ಪ, ಪೂಜಾರಿ ಎಸ್. ರಾಮಪ್ಪ , ದೇವಜನ ಪೂವಯ್ಯ, ಮುಕ್ಕಾಟಿರ ಕುಂಞಪ್ಪ, ಚೆಟ್ಟಿಮಾಡ ಮುದ್ದಯ್ಯ, ಎ. ಈರಪ್ಪ, ಕುಕ್ಕನೂರು ಚಂಗಪ್ಪ, ಯಾಲದಾಳು ದೇವಯ್ಯ, ಕೋಡಿ ಆರ್. ಪುಟ್ಟಪ್ಪ, ಕಾಳೇರಮ್ಮನ ರಾಮಯ್ಯ ಎಂಬ ಅತಿ ದೊಡ್ಡ ಸಮಿತಿಯನ್ನು ರಚಿಸಿ ಕಾರ್ಯೋನ್ಮುಖವಾಯಿತು.

ಮೊಟ್ಟ ಮೊದಲಿಗೆ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಸತಿ ಶಾಲೆಯನ್ನು ಕಲ್ಪಿಸಲಾಯಿತು. ಜನಾಂಗದ ಬಡ ವಿದ್ಯಾರ್ಥಿಗಳಿಗೆ ಸಾಲ ರೂಪದಲ್ಲಿ ಧನ ಸಹಾಯವನ್ನು ಮಾಡುವ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಬೇಸಿಗೆ ರಜೆಯ ಸಂದರ್ಭದಲ್ಲಿ ಮದುವೆ ಕಾರ್ಯಕ್ರಮಗಳಿಗೆ ಅವಕಾಶ ನೀಡಲಾಯಿತು. ಅಲ್ಲದೆ, ಊರೊರ್ಮೆ ಇತ್ಯಾದಿ ಕಾರ್ಯಕ್ರಮಗಳನ್ನು ನಡೆಸುತಿತ್ತು.

ಮುಂದುವರಿದ ಸಮಿತಿಯವರು ಕೊಡಗಿನಲ್ಲಿ ಹೆಚ್ಚಿನ ಗೌಡವರು ಹೆಚ್ಚಾಗಿ ನೆಲೆಸಿರುವ ಭಾಗಮಂಡಲ, ಅವಂದೂರು ತಣ್ಣಿಮಾನಿ, ಚೇರಂಗಾಲ, ಕೋರಂಗಾಲ, ಚೆಟ್ಟಿಮಾನಿ, ನಂಜರಾಯಪಟ್ನ, ಚೆಂಬು, ಪೆರಾಜೆ ಇತ್ಯಾದಿ ದವಸ ಭಂಡಾರಗಳಿಂದ ಧನ ರೂಪದಲ್ಲಿ ಸಹಾಯ ಕೋರಿ ಸಂಘದ ಅಭಿವೃದ್ಧಿಗೆ ಶ್ರಮಿಸಿರುವುದು ಕಂಡು ಬರುತ್ತದೆ. ಹಾಲಿ ವರ್ಷದಲ್ಲಿ ನಂಜರಾಜಪಟ್ಟಣದಿಂದ ರೂ. 352,ವಾಲ್ನೂರು ಗ್ರಾಮಸ್ಥರಿಂದ ರೂ.77,ಪೆರಾಜೆ ಗ್ರಾಮದಿಂದ ರೂ. 116 ವಸೂಲಾಗಿರುವುದು ಕಂಡು ಬರುತ್ತದೆ. ವಿದ್ಯಾರ್ಥಿಗಳಿಗಾಗಿ ಮೂರ್ನಾಡು, ಕೊಟ್ಟೂರು, ಭಾಗಮಂಡಲ ಶಾಲೆಗಳಿಂದ Lower Secondery ನಲ್ಲಿ ಪಾಸಾದ ನಮ್ಮ ಜನಾಂಗದ 15 ವಿದ್ಯಾರ್ಥಿಗಳನ್ನು ವಸತಿ ಶಾಲೆಗೆ ಸೇರಿಸುವಂತೆ ಪ್ರಚಾರ ಕಾರ್ಯಕ್ರಮ ಕೈಗೊಂಡು ಪ್ರೇರಣೆ ನೀಡಲಾಗಿದೆ. ಸದ್ರಿ ಸಾಲಿನಲ್ಲಿ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ತೋಟಂಬೈಲು ಮಾದಪ್ಪನವರು ತಮ್ಮ ಕೈಯಿಂದ ರೂ. 90ನ್ನು ಇಬ್ಬರು ವಿದ್ಯಾರ್ಥಿಗಳಾದ ಶ್ರೀ ಕೆ.ಬಿ. ಮಾದಪ್ಪ ಮತ್ತು ಕೊಂಪುಳಿ ಆನಂದ ಎಂಬುವವರಿಗೆ ನೀಡಿದ್ದು ಶ್ಲಾಘನೀಯ.

ಹಾಲಿ ಆಡಳಿತ ಮಂಡಳಿಯು ವಿದ್ಯಾ ಸಂಘದ ಕಾರ್ಯ ಚಟುವಟಿಕೆಗಳನ್ನು ಪ್ರಚಾರ ಪಡಿಸುವ ಸಲುವಾಗಿ ಮಡಿಕೇರಿ ನಾಡು ಬಿಳಿಗೇರಿ ಗ್ರಾಮದ ಸ್ಕೂಲ್ ಬಳಿ 27-5-1945ರಲ್ಲಿ ತಮ್ಮ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷರಾದ ಶ್ರೀ ನಿಡ್ಯಮಲೆ ಮುದ್ದಪ್ಪ ಬಿ. ಎ.ಬಿ.ಎಲ್.ರವರ ಅಧ್ಯಕ್ಷತೆಯಲ್ಲಿ ನಡೆದದ್ದು ದಾಖಲೆಗಳಿಂದ ಕಂಡು ಬಂದಿರುವುದು ನಮ್ಮ ಹಿರಿಯರ ಸಾಧನೆಯಾಗಿದೆ. 1944-45ರಲ್ಲಿ ಜನಾಂಗದ ಪ್ರತೀ ಮನೆಯಲ್ಲಿ ಮದುವೆ ಮತ್ತು ಕಟ್ಟೆಕಾಣಿಕೆಯನ್ನು ವಸೂಲು ಮಾಡುವ ಬಗ್ಗೆ ವಿದ್ಯಾ ಸಂಘ ನಿಗಾವಹಿಸಿರುವುದು ಕಂಡು ಬರುತ್ತದೆ. ಅಲ್ಲದೆ ಮುತ್ತಾರ್ಮುಡಿಯ ಕುಡೆಕಲ್ ಮನೆಯವರ ಕೋರಿಕೆಯಂತೆ ಕೆಳಗಿನ ಗೌಡ ಮಹಿಳಾ ರೀಡಿಂಗ್ ರೂಂ ನಲ್ಲಿ ಕುಟುಂಬದ ಹೆಸರನ್ನು ಬರೆಯಿಸಿಡುವ ತೀರ್ಮಾನವನ್ನು ಕೈಗೊಂಡಿರುವುದು ಕಂಡು ಬರುತ್ತದೆ.

ಹಾಲಿ ವರ್ಷದಲ್ಲಿ ವಿದ್ಯಾ ಸಂಘಕ್ಕೆ ಈ ಕೆಳಕಂಡ ಮಹನೀಯರನ್ನು ಪದಾಧಿಕಾರಿಗಳನ್ನಾಗಿ ಆಯ್ಕೆ ಮಾಡಿಕೊಳ್ಳಲಾಯಿತು. ಶ್ರೀಯುತರಾದ ದಂಬೆಕೋಡಿ ಬೋಪಯ್ಯ, ತಮ್ಮಚನ ಪೂವಯ್ಯ, ಮುಕ್ಕಾಟಿರ ಕುಂಞಪ್ಪ, ಕಟ್ಟೆಮನೆ ಮುತ್ತಪ್ಪ, ಎನ್. ಸಣ್ಣಯ್ಯ ಪಟೇಲರು, ಗುಡ್ಡೇರ ಸುಬ್ಬಯ್ಯ, ದಂಬೆಕೋಡಿ ಸುಬ್ರಾಯ, ಮೂಟೇರ ಮುತ್ತಪ್ಪ, ತೋಟಂಬೈಲು ಮಾದಪ್ಪ, ಬಡ್ಡನ ಪೊನ್ನಪ್ಪ, ಹೊಸೋಕ್ಲು ಮಾದಪ್ಪ. ಪಟ್ಟಡ ಮಾಚಯ್ಯ, ಬಾಡನ ಅಪ್ಪಯ್ಯ, ಪೈಕೇರ ಅಪ್ಪಯ್ಯನವರುಗಳನ್ನು ಆಯ್ಕೆ ಮಾಡಿಕೊಂಡ ಕಮಿಟಿ ಬೋರ್ಡಿಂಗ್ ಮ್ಯಾನೇಜರನ್ನಾಗಿ ಮೂಟೆ ಪೊನ್ನಪ್ಪನವರನ್ನು ಆಯ್ಕೆ ಮಾಡಿ ಕಾರ್ಯೋನ್ಮುಖವಾಗಿರುತ್ತದೆ. ಇವರ ಮೊದಲ

ಸಭೆಯಲ್ಲಿಯೇ ಚಂದಾ ಮತ್ತು ಸಾಲ ವಸೂಲಾತಿಗೆ ಶೀಘ್ರ ಕ್ರಮ ಕೈಗೊಂಡಿರುವುದು ಕಂಡು ಬರುತ್ತದೆ.

ದಿನಾಂಕ 27-5-1945ರಲ್ಲಿ ಮಡಿಕೇರಿಯ ಬಿಳಿಗೇರಿ ಗ್ರಾಮದ ಸಭೆಯ ನಿರ್ಣಯದಂತೆ ನಿಡ್ಯಮಲೆ ದೇವಮ್ಮ ಸ್ಮಾರಕ ನಿಧಿಯನ್ನು (ದಿ|| ನಿಡ್ಯಮಲೆ ಮುದ್ದಪ್ಪನವರ ಪತ್ನಿ) ರೂ. 10,000 ಕ್ಕೆ ಕಡಿಮೆಯಿಲ್ಲದ ಹಾಗೆ ಶೇಖರಣೆ ಮಾಡುವಂತೆ ನಿರ್ಣಯ ಕೈಗೊಳ್ಳಲಾಯಿತು. ಇದಕ್ಕಾಗಿ ಹಲವು ಮಹನೀಯರು ಹಣ ನೀಡುವುದಾಗಿ ಸಭೆಯಲ್ಲಿ ವಾಗ್ದಾನ ಮಾಡಿರುವರು. ಇದರಿಂದ ಬರುವ ಬಡ್ಡಿ ಹಣವನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬಹುಮಾನ ಕೊಡುವಂತೆ ನಿರ್ಣಯ ಕೈಗೊಂಡು ಕೆಲವು ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿರುವುದು ಕಂಡು ಬರುತ್ತದೆ. ಕ್ರಮೇಣ ನಿಧಿಯ ಕ್ರೋಢೀಕರಣ ಕುಂಠಿತಗೊಂಡು 1947-48ರಲ್ಲಿ ಒಟ್ಟು ಸಂಗ್ರಹವಾದ ರೂ. 2500ಕ್ಕೆ ಸೀಮಿತವಾಯಿತು. ಈ ನಿಧಿಯ ಸಂಗ್ರಹ ಕುಂಠಿತವಾದ್ದರಿಂದ ಖರ್ಚಾಗಿ ಉಳಿದ ಹಣವನ್ನು ವಿದ್ಯಾ ಸಂಘದ ಖಾತೆಗೆ ಜಮಾ ಮಾಡಿ ಪುರಸ್ಕಾರ ಕಾರ್ಯಕ್ರಮವನ್ನು ನಿಲ್ಲಿಸಲಾಗಿತ್ತು.

ಗೌಡ ವಿದ್ಯಾ ಸಂಘದ ಸುವರ್ಣ ಮಹೋತ್ಸವ ಸಂದರ್ಭ: 25-10-1958

ವಿದ್ಯಾ ಸಂಘದ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ಆಚರಿಸುವ ಸಲುವಾಗಿ ಒಂದು ಕಮಿಟಿಯನ್ನು ರಚಿರಿಸಲಾಯಿತು. ಇದಕ್ಕೆ ಅಧ್ಯಕ್ಷರಾಗಿ ತೋಟಂಬೈಲು ಮಾದಪ್ಪನವರು ಕಮಿಟಿಗಾಗಿ ನಿಡ್ಯಮಲೆ ಸೋಮಣ್ಣ ಬಿ.ಎ.,ಬಿ.,ಎಲ್. ತೋಟಂಬೈಲು ಚಂಗಪ್ಪ B. Com, B.L. ಪಾರ್‌ಪಾಡಿ ಕೃಷ್ಣಪ್ಪ, ಬಿ. ಎ.,ಬಿ.ಎಲ್., ಪೇರಿಯನ ಪೂವಯ್ಯ, ಪ್ಲಾಂಟರ್, ಉಪಕಾರ್ಯದರ್ಶಿಯಾಗಿ ಉಳುವಾರನ ಸೋಮಯ್ಯ, ಚೆಂಡೀರ ಬೆಳ್ಳಿಯಪ್ಪ ಕಾಳೇರಮನ ನಾಣಯ್ಯ, ಕೊಂಪುಳೀರ ಸೋಮಪ್ಪ, ಯಾಲದಾಳು ಅಯ್ಯಪ್ಪ, ಪಾಂಡನ ಸುಬ್ಬಯ್ಯ, ಹುದೇರಿ ಉತ್ತಪ್ಪ ಚೆರಿಯಮನೆ ಪಿ. ಘನಾವತಿಯವರನ್ನು ಸದಸ್ಯರನ್ನಾಗಿ ಆರಿಸಿ ಕಾಯೋನ್ಮುಖವಾಯಿತು.

ಈ ಸಂದರ್ಭದಲ್ಲಿ ಸ್ವತಂತ್ರ ಭಾರತದ ಪ್ರಥಮ ಚುನಾವಣೆಯಲ್ಲಿ ದೆಹಲಿ ಪಾರ್ಲಿಮೆಂಟ್ ಸದಸ್ಯರಾಗಿ ಎರಡನೇ ಚುನಾವಣೆಯಲ್ಲಿ 'ಸಿ'ರಾಜ್ಯದ ವಿಧಾನ ಸಭೆಗೆ ಆಯ್ಕೆಯಾದ ಜನಾಂಗದ ಪ್ರಮುಖ ಮುಂದಾಳು ಶ್ರೀ ನಿಡ್ಯಮಲೆ ಸೋಮಣ್ಣ ಬಿ.ಎ., ಬಿ.ಎಲ್., ಅವರು ಅಕಾಲ ಮೃತ್ಯುಗೀಡಾದರು. ಅವರ 53ನೇ ವರ್ಷ ಪ್ರಾಯದಲ್ಲಿ ದಿನಾಂಕ 25-1-1958 ನೇ ಶನಿವಾರ ಸಂಜೆ 6.45 ಕ್ಕೆ ದಿವಂಗತರಾಗಿದ್ದು, ಇಡೀ ಗೌಡ ಜನಾಂಗದವರಲ್ಲಿ ದಿಗ್ಭ್ರಮೆ ಮೂಡಿತು. ಇದಕ್ಕಾಗಿ ಕೊಡಗು ಗೌಡ ವಿದ್ಯಾ ಸಂಘದ ಸುವರ್ಣ ಮಹೋತ್ಸವ ಸಮಿತಿ ಆಶ್ರಯದಲ್ಲಿ ಸಭೆ ಸೇರಿ 5 ನಿಮಿಷ ಮೌನಾಚರಣೆಯನ್ನು ಮಾಡಿ ಮೃತರ ಆತ್ಮಕ್ಕೆ ಸಂತಾಪ ಸೂಚಿಸಲಾಯಿತು. ಮುಂದುವರಿದ ಸಮಿತಿ ಸುವರ್ಣ ಮಹೋತ್ಸವದ ಅಂಗವಾಗಿ ಪ್ರತಿಯೊಬ್ಬ 12 ವರ್ಷ ಮೇಲ್ಪಟ್ಟ ಸ್ತ್ರಿ ಪುರುಷರಿಂದ ರೂ. 1ರಂತೆ ಕಡ್ಡಾಯವಾಗಿ ವಸೂಲು ಮಾಡುವಂತೆ ತೀರ್ಮಾನಿಸಲಾಯಿತು. ಸುವರ್ಣ ಮಹೋತ್ಸವದ ಅಂಗವಾಗಿ ನಿಡ್ಯಮಲೆ ದೇವಮ್ಮ ಸ್ಮಾರಕ ನಿಧಿಯಿಂದ ಬಂದ ಬಡ್ಡಿ ರೂ. 220ನ್ನು ವಿದ್ಯಾರ್ಥಿನಿಯರಿಗೆ ನೀಡಲಾಗಿದೆ. ಅಲ್ಲದೆ ಕೊಡಗಿನ ಮಾಧ್ಯಮಿಕ ಶಾಲೆಗಳ ಫಲಿತಾಂಶದಲ್ಲಿ ರಾಜ್ಯಕ್ಕೆ ಪ್ರಥಮವಾಗಿ ಒಂದು ಚಿನ್ನದ ಪದಕವನ್ನು ಪಡೆದಿರುವ ಶ್ರೀ ಕೋಳಿಬೈಲು ಬೆಳ್ಳಿಯಪ್ಪ ಎಂಬ ವಿದ್ಯಾರ್ಥಿಗೆ ವಿದ್ಯೆಗೆ ಪ್ರೋತ್ಸಾಹ ಕೊಡುವ ನಿಟ್ಟಿನಲ್ಲಿ ರೂ. 83ನ್ನು ಸ್ಕಾಲರ್ ಶಿಪ್ ಆಗಿ ಕೊಟ್ಟಿರುತ್ತದೆ. ಸುವರ್ಣ ಮಹೋತ್ಸವವನ್ನು ಸರಳವಾಗಿ ಆಚರಿಸಲಾಗಿದೆ.

1959ರ ಮಹಾಸಭೆಯಲ್ಲಿ ಪ್ರತ್ಯೇಕವಾಗಿ ಒಂದು ವಿದ್ಯಾರ್ಥಿ ಭವನ ರಚಿಸುವ ಹಾಗೆ ಕುಮಾರಿ ಚೆರಿಯಮನೆ ಘನಾವತಿಯವರಿಂದ ಬಂದ ಮನವಿಯ ಮೇರೆ ಕಮಿಟಿ ಆಲೋಚಿಸಿ ನೋಡಿ ಶಾಲಾ ಕಾಲೇಜಿಗೆ ಸಮೀಪದಲ್ಲಿ ಆರ್ಥಿಕ ಸ್ಥಿತಿಗೆ ತಕ್ಕ ನಿವೇಶನ ಹಾಗೂ ಕಟ್ಟಡಗಳು ದೊರೆಯದಿದ್ದುದರಿಂದ ಇದಕ್ಕೆ ಒಂದು ಶಾಶ್ವತ ನಿಧಿಯನ್ನು ಶೇಖರಿಸಿ ಉದ್ದೇಶವನ್ನು ನೆರವೇರಿಸುವದಾಗಿ ಮಹಾಸಭೆ ಶಿಫಾರಸ್ಸು ಮಾಡಿರುತ್ತದೆ.

1961ರಲ್ಲಿ ಜಮ್ಮ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತ್ಯೇಕವಾಗಿ ವಸತಿ ಗೃಹವನ್ನು ಮಡಿಕೇರಿಯಲ್ಲಿ ಸ್ಥಾಪಿಸಲಾಯಿತು. ಇದರಲ್ಲಿ 60ವಿದ್ಯಾರ್ಥಿಗಳು 25ವಿದ್ಯಾರ್ಥಿನಿಯರು ವಿದ್ಯಾರ್ಜನೆಗಾಗಿ ವಸತಿಯನ್ನು ಪಡೆದಿರುತ್ತಾರೆ.

1962ರಲ್ಲಿ ಶ್ರೀ ದಂಬೆಕೋಡಿ ಚಿಣ್ಣಪ್ಪನವರ ಅಧ್ಯಕ್ಷತೆಯಲ್ಲಿ ರೀಡಿಂಗ್ ರೂಂ ಸುತ್ತಲೂ ಇದ್ದ ಸುಮಾರು 0.30 ಸೆಂಟು ಪೈಸಾರಿ ಜಾಗಕ್ಕೆ ತಕ್ಕ ದಾಖಲೆಗಳನ್ನು ಸಂಬಂಧ ಪಟ್ಟ ಅಧಿಕಾರಿಗಳಿಂದ ಪಡೆದುಕೊಂಡು ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಇದಕ್ಕಾಗಿ ರೂ. 373-53 ಪೈ ಖರ್ಚು ಮಾಡಲಾಗಿದೆ.

1962ರ ಏಪ್ರಿಲ್‌ನಲ್ಲಿ ಕೊಡಗು ಗೌಡ ವಿದ್ಯಾಸಂಘದ ಒಂದು ಶಾಖೆಯನ್ನು ಮೈಸೂರಿನಲ್ಲಿ ತೆರೆಯುವುದಾಗಿ ಇದರ ಕಟ್ಟಡ ನಿವೇಶನಕ್ಕೆ ಸಂಬಂಧ ಪಟ್ಟವರಲ್ಲಿ ಪ್ರಯತ್ನಿಸುವ ವಿಚಾರವನ್ನು ಮೊಟ್ಟ ಮೊದಲಿಗೆ ನಿರ್ಣಯಿಸಲಾಯಿತು. ಅಲ್ಲದೆ ಜನಾಂಗದಲ್ಲಿ ಸತ್ತವರ ಶವ ಸಂಸ್ಕಾರ ಮಾಡಲು ಮಡಿಕೇರಿಯ ವಿನ್ಸೆಂಟ್ ಕಾಂಪೌಂಡ್ ಬಳಿ 0.50 ಸೆಂಟ್ ಜಾಗವನ್ನು ಪಡೆದುಕೊಳ್ಳಲಾಯಿತು. ಇದರಲ್ಲಿ ಜನಾಂಗದ ಯಾರು ಬೇಕಾದರೂ ಪುಕ್ಕಟೆಯಾಗಿ ಶವ ಸಂಸ್ಕಾರ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಇದರಲ್ಲಿ ದಿ|| ನಿಡ್ಯಮಲೆ ಸೋಮಣ್ಣನವರ ಗೋರಿ ಈಗಲೂ ಇರುವುದು ಕಂಡು ಬರುತ್ತದೆ.

ಇದೇ ಸಂದರ್ಭದಲ್ಲಿ 1962ರಲ್ಲಿ ಸಂಘದ ಪೋಷಕ ಸದಸ್ಯರಾಗಿ ಶ್ರೀ ತೋಟಂಬೈಲು ಮಾದಪ್ಪ ಮತ್ತು ಚೆರಿಯಮನೆ ಪೊನ್ನಪ್ಪನವರು ತಲಾ ಒಂದು ಸಾವಿರ ನೀಡಿರುವುದು ಕಂಡು ಬರುತ್ತದೆ. ಇದಕ್ಕೆ ಸಂಘ ಚಿರ ಋಣಿಯಾಗಿದೆ.

1964ರಲ್ಲಿ ವಿಶಾಲ ಮೈಸೂರು ರಾಜ್ಯದ ವಿಧಾನ ಸಭಾ ಸದಸ್ಯರಾದ ಶ್ರೀ ಕೋರನ ದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಲಾಗಿ ನಮ್ಮ ವಿದ್ಯಾರ್ಥಿನಿ ವಸತಿ ಶಾಲೆಗೆ ಒಬ್ಬ ಮಹಿಳಾ ಮೇಲ್ವಿಚಾರಕಿ ಬೇಕೆಂದಾಗ ಶ್ರೀಮತಿ ಚೆಟ್ಟಿಮಾಡ ಅಮ್ಮವ್ವನವರ ಅರ್ಜಿಯನ್ನು ಪುರಸ್ಕರಿಸಿ ನೇಮಕ ಮಾಡಲಾಯಿತು. ವಿದ್ಯಾರ್ಥಿ ಭವನಕ್ಕೆ ಶ್ರೀ ಯಂಕನ ಸೋಮಯ್ಯನವರನ್ನು ವ್ಯವಸ್ಥಾಪಕರಾಗಿ ಮುಂದುವರಿಸಲಾಯಿತು.

ಮೈಸೂರಿನಲ್ಲಿ ವಿದ್ಯಾರ್ಥಿ ಭವನ ಸ್ಥಾಪನೆ:

ಜನಾಂಗದ ವಿದ್ಯಾರ್ಥಿಗಳ ಉನ್ನತ ಶಿಕ್ಷಣಕ್ಕಾಗಿ ಮೈಸೂರಿನಲ್ಲಿ ವಿದ್ಯಾರ್ಥಿ ವಸತಿ ಗೃಹದ ಅಗತ್ಯ ಕಂಡು ಬಂದಿರುವುದರಿಂದ ಮೈಸೂರಿನ ಜಯಲಕ್ಷ್ಮಿಪುರಂನಲ್ಲಿ ಟ್ರಸ್ಟ್ ಬೋರ್ಡಿನಿಂದ 0.50ಸೆಂಟ್ ಜಾಗವನ್ನು ರೂ. 14,666-66ಪೈಸೆಗೆ ಪಡೆದುಕೊಳ್ಳಲಾಯಿತು. ಸದರಿ ಸ್ಥಳವು ರೂ. 50,000ಕ್ಕೂ ಹೆಚ್ಚು ಬೆಲೆಯುಳ್ಳದಾಗಿತ್ತು. ಆದರೆ ಸಂಘದ ಅಧ್ಯಕ್ಷರ ಕೋರಿಕೆಯಂತೆ ಮೇಲಿನ ಕ್ರಯಕ್ಕೆ ಕೊಟ್ಟಿರುತ್ತಾರೆ. ಸಂಘದ ಖಾತೆಯಲ್ಲಿ ಪೂರ್ತಿ ಬಂಡವಾಳವಿಲ್ಲದಿದ್ದುದರಿಂದ ಈ ಕೆಳಗಿನ ದಾನಿಗಳಿಂದ ರೂ. 11861-00ನ್ನು ಸಂಗ್ರಹಿಸಲಾಯಿತು.

1.	ಶ್ರೀ ತೋಟಂಬೈಲು ಮಾದಪ್ಪನವರಿಂದ	ರೂ.800/-
2.	ಶ್ರೀ ದಂಬೆಕೋಡಿ ಸುಬ್ರಾಯನವರಿಂದ	ರೂ.1000 /-

3.	ಶ್ರೀ ಪೈಕೇರ ಎಂ. ಚಂಗಪ್ಪನವರಿಂದ	ರೂ.1001 /-
4.	ಶ್ರೀಮತಿ ಕರ್ಣಯ್ಯನ ಎ. ಪುಷ್ಪವೇಣಿಯವರಿಂದ	ರೂ.500/-
5.	ಶ್ರೀ ಐಯಂಡ್ರ ರಾಮಪ್ಪನವರಿಂದ	ರೂ.500/-
6.	ಶ್ರೀ ಎನ್.ಎಸ್. ದೇವಿಪ್ರಸಾದ್‌ರವರಿಂದ	ರೂ.1000 /-
7.	ಶ್ರೀ ದೋಲ್‌ಪಾಡಿ ಪೂವಯ್ಯನವರಿಂದ	ರೂ.1000/-
8.	ಶ್ರೀ ಪೇರಿಯನ ಪೂವಯ್ಯನವರಿಂದ	ರೂ.900 /-
9.	ಶ್ರೀ ಕರ್ಣಯ್ಯನ ಚಿಣ್ಣಪ್ಪನವರಿಂದ	ರೂ. 891 /-
10.	ಶ್ರೀ ಕೆದಂಬಾಡಿ ಚಿಣ್ಣಪ್ಪನವರಿಂದ	ರೂ.701 /-
11.	ಶ್ರೀ ತುಂತಜ್ಜೀರ ಮಂದಣ್ಣನವರಿಂದ	ರೂ.401/-
12.	ಶ್ರೀ ಬೈತಡ್ಕ ರಾಮಪ್ಪನವರಿಂದ	ರೂ.10/-
	ಹಾಗೂ ಮೈಸೂರು ಶಾಖೆಯಿಂದ ವಸೂಲಾದ ಹಣ	ರೂ.3157/-
	ಒಟ್ಟು	**ರೂ. 11861-00**

ಇದಕ್ಕಾಗಿ ಈ ಕೆಳಗಿನ ಮಹನೀಯರನ್ನೊಳಗೊಂಡ ಒಂದು ಕಟ್ಟಡ ಸಮಿತಿಯನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಶ್ರೀ ಪೇರಿಯನ ಪೂವಯ್ಯನವರನ್ನು, ಉಪಾಧ್ಯಕ್ಷರನ್ನಾಗಿ ಶ್ರೀಗಳಾದ ತೋಟಂಬೈಲು ನಾಣಯ್ಯ, ಎನ್.ಎಸ್. ದೇವಿಪ್ರಸಾದ್, ಸಮಿತಿ ಸದಸ್ಯರಾಗಿ ದಂಬೆಕೋಡಿ ಸುಬ್ರಾಯ, ಹೊಸೂರು ಜೋಯಪ್ಪ, ಕಾರ್ಯದರ್ಶಿಯನ್ನಾಗಿ ಮುಕ್ಕಾಟಿ ವಾಸುದೇವರವರನ್ನು ನೇಮಿಸಲಾಗಿ ಕಟ್ಟಡ ಕಾಮಗಾರಿಯನ್ನು ಕೈಗೊಂಡಿರುವರು. ಈ ಸಂದರ್ಭದಲ್ಲಿ ಸಂಘದ ಆರ್ಥಿಕ ಪರಿಸ್ಥಿತಿಯನ್ನು ಅಷ್ಟು ಗಟ್ಟಿಯಾಗಿಲ್ಲದಿದ್ದರೂ, ಖಾತೆಯಲ್ಲಿ ರೂ. 36,195/- ಇದ್ದದ್ದು ಕಂಡು ಬರುತ್ತದೆ. ಆರ್ಥಿಕ ಮುಗ್ಗಟ್ಟನ್ನು ಸರಿಪಡಿಸಲು ಸಂಘದಿಂದ ವಿದ್ಯಾರ್ಥಿಗಳು ಪಡೆದಿರುವ ಸಾಲವಸೂಲಾತಿಗೆ ಹೆಚ್ಚಿನ ಕ್ರಮ ಕೈಗೊಂಡಿರುವುದು ಕಂಡು ಬಂದಿದೆ. 1975 ರಲ್ಲಿ ಕೆಲವು ವಿದ್ಯಾರ್ಥಿಗಳಿಂದ ಸಾಲ ವಸೂಲಾಗದೆ ಇಂದಿಗೂ ಉಳಿದಿರುವ ಸಾಲ ಬಾಕಿ ರೂ. 938-37ಎಂಬುಪುದಾಗಿದೆ. ಇದು ವಿಷಾದನೀಯ. 1976ರ ಸುಮಾರಿಗೆ ಸಂಘದಲ್ಲಿ ಒಟ್ಟು 473ಸ'ದಸ್ಯರಿದ್ದರು.

1976ರಲ್ಲಿ ಕೊಡಗು ಗೌಡ ವಿದ್ಯಾರ್ಥಿ ದತ್ತಿ ನಿಧಿ ಪುನರ್ ಸ್ಥಾಪನೆಯಾಯಿತು. ಮೊದಲಿಗೆ ಇದ್ದ ನಿಡ್ಯಮಲೆ ದೇವಮ್ಮ ಸ್ಮಾರಕ ದತ್ತಿನಿಧಿಯ ಕೆಲ ಅಂಶದ ಹಣವು ವಿದ್ಯಾ ಸಂಘಧ ಖಾತೆಯಲ್ಲಿ ವಿಲೀನವಾಗಿದ್ದ ಸಂದರ್ಭದಲ್ಲಿ ಶ್ರೀ ಪಟ್ಟಡ ಪ್ರಭಾಕರ್‌ರವರು ಅವರ ತಾಯಿ ಪಟ್ಟಡ ನೀಲಮ್ಮ ಮುತ್ತಣ್ಣ ಸ್ಮಾರಕ ನಿಧಿಯಾಗಿ ರೂ. 1000/-ವನ್ನು ಇಡಲು ಮುಂದಾದರು. ದೇವಮ್ಮ ದತ್ತಿ ನಿಧಿಯ ಸ್ವಲ್ಪ ಹಣವನ್ನು ಸೇರಿಸಿ ಗೌಡ ವಿದ್ಯಾ ಸಂಘದಿಂದ ರೂ. 4000/-ಇಟ್ಟಾಗ ಇದಕ್ಕೆ ಪೂರಕವಾಗಿ ಚೆರಿಯಮನೆ ಪೊನ್ನಪ್ಪನವರು ಅವರ ತಂದೆ ಕುಶಾಲಪ್ಪನವರ ಜ್ಞಾಪಕಾರ್ಥವಾಗಿ ರೂ. 10,101/-ಗಳನ್ನು ದತ್ತಿ ನಿಧಿಯಾಗಿ ಇಟ್ಟಿರುವರು. ಈ ಸದವಕಾಶವನ್ನು ಉಪಯೋಗಿಸಿಕೊಂಡು ಆಗಿನ ಅಧ್ಯಕ್ಷರಾದ ಶ್ರೀ ಪಾಂಡನ ಸುಬ್ಬಯ್ಯನವರು ಸ್ಮಾರಕ ನಿಧಿಯನ್ನು ಸಂಗ್ರಹಿಸಲು

ಅಡಿಯಿಟ್ಟರು. ಸದರಿ ಸಾಲಿನಲ್ಲಿ ಉಪಾಧ್ಯಕ್ಷರಾಗಿದ್ದು ಮುಂದೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ಶ್ರೀ ಕುದುಪಜೆ ಕೃಷ್ಣಪ್ಪನವರ ನೇತೃತ್ವದಲ್ಲಿ ದತ್ತಿನಿಧಿ ದಾನಿಗಳ ಸಂಖ್ಯೆ ನಿಧಾನಗತಿಯಲ್ಲಿ ಹರಿದು ಬರತೊಡಗಿತು. ಮೃತರ ಜ್ಞಾಪಕಾರ್ಥವಾಗಿ ನಿಧಿ ಕೊಡುವಂತೆ ಪ್ರೇರೇಪಿಸಲಾಯಿತು. 1978 ರಲ್ಲಿ ನೂತನ ಕಮಿಟಿಯೊಂದನ್ನು ರಚಿಸಿ ಮೈಸೂರಿನ ವಿದ್ಯಾರ್ಥಿ ಭವನ ನಿರ್ಮಾಣಕ್ಕೆ ಜನಾಂಗದವರಿಂದ ಹಣ ಸಂಗ್ರಹಿಸಲು ಪ್ರಯತ್ನಿಸಿ ವಿದ್ಯಾಭವನವನ್ನು ಪೂರೈಸುವ ಹಂತಕ್ಕೆ ಬಂದರು.

ನೂತನ ಕಮಿಟಿಯ ಹೆಸರು:

1978-80ರಲ್ಲಿ ಅಧ್ಯಕ್ಷರಾಗಿ ಶ್ರೀ ಪಾಂಡನ ಸುಬ್ಬಯ್ಯನವರು. ಉಪಾಧ್ಯಕ್ಷರಾಗಿ ಕುದುಪಜೆ ಬಿ. ಕೃಷ್ಣಪ್ಪ ಗೌ|| ಕಾರ್ಯದರ್ಶಿಯಾಗಿ ಚೀಯಂಡಿ ಯಾದವನವರು, ಖಜಾಂಚಿಯಾಗಿ ಪಾರ್‌ಪಾಡಿ ಕೃಷ್ಣಪ್ಪನವರು, ಕಾನೂನು ಸಲಹೆಗಾರರಾಗಿ ಮುಕ್ಕಾಟಿ ಬೋಪಯ್ಯ, ಲೆಕ್ಕಪರಿಶೋಧಕರಾಗಿ ದಂಬೆಕೋಡಿ ಚಿಣ್ಣಪ್ಪನವರು ಹಾಗೆ ಆಡಳಿತ ಮಂಡಳಿ ಸದಸ್ಯರಾಗಿ ಶ್ರೀಗಳಾದ ಕುಂಬುಗೌಡನ ಭೀಮಯ್ಯ, ಕೆ.ಡಿ. ಬೋಜಪ್ಪ, ಹೊದ್ದೇಟ್ಟಿ ವೆಂಕಪ್ಪ, ಲೀಲಾವತಿ ಚಿಣ್ಣಪ್ಪ, ಹುದೇರಿ ಉತ್ತಪ್ಪ, ಕೇನೇರ ಮಂದಣ್ಣ, ಮುಕ್ಕಾಟಿ ವಾಸುದೇವ, ಹೊಸೂರು ಜೋಯಪ್ಪ, ಎಸ್.ಎಸ್. ದೇವಿಪ್ರಸಾದ್, ದಂಬೆಕೋಡಿ ಜಲಜಾಕ್ಷಿ ಜೋಯಪ್ಪ, ತಳೂರು ಮಾದಯ್ಯ, ಜೈನೀರ ಗೋಪಾಲ , ಎಸ್.ಎಸ್. ಪೂವಯ್ಯ, ಡಿ.ಡಿ. ರಾಮಯ್ಯ, ಹುದೇರಿ ರಾಜೇಂದ್ರ, ಕೆ.ಡಿ. ಬೋಜಪ್ಪ, ಕೋಚನ ಬೋಜಪ್ಪ, ಕುಂಬುಗೌಡನ ಉತ್ತಪ್ಪ, ಶ್ರೀಮತಿ ಲೀಲಾ ಚಿಣ್ಣಪ್ಪ, ನಡುಬೆಟ್ಟ ಬಿ. ಅನಂತ ಇವರ ಕಮಿಟಿಯನ್ನು ರಚಿಸಿ ಕಾರ್ಯೋನ್ಮುಖವಾಯಿತು. ಅಲ್ಲದೆ ವಿದ್ಯಾದತ್ತಿನಿಧಿ ಸಂಗ್ರಹಕ್ಕೂ ಪ್ರೋತ್ಸಾಹಿಸಲಾಯಿತು. ಸದರಿ ಸಾಲಿನಲ್ಲಿ ಕೇವಲ 481 ಮಂದಿ ಸದಸ್ಯರಿದ್ದದ್ದು ಕಂಡು ಬರುತ್ತದೆ. ಆದರೆ ಬಲು ದೊಡ್ಡ ಸಂಖ್ಯೆಯನ್ನು ಹೊಂದಿದ ಈ ಜನಾಂಗ ಕನಿಷ್ಠ 5 ಸಾವಿರ ಸದಸ್ಯರನ್ನಾದರೂ ಹೊಂದಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು. ಈ ಸಂದರ್ಭದಲ್ಲಿ ಉಳುವಾರನ ಸೋಮಯ್ಯನವರು ವ್ಯವಸ್ಥಾಪಕರಾಗಿ ಮುಂದುವರಿದಿರುತ್ತಾರೆ.

ಹಲವಷ್ಟು ದಾನಿಗಳ ಸಹಕಾರದಿಂದ ಮೈಸೂರಿನ ವಿದ್ಯಾರ್ಥಿ ವಸತಿ ಭವನವನ್ನು 17-6-1979 ರಂದು ಉದ್ಘಾಟನೆ ಮಾಡಲಾಯಿತು. ಕೆಲವು ಕುಟುಂಬಸ್ಥರು ಕೊಠಡಿ ಕಟ್ಟಲು ದಾನವನ್ನು ಕೆಲವರು ಧನ ರೂಪದಲ್ಲಿ ದಾನ ಮಾಡಿರುವುದನ್ನು ಕಲ್ಲಿನಲ್ಲಿ ಹೆಸರು ಬರೆಯುವದರ ಮೂಲಕ ಅವರಿಗೆ ಕೃತಜ್ಞತೆಯನ್ನು ಅರ್ಪಿಸಲಾಗಿದೆ.

1980ರಲ್ಲಿ ಮೈಸೂರು ಕಟ್ಟಡ ಸಮಿತಿಯನ್ನು ವಿಸ್ತರಿಸಿ ಅಧ್ಯಕ್ಷರಾಗಿ ಪಾಂಡನ ಸುಬ್ಬಯ್ಯ, ಉಪಾಧ್ಯಕ್ಷರಾಗಿ ಕುದುಪಜೆ ಕೃಷ್ಣಪ್ಪ, ಶಾಖೆ ಅಧ್ಯಕ್ಷರಾಗಿ ನಡುಬೆಟ್ಟ ಆನಂದ, ಖಜಾಂಚಿಯಾಗಿ ತೋಟಂಬೈಲು ನಾಣಯ್ಯ, ವ್ಯವಸ್ಥಾಪಕರಾಗಿ ಮುಕ್ಕಾಟಿ ಅಯ್ಯಪ್ಪ, ಅಲ್ಲದೆ ಗೌಡ ಸಮಾಜ ಅಧ್ಯಕ್ಷರಾದ ತೋಟಂಬೈಲು ಚಂಗಪ್ಪನವರನ್ನೊಳಗೊಂಡ ಒಂದು ಕಮಿಟಿಯನ್ನು ರಚಿಸಿ ವಿದ್ಯಾರ್ಥಿ ಭವನಕ್ಕೆ ಹೆಚ್ಚಿನ ಸೌಕರ್ಯಗಳನ್ನು ಒದಗಿಸಿಕೊಡಲಾಯಿತು. ಮೈಸೂರಿನ ವಿದ್ಯಾರ್ಥಿ ಭವನದ ಒಟ್ಟು ಖರ್ಚು ರೂ. 2,75,000 ಎಂಬುವುದಾಗಿದೆ.

ಇದೇ ಸಂದರ್ಭದಲ್ಲಿ 8-12-1978ರಲ್ಲಿ ಕೈಗೊಂಡ ನಿರ್ಣಯದಂತೆ ಕೊಡಗು ಗೌಡ ಕಲ್ಯಾಣ ಮಂಟಪ ನಿರ್ಮಾಣಕ್ಕೆ ಒಡನೆ ಹಣ ಸಂಗ್ರಹ ಮಾಡಲು ಮೈಸೂರು ಕಟ್ಟಡ ಸಮಿತಿಗೆ ಕೆಲವು ಮಹನೀಯರನ್ನು ಸೇರಿಸಿ ಹೊಸ ಸಮಿತಿಯೊಂದನ್ನು ರಚಿಸಿ ಕಾರ್ಯೋನ್ಮುಖವಾಯಿತು.

ಮಡಿಕೇರಿ ಕಲ್ಯಾಣ ಮಂಟಪ ಕಟ್ಟಡ ಸಮಿತಿ:

ಶ್ರೀ ಪೇರಿಯನ ಪೂವಯ್ಯನವರು ಕಟ್ಟಡ ಸಮಿತಿ ಅಧ್ಯಕ್ಷರು, ಶ್ರೀ ಪಾಂಡನ ಡಿ. ಸುಬ್ಬಯ್ಯನವರು ಸಂಘದ ಅಧ್ಯಕ್ಷರು, ಶ್ರೀ ಕುದುಪಜೆ ಬಿ. ಕೃಷ್ಣಪ್ಪ ಉಪಾಧ್ಯಕ್ಷರು, ಶ್ರೀ ತೋಟಂಬೈಲು ಎಂ. ನಾಣಯ್ಯನವರು ಖಜಾಂಚಿ, ಸದಸ್ಯರುಗಳಾದ ಶ್ರೀ ದಂಬೆಕೋಡಿ ಬಿ. ಸುಬ್ರಾಯನವರು ಶ್ರೀ ಹೊಸೂರು ಡಿ. ಜೋಯಪ್ಪ, ಶ್ರೀ ಎನ್.ಎಸ್. ದೇವಿಪ್ರಸಾದ್ , ಶ್ರೀ ಹುದೇರಿ ಉತ್ತಪ್ಪ, ಶ್ರೀ ಕುಂಬುಗೌಡನ ಉತ್ತಪ್ಪ, ಶ್ರೀ ಮುಕ್ಕಾಟಿ ವೈ. ಬೋಪಯ್ಯ, ಶ್ರೀ ಮುಕ್ಕಾಟಿ ವಾಸುದೇವ, ಶ್ರೀ ಕೋರನ ಪೂಣಚ್ಚ, ಶ್ರೀ ಕೋರನ ಬೆಳ್ಳಿಯಪ್ಪ, ಶ್ರೀ ದಂಬೆಕೋಡಿ ಚಿಣ್ಣಪ್ಪ, ಶ್ರೀ ತೋಟಂಬೈಲು ಚಂಗಪ್ಪನವರನ್ನೊಳಗೊಂಡ ಕಮಿಟಿ ರಚನೆಯಾಗಿ ಇಂದು ಭವ್ಯ ಕಲ್ಯಾಣ ಮಂಟಪದ ನಿರ್ಮಾಣವಾಗಿರುವುದು ವಿದ್ಯಾ ಸಂಘದ ಒಂದು ಸಾಧನೆಯಾಗಿದೆ.

1980ರಲ್ಲಿ ವ್ಯವಸ್ಥಾಪಕರಾಗಿ ಶ್ರೀ ಚೆಟ್ಟಿಮಾಡ ರಘುಪತಿಯವರನ್ನು ನೇಮಿಸಿಕೊಳ್ಳಲಾಯಿತು.

ಸುಧಾರಿಸಿಕೊಂಡ ಕರ್ನಾಟಕ ರಾಜ್ಯದ ಕಾರ್ಯ ವೈಖರಿಯಲ್ಲಿ ನಮ್ಮ ಜಿಲ್ಲೆಯ ಮೂಲೆ ಮೂಲೆಗಳಲ್ಲಿ ಪ್ರೌಢಶಾಲೆಗಳು ಪದವಿ ಪೂರ್ವ ಕಾಲೇಜುಗಳ ಸ್ಥಾಪನೆಯಾಗಿದ್ದುದರಿಂದ ಮಡಿಕೇರಿಯಲ್ಲಿದ್ದ ನಮ್ಮ ವಿದ್ಯಾರ್ಥಿ ವಸತಿ ಗೃಹಕ್ಕೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿ ವಸತಿ ಶಾಲೆ ನಡೆಸುವುದು ಕಷ್ಟ ಸಾಧ್ಯವಾಯಿತು.

ಇದೇ ಸಂದರ್ಭದಲ್ಲಿ ಮರಗೋಡಿನ ಶ್ರೀ ಪುಳಕಂಡ ಮುತ್ತಪ್ಪ ನವರ ಬೇಡಿಕೆಯಂತೆ ಕೆಳಗಿನ ರೀಡಿಂಗ್ ರೂಂ ನಲ್ಲಿ ಶಿಕ್ಷಕರ ತರಬೇತಿ ಕೇಂದ್ರ ನಡೆಸಲು ಬಾಡಿಗೆಗೆ ಕೋರಿ ಬಂದ ಅರ್ಜಿಯನ್ನು ಪುರಸ್ಕರಿಸಿ ಅವರಿಗೆ ತಿಂಗಳೊಂದರ ರೂ. 500/- ಬಾಡಿಗೆ ಹಾಗೂ 5000/- ರೂ. ಗಳ ಠೇವಣಿಗೆ ಒಪ್ಪಿ ಬಾಡಿಗೆ ನೀಡಲಾಯಿತು. ನಂತರ ಈ ಕಟ್ಟಡವನ್ನು ಗೌಡ ಸಮಾಜದ ಉಪಯೋಗಕ್ಕಾಗಿ ನೆಲಸಮ ಮಾಡಿದರೂ ನೆಲ ಬಾಡಿಗೆಯಾಗಿ ಗೌಡ ಸಮಾಜ ಕಲ್ಯಾಣ ಮಂಟಪ ವತಿಯಿಂದ ವಸೂಲು ಮಾಡುತ್ತಲಿದೆ.

1981-85ರವರೆಗೆ ಹೊಸ ಆಡಳಿತ ಮಂಡಳಿಯನ್ನು ರಚಿಸಿ ಹಲವು ಯುವಕರನ್ನು ನೇಮಿಸಲಾಯಿತು. ಪೊನ್ನೆಟಿ. ಪಿ. ಪೊನ್ನಪ್ಪ, ಆಜಡ್ಕ ಕೃಷ್ಣಪ್ಪ, ಯಾಲದಾಳು ಮೋಹನ್, ನೆಯ್ಯಣಿ ಗೋಪಾಲ, ತಳೂರು ಮಾದಯ್ಯ, ಪಂಜಿಪಳ್ಳ ವೆಂಕಪ್ಪ, ಬೆಪ್ಪುರನ ಪಳಂಗಪ್ಪ, ಪುದಿನೆರವನ ರಮಾನಂದ, ನಿಡ್ಯಮಲೆ ಪ್ರಕಾಶ್, ಪಟ್ಟಡ ಪ್ರಭಾಕರ್, ಜೆ.ಎ. ಗೋಪಾಲ, ಪರ್ಲಕೋಟಿ ಗೋಪಾಲಕೃಷ್ಣ, ಕೋಳುಮುಡಿಯನ ಅನಂತಕುಮಾರ್, ಮೊಟ್ಟೇರ ಜಗದೀಶ್, ಬಾಡನ ಅಶೋಕ್‌ಕುಮಾರ್, ಸೂರ್ತಲೆ ಸೋಮಣ್ಣ, ಚೆಟ್ಟಿಮಾಡ ರವೀಂದ್ರ, ಕೋಡಿ ಬೈರಪ್ಪ, ಪಂಜಿಪಳ್ಳ ಇಂದ್ರಾಕ್ಷಿ, ಕೊಡಪಾಲು ಗಣಪತಿ, ಕುಕ್ಕುನೂರು ನಾಣಯ್ಯ, ಮುದ್ಯನ ಬೆಳ್ಳಿಯಪ್ಪ, ಕೋರನ ವಿಶ್ವನಾಥ್, ಬೈಮನ ರಾಘುವಯ್ಯ, ದಂಬೆಕೋಡಿ ಮಾದಪ್ಪ, ಪೇರಿಯನ ಸಾವಿತ್ರಿ, ಯಾಲದಾಳು ಸಾವಿತ್ರಿ, ತೋಟಂಬೈಲು ರಾಘುವೇಂದ್ರ, ಮಂಡೀರ ದೇವಯ್ಯ, ಕೋಡಿ ನಂಜುಂಡ, ಕೋರನ ಡಬ್ಲ್ಯೂ ವಿಶ್ವನಾಥ್, ಮೊಟ್ಟೇರ ಬೋಜಪ್ಪ, ಮೊಟ್ಟನ ಅಮೂಲ್ ದೇವಯ್ಯ, ಬಾರಿಕೆ ಪೂಣಚ್ಚ ಇಂತವರ ನೇತೃತ್ವದಲ್ಲಿ ಶ್ರೀ ಕುದುಪಜೆ ಕೃಷ್ಣಪ್ಪನವರು ಅಧ್ಯಕ್ಷರಾಗಿ ಶ್ರೀ ಹೊಸೂರು ಜೋಯಪ್ಪನವರು ಉಪಾಧ್ಯಕ್ಷರಾಗಿ ಶ್ರೀ ಅಜಡ್ಕ ಕೃಷ್ಣಪ್ಪನವರು ಕಾರ್ಯದರ್ಶಿಯಾಗಿ ಶ್ರೀಮತಿ ಕೂಡಕಂಡಿ ಕಾವೇರಮ್ಮನವರು ಖಜಾಂಚಿಯಾಗಿ ಸೇವೆ ಸಲ್ಲಿಸಿ ವಿದ್ಯಾ ದತ್ತಿನಿಧಿಯನ್ನು 1ಲಕ್ಷದ 85ಸಾವಿರಕ್ಕೆ ಏರಿಸಿರುವುದಲ್ಲದೆ ಸದಸ್ಯತನವನ್ನು ಹೆಚ್ಚಿಸಲಾಗಿದೆ.

ಶ್ರೀ ಕುದುಪಜೆ ಬಿ. ಕೃಷ್ಣಪ್ಪನವರ ದೀರ್ಘಕಾಲದ ಸೇವೆಯಲ್ಲಿ ನಮ್ಮ ವಿದ್ಯಾ ಸಂಘದಲ್ಲಿ ಕಲ್ಯಾಣ ನಡೆಸುವ

ಸಲುವಾಗಿ ಈಗಿರುವ ಸಭಾಂಗಣದ ಮಧ್ಯದ ಗೋಡೆ ಒಡೆಯುವುದರ ಮೂಲಕ ಸಭಾಂಗಣ ಮಾಡಲಾಗಿದೆ. ಶ್ರೀಮತಿ ಪೈಕೇರ ಘನಾವತಿ ಪೊನ್ನಪ್ಪನವರು ಉದಾರವಾಗಿ ನೀಡಿದ ರೂ. 62,000/- ದಲ್ಲಿ ಸ್ಮಶಾನದ ಸುತ್ತ ಇಟ್ಟಿಗೆಯಿಂದ ಆವರಣ ಗೋಡೆಯನ್ನು ನಿರ್ಮಿಸಲಾಗಿದೆ. 1985ರಲ್ಲಿ ಕೊಡಗು ಗೌಡ ವಿದ್ಯಾ ಸಂಘ ಮತ್ತು ದ. ಕನ್ನಡ ಗೌಡ ವಿದ್ಯಾ ಸಂಘ (ಸುಳ್ಯ) ಇವರ ನೇತೃತ್ವದಲ್ಲಿ ಹಿರಿಯರಾದ ಶ್ರೀ ಕುರುಂಜಿ ವೆಂಕಟರಮಣ ಗೌಡ, ಪಾಂಡನ ಸುಬ್ಬಯ್ಯ, ದಂಬೆಕೋಡಿ ಸುಬ್ರಾಯ, ಪೇರಿಯನ ಪೂವಯ್ಯ, ಶ್ರೀ ಮಾವಾಜಿ ಬಾಲಕೃಷ್ಣ, ಶ್ರೀ ಎನ್.ಎಸ್. ದೇವಿ ಪ್ರಸಾದ್ ಇನ್ನು ಹಲವಷ್ಟು ಗಣ್ಯರೊಡಗೂಡಿ ಕೊಡಗು ಮತ್ತು ದ.ಕ. ಜಿಲ್ಲೆಗಳ ಗೌಡ ಜನಾಂಗದಲ್ಲಿ ಬಾಂಧವ್ಯವೇರ್ಪಡುವ ಒಂದು ಬೃಹತ್ ಸಮ್ಮೇಳನವನ್ನು ನಡೆಸಲಾಯಿತು. ಇದರಿಂದ ನಮ್ಮ ಜನಾಂಗಕ್ಕೆ ಸಾಮಾಜಿಕವಾಗಿ, ರಾಜಕೀಯವಾಗಿ ಮುಂದುವರಿಯಲು ಪ್ರೇರಣೆಯಾಗಿದೆ. ಇದರ ಫಲವಾಗಿ ಕೊಡಗು ಮತ್ತು ದ. ಕ. ಜಿಲ್ಲೆಗಳ ಅಭಿವೃದ್ಧಿ ಸಂಘವೊಂದನ್ನು ಹುಟ್ಟಿ ಹಾಕಿ ಸಮ್ಮೇಳನದಲ್ಲಿ ಸಂಗ್ರಹವಾದ ಉಳಿಕೆ ಹಣದಲ್ಲಿ ಸುಳ್ಯ ನಗರದಲ್ಲಿ 0.40 ಸೆಂಟ್ ಜಾಗದ ಒಂದು ನಿವೇಶನವನ್ನು ಹೊಂದಿ ಒಂದು ಕಚೇರಿ ಕೋಣೆಯನ್ನು ನಿರ್ಮಿಸಿರುವುದು. ಮತ್ತು 1985ರಲ್ಲಿ ಗೌಡ ಸಂಸ್ಕೃತಿ ಎಂಬ ಪುಸ್ತಕವನ್ನು ಬರೆದು ಅಚ್ಚು ಹಾಕಿಸಿ ನಮ್ಮ ಸಂಸ್ಕೃತಿ ಬಗ್ಗೆ ತಿಳುವಳಿಕೆ ಮೂಡಿಸಿರುವುದು ವಿದ್ಯಾ ಸಂಘದಲ್ಲಿ ದುಡಿದ ಮಹನೀಯರದ್ದಾಗಿದೆ. ಪ್ರತಿ ವರ್ಷ ಮಹಾಸಭೆ ಮಾಡುವುದರಿಂದ ಸಂಘಕ್ಕೆ ಖರ್ಚು ಜಾಸ್ತಿಯಾಗುವುದೆಂದು ಮುಂದೆ 5ವರ್ಷಕ್ಕೊಂದು ಬಾರಿ ಮಹಾಸಭೆ ನಡೆಸುವುದಾಗಿ ತೀರ್ಮಾನ ಕೈಗೊಳ್ಳಲಾಯಿತು.

ಶ್ರೀ ಕುದುಪಜೆ ಕೃಷ್ಣಪ್ಪನವರ ಅಧಿಕಾರವದಿಯಲ್ಲಿ ಅನಾರೋಗ್ಯದಿಂದ ಬಳಲಿ ವಿಧಿವಶವಾಗಿರುವುದು ತುಂಬಲಾರದ ನಷ್ಟವಾಗಿದೆ. ಸಂಘಕ್ಕೆ ನೂತನವಾಗಿ ಶ್ರೀ ಕುಯ್ಯಮುಡಿ ಕೆ. ಪೂರ್ಣಯ್ಯನವರನ್ನು ಅಧ್ಯಕ್ಷರನ್ನಾಗಿ ಶ್ರೀ ಪಂಜಿಪಳ್ಳ ವೆಂಕಪ್ಪನವರನ್ನು ಉಪಾಧ್ಯಕ್ಷರಾಗಿ ಗೌ|| ಕಾರ್ಯದರ್ಶಿ ಕೋಳುಮುಡಿಯನ ಆರ್. ಅನಂತಕುಮಾರ್‌ರವರನ್ನು , ಖಜಾಂಚಿಯಾಗಿ ಶ್ರೀಮತಿ ಕೂಡಕಂಡಿ ಕಾವೇರಮ್ಮ ಸಹಕಾರ್ಯದರ್ಶಿಯಾಗಿ ಬಾಳಡಿ ಸಿ. ಉತ್ತಯ್ಯನವರನ್ನು ಮತ್ತು ನೂತನ ಸದಸ್ಯರನ್ನೊಳಗೊಂಡ ಹಲವು ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲಾಗಿದೆ.

ಸಂಘದಲ್ಲಿ ನೀರಿನ ಕೊರತೆಯಿದ್ದುದರಿಂದ ಒಂದು ಟ್ಯಾಂಕ್ ಮತ್ತು ಬೋರ್‌ವೆಲ್ ನಿರ್ಮಾಣ ಸಂಘದ ಸುತ್ತ ತಡೆಗೋಡೆ ನಿರ್ಮಾಣ, ದಾನಿಗಳಾದ ಶ್ರೀಮತಿ ಕೊಡೆಕಲ್ ಚಂದ್ರಶೇಖರ ಪೂಣಚ್ಚನವರಿಂದ ಭವನದ ಮುಖ್ಯದ್ವಾರ ನಿರ್ಮಾಣ, ಮೈಸೂರಿನ ವಿದ್ಯಾರ್ಥಿ ಭವನಕ್ಕೆ ನೂತನ ಅಡುಗೆ ಕೋಣೆ ನಿರ್ಮಾಣ, ಶ್ರೀ ಪಂಜಿಪಳ್ಳ ವೆಂಕಪ್ಪನವರ ಉಸ್ತುವಾರಿಯಲ್ಲಿ ಮೈಸೂರು ಕಟ್ಟಡದಲ್ಲಿ ಸಭಾಂಗಣದ ನಿರ್ಮಾಣ 14-2-96ರಲ್ಲಿ ಸುಳ್ಯದಲ್ಲಿ ಎರಡನೇ ಸಮ್ಮೇಳನದಲ್ಲಿ ಜನಾಂಗದ ಕುಪ್ಪಸದಟ್ಟಿ ಉಡುಪಿನೊಂದಿಗೆ ಸಕ್ರಿಯವಾಗಿ ಪಾಲ್ಗೊಳ್ಳುವಿಕೆ ಸದಸ್ಯತನ ಹೆಚ್ಚಳ, ಸಾಂಸ್ಕೃತಿಕ ಅಕಾಡೆಮಿ ರಚನೆ, ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣನವರ ನೇತೃತ್ವದಲ್ಲಿ ಮಹಿಳಾ ಒಕ್ಕೂಟ ರಚನೆ ಮಾಡುವುದರೊಂದಿಗೆ ಹೆಚ್ಚಿನ ಸದಸ್ಯತನವನ್ನು ನೊಂದಣಿ ಮಾಡಿದಂತೆ ಶ್ರೀಮತಿ ಪಂಜಿಪಳ್ಳ ಇಂದ್ರಾಕ್ಷಿ ಶ್ರೀ ಮೊಟ್ಟೇರ ಜಗದೀಶ್, ಶ್ರೀ ಪಟ್ಟಡ ಪ್ರಭಾಕರ್, ಶ್ರೀಮತಿ ಕೂಡಕಂಡಿ ಕಾವೇರಮ್ಮ ಹಾಗೂ ಕೋಳುಮುಡಿಯನ ಅನಂತ ಕುಮಾರ್‌ರವರಿಗೆ ಬಹುಮಾನ ನೀಡಿ ಪುರಸ್ಕರಿಸಿರುವುದು. ಒಟ್ಟು ಸಂಘದಲ್ಲಿ 1774 ಸದಸ್ಯರಿರುವುದನ್ನು ಇಲ್ಲಿ ಸ್ಮರಿಸಬಹುದು.

1997ರಲ್ಲಿ ಕೊಡಗು ಗೌಡ ವಿದ್ಯಾ ಸಂಘದ ಆಶ್ರಯದಲ್ಲಿ ಹುತ್ತರಿ ಹಬ್ಬವನ್ನು ಮೊದಲ ಬಾರಿಗೆ

ಪ್ರಾರಂಭಿಸಲಾಯಿತು. ಇದರ ನೇತೃತ್ವವನ್ನು ಶ್ರೀಗಳಾದ ಬೈತಡ್ಕ ಬೆಳ್ಳಿಯಪ್ಪ, ಕೋಡಿ ಚಂದ್ರಶೇಖರ್, ಪಟ್ಟಡ ಪ್ರಭಾಕರ್, ಕರಕರನ ಉತ್ತಯ್ಯ, ಕೋಳುಮುಡಿನ ಆನಂತ್‌ಕುಮಾರ್, ಶ್ರೀಮತಿ ಕೂಡಕಂಡಿ ಕಾವೇರಮ್ಮನವರು ವಹಿಸಿಕೊಂಡು ಶ್ರೀ ಯಾಲದಾಳು ಗಣಪತಿಯವರ ಗದ್ದೆಯಿಂದ ಜನಾಂಗದವರೆಲ್ಲ ಸೇರಿ ಕದಿರು ತರಲಾಯಿತು.

ಅಲ್ಲದೆ ಗೌಡ ಜನಾಂಗದಲ್ಲಿ ವಿದ್ಯಾ ಸಂಘದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಬಹಿರಂಗ ಚುನಾವಣೆಯನ್ನು ಏರ್ಪಡಿಸುವ ನಿರ್ಧಾರವನ್ನು ಮಂಡಳಿ ನಿರ್ಣಯ ಕೈಗೊಂಡು ಮುಂದಿನ ಸಾಲಿಗೆ ಘೋಷಣೆ ಮಾಡಿತು. ಇದರಿಂದ ಪ್ರತಿಯೊಬ್ಬ ಸದಸ್ಯರನ್ನು ಬೆನ್ನುತಟ್ಟಿ ಎಬ್ಬಿಸಿ ಗೌಡ ವಿದ್ಯಾ ಸಂಘದಲ್ಲಿ ಸಕ್ರಿಯವಾಗಿ ಭಾಗವಹಿಸುವಂತಾಯಿತು ಈ ಅವಧಿಯಲ್ಲಿ ಸುಮಾರು 1,99,650ರೂಪಾಯಿಗಳ ದತ್ತಿ ನಿಧಿಯನ್ನು ಸಂಗ್ರಹಿಸಲಾಯಿತು.

ದಿನಾಂಕ 1-12-2000ದಂದು ಚುನಾವಣೆಯ ಮೂಲಕ ಆರಿಸಿ ಬಂದ ಅಧ್ಯಕ್ಷರಾಗಿ ಶ್ರೀ ಹೊಸೂರು ರಮೇಶ್ ಜೋಯಪ್ಪ, ಉಪಾಧ್ಯಕ್ಷರಾಗಿ ಶ್ರೀ ಸೂರ್ತಲೆ ಆರ್. ಸೋಣ್ಣ, ಗೌ|| ಕಾರ್ಯದರ್ಶಿಯಾಗಿ ಕೊಡೆಕಲ್ ಆರ್. ವಿದ್ಯಾಧರ್, ಉಪಕಾರ್ಯದರ್ಶಿಯಾಗಿ ಅಂಬೆಕಲ್ ನವೀನ್ ಕುಶಾಲಪ್ಪ , ಖಜಾಂಚಿಯಾಗಿ ಪೊನ್ನಚನ ಸೋಮಣ್ಣ, ಆಡಳಿತ ಮಂಡಳಿಯ ನಿರ್ದೇಶಕರಾಗಿ ಶ್ರೀಯುತರಾದ ಯಲದಾಳು ಸಾವಿತ್ರಿ , ಅಮೆ ಕಮಲ ಗಣಪತಿ, ಡಾ|| ಕುಯ್ಯಮುಡಿ ಅಪ್ಪಜ್ಜಿ, ಕೋಡಿ ಚಂದ್ರಶೇಖರ್ ಕುಕ್ಕೂನೂರ್ ನಾಣಯ್ಯ, ಸೂದನ ಈರಪ್ಪ, ಪಾಣತ್ತಲೆ ಬಾಲಕೃಷ್ಣ, ಬೆಪ್ಪುರನ ಮೇದಪ್ಪ, ಮೊಟ್ಟೇರ ಬಾಲಕೃಷ್ಣ, ಪರ್ಲಕೋಟಿ ಕಾವೇರಪ್ಪನವರನ್ನು ಒಳಗೊಂಡು ಸಮಿತಿಯು ಆಯ್ಕೆಯಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಮೊಟ್ಟ ಮೊದಲಿಗೆ ನಮ್ಮ ಸಂಘದ ಲೆಕ್ಕ ಪರಿಶೋಧನೆಯನ್ನು ಪುನರ ಪರಿಶೀಲಿಸಿ ಲೆಕ್ಕ ಪರಿಶೋಧಕರಾದ ಮೈಸೂರಿನ ಶ್ರೀ ಬಿದರುಪಾಣೆ ದೇವಯ್ಯ, ಶ್ರೀ ಹುದೇರಿ ಸೋಮಣ್ಣ ತ್ತು ಶ್ರೀ ದಂಬೆಕೋಡಿ ಪೂರ್ಣಚಂದ್ರ ಇವರ ಸಹಾಯದಿಂದ ಸಂಘದಿಂದ ಲೆಕ್ಕವನ್ನು ಪರಿಶೀಲಿಸಿ ಜಿಲ್ಲಾ ನೋಂದಾವಣಾಧಿಕಾರಿಯವರಲ್ಲಿ ನೋಂದಾಯಿಸಲಾಗಿದೆ. ಅಲ್ಲದೆ ಕೆಳಗಿನ ಕಾರ್ಯಕ್ರಮಗಳನ್ನು ಕೈಗೊಂಡಿರುತ್ತಾರೆ. 20-1-2002ರಲ್ಲಿ ಮಕ್ಕಳಿಗೆ ಪ್ರಬಂಧ ಸ್ಪರ್ಧೆ, ರಸ ಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಯಿತು. ಕಟ್ಟಡದ ಅಂಗಳಕ್ಕೆ ಡಾಮರೀಕರಣ ಮಾಡಿರುವುದು, ಮತ್ತು ತಡೆಗೋಡೆಯನ್ನು ನಿರ್ಮಿಸಿರುವುದು, ಚರಂಡೆಟಿ ಪ್ರಾಥಮಿಕ ಶಾಲೆಯಲ್ಲಿ ಪುಸ್ತಕ ಲೇಖನಿ ಸಾಮಾಗ್ರಿಗಳನ್ನು ಪುಕ್ಕಟೆಯಾಗಿ ವಿತರಿಸುವುದು 8,9 ಮತ್ತು 10ನೇ ತರಗತಿಯಲ್ಲಿ ಓದುತ್ತಿರುವ ಕಡು ಬಡ ಮಕ್ಕಳಿಗೆ ಧನ ಸಹಾಯ ಮಾಡುತ್ತಿರುವುದು. ಸಂಘದ ಸ್ಥಾಪಕ ಭಾವಚಿತ್ರವನ್ನು ಸಭಾಂಗಣದಲ್ಲಿ ಅನಾವರಣ ಮಾಡಿರುವುದು. ಸಾಹಿತಿ ಶ್ರೀ ಬಾರಿಯಂಡ ಜೋಯಪ್ಪನವರ ಅರೆ ಭಾಷೆ ಕಥಾ ಸಂಕಲನವನ್ನು ಬಿಡುಗಡೆಗೊಳಿಸಿರುವುದು. ತಣ್ಣಿಮಾನಿ ಹಿರಿಯ ಪ್ರಾಥಮಿಕ ಶಾಲೆ. 1ನೇ ಮೊಣ್ಣಗೇರಿ ಶಾಲೆಗಳಲ್ಲಿ ಪುಸ್ತಕ ಸಾಮಾಗ್ರಿಗಳನ್ನು ನೀಡಿರುವುದು. 19-6-2004ರಲ್ಲಿ ಸಿದ್ದಲಿಂಗಪುರದಲ್ಲಿ 142 ವಿದ್ಯಾರ್ಥಿಗಳಿಗೆ ಲೇಖನಿ ಪುಸ್ತಕಗಳನ್ನು ನೀಡಿದ್ದು, ಚಿತ್ರ ಕಲಾ ಸ್ಪರ್ಧೆ, ಕರಕುಶಲ ಸ್ಪರ್ಧೆ, ಸಾಮಾನ್ಯ ಜ್ಞಾನ ಮತ್ತು ಕುವೆಂಪು ಶತಮಾನೋತ್ಸವ ಭಾವಗೀತೆಗಳನ್ನು ಹಾಡುವ ಸ್ಪರ್ಧೆ ನಡೆಸಿರುವುದು. ಗುಡ್ಡಮನೆ ಅಪ್ಪಯ್ಯ ಗೌಡ ಸ್ಮಾರಕ ಸಮಿತಿಗೆ ರೂ. 5000/- ಧನ ಸಹಾಯ ನೀಡಿರುವುದು. ಮಡಿಕೇರಿಯ ಶಾಸಕ ಶ್ರೀ ಕೊಂಬಾರನ ಜಿ. ಬೋಪಯ್ಯ, ಸೋಮವಾರಪೇಟೆ ಶಾಸಕ ಶ್ರೀ ಬಿ.ಎ. ಜೀವಿಜಯ, ರಾಜ್ಯ ಪ್ರಶಸ್ತಿ ವಿಜೇತೆ ಶಿಕ್ಷಕಿ ಶ್ರೀಮತಿ ಹೇಮಾವತಿ ಇವರುಗಳನ್ನು ಸನ್ಮಾಸಿರುವುದು ಶ್ಲಾಘನೀಯ. 2005ರಲ್ಲಿ ಒಟ್ಟು 68 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಿರುವುದು ಸ್ಮರಣೆಯ ಹಾಗೂ ಸಮಿತಿಯ ಆಡಳಿತಾವಧಿಯಲ್ಲಿ

ಒಟ್ಟು 325 ಹೊಸ ಸದಸ್ಯರನ್ನು ನೋಂದಾಯಿಸಲಾಗಿದೆ.

2005-10ನೇ ಸಾಲಿಗೆ ಆಡಳಿತ ಮಂಡಳಿಯ ಚುನಾವಣೆ ನಡೆದು ಕೆಳ ಕಂಡವರು ಆಯ್ಕೆಯಾಗಿದ್ದಾರೆ. ಅಧ್ಯಕ್ಷರಾಗಿ ಶ್ರೀ ರಮೇಶ್‌ರವರ ಪುನರ್ ಆಯ್ಕೆ, ಉಪಾಧ್ಯಕ್ಷರಾಗಿ ಶ್ರೀ ದಂಬೆಕೋಡಿ ಆನಂದರವರು, ಗೌ|| ಕಾರ್ಯದರ್ಶಿಯಾಗಿ ಶ್ರೀ ಕೋಡಿ ಚಂದ್ರಶೇಖರ್, ಸಹಕಾರ್ಯದರ್ಶಿಯಾಗಿ ಶ್ರೀ ಅಂಬೆಕಲ್ ನವೀನ್ ಕುಶಾಲಪ್ಪ, ಖಜಾಂಚಿಯಾಗಿ ಶ್ರೀ ಪೊನ್ನಚ್ಚನ ಸೋಮಣ್ಣ, ಸದಸ್ಯರುಗಳಾಗಿ ಶ್ರೀಯುತರಾದ ಅಮೆ ಕಮಲ ಗಣಪತಿ, ತೆಕ್ಕಡೆ ಗುಲಾಬಿ ಜನಾರ್ಧನ್, ಕುದುಪಜೆ ಶಾಂತಿ ಬೋಜಪ್ಪ, ಅರಂಬೂರು ವಸಂತ್ ಕುಮಾರ್, ತುಂತ್ತಜೆ ತಿಮ್ಮಯ್ಯ, ಕೋಳುಮೂಡಿಯನ ಆರ್. ಅನಂತ ಕುಮಾರ್, ಕೊಡಪಾಲ್ ಗಪ್ಪು ಗಣಪತಿ, ಮೊಟ್ಟನ ಡಾಲು ಜ್ಯೋತಿ ಶಂಕರ್, ಕಟ್ಟೆಮನೆ ಆರ್. ಸೋನಾಜಿತ್, ಕೆದಂಬಾಡಿ ಚಂದ್ರಶೇಖರ್ ಶಿವಾಜಿ ಇವರ ಕಾಲಾವಧಿಯಲ್ಲಿ ಸ್ಪರ್ಧಾತ್ಮಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಕಳೆದ ಸಾಲಿನಂತೆ ಬಡಮಕ್ಕಳಿಗೆ ಸಹಾಯ ಧನದ ವಿತರಣೆ ಪ್ರತಿಭಾ ಪುರಸ್ಕಾರ ನೀಡಿರುವುದು, ವಿದ್ಯಾ ಸಂಘದ ಹಿಂಬದಿಯಲ್ಲಿ ಇಂಟರ್ ಲಾಕ್ ವ್ಯವಸ್ಥೆ ಮಾಡಿ ಬೊಫೆ ಹಾಲ್ ಅನ್ನು ಸುಸಜ್ಜಿತಗೊಳಿಸಿರುವುದು. ಕೊಡಗು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಗೌರಮ್ಮ ದತ್ತಿನಿಧಿ ಪುರಸ್ಕೃತರಾದ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಳಿಯಪ್ಪ ನವರಿಗೆ 17-9-2006ರಲ್ಲಿ ಸನ್ಮಾನಿಸಿರುವುದು. ಮೈಸೂರಿನ ವಿದ್ಯಾರ್ಥಿ ಭವನವನ್ನು ವಿಸ್ತರಿಸಿ, 20 ವಿದ್ಯಾರ್ಥಿಗಳಿಗೆ ಹೆಚ್ಚಿನ ವಸತಿ ಸ್ಥಳಾವಕಾಶವನ್ನು ನೀಡಿದ್ದು, ರಾಜ್ಯ ಪ್ರಶಸ್ತಿ ಶಿಕ್ಷ ಕ ವಿಜೇತ ಶ್ರೀ ಬಾರಿಯಂಡ ಜೋಯಪ್ಪನವರಿಗೆ ಸನ್ಮಾನಿಸಿರುವುದು. ಹೀಗೆ ಮತ್ತು ಹಲವಾರು ಜನೋಪಯೋಗಿ ಕೆಲಸ ಕಾರ್ಯಗಳನ್ನು ಮಾಡುತ್ತ ಬಂದಿರುತ್ತದೆ. ಸುಮಾರು 20 ವರ್ಷಗಳ ಕಾಲಾವಧಿಯಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದ್ದ ವ್ಯವಸ್ಥಾಪಕ ಶ್ರೀ ಚೆಟ್ಟಿಮಾಡ ರಘುಪತಿಯವರಿಗೆ ಗೌರವ ಪೂರ್ವಕವಾಗಿ ಸಂಘದಿಂದ ನಿವೃತ್ತಿ ಕೊಟ್ಟು ಬೀಳ್ಕೊಡಲಾಗಿದೆ. ನೂತನವಾಗಿ ಶ್ರೀ ಕಾಳೇರಮ್ಮನ ವಸಂತ್‌ಕುಮಾರ್ ಎಂಬುವವರನ್ನು ದಿನಾಂಕ 7-5-2006ರಲ್ಲಿ ವ್ಯವಸ್ಥಾಪಕರಾಗಿ ನೇಮಕ ಮಾಡಿಕೊಳ್ಳಲಾಗಿದೆ. ಈ ಆಡಳಿತ ಮಂಡಳಿಯು ಗೌಡ ವಿದ್ಯಾ ಸಂಘಕ್ಕೆ 100ವರ್ಷಗಳ ಇತಿಹಾಸವನ್ನು ಕಂಡಾಗ ಶತಮಾನೋತ್ಸವ ಸಮಾರಂಭವನ್ನು ಆಚರಿಸುವ ಸಲುವಾಗಿ ಶತಮಾನೋತ್ಸವದ ಸಮಿತಿಯ ಅಧ್ಯಕ್ಷರನ್ನಾಗಿ ಶಾಸಕ ಕರ್ನಾಟಕ ವಿಧಾನ ಸಭೆಯ ಉಪಾಧ್ಯಕ್ಷರಾದ ಶ್ರೀ ಕೊಂಬರನ ಜಿ. ಬೋಪಯ್ಯನವರ ನೇತೃತ್ವದಲ್ಲಿ ಹಲವು ಸಮಿತಿಗಳನ್ನು ಒಳಗೊಂಡು ದಿನಾಂಕ 24,25 ಡಿಸೆಂಬರ್ 2008ರಂದು ಆಚರಿಸುವ ಈ ಶುಭ ಸಮಾರಂಭಕ್ಕೆ ಗೌಡ ವಿದ್ಯಾಸಂಘಕ್ಕೆ ಶುಭ ಹಾರೈಕೆ . ಒಟ್ಟನಲ್ಲಿ ನಮ್ಮ ವಿದ್ಯಾ ಸಂಘದಲ್ಲಿ ಒಟ್ಟು 3000ಕ್ಕೂ ಮಿಕ್ಕಿ ಸದಸ್ಯರಿರುವರು ಸಂತೋಷಕರ ಹಾಗೂ 190ಮಂದಿ ದಾನಿಗಳಿಂದ ರೂ. 4,34,209ರೂ. ಗಳ ದತ್ತಿನಿಧಿ ಸಂಗ್ರಹವಾಗಿರುವುದು ಸಾಧನೆಯಾಗಿದೆ.

ಸಾರಾಂಶ: ಕೊನೆಯಲ್ಲಿ ಹೇಳುವುದಾದರೆ 1908ರಲ್ಲಿ ಸ್ಥಾಪನೆಗೊಂಡ ಕೊಡಗು ಗೌಡ ವಿದ್ಯಾ ಸಂಘಕ್ಕೆ ಶತಾಯುಷ್ಯವಾದ ಸಂದರ್ಭದಲ್ಲಿ ನಮ್ಮ ಹಿರಿಯರು ಇಟ್ಟಂತ ಪ್ರತಿಯೊಂದು ಹೆಜ್ಜೆಯಲ್ಲಿಯೂ ಪ್ರಗತಿಯನ್ನು ಕಾಣುತ್ತಾ ಬಂದಿದೆ. ಮನುಷ್ಯನಿಗೆ ವಿದ್ಯೆ ಎಷ್ಟು ಅಗತ್ಯವೆಂಬುವುದು ಕೃಷಿಯನ್ನೇ ಅವಲಂಬಿಸಿಕೊಂಡಿದ್ದ ಗೌಡ ಜನಾಂಗದವರಲ್ಲಿ ಈಗ ಅದೆಷ್ಟೋ ಮಂದಿ ವಿದ್ಯಾವಂತರಿದ್ದಾರೆ. ನಮ್ಮ ರಾಜ್ಯದ , ರಾಷ್ಟ್ರದ ಮೂಲೆ, ಮೂಲೆಗಳಲ್ಲಿ ಸೈನ್ಯದಲ್ಲಿ ಅದೆಷ್ಟೋ ನಮ್ಮ ಜನ ಅತ್ಯುನ್ನತ ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರಿ ನೌಕರಿಯಲ್ಲಿ, ಕ್ರೀಡೆಗಳಲ್ಲಿ, ಪತ್ರಿಕೋಧ್ಯಮಗಳಲ್ಲಿ ಅದೆಷ್ಟೋ ಮಂದಿ ಸೇವೆ ಸಲ್ಲಿಸಿ ರಾಷ್ಟ್ರ ಪ್ರಶಸ್ತಿ ರಾಜ್ಯ ಪ್ರಶಸ್ತಿ, ಉತ್ತಮ ಶಿಕ್ಷಕ ಪ್ರಶಸ್ತಿಗಳನ್ನು

ಹಲವಷ್ಟು ಗಣ್ಯರು ಪಡೆದುಕೊಂಡಿರುತ್ತಾರೆ. ಇದಕ್ಕೆಲ್ಲ ನಮ್ಮ ಹಿರಿಯರು ಕಂಡ ಕನಸು ಕಾರಣವಾಗಿದೆ.

ಇತ್ತೀಚಿನ ದಿನಗಳಲ್ಲಿ ವಿದ್ಯಾಸಂಘದ ಮೂಲಕ ನಮ್ಮ ಭಾಷೆ ಮತ್ತು ಸಂಸ್ಕೃತಿಯನ್ನು ಅಭಿವೃದ್ಧಿ ಪಡಿಸಲು ಹಲವು ಸರ್ಕಾರಿ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ಮೇಳದಲ್ಲಿ ಭಾಗವಹಿಸಿ ಜನಾಂಗದ ಸಂಸ್ಕೃತಿಯನ್ನು ಪ್ರೋತ್ಸಾಹಿಸುತ್ತಾ ಬಂದಿರುತ್ತದೆ. ಪತ್ರಿಕೆಗಳ ಮೂಲಕ ಶ್ರೀ ಸೂದನ ಈರಪ್ಪನವರ 'ಗೌಡದೂನಿ' ಶ್ರೀ ದಂಬೆಕೋಡಿ ಮುದ್ದಪ್ಪನವರ 'ಸೂಜಿ ಪಾಕ್ಷಿಕ' ಪಾಲಾಕ್ಷ ಅವರ 'ಸೂಜಿ ' ದೈನಿಕ ಶ್ರೀ ಪಟ್ಟಡ ಪ್ರಭಾಕರ ಶೀಲಾಮಣಿಯವರಿಂದ 'ಕೊಡಗು ಸಂಗಾತಿ' ಎಂಬ ಪತ್ರಿಕೆಗಳು ಕೂಡ ನಮ್ಮ ಜನಾಂಗದವರಲ್ಲಿ ತಿಳುವಳಿಕೆ ಮೂಡಿಸುವ ಮತ್ತು ಕಲಾಭಿಮಾನಿಗಳನ್ನು ಬರಹಗಾರರನ್ನು ಹುಟ್ಟು ಹಾಕಲು ಕಾರಣವಾಗಿವೆ. ಅಲ್ಲದೆ ಪತ್ರಿಕಾ ಮಾಧ್ಯಮಗಳ ಅವಶ್ಯಕತೆ ತುಂಬಾ ಬೇಕಾಗಿರುತ್ತವೆ. ಮಡಿಕೇರಿಯ ಆಕಾಶವಾಣಿ ಕೇಂದ್ರದಲ್ಲಿ ನಮ್ಮ ಸಂಸ್ಕೃತಿಗೆ ಸೀಮಿತವಾಗಿ ಹಲವಷ್ಟು ಕಾರ್ಯಕ್ರಮಗಳನ್ನು ಮಹಿಳಾ ಒಕ್ಕೂಟದ ಪರವಾಗಿ ಮತ್ತು ಸಾಂಸ್ಕೃತಿಕ ಅಕಾಡೆಮಿಯವರ ಪರವಾಗಿ ಪ್ರಚಾರ ಪಡಿಸಿರುತ್ತದೆ. ಈಗ ಪ್ರಸ್ತುತ ಶ್ರೀ ಯಾಲದಾಳು ಕೇಶವಾನಂದನವರ ನೇತೃತ್ವದಲ್ಲಿ ಅರೆ ಭಾಷಾ ಪ್ರಚಾರ ಸಮಿತಿಯನ್ನು ರಚಿಸಿ ದಿನ ನಿತ್ಯ ಅರೆ ಭಾಷೆ ವಾರ್ತೆಯನ್ನು ಪ್ರಚಾರ ಮಾಡುವ ಕಾರ್ಯಕ್ರಮವನ್ನು(ಸುದ್ದಿ ಜೊಂಪೆ) ನೆರವೇರಿಸುತ್ತಲಿದೆ. ಇಷ್ಟು ಅಭಿವೃದ್ಧಿ ಹೊಂದಿದ ನಮ್ಮ ಜನಾಂಗಕ್ಕೆ ಹಿರಿಯರು ಕಟ್ಟಿ ಬೆಳೆಸಿದ ಈ ವಿದ್ಯಾ ಸಂಘವೇ ಕಾರಣ. ಹಲವಷ್ಟು ಕಾರ್ಯಕ್ರಮಗಳು ಆಗಿರುತ್ತದೆ. ಆದರೆ ವಿದ್ಯಾ ಸಂಘವು ಇನ್ನೊಂದು ದಿಟ್ಟ ಹೆಜ್ಜೆಯನ್ನಿಟ್ಟು ಸಂಘದ ಆಶ್ರಯದಲ್ಲಿ ಒಂದು ಶಾಲೆಯನ್ನು ಸ್ಥಾಪಿಸುವ ಆಶಯವನ್ನು ಹೊಂದಿದೆ. ರಾಜಕೀಯವಾಗಿ ನಮ್ಮ ಹಲವು ಗಣ್ಯರು ಜನಾಂಗದ ಕೀರ್ತಿಯನ್ನು ಬೆಳಗಿದ್ದಾರೆ. ಕೊಡಗು 'ಸಿ' ರಾಜ್ಯವಾಗಿದ್ದಾಗ ಶ್ರೀ ನಿಡ್ಯಮಲೆ ಸೋಮಣ್ಣನವರು ಪಾರ್ಲಿಮೆಂಟ್ ಸದಸ್ಯರಾಗಿಯೂ, ಶ್ರೀ ಕೋರನ ದೇವಯ್ಯನವರು ಕೊಡಗು 'ಸಿ' ರಾಜ್ಯದ ವಿಧಾನ ಸಭಾ ಸದಸ್ಯರಾಗಿಯೂ, ಶ್ರೀ ಪಾಂಡನ ಸುಬ್ಬಯ್ಯನವರು ವಿಧಾನ ಸಭಾ ಸದಸ್ಯರಾಗಿ ಶ್ರೀ ದಂಬೆಕೋಡಿ ಎ. ಚಿಣ್ಣಪ್ಪನವರು ಎರಡು ಬಾರಿ ವಿಶಾಲ ಕರ್ನಾಟಕದ ವಿಧಾನ ಸಭಾ ಸದಸ್ಯರಾಗಿ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳಾಗಿ, ಶ್ರೀ ದಂಬೆಕೋಡಿ ಮಾದಪ್ಪನವರು ವಿಧಾನ ಸಭಾ ಸದಸ್ಯರಾಗಿ ನಂತರ ಶ್ರೀ ಕೊಂಬಾರನ ಜಿ. ಬೋಪಯ್ಯನವರು ಸತತವಾಗಿ ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿ ಈಗ ವಿಧಾನ ಸಭಾ ಉಪಸಭಾಪತಿಯಾಗಿರುವುದು ನಮಗೆ ಹೆಮ್ಮೆ ತರವಂತದ್ದಾಗಿದೆ.

ಅಲ್ಲದೆ ಮಡಿಕೇರಿಯ ಕೇಂದ್ರ ಬಿಂದು ಪುರಸಭೆಯ ಅಧ್ಯಕ್ಷರಾಗಿ ಶ್ರೀ ಮುಕ್ಕಾಟಿ ವಾಸುದೇವರವರು ಆಯ್ಕೆಯಾಗಿದ್ದು, ಮಹಿಳೆಯರಲ್ಲಿ ಮೊಟ್ಟ ಮೊದಲ ತಾಲೂಕು ಬೋರ್ಡ್ ಸದಸ್ಯರಾಗಿ ಶ್ರೀಮತಿ ಕೋಳುಮುಡಿಯನ ಪಾರ್ವತಿ ರಾಮಯ್ಯನವರು, ಜಿಲ್ಲಾ ಪಂಚಾಯತ್‌ನ ಉಪಾಧ್ಯಕ್ಷರಾಗಿ ಶ್ರೀಮತಿ ಅಮೆ ಕಮಲಾಗಣಪತಿಯವರು, ಪುರಸಭೆಯ ಮಹಿಳಾ ಅಧ್ಯಕ್ಷರಾಗಿ ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣನವರ ಆಯ್ಕೆ, ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರಾಗಿ ಶ್ರೀ ಊರುಬೈಲು ಜಯ ಪ್ರಕಾಶ್‌ರವರ ಆಯ್ಕೆ ಇವುಗಳೆಲ್ಲಾ ವಿದ್ಯಾ ಸಂಘದ ಸಾಧನೆ ಎಂದರೆ ತಪ್ಪಾಗಲಾರದು.

ಈ ಸಂವತ್ಸರಕ್ಕೆ ನಮ್ಮ ಕುಲುಗುರು ವೆಂಕಟೇಶ್ವರ, ಮಾತೆ ಕಾವೇರಿ ಆಶೀರ್ವದಿಸಲೆಂದು ಹಾರೈಸುತ್ತಾ ನನ್ನ ಈ ಲೇಖನಕ್ಕೆ ವಿರಾಮವಿಯ್ಯುತ್ತಿದ್ದೇನೆ.

20-21ನೇ ಶತಮಾನದಲ್ಲಿ ಜನಾಂಗದ ವಿದ್ಯಾಭ್ಯಾಸಕ್ಕಾಗಿ ದುಡಿದ ಮಹನೀಯರು ಕೊಡಗು ಗೌಡ ವಿದ್ಯಾ ಸಂಘದ ಅಧ್ಯಕ್ಷರುಗಳು

1.	ದಿ|| ಕುಂಭಗೌಡನ ಕುಶಾಲಪ್ಪನವರು	1908-1918
2.	ದಿ|| ತೆಕ್ಕಡೆ ಸುಬ್ಬಯ್ಯನವರು	1918-1922
3.	ದಿ|| ಮೂಟೇರ ಅಣ್ಣಯ್ಯನವರು	1922-1924
4.	ದಿ|| ಶಿರಕಜೆ ಪೊನ್ನಪ್ಪನವರು	1924-1925
5.	ದಿ|| ಚೆರಿಯಮನೆ ಕುಶಾಲಪ್ಪನವರು	1925-1927
6.	ದಿ|| ನಿಡ್ಯಮಲೆ ಮುದ್ದಪ್ಪ, ಬಿ.ಎ.ಬಿಎಲ್	1927-1928
7.	ದಿ|| ತೆಕ್ಕಡೆ ಆನಂದಯ್ಯನವರು	1928-1932
8.	ದಿ|| ಬಡ್ಡನ ಮುತ್ತಣ್ಣನವರು	1932-1934
9.	ದಿ|| ಉಳುವಾರನ ಅಪ್ಪಯ್ಯನವರು	1934-1936
10.	ದಿ|| ನಿಡ್ಯಮಲೆ ಸೋಮಣ್ಣ ಬಿ.ಎ. ಬಿಲ್(M.P)	1936-1937
11.	ದಿ|| ತೆಕ್ಕಡೆ ಆನಂದಯ್ಯನವರು	1937-1939
12.	ದಿ|| ನಿಡ್ಯಮಲೆ ಮುದ್ದಪ್ಪ, ಬಿ.ಎ. ಬಿಎಲ್	1940-1949
13.	ದಿ|| ಕೋರನ ದೇವಯ್ಯ, ಮಾಜಿ ಶಾಸಕರು	1949-1956
14.	ದಿ|| ತೋಟಂಬೈಲು ಮಾದಪ್ಪನವರು	1956-1958
15.	ದಿ|| ಚೆರಿಯಮನೆ ಪೊನ್ನಪ್ಪನವರು	1958-1961
16.	ದಿ|| ದಂಬೆಕೋಡಿ ಎ. ಚಿಣ್ಣಪ್ಪ, ಬಿ. ಕಾಂ. ಬಿಎಲ್	1961-1964
17.	ದಿ|| ತೋಟಂಬೈಲು ಚಂಗಪ್ಪ, ಬಿ.ಕಾಂ. ಬಿಎಲ್	1964-1968
18.	ದಿ|| ದಂಬೆಕೋಡಿ ಎ. ಚಿಣ್ಣಪ್ಪ, ಬಿ. ಕಾಂ. ಬಿಎಲ್ ಮಂತ್ರಿಗಳು, ಕರ್ನಾಟಕ ರಾಜ್ಯ	1968-1971
19.	ದಿ || ಚೆರಿಯಮನೆ ಪೊನ್ನಪ್ಪನವರು	1971-1974
20.	ದಿ|| ಪಾಂಡನ ಡಿ. ಸುಬ್ಬಯ್ಯನವರು, ಮಾಜಿ ಶಾಸಕರು	1974-1981
21.	ದಿ|| ಕುದುಪಜೆ, ಬಿ. ಕೃಷ್ಣಪ್ಪನವರು ಎಂ.ಎ.ಬಿಎಲ್	1981-1995
22.	ಶ್ರೀ ಕುಯ್ಯಮುಡಿ ಕೆ. ಪೂರ್ಣಯ್ಯನವರು	1995-2000
23.	ಶ್ರೀ ಹೊಸೂರು ರಮೇಶ್ ಜೋಯಪ್ಪ	2000-ದಿಂದ

ಆಧಾರ:ಕೊಡಗು ಗೌಡ ವಿದ್ಯಾಸಂಘದ ಮಾಸಿಕ ಸಭೆಯ ನಿರ್ಣಯ ಪುಸ್ತಕ

ಸಹಾಯ: ಅಧ್ಯಕ್ಷರು ಮತ್ತು ವ್ಯವಸ್ಥಾಪಕರು, ಕೊಡಗು ಗೌಡ ವಿದ್ಯಾ ಸಂಘ, ಮಡಿಕೇರಿ

ಕೊಡಗು ಗೌಡ ವಿದ್ಯಾಸಂಘ ಶತಮಾನೋತ್ಸವ ಸಮಾರಂಭ

ಶತಮಾನದ ಸಂಭ್ರಮ ಬಡಿದೆಬ್ಬಿಸಲಿ ಜನಾಂಗದ ಮುದುಡಿದ ಮನಸುಗಳ||
ಕ್ರಾಂತಿಯಾಗಲಿ ವಿದ್ಯಾ ಕ್ಷೇತ್ರದಲಿ ಛಲದಂಕ ಮಲ್ಲನಂತೆ ಮುನ್ನಡೆಯಿಡಲಿ ಯುವ ಜನಾಂಗ||
ಎಂಬ ಹೃದಯಾಂತರಾಳದ ಶುಭ ಹಾರೈಕೆಯೊಂದಿಗೆ

ಕೊಡುಗ್ಗೈ ದಾನಿ ಹಿರಿಯರ ಧನ್ಯತೆಯ ಸಾಕಾರವೀ ಗೌಡ ವಿದ್ಯಾಸಂಘ
ಡಯನವಾಗಬೇಕು, ಡವಳದಂತಿರಬೇಕೀ ಶಾರದಾ ಮಂದಿರ
ಗುಡಿಕಾರರಿಲ್ಲಿಹರು ಈ ಜ್ಞಾನ ದೇಗುಲದಲ್ಲಿ ದೇಶ ರಕ್ಷಣೆಯ ಕಲಿಗಳ ನಿರ್ಮಾಣ ಕಾಯಕದಲ್ಲಿ
ಗೌಡನೇ ಗ್ರಾಮದ ಮುಂದಾಳು-ಗೌಡ ವಿದ್ಯಾಸಂಘಕ್ಕೆ ಗೌತನಿವನು
ಡಮಾನ ಬಾರಿಸಿ ಮೇರುದನಿಯಲುಚ್ಚರಿಸಬೇಕು ಚಿರಾಯು ಈ ವಿದ್ಯಾ ಸಂಘ
ವಿರಾಜಮಾನವಾಗಲಿ ವಿದ್ಯಾ ದಾನದಲಿ ಅನವರತ ಎಂಬುದೇ ಹಿರಿಯರ ಹಾರೈಕೆ
ದ್ಯಾವನೊಲಿದರೆ ಹರಕೆ-ಹಾರೈಕೆ-ಈಡೇರಿಕೆ ನಿಮಿಷಾರ್ಧದಲಿ
ಸಂಕಲ್ಪ ಬೇಕು ವಿದ್ಯಾಸಂಘದ ವಿರಾಜಮಾನಕೆ-ಸಾಧನೆ, ಸಮ್ಮಾನಕೆ
ಘಟಿಕಾಸ್ಥಾನವಾಗಲಿ-ಘಮ-ಘಮ್ಮೆನಲೀ ಗೌಡ ವಿದ್ಯಾ ಸಂಘ
ಶತಮಾನ ಸಂಭ್ರಮಕೆ ಶತಮಾನದಿತಿಹಾಸ ಸಮಾಜ ಸ್ಮೃತಿಗೆ
ತಮೋಮಣಿಗಳುದಯಿಸಲಿ-ತಮೋಘ್ನನಾಗಮನವಾಗಲೀ ವಿದ್ಯಾ ದೇಗುಲಕೆ
ಮಾನೋಮಿ ಸಂಭ್ರಮದಲ್ಲಿ ಮಾರಣವಾಗಲಿ ಅಜ್ಞಾನ-ಅನ್ಯಾಯ-ಅನಾಚಾರ
ನೋವುನಲಿವುಗಳೇನೇ ಇರಲಿ- ಗೌಡ ವಿದ್ಯಾ ಸಂಘಕೆ ಜಯಕಾರವಿರಲಿ
ತ್ಸರುವಿನಂತಿರಬೇಕು ದೃಢತೆಯಲಿ-ಮೊಗ್ಗು ಮನಗಳಹಿಗ್ಗಿಸುವಕಾರ್ಯದಲಿ
ವನಜಭವನಿಗೂ ನಮಿಸೋಣ ಶಾರದಾವಲ್ಲಭನೆಂದು
ಸಕಲಸತ್ಕಾರ್ಯಗಳಲ್ಲಿಯೂ ಜೊತೆಗಿದ್ದು ಶುಭವ ಹರಸೆಂದು
ಮಾದೇವಿ ಹರಸುತಲಿರಲಿ ವಿದ್ಯಾಸಂಘದ ಸಕಲ ಕಾರ್ಯಗಳಲಿ
ರಂಗವಲ್ಲಿ ಬರೆದು ಕರೆಯಬೇಕು ವನಿತೆಯರು ಹರಸಲು ವಿದ್ಯಾದಾತೆಯನು
ಭವಾಂತರದಲ್ಲಿಯೂ ಕೊಡಗು ಗೌಡ ವಿದ್ಯಾ ಸಂಘ ಕೀರ್ತಿಯಾ
ಕಳಶವಾಗಲೆಂದು



ಶಬ್ದಾರ್ಥ

ಡಯನ - ಹಕ್ಕಿಗಳ ಹಾರಾಟ ; ಡವಳ - ಮಂಗಳದ ಹಾಡು ;
ಗೌತ - ಅತ್ಯಂತ ಧನಿಕ ; ಡಮಾನ - ಜೋಡು ನಗಾರಿ ;
ತ್ಸರು - ಖಡ್ಗ ಮೊದಲಾದ ಆಯುಧಗಳ ಹಿಡಿಕೆ.

-ಅಮೆ ದೀಪಕ್ ಪಾಲಾಕ್ಷ,
ಸಾಫ್ಟ್‌ವೇರ್ ಇಂಜಿನಿಯರ್,
'ಆಕ್ಸೆನ್,' ಬೆಂಗಳೂರು.

ಶತ ಸಂಭ್ರಮದ ಹೊಸ್ತಿಲಿನಲ್ಲಿ ಕುಂಬಳದಾಳುವಿನ ಕರಣೈಯನ ಸ್ಕೂಲು



- ಪಟ್ಟಡ ಎಂ. ಪ್ರಭಾಕರ

1785ರಲ್ಲಿ ಟಿಪ್ಪು ಸುಲ್ತಾನನ ದಾಳಿಯಿಂದ ಕೊಡಗಿನ ಜನಜೀವನ ಅಸ್ತವ್ಯಸ್ತವಾಗಿ ಜರ್ಜರಿತಗೊಂಡಿತ್ತು. ಆಗ ಹದಿನಾರು ವರ್ಷದ ಬಾಲಕ ದೊಡ್ಡ ವೀರರಾಜೇಂದ್ರ ಪಿರಿಯಾಪಟ್ಟಣ ಜೈಲಿನಲ್ಲಿ ಬಂಧಿಯಾಗಿದ್ದ. 1795ರ ಸುಮಾರಿಗೆ ದೊಡ್ಡ ವೀರರಾಜೇಂದ್ರ ಒಡೆಯರು ಹೇಗೋ ಆ ಜೈಲಿನಿಂದ ತಪ್ಪಿಸಿಕೊಂಡು ಬಂದಾಗ ಕೊಡಗು ಬಂಜರಾಗಿ ಪಾಳು ಬಿದ್ದಿತ್ತು. ತಡಮಾಡದೆ ಬಾಲಕ ವೀರರಾಜೇಂದ್ರ ಬಂಜರು ಬಿದ್ದಿದ್ದ ಕೊಡಗನ್ನು ಫಲವತ್ತು ಮಾಡಲು ಸಂಕಲ್ಪಿಸಿ, ಅಂದಿನ ವಿಶಾಲ ಕೊಡಗಿನ ಭಾಗವಾಗಿದ್ದ ಸುಳ್ಯ ಪರಿಸರದಿಂದ ಹೆಚ್ಚಿನ ಜನರನ್ನು ಇಲ್ಲಿಗೆ ಆಮಂತ್ರಿಸಿದ. ಹೀಗೆ ರಾಜನ ಆಮಂತ್ರಣದಿಂದ ಆಕರ್ಷಿತರಾಗಿ ಕೊಡಗಿಗೆ ಬಂದು ನೆಲೆಸಿದವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗೌಡ ಜನಾಂಗದವರೇ ಆಗಿದ್ದರು. ಹೀಗೆ ಸುಳ್ಯದ ಕಡೆಯಿಂದ ಬಂದ ನಾಗಣ್ಣ ಹಾಗೂ ಅವರ ಸಹೋದರರಾದ ಸೋಮಯ್ಯ ಮತ್ತು ಕರುಂಬಯ್ಯನವರು ಕುಂಬಳದಾಳುವಿನಲ್ಲಿ ನೆಲೆಸಿದರು.

ಈ ಸಹೋದರರು ರಾಜರಿಂದ ಜಮ್ಮಾ ಪಡೆದು ರಾಜಕಾರ್ಯ ಸೇವಾ ಮತ್ತು ವ್ಯವಸಾಯ ನಿಮಿತ್ತ ಇಲ್ಲಿಯೇ ನೆಲೆ ನಿಂತರು. ಹೀಗೆ ಕೊಡಗಿಗೆ ಬಂದು ನೆಲೆ ನಿಂತ ಗೌಡ ಜನಾಂಗದವರಿಗೆ 1800 ರಿಂದ 1810 ರೊಳಗೆ ಜಮ್ಮಾ ವಿತರಣೆಯಾಯಿತು. ಮಡಿಕೇರಿ ತಾಲೂಕು ಹೊದ್ದೂರು ಗ್ರಾಮ ಪಂಚಾಯಿತಿಯ ಪ್ರಮುಖ ಗ್ರಾಮವಾಗಿರುವ ಕುಂಬಳದಾಳು ಕುಯ್ಯಂಗೇರಿ ನಾಡಿಗೆ ಸೇರಿದೆ. ಕುಂಬಳದಾಳು ಗ್ರಾಮದಲ್ಲಿ ಗೌಡ ಜನಾಂಗದವರು ಗುಂಪಾಗಿ ವಾಸಿಸುತ್ತಿದ್ದಾರೆ. ಈ ಗ್ರಾಮ ಎತ್ತರ ಬೆಟ್ಟ ಪ್ರದೇಶದಲ್ಲಿದ್ದು, ಇಲ್ಲಿಂದ ನೋಡಿದರೆ ಬ್ರಹ್ಮಗಿರಿ ಬೆಟ್ಟ ಹಾಗೂ ಮಡಿಕೇರಿ ನಗರ. ವೀರಾಜಪೇಟೆ ತಾಲೂಕಿನ ಹೆಚ್ಚಿನ ಭಾಗ ಕಾಣುತ್ತಿರುವುದು ನೈಸರ್ಗಿಕ ಸೌಂದರ್ಯವನ್ನು ಹೆಚ್ಚಿಸಿದೆ.

ಹೀಗೆ ಕುಂಬಳದಾಳುವಿಗೆ ಬಂದು ನೆಲೆಸಿದ ನಾಗಣ್ಣನ ಕುಟುಂಬಸ್ಥರು ವಿದ್ಯಾವಂತ ಕುಟುಂಬದಿಂದ ಬಂದವರಾಗಿದ್ದರು. ನಾಗಣ್ಣನವರು ರಾಜರ ಅಸ್ಥಾನದಲ್ಲಿ ಕರಣಿಕ ಅಂದರೆ ಲೆಕ್ಕಪರಿಶೋಧಕರಾಗಿದ್ದರು. ನಾಗಣ್ಣ ಕರಣಿಕರು ರಾಜರ ಆಪ್ತ ವಲಯದಲ್ಲಿದ್ದುದರಿಂದ ಅವರಿಗೆ ಸುಮಾರು 60 ಎಕರೆ ಜಮ್ಮಾ ಕೊಡುಗೆಯಾಗಿ ಲಭಿಸಿದ್ದು, ಅವರು ಸಾಕಷ್ಟು ಸ್ಥಿತಿವಂತರಾಗಿದ್ದರು. ಕ್ರಮೇಣ ನಾಗಣ್ಣನವರಿಗೆ ಪಟೇಲಗಾರಿಕೆ ಹುದ್ದೆಯೂ ಸಹ ಲಭಿಸಿತು. ನಾಗಣ್ಣ ಕರಣಿಕರು ರಾಜರಿಗೆ ಅಚ್ಚು ಮೆಚ್ಚಿನವರಾಗಿದ್ದರು. ತಮ್ಮ ದಕ್ಷತೆ, ಪ್ರಾಮಾಣಿಕತೆ, ಸಾತ್ವಿಕ ಸ್ವಭಾವ ಹಾಗೂ ಧಾರ್ಮಿಕತೆಯಿಂದಾಗಿ ರಾಜಸೇವಾ ನಿಷ್ಠರು ಎಂಬ ಬಿರುದಿಗೆ ಪಾತ್ರರಾಗಿದ್ದರು. ನಾಗಣ್ಣನವರು ರಾಜರ ಆಸ್ಥಾನದಲ್ಲಿ ಕರಣಿಕರಾಗಿದ್ದು, ಕರಣಿಕ ಪದ ಕ್ರಮೇಣ ಜನರ ಬಾಯಲ್ಲಿ ಕರಣಯ್ಯನ ಆಗಿ. ಇಂದು ಕರಣೈಯನ ಎಂಬ ಅನ್ವರ್ಥನಾಮವಾಗಿ ಜನಜನಿತವಾಗಿದೆ.

ನಾಗಣ್ಣನವರು ನಿಗದಿತ ಸಮಯಕ್ಕೆ ಸರಿಯಾಗಿ ಕಂದಾಯ ಸಂಗ್ರಹಿಸಿ ಅರಮನೆ ಖಜಾನೆಗೆ ತಲುಪಿಸುತ್ತಾ ನಿಷ್ಠಾವಂತ ಅಧಿಕಾರಿ ಎನಿಸಿಕೊಂಡಿದ್ದು, ರಾಜರ ವಿಶೇಷ ಕೃಪೆಗೆ ಪಾತ್ರರಾಗಿದ್ದರು. ಹಾಗೆಯೇ ಅವರು ಘಮಘಮಿಸುವ ಸಣ್ಣಕ್ಕಿಯನ್ನು ಸಂಗ್ರಹಿಸಿ ಕುದುರೆಯ ಮೇಲೆ ಹೇರಿಸಿಕೊಂಡು, ತಾವು ಇನ್ನೊಂದು ಬಿಳಿ

ಕುದುರೆಯ ಮೇಲೆ ಕುಳಿತು ಹೋಗಿ ಅರಮನೆಗೆ ಸಲ್ಲಿಸುತ್ತಿದ್ದರು. ರಾಜರು ನಾಗಣ್ಣನವರ ರಾಜಸೇವಾ ನಿಷ್ಠೆಯನ್ನು ಪರಿಗಣಿಸಿ ಅವರಿಗೆ ಪಾಳೇಗಾರಿಕೆ ಪಟ್ಟವನ್ನು ದಯಪಾಲಿಸಿದ್ದರೆಂದು ಹಿರಿಯರು ಹೇಳುತ್ತಾರೆ. ಹಾಗೆಯೇ ರಾಜರು ನಾಗಣ್ಣ ಕರಣಿಕರಿಗೆ ಒಂದು ಬೆಳ್ಳಿ ಹಿಡಿಕೆಯ ಪಿಚೆ ಕತ್ತಿ, ಬಿರುದು ಬಾವಲಿ ಇತ್ಯಾದಿಯನ್ನು ಸಹ ಉಡುಗೊರೆಯಾಗಿ ನೀಡಿ ಸನ್ಮಾನಿಸಿದ್ದರೆಂಬುದು ಚರಿತ್ರಾರ್ಹ ಸಂಗತಿ.

1834ರಲ್ಲಿ ಕೊಡಗಿನಲ್ಲಿ ರಾಜರ ಆಳ್ವಿಕೆ ಅಂತ್ಯಗೊಂಡು ಬ್ರಿಟಿಷರ ಆಗಮನವಾಯಿತು. 1837ನೇ ಇಸವಿಯಲ್ಲಿ ಕೊಡಗು ಬಂಡಾಯ ನಡೆಯಿತು. ಈ ಬಂಡಾಯದ ನಂತರ ಬ್ರಿಟಿಷರು ಕೊಡಗನ್ನು ಮೂರು ವಿಭಾಗಗಳನ್ನಾಗಿ ವಿಂಗಡಿಸಿ ಒಂದು ಭಾಗವನ್ನು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿದರು. ಸೋಮವಾರಪೇಟೆ, ವಿರಾಜಪೇಟೆ , ಮಡಿಕೇರಿ ಈ ಮೂರು ತಾಲೂಕುಗಳನ್ನೊಳಗೊಂಡಿರುವುದೇ ಈಗಿನ ಕೊಡಗು ಜಿಲ್ಲೆ.

ನೂರು ವರ್ಷಗಳ ಹಿಂದೆ ಕೊಡಗು ಗೌಡ ಜನಾಂಗದಲ್ಲಿ ಕೇವಲ ಬೆರಳೆಣಿಕೆಯಷ್ಟು ಮಾತ್ರ ವಿದ್ಯಾವಂತರಿದ್ದರು. ಶಾಲೆಗಳಿಲ್ಲದೆ ಗೌಡ ಜನಾಂಗದ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದರು. ಇದನ್ನು ಮನಗಂಡ ಗೌಡ ಜನಾಂಗದ ಮುಖ್ಯಸ್ಥರು ಸಭೆ ಸೇರಿ ಚರ್ಚೆ ನಡೆಸಿ ಜನಾಂಗದ ಮಕ್ಕಳ ವಿದ್ಯಾಭ್ಯಾಸ ಮತ್ತು ಭವಿಷ್ಯದ ದೃಷ್ಠಿಯಿಂದ ಕೊಡಗು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ 1908 ರಲ್ಲಿ ಕೊಡಗು ಗೌಡ ವಿದ್ಯಾಸಂಘವನ್ನು ಪ್ರಾರಂಭಿಸಿದರು. ಈ ಸಂಸ್ಥೆ ದಿನೇದಿನೇ ಅಬಿವೃದ್ಧಿ ಪಥದಲ್ಲಿ ಸಾಗುತ್ತಾ ಗೌಡ ಜನಾಂಗದ ಮಕ್ಕಳ ಭವ್ಯ ಭವಿಷ್ಯದ ಅಡಿಪಾಯವನ್ನು ರೂಪಿಸಿ ಒಟ್ಟಾರೆ ಜನಾಂಗದ ಅಭಿವೃದ್ಧಿ ಸಂಚಲನಕ್ಕೆ ಚಾಲನೆ ನೀಡಿದುದು ಶ್ಲಾಘನೀಯವಾಗಿದೆ.

ಕೊಡಗು ಗೌಡ ವಿದ್ಯಾಸಂಘದ ವಿದ್ಯಾಪ್ರಸಾರ ಹಾಗೂ ಪ್ರಭಾವ ಒಳನಾಡಿಗೂ ಪಸರಿಸಿತು. ಇದರಿಂದ ಪ್ರಭಾವಿತರಾದ ವಿದ್ಯಾದಾನಿ ಪಟ್ಟಡ ಬಿದ್ದಪ್ಪನವರು 1911ರಲ್ಲಿ ಬೆಟ್ಟಗೇರಿಯಲ್ಲಿ "ಪಟ್ಟಡ ಸ್ಕೂಲ್" ಸ್ಥಾಪಿಸಿದರು. ಅಂತೆಯೇ ಕುಂಬಳದಾಳುವಿನಲ್ಲಿ ಕರಣ್ಯೆಯನ ಕುಟುಂಬಸ್ಥರು 1912ರಲ್ಲಿ ಕುಂಬಳದಾಳು ಗ್ರಾಮದಲ್ಲಿ ತಮ್ಮ ಸ್ವಂತ ಖರ್ಚಿನಿಂದ "ಕರುಣ್ಯೆಯನ ಸ್ಕೂಲ್" ಸ್ಥಾಪಿಸಿ ವಿದ್ಯಾದಾನದ ಮಹತ್ವವನ್ನುಅರಿವು ಮಾಡಿಕೊಟ್ಟರು. 2008ನೇ ಇಸವಿಗೆ ಕೊಡಗು ಗೌಡ ವಿದ್ಯಾಸಂಘಕ್ಕೆ ನೂರು ವರ್ಷ ತುಂಬಿದೆ. ಬೆಟ್ಟಗೇರಿಯಲ್ಲಿ "ಪಟ್ಟಡ ಸ್ಕೂಲ್" 2011ನೇ ಇಸವಿಗೆ ಹಾಗೂ ಕುಂಬದಾಳುವಿನ "ಕರಣ್ಯೆಯನ ಸ್ಕೂಲ್" 2012ನೇ ಇಸವಿಗೆ ಶತಸಂಭ್ರಮ ಸಮಾರಂಭ ಆಚರಿಸಿಕೊಳ್ಳಲಿವೆ.

ಕರಣ್ಯೆಯನ ಕುಟುಂಬಸ್ಥರಾದ ಅಂಣಯ್ಯನವರು 29-3-1912 ರಲ್ಲಿ ಕುಂಬಳದಾಳು ಗ್ರಾಮದಲ್ಲಿ "ಕರಣ್ಯೆಯನ ಸ್ಕೂಲ್" ಸಂಸ್ಥಾಪನೆ ಮಾಡಿದರು. ಆಗ ಅವರ ಕುಂಬಳದಾಳು ಬೆಟ್ಟದ ಮೇಲ್ಭಾಗದಲ್ಲಿ ತಮ್ಮ ಸ್ವಂತ ಜಾಗ ನೀಡಿ ಅವರ ಸ್ವಂತ ಖರ್ಚಿನಲ್ಲಿ ಎರಡು ಕೊಠಡಿಯ ಹೆಂಚಿನ ಶಾಲೆಯನ್ನು ಉದಾರವಾಗಿ ಕಟ್ಟಿಸಿ ವಿದ್ಯಾದಾನಿ ಎಂಬ ಗೌರವಕ್ಕೆ ಪಾತ್ರರಾಗಿರುವುದು ಈಗ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. 1912 ರಲ್ಲಿ ನಿರ್ಮಿಸಲಾದ ಕರುಣ್ಯೆಯನ ಸ್ಕೂಲ್‌ನ ಹಳೇ ಕಟ್ಟಡವನ್ನು ಈಗಲೂ ನೋಡಬಹುದು. ಈ ಕಟ್ಟಡದ ಒಂದು ಗೋಡೆಯಲ್ಲಿ "ಕರಣ್ಯೆಯನ ಸ್ಕೂಲು ಅಂಣ್ಯೆಯ್ಯನವರು ಕಟ್ಟಿಸಿದ್ದು, 1912" ಎಂಬ ಶಿಲಾಫಲಕ ಕನ್ನಡದಲ್ಲಿದ್ದರೆ, "KARNAYYANA SCHOOL, BUILY BY ANNAYYA 1912" ಎಂದು ಇಂಗ್ಲೀಷ್‌ನಲ್ಲಿ ಕೆತ್ತಿದ ಶಿಲಾಫಲಕವಿದೆ.

ನೆರವಂಡ್ರ ಸುಬ್ಬಯ್ಯ, ತೆಕ್ಕಡ ಕಾಳಪ್ಪ, ಮುಕ್ಕಾಟಿರ ಚಂಗಪ್ಪ ಅವರಲ್ಲದೆ ತನ್ನ ಕುಟುಂಬಸ್ಥರು ಮತ್ತು ಗ್ರಾಮಸ್ಥರ ಸಹಕಾರದಿಂದ ನಿರ್ಮಾಣಗೊಂಡಿದೆ. ಈ ಹಳೇ ಹೆಂಚಿನ ಶಾಲಾ ಕಟ್ಟಡ 61 ಅಡಿ ಉದ್ದ ಹಾಗೂ

10.5 ಅಡಿ ಅಗಲವಿದೆ. ಕ್ರಮೇಣ 27 ಅಡಿ ಉದ್ದ ಹಾಗೂ 14ಅಡಿ ಅಗಲದ ಮತ್ತೊಂದು ಹೆಂಚಿನ ಕೊಠಡಿಯನ್ನು ಸಾರ್ವಜನಿಕರ ವಂತಿಗೆಯಿಂದ ಕಟ್ಟಿಸಲಾಗಿದೆ. ಈ ಶಾಲೆಯ ನಿರ್ಮಾಣ, ಶಾಲೆಯ ಆಡಳಿತ ವ್ಯವಸ್ಥೆ, ನೀತಿ ನಿಯಮವನ್ನು ನಿರೂಪಿಸುವ ದಾಖಲೆ ಪತ್ರವನ್ನು ಶಾಲೆ ಪ್ರಾರಂಭವಾಗುವ 6 ದಿನಗಳ ಮುಂಚೆ ಅಂದರೆ 23-3-1912ರಂದು ರಚಿಸಲಾಗಿದ್ದು, ಶತಮಾನ ಕಾಣಲಿರುವ ಆ ಪತ್ರದ ಮೂಲ ಪ್ರತಿ ಕರಣ್ಯೆಯನವರ ಮನೆ ಸಂಘದಲ್ಲಿ ಜೋಪಾನವಾಗಿ ಇರಿಸಲಾಗಿದೆ. ಕಳೆದ 60 ವರ್ಷಗಳ ಹಿಂದೆ ಕರಣ್ಯೆಯನವರ ಮನೆಸಂಘವನ್ನು ಸ್ಥಾಪಿಸಲಾಗಿದೆ. ಆಗಾಗ್ಗೆ ಈ ಮನೆ ಸಂಘದ ಕುಟುಂಬಸ್ಥರು ಸಭೆ ಸೇರಿ ಮನೆತನದ ಅಭಿವೃದ್ಧಿಯ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳುತ್ತಾರೆ.

ಶಾಲಾ ನೀತಿ ನಿರೂಪಣಾ ದಾಖಲೆ ಪತ್ರ ಶಾಲೆಯ ಆಡಳಿತ ವ್ಯವಸ್ಥೆಯ ಬಗ್ಗೆ ಕ್ಷಕಿರಣ ಬೀರಿ ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತದೆ. ಹಾಗೆಯೇ ಈ ಪತ್ರ ಹಿರಿಯರ ದೂರದೃಷ್ಠಿ, ಮುತ್ಸದ್ಧಿತನ, ಕಟ್ಟುಪಾಡುಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಶಾಲೆಯ ಆಡಳಿತ ವ್ಯವಸ್ಥೆ, ನೀತಿ ನಿಯಮ, ಉಪಾಧ್ಯಾಯರ ನೇಮಕ, ಸಂಬಳ ವಿತರಣೆ, ವಿದ್ಯಾರ್ಥಿಗಳ ಶಿಸ್ತು ಪರಿಪಾಲನೆಯ ಬಗ್ಗೆ ಕನ್ನಡ, ಇಂಗ್ಲೀಷ್ ಬೋಧನ ವಿವರದ ಮಾಹಿತಿ ಸಹ ನೀಡುತ್ತದೆ.

ಈ ಅಪರೂಪದ ದಾಖಲೆ ಪತ್ರದ ಪ್ರಕಾರ ಪ್ರತಿ ವಿದ್ಯಾರ್ಥಿಯಿಂದಲೂ ತಿಂಗಳಿಗೆ 3 ಆಣೆ ಶುಲ್ಕ ವಸೂಲು ಮಾಡಲಾಗುತ್ತಿತ್ತು. ಒಂದನೇ ತರಗತಿಯ ಹುಡುಗ ಅಥವಾ ಹುಡುಗಿ 2 ಆಣೆ ಶುಲ್ಕ ನೀಡಬೇಕಾಗಿತ್ತು. ಒಂದು ವೇಳೆ ನಿಗದಿತ ಅಂದರೆ ಪ್ರತಿ ತಿಂಗಳ 10ನೇ ತಾರೀಖಿನ ಒಳಗೆ ಯಾವುದೇ ವಿದ್ಯಾರ್ಥಿ ಶುಲ್ಕ ಪಾವತಿಸದಿದ್ದರೆ ಅಂಥ ವಿದ್ಯಾರ್ಥಿಯನ್ನು ಶಾಲೆಯಿಂದ ವಜಾ ಮಾಡಲಾಗುತ್ತಿತ್ತು. ಶಾಲಾಭಿವೃದ್ಧಿ ಸಮಿತಿ ಸದಸ್ಯರ ತೀರ್ಮಾನವೇ ಅಂತಿಮವಾಗಿರುತ್ತಿತ್ತು. ಇಲ್ಲಿ ಬೇರೆ ಯಾರ ಹಸ್ತಕ್ಷೇಪಕ್ಕೂ ಅವಕಾಶವಿರಲಿಲ್ಲ. ಉಪಾಧ್ಯಾಯರುಗಳು ವಿದ್ಯಾರ್ಥಿಗಳಿಂದ ಆಯಾ ತಿಂಗಳು 10ನೇ ತಾರೀಖಿನೊಳಗೆ ಕಡ್ಡಾಯವಾಗಿ ಶುಲ್ಕವನ್ನು ವಸೂಲು ಮಾಡಬೇಕಾಗಿತ್ತು.

ಹೀಗೆ ವಿದ್ಯಾರ್ಥಿಗಳಿಂದ ವಸೂಲು ಮಾಡಿದ ಶುಲ್ಕವನ್ನು 5 ಭಾಗ ಮಾಡಿ ಅದರಲ್ಲಿ 3ಭಾಗ ಮುಖ್ಯೋಪಾಧ್ಯಾಯರಿಗೆ ಹಾಗೂ ಉಳಿದ 2 ಭಾಗದ ಹಣವನ್ನು ಸಹ ಶಿಕ್ಷಕರಿಗೆ ನೆರವಂಡ್ರ ಸುಬ್ಬಯ್ಯ ಮತ್ತು ಸ್ಥಾಪಕ ಕರಣ್ಯೆಯನ ಅಂಣಯ್ಯ ಇವರ ಸಮಕ್ಷಮದಲ್ಲಿ ಸಂಬಳ ವಿತರಣೆ ಮಾಡಲಾಗುತ್ತಿತ್ತು.

ಶಾಲೆಯ ನಿಯಮಾವಳಿಯಂತೆ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಭಾಷಾ ಬೋಧನೆಯನ್ನು ಮುಖ್ಯೋಪಾಧ್ಯಾಯರೇ ಮಾಡುತ್ತಿದ್ದರು. ಒಂದು ಮತ್ತು ಎರಡನೇ ತರಗತಿ ವಿದ್ಯಾರ್ಥಿಗಳಿಗೆ ಸಹ ಶಿಕ್ಷಕರು ಪಾಠ ಹೇಳುತ್ತಿದ್ದರು. ಮಾಸ್ತರುಗಳಿಗೆ ರಜೆ ಬೇಕಾಗಿದ್ದರೆ ಕರಣ್ಯೆಯನ ಪಟೇಲ್ ಅಂಣಯ್ಯನವರಿಂದ ಪೂರ್ವಾನುಮತಿ ಪಡೆಯಬೇಕಾಗಿತ್ತು. ಉಪಾಧ್ಯಾಯರು ಅನಾವಶ್ಯಕವಾಗಿ ಶಾಲೆಗೆ ಗೈರು ಹಾಜರಾಗುವಂತಿರಲಿಲ್ಲ. ಶಾಲಾ ಆಡಳಿತ ಮಂಡಳಿಯವರ ಆದೇಶವನ್ನು ಯಾವುದೇ ಕಾರಣಕ್ಕೂ ಉಲ್ಲಂಘಿಸುವಂತಿರಲಿಲ್ಲ. ಹಾಗೆಯೇ ಮದ್ಯಪಾನಿಗಳು ಕುಡಿದು ಬಂದು ಶಾಲಾ ಚಟುವಟಿಕೆಗಳಿಗೆ ಅಡ್ಡಿಪಡಿಸುವಂತಿರಲಿಲ್ಲ. ಜೊತೆಗೆ ಶಾಲಾ ಆಡಳಿತ ಮಂಡಳಿ ಸದಸ್ಯರು ಪ್ರತಿ ತಿಂಗಳ ಕಡೇ ಶನಿವಾರದಂದು ತಪ್ಪದೆ ಸಭೆ ಸೇರಿ ಚರ್ಚಿಸಿ ಮಾರ್ಪಾಡು, ತಿದ್ದುಪಡಿಗಳನ್ನು ಮಾಡುತ್ತಿದ್ದರು.

1914 ರಲ್ಲಿ ಕರಣ್ಯೆಯನ ಸ್ಕೂಲ್ ಅನ್ನು ಆಗಿನ ಕೊಡಗು ಸರ್ಕಾರದ "ಡಿಸ್ಟ್ರಿಕ್ಟ್ ಬೋರ್ಡ್" ವಹಿಸಿಕೊಂಡಿತು. ಅಲ್ಲಿಂದ 1953ನೇ ಇಸವಿಯವರೆಗೆ 1ರಿಂದ 5ರವರೆಗೆ ತರಗತಿಗಳು ನಡೆಯುತ್ತಿದ್ದವು. ಭಾರತ ಸ್ವಾತಂತ್ರ್ಯಾನಂತರ 1953ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿನಿಯಮದಂತೆ ಸರ್ಕಾರ ಈ ಶಾಲೆಯನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ತದನಂತರ ಪುನ ಸರ್ಕಾರ ತನ್ನ ಪಾಲಿನ ಶೇ. 50ರಷ್ಟು ಅನುದಾನ ಹಾಗೂ ಸಾರ್ವಜನಿಕರಿಂದ ಶೇ. 50 ರಷ್ಟು ವಂತಿಗೆ ಸಂಗ್ರಹಿಸಿ ಹಳೇ ಶಾಲೆಯ ಪಕ್ಕದ ಕರಣ್ಯೆಯನ ಕುಟುಂಬಸ್ಥರ ವಿಶಾಲವಾದ ಜಾಗದಲ್ಲಿ 1953-55ರ ಅವಧಿಯಲ್ಲಿ 5ಕೊಠಡಿಗಳ ಶಾಲಾ ಕಟ್ಟಡವನ್ನು ನಿರ್ಮಿಸಿತು. ಆಗ ಈ ಶಾಲಾ ಕಟ್ಟಡಕ್ಕೆ ತಗುಲಿದ ವೆಚ್ಚ 35ಸಾವಿರ ರೂ. ಆಗಿತ್ತು. ಹೀಗೆ ಹೊಸದಾಗಿ ನಿರ್ಮಿಸಲ್ಪಟ್ಟ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಆಟದ ಮೈದಾನದ ಅವಶ್ಯಕತೆಯಿತ್ತು. ಶಾಲಾಭಿವೃದ್ಧಿ ಸಮಿತಿಯ ಮನವಿಯಂತೆ ಶಾಲೆಯ ಆಟದ ಮೈದಾನಕ್ಕೆ ಬೇಕಾದ ಮುಕ್ಕಾಲು ಎಕರೆ ಜಾಗವನ್ನು ಪುನಃ ಕರಣ್ಯೆಯನ ಕುಟುಂಬಸ್ಥರು ದಾನವಾಗಿ ನೀಡಿ ತಮ್ಮ ಔದಾರ್ಯವನ್ನು ಮೆರೆದಿದ್ದಾರೆ.

1962-63ರಲ್ಲಿ 5ರಿಂದ 6ನೇ ತರಗತಿವರೆಗೆ ಹಾಗೂ 1963-64ರಲ್ಲಿ 7ನೇ ತರಗತಿವರೆಗೆ ವಿಸ್ತರಿಸಲಾಯಿತು. ಈಗ ಈ ಶಾಲೆಯಲ್ಲಿ 7ನೇ ತರಗತಿಯವರೆಗೆ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಶಾಲೆಯಲ್ಲಿ ಮೊದಲು 500ಕ್ಕೂ ಹೆಚ್ಚು ಮಕ್ಕಳು ವ್ಯಾಸಂಗ ಮಾಡುತ್ತಿದ್ದರು. 20 ವರ್ಷಗಳ ಹಿಂದೆ ವಿದ್ಯಾರ್ಥಿಗಳ ಸಂಖ್ಯೆ 300ಕ್ಕೆ ಇಳಿದು ಈಗ ಕೇವಲ 50 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಕಾನ್ವೆಂಟ್ ಶಾಲೆಗಳು, ಇಂಗ್ಲೀಷ್ ವ್ಯಾಮೋಹ ಈ ದುಸ್ಥಿತಿಗೆ ಕಾರಣವೆಂದರೆ ತಪ್ಪಾಗಲಾರದು. ಈ ಶಾಲೆಯ ಸನಿಹದಲ್ಲಿ ಶಾಸ್ತಾವು ಈಶ್ವರ ದೇವಾಲಯವಿದೆ. ಹಾಗೂ 1924ರಲ್ಲಿ ಕಟ್ಟಿದ ದವಸ ಭಂಡಾರ ಕಟ್ಟಡವಿದ್ದು, ಇಲ್ಲಿ ಹಲವು ಸಂಘ-ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ 1912ರ ಶತಮಾನೋತ್ಸವ ಸಂಭ್ರಮದಲ್ಲಿ ಕರಣ್ಯೆಯನ ಅಂಣಯ್ಯನವರ ಹೆಸರಿನಲ್ಲಿ ರಂಗಮಂಟಪವೊಂದನ್ನು ನಿರ್ಮಿಸುವ ಇರಾದೆಯನ್ನು ಆಡಳಿತ ಮಂಡಳಿ ವ್ಯಕ್ತಪಡಿಸಿದೆ.

ಅರೆಭಾಷೆ ಸೂಕ್ತಿ

ಹಣದಿಂದ

ಊಟ ಸಿಕ್ಕುದು ಆದರೆ ಹಸಿವು ಸಿಕ್ಕಿಕಿಲೆ
ವಿದ್ಯೆ ಸಿಕ್ಕುದು ಆದರೆ ವಿವೇಕ ಸಿಕ್ಕಿಕಿಲೆ
ಔಷಧಿ ಸಿಕ್ಕುದು ಆರೋಗ್ಯ ಸಿಕ್ಕಿಕಿಲೆ
ಪ್ರಸಾದ ಸಿಕ್ಕುದು ಆದರೆ ಸೌಂದರ್ಯ ಸಿಕ್ಕಿಕಿಲೆ
ಮನರಂಜನೆ ಸಿಕ್ಕದ್ ಆದರೂ ಆನಂದ ಸಿಕ್ಕುದಾ?
ಜನರ ಪರಿಚಯ ಆದರೆ ಅವರಲ್ಲಿ ವಿಶ್ವಾಸ (ನಂಬಿಕೆ)ಸಿಕ್ಕಿಕಿಲೆ
ಪುರುಷತ್ತು (ಸಮಯ) ಸಿಕ್ಕುದು ಆದರೆ ವಿಶ್ರಾಂತಿ (ಆರಾಮ) ಸಿಕ್ಕಿಕಿಲೆ
ಸೇವಕ (ಆಳು) ಸಿಕ್ಕುದು, ಆದರೆ ನಂಬಿಕೆಯಿರುವ ಸಿಕ್ಕಿಕಿಲೆ.
ಸ್ನೇಹ ನೆಂಟ್ರುಗಳಲ್ಲಿ ಸಿಪ್ಪೆ ಸಿಕ್ಕುದು ಹೊರತು ತಿರುಳು ರಸಗ ಸಿಕ್ಕಿಕಿಲೆ

-ಸಂಗ್ರಹ: ಕುದುಪಜೆ ಶಾಂತಿ ಭೋಜಪ್ಪ

ಕುಪ್ಪಸದಟ್ಟಿ-ಗೇಂಟಿ ಸೀರೆ ಕೊಡಗು ಗೌಡರ ಸಾಂಪ್ರದಾಯಿಕ ಉಡುಪು

- ಡಾ. ಚೆರಿಯಮನೆ ರಾಮಚಂದ್ರ ಎಂ.ಎ.ಪಿಎಚ್‌ಡಿ
ಇತಿಹಾಸ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು
ವಿಶ್ವವಿದ್ಯಾನಿಲಯ ಲಲಿತ ಕಲಾ ಮಹಿಳಾ ಕಾಲೇಜು
ಮಾನಸಗಂಗೋತ್ರಿ, ಮೈಸೂರು.



ಪರಂಪರೆಯ ಹಿನ್ನಲೆ:

ಇತ್ತೀಚೆಗೆ ಪಾರಂಪರಿಕ ಮಹತ್ವವುಳ್ಳ ಎಲ್ಲಾ ಸ್ಮಾರಕಗಳು ಮತ್ತು ಸ್ಥಳಗಳನ್ನು ರಕ್ಷಿಸಲು ವಿಶ್ವಸಂಸ್ಥೆಯ ಯುನೆಸ್ಕೋ, ಆಯಾ ದೇಶಗಳ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳುತ್ತಿವೆ. ಭಾರತವೂ ಕೂಡ ಇಂತಹ ಕ್ರಮಗಳಿಂದ ಹೊರತಾಗಿಲ್ಲ. ಕರ್ನಾಟಕ ಸರಕಾರ ಪಾರಂಪರಿಕ ಮಹತ್ವವುಳ್ಳ ಸ್ಮಾರಕಗಳು, ಕಟ್ಟಡಗಳು; ರಸ್ತೆಗಳು, ಬೀದಿಗಳು ಮತ್ತು ಸ್ಥಳಗಳನ್ನು ಅವುಗಳ ಮೂಲ ರೂಪ ವಿರೂಪಗೊಳ್ಳದಂತೆ ರಕ್ಷಿಸಿ, ಉಳಿಸಿ ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುತ್ತಿದೆ. ಈ ಪಾರಂಪರಿಕ ಸ್ಮಾರಕಗಳ ರಕ್ಷಣೆ ಎಷ್ಟು ಮುಖ್ಯವೋ ಪಾರಂಪರಿಕ ಪ್ರಾಚೀನ ಭಾಷೆ ಹಾಗೂ ಉಡುಗೆ ತೊಡುಗೆಗಳ ರಕ್ಷಣೆಯೂ ಅಷ್ಟೇ ಮುಖ್ಯ. ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಲಭಿಸಿದರೆ ಹಳೆಗನ್ನಡದಲ್ಲಿ ತನ್ನ ಮೂಲವನ್ನು ಕಂಡುಕೊಂಡಿರುವ ಗೌಡ ಕನ್ನಡ (ಅರೆಭಾಷೆ) ಕ್ಕೂ ಶಾಸ್ತ್ರೀಯ ಭಾಷೆಯ ಮನ್ನಣೆ ದೊರೆಯುತ್ತದೆ. ಹಾಗೆಯೇ ಕೊಡಗು ಗೌಡರ ಉಡುಗೆ ತೊಡುಗೆಗಳು ವಿಶೇಷವಾಗಿ ಬಿಳಿ ಕುಪ್ಪಸ ದಟ್ಟಿ -ಗೇಂಟಿ ಸೀರೆ ಪಾರಂಪರಿಕ ಮೌಲ್ಯವನ್ನು ಪಡೆದುಕೊಳ್ಳುತ್ತವೆ. ಒಡಿಕತ್ತಿ, ರುಮಾಲೆ ಸಹಿತ ಕುಪ್ಪಸ ದಟ್ಟಿ-ಗೇಂಟಿಸೀರೆ ಕೊಡಗಿನ ಗೌಡರ ಸಾಂಪ್ರದಾಯಿಕ ಉಡುಪು.

ಐತಿಹಾಸಿಕ ಹಿನ್ನೆಲೆ:

ಹಾಲೇರಿ ಮನೆತನವು (ಕ್ರಿ.ಶ. 1600-1834) ಕೊಡಗಿನ ಇತಿಹಾಸದಲ್ಲಿ ಮೊದಲ ಬಾರಿಗೆ ಸಂಪೂರ್ಣ ಕೊಡಗನ್ನು ಆಳಿದ ರಾಜಮನೆತನ. ಈ ಮನೆತನದ ದೊಡ್ಡವೀರಪ್ಪ (ಕ್ರಿ.ಶ. 1687-1736) ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಅಮರ ಸುಳ್ಯ ಮಾಗಣೆಗಳನ್ನು ಇಕ್ಕೇರಿಯ ಎರಡನೇ ಸೋಮಶೇಖರ ನಾಯಕನಿಂದ (ಕ್ರಿ.ಶ.1715-1739) ಪಡೆದನು.2 ಆ ಸಂದರ್ಭದಲ್ಲಿ ಈ ಸೀಮೆಯ ಗೌಡ ಪ್ರಜೆಗಳನ್ನು ಭೇಟಿ ಮಾಡಿ ತನ್ನ ಅಂಗರಕ್ಷಕ ಪಡೆಯನ್ನು ಸೇರಲು ದೊಡ್ಡವೀರಪ್ಪ ಆಹ್ವಾನಿಸಿದ್ದನು. ಅದರಂತೆ ರಾಜನ ಅಂಗರಕ್ಷಕ ಪಡೆಗೆ ನಿಯೋಜಿತರಾದ ಮಂದಿಗೆ ವೀರಯೋಧರ ಉಡುಪಾದ ಬಿಳಿಕುಪ್ಪಸದಟ್ಟಿ, ಒಡಿಕತ್ತಿ, ರುಮಾಲೆಯನ್ನು ತೊಟ್ಟು ಸದಾ ಸಿದ್ಧರಾಗಿರಬೇಕೆಂದು ಸೂಚಿಸಲಾಗಿತ್ತು. ಹೀಗೆ ಒಡಿಕತ್ತಿಯು ಕೂಡ ಕೊಡಗು ಗೌಡರ ಉಡುಪಿನ ಅವಿಭಾಜ್ಯ ಅಂಗವಾಯಿತು.

ಯುದ್ಧಕಾಲದಲ್ಲಿ ಶೌರ್ಯವನ್ನು ಪ್ರದರ್ಶಿಸಿದರೆ ರಾಜ ಉಂಬಳಿ ಅಥವಾ ಜಹಗೀರು ಕೊಡುವ ಸಂಪ್ರದಾಯವಿತ್ತು. ಒಡಿಕತ್ತಿ ಸಮೇತ ಕುಪ್ಪಸದಟ್ಟಿ ಹಾಗೂ ರುಮಾಲೆ ಎಲ್ಲಾ ಜಮ್ಮ ರೈತರ (ಜೀವನಕ್ಕೆ ಆಧಾರವಾಗಿದ್ದ ಭೂಮಿಯನ್ನು ಹೊಂದಿದ್ದ ರೈತ) ಪೋಷಾಕು ಆಯಿತು. ರಾಜರ ಕಾಲದಲ್ಲಿ ಪ್ರತಿಯೊಬ್ಬ ಜಮ್ಮ ರೈತ ಕುಪ್ಪಸದಟ್ಟಿಯನ್ನು ತೊಟ್ಟು ಅರಮನೆಯಲ್ಲಿ ಪಹರೆ ಕೆಲಸ ನಿರ್ವಹಿಸಬೇಕಾಗಿತ್ತು. ಅರಮನೆಯ

ಮುಂದಿನ ಹಜಾರ ಅಥವಾ ಚಾವಡಿಯಲ್ಲಿ ಕಾರ್ಯ ನಿರ್ವಹಿಸಬೇಕಾಗಿದ್ದುದರಿಂದ ಇವರನ್ನು ಚಾವಡಿಕಾರರೆಂದು ಕರೆಯಲಾಗುತ್ತಿತ್ತು.

ಕ್ರಿ. ಶ. 1785ರಲ್ಲಿ ಟಿಪ್ಪು ಸುಲ್ತಾನ ಸಹಸ್ರಾರು ಮಂದಿ ಕೊಡಗಿನವರನ್ನು ಸೆರೆಹಿಡಿದು ಶ್ರೀರಂಗಪಟ್ಟಣಕ್ಕೆ ಒಯ್ದುಮೇಲೆ ಪಾಳುಬಿದ್ದ ಭೂಮಿಯನ್ನು ಕೃಷಿಮಾಡಲು ವೀರರಾಜೇಂದ್ರ (ಕ್ರಿ.ಶ. 1780 -1800) ದಕ್ಷಿಣ ಕನ್ನಡ ಜಿಲ್ಲೆಯ ಪ್ರತಿ ಊರಿನಿಂದ ಹದಿನೈದು ಜನರನ್ನು (ಗಂಡು ಹೆಣ್ಣು ಸೇರಿ) ಕೊಡಗಿಗೆ ಬರಮಾಡಿಕೊಂಡನು. ಕ್ರಿ.ಶ. 1799 ಮತ್ತು 1808ರ ಅವಧಿಯಲ್ಲಿ ಹಾಗೆ ಬಂದವರಲ್ಲಿ ಬಹುಮಂದಿ ಗೌಡರಾಗಿದ್ದು, ಅವರಿಗೆ ಜಮ್ಮ ಭೂಮಿಯ ನಿರೂಪವನ್ನು ನೀಡಲಾಯಿತ್ತು. ಎರಡನೇ ಬಾರಿಗೆ ಜಮ್ಮ ಭೂಮಿಯ ನಿರೂಪಣೆಯೊಂದಿಗೆ ಕುಪ್ಪಸದಟ್ಟಿ ರುಮಾಲಿನ ಉಡುಪನ್ನು ಧರಿಸುವ ನಿರ್ಬಂಧಕ್ಕೂ ಕೊಡಗಿನ ಗೌಡರು ಒಳಗಾಗಬೇಕಾಯಿತು.

ವೀರಯೋಧರ ಉಡುಪಾಗಿ ಕುಪ್ಪಸದಟ್ಟಿ:

ಮಡಿಕೇರಿ ಕೇಂದ್ರ ಕಾರ್ಯಸ್ಥಾನವಾಗಿದ್ದ ಮದರಾಸ್ ದೇಶೀಯ ಕಾಲ್ದಳ, ಸ್ವಯಂ ಸೇವಕರ ರೈಫಲ್ ದಳವೆಂಬ ಸ್ಥಳೀಯ ಘಟಕ, ಕೊಡಗು ರೆಜಿಮೆಂಟ್, 2/88ನೇ ಕರ್ನಾಟಕ ಕೂರ್ಗ್ ಆರ್ಟಿಲರಿ ರೆಜಿಮೆಂಟ್ ಮೊದಲಾದವು ಮಡಿಕೇರಿಯಲ್ಲಿದ್ದುದರಿಂದ ಗೌಡರು ಅಧಿಕ ಸಂಖ್ಯೆಯಲ್ಲಿ ಸೈನ್ಯವನ್ನು ಸೇರುವುದು ಸಾಧ್ಯವಾಯಿತ್ತು. ಕೊಡಗಿನ ಗೌಡರು ಕಾಲಕ್ಕೆ ತಕ್ಕಂತೆ ವೀರ ಗುಣಗಳನ್ನು ಬೆಳೆಸಿಕೊಳ್ಳುವುದಕ್ಕೆ ರಾಜರ ಸೇವೆಯಷ್ಟೇ ಬ್ರಿಟಿಷರ ಉಸ್ತುವಾರಿಯಲ್ಲಿದ್ದ ಈ ವಿವಿಧ ತುಕಡಿಗಳು ಕಾರಣವಾಗಿದ್ದವು. ಗೌಡರು ಮೂಲತಃ ಕೃಷಿಕರಾಗಿದ್ದರೂ ಸಹ ಸ್ವಭಾವತಃ ಶೌರ್ಯ, ಧೈರ್ಯ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು. ಈಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ಬಂಟರು, ಬಲ್ಲಾಳರೊಂದಿಗೆ ಮತ್ತು ಕೊಡಗಿನಲ್ಲಿ ಕೊಡವರೊಂದಿಗೆ ಬಾಳುವ ಸಂದರ್ಭದಲ್ಲಿ ತಾವು ವೀರ ವರ್ಗಕ್ಕೆ ಸೇರಿಸಿದವರೆಂದು ತೋರಿಸಿಕೊಳ್ಳಲೇಬೇಕಾಗಿತ್ತು. ಹೀಗಾಗಿ ಕೃಷಿಯಷ್ಟೇ ಪ್ರಮುಖವಾದ ವೃತ್ತಿಯಾಗಿ ಯುದ್ಧವನ್ನು ಸ್ವೀಕರಿಸಿದರು. ಮಡಿಕೇರಿಯಲ್ಲಿದ್ದ ವಿವಿಧ ತುಕಡಿಗಳಲ್ಲಿದ್ದವರು, ರಾಜರ ಸೈನ್ಯದಲ್ಲಿದ್ದವರು ಒಡಿಕತ್ತಿ ಸಮೇತ ಕುಪ್ಪಸದಟ್ಟಿ, ರುಮಾಲೆಯನ್ನು ಧರಿಸಲೇ ಬೇಕಾಗಿತ್ತು. ಶಸ್ತ್ರಸಜ್ಜಿತ ರೈತಾಪಿ ವರ್ಗವನ್ನು ಕುಪ್ಪಸದಟ್ಟಿ -ರುಮಾಲೆಯ ಉಡುಪಿನಿಂದ ಹೊರಗಿಡುವುದು ಸಾಧ್ಯವಾಗಲೇ ಇಲ್ಲ.

ಆದುದರಿಂದ ಇತ್ತೀಚಿನವರೆಗೂ ನಾಡಹಬ್ಬ ಹರಿದಿನಗಳಲ್ಲಿ ವಿವಾಹ ಸಮಾರಂಭಗಳಲ್ಲಿ ಕುಪ್ಪಸದಟ್ಟಿ-ಗೇಂಟೆಸೀರೆಯ ಉಡುಗೆ ಗೌಡರ ಜೀವನದಲ್ಲಿ ಹಾಸುಹೊಕ್ಕಾಗಿ ಮುಂದುವರೆಯಿತು. ಭಾಗಮಂಡಲದ ಭಗಂಡೇಶ್ವರ ದೇವಾಲಯದ ತಕ್ಕ ಮುಖ್ಯಸ್ಥರು ಬೊಳ್ಳಡ್ಕ ಮತ್ತು ಕೋಡಿಮನೆ ಗೌಡ ಕುಟುಂಬದವರಾಗಿದ್ದು, ಕುಪ್ಪಸದಟ್ಟಿ- ರುಮಾಲೆಯನ್ನು ಕಡ್ಡಾಯವಾಗಿ ಧರಿಸುವರು. ಅವಂದೂರು ಹಾಗೂ ಚೇರಂಗಾಲ ಗ್ರಾಮದಲ್ಲಿ ಹುತ್ತರಿ ಹಬ್ಬದ ಸಮಯದಲ್ಲಿ ಕೋಲಾಟದ ಪರಿಪಾಠವಿತ್ತು. ಆಗಲೂ ಕುಪ್ಪಸದಟ್ಟಿ-ರುಮಾಲೆಯನ್ನು ಧರಿಸುತ್ತಿದ್ದರು. ಮಡಿಕೇರಿ ತಾಲೂಕು ಮದೆನಾಡು ಗ್ರಾಮದ ಹಬ್ಬದ ಸಮದಯದಲ್ಲಿ ವಿಶೇಷವಾಗಿ ಬೆಳೆಕಾಟ ಕುಪ್ಪಸದಟ್ಟಿ-ರುಮಾಲೆಯಲ್ಲಿಯೇ ನಡೆಯುತ್ತದೆ. ಕುಪ್ಪಸವಟ್ಟಿ-ರುಮಾಲೆಯ ಉಡುಪು ಧರಿಸದಿದ್ದರೆ ಹೆಣ್ಣು ಕೊಡುವುದಿಲ್ಲವೆಂದು ಪಟ್ಟು ಹಿಡಿದು ದಿನಗಟ್ಟಲೇ ವರನನ್ನು ದಿಬ್ಬಣದ ಸಮೇತ ವಧುವಿನ ಗೃಹದಲ್ಲೇ ಬಂಧನದಲ್ಲಿರಿಸಿದ ಸಂದರ್ಭಗಳು ಸೃಷ್ಟಿಯಾಗಿದ್ದವು. ಆದುದರಿಂದ ವಿಶ್ವ ಪಾರಂಪರಿಕ ತಾಣ, ವಿಶ್ವ ಸಾಂಸ್ಕೃತಿಕ ಪರಂಪರೆಯ ಉಡುಗೆ-ತೊಡುಗೆಗಳನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸುವ ಅಗತ್ಯದನ್ವಯ ಕೊಡಗಿನ ಗೌಡರ

ಪಾರಂಪರಿಕ ಉಡುಪು ಕುಪ್ಪಸದಟ್ಟಿ - ಮಹಿಳೆಯರ ಉಡುಪು ಗೇಂಟಿಸೀರೆಯನ್ನು ಉಳಿಸಿ ಮತ್ತೆ ನಮ್ಮದಾಗಿಸುವ ಅಗತ್ಯವಿದೆ. ಕೊಡಗಿನ ಸುಮಾರು ಹತ್ತೊಂಬತ್ತು ಬುಡುಕಟ್ಟು -ಜನಾಂಗ ಕುಪ್ಪಸದಟ್ಟಿಯನ್ನು ಸಾಂಪ್ರದಾಯಿಕ ಉಡುಪಾಗಿ ತೊಡುತ್ತಿದ್ದರೂ ಸಹ ಈಗ ಬಹು ಸಂಖ್ಯಾತರಾಗಿರುವ ಕೊಡಗಿನ ಗೌಡರು ಅದನ್ನು ತಮ್ಮದಾಗಿಸಿಕೊಳ್ಳುವ ಅಗತ್ಯವಿದೆ.

ಕೊಗಿನ ಗೌಡರ ಉಡುಪಿನ ಶೈಲಿ:

ಗಂಡಸರಲ್ಲಿ ಒಡಿಕತ್ತಿ ಸಮೇತ ಬಿಳಿಕುಪ್ಪಸದಟ್ಟಿ-ರುಮಾಲೆ ಹಾಗೂ ಹೆಂಗಸರಲ್ಲಿ ಗೇಂಟಿ(ಗಂಟಿನ) ಸೀರೆ ಕೊಡಗಿನ ಗೌಡರ ಸಾಂಪ್ರದಾಯಿಕ ಉಡುಪು. ಕುಪ್ಪಸದಟ್ಟಿ-ರುಮಾಲೆಯನ್ನು ನಿತ್ಯ ಉಡುಪಾಗಿ ಮದುವೆ, ಮಂದು(ಮಂದಿರ)ಗಳಲ್ಲಿ ತೊಡುತ್ತಿದ್ದರು. ಗೌಡ ಮಹಿಳೆಯರು ಸುಮಾರು 5ರಿಂದ 6ಮೀಟರ್ ಉದ್ದದ ಸೀರೆಯನ್ನು ಗೇಂಟಿ (ಗಂಟು) ಕಟ್ಟಿ ಉಡುವರು. ಸೀರೆಯ ಒಂದು ಕೊನೆಯನ್ನು ನಿತಂಬದ ಸುತ್ತು ಬಳಸಿ ತಂದು ಎಡಭಾಗದಲ್ಲಿ ಸಿಕ್ಕಿಸಿ ನೆರಿಗೆಗಳನ್ನು ಮುಂದಿಟ್ಟು ಕಟ್ಟುವರು. ಮತ್ತೊಂದು ಕೊನೆಯನ್ನು ಎಡ ಕಂಕುಳ ಮೂಲಕ ಸುತ್ತಿ ಬಲ ಭುಜದ ಮೇಲಿಂದ ತಂದು ಎದೆಯ ಭಾಗದಲ್ಲಿ ಕಟ್ಟುವರು. ಈ ಗೇಂಟಿ ಸೀರೆಯನ್ನು ಶಿವಮೊಗ್ಗ ಜಿಲ್ಲೆಯ ಸುತ್ತಮುತ್ತಲ ಪ್ರದೇಶ (ಬಿದನೂರು) ಗಳಲ್ಲಿ ಕೆಲವು ಬುಡಕಟ್ಟು ಮಹಿಳೆಯರು ಈಗಲೂ ಧರಿಸುತ್ತಿರುವುದು ಕೊಡಗಿನ ಗೌಡರು ಈ ಭಾಗದ ಜನತೆಯೊಂದಿಗೆ ಹೊಂದಿದ್ದ ಐತಿಹಾಸಿಕ ಸಂಬಂಧವನ್ನೂ, ಗೇಂಟಿಸೀರೆಯ ಪ್ರಾಚೀನತೆಯನ್ನೂ ಗೌಡರು ಸಾಗಿ ಬಂದ ದಾರಿಯ ಮೂಲವನ್ನು ಸೂಚಿಸುತ್ತದೆ. ಹಿಂದಿನ ಕಾಲದಲ್ಲಿ ಗೌಡ ಮಹಿಳೆಯರು ತೊಂಬುತೋಳಿನ ಜಾಕೀಟ್ ಅಥವಾ ರವಿಕೆಯನ್ನು ಧರಿಸುತ್ತಿದ್ದರು. ಈಗಲೂ ಸಹ ಕೆಲವು ವೃದ್ಧ ಮಹಿಳೆಯರು ಅದನ್ನು ಧರಿಸುವರು. ಒಳ ಉಡುಪಾಗಿ ಲಂಗ (ಲೆಹಂಗ)ವನ್ನು ಧರಿಸುವರು. ಹುಡುಗಿಯರು ಚಿಮ್ಮಿಸ್ ಎಂಬ ಒಳುಡುಪನ್ನು ಧರಿಸುವರು. ಸುಮಾರು 1 1/2 ಮೀಟರ್ ಚದರಳತೆಯ ಚೌಕುಳಿ ತಲೆವಸ್ತ್ರವನ್ನು ತಲೆಯ ಹಿಂದೆ ಇಳಿಬಿಟ್ಟು ಸ್ತ್ರೀ ಪುರುಷರಿಬ್ಬರೂ ಕಟ್ಟುತ್ತಿದ್ದರು. ಕ್ರಮೇಣ ತಲೆವಸ್ತ್ರ ಸಮಾರಂಭಗಳಿಗೆ ಮಾತ್ರ ಸೀಮಿತವಾಯಿತು. ಮದುವೆ ಸಮಾರಂಭಗಳಲ್ಲಿ ಮಹಿಳೆಯರು ತಲೆವಸ್ತ್ರವನ್ನು ಕಟ್ಟುವುದು ಈಗ ಅಪರೂಪದ ದೃಶ್ಯವಾದರೆ ಸುಗ್ಗಿಯ ಒಕ್ಕಲು ಕೆಲಸದ ಸಮಯದಲ್ಲಿ ತಲೆವಸ್ತ್ರವನ್ನು ಕಟ್ಟುವುದು ಸಾಮಾನ್ಯವಾಗಿದೆ. ವಿಧವೆಯರು ಬಿಳಿಸೀರೆ ಧರಿಸುವರು. ಗಂಡಸರು ಬಿಳಿಕುಪ್ಪಸವನ್ನು ಅದರ ಎಡ ಮಡಿಪು ಬಲಗಾಲಿನ ಮೇಲೆ ಬರುವಂತೆಯೂ, ಬಲಮಡಿಪು ಅದನ್ನು ಎಡಗಾಲಿನ ಮೇಲೆ ಮುಚ್ಚುವಂತೆ ಧರಿಸಿ ಸೊಂಟದ ಸುತ್ತಲೂ ಸುಮಾರು 7ರಿಂದ 8 ಮೀಟರ್ ಉದ್ದದ ದಟ್ಟಿಯನ್ನು ಎರಡೂ ಕೊನೆಯ ಭಾಗಗಳು ಎಡಮಂಡಿಯ ನೇರಕ್ಕೆ ನೇತಾಡುವಂತೆ ಸುತ್ತಿ ಕಟ್ಟುವರು. ಪೀಚೆ ಕತ್ತಿಯನ್ನು ಸಹ ಧರಿಸುವರು.

ಹಿಂದಿನ ಕಾಲದಲ್ಲಿ ಯುದ್ಧಕ್ಕೆ ಹೋಗುವಾಗ ಒಡಿಕತ್ತಿಯನ್ನು ಬಲಭಾಗದಲ್ಲಿ ದಟ್ಟಿಯ ಒಳಗೆ ಸಿಕ್ಕಿಸಿಕೊಳ್ಳುತ್ತಿದ್ದರು. ತುರ್ತು ಸಂದರ್ಭಗಳಲ್ಲಿ ಅದನ್ನು ಸುಲಭವಾಗಿ ಬಲಗೈಯಿಂದ ಎಳೆಯುವುದೇ ಅದರ ಉದ್ದೇಶ. ಬಿಳಿ ಬಣ್ಣದ ರುಮಾಲೆ ಅಥವಾ ಪೇಟೆ ಈ ಉಡುಪಿನ ಒಂದು ಭಾಗ. ಇದು ಸಾಮಾನ್ಯವಾಗಿ ಜರಿಯಿಂದ ಅಲಂಕೃತವಾಗಿರುತ್ತದೆ. ರುಮಾಲೆಯನ್ನು ಪೇಟದ ರೂಪದಲ್ಲಿ ಹಣೆಯುವುದು ಕೂಡ ಒಂದು ಕಲೆ. ಈಗ ಸಿದ್ಧ ರುಮಾಲೆಗಳು ದೊರೆಯುತ್ತವೆ. 1834ರಲ್ಲಿ ಬ್ರಿಟಿಷರು ಕೊಡಗನ್ನು ಆಕ್ರಮಿಸಿದ ಮೇಲೆ ಅವರ ಮತ್ತು ಕೆಲವು ಸ್ಥಳೀಯರ ಪಿತೂರಿಯಿಂದಾಗಿ ಮದುವೆಗಳಲ್ಲಿ ಕೋಟು-ಪಂಚೆ ಹಾಗೂ ತಮ್ಮ

ಸಮಾಜದಲ್ಲದವರ ಮದುವೆ ಕಾರ್ಯಗಳಲ್ಲಿ ಪ್ಯಾಂಟ್, ಶರ್ಟ್, ಕೋಟು, ಟೈ ಗೌಡರ ಉಡುಪಾಯಿತು. -

ಅಡಿ ಟಿಪ್ಪಣಿಗಳು

1. ಕೋಡಿ ಕುಶಾಲಪ್ಪಗೌಡರು, ಗೌಡಕನ್ನಡ (1970)
2. ಡಿ.ಎನ್. ಕೃಷ್ಣಯ್ಯ, ಕೊಡಗಿನ ಇತಿಹಾಸ1974, ಪು. 127
3. ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆ, ಸಂಪುಟ -2, ಸಂಚಿಕೆ -12 (ಜೂನ್ 1998)
4. Lt. P. Connor : Memoiers of Kodagu, A survey (1870)
5. ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆ, (ಸಂಪುಟ-2, ಸಂಚಿಕೆ -9 ಮೇ 1998)
6. M.P. Carippa : Coorgs and Their Origin (1981)
7. ಕ್ಷೇತ್ರ ಕಾರ್ಯದ ಸಂದರ್ಭದ ಮಾಹಿತಿ ಸಂಗ್ರಹ (ಏಪ್ರಿಲ್ 2004)

****


ಸ್ನೇಹ

ಜೀವನ ಎಂಬ ಸಾಗರದಲಿ
ಪ್ರೀತಿಯೆಂಬ ತಂಗಾಳಿಯಿಂದೆದ್ದ
ಸ್ನೇಹವೆಂಬ ಶಾಂತವಾದ ಅಲೆಯು
ಹೃದಯದೊಳಗೆ ಮುನ್ನುಗ್ಗಿ
ನಮ್ಮ ಅಂತರಾಳದಲ್ಲಿ ಬೆರೆಯುತ್ತದೆ.
ನಿರ್ಮಲವಾದ ಪರಿಶುದ್ಧತೆಯಿಂದ ಕೂಡಿದ
ನಂಬಿಕೆ, ವಿಶ್ವಾಸ ಎಂಬ ಮುದ್ರೆಯನ್ನು ಹಾಕಿ
ನಮ್ಮಲ್ಲಿರುವ ಒಲವನ್ನು ಕಾರಂಜಿಯಂತೆ
ಚಿಮ್ಮಿಸುವಂತಹದ್ದೇ ಸ್ನೇಹ.
ಮನಸ್ಸಿನಲ್ಲಿ ಮೂಡಿದ
ಸ್ನೇಹವೆಂಬ ಹೂದೋಟದಲ್ಲಿ
ಯಾವುದೇ ಭೇದ ಭಾವವಿಲ್ಲದೆ
ಜಾತಿ, ಲಿಂಗ ವಯಸ್ಸೆನ್ನದೆ ಅರಳಿ
ಸುವಾಸನೆಯನ್ನು ಬೀರುವ ಸುಂದರ
ಪುಷ್ಪಗಳೇ ಸ್ನೇಹಿತರು
ಕಣ್ಣೋಟದಿಂದ ದೂರವಿದ್ದರೂ
ಹೃದಯದೊಳಗೆ ಅವಿತು
ಸದಾ ಹೃದಯದ ಕದವನ್ನು ತಟ್ಟಿ
ನಿನ್ನ ಕಷ್ಟ-ಸುಖಗಳಲ್ಲಿ ನನಗೂ ಪಾಲುಕೊಡು
ಎಂದು ಸಾರಿ ಹೇಳುವಂತಹದ್ದೇ ಸ್ನೇಹ.

-ರಚನೆ: ಕೋಲ್ಚಾರ್ ಸೌಮ್ಯ ದಾಸಪ್ಪ, ಸಿದ್ದಾಪುರ.

◆◆◆◆◆

ಪುಟ್ಟ ಜನಾಂಗದ ಕ್ರೀಡಾ ಸಾಧನೆ ದೊಡ್ಡಗಿರಲಿ



- ಸುನಿಲ್ ಕೋರನ

ಅತ್ಯಂತ ಪುಟ್ಟ ಜಿಲ್ಲೆ ಕೊಡಗಿನಲ್ಲಿ ಹರಡಿಕೊಂಡಿರುವ ಒಂದೆರಡು ಲಕ್ಷ ಜನಸಂಖ್ಯೆಯ ಪುಟ್ಟ ಸಮುದಾಯ ಅರೆಭಾಷಿಕರದು. ಸಾಂಪ್ರದಾಯಿಕವಾಗಿ ಕೃಷಿ ರೂಢಿಯ ಈ ಸಮುದಾಯ ಕ್ರೀಡೆಗಳಲ್ಲಿ ಏನು ಸಾಧನೆ ತೋರಿದೆ ಮತ್ತು ತೋರಬೇಕು ಎನ್ನುವುದನ್ನು ಕಾಲಕಾಲಕ್ಕೆ ವಿಮರ್ಶಿಸಿಕೊಳ್ಳುವುದು ಆರೋಗ್ಯಕರ. ಹಾಗೆ ಅವಲೋಕಿಸುವದಕ್ಕೆ ಕೊಡಗು ಗೌಡರ ಹೆಮ್ಮೆಯ ಪ್ರತೀಕವಾದ ವಿದ್ಯಾಸಂಘದ ಶತಮಾನೋತ್ಸವ ಸೂಕ್ತವಾದ ವೇದಿಕೆಯನ್ನು ಒದಗಿಸುತ್ತದೆ.

ಕಾರಣಗಳು ಹಲವಾರಿರಬಹುದು, ಬಹುಶಃ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ತೀವ್ರ ಪ್ರಗತಿ ಹೊಂದದೇ ಇರುವದು ಅಥವಾ ಗುಡ್ಡಗಾಡು ಪ್ರದೇಶದ ಶಾಪವೆನಿಸಿದ ಪ್ರಾದೇಶಿಕ ಅಸಮತೋಲನದಂತಹ ವಿಭಿನ್ನ ಸಮಸ್ಯೆಗಳೇ ಇರಬಹುದು -ಅಂತೂ ಅರೆಭಾಷಿಕ ಜನಾಂಗ ಕ್ರೀಡಾ ವಿಚಾರದಲ್ಲಿ ಹೇಳಿಕೊಳ್ಳುವಂತಹ ಸಾಧನೆ ಮಾಡಲಿಲ್ಲವೇನೋ ಅನಿಸುತ್ತದೆ. ಇದು ಸಹಜ ಕೂಡ. ಈ ಮಾತು ಕೇವಲ ಅರೆಭಾಷಿಕ ಸಮುದಾಯಕ್ಕಷ್ಟೇ ಅಲ್ಲದೆ ಕ್ರೀಡಾ ಜಿಲ್ಲೆ ಎಂದು ಅಲಂಕಾರಿಕ ಪ್ರತಿಷ್ಠೆಯನ್ನು ಹೊಂದಿರುವ ಇಡಿಯ ಕೊಡಗಿಗೇ ಅನ್ವಯಿಸುತ್ತದೆ. ಒಟ್ಟಾರೆಯಾಗಿ ಕೊಡಗಿನಿಂದ ಸಾಕಷ್ಟು ಕ್ರೀಡಾಪಟುಗಳು ದೇಶೀಯ, ಅಂತರಾಷ್ಟ್ರೀಯ ಮಟ್ಟದಲ್ಲಿ ಗಣನೀಯ ಸಾಧನೆ ತೋರಿದ್ದಾರಾದರೂ ಇವರೆಲ್ಲ ಒಂದು ಹಂತದ ನಂತರ ಕೊಡಗನ್ನು ತೊರೆದಿರುವದೇ ಇಂತಹ ಸಾಧನೆಗೆ ಮೂಲ ಆಧಾರ ಎಂಬುದನ್ನು ಗಮನಿಸಬೇಕು. ಇಲ್ಲಿ ಮೊದಲೇ ಹೇಳಿದಂತೆ ಸಾಮಾಜಿಕ ಮತ್ತು ಶೈಕ್ಷಣಿಕ ಹಿನ್ನಡೆಯೊಂದಿಗೆ ಪರಂಪರಾಗತ ಜೀವನಶೈಲಿಗೇ ಹೆಚ್ಚು ಬದ್ಧರಾಗಿದ್ದುದರಿಂದಲೋ ಏನೋ, ಮುಖಪುಟದಲ್ಲಿ ರಾರಾಜಿಸುವ ಕ್ರೀಡೆಗಳಿಂದ ಜನಾಂಗ ಒಂದು ಹೆಜ್ಜೆ ದೂರವೇ ಉಳಿದಿದೆ. ಅದರಲ್ಲೂ ಜ್ಯೂನಿಯರ್ ಹಂತದವರೆಗೆ ಹಲವಾರು ಉತ್ತಮ ಪ್ರತಿಭೆಗಳು ಗೋಚರವಾದರೂ ನಂತರದ ಬೆಳವಣಿಗೆಯಲ್ಲಿ ಪೋಷಣೆಯ ಕೊರತೆ ಎದ್ದು ಕಾಣುತ್ತದೆ.

ಇಷ್ಟನ್ನು ಹೊರತು ಪಡಿಸಿದರೆ ಗ್ರಾಮೀಣ ಕ್ರೀಡೆಗಳಲ್ಲಿ ಜನಾಂಗ ತನ್ನನ್ನು ತಾನು ಪ್ರಚ್ಛನ್ನವಾಗಿ ತೊಡಗಿಸಿಕೊಂಡು ಹವ್ಯಾಸೀ ಉತ್ಸಾಹದ ಸಂಭ್ರಮದಲ್ಲಿ ಮೀಯುವದು, ಆಹ್ಲಾದಕರವಾಗಿ ಕಾಣುತ್ತದೆ. ಕೆಸರುಗದ್ದೆ ಸ್ಪರ್ಧೆಗಳಿಂದ ತೊಡಗಿ ಮನೆಯೊಳಗೆ ಅಥವಾ ಮನೆಯ ಜಗುಲಿ, ಅಂಗಳಗಳಲ್ಲಿ ಆಡುವ ಆಟಗಳಲ್ಲಿ ನೈಪುಣ್ಯತೆ ಸಾಧಿಸಿರುವದನ್ನು ಧಾರಾಳವಾಗಿ ಕಾಣಬಹುದು. ಇದ್ದುದರಲ್ಲಿ ಕೆಸರುಗದ್ದೆ ಆಟೋಟಗಳಿಗೆ ಇತ್ತೀಚಿನ ದಿನಗಳಲ್ಲಿ ಒಂದಷ್ಟು ಮಾಧ್ಯಮಗಳ ಪ್ರಚಾರ ದೊರಕಿರುವದನ್ನು ಬಿಟ್ಟರೆ ಉಳಿದೆಲ್ಲವುಗಳ ಅಪ್ಪಟ ಸಾಂಸ್ಕೃತಿಕ ಮಟ್ಟದಲ್ಲೇ ಉಳಿದು ಹೋಗಿವೆ. ಇಲ್ಲಿ ವೃತ್ತಿಪರ ಉದ್ದೇಶಗಳಿಲ್ಲದೇ ಇರುವದರಿಂದ ಅಷ್ಟರ ಮಟ್ಟಿಗೆ ಇವು ಮನೋದೈಹಿಕ ಆರೋಗ್ಯಕ್ಕೆ ಪೂರಕವಾಗಿವೆ ಎಂದು ಸಂತಸ ಪಡಬಹುದು.


ವಾಸ್ತವವಾಗಿ ಯಾವುದೇ ಪ್ರದೇಶದ ಕ್ರೀಡೆಯೊಂದರ ಮೂಲ ಉದ್ದೇಶವೂ ಮನೋದೈಹಿಕ ಆರೋಗ್ಯವೇ ಆಗಿರುತ್ತದೆ. ಒಲಂಪಿಕ್ಸ್‌ನಂತಹ ಮಹಾನ್ ಆಂದೋಲನದ ಧ್ಯೇಯೋದ್ದೇಶವೂ ಇದನ್ನೇ ಪ್ರತಿಪಾದಿಸುತ್ತದೆ.

ಮನೋಲ್ಲಾಸದ ಜೊತೆಗೆ ಮಾನವನ ಸಾಮರ್ಥ್ಯ ಪೈಪೋಟಿಗೊಳಪಟ್ಟು ಹೊಸ ವ್ಯಾಪ್ತಿಗಳನ್ನು ಹೊಂದಬೇಕು ಎಂದು ಆಶಿಸುತ್ತದೆ. ಆದರೆ ಕಾಲಪರಿಸ್ಥಿತಿ ಬದಲಾಗುತ್ತಿರುವಂತೆ ಮೌಲ್ಯಗಳು ಮತ್ತು ಕೆಲವೊಂದು ಉದ್ದೇಶಗಳ ಅರ್ಥವ್ಯಾಪ್ತಿಗಳು ಬದಲಾಗುವುದನ್ನು ಗಮನಿಸಬೇಕು. ಈ ದೃಷ್ಟಿಯಿಂದ ನೋಡಿದರೆ ಅರೆಭಾಷಿಕ ಜನಾಂಗ ತನ್ನ ಸಾಂಪ್ರದಾಯಿಕ ಅನನ್ಯತೆ ಮತ್ತು ಶ್ರೇಷ್ಠತೆಯನ್ನು ಉಳಿಸಿಕೊಂಡು ಅದರ ಹುಮ್ಮಸ್ಸಿನಲ್ಲೇ ಕೆಲವೊಂದು ವೃತ್ತಿಪರ ಮಹತ್ಸಾಧನೆಗಳನ್ನು ಮಾಡಬೇಕಾದ ಅನಿವಾರ್ಯತೆಯಿದೆ. ನಿಜ; ಇಂದು ದೇಶದಲ್ಲೇ ಕ್ರಿಕೆಟ್ಟೊಂದನ್ನು ಬಿಟ್ಟರೆ ಉಳಿದ ಕ್ರೀಡೆಗಳಿಗೆ ಗ್ಲಾಮರಸ್ ಸ್ಥಾನಮಾನವಾಗಲಿ, ವೃತ್ತಿಪರ ಪ್ರೋತ್ಸಾಹವಾಗಲೀ ಇಲ್ಲ. ಆದರೂ ಮೊದಲಿನ ಕಾಲಕ್ಕೆ ಹೋಲಿಸಿದರೆ ಸಮಗ್ರ ಕ್ರೀಡಾಂಗಣದಲ್ಲಿ ಒಂದು ಸಣ್ಣ ಸಂಚಲನ ಸೃಷ್ಟಿಯಾಗುತ್ತಿರುವದನ್ನು ಕಾಣಬಹುದು. ಚೆಸ್, ಶೂಟಿಂಗ್, ಬಾಕ್ಸಿಂಗ್ ಮೊದಲಾದ ಕ್ರೀಡೆಗಳಲ್ಲಿ ಒಂದು ಶಕ್ತಿಯಾಗಿ ಹೊರ ಹೊಮ್ಮುತ್ತಿರುವುದರ ಜೊತೆಗೆ ಜಗತ್ತಿನಾದ್ಯಂತ ಪ್ರಚಲಿತಗೊಳ್ಳುತ್ತಿರುವ ಕ್ರೀಡಾ ಜಾಗರಣೆಗೆ ಭಾರತವೂ ತನ್ನೆಲ್ಲಾ ಸಮಸ್ಯೆಗಳ ನಡುವೆ ನಿಧಾನವಾಗಿಯಾದರೂ ಖಚಿತವಾಗಿ ಸ್ಪಂದಿಸುತ್ತಿರುವ ಬೆಳವಣಿಗೆಯನ್ನು ಕಾಣಬಹುದು. ಈ ಬೆಳವಣಿಗೆಗೆ ಖಾಸಗಿ ವಲಯ ಮತ್ತು ಕೆಲ ಸಮುದಾಯಿಕ ಆಸಕ್ತಿಗಳೇ ಪ್ರಧಾನ ಪಾತ್ರವಹಿಸಿವೆ ಎಂಬುದೂ ಗಮನಾರ್ಹ. ಇಂತಹ ಪ್ರವಾಹದಲ್ಲಿ ಅರೆಭಾಷಿಕ ಜನಾಂಗದ ಸಹಜ ಕ್ರೀಡಾಸ್ಫೂರ್ತಿ ಸಾರ್ಥಕ ಪಾಲು ಪಡೆದುಕೊಳ್ಳಬೇಕು ಮತ್ತು ಇದಕ್ಕನುಗುಣವಾಗಿ ಪ್ರಾದೇಶಿಕ ಹಂತದಲ್ಲಿ ಏರ್ಪಡುತ್ತಿರುವ ಹಲವು ಪಂದ್ಯಾವಳಿಗಳ ಗುಣಮಟ್ಟವೂ ಸುಧಾರಿಸಬೇಕು. ಒಂದು ನಿರ್ದಿಷ್ಟ ಯೋಜನೆ, ಮಹತ್ವಾಕಾಂಕ್ಷೆ ಮತ್ತು ಆತ್ಮವಿಶ್ವಾಸವೂ ಅಪೇಕ್ಷಣೀಯ.

ವಾಸ್ತವವಾಗಿ ಮುಂದುವರೆದವು ಎನಿಸಿಕೊಂಡ ರಾಷ್ಟ್ರಗಳಲ್ಲಿ ಕ್ರೀಡಾಜೀವಿತ ಎನ್ನುವದು ಇತರ ವೃತ್ತಿಗಳಂತೆಯೇ ಒಂದು ಪೂರ್ಣಕಾಲಿಕ ವೃತ್ತಿಯೆಂದೇ ಪರಿಗಣಿತವಾಗಿದೆ. ಕ್ರೀಡೆ ಎನ್ನುವದು ಕ್ರೀಡೆಯಾಗಷ್ಟೇ ಉಳಿಯದೆ ಅದೊಂದು ಬೃಹತ್ ಉದ್ದಿಮೆಯೇ ಆಗಿ ವೃತ್ತಿಪರ ವ್ಯವಹಾರವೇ ಆಗಿದೆ. ಇದುವರೆಗೂ ನಾವು ಯಾಕೆ ಈ ರಂಗದಲ್ಲಿ ಹಿಂದುಳಿದಿದ್ದೇವೆನ್ನುವದಕ್ಕೆ ಕ್ರೀಡಾ ಸಂಸ್ಕಾರದ ಕೊರತೆ ಹಾಗೂ ಭಾರತೀಯರಿಗೆ ಸಾಮಾನ್ಯವಾಗಿ ದೈಹಿಕ ಸಾಮರ್ಥ್ಯ ಕಡಿಮೆ ಎಂಬ ವಾದವಿದೆ. ಅರೆಭಾಷಿಕ ಕೊಡಗು ಗೌಡ ಜನಾಂಗಕ್ಕೆ ಇವರೆಡೂ ಸಮಸ್ಯೆಗಳು ಅಷ್ಟೊಂದು ಗಾಢವಾಗಿ ಕಾಡುವಂತವಲ್ಲ ಎನ್ನಬಹುದು. ಕೊಡಗಿನಂತಹ ಪ್ರದೇಶದ ಜನತೆಯ ದೈಹಿಕ ಸಾಮರ್ಥ್ಯ, ಕ್ರೀಡಾ ಸಂಸ್ಕಾರ ಮತ್ತು ಜೀವನ ಶಿಸ್ತಿನ ಕುರಿತು ಎರಡನೇ ಮಾತಿಲ್ಲ. ಇಲ್ಲಿ ಮುಖ್ಯವಾಗಿ ಹಾಕಿ, ಕ್ರಾಸ್‌ಕಂಟ್ರಿ ರೇಸುಗಳು, ಶೂಟಿಂಗ್ ಮತ್ತು ಇತರ ಯಾವ ವಿಭಾಗಗಳಲ್ಲಿ ನಾವು ಸಹಜವಾಗಿ ಮಿಂಚಬಲ್ಲೆವು ಎಂಬುದನ್ನು ಮೊದಲು ಗುರುತಿಸಿಕೊಂಡು ಸೂಕ್ತ ದಿಸೆಯಲ್ಲಿ ಸಾಗುವದು ಜಾಣತನ. ಇದರೊಂದಿಗೆ ಒಂದು ಹಂತದ ಯಶಸ್ಸಿನ ನಂತರ ಮೈಮರೆಯದೇ ಮುಖಮಾಡುವ ಇಚ್ಛಾಶಕ್ತಿ ಅತ್ಯಗತ್ಯವಾಗಬೇಕು. ಈ ಹಿನ್ನಲೆಯಲ್ಲಿ ಕೊಡಗು ಗೌಡ ಜನಾಂಗದ ಯುವಶಕ್ತಿ ತಾನು ಇತ್ತೀಚಿನ ದಿನಗಳಲ್ಲಿ ಶೈಕ್ಷಣಿಕ ಮತ್ತು ಔದ್ಯೋಗಿಕ ಉದ್ದೇಶಗಳಿಗೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವಾಗ ತನ್ನ ಮೂಲ ಉದ್ದೇಶಗಳ ಜೊತೆಗೆ ಕ್ರೀಡಾ ಸಂಪನ್ನತೆಯನ್ನೂ ಸಾಕಾರಗೊಳಿಸಿಕೊಳ್ಳುವ ಪ್ರಬುದ್ಧತೆ, ಸ್ವಯಂಸ್ಫೂರ್ತಿ ಹೊಂದಿರಬೇಕು. ಅಂತಹ ಪ್ರವೃತ್ತಿ ನಂತರ ಪರ್ಯಾಯ ವೃತ್ತಿಯೇ ಆಗಬಹುದಾಗಿದ್ದು, ಅದು ಜನಾಂಗದ ತನ್ಮೂಲಕ ದೇಶದ ಹೆಮ್ಮೆಗೆ ಕಾರಣವಾಗಲಿ.

◆◆◆◆◆

ಕೊಡಗು ಎಜುಕೇಶನಲ್ ಅಕಾಡೆಮಿ (ರಿ), ಬೆಂಗಳೂರು, ಇದರ ಸ್ಥಾಪನೆ ಒಂದು ದೊಡ್ಡ ಸಾಧನೆ



- ಕಾವೇರಿಮನೆ ಡಾ. ಬೋಜಪ್ಪ,
ನಿವೃತ್ತ ತೋಟಗಾರಿಕೆ ವಿಭಾಗದ ಮುಖ್ಯಸ್ಥರು,
ಕೃಷಿ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ., ಬೆಂಗಳೂರು.
ದೂ. 080-23334111, ಮೊ.9986734898

ಈ ಮೇಲ್ಕಂಡ ವಿದ್ಯಾಸಂಸ್ಥೆ, ಕೊಡಗು ಗೌಡ ಸಮಾಜ (ರಿ), ಬೆಂಗಳೂರು ಇದರ ದೂರದೃಷ್ಟಿಯ ಒಂದು ಆಶಾಕಿರಣವಾಗಿ ಜನಿಸಿ ಇಂದಿಗೆ 8 ನೇ ವರ್ಷ. ಈ ಶಿಕ್ಷಣ ಸಂಸ್ಥೆಯ ಅಧೀನದಲ್ಲಿ ಜನಿಸಿದ ಶಾಲೆಯೇ 'ಕಾವೇರಿ ನೇಷನಲ್ ಪಬ್ಲಿಕ್ ಶಾಲೆ'. ಇದು ನಡೆದುಕೊಂಡು ಬರುತ್ತಿರುವ ನಿವೇಶನ ಕೊಡಗು ಗೌಡ ಸಮಾಜ, ಬೆಂಗಳೂರು. (ನಂ.413, ಕಾವೇರಿ ನಗರ, ಕಾವಲ್‌ಬೈರಸಂದ್ರ, ಆರ್.ಟಿ.ನಗರ, ಬೆಂಗಳೂರು-32, ದೂರವಾಣಿ ಸಂಖ್ಯೆ :080-23539555)

ಕೊಡಗು ಗೌಡ ವಿದ್ಯಾಸಂಘ (ರಿ), ಮಡಿಕೇರಿ ಇದು 1908 ರಲ್ಲಿ ಜನಿಸಿ ಇಂದಿನ ನೂರು ವರ್ಷಗಳ ಅವಧಿಯಲ್ಲಿ ಗೌಡ ಜನಾಂಗದವರ ವಿದ್ಯಾಮಟ್ಟವನ್ನು ಮೇಲೆತ್ತಲು ಕೈಗೊಂಡ ಸಾಧನೆ ಒಂದು ಮಹಾ ಸಾಧನೆ. ಈ ಸಾಧನೆಯನ್ನೇ ದಾರಿ ದೀಪವಾಗಿಟ್ಟುಕೊಂಡು 2001 ರಲ್ಲಿ ಕೊಡಗು ಗೌಡ ಸಮಾಜ (ರಿ), ಬೆಂಗಳೂರು, ಇದರ ಅನೇಕ ಹಿರಿಯ ಹಾಗೂ ಕಿರಿಯ ಮಹನೀಯರು ಹಾಗೂ ಮಹಿಳೆಯರು ಕೊಡಗು ಎಜುಕೇಷನಲ್ ಅಕಾಡೆಮಿಯನ್ನು ಸ್ಥಾಪಿಸಲು ಮುಂದಾದರು. ಈ ಸಮಾಜದ ಇತರ ಅನೇಕ ಕಾರ್ಯಕ್ರಮಗಳಲ್ಲಿ ಒಂದಾದ ವಿದ್ಯಾ ಸಂಸ್ಥೆಯನ್ನು ಸ್ಥಾಪಿಸುವುದು ಒಂದು ಸದುದ್ದೇಶವೆಂದು ಎಲ್ಲರೂ ಒಟ್ಟುಗೂಡಿ ಸಾರಿದರು. ಹೀಗೆ ಸಾರಿದ ಅನೇಕರಲ್ಲಿ ಮುಂದಾಳತ್ವ ಸ್ಥಾನದಲ್ಲಿ ಮಾರ್ಗದರ್ಶನ ನೀಡಿದ ಮಹಾನೀಯರು ಶ್ರೀಯುತರಾದ ತೋಟಂಬೈಲು ಬೆಳ್ಯಪ್ಪ, ಕೋಳಿಬೈಲು ಬೆಳ್ಯಪ್ಪ, ಅಮ್ಮವನ ವಾಸು, ಕಾವೇರಿ ಮನೆ ಡಾ.ಬೋಜಪ್ಪ, ಗುಡ್ಡೇರ ಡಾ. ಚಿಣ್ಣಯ್ಯ, ಕಾಳೆಕೋಟಿ ಮಾಚಯ್ಯ, ಬೈತಡ್ಕ ಜೋಯಪ್ಪ, ಚೆಟ್ಟಿಮಾಡ ಡಾ. ಆನಂದ, ದೇವಜನ ಧನಂಜಯ, ನಂಗಾರು ನಾಣಯ್ಯ, ಮುಕ್ಕಾಟಿ ಮನೋಜ್, ಪಾಣತ್ತಲೆ ಪದ್ಮನಾಭ, ಡಾ. ವಸಂತ್‌ಕುಮಾರ್, ಸಿರಗಜೆ ಚಿಣ್ಣಪ್ಪ, ಮಳ್ಳಂದಿರ ಕಾರ್ಯಪ್ಪ, ಪೂಜಾರಿರ ಪೂವಯ್ಯ ಹೀಗೆ ಅನೇಕರು ಅಲ್ಲದೆ ಈ ಸಂಸ್ಥೆಯನ್ನು ನಡೆಸುವ ಸಂಪೂರ್ಣ ಜವಾಬ್ದಾರಿಕೆಯನ್ನು ಹೊತ್ತುಕೊಳ್ಳಲು ಎದೆ ತಟ್ಟಿ ಮುಂದೆ ಬಂದ ಯುವಕರಿಬ್ಬರು ಭಾಗಮಂಡಲ ನಾಡಿನ ಮೊಟ್ಟನ ಕಾರ್ಯಪ್ಪ ರವಿಕುಮಾರ್ (ಅಡ್ವಕೇಟ್) ಮತ್ತು ಕುದುಪಜೆ ಅಪ್ಪಚ್ಚ ಗಣಪತಿ (ಉದ್ಯಮಿ) ಹಾಗೂ ಇತರ ಅನೇಕ ಯುವಕರು ಮತ್ತು ಯುವತಿಯರು.

ಈ ಮೇಲ್ಕಂಡ ತೀರ್ಮಾನವನ್ನು ಕಾರ್ಯಗತಗೊಳಿಸಲು ಮೊದಲಿಗೆ ಕರ್ನಾಟಕ ಸರಕಾರದ ಅನುಮತಿಯನ್ನು ಸರಕಾರದ ಆಜ್ಞೆ ನಂ. 02/2004-05 ತಾ. 27-4-2004/05 ಪಡೆದು, ಈ ಆಜ್ಞೆಯ ಪರಿಮಿತಿಯಲ್ಲಿ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ಈ ಸಂಧಿಗ್ದ ಸಂದರ್ಭದಲ್ಲಿ ತುರ್ತಾಗಿ ಬೇಕಾಗಿರುವ ಹಣ, ಕೊಡಗು ಗೌಡ ಜನಾಂಗದ ಧುರೀಣರು ಹಾಗೂ ದಾನಿಗಳು ಆದಂತಹ 65 ಮಹನೀಯರು ಹಾಗೂ ಮಹಿಳೆಯರು ಮುಂದೆ ಬಂದು ಒಂದೇ ಕ್ಷಣದಲ್ಲಿ 6.5 ಲಕ್ಷ ಹಣದ ಒಂದು ಪ್ರಮೋಶನಲ್ ಫಂಡ್ ಸ್ಥಾಪನೆಯಾದದ್ದು

ಶ್ರೀ ಕಾವೇರಿ ಮಾತೆಯ ಅನುಗ್ರಹ. ಈ ಹಣವೇ ಅಕಾಡೆಮಿಯ ಸ್ಥಾಪನೆ ಹಾಗೂ ನಡವಳಿಕೆಗೆ ಅಡಿಗಲ್ಲಾಯಿತು. ಈ ಅಡಿಗಲ್ಲನ್ನು ಹಾಕಿಕೊಟ್ಟಂತಹ ಜನಾಂಗ ಬಂಧುಗಳಿಗೆ ಈ ಅಕಾಡೆಮಿಯು ಸದಾ ಚಿರಋಣಿಯಾಗಿದೆ.

ಈ ಶಾಲೆಗೆ ಇಂದಿನವರೆಗೆ ಸರಕಾರದ ವತಿಯಿಂದ ಯಾವದೇ ಆರ್ಥಿಕ ಸಹಾಯ ಪಡೆದಿಲ್ಲ. ಅಂದಮೇಲೆ ಇದರ ಅಭಿವೃದ್ಧಿಗೆ ಬೇಕಾದ ಹಣ ಎಲ್ಲಿಂದ ಬರುತ್ತಿದೆ ಎಂದು ಯಾರೂ ಮೂಗಿನ ಮೇಲೆ ಬೆರಳಿಟ್ಟು ಆಶ್ಚರ್ಯಪಡಬೇಕಾಗಿಲ್ಲ. ನಮ್ಮ ಗೌಡ ಜನಾಂಗದ ಅನೇಕ ದಾನಿಗಳು ಮುಂದೆ ಬಂದು ಅವರ ಶಕ್ತಿಮೀರಿ ಹಣ ಸಹಾಯ ಮಾಡುವದರೊಡನೆ ಇತರ ಜನಾಂಗದ ಅನೇಕ ಮಹನೀಯರು ಹಾಗೂ ಮಹಿಳೆಯರು ಎಂಡೋಮೆಂಟ್ (Endoment) ರೂಪದಲ್ಲಿ ಹಣ ಸಹಾಯ ಮಾಡುತ್ತಿದ್ದು, ಈ ಎಂಡೋಮೆಂಟ್ ಹಣದಿಂದ ಉತ್ಪನ್ನವಾಗುತ್ತಿರುವ ನಿಧಿಯೇ ಅಕಾಡೆಮಿಯ ವ್ಯವಹಾರಕ್ಕೆ ನಾಂದಿಯಾಗಿದೆ.

ಕೊಡಗು ಗೌಡ ಸಮಾಜಗಳು ಕೊಡಗಿನಲ್ಲಿ ಹಾಗೂ ಕೊಡಗಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬಹಳಷ್ಟು ಸಂಖ್ಯೆಯಲ್ಲಿ ಸ್ಥಾಪನೆಯಾಗಿ ಕೆಲವೊಂದು ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದ್ದರೂ, ವಿದ್ಯಾ ಸಂಸ್ಥೆಗಳ ಸಾಮ್ರಾಜ್ಯವನ್ನೇ ಕಟ್ಟಿದ ಆಧುನಿಕ ಸುಳ್ಯದ ಅಮರ ಶಿಲ್ಪಿ, ಸುಳ್ಯದ ವರಪ್ರಸಾದ, ಕೊಡುಗೈ ದಾನಿ, ಶಿಕ್ಷಣ ಲೋಕದ ಧ್ರುವತಾರೆ ಎಂದು ಮುಂತಾಗಿ ಹೆಸರನ್ನು ಗಳಿಸಿರುವ ಮಾನ್ಯ ಶ್ರೀ ಕುರುಂಜಿ ವೆಂಕಟ್ರಮಣ ಗೌಡರು ವಿದ್ಯಾರ್ಜನೆಯಲ್ಲಿ ಸಾಧಿಸಿರುವ ಒಂದು ಮಹಾ ಕಾರ್ಯ ಹೊರತು, ಕೊಡಗು ಎಜುಕೇಶನಲ್ ಅಕಾಡೆಮಿಯು ಕೈಗೊಂಡಿರುವ ಈ ಮಹಾಕಾರ್ಯ ಒಂದು ಹೆಮ್ಮೆಯ ವಿಷಯವೆಂದು ವಿದ್ಯೆಗೆ ಯಾರು ತಲೆ ಬಗ್ಗಿಸುತ್ತಾರೋ ಅವರೆಲ್ಲ ಒಪ್ಪಿಕೊಳ್ಳಬೇಕಾಗಿದೆ. ಈ ದಿನ ವಿದ್ಯೆಯನ್ನು ಗಳಿಸುವುದು ಒಂದು ದುಬಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಕೊಡಗು ಎಜುಕೇಶನಲ್ ಅಕಾಡೆಮಿಯ ಗುರಿಯೇ ಬೇರೆಯಾಗಿದೆ.

ಆರ್ಥಿಕವಾಗಿ ಕಷ್ಟದಲ್ಲಿರುವ ಅನೇಕ ಬಡ ತಂದೆ-ತಾಯಿಯರ ಮಕ್ಕಳಿಗೆ ಆದಷ್ಟು ಕಡಿಮೆ ಖರ್ಚಿನಲ್ಲಿ ಉತ್ತಮ ವಿದ್ಯೆಯನ್ನು ಒದಗಿಸಿಕೊಡುವುದೇ ಏಕೈಕ ಸದುದ್ದೇಶವೆಂದೇ ಜನಿಸಿದ ಕಾವೇರಿ ನೇಶನಲ್ ಪಬ್ಲಿಕ್ ಶಾಲೆ ಬೆಳೆದು ನಿಂತಿರುವುದು ಬಡವರ ಪಾಲಿಗೆ ಒಂದು ಆಶಾಕಿರಣವಾಗಿದೆ. ಈ ಕಾರಣದಿಂದಲೇ ಕೇವಲ 8 ವರ್ಷಗಳ ಹಿಂದೆ ಸ್ಥಾಪಿತವಾದ ಈ ಶಾಲೆ ಸುತ್ತಮುತ್ತಲಿನ ಜನ ಸಮೂಹದ ಮೆಚ್ಚುಗೆಯನ್ನು ಪಡೆದಿದೆ.

2001 ರಲ್ಲಿ ಸ್ಥಾಪಿತವಾದ ಈ ಶಾಲೆ ಈ ಹೊತ್ತಿಗೆ 8 ನೇ ತರಗತಿ ವರೆಗೆ ಮುನ್ನಡೆದು ಹೆಚ್ಚು ಕಡಿಮೆ 200 ಕ್ಕೂ ಹೆಚ್ಚಿನ ಮಕ್ಕಳಿಂದ ಕೂಡಿ, ಇಂಗ್ಲಿಷ್ ಹಾಗೂ ಕನ್ನಡ ಮಾಧ್ಯಮದಲ್ಲಿ ಪಾಠಪ್ರವಚನಗಳು ನಡೆಯುತ್ತಿವೆ. ಈ ಶಾಲೆಯು ಒಂದು ಮಾದರಿ ಶಾಲೆಯೆಂದು ಹೆಸರು ಗಳಿಸಲು ಅನೇಕ ಕಾರಣಗಳು ಮುಂದಾಗಿವೆ. ಸುಶಿಕ್ಷಿತರಾದ 10 ಮಂದಿ ಶಿಕ್ಷಕಿಯರು, ನುರಿತ ಆಡಳಿತಾಧಿಕಾರಿ, ಕಾರ್ಯಪ್ರವರ್ತಕರಾಗಿರುವ ಇತರ ಸಿಬ್ಬಂದಿ ವರ್ಗದವರು, ಎಲ್ಲಾ ರೀತಿಯಲ್ಲೂ ಸುಸಜ್ಜಿತವಾಗಿರುವ ಕ್ಲಾಸ್‌ರೂಮ್‌ಗಳು, ಆಟೋಟ ಹಾಗೂ ಇತರ ಚಟುವಟಿಕೆಗಳಿಗೆ ಪ್ರೋತ್ಸಾಹ, ಬಡಮಕ್ಕಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಉಚಿತ ಮಧ್ಯಾಹ್ನದ ಊಟ, ಬಡತನದ ಬಾಯಿಯಲ್ಲಿದ್ದರೂ, ವಿದ್ಯಾಭ್ಯಾಸದಲ್ಲಿ ನಿಪುಣರಾಗಿರುವ ಮಕ್ಕಳಿಗೆ ಎಲ್ಲಾ ರೀತಿಯಲ್ಲಿ ರಿಯಾಯ್ತಿ ವಿದ್ಯೆ, ಉತ್ತಮ ಮಟ್ಟದಲ್ಲಿ ಪಾಸಾದ ಮಕ್ಕಳಿಗೆ ಫ್ರೀಶಿಪ್ ಯಾ ಸ್ಕಾಲರ್‌ಶಿಫ್ ಇತ್ಯಾದಿ ಕಾರಣಗಳೆಂದು ಹೇಳಬಹುದು.

ಇಲ್ಲಿಯವರೆಗೆ ಈ ಶಿಕ್ಷಣ ಸಂಸ್ಥೆ ಹಾಗೂ ಕಾವೇರಿ ನೇಷನಲ್ ಪಬ್ಲಿಕ್ ಶಾಲೆ ಮೆಲ್ಲಮೆಲ್ಲನೆ ಹೆಜ್ಜೆ ಇಟ್ಟು ಮುಂದೆ ಬಂದು ಪ್ರಗತಿಪಥದಲ್ಲಿ ಸಾಗಲು ಕಾರಣ ಇದರ ಆಡಳಿತ ಮಂಡಳಿಯ ನಿಸ್ವಾರ್ಥ ಹಾಗೂ ಸತತ

ಸೇವೆ, ದುಡಿಮೆ, ಸಾಧನೆ. ಸಂಸ್ಥೆಯ ಏಳಿಗೆಯಲ್ಲಿ ಆಡಳಿತ ಮಂಡಳಿಯ ಮಂತ್ರ, ವಿದ್ಯಾದಾನವೇ ಮಹಾದಾನ ಹಾಗೂ ಅದೇ ಜನಾರ್ದನ ಸೇವೆ, ಅದೇ ಜನರುದ್ಧಾರಕ್ಕೆ ನಾಂದಿ ಎಂಬ ಪತಾಕೆಯನ್ನು ಮೇಲಕ್ಕೆತ್ತಿ ಹಿಡಿದು ನಿಂತಿರುವ ಆಡಳಿತ ಮಂಡಳಿಯ ಅಧಿಕಾರಿಗಳು ಗುಡ್ಡೇರ ಡಾ. ಚಿಣ್ಣಯ್ಯ (ಪ್ರೆಸಿಡೆಂಟ್), ಕಾವೇರಿ ಮನೆ ಡಾ. ಬೋಜಪ್ಪ (ಹಿರಿಯ ಸಲಹೆಗಾರರು), ದೇವಜನ ಧನಂಜಯ (ವೈಸ್ ಪ್ರೆಸಿಡೆಂಟರು), ಮೊಟ್ಟನ ಅಡ್ವಕೇಟ್ ರವಿಕುಮಾರ್ (ಗೌರವ ಪ್ರಧಾನ ಕಾರ್ಯದರ್ಶಿ), ಕಾಳೆಕೋಟಿ ಮಾಚಯ್ಯ (ಜಂಟಿಕಾರ್ಯದರ್ಶಿ) ಹಾಗೂ ಕುದುಪಜೆ ಗಣಪತಿ (ಖಜಾಂಚಿ) ಹಾಗೂ ಈ ಸಂಸ್ಥೆಯ ಸರ್ವತೋಮುಖ ಏಳಿಗೆಯಲ್ಲಿ ದಿನದಿಂದ ದಿನಕ್ಕೆ ಪಾಲ್ಗೊಳ್ಳುತ್ತಿರುವ 15 ಸದಸ್ಯರಿಂದ ಕೂಡಿದ ಗವರ್ನಿಂಗ್ ಕೌನ್ಸಿಲ್ ಮೆಂಬರುಗಳು ಹಾಗೂ ಜನಾಂಗದ ಮತ್ತು ಜನಾಂಗೇತರ ಅನೇಕ ಮಹನೀಯರ ಮತ್ತು ಹಿರಿಯ ಮಹಿಳೆಯರಲ್ಲಿ ಮುಖ್ಯವಾಗಿ ಕಾವೇರಿಮನೆ ಶ್ರೀಮತಿ ಬೋಜಮ್ಮ, ಶ್ರೀಮತಿ ಕುಯ್ಯಮುಡಿ ಸುಶೀಲ ಮುಂತಾದವರ ಸದಾಕಾಲದ ಉತ್ತೇಜನವೇ ಈ ವಿದ್ಯಾಸಂಸ್ಥೆಯು ಜಯಗಳಿಸುವುದರಲ್ಲಿ ನಾಂದಿಯಾಗಿದೆ. ಕೊಡಗಿನ ಗೌಡರು ಸಾಧಿಸಿರುವ ಪಟ್ಟಿಯಲ್ಲಿ ಒಂದಾಗಿ ಮುಂದೆ ಬೆಳೆದು ಒಂದು ದೊಡ್ಡ ವಿದ್ಯಾ ಸಂಸ್ಥೆಯಾಗಲಿ ಎಂದು ಹಾರೈಸುವ.

ಕವನ

ಹದ್ನಾರರ ಹರಯ

ಇದ್ ಹದ್ನಾರರ ವಯಸ್ಸ್
ಹುಚ್ಚ್ ಕೊಣ್ತದ ಮನಸ್ಸ್
ಹೋದ ಹೋದಲ್ಲಿ ಕಣ್ ತಾಂಗ್ವ ಬಿರ್ಸ್
ಅಲ್ಲಿ ಇಲ್ಲಿ ಹೋಗ್‌ಬಡ
ಮುಖ ಎತ್ತಿ ನೋಡ್‌ಬಡ
ಯಾರ ನೋಡಿ ನಗ್‌ಬಡ
ಇದ್ ಹದ್ನಾರರ ವಯಸ್ಸ್
ಹುಚ್ಚ್ ಕೊಣ್ತದ ಮನಸ್ಸ್
ಕತ್ತಲೆ ಮಾಡಿ ಬರ್‌ಬಡ
ಬಂದರೆ ತಿರ್‌ಗಿ ನೋಡ್‌ಬಡ
ನೋಡ್ರೆ ನಿತ್ ಬುಡ್‌ಬಡ
ಇದ್ ಹದ್ನಾರರ ವಯಸ್ಸ್
ಹುಚ್ಚ್ ಕೊಣ್ತದ ಮನಸ್ಸ್
ದಾರಿ ಮರ್‌ತ್ ಬಂಲಡ್‌ಬಡ
ಮರ್‌ತ್ ಎಲ್ಲೋ ಹೋಗ್‌ಬಡ
ಹೋಗಿ ಎಡ್‌ಗಿ ಬೀಳ್‌ಬಡ
ಇದ್ ಹದ್ನಾನಾರರ ವಯಸ್ಸ್
ಹುಚ್ಚ್ ಕೊಣ್ತದ ಮನಸ್ಸ್

- ಪುದಿನೆರವನ ರೇವತಿ ರಮೇಶ.

◆◆◆◆◆

ಕೊಡಗು ಗೌಡ ಮಹಿಳಾ ಒಕ್ಕೂಟದ ಪಕ್ಷಿ ನೋಟ

ಮಾಹಿತಿ: ಆಡಳಿತ ಮಂಡಳಿ

ಕೊಡಗು ಗೌಡ ಮಹಿಳಾ ಒಕ್ಕೂಟ.

ಕೊಡಗು ಗೌಡ ಜನಾಂಗದ ಮಹಿಳೆಯರ ಶ್ರೇಯೋಭಿವೃದ್ಧಿಗೆ ಪ್ರತ್ಯೇಕವಾದ ಸಂಘಟನೆಯ ಅನಿವಾರ್ಯತೆಯನ್ನು ಪರಿಗಣಿಸಿ ಗೌಡ ಮಹಿಳಾ ಒಕ್ಕೂಟದ ರಚನೆಯು ದಿನಾಂಕ 3-11-1997ರಂದು ಕೊಡಗು ಗೌಡ ವಿದ್ಯಾ ಸಂಘದ ಕಟ್ಟಡದಲ್ಲಿ ಸ್ಥಾಪಿಸಲ್ಪಟ್ಟಿತು.

ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣನವರು ಎಲ್ಲಾ ಮಹಿಳೆಯರ ಸಹಕಾರದೊಂದಿಗೆ ಈ ಮೇಲಿನ ಸಂಸ್ಥೆಯನ್ನು ಸ್ಥಾಪಿಸಲು ಮೂಲ ಕಾರಣಕರ್ತರಾಗಿದ್ದಾರೆ. ಶ್ರೀಮತಿ ಚೀಯಂಡಿ ರಾಧಾ ಯಾದವನವರ ಅಧ್ಯಕ್ಷತೆಯಲ್ಲಿ ಮತ್ತು 12 ಮಂದಿ ಸದಸ್ಯರನ್ನೊಳಗೊಂಡು ದಿನಾಂಕ 18-3-1998ರಂದು ಈ ಒಕ್ಕೂಟ ನೋಂದಾಯಿಸಲ್ಪಟ್ಟಿತು.

ಪ್ರಸ್ತುತ ವರ್ಷದಲ್ಲಿ 670 ಮಹಿಳಾ ಸದಸ್ಯರಿದ್ದು, ಈಗ 1500ಕ್ಕೆ ಏರಿದೆ. ಆ ವರ್ಷದಲ್ಲಿ ಸುಮಾರು 21 ಸಭೆಗಳನ್ನು ನಡೆಸಿ, ಅನೇಕ ಉತ್ತಮ ಕಾರ್ಯಕಲಾಪಗಳನ್ನು ಸಾರ್ವಜನಿಕವಾಗಿ ನಡೆಸಿ ಅನೇಕ ಪ್ರಶಂಸನಾ ಪತ್ರಗಳನ್ನು ಪಡೆದಿದೆ. ಮಹಿಳೆಯರಿಗಾಗಿ ಒಟ್ಟು 9 ಪ್ರವಾಸಗಳನ್ನು ಕೈಗೊಂಡಿದೆ. (ಅಡುಗೆ ತರಬೇತಿ-ಅಣಬೆ ಕೃಷಿ-ಹಣ್ಣಿನ ರಸ ಇತ್ಯಾದಿ ತಯಾರಿಕೆ ತರಬೇತಿ ನಡೆಸಿದೆ.) ಮಡಿಕೇರಿ ಆಕಾಶವಾಣಿಯ ಇತಿಹಾಸದಲ್ಲೆ ಪ್ರಥಮ ಬಾರಿಗೆ ಮಹಿಳಾ ಲೋಕ ಕಾರ್ಯಕ್ರಮ ಅರೆಭಾಷೆಯಲ್ಲಿ ಗೌಡ ಸಂಸ್ಕೃತಿ ಪ್ರಸಾರ 21-8-1998.

ಜೂನಿಯರ್ ಕಾಲೇಜು ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರ ಗುಡ್ಡೆಮನೆ ಅಪ್ಪಯ್ಯ ಗೌಡರ ನಾಮಫಲಕ ಪುನರ್ ನಿರ್ಮಾಣಕ್ಕೆ ಅರ್ಜಿ ಸಲ್ಲಿಕೆ. 25-5-1998 ರಾಜ್ಯಮಟ್ಟದ ಸಭೆಯ ಸಮಾರಂಭಗಳಲ್ಲಿ ಗೌಡ ಸಂಸ್ಕೃತಿಯನ್ನು ಪರಿಚಯಿಸಿದೆ. ಕನ್ನಡ ಸಂಸ್ಕೃತಿ ಇಲಾಖೆಗೆ ಅಪ್ಪಯ್ಯಗೌಡ ಸ್ಮಾರಕ ನಿರ್ಮಾಣ ಮತ್ತು ಚರಿತ್ರೆಯಲ್ಲಿ ಅವರ ಪಾತ್ರದ ಬಗ್ಗೆ ವಿವರ ಸಹಿತ ಅರ್ಜಿ. ದೂರದರ್ಶನ ಹಾಗೂ ಆಕಾಶವಾಣಿಯಲ್ಲಿ ರಾಜ್ಯದ ಜನತೆಗೆ ಗೌಡ ಸಂಸ್ಕೃತಿಯನ್ನು ಪರಿಚಯಿಸಿದ ಕೀರ್ತಿ ಮತ್ತು ಕೊಡಗಿನಲ್ಲಿ ಗೌಡರ ಇರುವಿಕೆಯನ್ನು ಗೌಡ ಸಂಪ್ರದಾಯ ಉಡುಪಿನಲ್ಲಿ ಮಹಿಳೆ ಮತ್ತು ಯುವತಿಯರು ಗುರುತಿಸಿದ ಕೀರ್ತಿ ಮಹಿಳಾ ಒಕ್ಕೂಟದ ಸಾಧನೆಗೆ ಸಂದ ಗೌರವ ಮತ್ತು ಮೆರಗು. ಪರಿಷತ್ ಮತ್ತು ಕನ್ನಡ ಸಂಸ್ಕೃತಿ ಇಲಾಖೆ ಕುವೆಂಪು ಜನ್ಮ ಶತಾಬ್ಧಿ , ಕನ್ನಡ ಸಾಹಿತನ್ಮಿವರ ಸಂಯುಕ್ತ ಆಶ್ರಯದಲ್ಲಿ ಪುರಸಭೆ ಮತ್ತು ವಿದ್ಯಾಸಂಘದಲ್ಲಿ ಕಾರ್ಯಕ್ರಮ ಹೀಗೆ ಅನೇಕ ಯಶಸ್ವಿ ಕಾರ್ಯಕ್ರಮಗಳೊಂದಿಗೆ ನೂರಕ್ಕೂ ಅಧಿಕ ಮಹಿಳೆಯರಿಗೆ ವೇದಿಕೆಗೆ ಪ್ರೋತ್ಸಾಹ ನೀಡುತ್ತಾ ಗೌಡ ಜನಾಂಗದ ಸಂಸ್ಕೃತಿ ಮತ್ತು ಇರುವಿಕೆಯನ್ನು ಗುರುತಿಸುವಲ್ಲಿ ಸಫಲ.

ಒಕ್ಕೂಟ ಪ್ರದರ್ಶಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು:

* ಕೊಡಗು ಸಂಗಾತಿ ಪಾಕ್ಷಿಕೆ ಪತ್ರಿಕೆ ಪ್ರಥಮ ವಾರ್ಷಿಕೋತ್ಸವ -ಗೌಡರ ಧಾರ್ಮಿಕ ಸಂಪ್ರದಾಯ ಹರಿಸೇವೆ (ರಂಗಾಯಣ ಕಲಾಮಂದಿರ ಮೈಸೂರು) 9-4-1998

* ಗೌಡ ಸಮ್ಮೇಳನ-ಭಾಗಮಂಡಲ
* ಸ್ವಾತಂತ್ರ್ಯ ಸುವರ್ಣ ಮಹೋತ್ಸವ -ಪುರಸಭೆ ಮಡಿಕೇರಿ
* ರಾಜ್ಯಮಟ್ಟದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು ಇವರು ನಡೆಸಿದ ಕಾರ್ಯಕ್ರಮದಲ್ಲಿ ಒಕ್ಕೂಟ ಕಾರ್ಯಕ್ರಮ ನೀಡಿದೆ. ಗಾಂಧಿಮಂಟಪ ಮಡಿಕೇರಿಯಲ್ಲಿ
* ಕೊಡಗು ಗೌಡ ಮಹಿಳಾ ಒಕ್ಕೂಟದ ದ್ವಿತೀಯ ವಾರ್ಷಿಕೋತ್ಸವ .

  ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ ಇವರು ಸಂಗ್ರಹಿಸಿ ಮುದ್ರಿಸಿ ಸೋಬಾನೆ ಸಂಗ್ರಹ 'ಹಸೆಮಣೆ' ಪುಸ್ತಕ ಅನಾವರಣ ಸಮಾರಂಭ ಮತ್ತು ವಸ್ತುಪ್ರದರ್ಶನ, ಗೌಡ ಸಮಾಜ ಮಡಿಕೇರಿ.
* ಕೊಡಗು ಮತ್ತು ಮಂಡ್ಯ ಕಾವೇರಿ ಕಲಾ ಉತ್ಸವ

  ಮಂಡ್ಯ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರ, ಮಂಡ್ಯ 28-11-2002
* ಮೈಸೂರು ದಸರಾ ಮೆರವಣಿಗೆಯಲ್ಲಿ ಕರ್ನಾಟಕ ಜಾನಪದ ಕಲಾ ತಂಡದೊಂದಿಗೆ ಒಕ್ಕೂಟದ ತಂಡ ಮೆರವಣಿಗೆಯಲ್ಲಿ ಪಾಲ್ಗೊಂಡಿದೆ.
* ಮೈಸೂರು ಚಾಮುಂಡಿ ಬೆಟ್ಟದಲ್ಲಿ (ದೇಗುಲದ) ದೇವಿಯ ಕುಂಭಮೇಳದಲ್ಲಿ ಜಾನಪದ ತಂಡಗಳೊಂದಿಗೆ ಕೋಲಾಟ
* ಸ್ವಾತಂತ್ರ್ಯ ದಿನಾಚರಣೆ - ಪುರಸಭೆ ಮಡಿಕೇರಿ
* ವಿಶ್ವ ಹಿಂದೂ ಜಾಗರಣಾ ವೇದಿಕೆ- ಚೆಟ್ಟಳ್ಳಿ
* ವಿಶ್ವ ಮಹಿಳಾ ದಿನಾಚರಣೆ- ಮಹಾಲಿಂಗೇಶ್ವರ ದೇವಸ್ಥಾನ ಪಾಲೂರು ಮತ್ತು ಗಾಳಿಬೀಡು ಮಹಿಳಾ ಸಂಘ
* ರಿಪಬ್ಲಿಕ್‌ಡೇ, ಮ್ಯಾನ್ಸ್ ಕಾಂಪೌಂಡ್, ಮಡಿಕೇರಿ
* ಯಶಸ್ವಿನಿ ಕಾರ್ಯಕ್ರಮ ಜಿಲ್ಲಾ ಪಂಚಾಯತ್ ವತಿಯಿಂದ - ಪುರಸಭೆ ಮಡಿಕೇರಿ
* ಕ್ರಿಕೆಟ್ ಉತ್ಸವ - ಮ್ಯಾನ್ಸ್ ಕಾಂಪೌಂಡ್ ಮಡಿಕೇರಿ
* ಸ್ನೇಹ ಕಾವೇರಿ ಪ್ರತಿ ತಿಂಗಳ ಅರೆ ಭಾಷಾ ಕಾರ್ಯಕ್ರಮದಲ್ಲಿ ಹಲವು ಬಾರಿ
* ಕನ್ನಡ ಸಾಹಿತ್ಯ ಪರಿಷತ್ತು ಮಡಿಕೇರಿ-ಮರಗೋಡು
* ಗೌಡ ಸಂಸ್ಕೃತಿ ಅಂದು -ಇಂದು-ಮುಂದೆ ಪ್ರಬಂಧ ಸ್ಪರ್ಧೆ ಗೌಡ ಸಮಾಜ

  (ಪೂಜಾರಿ ಮೊಣ್ಣಪ್ಪ1 ಬೈತಡ್ಕ ಬೆಳ್ಯಪ್ಪ2 , ನಾಟೋಳನ ಶ್ರೀಧರ3, ಉಳುವಾರನ ಸುರೇಶ4)
* ಕಾವ್ಯ ಕಾವೇರಿ ಜಿಲ್ಲಾ ಕಾರಾಗೃಹ -ಮಡಿಕೇರಿ
* ಮಹಿಳಾ ಜಾಗೃತಿ ಸಮಾವೇಶ -ಭಾಗಮಂಡಲ

* ನವರಾತ್ರಿ ಉತ್ಸವದ ಸಂದರ್ಭದಲ್ಲಿ ಪ್ರತಿವರ್ಷ ವಿದ್ಯಾಸಂಘದ ಕಟ್ಟಡದಲ್ಲಿ ಶಾರದಾ ಪೂಜೆ
* ನಿಸರ್ಗ ಯುವಕ ಮಂಡಳಿ ಕೊಟುಹೊಳೆ ಗಾಳಿಬೀಡು
* ಕೆ.ವಿ.ಜಿ. ಅಮೃತ ಮಹೋತ್ಸವ-ಸುಳ್ಯ ಕೊಡಗು ಗೌಡ ಬಾಂಧವರ ಪರವಾಗಿ 1ಗಂಟೆಯ ಸಾಂಸ್ಕೃತಿಕ ಕಾರ್ಯಕ್ರಮ
* ಜಾನಪದ ಜಾತ್ರೆ - ಕೋಟೆ ಆವರಣ ಮಡಿಕೇರಿ
* ಬೇಸಿಗೆ ಶಿಬಿರ ಕೊಡಗು ಗೌಡ ವಿದ್ಯಾ ಸಂಘದ ಕಟ್ಟಡ
* ಕುವೆಂಪು ಜನ್ಮಶತಾಬ್ದಿ ವರ್ಷದ ಕಾರ್ಯಕ್ರಮದಲ್ಲಿ ಒಕ್ಕೂಟದ ಬ್ಯಾನರ್‌ನೊಡನೆ ಮೆರವಣಿಗೆಯಲ್ಲಿ ಭಾಗವಹಿಸಿ ಸಂಜೆ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮ 22ಜನ ಯುವತಿಯರಿಂದ
* ಗೌಡ ಸಮಾಜ ವಿರಾಜಪೇಟೆ ಉದ್ಘಾಟನೆ
* ವಿರಾಜಪೇಟೆ ಗೌಡ ಸಮಾಜದಲ್ಲಿ ಭಗವಾನ್ ಕಲ್ಕಿ ಮತ್ತು ಅಮ್ಮನವರ ಕಲ್ಯಾಣೋತ್ಸವದಲ್ಲಿ ಭಾಗವಹಿಸಿ ಸೋಬಾನೆ ಹಾಡುಗಳ ಪ್ರಸಾರ
* ಕೊಡಗು ಉತ್ಸವ ಮತ್ತು ಕೊಡಗು, ಮಂಡ್ಯ ಕಲಾ ಉತ್ಸವಗಳ ಸ್ಮರಣ ಸಂಚಿಕೆ ಭೂರಮೆ ಮತ್ತು ಸ್ನೇಹ ಸೇತು ಸಂಚಿಕೆಗಳಿಗೆ ಕುಲದೇವರು ಶ್ರೀ ವೆಂಕಟರಮಣ ಸ್ವಾಮಿಯ ಹರಿಸೇವೆ ಲೇಖನ

ಪ್ರವಾಸ: ತಲಕಾವೇರಿ -ಇಗ್ಗುತ್ತಪ್ಪ ದೇವಸ್ಥಾನ-ಹರಿಶ್ಚಂದ್ರ ಪಾಲೂರು -ಆದಿಚುಂಚನಗಿರಿ ಶ್ರವಣ ಬೆಳಗೊಳ-ಚಾಮುಂಡೇಶ್ವರಿ ಬೆಟ್ಟ -ಹಳೇಬೀಡು-ಬೇಲೂರು-ಕಳಸ-ಹೊರನಾಡು- ಶೃಂಗೇರಿ- ಚಾರ್ಮುಡಿಘಾಟ್, ಉಡುಪಿ-ಆನೆಗುಡ್ಡ ಕೊಲ್ಲೂರು- ಗೋಲ್ಡನ್ ಟೆಂಪಲ್-ಟಿಬೇಟಿಯನ್ ಕಾಲೊನಿ-ಬೈಲುಕುಪ್ಪೆ-ಹಾರಂಗಿ ಅಣೆಕಟ್ಟು-ಹೊನ್ನಮ್ಮನ ಕೆರೆ.

ಸಂಘಟನೆ, ಸಹಬಾಳ್ವೆ, ಸಂಸ್ಕೃತಿ ಏಳಿಗೆ ನಮ್ಮ ಗುರಿ
ತಾವೆಲ್ಲರೂ ಸಹಕರಿಸಿ, ಒಟ್ಟಾಗಿ ಸಾಗೋಣ
ಜನಾಂಗದ ಅಭಿವೃದ್ಧಿಯೇ ನಮ್ಮ ಧ್ಯೇಯ.

ಕವನ

ಚುಕ್ಕಿ-ಬೆಕ್ಕು

ಚುಕ್ಕಿ ಚುಕ್ಕಿ ಬಾನು ತುಂಬಾ
ನನ್ನ ಕಂಡು ಮನದ ತುಂಬಾ
ಹಕ್ಕಿ ಹಕ್ಕಿ ಮರದ ತುಂಬಾ
ಬೇಟೆಗಾರನ ಮನದ ತುಂಬಾ
ಬೆಕ್ಕು ಬೆಕ್ಕು ಮನೆಯ ತುಂಬಾ
ಮಕ್ಕಳಿಗೆಲ್ಲಾ ಸಂತಸ ತುಂಬಾ

-ಪಾಂಡನ ನೂತನ್ ಮರಗೋಡು.

ವಿದ್ಯೆ

ಎಷ್ಟು ಸಿರಿ ಇದ್ದರೂ ವಿದ್ಯೆಗೆ ಸಮವಲ್ಲ
ವಿದ್ಯೆಯೊಂದಿದ್ದರೆ ನಿನ್ನ ಸಮ ಯಾರಿಲ್ಲ
ಸುಖ ಜೀವನಕ್ಕೆ ಸರಸ್ವತಿಯೂ ಬೇಕು
ಲಕ್ಷ್ಮಿಯೂ ಜೊತೆಗಿದ್ದರೆ ಮತ್ತೇನು ಬೇಕು

-ಬೊಳ್ಳುಮಾನಿ ಗಾಯತ್ರಿ ಅಪ್ಪಯ್ಯ,
ಬಲ್ಲಮಾವಟಿ.

1870ರಲ್ಲಿ ಗಉಡ ಜನಾಂಗದ ಒಂದು ಕಟ್ಟು ಕಟ್ಲೆಯ ನೋಟ

ಸಂಗ್ರಹ : ಪಟ್ಟಡ ಮುತ್ತಣ್ಣ, ಆವಂದೂರು

ಸನ್ 1870ನೇ ಇಸ್ವಿ ಮೇ ತಾರೀಕು 16ಕ್ಕೆ ಸರಿಯಾದ ಪ್ರಮೋಮಾಕ್ತಾ ಸಂವತ್ಸರದ ವೈಶಾಖ ಬಹುಳ ಒಂದನೆ ಚಂದ್ರವಾರದಲ್ಲು ಯಿದರ ಕೆಳಗೆ ರುಜು ಮಾಡಲ್ಪಟ್ಟಿರುವ ಗೌಉಡುಗಳ ಮಹಾಜನಾಂಗಗಳು ಕಂತ್ತು ಮೂರ್ನಾಡು, ಕಾಂತ್ತೂರು ಗ್ರಾಮದಲ್ಲು ಮಾಡಲ್ಪಟ್ಟ ಮಾಹಜುರು ಯಾ ವಿವರ. ಗಉಡಗಳ ಪದ್ಧತಿ ಮೇಲೆ ಆಗುವಂತ್ತಾ ಸುಭ ಸೋಬಾನ ಲೇಸು. ಕಪ್ಪಕ್ಕೆ ಜನರು ತಂಮ ತಂಮ ಮನಸು ವಿಚ್ಛೆಕರಕವಾಗಿ ನಡಸುವ ಪದ್ಧತಿಗಳ ಮೊಸ್ಕೂಪ್ ಮಾಡಿ ವಂದೇ ರೀತಿ ನಡಕೊಳ್ಳುವುದಕ್ಕೆ ಕ್ಷೇಮ ಉಂಟೆಂದು ಯೋಚಿಸಿ ಯಿದಕ್ಕೆ ನಿಬಂಧನೆಗಳ ಉಂಟು ಮಾಡುವದಕೋಸ್ಕರ ಗಉಡಗಳ ಸಭೆ ಕೂಡಿಸುವದಕ್ಕೆ ಕುಂಬು ಗಉಡ್ರು ರಾಮೈಯ್ಯ ಗಉಡ್ರು, ಕೆದಂಬಾಡಿ ಪುಟ್ಟೆಯ್ಯ ಗಉಡ್ರು, ಉಳುವಾರದ ರಾಮಪ್ಪ ಗಉಡ್ರು, ಈ ಮೂರು ಜನರು ಮೊಕ್ತೋ ಮನಸಿನಿಂದ ಕೊಡಗು ದೇಶದ ಸೆಕೆಂಡ್ ಅಶಿಸ್ಟೆಂಟ್ಸ್ ಸುಪರೆಂಟ್‌ಟ್ಟೆಂಡ್ ರಾವ್ ಬಹದೂರ್‌ರಾದ ಮಾಹಾರಾಜ ಪುಜಿತ್ತರಾಜು ಮನ್ಸಾ ರಾಜೇಶ್ರೀ ಚೆಪ್ಪುಡಿ ಸುಬ್ಬಯ್ಯನವರ ಸನ್ನಿಧಿಯಲ್ಲಿ ಭಿನ್ನ ಪತ್ರಕ್ಕೆ ಕೇಳಿಕೊಂಡದ್ದಕ್ಕೆ ಸದ್ರಿ ಮೇರೆ ನಡೆಸುವದಕ್ಕೆ ಅವರು ಸಂತ್ತೋಷ ಮನಸು ಉಳ್ಳವರಾಗಿಯಿದ್ದೂ ದಯ ಪಾಲಿಸಿದ ಹುಕುಂ ಪ್ರಾಕಾರ ಜಮೆಯಾದ ಜನರು.

1 ನೆ ಕಟ್ಟೆ ಮನೆ ಕುಂಬು ಗಉಡ್ರು ರಾಮೈಯ್ಯ

2 ನೆ ಕೆದಂಬಾಡಿ ಪುಟ್ಟಯ್ಯ ಗಉಡ್ರು

3 ನೆ ಉಳುವಾರನ ರಾಮಪ್ಪ ಗಉಡ್ರು

ತಾವುನಾಡು

ಕುದುಪಜೆ ರಾಮೈಯ್ಯ ಗಉಡ್ರು

ದೇಂಗೋಡಿ ಮೂಕೈಯ್ಯ ಗಉಡ್ರು

ಮೂಲೆಮನೆ ಚಿನ್ನಯ್ಯ ಗಉಡ್ರು

ಹೊಸೂರು ಸುಬ್ಬೈಯ್ಯ ಗಉಡ್ರು

ಬೋಳ್ಳಡ್ಕ ಸುಬ್ಬಯ್ಯ ಗಉಡ್ರು

ಪಳಂಗೋಟು ಸುಬ್ಬೈಯ್ಯ ಗಉಡ್ರು

ನಿಡುಬೆ ಕೃಷ್ಣಪ್ಪ ಗಉಡ್ರು

ಬೇಂಗು ನಾಡು

ನಡುಬೆಟ್ಟು ಮೇದು ಗಉಡ್ರು

ಕುಂಬಾಳ್ತಾನ ಸೋಮೈಯ್ಯ ಗಉಡ್ರು

ಕುಂಞಳಿಮನೆ ಸೋಮೈಯ್ಯ ಗಉಡ್ರು

ಪಾಡಿ ನಾಲ್ಕು ನಾಡು

ಕುಯ್ಯಮುಡಿ ಅಯ್ಯಂಣ ಗಉಡ್ರು

ಚೆಂಡ್ರ ಮೇದು ಗಉಡ್ರು

ಕುಂಬೇರ ಮೂಕಯ್ಯ ಗಉಡ್ರು

ಕಡಿಯತ್ತು ನಾಡು

ಗುಡ್ಡೆ ಪೊನ್ನಪ್ಪ ಗಉಡ್ರು

ಕಟ್ರತನ ದೇವಪ್ಪ ಗಉಡ್ರು

ಬಾಕಿಲನ ಸೋಮಯ್ಯ ಗಉಡ್ರು

ಹೊರೂರು ನೂರೋಕ್ಲು ನಾಡು

ಬಾಂಣೂರು ಚಿನ್ನಪ್ಪ ಗಉಡ್ರು

ಚೈಚನ ದೇವಯ್ಯ ಗಉಡ್ರು

ವೆಂಕನ ಅಪ್ಪೈಯ್ಯ ಗಉಡ್ರು

ಮೂಡಿಗೇರಿ ನಾಡು

ಹಾರು ಬೈಲು ರಾಮೈಯ್ಯ ಗಲುಡ್ರು

ಪಾರೆ ಮಲ್ಲಪ್ಪ ಗಲುಡ್ರು

ಕಗ್ಗೋಡು ನಾಡು

ತೋರೆ ಯೀರಪ್ಪ ಗಲುಡ್ರು

ಮೂಲೆಮನೆ ದೊಡ್ಡೈಯ್ಯ ಗಲುಡ್ರು

ದೇಶ ಕೋಡಿ ತಂಮಂಣ್ಣ ಗಲುಡ್ರು

ಮಡೆಯನ ಕುಞಂಣ ಗಲುಡ್ರು

ಅಕ್ಕಾರಿ ತಿಮ್ಮಪ್ಪ ಗಲುಡ್ರು

ಕೋಲುಪೆ ರಾಮಣ್ಣ ಗಲುಡ್ರು

ಮಡಿಕೇರಿ ಹೊರ ಮಲೆನಾಡು

ಯಾಲ್ದಾಳು ಪುವಂಣ ಗಲುಡ್ರು

ಕೊಂಬಾರ ಲಿಂಗಪ್ಪ ಗಲುಡ್ರು

ಕೋಚನ ದೇವಪ್ಪ ಗಲುಡ್ರು

ಅಚ್ಚಿಪಟ್ಟಿರ ಮಾದು ಗಲುಡ್ರು

ಕೋಳುಮುಡಿಯನ ನಂಜು ಗಲುಡ್ರು

ಕುಯ್ಯಂಗೇರಿ ನಾಡು

ಕರಣೈಯ್ಯನ ಸೋಮೈಯ್ಯ ಗಲುಡ್ರು

ತೆಕ್ಕಡೆ ತಿಮ್ಮಪ್ಪ ಗಲುಡ್ರು

ಸೋಮು ಗಲುಡನ ಪಾಂಡಿ ಗಲುಡ್ರು

ಬಲ್ಲಾಯಿರ,ಪಟ್ಟಡ ತಿಂಮ್ಮಪ್ಪ ಗಲುಡ್ರು

ಮಂಚನ ಸೋಮೈಯ್ಯ ಗಲುಡ್ರು

ಕೊಡಪಾಲು ರಾಮಪ್ಪ ಗಲುಡ್ರು

ತೇನನ ಸುಬ್ರಾಯ ಗಲುಡ್ರು

ಅಣ್ಣೆಚ್ಚಿ ಮೇದು ಗಲುಡ್ರು

ಕಾಂತೂರು ಮೂರ್ನಾಡು

ಕೊಡೆಕಲ್ಲು ದೇವಪ್ಪ ಗಲುಡ್ರು

ಕೊಂಪುಳಿ ಸುಬ್ಬಪ್ಪ ಗಲುಡ್ರು

ದೇರಜ್ಜೆ ಮಲ್ಲಪ್ಪ ಗಲುಡ್ರು

ಮಿತ್ತೂರು ಸುಬ್ಬಪ್ಪ ಗಲುಡ್ರು

ಪಾರೆಮಜ್ಲಿ ರಾಮಪ್ಪ ಗಲುಡ್ರು

ಪಾಣ್ತಲೆ ತಂಮಂಣ ಗಲುಡ್ರು

ಕುಯಿಂತ್ತೋಡಿ ಬಡ್ಕಣ ಗಲುಡ್ರು

ಬೈಯ್ಯಲಾಳಿ ಬಚ್ಚಂಣ ಗಲುಡ್ರು

ಆನೇರ ಕುಂಞಣ್ಣ ಗಲುಡ್ರು

ಅಪ್ಪೈಯ್ಯನ ದೇರಣ ಗಲುಡ್ರು

ಬೆಟ್ಟಯ್ಯ ಗಲುಡನ ಯಂಕಪ್ಪ ಗಲುಡ್ರು

ಕಲ್ಲುಮುಟ್ಲು ಸುಬ್ರಾಯ್ಯ ಗಲುಡ್ರು

ಬೊಳ್ತಜಿ ಅಪ್ಪಯ್ಯ ಗಲುಡ್ರು

ಹುದಿಕೇರಿ ನಾಡು

ಉಳುವಾರದ ಮುದ್ದೈಯ್ಯ ಗಲುಡ್ರು

ಪಲ್ಲತ್ತಿ ಉತ್ತಯ್ಯ ಗಲುಡ್ರು

ಪಳಯನ ಕಂಬು ಗಲುಡ್ರು

ಲಿಂಗಡಿ ಚೊಲ್ಲ ಗಲುಡ್ರು

ಸಭೆಯ ಅಧ್ಯಕ್ಷರು: ಶ್ರೀ ಚೆಪ್ಪುಡಿ ಸುಬ್ಬಯ್ಯನವರು

ಅಂತು ಸದ್ರಿ ಪ್ರಾಕಾರ ಕೂಡಿದ ಗಲುಡುಗಳ ಜಾತಿ ಸಭೆಯಸ್ತಾರಾದ ನಾವು ಎಲ್ಲರು ಪೂರ್ವದಲ್ಲಿ ಈ ದೇಶದಲ್ಲಿ ನಮ್ಮ ಮಹಾರಾಜ ಸಾಹೇಬರ ಅಪ್ಪಣೆ ಪ್ರಾಕಾರ ತಮ್ಮ ಗಲುಡುಗಳ ಜಾತಿ ಜನರಲ್ಲಿ ಸುಭ ಸೋಬಾನ ಮುಂತಾದ್ದಕ್ಕೆ ನಡೆಯತಕ್ಕ ಕಟ್ಟು ಕಟ್ಲೆ ಮಾಡಿದಲ್ಲಿ ಯಿವರಲ್ಲೂ ಕೆಲವು ಕಟ್ಟು ಕಟ್ಲೆಗಳು ನಡೆಸುವ ಬಗ್ಗೆ ಅನೇಕ ತೊಂದ್ರೆ ಉಂಟಗುವದರಿಂದ ಪೂರ್ವದ ಪದ್ಧತಿಯಲ್ಲಿ ಕೆಲವು ಬದಲಾಯಿಸಿ ಪ್ರತ್ಯೇಕವಾದದೊಂದು ಮಹಜೂರು ಉಂಟು ಮಾಡಬೇಕಾದ್ದು, ಜಾತಿ ಮಹಾಜನಾಂಗಗಳಿಗೆ ಅವಶ್ಯ ತೋರಿದ್ದು ಯಾವದೆಂದರೆ:

1. ಜಾತಿ ಮಾನಾಡು ವೀಳ್ಯ ಕೊಡಬೇಕೆಂದು ನಮೋದು ಮಾಡಿದ ಮೇರೆ ನಡಕೊಳ್ಳುವದಕ್ಕೆ ಮುಸ್ಕಿಲ್ ಕಂಡದರಿಂದ ವೀಳ್ಯಕ್ಕೆ ಬದಲಾಗಿ ಅರ್ಧ ರೂಪಾಯಿ ಕೊಡುತ್ತಾ ಬಹುದಿನದಿಂದ ನಡೆದು ಬಂದಿರುತ್ತೆ. ಸದ್ರಿ ಮೇರೆ ಬದಲಾಯಿಸಿರುವುದು ಉತ್ತಮವಾಗಿ ಕಾಣುವದರಿಂದ ಯಿದೇ ಮೇರೆ ಇನ್ನೂ ಮುಂದೆಯೂ ಜಾರಿಯಾಗಬೇಕು.

2. ಪೂರ್ವದಲ್ಲಿ ವೀಳ್ಯ ಕೊಟ್ಟು ಹೇಳುವ ಪದ್ಧತಿಯಿದ್ದುದಾದ್ರೆ ಮಹಾರಾಜ ಸಾಹೇಬರವರ ದಿವಸದಲ್ಲು ಮಾಡಿದ ಕಟ್ಟು ಕಟ್ಲೆ ಪಾಕ್ರಿತ್ತೆಯಲ್ಲಿ ನಮೋದು ಮಾಡದೆ ಹೋಗುತ್ತಿರಲಿಲ್ಲ. ಅದರಲ್ಲು ನಮೋದು ಯಿಲ್ಲದೆ ಯಿರುವದು ನೋಡುವಾಗ ಈಚೆಗೆ ವೀಳ್ಯ ಕೊಟ್ಟು ಹೇಳುವದು ಹೊಸ ಪದ್ಧತಿ ಜಾರಿ ಬರಬೇಕೆಂಬದಾಗಿ ಕಾಣುತ್ತೆ. ಯಿದಕ್ಕೆ ಅನೇಕ ತೊಂದರೆ ಆಗುವುದಲ್ಲದೆ ನಂಮಂತೆ ಸರಿಯಾಗಿ ವೀಳ್ಯ ಪಡಕೊಳ್ಳುವುದಕ್ಕೆ ಆಯೋಗ್ಯೆವಾದ ಕೈ ವಾಡದವರು ಅಧಿಕವಾಗಿ ಕೀಳು ಜಾತಿಯಸ್ತರು ತಮಗೆ ಕಟ್ಯೇ ವೀಳ್ಯ ಕೊಡಬೇಕೆಂದು ಕೈವಾಡದವರು ಕೆಲಸಕ್ಕೆ ಬಾರದೆ ಲಗ್ನಕ್ಕೆ ವಿಗ್ನ ಉಂಟು ಮಾಡುತ್ತಾರೆ. ಆದುದರಿಂದ ತಾವಾಗಿ ಹೇಳಿ ಕಳಿಸಿದವರ ಬಾಯಿ ಮಾತಿನಿಂದಲೇ ಮದುವೆಗೆ ಹೇಳಿಸಿ ಕೂಡಿದಂತ ಕುಲಸ್ತರು ಚಪ್ಪರ ಹಾಕಿದ ಸಂತಸದ ನಂತರ ಗಲುಜಿಯಲ್ಲಿ ಮದುವೆ ಹೇಳುವ ವೀಳ್ಯವೆಂದು ಐದು ಕಟ್ಟು ಅಂದ್ರೆ 250 ವೀಳ್ಯದೆಲೆ, 50 ಉಂಡೆ ಅಡಿಕೆ ಸಹ ಒಟ್ಟಾಗಿ ಒಂದು ವೀಳ್ಯ ಕೊಡಬೇಕು. ಯಿದನ್ನು ಸಭೆಯಸ್ಥರಿಂದ ಕುಲಸ್ತರು ತೆಗೆದುಕೊಂಡು ಆಗುವಂತ ಮದುವೆ ಕಾರ್ಯವನ್ನು ನಿರ್ವಿಘ್ನದಿಂದ ನಡೆಸಬೇಕು.

3. ಗಂಡಿನ ಕಡೆಯಿಂದ ಹೆಂಣುನ ಮನೆಗೆ ದಿಬ್ಬಣ ಹೋಗಿ ಕೊಡಿಯಾಳು ತಿಳುಹಿಸಿದ ಕಡ್ಲೆ, ಚಾಪೆ, ನೀರು ಗಂಧದ ಕೊರಡು, ಸಾಣೆಕಲ್ಲು ಮದುಮಗನ ಸೇರುವ ಕಂಡಂತವರಿಗೂ ಯಿದರ ಜೊತೆಯಲ್ಲಿ ಸೇರಿ ಬಂದ ಯಲ್ಲಾ ಜನರಿಗೆ ಸಹ ಕಟ್ಟೇ ವೀಳ್ಯ ಕೊಡುವ ಪದ್ಧತಿ ಜಾರಿಯಾಗಿರುತ್ತೆ. ಯಿದರಿಂದ ಬಂದಂತಹ ದಿಬ್ಬಣದವರಿಗೆ ತಕ್ತನೆ ವೀಳ್ಯ ಗೊತ್ತು ತಿಳಿಯದೆ ಕೆಲವು ಜನರಿಗೆ ವೀಳ್ಯ ಕೊಡದೆ ಬಿಟ್ಟು ಹೋಗುವದು. ಕೀಳು ಜಾತಿಯಸ್ತರಿಗೆ ಕಟ್ಟೇ ವೀಳ್ಯ ಕೊಟ್ಟು ಹೋಗುವದು ಯಿಮೇರೆ ಅವಮಾನಕ್ಕೆಡೆಯಾಗುವರಲ್ಲ. ವೀಳ್ಯ ಸಿಕ್ಕದೆ ಹೋದವರು ತೆಗೆದುಕೊಂಡ ಅಲ್ಪ ಜನರು ನನಗೆ ಕೈನಾಗೆ ವೀಳ್ಯ ಸಿಗಲಿಲ್ಲವೆಂದು ತಕರಾರು ಮಾಡುತ್ತಾ ಲಗ್ನದ ಹೊತ್ತು ಕಳೆದು ಬಿಡುತ್ತಾರೆ. ಆದುದರಿಂದ ಚಾಪೆ, ನೀರು ವಗೈರೆ ಮರಿಯದಿಗಳನ್ನು ಸ್ವಾಹ ಜಾತಿಯಸ್ತರಲ್ಲದೆ ಪರಿ ಜಾತಿಯಸ್ತರೆ ತಂದು ಕೊಡಬೇಕು. ಯಿದನ್ನು ಗಂಡಿನ ಕಡೆಯವರು ತೆಗೆದುಕೊಂಡು ಚಾಪೆ ನೀರು ತಂದವರಿಗೆ ವೀಳ್ಯದೆಲೆ 10, ಅಡಿಕೆ 5ರ ಮೇರೆ ಸಾಣೆಕಲ್ಲು, ಗಂಧದ ಕೊರಡು ತಂದವರಿಗೂ ಸಹ ನೀಡಬೇಕು. ಯಿದು ಹೊರತು ಈ ಸ್ತಳದಲ್ಲಿ ಯಿರುವರಿಗೂ ವೀಳ್ಯದ ಮರಿಯಾದಿ ನಡೆಸಬೇಕೆಂಬ ಅವಶ್ಯ ಯಿರುವುದಿಲ್ಲ.

4. ನಮ್ಮ ಜಾತಿ ಕಟ್ಲೆ ಪ್ರಕಾರ ವೀಳ್ಯ ವಗೈರೆ ಮೊದಲು ರಾಜ ಸಾಹೇಬರವರ ದಿವಸದಲ್ಲೂ ಉಂಟಾದ

ಪದ್ಧತಿ ಪ್ರಾಕಾರ ಜಾರಿಯಿರಬೇಕು. ಬಂಣ, ಬಾಂಗಾರು ತೆಗೆದುಕೊಂಡು ಹೋಗುವಾಗ ಹೆಂಣು ಹಸೆ ತಪ್ಪಿಸಿ ಕುಂಡ್ರಿಸಬಾರದು. ಯರಡು ಜನ ಕುಂಡ್ರಿಸಬೇಕು.

5. ದಿಬ್ಬಣ ಹೋದಂತೆ ಗಂಡಿನ ಕಡೆ ಜನರು ಉಳಿಕೆ ಜನರು ಸಹ ಬಹಾಳ ಬೆಲೆಯುಳ್ಳ ಬಟ್ಟೆ, ಬರೆ, ನಗ ನಾಣ್ಯ ಮುಂತ್ತಾದ್ವನ್ನು ಉಟ್ಟು ತೊಟ್ಟು ಕೊಂಡಿರುತ್ತಾರೆ. ಯಿಂತವರ ಬಟ್ಟೆಗೂ, ಮೈಯಿಗೂ ಸಹ ಕೆಟ್ಟ ರಂಗುಗಳನ್ನು ಹಾಕಿಯೂ ದೊಣ್ಣೆ ಬಡಿಗೆ ಹಣ್ಣು ಕಾಯಿಗಳಿಂದಲೂ ಹೊಡೆದು ಅವಮಾನಕ್ಕು, ಲುಕ್ಷನಕ್ಕು ದೇಹ ಆಗುವ ಹಾಗೆ ಪೊರ್ಕಿ ಜನರು ನಡೆಸುವರು. ಪೂರ್ಣ ಮಾನಯಿರಬೇಕು. ಮಾನಯಿಲ್ಲದೆ ಯಾರಾದಿರೂ ನಡೆಸಿದರೂ ಯಿದಕ್ಕೆ ಕುಮ್ಮಕ್ಕೂ ಮಾಡಿದವರಿಗೂ ಕೂಡಿದ ಕುಲಸ್ತರು ತಕ್ಕ ತಪ್ಪು ವಿಧಿಸಿ ಬಂದೋಬಸ್ತು ಮಾಡಬೇಕು.

6. ಜಾತಿಗೆ ತಪ್ಪಿದಾದ್ರೆ ಪುಣ್ಯಾರ್ಚನೆ ವಿನಹಃ ಜಾತಿಗೆ ಬಾರೊಬಾ ಮಾಡಿಕೊಳ್ಳಕೂಡದು. ಯಿಂತ ಕೆಲ್ಸನ ವಿಧಿಸಿದ್ವಾರೆ ಎಂಬ ಮಾತಿನ ವಿಶ್ವಾಸದಲ್ಲಿ ಪುರಸ್ಕಾರಯಿಟ್ಟು ಮನಶ್ಯರುಯೆಲ್ಲಾ ಕೂಟ ಉಪಚಾರದಲ್ಲಿ ಕರಿಸಲು ಬಹುದೆ ಹೊರತು ವೂರುನಾಡು ಪದ್ಧತಿ ಪ್ರಾಕಾರ ಆಗುವಂತೆ ಕೆಲಸದಲ್ಲಿ ಸಭೆಗೆ ಬಂದು ಹಾಜರಾಗಲಿಲ್ಲ. ಯಂತಾಗ್ಲಿ ಅವೂ ಮರಿಯಾದಿ ಮಾಡಿದ ನೆಂತಾಗ್ಲಿ ತಿರುಗಿ ಜವಾಬ್ ಕೊಟ್ಟನೆಂತಾಗ್ಲಿ ಯಿನ್ನು ಯಿಂತೆ ಕೆಲ್ಸವು ಚಿಲ್ರೆ ಸಂಗ್ತಿಯಲ್ಲಿವೊಬ್ಬ ಮನುಶ್ಯನ್ನಾಗ್ಲಿ ಬಯಸ್ಕಾರ ಯಿಟ್ಟಿದ್ದುದ್ರೆ ಯಿಂತಹವರ ಸದ್ರಿ ಪದ್ಧತಿ ಪ್ರಕಾರ ಕೂಡಿದ ಸಭೆಯಲ್ಲಿ ಮಾತ್ರ ಕೂಡಿಸಿಕೊಳ್ಳಬಾರದು. ಜಾತಿ ಪದ್ಧತಿಯ ಕೂಟ ಉಂಟು ಅಂತ ಸಭೆಗೆ ಸೇರಿಸಿಕೊಳ್ಳುವಲ್ಲು ಅಡ್ಡಿಯಿಲ್ಲ. ಯಿದರಂತೆ ಜಾತಿಗಾಗಿ ಬಯಸ್ಕಾರ ಯಿಟ್ಟವನ ವೂರು ನಾಡು ಮಾತಿಗೆ ಕೂಡಿದ ಸಭೆಯಲ್ಲಿಯೂ.

7. ಅನ್ಯಜಾತಿ ಮನೆಯಲ್ಲಿ ಸಂಕಷ್ಟ ಸಭೆಯಲ್ಲಿಯೂ ಕಳೆಯಬಾರದು. ತಮ್ಮ ಕುಲದ ಪದ್ವತಿ ಪ್ರಾಕಾರಾ ಆಗುವ ಮದುವೆ ಗ್ರಾಪ್ರವೇಸ ಆಗುವಾಗೆ ನಮ್ಮ ಜಾತೀಯೊಂದಿಗೂ ನಡಿಯದ ಕೊಡಗರ ಮರಿಯಾದಿ ಪ್ರಾಕಾರ ದುಡಿಕೊಟ್ಟು ಪದ ಹೇಳಿಕೊಂಡು ಹೋಗಿ ಬಿರಿದು ಬಾಳೆ ಕಡಿದು ಯಿಂತಾದನ್ನು ನಡೆಸಬೇಕೆಂದು ಕೆಲವರು ವಿಧಿಯುಕ್ತ ಪಡುತ್ತಾರೆ. ಇದು ಸರಿಯಾದುದ್ದಲ್ಲ ಮಾನಯಿರಬೇಕು.

8. ಯಾರಾದ್ರು ನಮ್ಮ ಜಾತೀಂವ ಮೃತ ಪಟ್ರೆ ಆ ದಿನ ಕೊಟ್ಟ ವರ್ತ್ತಮಾನದ ಮೇರೆ ಜಮೆಯಾದ ಕುಲಸ್ತರು ಮಶೀದಿ ಮಾಡಿ ತಿರುಗುವಾಗ ಮೂರನೆ ಸುದ್ದಕ್ಕೆ ಕೂಡಿದ ಜನರು ಹನ್ನೊಂದನೆ ಕಟ್ಲೆಗೂ ಮೊಖರೂರು ಮಾಡಿದ ಮೇರೆ ಪೂರ್ವದಂತೆ ಎಲ್ಲಾ ಜನರು ಜಮೆ ಆಗಬೇಕು. ಪ್ರತ್ಯೇಕ ಪ್ರತ್ಯೇಕ ಹೇಳುವುದು ಮನ್ನನೆಯಿರಬೇಕು. ಯಾರಾದರೂ ಹೇಳಲಿಲ್ಲ ಎಂದು ತಕರಾರು ಯಾರು ಹೇಳಕೂಡದು.

9. ಆಯ್ರಿ ಆ ವೈಂಬೊಕ್ಲು, ಕುಡಿಯ, ಕುಂಬಾರ, ಹೆಗ್ಗಡೆ, ಈ ಜಾತಿ ಜನರಿಗೆ ಪಡುವನ ಬಾಗಿಲಲ್ಲಿ ಕರತಂದು ಈ ನೀಟಿನ ಅಡ್ಡ ಬಾಡೆಯಲ್ಲಿ ಅನ್ನ ನೀರು ಕೊಡಬಹುದು. ಮೂಡ ಬಡಗ ಎರಡು ಬಾಗಲಲ್ಲಿ ಕರೆಕೊಂಡು ಹೋಗಿ ಈ ದಿಕ್ಕುಗಳ ಬಾಡೆಯಲ್ಲಿ ಅನ್ನ ಕೊಡಬಾರದು.

10. ನಮ್ಮ ಗಲುಡುಗಳ ಜಾತಿಯಸ್ತನಾದ ಯಾವನೆ ಆಗಲಿ ಪಚನ ಚಂಗುಲಿ ಆಳು ಎಂಬುದಾಗಿ ಸರಕಾರದಲ್ಲಿ ಬರಸಿ ಕೊಳ್ಳಬಾರದು. ಒಂದು ವೇಳೆ ಬರಸಿ ಹೋಗಿದ್ದಾದ್ರಾವಂದು ವರ್ಷದ ವೋಳಗಾಗಿ ತಪ್ಪಿಸಿಕೊಳ್ಳುತ್ತೇನೆಂದು ಯಿಗ ಕಬುಲ್ ಪಟ್ರೆ ಆ ವಾಯಿದೆ ಪರಿಯಂತ್ರ ನೋಡಿಯಿದರ ವೋಳಗೆ ತಪ್ಪಿಸಿ ಕೊಳ್ಳದೆ ಯಿದ್ದು ತಪ್ಪಿಸಿಕೊಳ್ಳುವದಕ್ಕೆ ಯಿಗ ಕುಬುಲ್ ಪಡದೆ ಯಿದ್ರು ಅಂತ್ತ ಮನುಶ್ಯನ ಅತವ ಜಾತಿಗೆ ಬಹಿಷ್ಕಾರ ಯಿಡಬೇಕು.

11. ಅಂತು ಮೇಲೆ ವಿವರಿಸಿರುವ ಪ್ರಾಕಾರವೆ ನಂಮ ಗಉಡುಗಳ ಜಾತಿಯೆಲ್ಲಾ ಜನರು ನಡಕೊಳ್ಳಬೇಕು. ನಡಕೊಳ್ಳದೆ ತಪ್ಪಿದಾದ್ರೆ ಆಯಾ ನಾಡಲ್ಲಿ ಇರುವ ಗಉಡುಗಳ ಬುದ್ಧಿವಂತರು ತಕ್ಕ ತಪ್ಪು ವಿಧಿಸಬೇಕು. ಸದ್ರಿಯ ವರಕ್ತಾಹಕ್ಕೆ ಒಪ್ಪಿಕೊಳ್ಳದೆ ವಿನ್ಕಾರ ಮಾಡಿದಾದ್ರೆ ಜಾತಿಗೆ ಬಯಸ್ಕಾರಯಿಟ್ಟು ಯಿ ಸಂಗ್ತಿ ತಪಶೀಲ್‌ನಲ್ಲಿ ಆದಾಯ ನಾಡಿನ ಕುಲಸ್ತರಿಗೆ ಬರಶಿ ಕಳುಹಿಸಬೇಕು. ಯಿ ಪ್ರಾಕಾರ ನಡೆದುಕೊಳ್ಳುವುದು ಜಾತಿ ಪದ್ಧತಿಗೂ, ಮಾನಕ್ಕೂ, ಕ್ಷೇಮಕ್ಕೂ ಅತಿಗುಣವೆಂದು ನಂಮೆಲ್ಲರ ಮನಸ್ಸಿಗೆ ಕಾಣೂವದರಿಂದ ಈ ಪ್ರಕಾರ ನಡಿಯೂವ ಬಗ್ಯೆಯಿದರ ಕೆಳಗೆ ಬರಸಿದದು ಮಾಡಿದ್ದೇವೆ.

12. ಅಂತೂ ಕುಯ್ಯಂಗೇರಿ ನಾಡ್‌ನ ಪೈಕಿ ಅವಂದೂರು ಗ್ರಾಮ ವಂದಕ್ಕೆ ಸೋಮುಗಉಡನ ಪಾಂಡಿ ಗಉಡು ಸದ್ರಿ ಗ್ರಾಮದಲ್ಲು ನಮ್ಮ ಗಉಡುಗಳ ಜಾತಿ ಪದ್ಧತಿ ಸುಭ ಸೋಬಾನ ಲೇಸು ಕಟ್ಲೆ ಮೂಂತ್ತಾದು, ನಡೆಸತಕ್ಕ ಬಗ್ಗೆ ಯಿನಾಡು ವಂದನೇ ಗಉಡ್ರಾದ ಕರಣಯ್ಯನ ಸೋಮೈಯ್ಯ ಗಉಡ್ರಿಗೆ ನಂಮ ಜಾತಿ ಕುಲಸ್ತರು ಮೊಖರೂರು ಮಾಡಿ ಕೊಟ್ಟಿರುವ ಪಟ್ಟೆ ಪ್ರಾಕ್ರಾರ ನೋಡಿ ನುಕ್ಲು ಬರಶಿ ಸಧ್ರಿ ಪಾಂಡಿ ಗಉಡನ ಹೇಳಿಕೆ ಪ್ರಾಕಾರ ಆ ಗ್ರಾಮದ ಜಾತಿಯಸ್ತರು ಕೇಳಿ ನಡೆಕೊಳ್ಳಬೇಕು ಯೆಂಬುದಾಗಿ ಬರೆಶಿಕೊಟ್ಟ ಪತ್ರಿಕೆಯು ಯಿದಲ್ಲದೆ ಗಉಡಾರ್ತಿ ಹಣ ಗಉಡ ಮೊದ್ಲು ಬಾಕಿ ಗಉಡರಿಗೆ ಸಲ್ಲುವಂತ ವೀಳ್ಯ ಮೂಂತ್ತಾದ್ದು ಐತಿಪ್ಯ ಆತನಿಗೆ ಸಲ್ಲಬೇಕು.

ಯಿದು ಹಿಂದಿನ ಕಾಲದಲ್ಲಿ ನಡೆದ ವಿಶಯವನ್ನು ನೋಡಿ ಬರೆದದಾಗಿರುತ್ತೆ. ಅವಂದೂರು ಗ್ರಾಮದಲ್ಲಿರುವ ಕುಳ ನಂಬ್ರು (5), ಪಟ್ಟಡ ಪೌತಿ ಕಾರ್ಯಪ್ಪನವರ ಮಗ ಮುತ್ತಣ್ಣ, ಸಂಪಾಜೆ ಸರ್ಕಲ್ , ಉತ್ತರ ಕೊಡಗು, ಆವಂದೂರು ಪೋಸ್ಟು.

ಕವಿ ನುಡಿಗಳು

1) "ಅನುಭವ, ಅಭ್ಯಾಸಗಳೆರಡರ ಕೊರತೆಯನ್ನು ಅಹಂಕಾರದಿಂದ ತುಂಬ ಲೆತ್ನಿಸುವುದು ವಿವೇಕಿಗಳಿಗೆ ತರವಲ್ಲ"

(ಅ.ನ. ಕೃಷ್ಣರಾಯರು)

2) "ಅನ್ನವೇ ಧರ್ಮದ ಮೂಲ ಪ್ರೀತಿಯೇ ಮೋಕ್ಷಕೆ ಬಲಿ"

(ದ.ರಾ. ಬೇಂದ್ರೆ)

3) "ಗೊತ್ತು ಗುರಿ ಇಲ್ಲದ ಅಲೆದಾಟದಿಂದ ಯಾವ ಪ್ರಯೋಜನವು ಸಿದ್ಧಿಸಲಾರದು"

(ಕುವೆಂಪು)

4) " ಬಾಳನ್ನು ಬೆಳಗಿಸುವ ಅಮೃತ ಸಂಜೀವಿನಿ ಪುಸ್ತಕ ಜೀವಿಗಳಿಗೆ ಆಹಾರ ವಿದ್ದಂತೆ ಮನುಷ್ಯನ ಜ್ಞಾನದ ಆಹಾರ ಪುಸ್ತಕಗಳು"

(ಡಿ.ವಿ.ಜಿ.)

5) " ನಿರಂತರ ಬೆಳವಣಿಗೆಯೇ ಜೀವನದ ಗುರುತು"

(ಡಾ. ಶಿವರಾಮ ಕಾರಂತ)

◆◆◆◆◆

ಅನನ್ಯತೆಯ ನೆಲೆಯಲ್ಲಿ ಕೊಡಗು ಗೌಡರ ಮದುವೆ



-ಶ್ರೀಮತಿ ಕೋರನ ಸರಸ್ವತಿ ಪ್ರಕಾಶ್

ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು,

ನಾಪೋಕ್ಲು.

ಮಾನವ ಸಮಾಜದ ಮೂಲಭೂತ ಅವಶ್ಯಕತೆಯನ್ನು ಪೂರೈಸುವಲ್ಲಿ ವಿವಾಹ ಅನಿವಾರ್ಯ ವ್ಯವಸ್ಥೆಯಾಗಿದೆ. ಕೊಡಗು ಗೌಡರು ವಿವಾಹವನ್ನು 'ಒಂದು ಪವಿತ್ರವಾದ ಕಾರ್ಯ, ಮಾನವ ಬದುಕಿನ ಸಾರ್ಥಕತೆಯನ್ನು ಕಂಡುಕೊಳ್ಳಲು ಜೀವನಾವರ್ತನದಲ್ಲಾಗುವ ಮುಖ್ಯವಾದ ಮಜಲು' ಎಂದು ಭಾವಿಸಿದ್ದಾರೆ. ಈ ವಿವಾಹ ಕಾರ್ಯಕ್ಕೆ ಪವಿತ್ರವಾದ ಸ್ಥಾನ ಕಲ್ಪಿಸಿ ಅತ್ಯಂತ ಶ್ರದ್ಧೆಯಿಂದ ಅನೇಕ ಶಾಸ್ತ್ರ-ಪದ್ಧತಿಗಳನ್ನು ಅಳವಡಿಸಿಕೊಂಡು ವ್ಯವಸ್ಥಿತವಾಗಿ ಏರ್ಪಡಿಸುತ್ತಾರೆ. ಮದುವೆಗೆ ವಿಶೇಷ ಮಹತ್ವವನ್ನು ನೀಡಿ, ಸಾಂಪ್ರದಾಯಿಕ ರೀತಿಯಲ್ಲಿ ಅದನ್ನು ನೆರವೇರಿಸಿಕೊಂಡು ಹೋಗುತ್ತಾರೆ. ಮನೆತನದ ಗೌರವವನ್ನು ಮದುವೆ ಪ್ರತಿನಿಧಿಸುತ್ತದೆ.

ಕೊಡಗು ಗೌಡರ ಮದುವೆಯ ಹಂತ ಆರಂಭವಾಗುವುದು 'ಗೋತ್ರ'ದ ಆಯ್ಕೆಯಲ್ಲಿ. ಪಿತೃಪ್ರಧಾನವಾದ ಗೌಡರ ಸಮಾಜದಲ್ಲಿ 'ಬಳಿ' ಅಥವಾ 'ಗೋತ್ರ' ತಂದೆಯಿಂದ ಮಗನಿಗೆ ಬರುತ್ತದೆ. ಸ್ವಗೋತ್ರ ವಿವಾಹ ಇವರಲ್ಲಿ ನಿಷಿದ್ಧ. ಬಳಿಯ ಆಯ್ಕೆ ಹೆಣ್ಣಿನ ಆಯ್ಕೆಯನ್ನು ಸಮರ್ಥಿಸುತ್ತದೆ. ಇವರಲ್ಲಿ 18 ಗೋತ್ರಗಳಿದ್ದು, ತನ್ನ ಗೋತ್ರವನ್ನು ಬಿಟ್ಟು ತನಗೆ ಸರಿಹೊಂದುವ ಗೋತ್ರವನ್ನು ಆಯ್ದುಕೊಳ್ಳಲಾಗುತ್ತದೆ. ಒಂದೇ ಗೋತ್ರದವರು ಸೋದರ ಸಂಬಂಧಿಗಳೆಂದು ಇವರು ಭಾವಿಸುತ್ತಾರೆ. ಇವರ ಮದುವೆಯ ಮೊದಲ ಶುಭಕಾರ್ಯವನ್ನು 'ಹತ್ತು ಕುಟುಂಬ ಹದಿನೆಂಟು ಗೋತ್ರ ದೇವಸಭೆ ಸಮಸ್ತರನ್ನು ಕೇಳಿ' ಎಂಬುದಾಗಿ ಪ್ರಾರಂಭಿಸಿ ದೇವರ ದೀಪಕ್ಕೆ ಅಕ್ಕಿ ಹಾಕಿ ಕುಲದೇವರಿಗೆ ಕೈಮುಗಿಯುತ್ತಾರೆ. ಈ ನುಡಿಗಟ್ಟನ್ನು ಪ್ರತಿಶಾಸ್ತ್ರದ ಹಂತದಲ್ಲೂ ಅನುಸರಿಸುತ್ತಾರೆ.

ಹುಡುಗಿಯನ್ನು ನೋಡಿ ಗೊತ್ತುಪಡಿಸಿದ ನಂತರ, ಮದುವೆಯ ಪ್ರಾರಂಭವು ವೀಳ್ಯಶಾಸ್ತ್ರದಿಂದ ಪ್ರಾರಂಭವಾಗುತ್ತದೆ. ಕೊಡಗು ಗೌಡರ ಮದುವೆಯಲ್ಲಿ ವೀಳ್ಯದೆಲೆ- ಅಡಿಕೆ ಪ್ರಧಾನವಾಗಿದ್ದು, ಸೋದರ ಮಾವ ಮುಖ್ಯಪಾತ್ರ ವಹಿಸುತ್ತಾನೆ. ಚಪ್ಪರದ ದಿನ ಸೋದರ ಮಾವ 'ಕಾಸ್ತಾಳಿ' ಎಂಬ ಮುಹೂರ್ತ ಮಣಿಯನ್ನು ಕಟ್ಟುವ ಮೂಲಕ ಎಣ್ಣೆ-ಅರಿಶಿಣ ಶಾಸ್ತ್ರಕ್ಕೆ ಕೂರಿಸುತ್ತಾರೆ. ಮಂಗಳಸ್ನಾನ, ಆರತಿ, ಗಂಗೆಪೂಜೆ, ಹಸೆಬರೆಯುವುದು, ಮಧುರಂಗಿ ಶಾಸ್ತ್ರ, ಕುಲದೇವರಿಗೆ ಹರಕೆ ಕಟ್ಟುವುದು, ಬಳುವಳಿ ಸಹಿತ ಪೆಟ್ಟಿಗೆ ತುಂಬಿಸುವುದು, ಮಡಿಲಕ್ಕಿ ತುಂಬುವುದು ಇತ್ಯಾದಿ ಹಲವು ಶಾಸ್ತ್ರಗಳು ಸಂಪ್ರದಾಯದಂತೆ ನಡೆಯುತ್ತದೆ. ಪ್ರತಿ ಶಾಸ್ತ್ರಗಳಿಗೂ ತಕ್ಕ ಸೋಬಾನೆ ಹಾಡುಗಳು ಮಹತ್ತರ ಪಾತ್ರವಹಿಸುತ್ತದೆ.

ಕೊಡಗು ಗೌಡರ ಮದುವೆ ಚಪ್ಪರ 12 ಕಂಬಗಳಿಂದ ಕೂಡಿದ್ದು, ಇದಕ್ಕೆ 'ಸೀತಾವಳಿ ಚಪ್ಪರ' ಎನ್ನುತ್ತಾರೆ. ಒಳಗಿನ 4 ಕಂಬಗಳನ್ನು ತ್ರಿಮೂರ್ತಿ ಹಾಗೂ ಗಣಪತಿಯ ಸಂಕೇತವೆಂದೂ ಹೊರಗಿನ ಎಂಟು ಕಂಬಗಳು ಅಷ್ಟದಿಕ್ಪಾಲಕರ ಸಂಕೇತವೆಂದು ಭಾವಿಸುತ್ತಾರೆ. ಈ ಹನ್ನೆರಡು ಕಂಬದೊಳಗಿರುವ ಸ್ಥಳವನ್ನು ಧಾರೆಮಂಟಪವೆಂದೂ, ಇಲ್ಲಿ ವಧುವರರಿಗೆ ಧಾರೆ ನಡೆಸುತ್ತಾರಲ್ಲದೆ, ಈ ಸ್ಥಳ ದೇವಾಲಯದಷ್ಟೇ ಪವಿತ್ರವೆಂದು ಭಾವಿಸುತ್ತಾರೆ. ವಧುವಿಗೆ ಧಾರೆಯ ಸಂದರ್ಭದಲ್ಲಿ ಮಡಿಲಕ್ಕಿಯನ್ನು ತುಂಬಿಸುತ್ತಾರೆ. ವರನು ಕಡ್ಡಾಯವಾಗಿ

ಓಲೆ, ಮೂಗುತಿ, ತಾಳಿ, ಸೀರೆ, ರವಿಕೆ, ಕಾಲುಂಗುರ ತರಲೇಬೇಕು. ವರದಕ್ಷಿಣೆಯಿಲ್ಲದ ಕೊಡಗು ಗೌಡರ ಮದುವೆ ಅವರ ಸಂಸ್ಕೃತಿಯ ಪ್ರಮುಖ ಅನನ್ಯತೆಯ ಅಂಶ.

ಕೊಡಗು ಗೌಡರ ಮದುವೆಯಲ್ಲಿ ಹುಡುಗನ ಕಡೆಯವರು ಹುಡುಗಿ ನೋಡಲು ಹೋಗುತ್ತಾರೆ. ಹಾಗೆ ಹೋಗುವಾಗ ಎರಡು ವಿಭಿನ್ನ ಗುಂಪುಗಳ ಮಧ್ಯೆ ಸಮಾಲೋಚನೆ ನಡೆಸಲು ಮಧ್ಯವರ್ತಿಯೊಬ್ಬನನ್ನು ಆಯ್ಕೆ ಮಾಡುತ್ತಾರೆ. ಇವನಿಗೆ 'ದಲ್ಲಾಳಿ' ಎಂದು ಹೆಸರು. ಈತ ಎರಡೂ ಕಡೆಯವರ ಪರಿಚಯಸ್ಥನಾಗಿರಬೇಕು. ಈತ ಎರಡು ಗುಂಪಿನ ಜನರ ಭೇಟಿ ಸಂದರ್ಭದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುತ್ತಾನೆ.

ಕೊಡಗು ಗೌಡರ ಮದುವೆ ದಿನದ ನಿರ್ಧಾರ ಮತ್ತು ಮುಹೂರ್ತದ ನಿರ್ಧಾರವನ್ನು 'ಮನೆಯ ಜಗಲಿಯಲ್ಲಿ' ಅಥವಾ ಅರಭಾಷೆಯದಲ್ಲಾದರೆ 'ಕೈಯಾಲೆ'ಯಲ್ಲಿಯೇ ಮಾಡಬೇಕು. ಕೈಯಾಲೆ ಮನೆಯ ಒಳಗೂ ಅಲ್ಲದ ಹೊರಗೂ ಅಲ್ಲದ ಮಧ್ಯದ ಸ್ಥಳ. ದಲ್ಲಾಳಿಯು ಹಾಗೆ ಸಮತೋಲನದ ಜಾಗ. ಹೊರಗಿನವರನ್ನು ಒಳಗೆ ಬರಮಾಡಿಕೊಳ್ಳುವ ಮೊದಲು ಕುಳ್ಳಿರಿಸುವ ಜಾಗ. ಅಂದರೆ ಕೈಯಾಲೆಯು ಸಂಸ್ಕೃತಿಯ ಅಂತರಂಗ ಮತ್ತು ಬಹಿರಂಗಗಳ ಮಧ್ಯದ, ಅವೆರಡರ ಮಧ್ಯೆ ಸಂಬಂಧ ಕಲ್ಪಿಸಲು ಸಹಾಯಕವಾಗುವ ಸ್ಥಳ. ಹೆಣ್ಣು ಇನ್ನೂ ಮನೆಯೊಳಕ್ಕೆ ಬಂದಿಲ್ಲವಾದ ಕಾರಣ ಹೆಣ್ಣಿನ ಕಡೆಯವರು ಜಗಲಿಯಲ್ಲಿಯೇ ಮಾತುಕತೆಗಳನ್ನಾಡುತ್ತಾರೆ. ಈ ಮಾತುಕತೆ ಅತಿ ಮುಖ್ಯವಾದ್ದರಿಂದ ಎಲ್ಲಾ ಗೌಡರ ಮನೆಯಲ್ಲಿಯೂ 'ಜಗಲಿ' ಇದ್ದೇ ಇರಬೇಕು. ಜಗಲಿ ಅವರ ವಾಸ್ತುವಿನ ಮೂಲ ಘಟಕಗಳಲ್ಲಿ ಒಂದಾಗಿದೆ. ಅವಿಭಕ್ತ ಕುಟುಂಬ ಪದ್ಧತಿ ಇರುವಲ್ಲಿ ಐನ್‌ಮನೆಯಲ್ಲಿಯೇ ಜಗಲಿ ಇದ್ದು, ಅಲ್ಲಿ ಮದುವೆ ನಿರ್ಧಾರಗಳಾಗುತ್ತವೆ.

ಕೊಡಗು ಗೌಡರ ಮದುವೆ ಸಂಪ್ರದಾಯವನ್ನು ಗಮನಿಸಿದಾಗ ಮದುವೆಯ ಪ್ರಾರಂಭದ ಹಂತದ ಹುಡುಗಿಯನ್ನು ನೋಡುವುದರಿಂದ ಪ್ರಾರಂಭಿಸಿ, ಕೂಡಾವಳಿ ಸಂಪ್ರದಾಯದವರೆಗೆ ಅಲ್ಲಿಯ ಪ್ರತಿಯೊಂದು ಆಚರಣೆಗಳು ಹುಡುಗ ಹುಡುಗಿಯನ್ನು ಸಾಮಾನ್ಯ ಜಗತ್ತಿನಿಂದ ಪ್ರತ್ಯೇಕಿಸಿ ಒಂದು ರೀತಿಯ ಅಲೌಕಿಕ ಜಗತ್ತು ಅಥವಾ ಮಧ್ಯಂತರ ಜಗತ್ತಿನಲ್ಲಿ ನಿಲ್ಲಿಸುತ್ತದೆ. ಮನುಷ್ಯನ ಬೆಳವಣಿಗೆಯ ಯೌವನಾವಸ್ಥೆಯ ಅಗತ್ಯವನ್ನು ಪೂರೈಸುವಲ್ಲಿ ಕೊಡಗು ಗೌಡರು ಹುಡುಗ ಹುಡುಗಿಯರ ಸಾಮಾನ್ಯ ಬದುಕಿಗೆ ಸುವರ್ಣದ ಚೌಕಟ್ಟನ್ನು ಹಾಕುತ್ತಾರೆ. ಹಾಗೆಯೇ ಮಕ್ಕಳಾಟಿಕೆಯಲ್ಲಿ, ಸ್ವತಂತ್ರವಾಗಿ ಮುಕ್ತವಾಗಿ ಜೀವನ ಸಾಗಿಸುತ್ತಿದ್ದ ಹುಡುಗ ಹುಡುಗಿಯರಿಗೆ ಮನುಷ್ಯ ಜೀವನದ ಅವಿಭಾಜ್ಯ ಜವಾಬ್ದಾರಿಯನ್ನು ಹೊರಿಸುವ ಕಾರ್ಯವನ್ನು ಸಂಭ್ರಮದಿಂದ ನೆರವೇರಿಸುತ್ತಾರೆ. ಗೃಹಸ್ಥಾಶ್ರಮದ ಕಾರ್ಯಗಳನ್ನು ಸೂಚ್ಯವಾಗಿ ಇಲ್ಲಿಯ ಶಾಸ್ತ್ರಕ್ರಿಯೆಗಳು ಮನವರಿಕೆ ಮಾಡುತ್ತವೆ.

ಈ ನಿಟ್ಟಿನಲ್ಲಿ ಕೊಡಗು ಗೌಡರ ಮದುವೆ ಕ್ರಿಯೆಗಳು ಹಸಿವು- ಕಾಮಗಳನ್ನು ಸಮನ್ವಯಿಸುವಲ್ಲಿ ಸಾರ್ಥಕತೆಯನ್ನು ಪಡೆದುಕೊಳ್ಳುತ್ತದೆ. ಒಂದು ಸಂಸ್ಕೃತಿಯ ಮೂಲ ಘಟಕ ಗಂಡು ಮತ್ತು ಹೆಣ್ಣು. ಇವೆರಡೂ ಪರಸ್ಪರ ಪೂರಕ ಮತ್ತು ವಿರೋಧ ಗುಣವುಳ್ಳದ್ದು. ಮದುವೆ ಮತ್ತು ಸಂತಾನದಿಂದ ಅದು ಬೆಳೆದು ಬಂದು ತನಗಗತ್ಯವಾದ ಕುಟುಂಬವನ್ನು ರಚಿಸಿಕೊಳ್ಳುತ್ತದೆ. ಕುಟುಂಬವು 'ಕೂಡಿ ಉಂಬ' (ಕೂಡಿ ಊಟ ಮಾಡುವ) ಗಂಡು ಹೆಣ್ಣಿನ ವ್ಯವಸ್ಥೆಯನ್ನು ಹೇಳುತ್ತದೆ. ಆಹಾರ ನಿಯಮಕ್ಕೆ ಮತ್ತು ಸಹಬಾಳ್ವೆಗೆ ಸಂಬಂಧಿಸಿದ 'ಕುಟುಂಬ' ಪದವು ಸಂಬಂಧ ವಾಚಕ (Kinship) ಅಲ್ಲ, ಬದಲಾಗಿ ಮೂಲತಃ ಮದುವೆಯೆಂಬ ಘಟನೆಗನುಸಾರವಾಗಿ ರೂಪುಗೊಳ್ಳುವಂಥದ್ದು. ಅಂದರೆ ಕುಟುಂಬವೊಂದರ ನಡಾವಳಿ (Behavior) ಯನ್ನು ಮದುವೆಯ ವಿಧಿ-ವಿಧಾನಗಳು ಸಾಂಕೇತಿಕವಾಗಿ ಅಭಿವ್ಯಕ್ತಿಸಲೇ ಬೇಕಾಗುತ್ತದೆ. ಇಂಥ ಕಡೆ ಸಮಾನ ಆಚರಣೆ ಇರುವ ಒಂದು

ಗುಂಪಿಗೆ, ಆ ಗುಂಪಿನ ಮದುವೆ ಕ್ರಮವು ಸಹಜವಾಗಿ ತೋರಿದರೆ, ಇತರರ ಆದರ್ಶಗಳು, ಭಾವನೆಗಳು, ನಡಾವಳಿಗಳು ವಿಚಿತ್ರವೆಂದೋ ಅಸಂಬದ್ಧವೆಂದೋ ತೋರತೊಡಗುತ್ತದೆ. ಒಂದು ಕುಟುಂಬದ ಆಹಾರ ನಿಯಮ, ಉಡುಪಿನ ಕ್ರಮಗಳು, ತೊಡುಗೆಗಳು, ಅಲಂಕಾರ, ವಿವಾಹ ಸಂಬಂಧಗಳು, ವ್ಯಕ್ತಿ ಸಂಬಂಧಗಳು, ಕೃಷಿ ಪದ್ಧತಿಗಳು ಹೀಗೆ ಸಕಲವೂ ಅದರ ಅಧ್ಯಯನದ ವ್ಯಾಪ್ತಿಗೆ ಬರುತ್ತದೆ. ದಯೆ, ಕರುಣೆ, ದ್ವೇಷ, ಭಕ್ತಿ, ವಿನಯ, ಗೌರವ ಈ ಭಾವನೆಗಳನ್ನು ಯಾರು ಯಾರಲ್ಲಿ ಯಾವ ಮಟ್ಟದಲ್ಲಿ, ಏಕೆ ತೋರಬೇಕೆಂಬುದೂ ಇದರಲ್ಲಿ ಸೇರುತ್ತದೆ. ಹೊರ ಸಂಸ್ಕೃತಿಗಳ ಸಂಪರ್ಕವು ತೀವ್ರವಾದಂತೆ ಈ ಭಾವನೆ ಕಡಿಮೆಯಾಗುವುದು.

ಪ್ರತಿ ಸಂಸ್ಕೃತಿಯಲ್ಲೂ ತನ್ನದು ಎಂಬುದಕ್ಕೆ ವಿಶಿಷ್ಟ ಸ್ಥಾನವೊಂದು ಇದ್ದೇ ಇರುತ್ತದೆ. ಇದರಿಂದಾಗಿ ಒಂದು ಜನಾಂಗದ ಕುಟುಂಬ ವ್ಯವಸ್ಥೆಯು ತನ್ನ ವಿವಿಧ ರೀತಿಯ ಹೊಂದಾಣಿಕೆಗಳ ಪರಿಣಾಮವಾಗಿ ತನ್ನ ಆಶ್ರಯದಲ್ಲಿ ಇರುವವರಿಗೆ ತೃಪ್ತಿಯನ್ನೋ, ನಿರಾಶೆಯನ್ನೋ, ಸಮಚಿತ್ತತೆಯನ್ನೋ ನೀಡುತ್ತದೆ. ಇವುಗಳನ್ನು ಒಂದು ಕುಟುಂಬದ ಅಧ್ಯಯನದಲ್ಲಿ ಸ್ಪಷ್ಟವಾಗಿ ಗುರುತಿಸಲು ಸಾಧ್ಯ. ಈಗಾಗಲೇ ನಾನು ಸ್ಪಷ್ಟಪಡಿಸಿರುವಂತೆ, ಒಂದು ಕುಟುಂಬದ ನಡಾವಳಿ, ಮತ್ತು ದೃಷ್ಟಿಕೋನವನ್ನು ಆ ಕುಟುಂಬ ಯಾವ ಗುಂಪಿಗೆ ಸೇರಿದೆಯೋ ಅವರಲ್ಲಿರುವ ಮದುವೆ ಕ್ರಮದಲ್ಲಿ ನಾವು ಗುರುತಿಸಬಹುದು. ಕೊಡಗು ಗೌಡ ಸಮುದಾಯದ ಮದುವೆ ಕ್ರಮವನ್ನು ವಿಶ್ಲೇಷಿಸಿದರೆ, ಆ ಅಂಶ ನಮ್ಮ ಗಮನಕ್ಕೆ ಬರುತ್ತದೆ.

ಕೊಡಗು ಗೌಡರು ಮದುವೆ (ಮೊದುವೆ)ಯನ್ನು ಮನುಷ್ಯ ಜೀವನ ಕ್ರಮದ, ಮನುಷ್ಯ ಬದುಕಿನ ಅತೀ ಮುಖ್ಯವಾದ, ಪ್ರಮುಖವಾದ ಒಂದು ಘಟ್ಟ ಎಂದು ಮಾನ್ಯಮಾಡಿ ಮದುವೆಗೆ ಪ್ರಮುಖ ಸ್ಥಾನವನ್ನು ಕೊಡುತ್ತಾ ಬಂದಿದ್ದಾರೆ. ತಮ್ಮ ಮನೆತನದ ಮರ್ಯಾದೆಯನ್ನು, ಗೌರವವನ್ನು, ತಮ್ಮ ಅಂತಸ್ತನ್ನು ಇದು ಪ್ರತಿನಿಧಿಸುತ್ತದೆಂಬುದು ಅವರ ನಂಬಿಕೆ. ಕುಟುಂಬ ಮತ್ತು ಸಮಾಜದ ವ್ಯಾಪ್ತಿಯನ್ನು ನಿರ್ಧರಿಸುವ ಪ್ರಮುಖ ಮಾನದಂಡವಾಗಿ 'ಮದುವೆ' ಕೊಡಗು ಗೌಡರಲ್ಲಿ ಅನುಷ್ಠಾನಕ್ಕೆ ಬರುತ್ತದೆ.

ಮದುವೆಯ ನಿರ್ದಿಷ್ಟ ದಿನ, ಮುಹೂರ್ತ ನಿಗದಿಗೊಂಡು ಮದುವೆಯ ಕಾರ್ಯಕ್ರಮ ಪ್ರಾರಂಭಗೊಂಡಲ್ಲಿಂದ ಅಂದರೆ ಚಪ್ಪರದ ದಿನದಿಂದ ಮದುಮಗನಿಗೂ- ಮದುಮಗಳಿಗೂ 'ಪ್ರತ್ಯೇಕ ಅಸ್ತಿತ್ವ'ವೊಂದು ಸಿದ್ಧವಾಗುತ್ತದೆ. ಮೈಗೆ ಅರಸಿನ ತಿಕ್ಕಿ, ಕೊರಳಿಗೆ ಕಾಸ್ತಾಳಿ (ಮುಹೂರ್ತ ಮಣಿ) ಕಟ್ಟಿದ ಅನಂತರ ಮದುಮಗ-ಮದುಮಗಳು ಮನೆಯ ವಾತಾವರಣವನ್ನು ಬಿಟ್ಟು ಹೊರಗೆ ಹೋಗಬಾರದೆಂಬ ನಿಷೇಧವಿದೆ. ಅರಸಿನ ತಿಕ್ಕಿದ ಅನಂತರ ಅವರು 'ಹಸಿಮೈ' ವ್ಯಕ್ತಿಗಳಾಗುತ್ತಾರೆ.

ಮದುವೆ ಪ್ರಾರಂಭದಿಂದ ಮೊದಲ್ಗೊಂಡು ಎಲ್ಲಾ ಆಚರಣೆಗಳೂ ಮದುಮಕ್ಕಳನ್ನು ಸಾಮಾನ್ಯ ಜೀವನ ಕ್ರಮದಿಂದ ಪ್ರತ್ಯೇಕಿಸುತ್ತದೆ ಮತ್ತು ಹಾಗೆ ಪ್ರತ್ಯೇಕಿಸುವುದರಿಂದ ಮಾತ್ರ ಅವರು ಸಾಮಾನ್ಯ ಜೀವನ ಕ್ರಮದಲ್ಲಿ 'ಅಸಾಮಾನ್ಯ'ರಾಗಿ ಪ್ರತ್ಯೇಕ ಸ್ಥಾನವನ್ನು ಗಳಿಸಿಕೊಳ್ಳುತ್ತಾರೆ. ಇದು ಸ್ಪಷ್ಟವಾಗಲು ಅವರಿಗೆ ಸ್ನಾನ ಮಾಡಿಸುತ್ತಾರೆ. ಹೊಸ ಬಟ್ಟೆ ಉಡಿಸುತ್ತಾರೆ. ಗಂಡಿಗೆ ಕ್ಷೌರ ಮಾಡಿಸುತ್ತಾರೆ. ಪಟ್ಟೆಬಾಸಿಂಗ ಕಟ್ಟುತ್ತಾರೆ. ಮುಂಡಾಸು ಕಟ್ಟುತ್ತಾರೆ ಮತ್ತು ಆಗಾಗ ಸೋಬಾನೆಗಳನ್ನು ಹಾಡಿ ಅವರನ್ನು ಪುರಾಣಗಳ ಎತ್ತರಕ್ಕೆ ಕೊಂಡೊಯ್ಯುತ್ತಾರೆ. ವ್ಯಕ್ತಿಗಳನ್ನು ಪ್ರತ್ಯೇಕಿಸಿ 'ಧಾರಾಮಂಟಪ'ವನ್ನು ಮಾಡುತ್ತಾರೆ. ಮುಹೂರ್ತಕ್ಕೆ ಮಹತ್ವ ಇದ್ದ ಹಾಗೇ ಧಾರಾ ಮಂಟಪಕ್ಕೂ ಮಹತ್ವ ಇರುವುದರಿಂದ ಅದನ್ನು ವಿಶೇಷವಾಗಿ ಶೃಂಗರಿಸುತ್ತಾರೆ. 'ವ್ಯಕ್ತಿ' ಮುಹೂರ್ತ ಮತ್ತು 'ಸ್ಥಳ' ಒಂದು ನಿರ್ದಿಷ್ಟ ಉದ್ದೇಶಕ್ಕೆ ಬದ್ಧವಾಗಿಯೇ ಸಮಾನವಾದ ಮಹತ್ವವನ್ನು ಪಡೆದು ಒಟ್ಟು ಮದುವೆಯಲ್ಲಿ ಪಾವಿತ್ರ್ಯವನ್ನು ಪಡೆದಿರುತ್ತದೆ.

ಕೊಡಗು ಗೌಡರು ತಮ್ಮ ವಿವಾಹ ಸಮಾರಂಭದಲ್ಲಿ ತಮ್ಮ ನೆರೆಕರೆಯ ಜಾತಿಬಾಂಧವರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡುವುದನ್ನು ಇಲ್ಲಿ ಗಮನಿಸಬಹುದು. 'ಒಗ್ಗಟ್ಟಿನಲ್ಲಿ ಬಲವಿದೆ' ಮತ್ತು ಯಾವುದೇ ಸಮಾರಂಭವನ್ನು ಊರವರ ಸಹಾಯವಿಲ್ಲದೆ ಸ್ವತಂತ್ರವಾಗಿ ನಿಭಾಯಿಸಲು ಸಾಧ್ಯವಿಲ್ಲವೆಂಬ ಅಂಶವನ್ನು ತಿಳಿದ ಇವರು, ಮದುವೆಗೆ ಚಪ್ಪರ ಹಾಕಲು ಊರವರನ್ನು ಕರೆಸುತ್ತಾರೆ. ಅವರಿಗೂ ತಮ್ಮ ಜವಾಬ್ದಾರಿಯನ್ನು ಹಂಚುತ್ತಾರೆ. ಹಾಗೂ ಊರೊಳಗೆ ನಡೆಯುವ ಮದುವೆ ಮತ್ತು ಇನ್ನಿತರ ಕಾರ್ಯಗಳಲ್ಲಿ ತಾವು ಕೂಡ ಸಹಾಯ ಮಾಡುತ್ತಾರೆ. ಕೊಡಗು ಗೌಡರ ಮದುವೆ ಕಾರ್ಯದಲ್ಲಿ ಅಗಸರು, ಓಲಗದವರಿಗೂ, ಬಳೆಗಾರರು ಮತ್ತು ಕ್ಷೌರಿಕರಿಗೂ ಪ್ರಮುಖವಾದ ಪಾತ್ರವಿರುತ್ತದೆ. ವೀಳ್ಯಕ್ಕೆ ತುಂಬಾ ಪ್ರಾಶಸ್ತ್ಯವನ್ನು ಕೊಡುವ ಇವರು, ವೀಳ್ಯಕೊಟ್ಟು ಅವರೆಲ್ಲರಿಗೂ ಕರೆ ನೀಡುತ್ತಾರೆ.

ಮದುವೆಯ ಸಂದರ್ಭದಲ್ಲಿ ಮದುಮಕ್ಕಳಿಗೆ ಬೆಳಗುವ ಆರತಿಯು ವಿವಿಧ ಅಂಶಗಳನ್ನು ಸಾಂಕೇತಿಸುತ್ತದೆ. ಇಲ್ಲಿ ಬರೀ ನೀರಿನಿಂದ, ಕರಿ ನೀರಿನಿಂದ, ಕುರ್ದಿ ನೀರಿನಿಂದ, ಅಕ್ಕಿಯಿಂದ ಆರತಿಯನ್ನು ಬೆಳಗುವುದರ ಮೂಲಕ ನೂತನವಾಗಿ ಶೃಂಗರಿಸಿಕೊಂಡ ಮದುಮಕ್ಕಳಿಗೆ ಯಾರ ಕೆಟ್ಟನೋಟ ತಾಗದಿರಲಿ ಎಂಬ ಆಶಯವನ್ನು ಈ ಆರತಿಗಳು ಹೊಂದಿವೆ. ಮದುವೆಯ ಸಂದರ್ಭದ ಕಾರ್ಯಗಳೆಲ್ಲವೂ ಅಸಾಮಾನ್ಯ. ಅಸಾಮಾನ್ಯ ಮಧ್ಯಂತರ ಜಗತ್ತಿನಲ್ಲಿ ಮದುಮಕ್ಕಳ ಕುರಿತು ಅತೀವವಾದ ಕಾಳಜಿಯನ್ನು ಇಲ್ಲಿ ಗಮನಿಸಬಹುದಾಗಿದೆ. ಸ್ಥಳದ ಪ್ರತ್ಯೇಕತೆಯಲ್ಲಿ ಹಸೆ ಬರೆಯುವುದು ಮುಖ್ಯ. ಹಸೆಯ ಮುಂದೆ ಮದುಮಕ್ಕಳನ್ನು ಕುಳ್ಳಿರಿಸುವುದರ ಮೂಲಕ ಅವರು ಉಳಿದವರಿಗಿಂತ ಪ್ರತ್ಯೇಕವಾಗುತ್ತಾರೆ. ಹಾಗೆಯೇ ಕಳಶಕನ್ನಡಿಯನ್ನು ಹಿಡಿಯುವುದು ಶುಭದ ಸಂಕೇತವಾಗುತ್ತದೆ. ಕಳಶಕನ್ನಡಿ ಅಥವಾ ಕಂಚುಮಿಯ ಉರಿಯುವ ದೀಪ ನೂತನ ವಧುವರರ ಮುಂದಿನ ಬದುಕಿಗೆ ದಾರಿದೀಪವಾಗಿ ಅವರ ಸಂಸಾರ ಬೆಳಕಿನೆಡೆಗೆ ಸಾಗಿ ಸದಾ ಉರಿಯುವ ನಂದಾದೀಪದಂತಿರಲಿ ಎಂಬ ಆಶಯವನ್ನು ವ್ಯಕ್ತಪಡಿಸುತ್ತದೆ. ಬಳೆ ತೊಡಿಸುವ ಶಾಸ್ತ್ರ, ಮಧುರಂಗಿ ಶಾಸ್ತ್ರಗಳು ಅವರ ಅಲಂಕಾರವನ್ನು ಹೆಚ್ಚಿಸುವುದರೊಂದಿಗೆ 'ಬಳೆ' ಇಲ್ಲಿ ಶುಭಸೂಚಕವಾಗಿ ಮೂಡಿಬರುತ್ತದೆ. ಹಿಂದೆ ಶೃಂಗಾರ ಸಾಧನಗಳು ಕಡಿಮೆಯಿದ್ದ ಕಾಲದಲ್ಲಿ ಮದುರಂಗಿಯ ಚಿತ್ತಾರಗಳು ಅಲಂಕಾರವನ್ನು ಹೆಚ್ಚಿಸುವ ಸಾಧನವಾಗಿ ಬಳಕೆಗೆ ಬಂದಿರುವ ಸಾಧ್ಯತೆಗಳೂ ಹೆಚ್ಚು.

ಮದುವೆ ಮನೆಯ ಮುಂದೆ ಹಾಕಿದ ಚಪ್ಪರವನ್ನು ಸೀತಾವಳಿ ಚಪ್ಪರವೆಂದೂ, ದೇವಸಭೆ ಎಂದು ಕರೆಯುವ ಮೂಲಕ ದೇವಲೋಕದ ಕಲ್ಪನೆಯನ್ನು ತರುವ ಪ್ರಯತ್ನ ಇದಾಗಿದೆ. ನೂತನ ವಧುವರರನ್ನು ಸೋಬಾನೆ ಹಾಡುಗಳ ಮೂಲಕ ಪುರಾಣದ ಮಹಾನ್ ಪಾತ್ರಗಳಿಗೆ ಹೋಲಿಸಿ ಅಂದರೆ ಸೀತಾರಾಮ, ಕೃಷ್ಣರುಕ್ಮಿಣಿಯರಿಗೆ ಹೋಲಿಸಿ ಅವರನ್ನು ಅಸಾಮಾನ್ಯಗೊಳಿಸುವ ಕೆಲಸವನ್ನು ಮಾಡುತ್ತಾರೆ.

ಧಾರಾಕಾರ್ಯದ ಸಂದರ್ಭದಲ್ಲಿ ಇಬ್ಬರ ಮಧ್ಯೆ ಪರದೆಯನ್ನು ಹಿಡಿದು ಮುಹೂರ್ತಕ್ಕಾಗಿ ಕಾಯುತ್ತಾರೆ. ನಿಗದಿಪಡಿಸಿದ ಸಮಯದಲ್ಲಿ ವರನ ಕೈ ಮೇಲೆ ವಧುವಿನ ಕೈಯನ್ನಿಟ್ಟು, ವಧುವಿನ ತಂದೆ ನೀರೆರೆದು ಧಾರೆ ಮಾಡಿಕೊಡುತ್ತಾನೆ. ಪ್ರತ್ಯೇಕಿಸಲಾದ ಕಾಲ, ಸ್ಥಳ ಮತ್ತು ಗಂಡು ಹೆಣ್ಣುಗಳು, ಒಂದು ಹಂತದಲ್ಲಿ ಐಕ್ಯರಾಗುವುದಕ್ಕೆ ಮುಖ್ಯವಾದ ಎರಡು ಉದ್ದೇಶಗಳಿವೆ. ಈ ದಂಪತಿಗಳು ಭವಿಷ್ಯದಲ್ಲಿ ಒಳಿತಾಗಲಿ ಎಂಬ 'ಮಂಗಳದ ಕಲ್ಪನೆ' ಇದು ಅಲೌಕಿಕ ಸ್ವರೂಪದಲ್ಲಿಲ್ಲ. ಮುಂದಿನ ದಾಂಪತ್ಯದಲ್ಲಿ ಕೆಡುಕುಂಟಾಗದಿರಲಿ ಎಂಬ ಸದಾಶಯ. ಹೊಸ ತಲೆಮಾರಿನ ಜೀವನ ಕ್ರಮಕ್ಕೆ ಸಂಬಂಧಿಸಿದೆ. ಧಾರೆ ಹೊಯ್ಯುವ ಘಟನೆಯ ಅನಂತರ ವಧುವರರು

ಗಂಡಹೆಂಡತಿಯರಾಗಿ ಮಾರ್ಪಾಡಾಗುವುದರಿಂದ ವಂಶಾಭಿವೃದ್ಧಿಗೆ ಅನುಮತಿ ದೊರೆತಂತಾಗುತ್ತದೆ. ಪರೋಕ್ಷವಾಗಿ ಆಸ್ತಿಗೆ ಉತ್ತರಾಧಿಕಾರಿಯ ನೇಮಕಾತಿ ನಡೆದಂತೆಯೂ ಆಗುತ್ತದೆ. ಗೌಡರ ಮೂಲವೃತ್ತಿ 'ಒಕ್ಕಲುತನ' ಅಥವಾ ಅಕ್ಕಿಗೆ ಸಂಬಂಧಿಸಿರುವುದರಿಂದ, ಮುಹೂರ್ತದಲ್ಲಿ ಅಕ್ಕಿಗೆ ಒಡೆಯನನ್ನು ಅಧಿಕೃತವಾಗಿ ಒಪ್ಪಿಕೊಳ್ಳಲಾಗುತ್ತದೆ. ನೆರೆದವರೆಲ್ಲರೂ ಇದಕ್ಕೆ ಸಾಕ್ಷಿಗಳಾಗುತ್ತಾರೆ. ಇದು ಮುಹೂರ್ತಕ್ಕೆ ಇರುವ ಆರ್ಥಿಕ ಮತ್ತು ಸಾಮಾಜಿಕ ಆಯಾಮವಾಗಿದೆ. ಮುಹೂರ್ತದ ಸಂದರ್ಭದಲ್ಲಿ ಅನಪೇಕ್ಷಿತ ಘಟನೆ ಏನಾದರೂ ನಡೆದರೆ ಅದರಿಂದ ದಾಂಪತ್ಯಕ್ಕೆ ಕೇಡು ಸಂಭವಿಸುತ್ತದೆ ಎಂಬ ನಂಬಿಕೆಯಲ್ಲಿಯೂ ಭವಿಷ್ಯದ ಬಗೆಗೆ ತೀವ್ರತರವಾದ ಕಾಳಜಿ ವ್ಯಕ್ತವಾಗುತ್ತದೆ.

ಮದುವೆಯಾದ ನಂತರ ವಧುವರರನ್ನು ಮಂಟಪದೊಳಗೆ ಕುಳ್ಳಿರಿಸಿ ಅವರ ಮೈಮೇಲೆ ಅಕ್ಕಿಯನ್ನು ತಳೆಯುತ್ತಾರೆ. ಮೊಣಕಾಲಿನ ಗಂಟು, ಮೊಳಕೈಗಂಟು, ಭುಜದ ಸಂದುಗಳಿಗೆ ಅಕ್ಕಿಯನ್ನು ತಾಗಿಸಿ, ಕೊನೆಗೆ ನೆತ್ತಿಯ ಮೇಲೆ ಅಕ್ಕಿಯನ್ನು ಚೆಲ್ಲುವ, ಕೆಲವು ಸಂದರ್ಭಗಳಲ್ಲಿ ಅಕ್ಕಿಯನ್ನು ಬಾಯಿಗೆ ಇಟ್ಟು ತಿನ್ನಿಸುವ ಕ್ರಿಯೆ ನಡೆಯುತ್ತದೆ. ಜೀವಧಾತುವಾಗಿರುವ, ಸಮೃದ್ಧಿಯನ್ನು, ಫಲವಂತಿಕೆಯನ್ನು ಸೂಚಿಸುವ ಮತ್ತು ಉತ್ಪಾದನಾ ಘಟಕವಾಗಿರುವ ಅಕ್ಕಿಯ ಅನಂತ ಶಕ್ತಿಯನ್ನು ನವದಂಪತಿಗಳಿಗೆ ದಾಟಿಸುವ ಸಾಂಕೇತಿಕ ಅಭಿವ್ಯಕ್ತಿಯಾಗಿದೆ. ಇದನ್ನು ಒಟ್ಟು ಮದುವೆಯಲ್ಲಿ ಅಕ್ಕಿಗೆ ಇರುವ ಸ್ಥಾನವನ್ನು ಲಕ್ಷಿಸಿ ಇನ್ನಷ್ಟು ವಿವರಿಸಬಹುದು.

ವಿವಾಹದ ದಿನ ವಧುವಿಗೆ ಚೌಕಳಿಯ ವಸ್ತ್ರದಲ್ಲಿ ಮಡಿಲಕ್ಕಿ ಕಟ್ಟುತ್ತಾರೆ. ಇದನ್ನು ಕಟ್ಟುವಾಗ ಹೆಂಗಸರು ಸೋಬಾನೆ ಪದಗಳನ್ನು ಹಾಡುತ್ತಾರೆ. ವಧುವು ಗಂಡನ ಮನೆಗೆ ಹೋದಮೇಲೆ ಈ ಮಡಿಲಕ್ಕಿಯಿಂದ ಪಾಯಸಮಾಡಿ ಗಂಡನಿಗೂ, ನೆಂಟರಿಗೂ ಉಣಬಡಿಸುವಳು. ಇಲ್ಲಿ 'ಅಕ್ಕಿ'ಯು ವಿವಾಹದೊಂದಿಗೆ ಅನುಷ್ಠಾನದ ಅರ್ಥ ಪಡೆದಿರುವುದನ್ನು ಗಮನಿಸಬಹುದು. ಧಾರಾ ಮಂಟಪಕ್ಕೆ ಮದುಮಕ್ಕಳು ಸುತ್ತು ಬರುವಾಗಲೂ, ಮಂಟಪದ ಮೇಲ್ಬದಿಗೆ ಅಕ್ಕಿಯನ್ನು ತಳೆಯುವಲ್ಲಿಯೂ ಇದೇ ಅರ್ಥವಿದೆ. ಅಕ್ಕಿ ಇಲ್ಲದೆ ಕೊಡಗು ಗೌಡರಲ್ಲಿ ಮದುವೆ ಇಲ್ಲ. ಈ ಅರ್ಥದಲ್ಲಿ ಮದುವೆಯು ಅಕ್ಕಿಯ ಒಡೆತನವನ್ನು ಮತ್ತು ಅಕ್ಕಿಯ ಅನಂತಶಕ್ತಿಯನ್ನು, ಹೊಸ ತಲೆಮಾರಿಗೆ ವರ್ಗಾಯಿಸುವ ಪ್ರಕ್ರಿಯೆಯಾಗಿದೆ.

ಕೊಡಗು ಗೌಡರ ಮದುವೆಯಲ್ಲಿ ಚಪ್ಪರದ ದಿನದಿಂದ ಪ್ರಾರಂಭಗೊಂಡು ಕೊನೆಯ ಹಂತದವರೆಗೂ ಮದುಮಕ್ಕಳು ಅನೇಕ ಸಲ ಹಿರಿಯರ ಕಾಲು ಸ್ಪರ್ಶಿಸುವ ಮೂಲಕ ಗೌರವ ಸೂಚಿಸಬೇಕು. ಇದಕ್ಕೆ 'ಮರ್ಯಾದೆ ಕೊಡುವುದು' ಎಂದು ಹೆಸರು. ಈ ಕಾಲು ಹಿಡಿಯುವ ಕ್ರಿಯೆಯ ಮೂಲಕ ಪ್ರತ್ಯೇಕಿಸಲ್ಪಟ್ಟು ಮದುವೆಯಾದ ದಂಪತಿಗಳು ಮತ್ತು ಸಹಜ ಜೀವನ ಕ್ರಮಕ್ಕೆ ಹಿಂದಿರುಗುತ್ತಾರೆ. ಅಲ್ಲದೆ, ಹಿರಿಯರ ತಲೆಮಾರಿನ ಮೂಲಕ ಇಳಿದು ಬಂದ ಪರಂಪರೆಯ ಅವಿಭಾಜ್ಯ ಅಂಗವಾಗುತ್ತಾರೆ. 'ಕಾಲು ಹಿಡಿಯುವುದು' ಹಿಂದಿನ ತಲೆಗಳೊಡನೆ ತಾವು ಸೇರಿಕೊಳ್ಳುವುದನ್ನು ಸಂಕೇತಿಸುತ್ತದೆ. ದೇಹದಲ್ಲಿ ಕನಿಷ್ಟವಾದುದು ಕಾಲು ಮತ್ತು ಗರಿಷ್ಠವಾದುದು ತಲೆ. ಹಿರಿಯರ ಕಾಲಿಗೆ ಕಿರಿಯರು ತಮ್ಮ ತಲೆಯನ್ನು ಮುಟ್ಟಿಸುವುದರ ಮೂಲಕ, ಹಿರಿಯರ ಕನಿಷ್ಟಕ್ಕೆ ತಮ್ಮ ಗರಿಷ್ಠವು ಸಮ ಎಂದು ಸೂಚಿಸಲಾಗುತ್ತದೆ.

ಮದುವೆ ಹಿಂದಿನ ದಿನ ಮದುಮಗನ ಸಹಿತವಾಗಿ ಮನೆಯ ಹಿರಿಯರು, ಈಗಾಗಲೇ ಸತ್ತುಹೋಗಿರುವ ಕುಟುಂಬದ ಹಿರಿಯರಿಗೆ ಗೌರವ ಸೂಚಿಸುವ ಸಲುವಾಗಿ 'ಕಾರಣಕ್ಕೆ ಹಾಕುವ' ಕಾರ್ಯಕ್ರಮವನ್ನು ನೆರವೇರಿಸುತ್ತಾರೆ. ಈ ಕಾರ್ಯಕ್ರಮವು ಕೂಡಾ ಜೀವಂತ ಇರುವವರು ಈಗಾಗಲೇ ಆಸ್ತಿಯನ್ನು ಆಳಿ,

ಸತ್ತುಹೋದ ಹಿರಿಯರ ಪರಂಪರೆಯನ್ನು ಮುಂದುವರಿಸುವ ಆಶಯವುಳ್ಳದ್ದಾಗಿದೆ. ಹಿರಿಯರಿಂದ ಹೊಸ ತಲೆಮಾರಿಗೆ ಪರಂಪರೆಯು ಮದುವೆಯ ಮೂಲಕ ಮತ್ತೆ ದಾಟಿ ಬರುತ್ತದೆ. ಮದುವೆ ಇಲ್ಲದೆ ಪರಂಪರೆ ದಾಟಿ ಬರಲು ಸಾಧ್ಯವಿಲ್ಲ. ಇದರ ಜೊತೆಗೆ ಮದುವೆಯ ಮೂಲಕ ಪರಂಪರೆಯ ಜವಾಬ್ದಾರಿ ಹೊತ್ತ ಮದುಮಗ, ತನ್ನ ಮನೆಯೊಳಕ್ಕೆ ನುಗ್ಗುವ ಮುನ್ನ ತಂಗಿಯ ಮಗನಿಗೆ ತನ್ನ ಮಗಳನ್ನು ಕೊಡುತ್ತೇನೆಂಬ ಭರವಸೆಯನ್ನು ಕೊಡುವುದರ ಮೂಲಕ, ಇನ್ನೂ ಹುಟ್ಟದ ಮಗುವಿನ ಭವಿಷ್ಯದ ಬಗ್ಗೆಯೂ ತೀರ್ಮಾನ ತೆಗೆದುಕೊಳ್ಳುತ್ತಾನೆ.

ಧಾರೆಯಾದ ನಂತರದ ಭೂಮಿಕ್ಕುವ ಶಾಸ್ತ್ರದಲ್ಲಿ ಮದುಮಕ್ಕಳು ಹಾಲು ಮತ್ತು ತುಪ್ಪವನ್ನು ಕೈ ಬೆರಳುಗಳ ಮೂಲಕ ಭೂಮಿಗೆ ಸಿಂಪಡಿಸಬೇಕು. ಈ ಮೂಲಕ ಅಕ್ಕಿಯನ್ನು ಅಥವಾ ಆಹಾರವನ್ನು ಬೆಳೆಯುವ ಭೂಮಿಗೆ ಗೌರವ ಸಲ್ಲಿಸಲಾಗುವುದು. ನಾಗೋಲಿ ಶಾಸ್ತ್ರದಲ್ಲಿ ವಧೂವರರು ಪರಸ್ಪರ ಅರಶಿನ ನೀರನ್ನು ಸಿಂಪಡಿಸಿಕೊಂಡು, ಒದ್ದೆಯಾಗುವುದು, ಗೊಬ್ಬರವನ್ನು ವಧು ಹೊತ್ತು ಗದ್ದೆಗೆ ಹಾಕುವುದು, ನೀರು ತರುವುದು ಈ ಕ್ರಿಯೆಗಳು ವಂಶಾಭಿವೃದ್ಧಿ ಮತ್ತು ಆಹಾರ ಪೂರೈಕೆಯ ಆಶಯಗಳನ್ನು ಅದ್ಭುತವಾಗಿ ಮೇಳೈಸುತ್ತದೆ.

ಮದುವೆಯ ನಿಮಿತ್ತವಾಗಿ ಹಾಕುವ 'ಊಟ'ದಿಂದಾಗಿ ಹೆಣ್ಣಿನ ಕಡೆ ಮತ್ತು ಗಂಡಿನ ಕಡೆಯವರು ಒಂದೇ ಆಹಾರ ಸೇವಿಸುವ ಒಂದಾಗುವ ಭಾವಕ್ಕೆ ಪಕ್ಕಾಗುತ್ತಾರೆ. ಅಂದರೆ ತಮ್ಮಲ್ಲಿದ್ದ ಭಿನ್ನತೆಯನ್ನು ಮರೆತು ಊಟದ ಮಟ್ಟಿಗೆ 'ಕುಟುಂಬ'ದವರಾಗುತ್ತಾರೆ. ಮದುವೆಯಿಂದ ಊಟವನ್ನು ಪ್ರತ್ಯೇಕಿಸಲಾಗದ ಸ್ಥಿತಿ ಇದೆ. ಈ ಮದುವೆಯು ಅಪರಿಚಿತ ಕುಟುಂಬವನ್ನು ಒಟ್ಟು ಮಾಡುವ ಕೆಲಸವನ್ನು ಮಾಡುವುದರೊಂದಿಗೆ ಸಂಬಂಧಗಳನ್ನು ವಿಸ್ತರಿಸುತ್ತದೆ.

ಮದುವೆ ಇವರಲ್ಲಿ ಹೆಣ್ಣು ಗಂಡಿನ ಸಂಬಂಧಕ್ಕೆ ಶಾಶ್ವತ ಸ್ವರೂಪ ನೀಡುತ್ತದೆ. ಅದು ಕೌಟುಂಬಿಕ ರಚನೆಯನ್ನು ನೀಡಿ, ವ್ಯಕ್ತಿಗಳನ್ನು ಅದರೊಳಗೆ ಬಂಧಿಸುತ್ತದೆ. ಇವರ ಮದುವೆಯ ಆಚರಣೆಗಳು ವಿವಾಹವಾಗಲಿರುವ ಸ್ತ್ರೀ ಪುರುಷರ ಹಾಗೂ ಅವರ ಸಂಬಂಧಿಗಳನ್ನು ಪ್ರಧಾನ್ಯತೆ, ಪರಾಧೀನತೆಯ ವರ್ತುಲದಲ್ಲಿ ಸಿಲುಕಿ ಹಾಕಿಸುತ್ತದೆ. ಉದಾಹರಣೆಗೆ ಹೆಣ್ಣೊಪ್ಪಿಸಿಕೊಡುವುದು ಇಲ್ಲಿ ಗಂಡಿಗೆ ಹೆಣ್ಣನ್ನು ಒಪ್ಪಿಸುವಾಗ ಆಕೆಯ ಮೇಲೆ ಆತನ, ತನ್ಮೂಲಕ ಆತನ ಇಡೀ ಕುಟುಂಬದ ಅಧಿಕಾರವನ್ನು ಸ್ಥಾಪಿಸುವಂತಹ ಒಂದು ವ್ಯವಸ್ಥೆಯನ್ನು ವಿವಾಹ ಸೃಷ್ಟಿಸುತ್ತದೆ. ಮದುವೆಯ ಆಚರಣೆಗಳು ಮದುವೆ ಎನ್ನುವ ಸಂಬಂಧಕ್ಕೆ ಸಾಮಾಜಿಕ ಮಾನ್ಯತೆಯನ್ನು ನೀಡುತ್ತದೆ ಹಾಗೂ ಆ ಸಂಬಂಧವನ್ನು ಪ್ರವೇಶಿಸಿದವರಿಗೆ ತಮ್ಮ ತಮ್ಮ ಜವಾಬ್ದಾರಿಗಳ ಬಗ್ಗೆ ಅರಿವನ್ನು ಮೂಡಿಸುತ್ತದೆ ಎನ್ನುವುದು ನಿಜವಾದರೂ ಈ ಆಚರಣೆಗಳೇ ಅನೇಕ ಸಂದರ್ಭಗಳಲ್ಲಿ ಶೋಷಣೆಗೆ ಕಾರಣವಾಗುತ್ತದೆಂಬುದನ್ನು ಗಮನಿಸಬೇಕು. ಇನ್ನೊಂದು ದೃಷ್ಟಿಯಲ್ಲಿ ನೋಡುವುದಾದರೆ ಮದುವೆಯ ಸಂದರ್ಭದ ಆಚರಣೆಗಳೂ ಗಂಡು ಶ್ರೇಷ್ಠ, ಹೆಣ್ಣು ಕನಿಷ್ಟ ಎನ್ನುವ ಶ್ರೇಣೀಕರಣವನ್ನು ಕಾಯ್ದುಕೊಂಡು ಬಂದಿದೆ. ಅದನ್ನು ಗೊಬ್ಬರ ಹೊರಿಸುವ, ನೀರು ಹೊರಿಸುವ, ಮದುವೆಯ ದಿನದಿಂದಲೇ ಪಾಯಸ ಬೇಯಿಸುವುದರ ಮೂಲಕ ಅಡಿಗೆ ಮನೆಗೆ ತಳ್ಳುವ ಕ್ರಿಯೆಗಳಲ್ಲಿ ಗಮನಿಸಬಹುದಾಗಿದೆ. ಒಟ್ಟಿನಲ್ಲಿ ಕೊಡಗು ಗೌಡರ ಮದುವೆ ಕ್ರಮವು ಜನಾಂಗದ ಸಾಂಸ್ಕೃತಿಕ ದೃಷ್ಟಿಕೋನವನ್ನು ಸಾಂಕೇತಿಕವಾಗಿ, ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ.


♦♦♦♦♦

ಗೌಡ ವಿದ್ಯಾ ಸಂಘನ ನೊಡು

ಕೊಡಗ್‌ನ ನೋಡ್ | ಗೌಡ ವಿದ್ಯಾ ಸಂಘನ ನೋಡ್|
ಕಾವೇರಿ ಮಾತೆಯ ಮಣ್ಣ್‌ಲಿ | ಇದ್ ಹುಟ್ಟಿದ್ ನೋಡ್|
ಸಂಸ್ಥೆ ಬೆಳೆದದ್ ನೋಡ್....||
ಮಡಿಕೇರಿನ ನೋಡ್ | ಇದರ ಅಂದಾನ ನೋಡ್|
ಇಲ್ಲಿ ನೂರು ವರುಷಲಿ | ಹುಟ್ಟಿ ಬಂದ ಸಂಸ್ಥೆನ ನೋಡ್|
ಇದರ ಮಹಿಮೆನಾ ಕೇಳ್.... || ಕೊಡಗ್‌ನ ನೋಡ್||
ಹಿರಿಯರ ಕೇಳ್| ಇದ್ ನಡ್ದ್ ಬಂದ ದಾರಿನ ಕೇಳ್
ಯಾವಾ ಪುಣ್ಯಾತ್ಮರ್ |ಸಂಘ ಸ್ಥಾಪನೆ ಮಾಡ್‌ದ್‌ತ ಕೇಳ್
ಓದು ಕಲಿಯಕೆ ಸಹಾಯವಾಣಂತೇಳ್...||
ಅಪ್ಪಾನ ಕೇಳ್ ಮತ್ತೆ | ಅಮ್ಮಾನ ಕೇಳಿ ನೋಡ್
ಶತಮಾನೋತ್ಸವದ ಜಂಭರನ | ಹೆಂಗೇ ಮಾಡಿವೆಂತ ಕೇಳ್
ವಿದ್ಯೆ-ಬುದ್ಧಿಗೆ ದಾರಿ ದೀಪಂತ ಹೇಳ್ || ಕೊಡಗ್‌ನ ನೋಡ್||
ಅಣ್ಣಯ್ಯಾನ ಕೇಳ್ ಮತ್ತೆ | ಅಕ್ಕಯ್ಯಾನ ಕೇಳಿ ನೋಡ್
ಅವು ಓದಿ ಕಲಿತ್ ಪಾಸಾಗಿ | ಚಾಕರಿಗೆ ಸೇರ್‍ದೋ ನೋಡ್
ಕಲ್ತತ ವಿದ್ಯೆನಾ ಎಷ್ಟ್‌ತ ಕೇಳ್ ||
ಊರಣ್ಣನಾ ಕೇಳ್ | ಒಕ್ಕಲು ಯಜಮಾನರ ಕೇಳ್
ಹತ್ತು ಕುಟುಂಬದ | ಹದಿನೆಂಟ್ ಗೋತ್ರಗಾ ಯಾವುದೆಲ್ಲಾ ಕೇಳ್
ಕೂಡೂ ಗೋತ್ರಗಾ ಕೇಳ್.... || ಕೊಡ್‌ಗ್‌ನ ನೋಡ್||
|ಗುಡ್ಡೆಮನೆ ರಾಜು ನಾಣಯ್ಯ,

-ಅರುವತ್ತೊಕ್ಲು ಗ್ರಾಮ ಮತ್ತು ಅಂಚೆ
ಮಡಿಕೇರಿ ತಾಲೂಕು, ಕೊಡಗು. ದೂ. 245867.

ಕೊಡಗಿನಲ್ಲಿ ಶಿಕ್ಷಣ ಅಂದು ಇಂದು



- ಚೀಯಂಡಿ ಯಾದವ, ನಿವೃತ್ತ ಮುಖ್ಯೋಪಾಧ್ಯಾಯರು,
ಮಡಿಕೇರಿ, ಓಂಕಾರೇಶ್ವರ ದೇವಸ್ಥಾನ ಹತ್ತಿರ.

ಬಹಳ ವರ್ಷಗಳ ಹಿಂದೆ ಈಗಿನಂತೆ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಗಳಿರಲಿಲ್ಲ. ಭಾರತದ ಕೆಲವು ಕಡೆಗಳಲ್ಲಿ ಗುರುಕುಲ ಮಠಗಳಿದ್ದವು. ಈ ಮಠಗಳಿಗೆ ವಿದ್ಯಾಭ್ಯಾಸಕ್ಕಾಗಿ ತಮ್ಮ ಮಕ್ಕಳನ್ನು ಸೇರಿಸಿ ವಿದ್ಯೆ ಕಲಿಸುತ್ತಿದ್ದರು. ಹೀಗಾಗಿ ವಿದ್ಯಾಭ್ಯಾಸವು ಎಲ್ಲರಿಗೂ ಪಡೆಯಲಾಗುತ್ತಿರಲಿಲ್ಲ. ಗುರುಕುಲದಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ವಿದ್ಯಾರ್ಥಿಗಳು ಪಾಲಿಸುತ್ತಿರಬೇಕಾಗಿತ್ತು. ವಿಶೇಷವಾಗಿ ಭಾರತೀಯ ಸಂಸ್ಕೃತಿಯನ್ನು ಪಾಲಿಸುವುದು. ಉದಾ. ಪ್ರಾತಃ ಕಾಲ ಭಗವದ್ಗೀತಾ ಪಠಣ ತದ ನಂತರ ಓದು ಇತ್ಯಾದಿ. ಊಟಕ್ಕೆ ಮೊದಲು ಓಂಸಹನಾವವತು| ಸಹನೌ ಭುವಕ್ತು| ಸಹವೀರ್ಯಂ ಕರವಾವಹೈ| ತೇಜಸ್ವಿನಾಂವದೀತ ಮಸ್ತು| ಮಹಾವಿದ್ವಿಶಾವಹೈ| ಓಂ ಶಾಂತಿ ಶಾಂತಿ ಶಾಂತಿ ಪಠಿಸುತ್ತಾ ಸಾಮೂಹಿಕ ಭೋಜನ ಇತ್ಯಾದಿ ಭಾರತೀಯ ಪರಂಪರೆಯನ್ನು ಅನುಸರಿಸುತ್ತಿದ್ದರು. ವಿದ್ಯೆ ಮುಂದುವರಿಸಿದ ಜನಾಂಗಕ್ಕೆ ಮೀಸಲು ಎಂಬಂತಿತ್ತು.

ಬ್ರಿಟಿಷರು ಕೊಡಗಿನಲ್ಲಿ 1834ರಿಂದ 1947ರವರೆಗೆ ಆಳಿದರು. ಆ ಕಾಲದಲ್ಲಿ 1834ರಿಂದ 1858ರವರೆಗೆ ಭಾರತದ ಇತರೆಡೆಗಳಲ್ಲಿದ್ದ ಹಾಗೆ ಕೊಡಗಿನಲ್ಲೂ ಕಂಪನಿ ಸರಕಾರದ ಆಳ್ವಿಕೆಯಲ್ಲಿತ್ತು. ಆ ನಂತರ ಲಂಡನ್ನಿನ ಪಾರ್ಲಿಮೆಂಟಿನ ಕಾಯಿದೆ ಮೇರೆಗೆ 1858ರಲ್ಲಿ. ಅಂತ್ಯವಾದರೂ, ನೇರ ಆಳ್ವಿಕೆಯ ಪ್ರಭಾವವು ಭಾರತದ ಆಡಳಿತ ಮೇರೆ ಬಿದ್ದದ್ದು 1861ರಲ್ಲಿ ಆದುದರಿಂದ ಕೊಡಗಿನಲ್ಲಿ ಬ್ರಿಟಿಷರ ಆಳ್ವಿಕೆಯ ಪ್ರಥಮ ಹಂತವನ್ನು 1834ರಿಂದ 1861 ರವರೆಗೆ ಎಂದು ಪರಿಗಣಿಸಲಾಗಿರುವುದು. 1834 ರಲ್ಲಿ ರಾಜರಿಗೆ ಸೇರಿದ ಬೆಟ್ಟದ ಕೆಳಗಿನ ಪ್ರದೇಶಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿಸಿದ ನಂತರ ಕೊಡಗಿನಲ್ಲಿ ಆರು ತಾಲೂಕುಗಳಿದ್ದವು. (ಮಡಿಕೇರಿ, ಪಾಡಿನಾಲ್ಕುನಾಡು, ಎಡೆನಾಲ್ಕುನಾಡು, ಕಿಗ್ಗಟ್ಟುನಾಡು ನಂಜರಾಜಪಟ್ಟಣ, ಏಳು ಸಾವಿರ ಸೀಮೆ)

1834 ರಲ್ಲಿ ಶಾಲೆಗಳು ಪ್ರಾರಂಭವಾದವು. ಇದಕ್ಕೆ ಮೊದಲು ರಾಜರು ತಮ್ಮ ಮಕ್ಕಳಿಗೆ ವಿದ್ಯೆ ಕಲಿಸಲು ಮೌಲ್ವಿಗಳನ್ನು ಪಂಡಿತರನ್ನೂ ಅರಮನೆಗಳಲ್ಲಿ ಇಟ್ಟುಕೊಂಡಿರುತ್ತಿದ್ದರು.

ಜ. ಪ್ರೇಸರನು 1834 ರಲ್ಲಿ ಕುಶಾಲನಗರದಲ್ಲಿ ಒಂದು ಮತ್ತು ಹುದುಕೇರಿಯಲ್ಲಿ ಒಂದು ಕನ್ನಡ ಶಾಲೆಯನ್ನು ನಡೆಸಲು ಏರ್ಪಾಡು ಮಾಡಿದರು. ಅದೇ ವರ್ಷ ಸರಕಾರದ ವತಿಯಿಂದ ಇಂಗ್ಲೀಷ್ ಕನ್ನಡ ಪ್ರಾಥಮಿಕ ಶಾಲೆಗಳನ್ನು ಮಡಿಕೇರಿ ವೀರಾಜಪೇಟೆಯಲ್ಲಿ ಸ್ಥಾಪಿಸಲಾಯಿತು. 1853ರಲ್ಲಿ ಸರ್ ಮಾರ್ಕ್ ಕಬ್ಬನ್‌ವರು ಕೊಡಗು ಮತ್ತು ಮೈಸೂರಿನ ಕಮಿಷನರಾಗಿದ್ದರು. ಅವರು ಮಡಿಕೇರಿಯಲ್ಲಿ ಲೋವರ್ ಸೆಕೆಂಡರಿ ಶಾಲೆಯನ್ನು ಸ್ಥಾಪಿಸಲು ಡಾ. ಮೂಗ್ಲಿಂಗ್‌ನವರಿಗೆ ಅನುಮತಿ ಕೊಟ್ಟರು. ಈ ಶಾಲೆಯು ಒಂದು ವರ್ಷ ಸರಕಾರದ ಹಣದ ಸಹಾಯದಿಂದ ಬಾಸೆಲ್ ಮಿಷನರಿ ಸಂಸ್ಥೆಯಿಂದ ನಡೆಯಲ್ಪಟ್ಟಿತು. ಆಗ ಡಾ. ಮೂಗ್ಲಿಂಗರು ಪ್ರಾಂಶುಪಾಲರಾದರು. ನಂತರ ಅದೇ ವರ್ಷ ರೆವರೆಂಡ್ ಜಿ. ರಿಕ್ಟರ್ ಎಂಬವರು ಈ ಶಾಲೆಯ ಮುಖ್ಯೋಪಾಧ್ಯಾಯರಾಗಿ ನೇಮಕ ಆದರು. 1857ರಲ್ಲಿ ಮೈಸೂರು ಕೊಡಗು ಪ್ರಾಂತ್ಯಗಳಿಗೆ ಏಕರೂಪದ ವಿದ್ಯಾಭ್ಯಾಸ ಪದ್ಧತಿಯನ್ನು ಮೇಲ್ಸರಕಾರಿ ಜಾರಿಗೆ ತಂದಿತು. ಇದು ಅಲ್ಲದೆ ಕೊಡಗಿನ ಆರು ತಾಲೂಕುಗಳ

ಕೇಂದ್ರಗಳಲ್ಲಿ ಸರ್ಕಾರೀ ಪ್ರಾಥಮಿಕ ಶಾಲೆಗಳಿರಬೇಕೆಂದೂ ಈ ಎಲ್ಲಾ ಶಾಲೆಗಳು ಮೈಸೂರಿನ ವಿದ್ಯಾ ಇಲಾಖೆಯ ಒಬ್ಬ ಅಧಿಕಾರಿಯಿಂದ ಪರೀಕ್ಷಿಸಲ್ಪಡಬೇಕೆಂದೂ ಸರ್ಕಾರದವರು ಏರ್ಪಾಡು ಮಾಡಿದರು.

ಕೊಡಗಿನಲ್ಲಿ ಪ್ರಥಮವಾಗಿ ಮಡಿಕೇರಿಯಲ್ಲಿ ಒಂದು ಪ್ರೌಢಶಾಲೆಯು ಸ್ಥಾಪಿಸಲ್ಪಟ್ಟಿತು. ಈ ಶಾಲೆಯಲ್ಲಿ 1921ರವರೆಗೆ ಬ್ರಿಟಿಷರೇ ಮುಖ್ಯೋಪಾಧ್ಯಾಯರಾಗಿದ್ದರು. ಭಾರತೀಯರಾದ ಪಂಜೆ ಮಂಗೇಶರಾವ್‌ರವರು ಆ ಬಳಿಕ ಪ್ರೌಢಶಾಲೆಯ ಪ್ರಪ್ರಥಮ ಮುಖ್ಯೋಪಾಧ್ಯಾಯರಾಗಿ ನೇಮಕಗೊಂಡರು. ಆಗಿನ ಕಾಲದಲ್ಲಿ ವಿದ್ಯಾರ್ಥಿಗಳು ಕೊಡಗಿನ ಮೂಲೆ ಮೂಲೆಗಳಿಂದ ವಿದ್ಯೆ ಕಲಿಯಲು ಬರುತ್ತಿದ್ದರು. ಮಡಿಕೇರಿಯಲ್ಲಿ ದೊಡ್ಡದಾದ ಒಂದು ವಿದ್ಯಾರ್ಥಿ ನಿಲಯವಿತ್ತು. ಮಡಿಕೇರಿ ಪಟ್ಟಣದ ಸುತ್ತಮುತ್ತಲಿನ ಗ್ರಾಮಗಳಿಂದ ವಿದ್ಯಾರ್ಥಿಗಳು ಸುಮಾರು ಎಂಟು ಹತ್ತು ಕಿ.ಮೀ. ದೂರದಿಂದ ನಡೆದುಕೊಂಡು ಬರುತ್ತಿದ್ದರು. ಆ ಸಮಯದಲ್ಲಿ ಮಕ್ಕಳಿಗೆ ಕಟ್ಟುನಿಟ್ಟಿನ ವಿದ್ಯಾಭ್ಯಾಸವಿತ್ತು. ಬರುಬರುತ್ತಾ ಪಠ್ಯ ಕಾರ್ಯಕ್ರಮಗಳು ಬದಲಾದವು.


ಸುಮಾರು 1951ರ ವರೆಗೆ ಕೆಲವು ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಪ್ರಾರಂಭವಾದವು. ಇವುಗಳು ಜಿಲ್ಲಾ ಬೋರ್ಡಿನ ಅಧೀನದಲ್ಲಿ ನಡೆಯಲ್ಪಡುತ್ತಿದ್ದವು. ಆದರೆ ಇಡೀ ಜಿಲ್ಲೆಯಲ್ಲಿ ಕೇವಲ ಐದು ಸರ್ಕಾರಿ ಪ್ರೌಢಶಾಲೆಗಳಿದ್ದವು. ಈ ಶಾಲೆಗಳಿಗೆ ಸುತ್ತಮುತ್ತಲಿನ ಹಳ್ಳಿಗಳ ಮಕ್ಕಳು ಕಾಲು ನಡಿಗೆಯಿಂದ ಶಾಲೆಗಳಿಗೆ ಹಾಜರಾಗುತ್ತಿದ್ದರು. ಕಾರಣ ಬಸ್ ಸೌಕರ್ಯವಿರಲಿಲ್ಲ. ಹೀಗಾಗಿ ವಿದ್ಯೆ ಕಲಿಯುತ್ತಿದ್ದವರ ಸಂಖ್ಯೆ ಬಹಳ ವಿರಳವಾಗಿತ್ತು ಎಂದು ಹೇಳಬಹುದು. 1953 ರಲ್ಲಿ ಎಲ್ಲಾ ಶಾಲೆಗಳನ್ನು ಸರ್ಕಾರವೇ ವಹಿಸಿಕೊಂಡಿತು. ಆ ಸಮಯದಲ್ಲಿ ಕೊಡಗಿನಲ್ಲಿ ಶಿಸ್ತು ಬದ್ಧವಾದ ಶಿಕ್ಷಣವನ್ನು ನೀಡಲಾಗುತ್ತಿತ್ತು. ಶಾಲೆಗಳಲ್ಲಿ ತಪ್ಪಿತಸ್ಥ ವಿದ್ಯಾರ್ಥಿಗಳಿಗೆ ಕಠಿಣ ಶಿಕ್ಷೆ ಇತ್ತಾದರೂ ಪೋಷಕರು ಅದನ್ನು ಮೆಚ್ಚಿಕೊಳ್ಳುತ್ತಿದ್ದರು. ಹಾಗಾಗಿ ವಿದ್ಯಾರ್ಥಿಗಳಿಗೆ ಶಾಲೆ ಸರಸ್ವತಿ ದೇಗುಲ. ಅವರ ಶ್ರೇಯೋಭಿಲಾಷಿ ಎಂದು ನಂಬಿಕೆಯಿತ್ತು. ಇದರಿಂದಾಗಿ ಶಾಲೆಗಳ ಶೈಕ್ಷಣಿಕ ಮಟ್ಟವನ್ನು ಸಮಾಜ ಮೆಚ್ಚುವಂತಿತ್ತು.

ಇಂದಿನ ವಿದ್ಯಾಭ್ಯಾಸ

ಎಲ್ಲರಿಗೂ ತಿಳಿದಂತೆ ಮಕ್ಕಳ ಸಂಖ್ಯೆ ಹೆಚ್ಚಾಗಿರುತ್ತದೆ. ಪೋಷಕರಲ್ಲಿ ಮಕ್ಕಳಿಗೆ ವಿದ್ಯೆ ಕಲಿಸುವ ಬಯಕೆ. 1961ರಿಂದ ಪ್ರತಿಯೊಂದು ಮಗು 5ವರ್ಷ 10 ತಿಂಗಳಾದ ಕೂಡಲೆ ಕಡ್ಡಾಯವಾಗಿ ಶಾಲೆಗೆ ಹೋಗಬೇಕು. ಆದುದರಿಂದ ಪ್ರತಿ ಶಾಲೆಯ ಸುತ್ತಮುತ್ತಲಿನ ಸ್ಥಳಗಳಿಂದ ಮಕ್ಕಳು ಶಾಲೆಗೆ ಹಾಜರಾಗುತ್ತಿದ್ದಾರೆ. ಇತ್ತೀಚೆಗೆ ವಾಹನಗಳ ಸೌಕರ್ಯ ವಿರುವುದರಿಂದ ಸ್ವಲ್ಪ ದೂರದಿಂದ ಬರುವ ಮಕ್ಕಳಿಗೆ ಬಹಳ ಅನುಕೂಲವಾಗಿರುತ್ತದೆ. ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಪುಸ್ತಕಗಳು ಸರ್ಕಾರದಿಂದಲೇ ದೊರಕುತ್ತದೆ.

ಶಾಲೆಯಲ್ಲಿ ಮಧ್ಯಾಹ್ನ ಬಿಸಿಊಟವನ್ನು ಸರ್ಕಾರದವರೇ ಕೊಡುವ ಏರ್ಪಾಡನ್ನು ಮಾಡಿರುತ್ತಾರೆ. ಪ್ರೌಢಶಾಲಾ ವಿದ್ಯಾರ್ಥಿ , ವಿದ್ಯಾರ್ಥಿನಿಯರಿಗೆ ಸೈಕಲುಗಳನ್ನು ಉಚಿತವಾಗಿ ಸರ್ಕಾರದ ವತಿಯಿಂದ ಕೊಡಲಾಗುತ್ತದೆ. ಇದು ಅಲ್ಲದೆ ಹಲವಾರು ಶಾಲೆಗಳಲ್ಲಿ ರೇಡಿಯೋ ಕಾರ್ಯಕ್ರಮಗಳನ್ನು ಕೇಳುವ ಅವಕಾಶವಿದೆ. ಇತ್ತೀಚೆಗೆ ಪಠ್ಯೇತರ ಚಟುವಟಿಕೆಗಳಿಗೆ ಅವಕಾಶವಿದೆ. ಎಲ್ಲಾ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಆಡಲು ಆಟೋಟಗಳ ಸಾಮಾಗ್ರಿಗಳು ಹೆಚ್ಚು ಹೆಚ್ಚಾಗಿವೆ. ಆಟದ ಮೂಲಕ ಪಾಠ ಎಂಬಂತೆ ಶಿಕ್ಷಣವು ಈ ಹಂತದಲ್ಲಿ ನೀಡಲಾಗುತ್ತದೆ.

ಶಿಕ್ಷಣ-ಸಂಸ್ಕಾರ



-ಬೈತಡ್ಕ ಆರ್. ಕುಂಜಪ್ಪ,
ನಿವೃತ್ತ ಪ್ರಾಚಾರ್ಯ, ಮಡಿಕೇರಿ

'ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು, ವಿದ್ಯೆಯಿಲ್ಲದವನ ಬರಿಮುಖವು ಹಾಳೂರ ಹದ್ದಿನಂತಿಕ್ಕು' ಎನ್ನುವ ಸರ್ವಜ್ಞ ಕವಿ ಮಾನವನಿಗೆ ವಿದ್ಯೆಯ ಮಹತ್ವವನ್ನು ಎತ್ತಿ ತೋರಿಸುತ್ತಾನೆ. ವಿದ್ಯೆಯಿಲ್ಲದ ಮನುಷ್ಯನನ್ನು ಹಾಳು ಬಿದ್ದ ಊರಿನಲ್ಲಿರುವ ಹದ್ದಿಗೆ ಹೋಲಿಸಿ ಅವನ ಹೀನ ಸ್ಥಿತಿಯನ್ನು ತೋರಿಸುತ್ತಾನೆ. ಒಂದು ತುಂಡು ಕಲ್ಲಿಗೆ ಯಾವ ಮಹತ್ವವೂ ಇಲ್ಲ. ಅದೇ ಕಲ್ಲನ್ನು ಶಿಲ್ಪಿಯೊಬ್ಬ ದೇವರ ವಿಗ್ರಹವನ್ನಾಗಿ ಮಾರ್ಪಡಿಸಿದಾಗ ದೇವಸ್ಥಾನದಲ್ಲಿ ಸ್ಥಾಪನೆಗೆ ಯೋಗ್ಯವಾಗುತ್ತದೆ. ಅದಕ್ಕೆ ಪೂಜೆ ಸಲ್ಲುತ್ತದೆ. ನೂರಾರು ಭಕ್ತರು ಅದರ ಮುಂದೆ ಕೈ ಮುಗಿದು ತಲೆಬಾಗುತ್ತಾರೆ. ಅದೇ ರೀತಿ ಮಗು ಕೂಡ ಕಲ್ಲಿನ ತುಂಡಿನಂತೆ ಕಚ್ಚಾವಸ್ತು. ಉತ್ತಮ ಶಿಕ್ಷಣ ನೀಡಿ ಸಂಸ್ಕರಿಸಿದಾಗ ಮಾತ್ರ ಅವನು ಮುಂದೆ ಮಾದರಿ ಮನುಷ್ಯನಾಗುತ್ತಾನೆ. ವಿವಿಧ ಶಿಕ್ಷಣ ಸಂಸ್ಥೆಗಳೇ ಮಕ್ಕಳ ಸಂಸ್ಕರಣ ಘಟಕಗಳೆಂದು ತಿಳಿಯಬೇಕು.

ಮಗುವಿಗೆ ಉತ್ತಮ ಶಿಕ್ಷಣ ನೀಡಿ ಸಂಸ್ಕಾರ ತುಂಬುವುದರಲ್ಲಿ ಮಾತಾ-ಪಿತೃಗಳು ಮತ್ತು ಗುರು ಹಿರಿಯರು ಮಹತ್ವದ ಪಾತ್ರ ವಹಿಸಬೇಕಾಗುತ್ತದೆ. ಸ್ವತಃ ಮಗುವಿನ ಪ್ರಯತ್ನವೂ ಬೇಕು. 'ವಿದ್ಯೆ ಕಲಿಸಿದ ತಂದೆ, ಬುದ್ಧಿ ಹೇಳದ ಗುರುವು, ಬಿದ್ದಿರಲು ಬಂದು ನೋಡದ ತಾಯಿ ಶುದ್ಧವೈರಿಗಳು' ಎಂದು ಸರ್ವಜ್ಞ ಹೇಳುತ್ತಾನೆ. ಮಕ್ಕಳ ಶಿಕ್ಷಣದ ಕಡೆಗೆ ಗಮನ ಹರಿಸದೆ ತಾತ್ಸಾರ ಮಾಡುವ ಮಾತಾಪಿತೃಗಳು ಶತ್ರುಗಳಿಗೆ ಸಮಾನರು. ಮಗುವಿಗೆ ಮನೆಯೇ ಮೊದಲ ಪಾಠಶಾಲೆ, ತಾಯಿಯೇ ಮೊದಲ ಗುರು. ಉತ್ತಮ ಸಂಸ್ಕಾರ ತುಂಬಿ, ಅಪೂರ್ವ ವ್ಯಕ್ತಿತ್ವ ನಿರ್ಮಾಣ ಮಾಡಿ ಮಗುವಿನ ಭವಿಷ್ಯವನ್ನು ಉಜ್ವಲಗೊಳಿಸುವುದರಲ್ಲಿ ತಾಯಿಯ ಪಾತ್ರವನ್ನು ಕಾಣಬೇಕಾದರೆ ಛತ್ರಪತಿ ಶಿವಾಜಿಯ ಚರಿತ್ರೆಯನ್ನು ಓದಬೇಕು. ಅವನ ತಾಯಿ ಜೀಜಾಬಾಯಿ ಶಿವಾಜಿ ಮಗುವಾಗಿದ್ದಾಗ ಅವಳು ರಾಮಾಯಣ ಮತ್ತು ಮಹಾಭಾರತಗಳಲ್ಲಿ ಬರುವ ಮಹಾಪುರುಷರ, ಶೂರರ, ಧೀರರ ಕಥೆಗಳನ್ನು ಮಗನಿಗೆ ಹೇಳುತ್ತಿದ್ದಳು. ಇದು ಶಿವಾಜಿಯ ಮನಸ್ಸಿನ ಮೇಲೆ ಗಾಢವಾದ ಪ್ರಭಾವ ಬೀರಿತು. ಮುಂದೆ ಅವನು ಹೆಜ್ಜೆ ಹೆಜ್ಜೆಗೂ ಧೈರ್ಯ ಸಾಹಸಗಳನ್ನು ಪ್ರದರ್ಶಿಸಿ ಮಹಾರಾಜನಾಗಿ ಮೆರೆದ. ಎಳೆಯ ಪ್ರಾಯದಲ್ಲಿ ಮನಸ್ಸಿನ ಮೇಲಾಗುವ ಪ್ರಭಾವಗಳು ಆಳವಾಗಿ ಬೇರೂರಿ ಅವನ ವ್ಯಕ್ತಿತ್ವವನ್ನು ನಿರ್ಧರಿಸುತ್ತದೆ ಎಂದು ಸುಮಾರು 2000 ವರ್ಷಗಳ ಹಿಂದೆಯೇ ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲ್ ಹೇಳಿದ್ದಾನೆ. 'ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ'? ಎಂಬ ಕನ್ನಡದ ನುಡಿಗಟ್ಟು ಕೂಡ ಇದೇ ಅರ್ಥವನ್ನು ಸೂಚಿಸುತ್ತದೆ.

ಆದರೆ ಇಂದು ಪರಿಸ್ಥಿತಿ ಬದಲಾಗಿದೆ. ಮನೆಯೇ ಮೊದಲ ಪಾಠಶಾಲೆಯಾಗಿಲ್ಲ. ತಾಯಿಯೇ ಮೊದಲ ಗುರುವೂ ಆಗಿಲ್ಲ. ಅಂಬೆಗಾಲಿಕ್ಕುವಾಗಲೇ ಮಗುವನ್ನು ಅಂಗನವಾಡಿ ಗೋ, ಶಿಶು ವಿಹಾರಕೋ ಅಥವಾ'ಬೇಬಿ ಸಿಟ್ಟಿಂಗ್' ಗೋ ಸೇರಿಸಲಾಗುತ್ತದೆ. ಸಾಕಷ್ಟು ಸಮಯ ಮಗು ತಾಯಿಯಿಂದ ದೂರ ಉಳಿಯುತ್ತದೆ. ಅದರ ಮನಸ್ಸಿನಲ್ಲಿ ಅನಾಥ ಪ್ರಜ್ಞೆ ಮೂಡುತ್ತದೆ. ಈಗಿನ ಸಣ್ಣ ಕುಟುಂಬಗಳು ಹುಟ್ಟಿಕೊಳ್ಳುವ ಮೊದಲು ಅವಿಭಕ್ತ ಕುಟುಂಬಳಿದ್ದವು. ಆಗ ಮಗುವಿಗೆ ಮನೆಯಲ್ಲಿ ಒಳ್ಳೆಯ ಪರಿಸರ ಇರುತ್ತಿತ್ತು. ಅಜ್ಜ, ಅಜ್ಜಿ, ಅಪ್ಪ, ಅಮ್ಮ,

ಚಿಕ್ಕಪ್ಪ, ದೊಡ್ಡಪ್ಪ , ಅಕ್ಕ ಅಣ್ಣ ಎಲ್ಲರೂ ಒಟ್ಟಿಗೇ ಇರುತ್ತಿದ್ದರು. ಸಂಜೆಯಾದ ಕೂಡಲೇ ಕೈಕಾಲು ತೊಳೆದುಕೊಂಡು ದೇವರಿಗೆ ಪ್ರಾರ್ಥನೆ ಸಲ್ಲಿಸಲು ಅಥವಾ ಭಜನೆ ಮಾಡಲು ಹಿರಿಯರು ಮಕ್ಕಳಿಗೆ ಹೇಳುತ್ತಿದ್ದರು. ಮನೆಗೆ ತಡವಾಗಿ ಬರುವ ಮಕ್ಕಳನ್ನು ಗದರುತ್ತಿದ್ದರು. ತಪ್ಪು ಮಾಡಿದಾಗ ಸಣ್ಣ ಪುಟ್ಟ ಶಿಕ್ಷೆ ನೀಡಿ ಸರಿದಾರಿಗೆ ತರುತ್ತಿದ್ದರು. ಹಿರಿಯರ ಮೇಲೆ ಮಕ್ಕಳ ಮನಸ್ಸಿನಲ್ಲಿ ಭಯ ಭಕ್ತಿ ಮೂಡುತ್ತಿತ್ತು. ಅಜ್ಜ, ಅಜ್ಜಿ ಮಕ್ಕಳಿಗೆ ಮಗ್ಗಿ ಹೇಳಿಕೊಡುವುದೋ ಅಥವಾ ಮಗ್ಗಿ ಬಾಯಿಪಾಠ ಹೇಳಿಸುವುದೊ ದಿನನಿತ್ಯ ನಡೆಯುತ್ತಿತ್ತು. ನೀತಿ ಕಥೆಗಳನ್ನು ಹೇಳುತ್ತಿದ್ದರು. ಒಗಟುಗಳನ್ನು ಹೇಳಿ ಮಕ್ಕಳ ಮಿದುಳಿಗೆ ಕಸರತ್ತು ಕೊಡುತ್ತಿದ್ದರು. ಮನೆತುಂಬ ಮಕ್ಕಳಿರುತ್ತಿದ್ದ ಕಾರಣ ಮಕ್ಕಳು ಒಳ್ಳೆಯ ಸಮಾಜಿಕ ಒಡನಾಟ ಬೆಳೆಸಿಕೊಳ್ಳುತ್ತಿದ್ದರು. ಹಿರಿಯರ ಕಿರಿಯರ ಮಧ್ಯೆ ಅನ್ಯೋನ್ಯ ಪ್ರೀತಿ ಬೆಳೆದು ನಿಲ್ಲುತ್ತಿತ್ತು.

ಈಗ ಬಹಳಷ್ಟು ಕುಟುಂಬಗಳು ಸಣ್ಣ ಕುಟುಂಬಗಳು. ಅಪ್ಪ, ಅಮ್ಮ, ಒಂದೋ ಎರಡೋ ಮಕ್ಕಳಿಗೆ ಕುಟುಂಬಗಳು ಸೀಮಿತ. ಹಿರಿಯರು ಬೇರೆಲ್ಲೋ ಇರುತ್ತಾರೆ. ಅಪ್ಪ ಅಮ್ಮ ಇಬ್ಬರೂ ಬೆಳಿಗ್ಗೆ ಮನೆಯಿಂದ ಹೊರಟು ದಿನವಿಡಿ ಹೊರಗಡೆ ದುಡಿದು ಸಂಜೆಯೋ, ರಾತ್ರಿಯೋ ಮನೆಸೇರುವ ಪರಿಸ್ಥಿತಿಯೇ ಹೆಚ್ಚು. ಇದರಿಂದ ಒಬ್ಬನೇ ಮಗನಿದ್ದರೂ ಅವನ ಕಡೆ ಸರಿಯಾಗಿ ನಿಗಾ ಇಡಲು ತಂದೆ ತಾಯಿಗೆ ಕಷ್ಟವಾಗುತ್ತದೆ. ಇದರಿಂದಾಗಿ ಮಗುವಿನ ವ್ಯಕ್ತಿತ್ವ ವಿಕಾಸಕ್ಕೆ ಅಡ್ಡಿಯಾಗುತ್ತದೆ. ಮಗುವಿನಲ್ಲಿ ಒಳ್ಳೆಯ ಸಂಸ್ಕಾರ ತುಂಬಲು ತಂದೆ ತಾಯಿಯರಿಗೆ ಕಷ್ಟವಾಗುತ್ತದೆ. ಈ ಕೆಲಸವನ್ನು ಹೊರಗಡೆ ಬೇರೆ ಯಾರೋ ಮಾಡುವುದರಿಂದ ಅದು ಸಮರ್ಪಕವಾಗಿ ನಡೆಯುವುದಿಲ್ಲ. ಮುಂದೆ ಮಗುವಿನ ನಡತೆಯಲ್ಲಿ ಅನೇಕ ಲೋಪಗಳು ಕಂಡು ಬರಬಹುದು.

ಮಗುವಿನ ಶಿಕ್ಷಣದಲ್ಲಿ ಗುರುವಿನ ಪಾತ್ರ ಹಿರಿದು. 'ಗುರು, ಬ್ರಹ್ಮ ಗುರು ವಿಷ್ಣು, ಗುರುದೇವೋ ಮಹೇಶ್ವರ, ಗುರು ಸಾಕ್ಷಾತ್ ಪರಬ್ರಹ್ಮ, ಗುರುವು ಜ್ಞಾನಿಯೂ ಸದಾಚಾರಿಯೂ ಆಗಿರಬೇಕು. ಫಲಾಪೇಕ್ಷೆಯಿಲ್ಲದೆ ಶಿಷ್ಯರಿಗೆ ವಿದ್ಯಾದಾನ ಮಾಡುವವನಾಗಿರಬೇಕು. ಶಿಷ್ಯವನ್ನು ತನಗಿಂತಲೂ ಮೇಲಿನ ಸ್ಥಾನಕ್ಕೇರಿಸುವ ಉದ್ದೇಶವನ್ನು ಉತ್ತಮ ಗುರುವು ಹೊಂದಿರುತ್ತಾನೆ. ಗುರು ಶಿಷ್ಯರ ಮಧ್ಯೆ ಮಧುರ ಬಾಂಧವ್ಯವಿರಬೇಕೆಂದು ದಾರ್ಶನಿಕರಾದ ಡಾ. ಸರ್ವಪಲ್ಲಿ ರಾಧಾಕೃಷ್ಣರು ಹೇಳುತ್ತಾರೆ. ಹೇಳಬಲ್ಲಡೆ ಗುರುವು, ಕೇಳಬಲ್ಲಡೆ ಶಿಷ್ಯ, ಹೇಳಲೂ ಕೇಳಲರಿಯದ ಗುರುಶಿಷ್ಯರ ಮೇಳವೆಂತಿಕ್ಕು. ಎನ್ನುತ್ತಾನೆ ಸರ್ವಜ್ಞ. ತನ್ನಲ್ಲಿರುವ ಜ್ಞಾನವನ್ನು ಶಿಷ್ಯರಿಗೆ ಬೋಧಿಸಲು ಗುರುವಿಗೆ ತಿಳಿದಿರಬೇಕು. ಗುರುವು ಹೇಳಿದ್ದನ್ನು ಅರ್ಥಮಾಡಿಕೊಳ್ಳಲು ಶಿಷ್ಯರಿಗೆ ತಿಳಿದಿರಬೇಕು. ಆಗ ಮಾತ್ರ ಗುರು ಉತ್ತಮ ಶಿಕ್ಷಣ ನೀಡಬಲ್ಲ. ಶಿಷ್ಯ ಉತ್ತಮ ಶಿಕ್ಷಣ ಸಂಸ್ಕಾರ ಪಡೆಯಬಲ್ಲ.

ಹಿಂದಿನ ಕಾಲದಲ್ಲಿ ಗುರುಗಳು ಶಿಷ್ಯರನ್ನು ತಮ್ಮ ಗುರುಕುಲಗಳಲ್ಲಿ ನಿಲ್ಲಿಸಿಕೊಂಡು ಶಿಕ್ಷಣ ನೀಡುತ್ತಿದ್ದರು. ಅವರಿಂದ ಗೃಹಸ್ಥಾಶ್ರಮದ ಕೆಲಸಗಳನ್ನು ಮಾಡಿಸುತ್ತಿದ್ದರು. ಇದರಿಂದ ವಿದ್ಯಾರ್ಥಿಗಳು ಜ್ಞಾನವನ್ನು ಪಡೆಯುವುದರ ಜೊತೆಗೆ ಬದುಕುವ ಕಲೆಯನ್ನು ಮೈಗೂಡಿಸಿಕೊಳ್ಳುತ್ತಿದ್ದರು. ವಿದ್ಯಾಭ್ಯಾಸ ಪೂರ್ಣಗೊಂಡ ಮೇಲೆ ಮಾತ್ರ ಮನೆಗೆ ಹಿಂದಿರುಗಲು ಅವಕಾಶವಿತ್ತು. ಇದರಿಂದ ಮಗುವಿನ ವ್ಯಕ್ತಿತ್ವವಿಕಸನ ಹೆಚ್ಚು ಕಡಿಮೆ ಪೂರ್ಣವಾಗಿರುತ್ತಿತ್ತು.

ಈಗ ಕಾಲ ಬದಲಾಗಿದೆ. ಶಿಕ್ಷಣದ ಕ್ರಮಗಳೂ ಬದಲಾಗಿವೆ. ಹಿಂದಿನ ಗುರುಕುಲದ ಕ್ರಮಗಳಿಗೂ, ಈಗಿನ ಶಿಕ್ಷಣ ಸಂಸ್ಥೆಗಳು ಅನುಸರಿಸುತ್ತಿರುವ ಕ್ರಮಗಳಿಗೂ ತುಂಬ ವ್ಯತ್ಯಾಸವಿದೆ. ಇಂದು ಉಪಾಧ್ಯಾಯ ವೃತ್ತಿ ಒಂದು ಕಸುಬು. ಅವರ ಸಂಬಳ ಸವಲತ್ತುಗಳಿಗೇ ಹೆಚ್ಚು ಮಹತ್ವ. ವಿದ್ಯಾರ್ಥಿಗಳೂ ಅಷ್ಟೆ,

ಜ್ಞಾನಾರ್ಜನೆಯ ಕಡೆಗೆ ಗಮನ ಕಡಿಮೆ. ವಿದ್ಯಾರ್ಥಿಯೆಂದರೆ ಯಾರ ಹಿಡಿತದಲ್ಲೂ ಇಲ್ಲದವನು ಎನ್ನುವಂತಾಗಿದೆ. ಈಗ ಅಲ್ಲಿ ಇಲ್ಲಿ ಮತ್ತೆ ತಲೆಯೆತ್ತುತ್ತಿರುವ ಗುರುಕುಲ ಶಿಕ್ಷಣ ಪದ್ಧತಿ ನಿರಾಶೆಯ ಕಾರ್ಮೋಡಗಳ ಮಧ್ಯೆ ಕಾಣುವ ಬೆಳ್ಳಿ ಗೆರೆಗಳು.


ತನ್ನ ಶಿಕ್ಷಣದಲ್ಲಿ ಮಗುವು ಸ್ವತಃ ಪ್ರಮುಖ ಪ್ರಾತದಾರಿ. ವಿದ್ಯಾರ್ಥಿ ಬ್ರಹ್ಮಚಾರಿಯೂ, ಕುತೂಹಲ ಉಳ್ಳವನೂ, ತರ್ಕಬುದ್ಧಿಯವನೂ, ಹಠವಾದಿಯೂ, ಕಷ್ಟ ಸಹಿಷ್ಣುವೂ ಆಗಿರಬೇಕು. ಸ್ವಪ್ರಯತ್ನವಿಲ್ಲದೆ ಜ್ಞಾನಾರ್ಜನೆ ಕಷ್ಟಸಾಧ್ಯ. ಮಾತಾ-ಪಿತೃಗಳ, ಗುರುಹಿರಿಯರ ಪ್ರಯತ್ನಗಳು ಫಲಕಾರಿಯಾಗಬೇಕಾದರೆ ವಿದ್ಯಾರ್ಥಿ ಅವರೊಂದಿಗೆ ಸಹಕರಿಸಿ ಕೈ ಜೋಡಿಸಬೇಕು. ಅವನು ನಿರಂತರವಾಗಿ ಶಿಸ್ತುಬದ್ಧ ಪ್ರಯತ್ನ ಮಾಡುತ್ತಿರಬೇಕು, ಊಟ, ನಿದ್ರೆಗಳಂತ ವಿಷಯಗಳನ್ನು ಹಿಡಿತದಲ್ಲಿಟ್ಟು ಕೊಳ್ಳುವ ಪ್ರಯತ್ನ ಮಾಡಬೇಕು. ಸೋಮಾರಿತನ, ಸ್ವೇಚ್ಛಾಚಾರ ಸಲ್ಲದು. ತಪಸ್ವಿಗಳ ಗುಣಗಳನ್ನು ಮೈಗೂಡಿಸಿಕೊಂಡವನು ಮಾತ್ರ ಶಿಕ್ಷಣ ಪಡೆದುಕೊಳ್ಳುವುದರಲ್ಲಿ ಅಪೂರ್ವ ಸಾಧನೆ ಮಾಡಬಲ್ಲನೆಂಬುದು ಅನುಭವ ಸಿದ್ಧವಾಗಿದೆ.

ಆರೋಗ್ಯವೇ ಭಾಗ್ಯ ಆರೋಗ್ಯ ಕೆಟ್ಟು ಹೋದರೆ ಜೀವನದಲ್ಲಿ ಎಲ್ಲವೂ ಅರ್ಥಹೀನವಾಗಬಹುದು ಮಕ್ಕಳ ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ತೀವ್ರ ನಿಗಾ ಇಡಬೇಕು. ಉತ್ತಮ ದೇಹದಲ್ಲಿ ಉತ್ತಮ ಮನಸ್ಸು ಎಂಬ ಆಂಗ್ಲ ನುಡಿಗಟ್ಟು ದೇಹಕ್ಕೂ ಮನಸ್ಸಿಗೂ ಇರುವ ಅನ್ಯೋನ್ಯ ಸಂಬಂಧವನ್ನು ಸೂಚಿಸುತ್ತದೆ. ದೈಹಿಕ ಮತ್ತು ಮಾನಸಿಕ ಆರೋಗ್ಯಗಳ ಸಮತೋಲನ ಸುಖ ಜೀವನದ ತಳಹದಿ. ಆಟ, ಓಟ, ವ್ಯಾಯಾಮಗಳು ದೈಹಿಕ ಆರೋಗ್ಯಕ್ಕೆ ಮುಖ್ಯ. ಶಾಲೆಯಲ್ಲಿ ದೈಹಿಕ ಶಿಕ್ಷಕರು ಕಲಿಸಿಕೊಡುವ ವ್ಯಾಯಾಮಗಳನ್ನು ಮಕ್ಕಳು ಮನೆಯಲ್ಲಿ ತಪ್ಪದೆ ಮಾಡುವಂತೆ ನೋಡಿಕೊಳ್ಳಬೇಕು. ದೈಹಿಕ ಆರೋಗ್ಯವರ್ಧನೆಗೆ ಅನೇಕ ವೈಜ್ಞಾನಿಕ ವಿಧಾನಗಳನ್ನು ಇಂದು ನಾವು ಕಾಣಬಹುದು. ಅವುಗಳನ್ನು ಬಳಸುವಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕು. ಆಹಾರ ದೈಹಿಕ ಮತ್ತು ಮಾನಸಿಕ ಆರೋಗ್ಯಗಳೆರಡಕ್ಕೂ ಮುಖ್ಯ.ಆಧುನಿಕ ಕೃತಕ ಆಹಾರಗಳಿಂದ ಮಕ್ಕಳನ್ನು ಸಾಧ್ಯವಾದಷ್ಟು ದೂರ ವಿಡುವುದು ಲೇಸು. ಸತ್ವಭರಿತ ಆಹಾರ ಸೇವನೆಯ ಅಭ್ಯಾಸ ಮಾಡಿಸಬೇಕು. ಹಸಿದಾಗ, ಹಿತವಾದುದನ್ನು ಮಿತವಾಗಿ ತಿನ್ನಬೇಕು ಎಂಬುದು ಹಿರಿಯರ ಮಾತು. ಹೊಟ್ಟೆ ಬಾಕನಂತೆ ತಿನ್ನುತ್ತಲೇ ಇರಬಾರದು. ಸಿಕ್ಕಿಸಿಕ್ಕದ್ದನ್ನೆಲ್ಲ ತಿನ್ನದೆ ಒಳ್ಳೆಯದನ್ನು ಮಾತ್ರ ತಿನ್ನಬೇಕು. ಆಹಾರ ಸೇವನೆಯಲ್ಲಿ ಮಿತಿಯಿರಬೇಕು. ಇದೇ ಉತ್ತಮ ಆರೋಗ್ಯದ ಗುಟ್ಟು. ಸಂಗೀತ, ನೃತ್ಯಗಳಂತಹ ಲಲಿತಕಲೆಗಳು ಮನಸ್ಸನ್ನು ಶಾಂತಗೊಳಿಸಿ ನೆಮ್ಮದಿಯಲ್ಲಿಡುತ್ತವೆ. ಆದುದರಿಂದ ಮಕ್ಕಳಿಗೆ ಲಲಿತಕಲೆಗಳಲ್ಲಿ ತರಬೇತಿಯನ್ನು ಕೊಟ್ಟರೆ ಉತ್ತಮ.

ಒಳ್ಳೆಯ ಪ್ರಜೆಗಳು ಒಂದು ದೇಶದ ಆಸ್ತಿ. ಒಳ್ಳೆಯ ಶಿಕ್ಷಣದಿಂದ ಒಳ್ಳೆಯ ಸಂಸ್ಕಾರ. ಒಳ್ಳೆಯ ಸಂಸ್ಕಾರದಿಂದ ಒಳ್ಳೆಯ ಪ್ರಜೆಗಳು. ಸುಖ ಜೀವನವು ಮಾನವ ಜೀವನದ ಗುರಿ. ಈ ಸುಖ ಜೀವನವು ಒಳ್ಳೆಯ ಸಮಾಜದಲ್ಲಿ ಮಾತ್ರ ಸಾಧ್ಯ. ನಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣ ಕೊಡೋಣ. ಅವರಲ್ಲಿ ಒಳ್ಳೆಯ ಸಂಸ್ಕಾರ ತುಂಬೋಣ. ಗಾಂಧೀಜಿಯವರ ರಾಮರಾಜ್ಯದ ಕನಸನ್ನು ನನಸಾಗಿಸೋಣ.

◆◆◆◆◆

ವರ್ಣರಂಜಿತ ಬದುಕಿನ ಕೋ. ಸ. ಕಾರ್ಯಪ್ಪ



- ಅಮೆ ಕೆ. ಪಾಲಾಕ್ಷ


ಮಡಿಕೇರಿ

ಗಾಢ ನಿದ್ರೆಯಲ್ಲಿರುವವನಿಗೆ ಬಂಡೆಯೊಂದುರುಳಿದರೆ ಸದ್ದು ಕೇಳಿಸದು. ತೆಂಗಿನ ಮರವೊಂದುರುಳಿದರೇನಂತೆ ಎನ್ನುವಂತಿಲ್ಲ. ಅದು ಕಲ್ಪ ವೃಕ್ಷ. ಕೊಡಗು ಹಾಗೂ ದಕ್ಷಿಣ ಕನ್ನಡ ಗೌಡ ಜನಾಂಗದಲ್ಲಿ -ಜನಾಂಗದ ಪರಂಪರೆ, ಅಸ್ತಿತ್ವ,ಉಳಿವು ಈ ದಿಸೆಯಲ್ಲಿ ಕೋ.ಸ. ಕಾರ್ಯಪ್ಪನವರ ಪಾತ್ರ ಕಲ್ಪವೃಕ್ಷಕ್ಕಿಂತ ಮಿಗಿಲು ಎಂದರೆ ಖಂಡಿತಾ ಅತಿಶಯೋಕ್ತಿಯಲ್ಲ. ಇಂತಹ ಒಂದು ಮಹಾ ಚೇತನ ಚಿರ ನಿದ್ರೆಗೆ ತೆರಳಿದ್ದು ಜನಾಂಗದ ಬಹುಪಾಲು ಜನರಿಗೆ ತಿಳಿದೇ ಇಲ್ಲವೆಂಬುದು ದುರಂತ. ಆದರೂ ಅದು ಸತ್ಯ. ಇಂತಹ ಮೇರು ವ್ಯಕ್ತಿಯೊಬ್ಬರ ಪರಿಚಯವನ್ನು ಸಂಕ್ಷಿಪ್ತವಾಗಿ ಸಮಾಜದ ಮುಂದಿಡಲು ದೊರೆತ ಅವಕಾಶವನ್ನು ಸೌಭಾಗ್ಯ ಎಂದುಕೊಳ್ಳುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಒಂದು ಕಾಲದಲ್ಲಿ ಗೌಡ ಜನಾಂಗ ತೀವ್ರ ಅವಗಣನೆಗೆ ಒಳಗಾಗಿತ್ತು. ಪ್ರಬಲ ಕೋಮುಗಳ ಮಧ್ಯೆ ಪೈಪೋಟಿ ನೀಡುವುದು ದುಸ್ಸಾಹಸವಾಗಿದ್ದ ಕಾಲ. ಸ್ವತಃ ಕೋ.ಸ. ಕಾರ್ಯಪ್ಪನವರೇ ಹೇಳಿದ ಅವರ ಅನುಭವದ ಒಂದು ಘಟನೆ ಹೀಗಿದೆ. ಸ್ವಾತಂತ್ರ್ಯಾನಂತರದ ಸುಮಾರು 1965-70ರ ಅವಧಿ ಇರಬಹುದು. ಕೊಡಗು ರಾಜ್ಯ ದಲ್ಲಿ ವೈಸರಾಯ್ ಆಗಿದ್ದು, ನಿವೃತ್ತರಾಗಿದ್ದ ಓರ್ವ ಆಂಗ್ಲ ವ್ಯಕ್ತಿಯನ್ನು ಫೀಲ್ಡ್ ಮಾರ್ಷಲ್ ಕಾರ್ಯಪ್ಪನವರು (ಆಗ ಇನ್ನೂ ಜನರಲ್ ಆಗಿದ್ದರು) ತಮ್ಮ ಮನೆಗೆ ಸಮಾರಂಭವೊಂದಕ್ಕೆ ಆಹ್ವಾನಿಸಿದ್ದರು. ಸ್ಥಳೀಯ ಹಲವಾರು ಮಂದಿ ಗಣ್ಯರನ್ನು ಆಹ್ವಾನಿಸಲಾಗಿತ್ತು. ಆದರೆ ಗೌಡ ಜನಾಂಗದ ಯಾರಿಗೂ ಆಮಂತ್ರಣವಿರಲಿಲ್ಲ. ವಿಷಯ ತಿಳಿದ ಕೋ.ಸ. ಕಾರ್ಯಪ್ಪನವರು ಸಮ್ಮನಿರುವ ಜಾಯಮಾನದವರಲ್ಲ. ತಕ್ಷಣ ಫೀಲ್ಡ್ ಮಾರ್ಷಲ್ ಅವರನ್ನು ಭೇಟಿ ಮಾಡಿದರು. ಸಮಾರಂಭದಲ್ಲಿ ಭಾಗವಹಿಸಲು ತಾವು ಕೂಡ ಉತ್ಸುಕರಾಗಿದ್ದು, ತಮ್ಮನ್ನು ಆಹ್ವಾನಿಸುವಂತೆ ಕೋರಿಕೊಂಡರು. ಫೀಲ್ಡ್ ಮಾರ್ಷಲ್ ಅವರು ಸಂತೋಷದಿಂದ ಒಪ್ಪಿಗೆ ನೀಡಿದರು. ಕೋ.ಸ. ಕಾರ್ಯಪ್ಪನವರು ಗೌಡ ಜನಾಂಗದ ಪೋಷಾಕು ಧರಿಸಿ ಸಮಾರಂಭದಲ್ಲಿ ಪಾಲ್ಗೊಂಡರು. ಆ ಮೂಲಕ ನಿವೃತ್ತ ಆಂಗ್ಲ ವೈಸರಾಯಯ್ ಅವರಿಗೆ ಕೊಡಗು ಜಿಲ್ಲೆಯಲ್ಲಿ ಕೊಡಗು ಗೌಡ ಜನಾಂಗದ ಅಸ್ತಿತ್ವದ ಪರಿಚಯ ನೀಡುವ ಪ್ರಯತ್ನ ಮಾಡಿದರು.

ಮತ್ತೊಂದು ಘಟನೆಯಲ್ಲಿ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ನೌಕರಿಯಲ್ಲಿದ್ದ ವ್ಯಕ್ತಿಯೊಬ್ಬರಿಗೆ ವರ್ಗಾವಣೆ ಬೇಕಾಗಿತ್ತು. ಆಂಗ್ಲ ಪೊಲೀಸ್ ಉನ್ನತಾಧಿಕಾರಿಯನ್ನು ಎಷ್ಟು ಕೇಳಿಕೊಂಡರೂ ಪ್ರಯೋಜನವಾಗಿರಲಿಲ್ಲ. ವಿಷಯ ಕೋ.ಸ. ಕಾರ್ಯಪ್ಪ ನವರ ಗಮನಕ್ಕೂ ಬಂತು. ದೇಶ ಸ್ವಾತಂತ್ರ್ಯಗೊಳ್ಳಬೇಕಾದ ಸುವರ್ಣ ಕಾಲ. ಸ್ವಾತಂತ್ರ್ಯ ಹೋರಾಟಗಾರರಿಗೆ ತುಂಬು ಗೌರವ ದೊರೆಯುತ್ತಿದ್ದ ಪರ್ವ ಕಾಲ. ಚುರುಕು ಬುದ್ಧಿಯ ಕೋ.ಸ. ಕಾರ್ಯಪ್ಪನವರು ತಕ್ಷಣ ಕಾರ್ಯೋನ್ಮುಖರಾದರು. ಸ್ವಾತಂತ್ರ್ಯ ಹೋರಾಟಗಾರನ ಪೋಷಾಕು, ಬಿಳಿ ಬಣ್ಣದ ಖಾದಿ ಜುಬ್ಬ, ಸುರಾಲು, ಗಾಂಧಿ ಟೋಪಿ ಧರಿಸಿ ಪೊಲೀಸ್ ಉನ್ನತಾಧಿಕಾರಿಯ ಬಳಿಗೆ ತೆರಳಿದರು. ವರ್ಗಾವಣೆ ಬಯಸಿದ್ದ ವ್ಯಕ್ತಿಯ ಪರ ಶಿಫಾರಸು ಮಾಡಿದರು. ಬಯಸಿದ್ದ ವರ್ಗಾವಣೆಯೂ ಆಯಿತು.

ಗೌಡ ಸಮುದಾಯ ಕೂಡ ಕೊಡಗು ಜಿಲ್ಲೆಯಲ್ಲಿ ಒಂದು ಪ್ರಬಲ ಜನಾಂಗ ಎಂಬ ಸಿದ್ಧಾಂತವನ್ನು ಸಾಬೀತು ಪಡಿಸಲೇ ಬೇಕು ಎಂಬ ಛಲ ಕೋ.ಸ. ಕಾರ್ಯಪ್ಪನವರಿಗೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಜನಾಂಗದ ಪರವಾಗಿ ಲೇಖನಿಯೆಂಬ ಹರಿತವಾದ ಖಡ್ಗ ಝಳಪಿಸಿದ ಏಕೈಕ ವೀರ ಸೇನಾನಿ ಕೈಮಂದನ ಕಾರ್ಯಪ್ಪ .ಅಲಿಯಾಸ್ ಕೋಟೇರ ಸಣ್ಣಯ್ಯ ಕಾರ್ಯಪ್ಪ (ಕೋ.ಸ. ಕಾರ್ಯಪ್ಪ)



ಗೌಡ ಜನಾಂಗದ ಇತಿಹಾಸ ಪುರುಷ ಶ್ರೀ ಕೋ.ಸ. ಕಾರ್ಯಪ್ಪ ನವರು ತಮ್ಮ 40 ನೇ ವರ್ಷ ವಯಸ್ಸಿನಲ್ಲಿ

ಭಾಗಮಂಡಲ ಸಮೀಪದ ದೊಡ್ಡ ಪುಲಿಕೋಟು ಗ್ರಾಮದಲ್ಲಿ ಕೋ.ಸ. ಕಾರ್ಯಪ್ಪನವರು 6-9-1924ರಲ್ಲಿ ಜನ್ಮ ತಾಳಿದರು. ಕೋಟೇರ ಸಣ್ಣಯ್ಯ ಶ್ರೀಮತಿ ಪೊನ್ನವ್ವ ದಂಪತಿಯ ಪುತ್ರರಾದ ಕಾರ್ಯಪ್ಪನವರ ಮನೆಯಲ್ಲಿ ಬಡತನ ಕಿತ್ತು ತಿನ್ನುವಂತಿತ್ತು.

ಬಹಳ ತೀಕ್ಷ್ಣಮತಿಯಾದ ಕಾರ್ಯಪ್ಪನವರು ದೇಶ ಪ್ರೇಮ ಮೈಗೂಡಿಸಿಕೊಂಡವರು. ದ್ವಿತೀಯ ಮಹಾ ಯುದ್ಧದಲ್ಲಿ ಭಾರತೀಯ ಸೇನೆಯಲ್ಲಿ ಅಮೋಘ ಶೌರ್ಯ ಮೆರೆದಿದ್ದಾರೆ. ಪರಿಣಾಮವಾಗಿ ಇವರಿಗೆ ಶೀಘ್ರ ಬಡ್ತಿ ಕೂಡ ದೊರೆತಿದೆ. ಮಹಾಯುದ್ಧ ಮುಕ್ತಾಯಗೊಂಡ ನಂತರ ಸೇನೆಯಿಂದ ಇವರು ಸ್ವ - ಇಚ್ಛೆಯಿಂದ ಬಿಡುಗಡೆಗೊಂಡರು. ಅಲ್ಲಿಂದ ಸ್ವಲ್ಪ ಸಮಯದಲ್ಲಿ ಎಂದರೆ 1948ರಲ್ಲಿ ಕೊಡಗಿನಲ್ಲಿ ಪೊಲೀಸ್ ಇಲಾಖೆಗೆ ಸೇರ್ಪಡೆಗೊಂಡರು. ಕಾರ್ಯಪ್ಪನವರು ತಮ್ಮ 29ನೇ ವರ್ಷ ವಯಸ್ಸಿನಲ್ಲಿ 5-5-1953ರಲ್ಲಿ ಪಾರ್ವತಿ ಎಂಬ ವಧುವನ್ನು ವರಿಸಿದರು. ಕಾರ್ಯಪ್ಪ ದಂಪತಿಗಳು ತೀರಾ ಸಾತ್ವಿಕ ಬದುಕನ್ನು ಕಳೆದವರು. ಶಾಖಾಹಾರಿಗಳಾಗಿದ್ದರು. ಇವರಿಗೆ ವೇಣುಗೋಪಾಲ್ ಮತ್ತು ರಾಧಾವೇಣಿ ಎಂಬ ಇಬ್ಬರು ಮಕ್ಕಳು.

ಹರಿತ ಲೇಖನಿ ಹಿಡಿದ, ದೇಶಪ್ರೇಮ ಮೈಗೂಡಿಸಿಕೊಂಡ, ತಮ್ಮ ಜನಾಂಗದ ಬಗ್ಗೆ ತೀವ್ರ ಅನುಕಂಪ, ಕಾಳಜಿ ವಹಿಸಿದ್ದ ಕಾರ್ಯಪ್ಪನವರ ಬದುಕಿಗೂ ಅವರು ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸ್ ಇಲಾಖೆಯ ನೌಕರಿಗೂ ಯಾವುದೇ ರೀತಿಯ ಸಾಮ್ಯತೆ ಇರಲಿಲ್ಲ. ಸಿದ್ಧಾಂತದಲ್ಲಿ ಬದುಕಿಗೂ -ವೃತ್ತಿಗೂ ವಿರುದ್ಧ ದಿಕ್ಕಿನ ಸಂಬಂಧ. ಈ ಸ್ವಾಭಿಮಾನಿ ಹೋರಾಟಗಾರನ ವಿದ್ಯಾಭ್ಯಾಸ ಕೇವಲ 5ನೇ ತರಗತಿ ಎಂದರೆ ಎಂತಹವರು ಮೂಗಿನ ಮೇಳೆ ಬೆರಳಿಟ್ಟು ಹುಬ್ಬೇರಿಸಬೇಕಾಗುತ್ತದೆ. ಇವರು ಜನಾಂಗದ ಬಗ್ಗೆ ಹಲವಾರು ಲೇಖನಗಳನ್ನು ಬರೆದಿದ್ದಾರೆ, ಪ್ರಕಟಿಸಿದ್ದಾರೆ. ಸ್ಥಳೀಯ ಪತ್ರಿಕೆಗಳಲ್ಲಿ ಕೂಡ ಜನಾಂಗದ ಪರವಾದ ಇವರ ಹಲವಾರು ಪ್ರಬಂಧಗಳು ಪ್ರಕಟಗೊಂಡಿವೆ.

ಕಾರ್ಯಪ್ಪನವರು ಸರ್ಕಾರಿ ನೌಕರಾಗಿದ್ದ ಕಾರಣ ತಮ್ಮ ಲೇಖನಗಳನ್ನು ಹೆಚ್ಚಾಗಿ ತಮ್ಮ ಪುತ್ರ. ಕೋ.ಕಾ.

ವೇಣುಗೋಪಾಲ ಇವರ ಹೆಸರಿನಲ್ಲಿ ಬರೆಯುತ್ತಿದ್ದರು. "ಮಣ್ಣಲ್ಲಿ ಮಣ್ಣಾಗಿರುವ ಜನಾಂಗದ ಹಿರಿಮೆ"ಎಂಬ ಸಂಶೋಧನಾತ್ಮಕ ಲೇಖನವೊಂದನ್ನು ಬರೆದಿದ್ದಾರೆ. ಸ್ಥಳೀಯ ದಿನಪತ್ರಿಕೆ 'ಶಕ್ತಿ'ಯಲ್ಲಿ 1977ರ ಫೆಬ್ರವರಿ ತಿಂಗಳ ಸಂಚಿಕೆಯಲ್ಲಿ ನಾಲ್ಕು ಕಂತುಗಳಲ್ಲಿ ಕೋ. ಕಾ. ವೇಣುಗೋಪಾಲ ಅವರ ಹೆಸರಿನಲ್ಲಿ ಪ್ರಕಟಗೊಂಡಿವೆ. ತಲೆ ಬರಹವೇ ಹೇಳುವಂತೆ ಜನಾಂಗದ ಹಿರಿಮೆ ಬಿಡಿ ಬಿಡಿಯಾಗಿ ಈ ಲೇಖನದಲ್ಲಿ ವಿವರಿಸಲ್ಪಟ್ಟಿದೆ. ಹೀಗೆಯೇ ಇವರ ಇನ್ನೂ ಹಲವಾರು ಲೇಖನಗಳು ಜನಾಂಗದ ಯುವ ಪೀಳಿಗೆಯನ್ನು ಪ್ರಜ್ಞಾವಂತರನ್ನಾಗಿಸುವ ತುಡಿತದಿಂದ ಕೂಡಿವೆ.

ಇಷ್ಟೆಲ್ಲಾ ಮಾಡಿದರೂ ಸ್ವತಃ ಕಾರ್ಯಪ್ಪನವರಿಗೇ ತೃಪ್ತಿಯಿಲ್ಲ. ಜನಾಂಗ ಬಾಂಧವರು ಇನ್ನೂ ಎಚ್ಚೆತ್ತಿಲ್ಲ. ಜಾಗೃತರಾಗಿಲ್ಲ ಎಂಬ ಕೊರಗು ಕಡೆಯವರೆಗೂ ಅವರನ್ನು ಕಾಡುತ್ತಲೇ ಇತ್ತು. ಇದೇ ಕಾರಣಕ್ಕಾಗಿ ಇವರು ಜನಾಂಗ ಬಾಂಧವರ ಮನೆ ಮನೆಗೆ ತೆರಳಿ ಜನಾಂಗದ ಪರವಾಗಿ ಸ್ವತಃ ತಾವೇ ರಚಿಸಿದ ಲಾವಣಿಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಯಾವುದೇ ಮುಜುಗುರವಿಲ್ಲದೆ ಕುಣಿಯುತ್ತಿದ್ದರು-ನಲಿಯುತ್ತಿದ್ದರು. ಆ ಮೂಲಕ ಜನಾಂಗದ ಸ್ವಾಭಿಮಾನ ಪ್ರಜ್ಞೆಯನ್ನು ಬಡಿದೆಬ್ಬಿಸುವ ಕಾಯಕ ಮಾಡುತ್ತಿದ್ದರು.

ಗೌಡ ಜನಾಂಗದ ಹಿರಿಮೆ ಕೀರ್ತಿಯನ್ನು ಉತ್ತುಂಗಕ್ಕೇರಿಸೇಕೆಂಬ ಮಹತ್ವಾಕಾಂಕ್ಷೆ ಹೊಂದಿದ್ದ, ಧೀಮಂತ ವ್ಯಕ್ತಿತ್ವದ ಕೊ.ಸ. ಕಾರ್ಯಪ್ಪನವರ ಕಾರ್ಯವೈಖರಿಗೆ ಕೈಗನ್ನಡಿಯಾಗಬಲ್ಲ ವಿಚಾರವೊಂದನ್ನು ಅರುಹಲು ಮನಸ್ಸು ತುಡಿಯುತ್ತದೆ.

ಸ್ವಾತಂತ್ರ್ಯ ಹೋರಾಟಗಾರ 'ಹುತಾತ್ಮ' ಗುಡ್ಡೆಮನೆ ಅಪ್ಪಯ್ಯ ಗೌಡರ ಬಗ್ಗೆ ತಿಳಿಯದ ವ್ಯಕ್ತಿಇಂದು ಕೊಡಗಿನಲ್ಲಿಲ್ಲ. 31-10-1837ರಲ್ಲಿ ಹುತಾತ್ಮರಾಗಿ ಇಂದಿಗೆ 171 ವರ್ಷಗಳು ಗತಿಸಿವೆ. ಆದರೆ ಕೇವಲ 30ವರ್ಷಗಳಷ್ಟು ಹಿಂದಿನ ಗತ ಕಾಲವನ್ನು ಅವಲೋಕಿಸಿದರೆ, ಆಗ ಅಪ್ಪಯ್ಯ ಗೌಡರ ಬಗ್ಗೆ ಎಷ್ಟು ಮಂದಿಗೆ ತಿಳಿದಿತ್ತು? ಅವರಾಗಲೇ ಇತಿಹಾಸದ ಪುಟಗಳಲ್ಲಿ ಮರೆಯಾಗಿ ಹೋಗಿದ್ದರು. ಕೊ.ಸ. ಕಾರ್ಯಪ್ಪ ಅವರಂತಹ ಕೆಲವಾರು ಮಂದಿಗೆ ಮಾತ್ರ ವಿಚಾರ ತಿಳಿದಿತ್ತು ಎನ್ನುವುದು ಸೋಜಿಗ. ಭಾರತಾಂಬೆಯನ್ನು ಆಂಗ್ಲರಿಂದ ಬಂಧಮುಕ್ತಳನ್ನಾಗಿಸುವ ಸಂಗ್ರಾಮದಲ್ಲಿ ಅಪ್ಪಯ್ಯ ಗೌಡರನ್ನು ಮಡಿಕೇರಿ ಕೋಟೆಯ ಮುಂಭಾಗದಲ್ಲಿ ನೇಣುಗಂಬಕ್ಕೆ ಏರಿಸಲಾಯಿತು. ಅಪ್ಪಯ್ಯ ಗೌಡರು ಅಮರರಾದರು. ಕೊಡಗಿನ ಜನರು ಅನಾಥ ಭಾವನೆಯಿಂದ ಕಣ್ಣೀರ್ಗರೆದರು. ಆದರೆ ಕಾಲ ಗರ್ಭದಲ್ಲಿ ಎಲ್ಲವೂ ಮರೆಯಾಗುತ್ತದೆ.

ಆದರೆ ಈ ಹುತಾತ್ಮನ ವಿಚಾರ ಮರೆಯಾಗುವಂತಹುದಲ್ಲ. ಸೂರ್ಯ ಚಂದ್ರರಿರುವಷ್ಟು ಕಾಲವೂ ಕೊಡಗಿನ ಜನರ ಹೃದಯದಲ್ಲಿ ಅಪ್ಪಯ್ಯ ಗೌಡರು ಹಚ್ಚ ಹಸಿರಾಗಿರಬೇಕು ಎಂಬ ಸುದುದ್ದೇಶದಿಂದ ಸಮಾಜದ ಕಣ್ತೆರೆಸುವ ಕಾಯಕಕ್ಕೆ ಕೈ ಹಾಕಿದ ಪ್ರಮುಖರ ಪೈಕಿ ಕೋ.ಸ. ಕಾರ್ಯಪ್ಪ ಅಗ್ರಗಣ್ಯರು ಎಂದು ಹೆಮ್ಮೆಯಿಂದ ಹೇಳಬಹುದು. ಈ ವಿಚಾರದಲ್ಲಿ ಜನಾಂಗ ಬಾಂಧವರನ್ನು ಎಚ್ಚರಿಸಲು ಇವರು ಅನುಸರಿಸಿದ ತಂತ್ರ ತೀರಾ ಭಿನ್ನ. ಅಪ್ಪಯ್ಯ ಗೌಡರ ಬದುಕು ಹಾಗೂ ನಡೆದು ಬಂದ ಹಾದಿಯ ಬಗ್ಗೆ ಸ್ವತಃ ಕೋ.ಪ. ಕಾರ್ಯಪ್ಪನವರು ಲಾವಣಿಗಳನ್ನು ಬರೆದಿದ್ದಾರೆ. ಸ್ವತಃ ಹಾಡಿ ನಲಿದಿದ್ದಾರೆ. ಜನಾಂಗ ಬಾಂಧವರ ಮನೆ ಮನೆಗೆ ತೆರಳಿ ಪ್ರತಿಯೊಬ್ಬರನ್ನೂ ಎಚ್ಚರಿಸುವ ಪ್ರಯತ್ನ ಮಾಡಿದ್ದಾರೆ.

ಜನಾಂಗದ ಇಂತಹ ಓರ್ವ ಇತಿಹಾಸ ಪುರುಷನನ್ನು, ಮೇರು ವ್ಯಕ್ತಿಯನ್ನು ಮರೆತರೆ, ಅದು ಜನಾಂಗಕ್ಕೆ ಸಮಾಜಕ್ಕೆ ಅಪಚಾರ ಮಾಡಿದಂತೆಯೋ ಸರಿ. ಗೌಡ ಜನಾಂಗ ಸಮಾಜಕ್ಕೆ, ರಾಷ್ಟ್ರಕ್ಕೆ ಅಮೋಘ ಕೊಡುಗೆ

ನೀಡಿದೆ, ಸೇವೆ ಸಲ್ಲಿಸಿದೆ. ಇಂತಹ ಧೀಮಂತ ಜನಾಂಗದ ಹಿರಿಮೆಯನ್ನು ಮುಂದಿನ ಪೀಳಿಗೆ ಕೂಡ ಅರ್ಥೈಸಿಕೊಳ್ಳಬೇಕು ಅದು ದಾಖಲೆಯಾಗಬೇಕೇ ಹೊರತು ನಶಿಸಬಾರದು ಎಂಬ ಕೋ.ಸ. ಕಾರ್ಯಪ್ಪ ಅವರ ಚಿಂತನೆ ಸಾಕಾರಗೊಳ್ಳುವಲ್ಲಿ ನಾವು ನೀವೆಲ್ಲರೂ ಜವಾಬ್ದಾರಿಯುತ ಪಾತ್ರ ವಹಿಸಬೇಕಾಗಿದೆ. ಕರ್ತವ್ಯ ನಿಷ್ಠೆ ಮೆರೆಯಬೇಕಾಗಿದೆ.

ಕೋ.ಸ. ಕಾರ್ಯಪ್ಪ ಅವರು ತಮ್ಮ 55ನೇ ವರ್ಷ ವಯಸ್ಸಿನಲ್ಲಿ ದಿನಾಂಕ 30-9-1979ರಲ್ಲಿ ಪೊಲೀಲ್ ಇಲಾಖೆಯ ಸೇವೆಯಿಂದ ನಿವೃತ್ತರಾದರು. ನಂತರ ಅವರು ತಮ್ಮ ಬದುಕಿನ ಉದ್ದಕ್ಕೂ ಜನಾಂಗದ ಉದ್ಧಾರಕ್ಕಾಗಿಯೇ ತಮ್ಮ ಹರಿತ ಲೇಖನಿಯ ಮೂಲಕ ಸಮರ ಸಾರಿದರು. ಕೋ.ಸ. ಕಾರ್ಯಪ್ಪ ಅವರು ದಿನಾಂಕ 20-7-1997ರಲ್ಲಿ ತಮ್ಮ 73ನೇ ವರ್ಷ ವಯಸ್ಸಿನಲ್ಲಿ ಬದುಕಿನ ಜಂಜಾಟದಿಂದ ದೂರವಾಗಿ ಇಹಲೋಕ ತ್ಯಜಿಸಿದರು. ಆದರೆ ಇವರೊಬ್ಬ ಸಾಧಕ, ಗೌಡ ಜನಾಂಗದ ಇತಿಹಾಸ ಪುರುಷ ಎಂಬ ಕಟು ಸತ್ಯತೆ ಸಮಾಜ ಗುರುತಿಸಬೇಕಾಗಿದೆ. ಕೋ.ಸ. ಕಾರ್ಯಪ್ಪ ಅವರು ಸವೆಸಿದ ವರ್ಣರಂಜಿತ ಬದುಕು, ಜನಾಂಗದ ಪಾಲಿಗೆ ಬೆಳಕು ಚೆಲ್ಲುವ ದಿವ್ಯ ದೀವಿಗೆಯಾಗಲಿ ಎಂಬುದು ಸದಾಶಯ.

ಚುಟುಕಗಳು

ಮಣ್ಣಿನ ಮಕ್ಕಳು

ಮಣ್ಣಿನಲಿ ಧೂಳಿನಲಿ
ಮಣ್ಣಾಟ ವಾಡುತಿಹ
ಚಿಣ್ಣರಲ್ಲಣ್ಣ
ಮಣ್ಣಿನ ಮಕ್ಕಳು
ಸುರಿವ ಮಳೆಯಲ್ಲಿ
ಸುಡುವ ಬಿಸಿಲಲ್ಲಿ
ಹೊಲಗದ್ದೆ ತೋಟದಲಿ
ದುಡಿವವರೆ ಕಾಣಣ್ಣ
ಮಣ್ಣಿನ ಮಕ್ಕಳು
ಜಮ್ಮ ಜಹಗೀರು
ಉಂಬಳಿಗಳೆಲ್ಲ
ತಮ್ಮನು ಪೊರೆವ
ದೇವತೆಗಳೆಂದು
ತಿಳಿದು ಉತ್ತು ಬಿತ್ತಿ
ಬೆಳೆ ಬೆಳೆವವರೆ
ಮಣ್ಣಿನ ಮಕ್ಕಳು.

ಕತ್ತಲೆ-ಬೆಳಕು

ಹಗಲಲ್ಲಿ ಒಂದು ಕ್ಷಣ
ಕಣ್‌ಮುಚ್ಚಿದರೆ ಸಾಕು
ಬರಿ ಕತ್ತಲೆ
ಬೆಳಕನ್ನು ಕಾಣುವ
ಮನವಿಲ್ಲದಿರೆ
ಬಾಳೇ ಕತ್ತಲೆ

ಉರುಳು ಸೇವೆ

ತೊಟ್ಟುಕಳಚಿದ
ಎಲೆ, ಹೂ, ಹಣ್ಣು
ಉದುರುವುದು
ಭೂತಾಯ ಮಡಿಲಿಗೆ
ಬೇರು ಕಳಚಿದ
ಮರಸಲಿಸುವುದು
ಉರುಳುಸೇವೆ
ಭೂತಾಯ ಎದುರಿಗೆ.

ಜನಾಂಗದ ಕ್ರೀಡಾ ದಾಖಲೆಗಳ ಪಕ್ಷಿನೋಟ



ಮಾಹಿತಿ - ಪಾಣತ್ತಲೆ ರಾಯ್ ಚೆಣ್ಣಪ್ಪ

ನಿರೂಪಣೆ - ಸುನೀಲ್ ಕೋರನ

ಸಾಮಾನ್ಯವಾಗಿ ಒಳನಾಡಿನಲ್ಲೇ ವ್ಯವಸ್ಥೆಗೊಳ್ಳುತ್ತಿದ್ದ ಕ್ರೀಡಾ ಮೇಳಗಳು ಸುಮಾರು 2001ನೇ ಇಸವಿಯಿಂದ ಸಂಘಟಿತವಾಗಿ ಮೈದಾನದ ಪೈಪೋಟಿಗೆ ಬಂದು ನಿಂತಿತು. ಮೊದಮೊದಲು ಗ್ರಾಮಾಂತರ ಮಟ್ಟದಲ್ಲಿ ಮೂರ್ನಾಡು ಗೌಡ ಯುವಕ ಸಂಘದ ವತಿಯಿಂದ ಟೆನ್ನಿಸ್ ಬಾಲ್ ಕ್ರಿಕೆಟ್ ಸ್ಪರ್ಧೆ ಮತ್ತು ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ನಡೆಸಿದ ಹಗ್ಗಜಗ್ಗಾಟ, ವಾಲಿಬಾಲ್‌ನಂತಹ ಸ್ಪರ್ಧೆಗಳೊಂದಿಗೆ ಸಾಂಪ್ರದಾಯಿಕ ರೀತಿಯಲ್ಲಿ ಆರಂಭವಾದುದು ಮುತ್ತಾರ್ಮುಡಿಯ ದೇರಜೆ ಕುಟುಂಬದ ಕೆಸರು ಗದ್ದೆಯಲ್ಲಿ ಆಟೋಟಗಳು.

ಚದುರಿ ಹೋಗಿರುವ ಜನಾಂಗದ ಕೌಟುಂಬಿಕ ಸದಸ್ಯರನ್ನು ಒಂದೆಡೆ ಕಲೆ ಹಾಕಿ ರಚನಾತ್ಮಕವಾಗಿ ತಂತಮ್ಮ ಪ್ರತಿಭೆ ಬಿಂಬಿಸುವ ಸಾಧ್ಯತೆಯನ್ನು ಒಡಮೂಡಿಸುವ ಉದ್ದೇಶದಿಂದ 2002ರಲ್ಲಿ ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ ಸುಸಜ್ಜಿತ ಕ್ರಿಕೆಟ್ ಟೂರ್ನಮೆಂಟನ್ನು ನಡೆಸಿತು. ನೂರಾರು ಕುಟುಂಬಗಳು ಪಾಲ್ಗೊಳ್ಳುವ ಈ ಪಂದ್ಯಾವಳಿಯ ಮೊದಲನೆ ಆವೃತಿಯಾದ ಪರ್ಲಕೋಟಿ ಕಪ್ ಅನ್ನು ಬಾಳಾಡಿ ಕುಟುಂಬ ತಂಡ ಗೆದ್ದುಕೊಂಡಿತು. 2003ನೇ ಸಾಲಿನ ದಂಬೆಕೋಡಿ ಕಪ್ ಕೂಡ ಬಾಳಾಡಿ ಕುಟುಂಬದ ಪಾಲಾಯಿತು. ನಂತರ 2004ರಲ್ಲಿ ಪೇರಿಯನ್ ಕಪ್‌ನಲ್ಲಿ ಚಾಂಪಿಯನ ಆದುದು ಪರ್ಲಕೋಟಿ ಕೌಟುಂಬಿಕ ತಂಡ, 2005ನೇ ಸಾಲಿನಲ್ಲಿ ಕುರುಂಜಿ ಕಪ್ ಪಂದ್ಯಾವಳಿಯಲ್ಲಿ ಜಯಭೇರಿ ಭಾರಿಸಿದ್ದು ದಂಬೆಕೋಡಿ ತಂಡ. ಪಂದ್ಯಾವಳಿಯ 2006ಮತ್ತು 2007ಆವೃತ್ತಿ ಶಿಸ್ತು ಕ್ರಮದ ಆಧಾರದಿಂದ ಮುಂದೂಡಲ್ಪಟ್ಟವು. ಅತ್ಯಂತ ಯಶಸ್ವಿಯಾಗಿ , ಜನಪ್ರಿಯವಾಗಿ ನಡೆಯುತ್ತಿದ್ದ ಈ ಟೂರ್ನಮೆಂಟ್‌ನ ಚರಿತ್ರೆಗೆ ಕಪ್ಪು ಚುಕ್ಕಿ ಇಟ್ಟಿದ್ದು ಸೋತ ತಂಡವೊಂದರ ಅನಪೇಕ್ಷಣೀಯ ವರ್ತನೆ .

ಆದರೆ ಈ ಕೊರತೆಯನ್ನು ಮುಚ್ಚಿಕೊಳ್ಳಲು ಏರ್ಪಟ್ಟಿದ್ದು, ಪಾಣತ್ತಲೆ ಕಪ್ ಫುಟ್‌ಬಾಲ್ ಕ್ರಿಕೆಟ್ ನಂತಹ ಸ್ಥಳೀಯ ಜನಪ್ರಿಯ ಕ್ರೀಡೆಗೆ ಹೊರತಾಗಿ ಪಾಣತ್ತಲೆ ಜಗದೀಶ್ ಮತ್ತು ಕುಟುಂಬದವರ ವಿಭಿನ್ನ ಪ್ರಯತ್ನ ಯಶಸ್ಸು ಕಂಡು 48 ತಂಡಗಳು ಪಾಲ್ಗೊಂಡವು. ಮುಂದಿನ ವರ್ಷ 2007ರಲ್ಲೂ ಈ ಪಂದ್ಯಾವಳಿ ಮರಗೋಡುವಿನಲ್ಲಿ ಗೌಡ ಯುವ ವೇದಿಕೆ ಆಶ್ರಯದಲ್ಲಿ ನಡೆಯಿತು. ಈ ಪಂದ್ಯಾವಳಿಯು ಜೂನಿಯರ್ ರಾಷ್ಟ್ರೀಯ ಆಟಗಾರ ದಿವಂಗತ ಕಟ್ರತನ ಧಾನೇಶ್ ಸ್ಮರಣಾರ್ಥ ನಡೆಯಿತು. ಕಟ್ಟೆಮನೆ ತಂಡ ಎರಡೂ ವರ್ಷ ಪ್ರಶಸ್ತಿ ಗೆದ್ದುಕೊಂಡಿತು. ಕ್ರಮವಾಗಿ ಎರಡನೇ ಸ್ಥಾನವನ್ನು ಪೊನ್ನಚನ ಮತ್ತು ಪಾಣತ್ತಲೆ ತಂಡ ಪಡೆದವು.

2008ರಲ್ಲಿ ಪುನರಾರಂಭಗೊಂಡ ಕ್ರಿಕೆಟ್ ಟೂರ್ನಮೆಂಟ್‌ನಲ್ಲಿ ಗೌಡ ವಿದ್ಯಾ ಸಂಘದ ಶತಮಾನೋತ್ಸವ ಕಪ್‌ನ್ನು ಗೆದ್ದುಕೊಂಡ ಶ್ರೇಯಸ್ಸನ್ನು ಕೆದಂಬಾಡಿ ತಂಡ ಪಡೆಯಿತು. ಈ ನಡುವೆ ಕಟ್ಟೆಮನೆ ಕುಟುಂಬಸ್ಥರು ಮರಗೋಡುವಿನಲ್ಲಿ ಹಗ್ಗಜಗ್ಗಾಟ, ವಾಲಿಬಾಲ್ ಪಂದ್ಯಾವಳಿಯನ್ನು ನಡೆಸಿದರೆ ಕಷ್ಯದ ತಂಡ ವಾಲಿಬಾಲ್ ಚಾಂಪಿಯನ್ ಆಯಿತು. ಈ ನಡುವೆ ಅಯ್ಯಂಡ್ರ ಕುಟುಂಬಸ್ಥರು ನಂಜರಾಯ ಪಟ್ಟಣದಲ್ಲಿ ಕ್ರಿಕೆಟ್ ಟೂರ್ನಮೆಂಟ್ ನಡೆಸಿದ್ದು, ಅಲ್ಲಿ ಕೂಡ ಬಾಳಾಡಿ ತಂಡ ಪ್ರಶಸ್ತಿ ಗೆದ್ದುಕೊಂಡಿತ್ತು.

ಜನಾಂಗದ ಪರವಾಗಿ ಪಂದ್ಯಾವಳಿಗಳ ಆಯೋಜನೆಯಲ್ಲಿ ಚೆಟ್ಟಿಮಾನಿಯ ಕೆದಂಬಾಡಿ ಕಪ್ ಸುದೀರ್ಘ ಇತಿಹಾಸ ಹೊಂದಿದೆ. ಸರಿ ಸುಮಾರು 1999 ದಿಂದಲೇ ಪ್ರಾರಂಭಿಕ ಹಂತದಲ್ಲಿ ನಡೆದ ಇವು ನಂತರ 2001ರಿಂದ ವ್ಯವಸ್ಥಿತವಾಗಿ ನಿರಂತರವಾಗಿ ನಡೆಯತೊಡಗಿದವು, ಕೊಡಗು ಗೌಡ ಜನಾಂಗದ ಕ್ರೀಡಾ ಇತಿಹಾಸದಲ್ಲಿ ಈ ಟೂರ್ನಿ ಗಣ್ಯ ಸ್ಥಾನ ಪಡೆದಿದೆ.

ವೈಯಕ್ತಿಕ ಸಾಧಕರು:

ಅರೆಭಾಷಿಕ ಜನಾಂಗದ ಪರವಾಗಿ ಭಾರತ ದೇಶವನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದವರು ಒಂದಿಬ್ಬರು ಮಾತ್ರ. ಇಂತಹ ಮಹತ್ತರ ಸಾಧಕರು ಫುಟ್‌ಬಾಲ್ ಆಟಗಾರರಾದ ಬೆಪ್ಪುರನ ಪಿ. ಅಣ್ಣಪ್ಪ ಮತ್ತು ಮ್ಯಾರಥಾನ್ ಓಟಗಾರರಾದ ಹೊಸೂರು ಸೀತಾರಾಮ್ ಹಾಗೂ ಹೊಸೋಕ್ಲು ಚಿನ್ನಪ್ಪ. ಉಳಿದಂತೆ ಬೊಳ್ತಜಿರ ಅಶೋಕ್ ರಾಷ್ಟ್ರೀಯ ಸರ್ವೀಸಸ್ ಹಾಕಿ ತಂಡದ ಖಾಯಂ ಆಟಗಾರರಾಗಿದ್ದರು. ಮಹತ್ವದ ಸಂದರ್ಭದಲ್ಲಿ ಗಾಯದ ಸಮಸ್ಯೆಗೀಡಾದ ಈತ ಒಲಿಂಪಿಯನ್ ಆಗುವ ಸಂಭಾವ್ಯತೆ ಹೊಂದಿದ್ದರು. ಇದೇ ರೀತಿ ಸರ್ವೀಸಸ್ ಪರ ಗಮನ ಸೆಳೆದ ಇನ್ನೊಬ್ಬರು ಚೌಕಿಮನೆ ತಿಮ್ಮಯ್ಯ. ಐಟಿಐ ತಂಡವನ್ನು ನಿರಂತರವಾಗಿ ಹಲವಾರು ವರ್ಷ ಪ್ರತಿನಿಧಿಸಿದ ಕೀರ್ತಿ ಅಯ್ಯಂಡ್ರ ರಾಜೇಂದ್ರ ಅವರದು. ಹೆಚ್.ಎಂ. ಟಿ. ತಂಡದ ಆಟಗಾರರಾಗಿ ಮಿಂಚಿದ್ದು ಕುಂಭಗೌಡನ ಸೋಮಣ್ಣ , ಚೌಕಿಮನೆ ಆನಂದ ಅಂತರಾಷ್ಟ್ರೀಯ ಮಟ್ಟದ ಬಾಕ್ಸರ್‌ಆಗಿ ಗಮನ ಸೆಳೆದರು. ಇವರೆಲ್ಲರಿಗಿಂತ ಹಿರಿದಾದ ಸಾಧನೆ ಮಾಡಿದ್ದು, ಹೊಸೂರು ಸೀತಾರಾಮ್. ೧೯೮೨ ರ ದೆಹಲಿ ಏಷ್ಯನ್ ಗೇಮ್ಸ್‌ನಲ್ಲಿ ಮ್ಯಾರಥಾನ್ ವಿಭಾಗದಲ್ಲಿ ಕಂಚಿನ ಪದಕ ಪಡೆದ ಈತ ಒಬ್ಬ ವಿಶ್ವಮಟ್ಟದ ಅಥ್ಲೀಟ್.

ಹಾಕಿ ಜೂನಿಯರ್ ಮಟ್ಟದಲ್ಲಿ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ ಸಾಧನೆ ಕಾಳೇರಮ್ಮನ ರಾಯ್ ಪಾಲಾಕ್ಷ ಮತ್ತು ಮೇರ್ಕಜೆ ಗಿರೀಶ್ ಅವರದು. ಮಹಿಳಾ ವಿಭಾಗದಲ್ಲಿ ಇಂಥದ್ದೊಂದು ಗೌರವ ಸಾಧಿಸಿದ್ದು ಕುಯ್ಯಮುಡಿ ಹನಿ, ಹುಲಿಮನೆ ಮಂಜುಳ, ಪಡಿಕಲ್ ರತಿ ಮತ್ತು ಥ್ರೋಬಾಲ್‌ನಲ್ಲಿ ಕೊಟ್ಟಕೇರಿಯನ ವರ್ಷಾ. ಫುಟ್‌ಬಾಲ್‌ನಲ್ಲಿ ರಾಷ್ಟ್ರೀಯ ಜೂನಿಯರ್ ಆಟಗಾರರಾಗಿದ್ದವರು, ಕಟ್ರತನ ಧಾನೇಶ್ ಅಥ್ಲೆಟಿಕ್ಸ್‌ನಲ್ಲಿ ವಿಶಿಷ್ಟ ಸಾಧನೆ ಮಾಡಿದ್ದು ಕರ್ಣಯ್ಯನ ಈಶ್ವರ್. ಮ್ಯಾರಥಾನ್ ಓಟಗಾರನಾಗಿದ್ದ ಈತ ದೈಹಿಕ ಶಿಕ್ಷಣದಲ್ಲಿ ಪಿ.ಹೆಚ್.ಡಿ. ಮಾಡುವದರೊಂದಿಗೆ ರಾಷ್ಟ್ರಮಟ್ಟದ ಅಥ್ಲೆಟಿಕ್ಸ್ ರೆಫರಿ ಕೂಡ ಆಗಿರುವ ಹೆಗ್ಗಳಿಕೆ ಹೊಂದಿದ್ದಾರೆ. ಪಾಂಡನ ಶೈಲಜಾ ಮೊಣ್ಣಪ್ಪ ವಯಸ್ಕರ ವಿಭಾಗದಲ್ಲಿ ರಾಷ್ಟ್ರೀಯ ಚಾಂಪಿಯನ್ ಅದವರು. ಲಕ್ನೊ ಕೂಟದಲ್ಲಿ ನಾಲ್ಕು ಚಿನ್ನ ಎರಡು ಬೆಳ್ಳಿಗಳಿಸಿದ ಅಪರೂಪದ ಸಾಧನೆ ಇವರದು.ಇನ್ನುಳಿದಂತೆ ಕಿರಿಯರ ವಿಭಾಗದಲ್ಲಿ ಹಲವಾರು ಮಂದಿ ಗಮನ ಸೆಳೆದಿದ್ದು, ಈ ಉದಯೋನ್ಮುಖರ ಸಾಧನೆ ಮಹತ್ತರದಾಗಲಿದೆ.

◆◆◆◆◆

ಕೊಡಗಿನಲ್ಲಿ ಗೌಡರು ಮತ್ತು ಸಂಸ್ಕೃತಿ

-ಬೈತಡ್ಕ ಜಾನಕಿ ಬೆಳ್ಯಪ್ಪ, ಮಡಿಕೇರಿ.

ಹದಿನೆಂಟನೆ ಶತಮಾನ ಮತ್ತು ಹತ್ತೊಂಭತ್ತರ ಆದಿಯಲ್ಲಿ ಕೊಡಗು ಮುಸ್ಲಿಮರ ಧಾಳಿಗೆ ತುತ್ತಾಗಿ ಇಲ್ಲಿನ ಜನಸಂಖ್ಯೆ ಕಡಿಮೆ ಆದಾಗ ಹಾಲೇರಿ ವಂಶದ ದೊಡ್ಡವೀರ ರಾಜೇಂದ್ರನು ಇಲ್ಲಿನ ಭೂಮಿಯನ್ನು ಬಂಜರು ಬಿಡಲು ಇಷ್ಟಪಡದೆ ಮತ್ತು ತನ್ನ ಸೈನ್ಯವನ್ನು ಬಲಪಡಿಸುವ ಉದ್ದೇಶದಿಂದ ಅಂದಿನ ವಿಶಾಲ ಕೊಡಗು ದೇಶದ ಅಮರಸುಳ್ಯ ಮತ್ತು ಕೊಡಗಿನ ಗಡಿಭಾಗವಾಗಿದ್ದ ಅರಕಲಗೋಡು ಹಾಗೂ ಇತರ ಭಾಗಗಳಿಂದ ಕಡ್ಡಾಯವಾಗಿ ಊರಿಗೆ ಹದಿನೈದು ಜನರಂತೆ ಕುಟುಂಬಸ್ಥರನ್ನು ಕರೆತಂದು ಘಟ್ಟ ಮತ್ತು ಅರಣ್ಯ ಪ್ರದೇಶವಾದ ಭಾಗಮಂಡಲದಿಂದ ಸೋಮವಾರಪೇಟೆ ತನಕ ನೆಲೆ ನಿಲ್ಲುವಂತೆ ಒತ್ತಾಯಿಸಿದನು. ಅದರಂತೆ ಮುಸ್ಲಿಮರೊಡನೆ ಹೋರಾಡಿದ ಮೊದಲು ಬಂದ ತೊಂಭತ್ತು ಜನ ಗೌಡರಿಗೆ ರಾಜನು ಜಮ್ಮ-ಉಂಬಳಿ, ಭೂಮಿ, ಒಡಿಕತ್ತಿ, ಕೋವಿ, ಚಿನ್ನದ ಚೂರಿಕತ್ತಿಗಳನ್ನು (ಪೀಚೆಕತ್ತಿ) ಕೊಟ್ಟು ಗೌರವಿಸಿ ಇನ್ನು ಮುಂದೆ ರಾಜನ ಆಸ್ಥಾನಕ್ಕೆ ಬರುವಾಗ ರಾಜಮರ್ಯಾದೆಯ ಉಡುಪಾದ ಬಿಳಿಕುಪ್ಪಸ, ಕೆಂಪು ರೇಷ್ಮೆ ದಟ್ಟಿ ಮತ್ತು ತಲೆಗೆ ಚಿನ್ನದ ಜರಿ ರುಮಾಲನ್ನು ಕಟ್ಟಿ ಬರಬೇಕೆಂದು ಆದೇಶಿಸಿದನು. ಅಂದು ಹಾಗೆ ಬಂದು ಈಗಿನ 'ಕೊಡಗು ಜಿಲ್ಲೆಯಲ್ಲಿ ನೆಲೆಸಿದ ಗೌಡರ ಸಂಖ್ಯೆ ಇಂದು ಸುಮಾರು ಒಂದೂವರೆ ಲಕ್ಷಕ್ಕೂ ಅಧಿಕವಾಗಿದ್ದು, ಪ್ರಾಮಾಣಿಕರಾಗಿ, ವೀರರಾಗಿ, ವ್ಯವಸಾಯಗಾರರಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ದುಡಿಯುತ್ತಿದ್ದಾರೆ. ಗೌಡರು ಮಡಿಕೇರಿ ತಾಲೂಕಿನಲ್ಲಿ ಅಧಿಕವಾಗಿ ನೆಲೆಸಿದ್ದು, ಗೌಡ ಜನಾಂಗದವರಿಗೆ ಜಮ್ಮಕೊಟ್ಟು ಕೂರಿಸಿದ ಕೀರ್ತಿಯು ಅಂದು ಕೊಡಗನ್ನು ಆಳುತ್ತಿದ್ದ ಹಾಲೇರಿ ಅರಸರಿಗೆ ಸಲ್ಲುತ್ತದೆ. ಅಲ್ಲದೆ, ಇಲ್ಲಿನ ಕೊಡವರು -ಗೌಡರು ತಮ್ಮ ತಮ್ಮ ಧರ್ಮಶಾಸ್ತ್ರಗಳಿಗೆ ಚ್ಯುತಿ ಬಾರದಂತೆ ಹಬ್ಬ-ಹರಿದಿನ ಹಾಗೂ ಇತರ ಸಂದರ್ಭಗಳಲ್ಲಿ ಅಣ್ಣ-ತಮ್ಮಂದಿರಂತೆ ಬಾಳಲು ತಿಳಿಸಿದರು.

ಅದರಂತೆ ಗೌಡರು ತಮ್ಮ ಧರ್ಮಶಾಸ್ತ್ರದಂತೆ ಮದುವೆ ಸಂಪ್ರದಾಯವನ್ನು ಶೃಂಗೇರಿಗೆ ಹರಿಕೆ ಹಣ ಕಟ್ಟುವುದರ ಮೂಲಕ ಉಳಿಸಿಕೊಂಡು ತಮ್ಮ ಕುಲದೇವರು ಶ್ರೀ ತಿರುಪತಿ ವೆಂಕಟರಮಣ ಸ್ವಾಮಿಯನ್ನು ಹರಿಸೇವೆ ಉತ್ಸವದ ಮೂಲಕ ಆರಾಧಿಸುತ್ತಾ, ಕೊಡಗಿನ ಕಾವೇರಿ ಮಾತೆಯ ಮಣ್ಣಿನ ಪರಂಪರೆಗೆ ಹೊಂದಿಕೊಂಡರು. ಇದೇ ರೀತಿ ತಲಕಾವೇರಿಯಲ್ಲಿ ಕೋಡಿ ಮನೆತನದವರೂ ಭಾಗಮಂಡಲದ ಭಗಂಡೇಶ್ವರ ದೇವಸ್ಥಾನದಲ್ಲಿ ಬಳ್ಳಡ್ಕ ಮನೆತನದವರೂ ಪಾಲೂರು ಶ್ರೀಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಎಡಿಕೇರಿ ಮನೆತನದವರೂ ತಕ್ಕಮುಖ್ಯಸ್ಥರಾಗಿ ಇಂದಿಗೂ ಸೇವೆ ಸಲ್ಲಿಸುತ್ತಾ ಬರುತ್ತಿದ್ದಾರೆ. ಅಲ್ಲದೆ, ಅನೇಕ ಊರುಗಳಲ್ಲಿ ಎಲೆಮರೆಯ ಕಾಯಿಗಳಂತೆ ಕೋಲಾಟ-ಜೋಗಿ-ಬಾಳೋಪಾಟ್ ಇವುಗಳನ್ನು ಹಬ್ಬಗಳಲ್ಲಿ ಬಿಳಿಕುಪ್ಪಸವುಟ್ಟು ತಕ್ಕರಾಗಿಯೂ ಸೇವೆ ಸಲ್ಲಿಸುತ್ತಿರುವುದು ಕಂಡುಬರುತ್ತಿದೆ.

ಧಾರ್ಮಿಕ ಪರಂಪರೆ:

ಗೌಡರ ಪ್ರತಿ ಕುಟುಂಬಕ್ಕೂ ಐನ್‌ಮನೆಯಿದ್ದು, ನೆಲ್ಲಕ್ಕಿ ದೀಪದ ಎದುರು ಎಲ್ಲಾ ಶುಭಾಶುಭ ಕಾರ್ಯಗಳೂ ನಡೆಯುತ್ತವೆ. ಐನ್‌ಮನೆಯ ಅಟ್ಟದಲ್ಲಿ ಕುಟಂಬದ 'ಮುಡುಪು' ಇರುತ್ತದೆ. ತಮ್ಮ ಕುಲದೇವರು ಶ್ರೀ ವೆಂಕಟರಮಣ ಸ್ವಾಮಿಯ ಹರಿಸೇವೆಯ ಉತ್ಸವವನ್ನು ಪ್ರತಿ ಐದು ರ್ಷಗಳಿಗೊಮ್ಮೆ ಆಚರಿಸುತ್ತಾರೆ. ಆ ದಿನ ಕುಟುಂಬದಿಂದ ಕೊಟ್ಟ ಹೆಣ್ಣು ಮಕ್ಕಳಿಗೂ, ತಂದವರ ಮನೆಗಳಿಗೂ ವಿಶೇಷ ಆಹ್ವಾನವಿರುತ್ತದೆ. ಹರಿಸೇವೆಯ ನಂತರ ಕೆಂಚರಾಯನಿಗೆ ಬಲಿಕೊಡುವ ಕ್ರಮವಿದೆ. ಹರಿಸೇವೆಯಲ್ಲಿ ಭಂಡಾರಕ್ಕೆ ಬಿದ್ದ ಹಣವನ್ನು 'ಮುಡುಪು'ನಲ್ಲಿಟ್ಟು ಬೀಗಮುದ್ರಿಸಿ ತಿರುಪತಿ ಭಂಡಾರಕ್ಕೆ ತಲುಪಿಸಿ ಯಾತ್ರೆ ಮಾಡಿ ಬಂದು ಮಾಡುವ ಈ ವಿಶೇಷ ಪೂಜೆಗೆ ಹರಿಸೇವೆ ಉತ್ಸವ ಎನ್ನುತ್ತಾರೆ. ಕೆಲವು ಕುಟುಂಬದವರು ಸಬ್ಬಮ್ಮ ದೇವಿಯನ್ನು ಸಹ ಕುಲದೇವರಾಗಿ ಪೂಜಿಸಿ ಹರಿಸೇವೆ ಮಾಡುತ್ತಾರೆ. ಹರಿಸೇವೆಯಲ್ಲಿ ಘನಹರಿಸೇವೆಯು ಬಹಳ ವಿಶೇಷವುಳ್ಳದ್ದಾಗಿದೆ. ಐನ್‌ಮನೆಯಲ್ಲಿ ಶುಭಾಶುಭ ಸಂದರ್ಭಗಳಲ್ಲಿ ಕಾರೋಣರವರಿಗೆ ಇಡುವ ಕ್ರಮವಿದ್ದು, ಈ ಕಾರ್ಯಕ್ಕಾಗಿ ಅಲ್ಲಿ ಒಂದು ಪ್ರತ್ಯೇಕವಾದ ಕೋಣೆಯಿರುತ್ತದೆ.

ಹಿಂದೆ ಶೃಂಗೇರಿಯ ಜಗದ್ಗುರುಗಳು ಇವರಿಗೆ ಗುರುಗಳಾಗಿದ್ದರು. ಆಗ ಗೌಡರಲ್ಲಿ ಬ್ರಾಹ್ಮಣ ಧಾರೆಯ ಕ್ರಮವಿತ್ತು. ಒಮ್ಮೆ ಮಳೆಗಾಲದಲ್ಲಿ ಹೊಳೆ ತುಂಬಿ ಹರಿಯುತ್ತಿದ್ದುದರಿಂದ ಬ್ರಾಹ್ಮಣ ಮದುವೆಗೆ ಬರಲಾಗಲಿಲ್ಲ. ಧಾರೆಯ ವೇಳೆ ಮೀರುತ್ತಿದ್ದುದರಿಂದ ಊರು ಹಿರಿಯನ ಆಜ್ಞೆಯಂತೆ ಗೌಡ ಧಾರೆಯ ಪದ್ಧತಿ ಪ್ರಾರಂಭವಾಯಿತು. ಇದನ್ನು ತಿಳಿದು ಗುರುಗಳಿಗೆ ತುಂಬಾ ಬೇಸರವಾಗಿ ಇನ್ನು ಮುಂದೆ ಗೌಡರ ಮದುವೆಯಲ್ಲಿ ಬ್ರಾಹ್ಮಣ ಧಾರೆ ಕ್ರಮವಿಲ್ಲವೆಂದರಂತೆ. ಹೀಗಾಗಿ ಅಂದಿನಿಂದ ಇಂದಿನವರೆಗೂ ವಧುವರರ ಕೈಯಲ್ಲಿ ಶೃಂಗೇರಿಗೆ ನಾಲ್ಕಾಣೆ ಪ...ಯನ್ನು ಹರಿಕೆ ಕಾಣಿಕೆಯಾಗಿ ಒಂದು ವಾಟೆಯ ಗೊಟ್ಟದೊಳಗಿಟ್ಟು ಅದನ್ನು ಅಲ್ಲಿಗೆ ತಲುಪಿಸುತ್ತಾರೆ. ಕೆ...ಳಗಿನ ಗೌಡರು ಹೆಚ್ಚಾಗಿ ತಿರುಪತಿಗೆ ಭಂಡಾರ ತಲುಪಿಸುತ್ತಾರೆ. ಈ ಸಂದರ್ಭ ಸಬ್ಬಮ್ಮ ದೇವಿಯನ್ನು ...ತಾದ ಹಾಡಿನಿಂದ ಗೌಡರ ಪೂರ್ವ ಸಂಸ್ಕೃತಿಯನ್ನು ತಿಳಿಯಬಹುದಾದ ಈ ಅರ್ಥಗರ್ಭಿತವಾದ ಹಾಡನ್ನು ಮುತ್ತೈದೆಯರ ಬಾಯಿಂದಲೇ ಕೇಳಿದರೆ ಸೊಗಸು.

ಗೌಡರ ಮದುವೆಯಲ್ಲಿ ಶಾಸ್ತ್ರಕ್ಕೊಂದು ಹಾಡು. ಹಾಗೆ ಸೋಬಾನೆ ಹಾಡುಗಳು ಮಹತ್ತರ ಪಾತ್ರ ವಹಿಸುತ್ತವೆ. ಪುರೋಹಿತರಿಲ್ಲದ ಮದುವೆಯಲ್ಲಿ ಜಾನಪದ ಸೋಬಾನೆ ಹಾಡುಗಳು ಮಂಗಳಕರ ಮತ್ತು ವಿಧಿಪೂರ್ವಕ ಮಂತ್ರಗಳಿದ್ದಂತೆ ಜೊತೆಗೆ ಮದುವೆಯ ಆಚರಣೆಯ ರೀತಿ ನೀತಿಗಳು ಕ್ರಮ ತತ್ವದಂತೆ ನಿಯಂತ್ರಿಸುವ ವರ್ಣನೆಗಳಿದ್ದು, ಗೌಡರ ಪೂರ್ವ ಸಂಸ್ಕೃತಿಯನ್ನು ತಿಳಿಯಬಹುದಾಗಿದೆ. ಇವರ ಸಂಸ್ಕೃತಿಯಲ್ಲಿ ಹಳೆಗನ್ನಡದ ಮೂಲರೂಪವನ್ನು ಹೊಂದಿರುವ ಮನೆಮಾತು ಅರೆಭಾಷೆ ಮತ್ತು ಸೋಬಾನೆ ಹಾಡುಗಳು ನಶಿಸದೆ ಉಳಿದಿರುವ ಅಮೂಲ್ಯ ಸೊತ್ತಾಗಿದೆಯಾದರೂ ಸಾಂಪ್ರದಾಯಿಕ ಉಡುಪು ಗೇಂಟಿ ಸೀರೆಯು ಅಳಿಯುವ ಅಂಚಿನಲ್ಲಿರುವುದು ವಿಷಾದನೀಯ.

ಗೌಡರು ಹತ್ತು ಕುಟುಂಬಗಳಿಗೆ ಸೇರಿದ ಹದಿನೆಂಟು ಗೋತ್ರದವರಾಗಿರುತ್ತಾರೆ. ಇವರ ಮದುವೆಯ ಪ್ರಾರಂಭವು ವೀಳ್ಯ ಶಾಸ್ತ್ರದಿಂದ ಆರಂಭವಾಗುತ್ತದೆ. ಪ್ರತಿ ಶಾಸ್ತ್ರದಲ್ಲು 'ಹತ್ತು ಕುಟುಂಬ- ಹದಿನೆಂಟು ಗೋತ್ರ- ದೇವಸಭೆ- ಕೂಡಿದ ಕುಲಸ್ಥರ ಸಂಗಡ ಕೇಳಿ' ಎಂಬ ನುಡಿಕಟ್ಟನ್ನು ಅನುಸರಿಸುತ್ತಾರೆ. ಸೋದರ ಮಾವ ಮುಖ್ಯ ಪಾತ್ರ

ವಹಿಸುವುದರೊಂದಿಗೆ ವಧುವರರ ಕುತ್ತಿಗೆಗೆ ಹವಳದ ಕಾಸ್ತಾಳಿಯೆಂಬ ಮುಹೂರ್ತಮಣಿಯನ್ನು ಕಟ್ಟಿ ಎಣ್ಣೆ ಶಾಸ್ತ್ರಕ್ಕೆ ಕೂರಿಸುತ್ತಾರೆ. ಅರಿಶಿಣ ಶಾಸ್ತ್ರ -ಮಂಗಳಸ್ನಾನ, ಹಸೆ-ಆರತಿ- ಹರಿಕೆ ಹಣ ಕಟ್ಟುವುದು- ಮದುರಂಗಿ ಶಾಸ್ತ್ರ- ಮಡಿಲಕ್ಕಿ ಶಾಸ್ತ್ರ-ಧಾರೆಯೆರೆದು ತಾಳಿಕಟ್ಟುವುದು ಇತ್ಯಾದಿ ಹಲವಾರು ಶಾಸ್ತ್ರಗಳು ಸಂಪ್ರದಾಯದಂತೆ ನಡೆಯುತ್ತವೆ. ಇವರಲ್ಲಿ ಗೋತ್ರಗಳನ್ನು ನೋಡಿ ನೆಂಟಸ್ಥಾನ ಮಾಡುವ ಕ್ರಮವಿದ್ದು, ಒಂದೇ ಗೋತ್ರದಲ್ಲಿ ಮದುವೆ ನಿಷಿದ್ಧವಾದರೂ ಕೆಲವು ಸದ್ರಿಗೋತ್ರವೆಂದು ನಡೆಯುವುದಿದೆ.

ಗೋತ್ರಗಳು:

ನಂದರ, ಬಂಗಾರ, ಹೆಮ್ಮನ, ಕಬರ್, ಮೂಲ್ಯರ, ಚಾಲ್ಯರ, ಬಳಸನ್ನ, ಸೆಟ್ಟಿ, ಗೋಳಿ, ಗೌಡ, ಕರ್ಬನ್ನ, ಲಿಂಗಾಯಿತ, ಗುಂಡನ, ಚಿತ್ತೆರ್, ಕರಂಬೆರ್, ದೇವರ, ನಾಯರ ಮತ್ತು ಸಾಲೆ ಇವರಲ್ಲಿ ನಂದರ, ಬಂಗಾರ ಹೆಮ್ಮನ ಗೋತ್ರದವರು ಹೆಚ್ಚಾಗಿದ್ದಾರೆಂದು ಸಮೀಕ್ಷೆಯಿಂದ ತಿಳಿದುಬಂದಿದೆ.

ಹತ್ತು ಕುಟುಂಬ ಹದಿನೆಂಟು ಗೋತ್ರಗಳಿಗೆ ಸೇರಿದ ಇವರ ಮದುವೆ ಚಪ್ಪರ ಹನ್ನೆರಡು ಕಂಬಗಳಿಂದ ಕೂಡಿದ್ದು, ಇದಕ್ಕೆ ಸೀತಾವಳಿ ಚಪ್ಪರವೆನ್ನುತ್ತಾರೆ. ಒಳಗಿನ ನಾಲ್ಕು ಕಂಬಗಳು ಗಣಪತಿ ಮತ್ತು ತ್ರಿಮೂರ್ತಿಗಳ ಸ್ಥಾನವೆಂದೂ, ಹೊರಗಿನ ಎಂಟು ಕಂಬಗಳು ಅಷ್ಟ ದಿಕ್ಪಾಲಕರ ಸಂಕೇತವೆಂದೂ, ಮಧ್ಯದ ನಾಲ್ಕು ಕಂಬಗಳೊಳಗೆ ಧಾರೆಯು ನಡೆಯುವುದಲ್ಲದೆ, ಈ ಸ್ಥಳವನ್ನು ದೇವಸ್ಥಾನದಷ್ಟೇ ಪವಿತ್ರವೆಂದು , ಇದನ್ನು ದೇವಸಭೆ ಎಂದು ಕರೆಯಲಾಗಿದೆ. ವಧುವಿಗೆ ಧಾರೆಯ ಸಂದರ್ಭ ಮಾತ್ರ ಮಡಿಲಕ್ಕಿ ತುಂಬಿಸುತ್ತಾರೆ. ವರನು ಕಡ್ಡಾಯವಾಗಿ ವಧುವಿಗೆ ಸೀರೆ-ತಾಳಿ-ಓಲೆ-ಮೂಗುತಿ-ಕಾಲುಂಗುರ ತರಬೇಕು.

ಗೌಡ ಜನಾಂಗದ ಆಚಾರ - ವಿಚಾರಗಳು ಸಾಂಸ್ಕೃತಿಕ ಹಾಗೂ ಸಾಹಿತ್ಯಕವಾಗಿ ಕೃಷಿಯನ್ನೇ ಆಧರಿಸಿಕೊಂಡಿದೆ. ಇವರು ಯುಗಾದಿ, ಕೈಲ್‌ಮುಹೂರ್ತ, ಕಾವೇರಿ ಸಂಕ್ರಮಣ ಮತ್ತು ಹುತ್ತರಿ ಹಬ್ಬಗಳನ್ನು ಆಚರಿಸುವುದರೊಂದಿಗೆ ಕಿಡ್ಡಾಸ, ಶಿವರಾತ್ರಿ, ಕೃಷ್ಣಜನ್ಮಾಷ್ಟಮಿ, ಷಷ್ಠಿ, ಗಣೇಶ ಚತುರ್ಥಿ ಮತ್ತು ದೀಪಾವಳಿಗಳಲ್ಲಿ ಊರದೇವರಿಗೆ ಪೂಜೆ ಸಲ್ಲಿಸುತ್ತಾರೆ. ಹೊಸ ಭತ್ತ ಬಂದನಂತರ ಮಕರ ಸಂಕ್ರಾಂತಿಯ ದಿನ ದೇವರಿಗೆ ಅಕ್ಕಿಯನ್ನು ನೈವೇದ್ಯಕ್ಕೆ ಕೊಟ್ಟು ದೇವಸ್ಥಾನದಲ್ಲಿ ಊಟ ಮಾಡಿ ವಿರಾಮವಾಗಿ ಕಳೆಯುತ್ತಾರೆ.

ಮಗು ಹುಟ್ಟಿದಾಗ 7 ದಿನ ಸೂತಕವಿದ್ದು, 16 ನೇ ದಿನಕ್ಕೆ ಮಗುವಿಗೆ ನಾಮಕರಣ ಮಾಡುತ್ತಾರೆ. ಸತ್ತರೆ ಗುರುತಿಗಾಗಿ ಜೋಡು ಗುಂಡನ್ನು ಹಾರಿಸುತ್ತಾರೆ. 3ನೇ ದಿನ ಮಡಿವಾಳನಿಂದ ಶುದ್ಧ, 11 ನೇ ದಿನಕ್ಕೆ ತಿಥಿ ಹಾಗೂ 16 ನೇ ದಿನ ಕೊಲೆಗೆ ಕೂಡಿಸುವ ಪದ್ಧತಿಯಿದ್ದು, 48 ನೆ ದಿವಸಕ್ಕೆ ಕಾವೇರಿ ಸಂಗಮದಲ್ಲಿ ಪಿಂಡಪ್ರದಾನ ಮತ್ತು ದೀಪಾವಳಿ ಅಮವಾಸ್ಯೆಯಂದು ಅವರ ಹೆಸರಿನಲ್ಲಿ ಅವಲಕ್ಕಿ ಎಡೆಹಾಕುವ ಕ್ರಮವಿದೆ.

ರಕ್ಷಣೆಗಾಗಿ ವಿಧವಾ ವಿವಾಹ, ಪುನರ್‌ವಿವಾಹ ಜಾರಿಯಲ್ಲಿದೆ. ಆಧುನಿಕ ಬದುಕಿನಲ್ಲಿ ಸ್ತ್ರೀ-ಪುರುಷರಿಗೆ ಸಮಾನತೆಯ ಹಕ್ಕಿದೆ. ಕಾನೂನಿನ ಚೌಕಟ್ಟಿನಲ್ಲಿ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕಿದ್ದರೂ, ತವರು ಮನೆಯ ಆಶ್ರಯ ಪಡೆಯುವುದಿಲ್ಲ. ಗೌಡರ ಪ್ರಾದೇಶಿಕ ವೈವಿಧ್ಯತೆಯಿಂದ ಭಾಷೆ ಆಹಾರ-ಉಡುಪುಗಳಲ್ಲಿ ವ್ಯತ್ಯಾಸವಿರುವುದು ಗಮನಿಸಬೇಕಾದ ಅಂಶ. ಮದುವೆ, ಹುಟ್ಟು-ಸಾವುಗಳ ಆಚರಣೆಗಳ ಸಂಪ್ರದಾಯ ಬದಲಾಗದಿದ್ದರೂ ಆಹಾರ -ಉಡುಪುಗಳಲ್ಲಿ ವೈಭವದ ಸಂಕೇತವಿದೆ.

ಗುರುತು:

ಕೃಷಿ ಪ್ರಧಾನ ಗೌಡರಿಗೆ ನೇಗಿಲು ಹೆಗ್ಗುರುತಾದರೂ ಕೊಡಗಿನಲ್ಲಿ ಒಡಿಕತ್ತಿ, ಕೋವಿ ಮತ್ತು ವೆಂಕಟೇಶ್ವರನ ಗುರುತನ್ನು ಹೊಂದಿದ್ದು, ಇದು ಕೊಡಗಿನ ಜಮ್ಮ ಮತ್ತು ಕುಲದೇವರ ಗುರುತಾಗಿರುತ್ತದೆ.

ಸ್ವಾತಂತ್ರ್ಯಾಭಿಮಾನಿಗಳು:

ಸುಮಾರು 1834ರ ದಶಕದಲ್ಲಿ ತೆರಿಗೆಯಲ್ಲಿ ಭತ್ತವನ್ನು ಹಣವನ್ನಾಗಿ ಮಾರ್ಪಡಿಸುವ ಬ್ರಿಟಿಷರ ಧೋರಣೆಯಲ್ಲಿ ಅವರ ಒಡೆದು ಆಳುವ ನೀತಿಯನ್ನು ಬಲವಾಗಿ ಪ್ರತಿಭಟಿಸಿದ ಗೌಡರು, ಅವರ ವಿರುದ್ಧ ಹೋರಾಟ ನಡೆಸಿ ಗಲ್ಲಿಗೇರಿಸಲ್ಪಟ್ಟ ಹಲವು ಮಂದಿ ಹುತಾತ್ಮರೊಡನೆ ಗುಡ್ಡೆಮನೆ ಅಪ್ಪಯ್ಯಗೌಡ, ಕೆದಂಬಾಡಿ ರಾಮಯ್ಯಗೌಡ, ಕುಕ್ಕುನೂರು ಚೆನ್ನಯ್ಯ ಎಂಬವರು ಚರಿತ್ರೆಯಲ್ಲಿ ಸ್ಥಿರವಾಗಿದ್ದಾರೆ. ಮಡಿಕೇರಿ ನಗರದ ಗೌಡ ಸಮಾಜಕ್ಕೆ ಹೋಗುವ ದಾರಿಗೆ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ ಎಂಬ ನಾಮಫಲಕವೇ ಅಪ್ಪಯ್ಯಗೌಡರನ್ನು ನೆನಪಿಸಲು ಸಾಕ್ಷಿಯಾಗಿದೆ.

ಕೊಡಗಿನಲ್ಲಿ ಜಮ್ಮ ಆಸ್ತಿ ಹೊಂದಿರುವುದರಿಂದ ಮೇಲೆ ಹೇಳಿದ ಆಸ್ಥಾನದ ಉಡುಪುಗಳನ್ನು ಗಂಡಸರೂ ತೊಡುತ್ತಿದ್ದರು. ಹೆಂಗಸರು ಮುಂದೆ ನೆರಿಗೆ, ಗೇಂಟಿಗೆಯ ಸೀರೆ, ಸೊಂಟಕ್ಕೆ ಡಾಬು, ಉದ್ದತೋಳಿನ ರವಿಕೆ, ಚಿನ್ನದ ಜರಿಯ ಗಿಳಿಅಂಚಿನ ಮುಸುಕು (ಕೋರ್‌ವಸ್ತ್ರ) ಈ ಉಡುಪಿನಲ್ಲಿ 1955 ರ ತನಕ ಮದುವೆಗಳು ನಡೆಯುತ್ತಿದ್ದು, ಅಲ್ಲಿತನಕ ಗೌಡ ಜನರ ಉಡುಪು ಅದೇ ಆಗಿದ್ದಿತು. ನಂತರ 1955 ರಿಂದ ಈ ಉಡುಪಿನ ಪದ್ಧತಿಯನ್ನು ಬದಲಾಯಿಸಿ ವರನು ಕಚ್ಚೆಪಂಚೆ, ಶಾಲು, ಬಿಳಿಕೋಟು, ತಲೆಗೆ ಜರಿ ಪೇಟ, ಕೆಂಪು ವಸ್ತ್ರವನ್ನು , ವಧುವಿಗೆ ಕನ್ನಡಸೀರೆ, ಸೊಂಟಕ್ಕೆ ಡಾಬು, ಮುಸುಕಿನ ವಸ್ತ್ರಗಳು ಮುಂದುವರಿದಿವೆ. ಮುಸುಕು ಧರಿಸಿದ ವಧುವರರು ಸಾಂಪ್ರದಾಯಿಕ ಉಡುಪಿನಲ್ಲಿ ಅಲಂಕೃತರಾಗಿ ಶೋಭಿಸುವುದೇ ಗೌಡ ಜನಾಂಗದ ಉಡುಪಿನ ಸಂಸ್ಕೃತಿ. ಮನೆಗೆ ನೆಂಟರು ಬಂದರೆ ಕಾಲು ತೊಳೆಯಲು ನೀರುಕೊಟ್ಟು, ಕಾಲು ತೊಳೆದ ನಂತರ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿ, ಹರಿವಾಣದಲ್ಲಿ ವೀಳ್ಯದೆಲೆ, ಅಡಿಕೆ ಕೊಟ್ಟು ನಂತರ ಕಾಫಿ-ತಿಂಡಿ ಕೊಡುವುದು, ಬಂದವರು ವಾಪಸು ಹೋಗುವಾಗ ಸ್ವಲ್ಪದೂರ ಹೋಗಿ ಗೌರವದಿಂದ ಕಳುಹಿಸುವುದು ನಮ್ಮ ಹಿರಿಯರಿಂದ ಬಂದ ಸಂಸ್ಕೃತಿ.

ಕೊಡಗಿನಲ್ಲಿ ಗೌಡರು ವಾಣಿಜ್ಯ ಕೃಷಿಯಲ್ಲೂ ಮುಂದಿದ್ದು, ಕಷ್ಟಪಟ್ಟು ಓದಿದರೂ ನಿರುದ್ಯೋಗ ಸಮಸ್ಯೆಯಿಂದ ಉದ್ಯೋಗ ಅರಸಿ ನಗರ ಪ್ರದೇಶಗಳಿಗೆ ತೆರಳುವ ಯುವಜನರ ಸಂಖ್ಯೆ ಹೆಚ್ಚಾಗಿದೆ. ಉನ್ನತ ಶಿಕ್ಷಣ ಪಡೆದು ತಾಂತ್ರಿಕ ಕ್ಷೇತ್ರದ ಮೂಲಕ ಬಹುರಾಷ್ಟ್ರೀಯ ಕಂಪೆನಿಗಳಲ್ಲಿ ಉದ್ಯೋಗ ಪಡೆದು, ವಿದೇಶಗಳಿಗೆ ಹೋಗುವುದರಲ್ಲೂ ಹಿಂದೆ ಬಿದ್ದಿಲ್ಲ. ಇಂದು ಅಂತರ್ಜಾತಿಯ ವಿವಾಹಗಳು ಹೆಚ್ಚುತ್ತಿದ್ದು, ಅಂತರ್ಜಾಲದ ಮೂಲಕ ಮದುವೆ ಆಗುವವರೆಗೂ ಸಾಗಿದ್ದಾರೆ. ಎಲ್ಲೇ ಸಾಗಲಿ ವಿದ್ಯೆ ಕಲಿತು ಕೋಟಿ ಗಳಿಸಿದರೂ, ಮಾತೃ ಸಂಸ್ಕೃತಿಯನ್ನು ಗೌರವಿಸಿ ಉಳಿಸುವುದೇ ಹೃದಯ ಸಂಸ್ಕೃತಿ.

◆◆◆◆◆

ಕೊಡಗ್‌ಲಿ ಗೌಡ್‌ಗಳ ಪ್ರಭಾವ



- ಸೌಜನ್ಯ : ಕೊಡಗು ಚರಿತ್ರೆ, ನಿವಾಸಿಗಳು ಮತ್ತು ಪ್ರಭಾವ

ಅನುವಾದ : ಪುದಿನೆರವನ ರಿಶಿತ್ ರಮೇಶ್, ಮಡಿಕೇರಿ

ಕೊಡಗ್‌ನ ಆದಿವಾಸಿತ್ತೇಳುವ ಗೌಡರ್ ಕೊಡಗ್‌ಲಿ ಸರ್ವಬಗೆಲೂ ಪ್ರಭಾವ ಬೀರ್ದವು ಆಗೊಳೊ. ಕೊಡಗ್‌ನ ಗತಕಾಲಲ್ಲೇ ನಾಯಕನ ಪಡ್ದ ಗೌಡ ಜನಾಂಗ ರಾಜರ ಕಾಲಲೂ ತಮ್ಮ ಸ್ಥಾನ-ಮಾನನ ಉತ್ತಮ ಪಡಿಸಿಕಂಡಿದ್ದ್ 'ಜಮ್ಮ' 'ಜಹಗೀರ್' ಮತ್ತೆ ಉಂಬಳಿ ಭೂ ಒಡೆತನನ ಪಡಕಂಡದ್ ಗಮನಾರ್ಹ ವಿಷಯವಾಗಿಟು. ಸನ್ 1700ರ ಮೇಲೆ ದೊಡ್ಡ ವೀರಪ್ಪ ಹಂಗೆ ಬಹಳ ಮುಖ್ಯವಾಗಿ 1790ರ ಮೇಲೆ ದೊಡ್ಡ ವೀರರಾಜೇಂದ್ರನ ಕಾಲಲೇ ಗೌಡರ್ ಕೊಡ್‌ಗ್‌ಲಿ ಇದ್ದ್ ಬೇರೆಯವರನ್ನ ಕರೆಗೆ ಸರಿಸಿ ಪ್ರಭಾವಿತರಾಗಿದ್ದೋತ್ತೇಳ್‌ರೆ ಒಂದು ವಿಶೇಷ ಸಂಗತಿಯಾಗಿಟ್ಟು. ಸಾಮಾಜಿಕವಾಗಿ ಮತ್ತೆ ಆರ್ಥಿಕವಾಗಿ ಸಾಧಾರಣಂದ ಹಿಡ್‌ದ್ ಅತೀ ಉತ್ತಮ ಸ್ಥಿತಿಲಿರುವ ಗೌಡರ್ ಪ್ರಗತಿ ಪಥಲಿ ಸಾಗಿಯಳೋ.

ಕೊಡಗ್‌ನ ನಿಜವಾದ ಕಠಿಣ ಶ್ರಮಿಗತ್ತೇಳಿರೆ ಗೌಡರೆ ಸರಿ. ಕೊಡಗ್‌ನ ಎಲ್ಲಾಕಡೆ ಗೌಡರ್ ವಾಸಿಸುತ್ತಿದ್ದರೂ ಮಡಿಕೇರಿ ತಾಲೂಕು ಗೌಡರ ಭದ್ರ ಕೋಟೆ. (ಕರ್ಣಿಯಬಾಹು) ಕರ್ಣೆಂಬುತ್ತೇಳುವವ 15ನೇ ಶತಮಾನಲಿ ತಾವುನಾಡ್‌ನ (ಭಾಗಮಂಡಲ) ಆಳಿಕಂಡಿತ್, ಅಂವ ಗೌಡ ವಂಶಜಕ್ಕೆ ಸೇರ್‌ದವಂತ ಹೇಳ್‌ವೆ, ಇವನ ಪ್ರಭಾವಂದ ಗೌಡರ್ ಭಾಗಮಂಡಲದ ಎಲ್ಲಾಕಡೆ ಅಂದರೆ ಚೇರಂಬಾಣೆ, ನಾಪೋಕ್ಲು, ಅವಂದೂರು, ಬೆಟ್ಟತ್ತೂರು, ಹೆರವನಾಡು, ಅರ್ವತ್ತೋಕ್ಲು) ಹೆಚ್ಚಾಗಿ ಜೀವನ ಮಾಡುತ್ತಿರುದು ಕಂಡ್ ಬಂದದೆ.

ಹಾಲೇರಿ ಅರಸರ ಕಾಲಲ್ಲಿ ರಾಜರ ಗಮನಕ್ಕೆ ಅನೇಕ ಗೌಡರ್ ಬಂದೊಳೊ. ಆದರೆ ಯಾರೂ ದಿವಾನರಾಗಿತ್ತ್‌ಲೆ. ಮತ್ತೆ ಬಂದ ಬ್ರಿಟಿಷರ ಕಾಲಲಿ ಗೌಡರ್ ಸ್ವಾಂತ್ರ್ಯದ ಕಿಚ್‌ನ ಹೋತ್ಸಿ ಸ್ವಾಂತತ್ರ್ಯ ವೀರರೆನಿಸಿಕಂಡಳೋ. ಸನ್ 1837ರ 'ಅಮರ ಸುಳ್ಯದಂಗೆ' ಗೌಡರ ಕೀರ್ತಿಗೆ ಕನ್ನಡಿ ಹಿಡ್ದುಟ್ಟು. ಕೊಡಗ್‌ನ ಗೌಡರಾದ ಗುಡ್ಡೆಮನೆ ಅಪ್ಪಯ್ಯ ಕೊಡಗ್‌ಂದ ಸುಳ್ಯಕ್ಕೆ ಹೋದ ವೀರ್‌ಲ್ಲಿ ಪ್ರಮುಖರ್. ಇವರ ತಮ್ಮ ತಮ್ಮಯ್ಯನು ದಂಗೆಲಿ ಸೇರಿ ಬ್ರಿಟಿಷರಿಗೆ ದಿಗಲ್ ಹುಟ್ಟಿಸಿದರ್‌ನ ನೋಡ್ರೆ ಭಾರತ ದೇಶಲಿ 'ಅಮರ ಸುಳ್ಯದಂಗೆ' ಯಂತ ಮುಖ್ಯ (ಪ್ರಮುಖ) ಸ್ವಾತಂತ್ರ್ಯ ಸಂಗ್ರಾಮದ ಘಟನೆ ಮತ್ತೊಂದು ಇಲ್ಲೆತ್ತೇಳಕ್. ಗೌಡರ ಪರ ಸ್ವಾತಂತ್ರ್ಯ ಸಂಗ್ರಾಮಲಿ ಹೋರಾಡಿದ ಇನ್ನೊಬ್ಬ ವ್ಯಕ್ತಿತ್ತೇಳ್‌ರೆ ಪೂಜಾರಿ ಮನೆ ಎಸ್ ರಾಮಪ್ಪ (ಮೇಕೇರಿ).

ಗೌಡರ್ ಸರ್ವ ಬಗೆಯೂ ಕೊಡಗ್‌ಲ್ಲಿ ಪ್ರಭಾವ ಬೀರಿಯಳೋ. ರೈತನಾಗಿ, ಕಠಿಣ ಶ್ರಮಗಾರರಾಗಿ, ವೀರಯೋಧರಾಗಿ, ಸರ್ಕಾರಿ ಸೇವೆಲಿ, ರಾಜಕಾರಣಿಯಾಗಿ ಬೇರೆ ಬೇರೆ ಬಗೆಯೂ ಗೌಡರ್ ಕೀರ್ತಿ ಶಾಲಿಗಳಾಗಿ ಒಳೊ. ಕೆಲವು ಪ್ರಭಾವ ಬೀರ್ದ ಗೌಡರ್ಲಿ ಇವು ಮುಖ್ಯರಾಗಿ ಒಳೋ. ನಿಡ್ಯಮಲೆ ಮುದ್ದಪ್ಪ ಜಡ್ಜ್, ಮೇಜರ್ ಶಿರಕಜೆ ರಾಮಪ್ಪ, ಕರ್ನಲ್ ಕೆದಂಬಾಡಿ ಅಯ್ಯಪ್ಪ , ಪೂಜಾರಿ ಮನೆ ಮೊಣ್ಣಪ್ಪ (ಬೆಂಗಳೂರು ಗೌಡ ಸಮಾಜ ಮಾಜೀ ಅಧ್ಯಕ್ಷ) ಗುಡ್ಡೆಮನೆ ಅಪ್ಪಯ್ಯಗೌಡ (ಅಮರ ಸುಳ್ಯದಂಗೆ ವೀರ) ಗುಡ್ಡೆಮನೆ ತಮ್ಮಯ್ಯ (ಅಮರ ಸುಳ್ಯದಂಗೆ 1837 ರ ವೀರ) ಬಂಡೋಡಿ ಲಿಂಗಪ್ಪ, ಕೋಚನ ಸಣ್ಣಯ್ಯ, ಬಳ್ಳಡ್ಕ ದೇವಪ್ಪ, ಕೆದಂಬಾಡಿ

ಸುಬ್ರಾಯ, ನಿಡ್ಯಮಲೆ ಸೋಮಣ್ಣ (1952ರಲ್ಲಿ ಕೊಡಗು ಲೋಕಸಭಾ ಸದಸ್ಯ,) ಕೋರನ ದೇವಯ್ಯ(ಕೊಡಗು ವಿಧಾನ ಸಭೆಯ ಉಪಾಧ್ಯಕ್ಷ,) ಕುಂಬುಗೌಡನ ಕುಶಾಲಪ್ಪ, ಶಿರಕಜೆ ಪೊನ್ನಪ್ಪ, ಚೆರಿಯಮನೆ ಕುಶಾಲಪ್ಪ, ತೆಕ್ಕಡೆ ಕಾಳಪ್ಪ, ಕೋಚನ ಸುಬ್ಬಯ್ಯ, ತೆಕ್ಕಡೆ ಸುಬ್ಬಯ್ಯ, ('ಕೊಡಗು' ಪತ್ರಿಕೆಯ ಸದಸ್ಯ) ಪೂಜಾರಿರ ರಾಮಪ್ಪ, ಕೋಚನ ಅಪ್ಪಯ್ಯ, ಕೆದಂಬಾಡಿ ಗಣಪತಿ , ಚೆಟ್ಟಿಮಾಡ ಚಿಣ್ಣಪ್ಪ, ಚೆರಿಯಮನೆ ಪೊನ್ನಪ್ಪ (ಗೋವ ವಿಮೋಚನೆ) ಮೂಟೇರ ಅಣ್ಣಯ್ಯ, ಯಂಕನ ತಿಮ್ಮಯ್ಯ, ಕೋರನ ಮಾದಯ್ಯ ಪೊಡನೋಳಂಡ್ರ ಐಯ್ಯಣ್ಣ, ಕರ್ಣಯ್ಯನ ಕರುಂಬಯ್ಯ, ಪಟ್ಟಡ ಮಂದಣ್ಣ, ತೆಕ್ಕಡೆ ಆನಂದಯ್ಯ, ನಂಗಾರು ಅಣ್ಣಯ್ಯ, ಚೆಂಡಿರ ಬೆಳ್ಯಪ್ಪ, ಪೇರಿಯನ ಪೂವಯ್ಯ,ದಂಬೆಕೋಡಿ ಸುಬ್ರಾಯ, ಹೊಸೂರು ಕೆ. ಸೀತಾರಾಮ (ಏಷ್ಯಾಡ್‌ಲಿ ಕಂಚಿನ ಪದಕ) ಮುಂತಾದವು.

ಹಂಗೆ ಗೌಡರ್ ವಿದ್ಯಾಭಿವೃದ್ಧಿ ಸಂಘನ 1908ರಲ್ಲಿ ಸ್ಥಾಪನೆ ಮಾಡಿ ಗೌಡ ಜನಾಂಗದ ಶ್ರೇಯೋಭಿವೃದ್ಧಿಗೆ ಶ್ರಮಿಸುತ್ತಾ ಬಂದೋ. ಗೌಡ ಸಮಾಜ ಸುರು ಆದ ಮೇಲೆ ಗೌಡರ ಪ್ರಭಾವ ಹೆಚ್ಚಾಗ್ತಾ ಬಂದುಟ್ಟು, ಗೌಡರ ರಾಜಕೀಯ ಪ್ರಭಾವ ಕೊಡಗ್‌ನ ರಾಜಕೀಯ ಕ್ಷೇತ್ರಲಿ ಗೌಡರ್ ಮುಖ್ಯ ಪಾತ್ರ ವಹಿಸಳೋ. ಗೌಡರ್ ಹೊರಗಿನ ಗೌಡರಲಿ ಸಂಬಂಧಿಕರಾಗಿರುವದರ್‌ಂದ ಕರ್ನಾಟಕ ರಾಜ್ಯಲೇ ಭಾರೀ ಪ್ರಭಾವ ಬೀರ್‌ದವರಾಗ್ಯೊಳೋ

ಸ್ವಾತಂತ್ರ್ಯ ಪೂರ್ವಲ್ಲೇ ಗೌಡರ್ ರಾಜಕೀಯಲಿ ಪದಾರ್ಪಣೆ ಮಾಡಿಕ್ಕೆ ಸುರು ಮಾಡಿಯಳೋ ನಿಡ್ಯಮಲೆ ಸೋಮಣ್ಣನವು 1952ರಲ್ಲಿ ಲೋಕ ಸಭಾ ಸದಸ್ಯರಾಗಿಯೂ,ಕೋರನ ದೇವಯ್ಯವು ವಿಧಾನ ಸಭಾ ಉಪಸಭಾಪತಿ ಆಗಿಯೂ ಸೇವೆ ಮಾಡಿಯಾಳೊ ಕೊಡಗು 'ಸಿ' ಪ್ರಾಂತ್ಯ ಆಗಿರಕನ (1952-56) ಗೌಡುಗ ತಮ್ಮ ಪ್ರತಿನಿಧಿಗಳನ್ನು ಹೊಂದಿದ್ದೋ. ಕೋರನ ದೇವಯ್ಯನವು ಕೊಡಗು ವಿಧಾನಸಭೆಯ ಶಾಸಕರಾಗಿದ್ದೋ. ಪಾಂಡನ ಡಿ. ಸುಬ್ಬಯ್ಯನವು ಕೂಡ 1952 ರಲ್ಲಿ ವಿಧಾನಸಭಾ ಸದಸ್ಯರಾಗಿದ್ದೊ. ಮತ್ತೆ ಇತ್ತೀಚಿನ ವರ್ಷಗಳಲ್ಲಿ ದಂಬೆಕೋಡಿ ಚಿಣ್ಣಪ್ಪನವು ಮಡಿಕೇರಿ ಕ್ಷೇತ್ರಂದ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿದ್ದೋ ಮತ್ತೆಸಚಿವರಾಗಿದ್ದೊ.

ಇವಲ್ಲದೆ ಗೌಡಜನಾಂಗಲಿ ಹೆಚ್ಚೆಚ್ಚ್ ರಾಜಕಾಣಿಗ ಒಳೋ. ದಂಬೆಕೋಡಿ ಮಾದಪ್ಪನವು ಕೊಡಗು ಜಿಲ್ಲಾ ಪಂಚಾಯತ್ ಸದಸ್ಯರಾಗಿದ್ದೋ ಮತ್ತೆ ಶಾಸಕರಾಗಿದೊ. ಮುಕ್ಕಾಟಿ ವಾಸುದೇವ ಮಡಿಕೇರಿ ಪುರಸಭೆಯ ಅಧ್ಯಕ್ಷರಾಗಿದ್ದೋ. ಕೋಡಿ ಪೊನ್ನಪ್ಪ, ಹುದೇರಿ ರಾಜೇಂದ್ರ, ಹೊಸೂರು ಜೋಯಪ್ಪ, ಕುಂಬುಗೌಡನ ಉತ್ತಪ್ಪ, ಕೊಂಬಾರನ ಬೋಪಯ್ಯ (ಹಾಲಿ·ವಿರಾಜಪೇಟೆ ಶಾಸಕರು, ವಿಧಾನ ಸಭಾ ಉಪಸಭಾಧ್ಯಕ್ಷರು), ದಿ. ಕೋಡಿ ಲಕ್ಷ್ಮಣ, ಪೇರಿಯನ ಸಾವಿತ್ರಿ (ಜಿಲ್ಲಾ ಪರಿಷತ್ ಸದಸ್ಯೆ) ಹಿಂಗೆ ಇನ್ನೂ ತುಂಬಾ ಜನ ರಾಜಕೀಯ ರಂಗಲಿ ಮುಂದೆ ಬಂದಳೋ.

ಗೌಡರ ಈಗಿನ ಸ್ಥಿತಿ-ಗತಿಗ:

ಕೊಡಗ್‌ನ ಗೌಡರ್ ಪ್ರತಿಯೊಂದು ಹಂತಲಿ ಪ್ರಭಾವ ಬೀರಿಯೊಳೊ. 'ಜಮ್ಮ ಜಹಾಗೀರ್' ಹಿಂಗೆ ತುಂಬಾ ಹಿಂದೆಂದ ಭೂ ಹಿಡುವಳಿನ ಹೊಂದಿಕಂಡ್ ಬಂದೊಳೊ. ಅಲ್ಲದೆ ಗೌಡರಲ್ಲಿ ಶ್ರೀಮಂತರೊಳೊ, ಅತೀ ಬಡವು ಒಳೊ. ಗೌಡ ಜನಾಂಗ ಕಠಿಣ ಶ್ರಮಿಕರ್, ವೀರಾಜಪೇಟೆ ಮತ್ತೆ ಸೋಮವಾರಪೇಟೆ ತಾಲೂಕುಲಿರುವ ಗೌಡರ್ ದೊಡ್ಡ ಹಿಡುವಳಿದಾರರಾಗಿಯೊಳೊ. ಮಡಿಕೇರಿ ತಾಲೂಕುಲಿ ಗೌಡರ್ ಜಾಸ್ತಿ ಇದ್ದರೂ ಹೆಚ್ಚಿನವು ಮಧ್ಯಮ ಹಿಡುವಳಿದಾರಾರಾಗಿಯೊಳೊ.

ಕೊಡಗ್‌ನ ಗೌಡರ್ ಮುಂದುವರಿಯಕೆ ಕಾರಣ ನಿಡ್ಯಮಲೆ ಮುದ್ದಪ್ಪ ಜಡ್ಜ್. ಇವರ ಪ್ರಭಾವಂದ ಗೌಡ

ಜನಾಂಗದ ಸಂಘಟನೆ ನಡ್‌ದ್ ಬೇರೆ ಬೇರೆ ರೀತಿಲಿ ಪ್ರಗತಿನ ಕಾಣ್ತಾ ಒಳೊ. 'ಗೌಡ' ಪದ ಸಂಸ್ಕೃತಂದ ವಿಸ್ತಾರ ಆವುಟ್ಟು. ಸಂಸ್ಕೃತದ 'ಗ್ರಾಮ ವೃದ್ಧ'ಕ್ರಮೇಣ ಬೇರೆ ಬೇರೆ ರೂಪ ಪಡ್ಕಂದ್ 'ಗಾವುಂದ' 'ಗಾವುಂಡ' 'ಗಾವುಡ' 'ಗವುಡ' ಕಡೆಗೆ ಗೌಡತ್ರೇಳಿ ರಚನೆಯಾಗಿಟ್ಟು.

'ಊರಿಗೊಬ್ಬ ಗೌಡ, ದೇಶಕೊಬ್ಬ ದೊರೆ' ಊರ್‍ನ ಗೌಡತೇಳಿರೆ ಮುಖ್ಯಸ್ಥತ್ತ ಆದೆ. ಈ ಮುಖ್ಯಸ್ಥರ ವಂಶನ ಗೌಡರ್‌ತ್ತೇಳಿ ಕರಿಯಕ್ಕೆ ಸುರು ಆಗಿರೊಕು. ಗೌಡರ ಪ್ರಸ್ತಾಪ'ನಾಣ್ಣುಡಿ'ಂದ ಸುರು ಆಗಿರ್‍ದರ್‌ಂದ ಗೌಡರ್ ಪುರಾತನ ಕಾಲಂದೆ ವಾಸ ಮಾಡಿಕಂಡ್ ಇದ್ದೋತ್ತಾ ಗೊತ್ತಾದೆ. ಗೌಡರಿಗೆ ಮನೆತನದ ಹೆಸುರುಟ್ಟು. ಹಂಗೆ ಗೌಡರ ಭಾಷೆ ಅರೆ ಭಾಷೆಯಾಗಿಟ್ಟು. ಗೌಡರ್ ಕಾವೇರಿಯಮ್ಮ ಮೇಲೆ ಭಕ್ತಿಮಡ್ಗಿ ಕಷ್ಟಸುಖಗಳ್ಲಿ ಕಾವೇರಮ್ಮನಲ್ಲಿಗೆ ಹೋಗಿ ಮೀದ್ ಬಂದ್ ಪಾಪ ಕಳ್ಕಂಡವೆಳೆ.

ಹುತ್ತರಿ, ಕೈಲ್ ಮುಹೂರ್ತ, ಕಾವೇರಿ ಸಂಕ್ರಮಣ, ಗ್ರಾಮಹಬ್ಬ, ಯುಗಾದಿ ಎಲ್ಲಾ ಹಬ್ಬನ ಆಚರಿಸಿ ಸಂಭ್ರಮ ಪಟ್ಟವೆ. ಹಿಂಗೆ ಗೌಡರ ಬಗ್ಗೆ ಚರಿತ್ರೆನ ಹುಡುಕಿಕಂಡ್ ಹೋದರೆ ಕೊಡಗ್‌ಲ್ಲಿ ಮಾತ್ರ ಅಲ್ಲ ದೇಶಲೇ ಪ್ರಮುಖರೆನಿಸಿಕಂಡಳೊ.

ಅರೆ ಭಾಷೆ ಕವನ

ಓ ನನ್ನ Uncle

ಓ ನನ್ನ Uncle
ನಿನ್ನ ನೋಟ ತುಂಬಾ Simple
ದಾರಿಲೆಲ್ಲಾ Vinkle
ನಿನ್ನ ಮುಖ ತುಂಬಾ Simple
ಓ ನನ್ನ Uncle
ಮುಂದೆಂದ ನೋಡಿಕೆ Beautiful
ಹಿಂದೆಂದ ನೋಡಿಕೆ Wonderful
ಹಾಡ್ ಕೇಳಿಕೆ Plesureful
ಸಿಟ್ಟ್ ಮಾತ್ರ Thunderful

-ಪಾಂಡನ ಪುಷ್ಪವೇಣಿ,
ಮರಗೋಡು.

ಎಲ್ಲಿದ್ದರೇನ್?

ಎಲ್ಲಿದ್ದರೇನ್ ನಾವ್ ಎಲ್ಲಿದ್ದರೇನ್
ಬೊಂಬಾಯಿ ಕೊಲ್ಕೊತ್ತ ಚೆನ್ನೈ ಡೆಲ್ಲಿ
ಭಾಷೆಗಳ ನಮ್ಮ ಭಾಷೆಗಳ ಬಿತ್ತುವಲ್ಲಿ
ಅರೆಭಾಷೆ ಆಡುವ ಮನಸ್ಸಿರುವಲ್ಲಿ
ಎಲ್ಲಿದ್ದರೇನ್ ನಾವ್ ಎಲ್ಲಿದ್ದರೇನ್

ಕೋಟಿ ಗೌಡರ ಕೂಟ
ಕೂಡಿ ಮನಸ್ಸ್‌ನ ನೋಟ
ಸೇರಿ ಗೌಡರ ಒಕ್ಕೂಟ
ಎಲ್ಲಿದ್ದರೇನ್ ನಾವ್ ಎಲ್ಲಿದ್ದರೇನ್

ಕೊಡಗ್‌ನ ಹೆಸರ್ ಬೆಳೆಸುವಲ್ಲಿ
ನಮ್ಮ ನಮ್ಮದ್‌ತ್ತೇಳುವ ಮನಸ್ಸಿರುವಲ್ಲಿ
ಹುರಿದುಂಬಿಸುವ ಜನರಿರುವಲ್ಲಿ
ಎಲ್ಲಿದ್ದರೇನ್ ನಾವ್ ಎಲ್ಲಿದ್ದರೇನ್
ಮುಂಬಯಿ, ಕೊಲ್ಕೊತ್ತ, ಚೆನ್ನೈ, ಡೆಲ್ಲಿ


- ದೇವಜನ ಚಂಬವ್ವ ಮುತ್ತಪ್ಪ,
ಕಿರುಂದಾಡು.

ಗೌಡ ಜನಾಂಗದ ಸಾಂಸ್ಕೃತಿಕ ಕ್ರಾಂತಿಯ ಕೂಸು
ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ

ಪಟ್ಟಡ ಶಿವಕುಮಾರ್

ಬಹು ವರ್ಷಗಳಿಂದ ಗೌಡ ಜನಾಂಗದವರು ಕೊಡಗಿನಲ್ಲಿ ನೆಲೆಸಿದ್ದಾರೆ. ಕೊಡಗಿನ ನೆಲ, ಜಲ ರಕ್ಷಣೆಗೆ ತಮ್ಮ ಕೊಡುಗೆ ನೀಡಿದ್ದಾರೆ. 1908ರಲ್ಲಿಯೇ 'ಕೊಡಗು ಗೌಡ ವಿದ್ಯಾಸಂಘ'ದಂತಹ ಸಂಘಟನೆ ಕಟ್ಟಿ ಸಂಘಟಿತರಾಗಿದ್ದಾರೆ. ರಾಜಕೀಯದಲ್ಲೂ ಕೆಲವರು ತಮ್ಮ ಛಾಪು ಮೂಡಿಸಿದ್ದಾರೆ. ಆದರೂ ಕೊಡಗಿನಲ್ಲಿ ಗೌಡ ಜನಾಂಗವೆಂಬುದಿದೆ, ಅರೆಭಾಷೆಯಂತಹ ಒಂದು ಭಾಷೆಯನ್ನಾಡುವ, ವಿಶಿಷ್ಟ ಸಂಸ್ಕೃತಿ ಹೊಂದಿರುವ ಜನಾಂಗವೊಂದು ಇದೆ ಎಂದರೆ ಇತ್ತೀಚಿನವರೆಗೂ ಬಹುಜನರು ನಂಬುತ್ತಿರಲಿಲ್ಲ. ನಿಜ ಹೇಳಬೇಕೆಂದರೆ ಗೌಡ ಜನಾಂಗದಲ್ಲಿ ಸಂಘಟನೆಯ ಕ್ರಾಂತಿ ಮೊಳಗಿದ್ದೇ 1997ರಲ್ಲಿ. ತದ ನಂತರ ಕೆಲವೇ ವರ್ಷಗಳಲ್ಲಿ ಗೌಡ ಜನಾಂಗದಲ್ಲಿ ಹಲವಾರು ಸಂಘಟನೆಗಳು ತಲೆಯೆತ್ತಿದ್ದವು. ಆ ಹೊತ್ತಿನಲ್ಲೇ ಸಾಂಸ್ಕೃತಿಕ ಕ್ರಾಂತಿಯ ಕೂಸಾಗಿ ಜನಿಸಿದ್ದು, ಕೊಡಗು ಗೌಡ ಸಾಂಸ್ಕೃತಿಕ ಅಕಾಡೆಮಿ.

1997ರ ಆರಂಭದಲ್ಲೇ 'ಕೊಡಗು-ಸಂಗಾತಿ' ಎಂಬ ಗೌಡ ಮುಖವಾಣಿ, ಗೌಡ ಜನಾಂಗದಲ್ಲಿ ಸಂಚಲನ ಮೂಡಿಸಲಾರಂಭಿಸಿತು. ಅದೇ ವರ್ಷದ ಅಕ್ಟೋಬರ್ ತಿಂಗಳಿನ ಒಂದು ದಿನ ಗೌಡ ಜನಾಂಗದ ಪ್ರಮುಖರು ಸಭೆ ಸೇರಿದ್ದರು. ಎಲ್ಲರ ಮನಸ್ಸಿನಲ್ಲೂ ಅಂದು ಒಂದು ಮಹತ್ವಾಕಾಂಕ್ಷೆ ಇತ್ತು. ಹಿರಿಯರು, ಯುವಕರಿಂದ ಸಮ್ಮಿಳಿತಗೊಂಡಿದ್ದ ಆ ಸಭೆ ಅಂದಿನ ವಿದ್ಯಾಸಂಘದ ಅಧ್ಯಕ್ಷರಾಗಿದ್ದ ಕುಯ್ಯಮುಡಿ ಪೂರ್ಣಯ್ಯ ನವರ ಅಧ್ಯಕ್ಷತೆಯಲ್ಲಿ ಜರುಗಿತು. ಆ ಸಭೆ ಅಕಾಡೆಮಿಯ



ಸ್ಥಾಪನೆಗೆ ನಾಂದಿ ಹಾಡಿತು. ಆದರೆ ಅದರ ಮುಖಂಡತ್ವಕ್ಕೆ ಹೆಗಲು ಕೊಡುವುದು ಯಾರು? ಎಂಬ ಪ್ರಶ್ನೆ ಮೂಡಿದಾಗ, ಎಲ್ಲರ ದೃಷ್ಟಿ ಹೊರಳಿದ್ದು, ಆ ದಿನಗಳಲ್ಲಿ ರಾಜಕೀಯದಲ್ಲಿ ಪಳಗಿ ಸಂಘಟನಾ ಚತುರನೆನಿಸಿದ ತುಂತಜೆ ಗಣೇಶ್‌ರವರ ಕಡೆಗೆ. ತುಂತಜೆ ಗಣೇಶ್ ಅಧ್ಯಕ್ಷರಾದರು. ಕುಯ್ಯಮುಡಿ ಪೂರ್ಣಯ್ಯನವರು ಗೌರವಾಧ್ಯಕ್ಷರಾದರು. ಗುಡ್ಡೆಮನೆ ರಮೇಶ್ ಉಪಾಧ್ಯಕ್ಷರಾಗಿ, ಕೋಡಿ ಚಂದ್ರಶೇಖರ್ ಕಾರ್ಯದರ್ಶಿಯಾಗಿ ಆಯ್ಕೆಯಾದರು. ಹೀಗೆ ಒಂದು ದೊಡ್ಡ ಉತ್ಸಾಹಿ, ಯುವ ಪಡೆಯೇ ಗೌಡ ಜನಾಂಗದ ಸಂಘಟನೆಗೆ ಸಜ್ಜಾಗಿತ್ತು.

ಸಾಂಸ್ಕೃತಿಕ ಅಕಾಡೆಮಿ ಸಂಘಟನೆಯೊಂದಿಗೆ ಸಂಸ್ಕೃತಿ ಬೆಳೆಸಲು ಮುಂದಾಯಿತು. ಭಾಗಮಂಡಲದಲ್ಲಿ ಬೃಹತ್ ಗೌಡ ಸಮ್ಮೇಳನದ ಯಶಸ್ಸಿನಲ್ಲಿ ಭಾಗವಹಿಸಿತು. ಗೌಡ ಜನಾಂಗಕ್ಕಾಗಿ ಮಡಿಕೇರಿ ಜಿಲ್ಲಾ ಕ್ರೀಡಾಂಗಣದಲ್ಲಿ ಬೃಹತ್ ಕ್ರೀಡೋತ್ಸವವನ್ನು ಹಮ್ಮಿಕೊಂಡಿತು. ಅದಕ್ಕೆ ಸಿಕ್ಕಿದ ಜನಸ್ಪಂದನದಿಂದ ಪ್ರೇರಣೆ

ಪಡೆದ ಅಕಾಡೆಮಿ, ಗೌಡ ಕುಟುಂಬವಾರು ಕ್ರಿಕೆಟ್ ಪಂದ್ಯಾವಳಿ ನಡೆಸಲು ಮುಂದಾಯಿತು. ಪರ್ಲಕೋಟಿ, ದಂಬೆಕೋಡಿ, ಪೇರಿಯನ, ಕುರುಂಜಿ ಕೆದಂಬಾಡಿ ಹೀಗೆ ಬೇರೆ ಬೇರೆ ಕುಟುಂಬಗಳ ಪ್ರಾಯೋಜಕತ್ವದಲ್ಲಿ ಅದ್ದೂರಿಯಾಗಿ ಕ್ರಿಕೆಟ್ ಪಂದ್ಯಾವಳಿ ನಡೆಸಿದ ಪರಿಣಾಮ, ಹಲವಾರು ಕುಟುಂಬಗಳು ಬೆರೆಯಲು, ಒಂದಾಗಿ ಕಲೆತು ಆಡಲು ಅವಕಾಶ ದೊರೆಯಿತು. ಕೆಲವು ಉತ್ತಮ ಆಟಗಾರರು. ಹೊರ ಹೊಮ್ಮಿದರು. ಕೆಲವರು ತೀರ್ಪುಗಾರರಾದರು, ಕೆಲವರು ವೀಕ್ಷಕ ವಿವರಣೆಗಾರರಾದರು. ಒಟ್ಟಿನಲ್ಲಿ ಹಲವು ಪ್ರತಿಭೆಗಳು ಬೆಳಕಿಗೆ ಬರಲು ಪ್ರೇರಣೆ ಸಿಕ್ಕಿತು.

ಕೊಡಗಿನ ಸಂಪ್ರದಾಯದ ಭಾಗವಾದ ಕೆಸರು ಗದ್ದೆ ಕ್ರೀಡಾಕೂಟವನ್ನು ಜನಪ್ರಿಯಗೊಳಿಸಲು ಮತ್ತು ಆ ಮೂಲಕ ಸಂಘಟನೆ ಮಾಡುವ ಉದ್ದೇಶದಿಂದ ಮುತ್ತಾರ್ಮುಡಿಯ ದೇರಜೆ ಕುಟುಂಬಸ್ಥರ ಗದ್ದೆಯಲ್ಲಿ ಕೆಸರು ಗದ್ದೆ ಕ್ರೀಡಾಕೂಟವನ್ನು ಹಮ್ಮಿಕೊಳ್ಳಲಾಯಿತು. ಈ ಕ್ರೀಡಾಕೂಟ ಕೇವಲ ಜನಾಂಗದವರಿಂದ ಮಾತ್ರವಲ್ಲದೆ, ಸಾರ್ವಜನಿಕರಿಂದಲೂ ಪ್ರಶಂಸೆಗೆ ಪಾತ್ರವಾಯಿತು.

ಈ ಆಟದ ಜೊತೆ ಜೊತೆಗೆ ಸಂಸ್ಕೃತಿಯ ಪಾಠವನ್ನು ಮುಂದುವರೆಸಲಾಯಿತು. ಕೊಡಗಿನ ಗೌಡರು ಆಚರಿಸಿಕೊಂಡು ಬರುತ್ತಿದ್ದ ಕೈಲ್‌ಮುಹೂರ್ತ ಹಾಗೂ ಹುತ್ತರಿ ಹಬ್ಬಗಳನ್ನು ಗೌಡ ಸಮಾಜದ ಆವರಣದಲ್ಲಿ ಸಾಮೂಹಿಕವಾಗಿ ಆಚರಿಸಲು ಅಕಾಡೆಮಿ ವ್ಯವಸ್ಥೆ ಮಾಡಿತು. ಪರೋಕ್ಷವಾಗಿ ಗೌಡ ಮಹಿಳಾ ಒಕ್ಕೂಟ, ಅಲ್ಲದೆ ಗೌಡ ಯುವ ಸಂಘಟನೆಗಳ ಸ್ಥಾಪನೆಗೂ ಕಾರಣ ವಾಗಿದೆ.

ಏನೇ ಕಷ್ಟ ಬಂದರೂ 'ಗೌಡ ಸಂಸ್ಕೃತಿ'ಯನ್ನು ಉಳಿಸಿ ಬೆಳೆಸಬೇಕೆನ್ನುವದು ಸಾಂಸ್ಕೃತಿಕ ಅಕಾಡೆಮಿಯ ಇರಾದೆ. ಹಾಗಾಗಿ 'ಅರೆಭಾಷೆ' ರಕ್ಷಣೆಗೆ ಅದು ಕಟಿಬದ್ಧವಾಗಿ ಕೆಲಸ ಮಾಡುತ್ತಿದೆ. ಗೌಡ ಜನಾಂಗದ ಅನನ್ಯತೆಯನ್ನು ಉಳಿಸಿಕೊಳ್ಳಲು ಅದಕ್ಕೆ ಪ್ರತ್ಯೇಕ ಸಮವಸ್ತ್ರಬೇಕೆಂಬ ಭಾವನೆ ಅದರದು. ಜನಾಂಗದ ಕೊನೆಯ ವ್ಯಕ್ತಿಯನ್ನೂ ಸಂಘಟನೆಯಲ್ಲಿ ತೊಡಗಿಸಬೇಕೆಂಬ ಗುರಿಯನ್ನು ಇಟ್ಟುಕೊಂಡಿದೆ. ಈ ಎಲ್ಲಾ ತತ್ವ ಸಿದ್ಧಾಂತಗಳಿಗೆ ಹಲವು ಬಾರಿ ಜನಾಂಗದವರಿಂದಲೇ ವಿರೋಧ ವ್ಯಕ್ತಗೊಂಡರೂ, ಅಕಾಡೆಮಿ ಮಾತ್ರ ತನ್ನ ತತ್ವಕ್ಕೆ ಬದ್ಧವಾಗಿ ನಡೆದು ಕೊಳ್ಳುತ್ತಿದೆ.

ಇಂದು ಬಹುತೇಕ ಕಡೆ ಗೌಡ ಸಮಾಜಗಳು ತಲೆಯೆತ್ತಿವೆ. ಅದರೊಂದಿಗೆ ಹಲವಾರು ಗೌಡ ಸಂಘಟನೆಗಳೂ ಹುಟ್ಟಿಕೊಂಡಿದೆ. ಸಾಂಸ್ಕೃತಿಕ ಅಕಾಡೆಮಿಯಲ್ಲೂ ಆರಂಭದಲ್ಲಿ ಇದ್ದ ಪದಾಧಿಕಾರಿಗಳಲ್ಲಿ ಬಹುತೇಕರು ಈಗ ಹೊರ ಹೋಗಿದ್ದಾರೆ. ಆದರೂ ಸಾಂಸ್ಕೃತಿಕ ಅಕಾಡೆಮಿಯ ಅಧ್ಯಕ್ಷರಾಗಿ ಸುದೀರ್ಘ ಸೇವೆ ಸಲ್ಲಿಸಿದ ತುಂತಜೆ ಗಣೇಶ್‌ರವರು ಈಗಲೂ ಅತ್ಯುತ್ಸಾಹದಿಂದ ಕಾರ್ಯ ಮಗ್ನರಾಗಿದ್ದಾರೆ. ಕ್ರಿಕೆಟ್ ಪಂದ್ಯವೊಂದರ ವೇಳೆ ಕುಟುಂಬ ತಂಡವೊಂದು ಎಬ್ಬಿಸಿದ ರಾದ್ಧಾಂತ ಅಕಾಡೆಮಿ ಉತ್ಸಾಹವನ್ನು ಸ್ವಲ್ಪ ತಗ್ಗಿಸಿದೆಯೆನ್ನಬಹುದು.

ಒಟ್ಟಿನಲ್ಲಿ ಗೌಡ ಜನಾಂಗ ಇನ್ನೂ ಬೆಳೆಯಬೇಕಿದೆ. ಬೆಳೆದು ಬೆಳಗಬೇಕಿದೆ. ಆದುದರಿಂದ ಅದನ್ನು ಬೆಳೆಸಬೇಕಾದ, ಕೂಸನ್ನು ಬೆಳೆಸುವುದು ಎಲ್ಲರ ಜವಾಬ್ದಾರಿ. ತನ್ನದೇ ಆದ ಆರ್ಥಿಕ ಮೂಲ ಹೊಂದಿರದಿದ್ದರೂ, ಗೌಡ ಸಂಘಟನೆಯಲ್ಲಿ ಅಮೂಲ್ಯ ಕೊಡುಗೆ ನೀಡಿದ ಸಾಂಸ್ಕೃತಿಕ ಅಕಾಡೆಮಿಯನ್ನು ಉಳಿಸಿ ಬೆಳೆಸುವುದು ಎಲ್ಲರ ಹೊಣೆಗಾರಿಕೆಯಾಗಿದೆ.

◆◆◆◆◆

ಗೌಡ ಯುವ ಜನತೆ ಮುಂದಾಳತ್ವ ಹಾಗು ಸಂಘಟನೆ

- ಚಂಡೀರ ಚಿಣ್ಣಪ್ಪ, ತಂದೆ ದಿ. ಚಂಡೀರ ತಿಮ್ಮಯ್ಯ
ಕೊಕೇರಿ ಗ್ರಾಮ, ಚೈಯಂಡಾಣೆ ಅಂಚೆ
ಮಡಿಕೇರಿ ತಾಲೂಕು

ಹೊಸ ಸಹಸ್ರಮಾನದಲ್ಲಿ ಮಾನವನ ಬದುಕು ಹಸನಾಗಬೇಕಿದ್ದಲ್ಲಿ ನಮ್ಮ ಯುವಜನತೆ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ, ವೈಜ್ಞಾನಿಕ, ಶೈಕ್ಷಣಿಕ ಹಾಗೂ ಕ್ರೀಡಾ ಕ್ಷೇತ್ರಗಳಲ್ಲಿ ಸುಸಂಘಟಿತರಾಗಿ ಬದುಕಿನ ಹೊಸ ರೂಪವನ್ನು ಬದಲಾಯಿಸಬೇಕಾಗುತ್ತದೆ. ಈ ಎಲ್ಲಾ ಮೇಲಿನ ವಿಷಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ತನು ಮನದಿಂದ ಸಮರ್ಪಣಾ ಮನೋಭಾವದಿಂದ ಅರ್ಪಣೆ ಮಾಡಿ ಒಂದು ಸಮಾಜದ ಉನ್ನತಿ ಹಾಗೂ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ.

ನಮ್ಮ ಯುವಜನತೆಯ ಸಂಘಟನೆ ಒಂದು ಅಧಮ್ಯ ಚೇತನದ ಉಗಮ ಶಕ್ತಿಯ ಕಣಜವಾಗಿದ್ದು, "ಸಾಧಿಸಿದರೆ ಸಬಳ ನುಂಗಬಹುದು" ಎಂಬ ನಾಣ್ನುಡಿಯಂತೆ ಯಾವ ಕಾರ್ಯವನ್ನಾದರೂ ಸುಲಲಿತವಾಗಿ ಸಾಧಿಸಬಹುದಾಗಿದೆ. ಯುವಕರು ತಮ್ಮ ಮನಸ್ಸಿನ ಅಂತರಾಳದಿಂದ ಸಿಡಿದರೆ, ಕುಟುಂಬ, ಹಳ್ಳಿ, ಸಮಾಜ, ನಾಡು, ರಾಜ್ಯ, ರಾಷ್ಟ್ರ ಹಾಗೂ ವಿಶ್ವವನ್ನು ಗೆಲ್ಲಬಹುದು.

ಅಗಾಧ ಶಕ್ತಿ ಚೈತನ್ಯಶೀಲಸಂಪನ್ನರಾದ ಯುವಕರು ತಮ್ಮ ಅಂತರಾಳವನ್ನು ಅರಿತು ಅದರ ಸದುಪಯೋಗ ಮಾಡಿಕೊಳ್ಳುವ ವೀರಾಗ್ರಣಿಗಳಾದಾಗ ಅವರೆದುರು ನಿಂತಿರುವ ಗುಡ್ಡ ಬೆಟ್ಟದಂತ ಸಮಸ್ಯೆಗಳೆಲ್ಲ ಹುಲ್ಲುಕಡ್ಡಿಯಂತೆ ಹಗುರವಾಗಿ ಪರಿಣಿಮಿಸಿದ ಸಾವಿರಾರು ನಿದರ್ಶನಗಳಿವೆ. ನಮ್ಮ ಮುಂದೆ ಯುವಶಕ್ತಿ ಮಿಂಚುವ ಕೋಲ್ಮಿಂಚೆ ಹೊರತು ಗಾಳಿಗೆ ಸಿಕ್ಕಿದ ಮೇಣದ ಬತ್ತಿಯಲ್ಲ. ಆದುದರಿಂದ ಈ ಮೇಲಿನ ಕೆಲವು ಪ್ರಾಸ್ತಾವಿಕ ಸಾಲುಗಳಿಂದ ಯುವ ಚೈತನ್ಯ ನಮ್ಮ ನಾಡಿನ ಗೌಡ ಜನತೆಯ ಮೌಢ್ಯಗಳನ್ನು ಬಡಿದೋಡಿಸಿ ಮೂಲ ಸಂಘಟನೆಯಿಂದ ಹೊಸ ನಾಡನ್ನು ಕಟ್ಟುವಂತಾಗಬೇಕು.

ಯುವಜನತೆ ಪ್ರತಿ ಒಬ್ಬರು ಕೂಡ ಸಾರ್ವಜನಿಕ ಕ್ಷೇತ್ರದಲ್ಲಿ ಜನ ಸಮುದಾಯಕ್ಕೆ ನಮ್ಮ ಧರ್ಮ, ಸಂಸ್ಕೃತಿ, ಶೈಕ್ಷಣಿಕ, ವೈಜ್ಞಾನಿಕ, ರಾಜಕೀಯ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಸಕ್ರಿಯವಾಗಿ ಭಾಗವಹಿಸಿ ಬಡವ ಬಲ್ಲಿದನೆಂಬ ಬೇಧ ಬಾವ ಇಲ್ಲದೆ ಪರಸ್ಪರ ಸಹೋದರತ್ವದಿಂದ ತಾನು ಪರರಿಗೆ, ಪರರು ತನಗೆ ಎಂಬ ನಾಣ್ನುಡಿಯಂತೆ ಪ್ರೀತಿ ವಿಶ್ವಾಸದಿಂದ ಭಾಗವಹಿಸಬೇಕಾಗುತ್ತದೆ ನಾವು ನಮ್ಮತನ, ಸಮಾಜದ ಅಸ್ತಿತ್ವವನ್ನು ಕಾಪಾಡಿ ತನು, ಮನ ಧನವನ್ನು ಸಮರ್ಪಣಾ ಮನೋಭಾವದಿಂದ ಕೂಡಿಡಬೇಕಾಗುತ್ತದೆ.

ಒಬ್ಬ ಪ್ರಬುದ್ಧ ಯುವಕ ಯುವತಿಯೂ ಕೂಡ ನಮ್ಮ ಸಮಾಜದ ಏಳಿಗೆಗೆ ಚಿಂತನೆ ಮಾಡಬೇಕಾಗಿದೆ. ಇದು ಪ್ರತಿಯೊಬ್ಬರ ಕರ್ತವ್ಯವು ಕೂಡ ಹೌದು. ಯುವಜನತೆ ಯಾವದೇ ಸಂದರ್ಭದಲ್ಲಿ ಸಂಘಟಿತರಾಗಿ ಮುಂದೆ ನಿಂತು ಯಾವದೇ ಕಾರ್ಯಕ್ರಮಗಳಲ್ಲಿ ಸಂಕೋಚ ಇಲ್ಲದೆ ಎದೆಗುಂದದೆ ಧೈರ್ಯದಿಂದ ಮುನ್ನುಗ್ಗಿ ಕಾರ್ಯನಿರತರಾಗಬೇಕಾಗಿದೆ. ಇದು ಅವರ ಅಂತಃರಾಳದಿಂದ ಕರ್ತವ್ಯ ನಿರ್ವಹಿಸಿದಾಗ ಸಮಾಜದ ಏಳಿಗೆ ಸಾಧ್ಯ.

ಸ್ವಾಮಿ ವಿವೇಕಾನಂದರ ವಾಣಿ "ಯುವಕರೆ ಏಳಿ, ಎದ್ದೇಳಿ, ಆತ್ಮಶಕ್ತಿಯಿಂದ ಉತ್ತಮೋತ್ತಮರಾಗಿ ದೈವತ್ವದ

ಗಣಿಯಾಗಿ" ಯುವಕರು ಸಮಾಜದ ಏಳಿಗೆಗಾಗಿ ಮುಂದಾಳತ್ವ ವಹಿಸುವುದು ಸಂಘಟನೆಯ ಅವಶ್ಯಕತೆ. ಯುವಜನತೆ ನಮ್ಮ ಜನಾಂಗದ ಸರ್ವಾಂಗೀಣ ಅಭ್ಯುದಯಕ್ಕೆ ಸುಸಂಘಟಿತ, ದೂರದೃಷ್ಟಿಯಿಂದ ಕೂಡಿದ್ದು, ಪ್ರತಿಯೊಬ್ಬರು ಸೆಟೆದು ನಿಂತು ಕಾರ್ಯಪ್ರವೃರ್ತರಾಗಬೇಕಿದೆ. ನಮ್ಮ ಗ್ರಾಮೀಣ ಪ್ರದೇಶದ ಯುವ ಜನತೆ ಪ್ರತಿಯೊಬ್ಬರಿಗೂ ಅರಿವು ಮೂಡಿಸುವಲ್ಲಿ ಸಂಘಟಿತರಾಗಬೇಕು ಹಾಗೂ ಭಿನ್ನ ಬೇಧವಿಲ್ಲದೆ, ಕಾರ್ಯ ಪ್ರವರ್ತರಾಗಬೇಕಾಗಿದೆ.

ಮೊದಲಾಗಿ ನಮ್ಮ ಯುವ ಜನತೆ ಧಾರ್ಮಿಕ ಕ್ಷೇತ್ರದಲ್ಲಿ ಸಂಘಟನೆಯ ಅರಿವು ಮೂಡಿಸಬೇಕಾಗಿದೆ. ನಮ್ಮ ಪೂರ್ವಜರು, ಹಿರಿಯ ಮುತ್ಸದ್ದಿಗಳು, ನಡೆದುಕೊಂಡು ಬರುತ್ತಿದ್ದ ಪದ್ಧತಿ ಸಂಸ್ಕಾರಗಳನ್ನು ತಿಳಿದುಕೊಂಡು ಅದನ್ನು ಅನೂಚಾನವಾಗಿ ನಡೆಸಿಕೊಂಡು ಬರುವುದು, ಪಾಲನೆ ಮಾಡುವುದು ಪೂರಕವಾಗಿ ಪಾಲಿಸಿಕೊಂಡು ಬರುವಂತೆ ಮಾಡುವುದು ಆಗಿದೆ.

ಮುಖ್ಯವಾಗಿ ನಮ್ಮ ಸಂಸ್ಕೃತಿ ಸಂಪ್ರದಾಯ ನಮ್ಮ ಪರಂಪರೆಯನ್ನು ಬಿಂಬಿಸುತ್ತದೆ. ಈ ನಮ್ಮ ಶ್ರೇಷ್ಠ ಸಂಸ್ಕೃತಿಯನ್ನು ಗೌರವದಿಂದ, ಆಸೆ ಆಮಿಷ, ಒತ್ತಡ , ಕೀಳರಿಮೆ ಬಿಟ್ಟು ಸರ್ವ ಜನಾಂಗ ಬಾಂಧವರು ಹಿರಿಯರ, ನುರಿತವರ ಪ್ರಜ್ಞಾವಂತ ಮಾರ್ಗದರ್ಶನದಲ್ಲಿ ನಡೆಸಿಕೊಂಡು ಹೋಗಲು ಅನುಮಾಡುವುದು ನಮ್ಮೆಲ್ಲರ ಕರ್ತವ್ಯ ಆಗಿದೆ. ಈ ವಿಚಾರವಾಗಿ ನಮ್ಮ ಯುವ ಸಂಘಟನೆಗಳು ಮಹಿಳಾ ಸೇವಾ ಸಮಾಜಗಳು ಇನ್ನಿತರ ಸಂಘಟನೆಗಳ ಮಾರ್ಗದರ್ಶನ, ಸಹಕಾರದಿಂದ ಅರಿವು ಮೂಡಿಸಿ ಸಂಸ್ಕೃತಿಯನ್ನು ಎತ್ತಿ ಹಿಡಿಯುವುದು ನಮ್ಮಆದ್ಯ ಕರ್ತವ್ಯ ಆಗಿದೆ.

ಮುಂದುವರಿಯುತ್ತಾ ನಮ್ಮ ಸಾಮಾಜಿಕ ಕ್ಷೇತ್ರ ಚಟುವಟಿಕೆಗಳು, ಸಮಾಜದಲ್ಲಿ ದಿನ ನಿತ್ಯದ ಚಟುವಟಿಕೆಗಳನ್ನು ಗಮನಿಸಿ ಸಮಾಜ ಬಾಂಧವರಿಗೆ ಸಕಾಲಕ್ಕೆ ಯಾವುದೇ ಕ್ಷೇತ್ರದ ಕಾರ್ಯ ಚಟುವಟಿಕೆಗಳ ಅರಿವು ಮೂಡಿಸಿ ಕಾರ್ಯಪ್ರವರ್ತರಾಗುವಂತೆ ಮಾಡುವುದು ಸರ್ಕಾರದ ಹಲವು ಹತ್ತು ಕಾರ್ಯಕ್ರಮಗಳು ಮುಖ್ಯವಾಗಿ ಹಳ್ಳಿಯ ಜನರಿಗೆ ಕೃಷಿ , ಆರೋಗ್ಯ, ಶಿಕ್ಷಣ , ಸಂಘ-ಸಂಸ್ಥೆಗಳ ಕಾರ್ಯ ಚಟುವಟಿಕೆ ಮಾಹಿತಿ ನೀಡುವುದು ಇಂತ ಜನಪರ ಪ್ರಗತಿ ಕೆಲಸಗಳ ಮಾಹಿತಿ ನೀಡುವುದು ಇತ್ಯಾದಿ ಅರಿವು ಮೂಡಿಸಬಹುದಾಗಿದೆ. ಪ್ರತಿಯೊಬ್ಬರಿಗೂ ಸಾಮಾಜಿಕ ಪ್ರಜ್ಞೆ ಮೂಡಿಸುವಲ್ಲಿ ಪ್ರಯತ್ನಿಸುವುದು, ನಮ್ಮ ಸಮಾಜದಲ್ಲಿ ಪ್ರತಿಭೆ ಇರತಕ್ಕವರನ್ನು ಗುರುತಿಸಿ ಅವರಿಗೆ ಅವಕಾಶಗಳನ್ನು ಒದಗಿಸಿಕೊಟ್ಟು, ಜನಾಂಗದ ಏಳಿಗೆಗೆ ಶ್ರಮಿಸಲು ಅವಕಾಶ ಮಾಡಿಕೊಡುವಂತಾಗಬೇಕು. ಅವರಿಗೆ ಚೇತನ ಚೈತನ್ಯ ನೀಡಬೇಕಾಗಿದೆ.

ವಿಚಾರಗಳನ್ನು ಮುಂದಿಡುತ್ತಾ, ನಮ್ಮ ಭಾರತ ದೇಶವು ಜನಸಂಖ್ಯೆಯಲ್ಲಿ ಅತಿ ಹೆಚ್ಚಿನದಾಗಿದ್ದು, ಪ್ರಜಾಪ್ರಭುತ್ವದ ಆಡಳಿತದಲ್ಲಿದೆ. ಭಿನ್ನ ಭಿನ್ನ ಜಾತಿ ಧರ್ಮಗಳಿಂದ ಕೂಡಿದ ರಾಜಕೀಯ ರಂಗ ಪ್ರಮುಖ ಪಾತ್ರ ವಹಿಸುತ್ತದೆ. ಗ್ರಾಮೀಣ ಹಂತದಿಂದ ಹಿಡಿದು ತಾಲೂಕು, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರ ಮಟ್ಟದವರೆವಿಗೆ ರಾಜಕೀಯ ರಂಗವೆ ಮುಖ್ಯವಾಹಿನಿಯಲ್ಲಿದ್ದು, ದೇಶದ ಚುಕ್ಕಾಣಿ ಹಿಡಿದು ಕಾರ್ಯಪ್ರವರ್ತವಾಗಿದೆ. ಹಲವಾರು ಸಂಘಟನೆಗಳು ತಮ್ಮ ಪ್ರಾಬಲ್ಯದಿಂದ ದೇಶದ ಆಡಳಿತ ನಡಸುತ್ತಿದೆ. ಈ ಕ್ಷೇತ್ರದಲ್ಲಿ ನಮ್ಮ ಯುವಕರಿಗೆ ದೇಶ ಸೇವೆಯಲ್ಲಿ ತೊಡಗಿಸಿಕೊಳ್ಳಲು ಹತ್ತು ಹಲವು ಅವಕಾಶಗಳಿರುತ್ತವೆ. ಇಲ್ಲಿ ನಾಯಕತ್ವ ಗುಣವನ್ನು ಬೆಳೆಸಿಕೊಂಡು ಸೇವೆಯಲ್ಲಿ ತೊಡಗಿಸಿಕೊಂಡು ಸಮಾಜದ ಏಳಿಗೆಗೆ ಸಮರ್ಪಿಸಿಕೊಳ್ಳಬಹುದು.

ಸಂಘಟನೆಗೆ, ನಾಯಕತ್ವವನ್ನು ರೂಪಿಸಲು ಅವಕಾಶವನ್ನು ಪಡೆಯಲು ಹಾಗೂ ವೈಯಕ್ತಿಕ ಪ್ರತಿಭೆಯನ್ನು ಬೆಳೆಸಬಹುದಾದ ಎಲ್ಲಾ ಗುಂಪಿನ ಅಚ್ಚುಮೆಚ್ಚಿನ ಕ್ಷೇತ್ರ ಕ್ರೀಡಾ ಚಟುವಟಿಕೆ. ಕ್ರೀಡೆ ಎಲ್ಲಾ ವರ್ಗದ ಜನ ಸಮೂದಾಯಕ್ಕೆ, ಮನರಂಜನಾ ಚಟುವಟಿಕೆಯಾಗಿದ್ದು, ಸರ್ವರೂ ಮೆಚ್ಚತಕ್ಕ ಕಾರ್ಯಕ್ಷೇತ್ರ. ನಮ್ಮ ಯುವ ಪೀಳಿಗೆ ಅವಕಾಶ ಮಾಡಿಕೊಂಡು ದೈನಂದಿನ ಚಟುವಟಿಕೆಯಲ್ಲಿ ಒಂದಿಷ್ಟು ಸಮಯ ಕ್ರೀಡಾ ಚಟುವಟಿಕೆಯಲ್ಲಿ ಭಾಗವಹಿಸುವುದು ತುಂಬಾ ಅವಶ್ಯಕ. ಇತ್ತೀಚಿನ ದಿನಗಳಲ್ಲಿ ತಮ್ಮ ಸ್ವಯಂ ಪ್ರೇರೇಪಣೆ ಹಾಗೂ ಶಕ್ತಿಯಿಂದ ಕೆಲವಾರು ಯುವಕ ಯುವತಿಯರು ಉತ್ತಮ ಪ್ರದರ್ಶನ ನೀಡಿ ಗೌಡ ಜನಾಂಗಕ್ಕೆ ಕೀರ್ತಿ ತಂದಿರುವುದು ಸಂತೋಷದ ವಿಚಾರ. ಹಿರಿಯರು, ಕಿರಿಯರಿಗೆ ಹುರಿದುಂಬಿಸಿ ಅವಕಾಶ ಮಾಡಿ ನಮ್ಮ ಜನಾಂಗದ ಪಟುಗಳಿಗೆ ಪ್ರೋತ್ಸಾಹ ನೀಡಬೇಕಾಗಿದೆ.ಸಮಾಜದ ಯುವ ಸಂಘಟನೆಗಳು ಎಚ್ಚೆದ್ದು, ಸರಿಯಾದ ಪಥದಲ್ಲಿ ಸಾಗಲು ಆರ್ಥಿಕ ಸಹಾಯ, ಮಾರ್ಗದರ್ಶನ ಸರಕಾರದ ಸೌಲಭ್ಯ ಒದಗಿಸುವಲ್ಲಿ ಸಹಕಾರಿಯಾಗಬೇಕು. ನಮ್ಮ ಜನಾಂಗ ಸರ್ವಾಂಗೀಣ ಸುಂದರವಾಗಿ ಅಭಿವೃದ್ಧಿ ಪಥದಲ್ಲಿ ಸಾಗಲು ಹಿರಿಯರ ಆಶೀರ್ವಾದ ಶುಭಾಶಯ ಬೇಕಾಗಿದೆ.

ನಮ್ಮ ಕೊಡಗು ಗೌಡ ವಿದ್ಯಾಸಂಘ, ಶತಮಾನವನ್ನು ಕಂಡು, ಶತಮಾನೋತ್ಸವ ಆಚರಿಸುವುದು ತುಂಬಾ ಸಂತಸವನ್ನು ತಂದಿದೆ. ನಮ್ಮ ಜನಾಂಗದ ಅಂದಿನ ಮುತ್ಸದ್ಧಿಗಳು ಹಾಕಿದ ಅಡಿಪಾಯವನ್ನು ಭದ್ರ ಬುನಾದಿಯೊಂದಿಗೆ ಸಮಾಜದ ಏಳಿಗೆಗಾಗಿ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿಸಿ ಉತ್ತಮ ಕಾರ್ಯ ಮುನ್ನಡೆಸಬೇಕಾಗಿದೆ. ಅವಕಾಶ ಇರುವವರು ತಮ್ಮ ಬಾಳನ್ನು ಹಸನಾಗಿಸುವಲ್ಲಿ ಅದರದೇ ಆದ ವ್ಯವಸ್ಥೆ ಇದೆ. ಆದರೆ ಅವಕಾಶ ವಂಚಿತ ನಮ್ಮ ಮುಂದಿನ ಪೀಳಿಗೆಗೆ, ನಮ್ಮ ಸ್ಥಳದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅಗಾಧ ಕೆಲಸ ಆಗಬೇಕಿದೆ. ಈ ತಾಂತ್ರಿಕ ಯುಗದಲ್ಲಿ, ನಮಗೆ ಹೆಚ್ಚಿನ ಶಿಕ್ಷಣ ಪಡೆಯಲು ನಮ್ಮ ಸ್ಥಳದಲ್ಲಿ ತಾಂತ್ರಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣದ ಅವಶ್ಯಕತೆ ಇದ್ದು, ಅದನ್ನು ಶಿಕ್ಷಣ ತಜ್ಞರ, ಯುವ ಸಂಘಟಕರ, ಮುಂದಾಳುಗಳ ಪರಿಶ್ರಮದಿಂದ ಮುಂದಿನ ದ್ವಿಶತಕದೊಳಗೆ ಪೂರೈಸುವದರೊಂದಿಗೆ ನಮ್ಮ ಸಮಾಜ ಬಂಧುಗಳ ಅವಕಾಶ ವಂಚಿತರಿಗೆ ಅವಶ್ಯ ಮಾಡಬೇಕಿದೆ. ಅದಕ್ಕಾಗಿ ಸರ್ವರೂ ಸೊಂಟಕಟ್ಟಿ ಸೆಟೆದು ನಿಲ್ಲಬೇಕಿದೆ. ಇಂದು ಅದಕ್ಕಾಗಿ ಪ್ರತಿಜ್ಞೆ ಸ್ವೀಕರಿಸಿ ನಮ್ಮ ಯುವ ಮುಂದಾಳುಗಳು ಶ್ರಮಿಸಬೇಕಿದೆ.

ಸ್ವಾಮಿ ವಿವೇಕಾನಂದರ ದಶೋಕ್ತಿಗಳು

- ❋ ಸಾಹಸಿಯಾಗು — *ಆದರೆ ಹಗೆತನ ಬೇಡ*
- ❋ ಸೇವೆ ಮಾಡು — *ಆದರೆ ಸ್ವಾರ್ಥಿ ಆಗಬೇಡ*
- ❋ ವಿಧೇಯನಾಗು — *ಆದರೆ ಗುಲಾಮನಾಗಬೇಡ*
- ❋ ಕರುಣೆ ತೋರಿಸು — *ಆದರೆ ಮೋಸ ಮಾಡಬೇಡ*
- ❋ ಪ್ರೀತಿಸು — *ಆದರೆ ವ್ಯಾಮೋಹಿತ ನಾಗಬೇಡ*
- ❋ ಮಿತ ವ್ಯಯಿಯಾಗು — *ಆದರೆ ಜಿಪುಣನಾಗಬೇಡ*
- ❋ ದಾನಿಯಾಗು — *ಆದರೆ ದರಿದ್ರನಾಗಬೇಡ*
- ❋ ಉತ್ಸಾಹಿಯಾಗು — *ಆದರೆ ದುಡುಕಬೇಡ*
- ❋ ಮನುಷ್ಯನ ನಡುವೆ ಗೋಡೆ ಕಟ್ಟಬೇಡ — *ಸೇತುವೆಯನ್ನು ನಿರ್ಮಿಸು*
- ❋ ಏಳಿ, ಎದ್ದೇಳಿ... — *ಗುರಿಮುಟ್ಟುವ ತನಕ ನಿಲ್ಲದಿರಿ.*

ಸ್ವ-ಸಹಾಯ

ಹಿಂದೆ ಸಾಮಾನ್ಯವಾಗಿ ಆದಾಯದಿಂದ ಖರ್ಚನ್ನು ಕಳೆದು ಉಳಿದದ್ದನ್ನು ಉಳಿತಾಯ ಮಾಡುತ್ತಿದ್ದರು. ಸ್ವಸಹಾಯ ಸಂಘ ರಚನೆಯಾದಲ್ಲಿ ಆದಾಯದಿಂದ ಉಳಿತಾಯವನ್ನು ಕಳೆದು ಉಳಿದದ್ದನ್ನು ಖರ್ಚು ಮಾಡುತ್ತಾರೆ

-ಉಳುವಾರನ ಸುರೇಶ್,

ಮ್ಯಾನೇಜರ್ ಸಿಂಡಿಕೇಟ್ ಬ್ಯಾಂಕ್,

ನಂ. 36 ಕಾವೇರಿ ಲೇಔಟ್, ಮಡಿಕೇರಿ.

ಕೊಡಗು ಗೌಡ ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಗುಣಮಟ್ಟದಲ್ಲಿ ಹಿಂದಿನ ತಲೆಮಾರಿಗೆ ಹೋಲಿಸಿದಲ್ಲಿ ಸಾಕಷ್ಟು ಸುಧಾರಣೆಗಳಾಗಿವೆ. ಇಂದು ಕೊಡಗು ಗೌಡ ಮಹಿಳೆಯರು ಬೇರೆ ಜನಾಂಗದವರೊಡನೆ ಹೋಲಿಸಿಕೊಂಡಲ್ಲಿ ಅವರು ಸಾಕಷ್ಟು ಸಲಬರಾಗಿದ್ದಾರೆ ಮತ್ತು ಪ್ರಗತಿಯತ್ತ ಮುನ್ನುಗ್ಗುತ್ತಿದ್ದಾರೆ. ಈ ನಿಟ್ಟಿನಲ್ಲಿ ಗ್ರಾಮೀಣ ಭಾಗದಲ್ಲಿ ಸ್ವಸಹಾಯ ಸಂಘಗಳ ಪಾತ್ರ ಬಹಳ ಮಹತ್ವವನ್ನು ಪಡೆದುಕೊಂಡಿದೆ.

ಸ್ವಸಹಾಯ ಸಂಘ ಸಫಲವಾಗಬೇಕಾದರೆ ಆ ಗುಂಪಿನಲ್ಲಿರುವವರು ಪರಸ್ಪರ ಸಮಾನ ಮನೋಭಾವ ಹೊಂದಿರುವವರಾಗಿರಬೇಕು. ಸಮಾನ ಮನೋಭಾವ ಹೊಂದಲು ಕೆಲವೊಂದು ಕಾರಣಗಳಿರುತ್ತವೆ. ಅವೆಂದರೆ ಸಮಾನವಾಗಿ ಅನುಭವಿಸಿದ ಬಡತನ, ಸಮಾನ ಜೀವನದ ವಾತಾವರಣ, ಒಂದೇ ತರಹದ ಜೀವನ ಮಟ್ಟ, ಒಂದೇ ಜಾತಿ ಅಥವಾ ಮತ, ಒಂದೇ ಪ್ರದೇಶದ ಜನಾಂಗ ಇತ್ಯಾದಿ. ಆದ್ದರಿಂದ ಕೊಡಗಿನ ಪ್ರತಿಯೊಂದು ಹಳ್ಳಿಯಲ್ಲಿರುವ ಗೌಡ ಜನಾಂಗದ ಮಹಿಳೆಯರು ಈವರೆಗೆ ಸ್ವಸಹಾಯ ಸಂಘವನ್ನು ಸ್ಥಾಪಿಸಿಕೊಳ್ಳದೆ ಇದ್ದಲ್ಲಿ ಇನ್ನಾದರೂ ಮುಂದೆ ಬಂದು ಸಂಘಗಳನ್ನು ಸ್ಥಾಪಿಸಿಕೊಂಡಲ್ಲಿ ಇನ್ನಷ್ಟು ಪ್ರಬಲರಾಗಬಹುದು. ಕೊಡಗಿನಲ್ಲಿ 5ಜನ ಸೇರಿಕೊಂಡು ಒಂದು ಸಂಘವನ್ನು ಸ್ಥಾಪಿಸಿದರೂ ಅದನ್ನು ಸರಕಾರ ಮಾನ್ಯ ಮಾಡುತ್ತದೆ. ಬೇರೆ ಜಿಲ್ಲೆಯಲ್ಲಿ ಇದು 10-20 ಜನರಿಂದ ರಚನೆಯಾಗುತ್ತದೆ.

ಸ್ವಸಹಾಯ ಸಂಘವನ್ನು ಆರಂಭಿಸುವ ಮೊದಲು ಗ್ರಾಮದ ಹಿರಿಯರನ್ನು ಅಥವಾ ಮನೆಯ ಪಟ್ಟೆದಾರರನ್ನು ಭೇಟಿ ಮಾಡಿ ಚರ್ಚಿಸಿದ ನಂತರ ಸ್ವಸಹಾಯ ಸಂಘದ ಸದಸ್ಯರ ಸಭೆಯನ್ನು ಕರೆಯಬೇಕು. ಸ್ವಸಹಾಯ ಸಂಘವನ್ನು ಪ್ರಾರಂಭಿಸುವ ಯತ್ನಕ್ಕೆ ಸಹಾಯ ಮಾಡಲು ಹಲವಾರು ಜನರು ಸಹಾಯಕ್ಕೆ ಬರುತ್ತಾರೆ. ಅಂದರೆ, ಬ್ಯಾಂಕುಗಳು, ಮಕ್ಕಳು ಮತ್ತು ಮಹಿಳೆಯರ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಈಗಾಗಲೇ ಚೆನ್ನಾಗಿ ನಡೆಯುತ್ತಿರುವ ಸ್ವಸಹಾಯ ಸಂಘದ ಸದಸ್ಯರು ಇತ್ಯಾದಿ. ಇವರೆಲ್ಲರ ಸಲಹೆಗಳನ್ನು ಪಡೆದುಕೊಳ್ಳಬೇಕಾಗುತ್ತದೆ.

ಸ್ವಸಹಾಯ ಪ್ರಾರಂಭಿಸಲು ಸಂಘದ ಯಾರಾದರೊಬ್ಬ ಸದಸ್ಯೆ ನಾಯಕತ್ವವನ್ನು ವಹಿಸಿಕೊಳ್ಳಬೇಕಾಗುತ್ತದೆ. ಅನಂತರ ಸಂಘದ ನಿರ್ಣಯಗಳನ್ನು ಎಲ್ಲರೂ ಸೇರಿ ತೆಗೆದುಕೊಳ್ಳಬೇಕಾಗುತ್ತದೆ. ಸಂಘದ ಲಾಭವನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು. ಸ್ವಸಹಾಯ ಸಂಘ ಪ್ರಾರಂಭಿಸಿದ ಮಹಿಳೆ ಉಳಿದವರಿಗಿಂತ ಹೆಚ್ಚಿನ ಲಾಭವನ್ನು ಅಪೇಕ್ಷಿಸಬಾರದು. ಕೆಲಸವನ್ನು ಎಲ್ಲರೂ ಹಂಚಿಕೊಳ್ಳಬೇಕು. ಸರದಿಯಂತೆ ಎಲ್ಲರೂ ಕೆಲಸವನ್ನು ಹಂಚಿಕೊಳ್ಳಬೇಕು.

ಒಂದು ಸ್ವಸಹಾಯ ಸಂಘ ಚೆನ್ನಾಗಿ ನಡೆಯಲು ಕೆಲವೊಂದು ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅಂದರೆ ವಾರದ ಒಂದು ದಿನ ನಿಗದಿತ ಸಮಯದಲ್ಲಿ ತಪ್ಪದೆ ಸಭೆ ನಡೆಸಬೇಕಾಗುತ್ತದೆ. ಸಭೆಯಲ್ಲಿ ತಪ್ಪದೆ

ಉಳಿತಾಯ ಮಾಡಬೇಕಾಗುತ್ತದೆ. ಎಲ್ಲರೂ ಸೇರಿ ಒಟ್ಟಾಗಿ ಚರ್ಚಿಸಬೇಕಾಗುತ್ತದೆ. ಸಭೆಯಲ್ಲಿ ತೀರ್ಮಾನಿಸಿದ ವಿಷಯಗಳನ್ನು ಪುಸ್ತಕದಲ್ಲಿ ಬರೆದುಕೊಳ್ಳಬೇಕಾಗುತ್ತದೆ. ಹಾಗೂ ಹಣಕಾಸಿನ ಪ್ರತಿಯೊಂದು ವ್ಯವಹಾರವನ್ನು ದಾಖಲು ಮಾಡಬೇಕಾಗುತ್ತದೆ. ಆದ್ದರಿಂದ ಸ್ವಸಹಾಯ ಸಂಘಗಳು ಜನರ ಜೀವನ ಮಟ್ಟವನ್ನು ಅವರಿಗೆ ಅರಿವಿಲ್ಲದೆಯೇ ಮೇಲೆ ಎತ್ತುತ್ತದೆ. ಉಳಿತಾಯದಿಂದ ಸದಸ್ಯರಲ್ಲಿ ದೊಡ್ಡ ಮೊತ್ತದ ಹಣಕಾಸಿನ ವ್ಯವಹಾರ ಬೆಳೆಯುತ್ತದೆ. ಇದು ಮುಂದೆ ಬ್ಯಾಂಕ್ ಸಾಲದ ಹಣವನ್ನು ಸರಿಯಾಗಿ ವಿನಿಯೋಗಿಸಿಕೊಳ್ಳಲು ಸಹಾಯ ಮಾಡುತ್ತದೆ. ಉಳಿತಾಯ ಮೊದಲು -ಸಾಲ ನಂತರ ಎನ್ನುವುದನ್ನು ಸದಸ್ಯರು ಅನುಸರಿಸಬೇಕು.

ಸಂಘದ ಕಾರ್ಯ ಚಟುವಟಿಕೆಗಳನ್ನು ದಾಖಲಿಸಿಕೊಂಡು ಕೆಲವೊಂದು ಪುಸ್ತಕಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅವೆಂದರೆ ನಡವಳಿಕೆಗಳ ಪುಸ್ತಕ, ಉಳಿತಾಯ ಪುಸ್ತಕ, ಸಾಲದ ಪುಸ್ತಕ, ವಾರದ ಪುಸ್ತಕ, ಬ್ಯಾಂಕ್ ಪಾಸ್ ಪುಸ್ತಕ, ಹಾಜರಾತಿ ಪುಸ್ತಕ ಮುಂತಾದವುಗಳು. ಬ್ಯಾಂಕ್‌ಗಳು ಸ್ವಸಹಾಯ ಸಂಘಗಳಿಗೆ ಸಾಲ ಕೊಡಲು ಹಿಂದೆ ಮುಂದೆ ನೋಡುವುದಿಲ್ಲ. ಯಾಕೆಂದರೆ ಕಳೆದ 10 ವರ್ಷಗಳಲ್ಲಿ ಸಾಲ ಮರುಪಾವತಿ ಶೇ. 95ಕ್ಕಿಂತಲೂ ಮೇಲೆ ಇದೆ. ಸರಕಾರವೂ ಹಲವಾರು ಸಬ್ಸಿಡಿ ಯೋಜನೆಗಳನ್ನು ಸ್ವಸಹಾಯ ಸಂಘಗಳಿಗೆ ನೀಡುತ್ತಾ ಬಂದಿದೆ. ಒಂದು ಸ್ವಸಹಾಯ ಸಂಘದಲ್ಲಿ 5ಜನರಿದ್ದರೆ ಅದರ ಬಲ 5x1=5 ಆಗುವುದಿಲ್ಲ ಬದಲಾಗಿ 5x5x5x5x5 =3125 ಆಗುತ್ತದೆ.

ಕೊಡಗಿನ ಹಳ್ಳಿಗಳಲ್ಲಿರುವ ನಮ್ಮ ಜನಾಂಗದ ಎಲ್ಲಾ ಮಹಿಳೆಯರು ಇತ್ತ ಗಮನ ಹರಿಸಿ ಸ್ವಸಹಾಯ ಸಂಘದಿಂದ ಸಿಗಬಹುದಾದ ಉತ್ತಮ ಫಲವನ್ನು ಪಡೆದುದೇ ಆದರೆ ನಮ್ಮ ಜನಾಂಗ ಇನ್ನಷ್ಟು ಅಭಿವೃದ್ಧಿ ಹೊಂದುವುದರಲ್ಲಿ ಯಾವದೇ ಸಂಶಯವಿಲ್ಲ. ಸ್ವಸಹಾಯ ಸಂಘಗಳನ್ನು ಪುರುಷರು ಕೂಡ ಸ್ಥಾಪಿಸಬಹುದು. ಆದರೆ ನಾನು ಮಹಿಳೆಯರ ಸ್ವಸಹಾಯದ ಬಗ್ಗೆ ತಿಳಿಸಿದುದ್ದರ ಉದ್ದೇಶ ಮಹಿಳೆಯರು ಪುರುಷರಿಗಿಂತ ಚೆನ್ನಾಗಿ ಉಳಿತಾಯ ಮಾಡುತ್ತಾರೆ ಮತ್ತು ಸಂಘವನ್ನು ಚೆನ್ನಾಗಿ ನಡೆಸುತ್ತಾ ಬಂದಿದ್ದಾರೆ. ಅಲ್ಲದೆ, ಒಂದು ಮಹಿಳೆ ಅಭಿವೃದ್ಧಿ ಹೊಂದಿದರೆ ಇಡೀ ಸಂಸಾರ ಅಭಿವೃದ್ಧಿಯಾಗುತ್ತದೆ. ಒಂದೊಂದು ಸಂಸಾರ ಅಭಿವೃದ್ಧಿಯಾದರೆ ನಮ್ಮ ಗ್ರಾಮ, ರಾಜ್ಯ, ರಾಷ್ಟ್ರ ಅಭಿವೃದ್ಧಿ ಹೊಂದುವುದರಲ್ಲಿ ಯಾವುದೇ ಸಂಶಯವಿಲ್ಲ. ಆಗ ಗಾಂಧೀಜಿಯವರು ಗ್ರಾಮೀಣ ಭಾರತದ ಬಗ್ಗೆ ಕನಸನ್ನು ಕಂಡಂತೆ ನಮ್ಮ ರಾಷ್ಟ್ರ ರಾಮ ರಾಜ್ಯವಾಗುವುದು.

ಕವನ

ಸಮೀಕರಣದಲ್ಲಿ

ಅಲ್ಲೊಂದು ನೋಟ
ಇಲ್ಲೊಂದು ಭಾವ
ಹೀಗೊಂದು ಹೃದಯ
ಹಾಗೊಂದು ಮನಸು
ಚದುರಿ ಚೆಲ್ಲಿದೆ
ಅಲ್ಲಿ ಇಲ್ಲಿ
ಆಯ್ದುಕೋ ಪ್ರೀತಿಭಾವ,
ಸ್ನೇಹ ಜೀವ, ಒಲವ ಕಾವ!
ಇಲ್ಲಿದೆ ಹಕ್ಕಿ, ಅಲ್ಲಿದೆ ಹೂವು

ಅಲ್ಲೊಂದು ಚಿಗರೆ,
ಇಲ್ಲೊಂದು ಹೊನಲು,
ಮೇಲೊಂದು ಚುಕ್ಕಿ,
ಕೆಳಗಿಹುದು ಬಿಂಬ
ತೆರೆಯಣ್ಣ ಕಾಂಬ ಕಣ್ಣ!
ಒಂದೊಂದು ಹೃದಯ
ಒಂದೊಂದು ಹೂವು
ಮರೆಸೀತು ಮನದ ನೋವು!

ರಚನೆ: ಶ್ರೀಮತಿ ಸುಳ್ಳಕೋಡಿ ಶಿವದೇವಿ ಅವನೀಶ್ಚಂದ್ರ,
ಸ.ಪ.ಪೂ. ಕಾಲೇಜು, ಸೋಮವಾರಪೇಟೆ.

ಪತ್ರಿಕೋದ್ಯಮ



- ಪಟ್ಟಡ ಶೀಲಾಮಣಿ ಪ್ರಭಾಕರ, ಸಂಪಾದಕಿ
ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆ ಮೈಸೂರು

ಪತ್ರಿಕಾ ನಿರ್ವಹಣೆಯೇ ಪತ್ರಿಕೋದ್ಯಮ . ಸುದ್ದಿ ಸಮಾಚಾರ, ವಿಚಾರ ಅಭಿಪ್ರಾಯ ಹಾಗೂ ಜಾಹೀರಾತು ಸಂಗ್ರಹಿಸಿ ಬರೆದು ಸಂಪಾದಿಸಿ ವಿತರಿಸುವ ಕಾರ್ಯವನ್ನು ಪತ್ರಿಕೋದ್ಯಮ ಎಂದು ಕರೆಯಬಹುದು. ಕರ್ನಾಟಕದಲ್ಲಿ ಪತ್ರಿಕೋದ್ಯಮಕ್ಕೆ ಸುಮಾರು 174ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದೆ. ಭಾರತಕ್ಕೆ ವ್ಯಾಪಾರ ನೆಪದಲ್ಲಿ ಬಂದ ಆಂಗ್ಲರು ತಮ್ಮ ಧರ್ಮ ಪ್ರಚಾರವನ್ನು ಆಯಾ ಪ್ರಾಂತ್ಯಗಳಲ್ಲಿ ಪತ್ರಿಕೋದ್ಯಮ ಮೂಲಕ ಮಾಡುತ್ತಾ ಪ್ರಾಂತ್ಯದ ಮಾತೃ ಭಾಷೆಗೆ ಪ್ರಾಧಾನ್ಯತೆ ನೀಡುತ್ತಿದ್ದರು.

ಕರ್ನಾಟಕದಲ್ಲಿ ಮುಖ್ಯವಾಗಿ 1834ರಲ್ಲಿ ಜರ್ಮನ್ನರು ಮಂಗಳೂರಿಗೆ ಬಂದಾಗ ರಂಗಶೆಟ್ಟರ ಸಹಾಯದಿಂದ ಕನ್ನಡ ಅಚ್ಚುಮೊಳೆಗಳ ಎರಕದಿಂದ ಮುದ್ರಣ ಕಾರ್ಯ ಪ್ರಾರಂಭವಾಯಿತು. 1842ರಲ್ಲಿ 'ಮಂಗಳೂರು ಸಮಾಚಾರ' ಪತ್ರಿಕೆ ಪ್ರಾರಂಭವಾಯಿತು. ನಂತರ ರಾಜ ಒಡೆಯರ ಕೃಪೆಯಿಂದ,' ಕರ್ನಾಟಕ ಪ್ರಕಾಶಿಕ ,ಮೊದಲ ವಾರ ಪತ್ರಿಕೆಯಾಗಿ ಬಂತು. ವೃತ್ತಾಂತ ಬೋಧಿನಿ ಪತ್ರಿಕೆಯೂ ಕೂಡ ಇದೇ ಕಾಲದಲ್ಲಿ ಪ್ರಕಟವಾಗುತ್ತಿತ್ತು. ಮುಂದೆ ತಿರುಮಲೆ ತಾತಾಚಾರ್ಯರ ಕರ್ನಾಟಕ ಪ್ರಕಾಶಿತ ಪತ್ರಿಕೆಯು 1891ರಲ್ಲಿ ಜನರ ಆರ್ಥಿಕ ಮತ್ತು ನೀತಿಗಳಿಗೆ ಸ್ಪಂದಿಸಿ ಅನುಕೂಲ ಮಾಡಿಕೊಡಲು ಸಹಕಾರಿಯಾಯಿತು. 1888ರಲ್ಲಿ ಸೂರ್ಯೋದಯ ಪ್ರಕಾಶಿತ ಪತ್ರಿಕೆ ಪ್ರಾರಂಭವಾಯಿತು. 1905ರಲ್ಲಿ ಕರ್ನಾಟಕ ಕೇಸರಿ ಮತ್ತು ಒಕ್ಕಲಿಗರ ಪತ್ರಿಕೆಗಳು ಹೊರ ಬಂದರೂ ಆರ್ಥಿಕ ತೊಂದರೆಯಿಂದಾಗಿ ಕೆಲವೇ ಕಾಲದಲ್ಲಿ ಇವು ಮುಚ್ಚಿಹೋದವು. ಕನ್ನಡ ಪತ್ರಿಕೋದ್ಯಮದ ಪಿತಾಮಹರಾದ ತಿರುಮಲೆ ತಾತಾಚಾರ್ಯರು ಶ್ರಮವಹಿಸಿ ಪತ್ರಿಕೆಗಳು ಹೊರಬರಲು ಕಾರಣಕರ್ತರಾದರು.

1885ರಲ್ಲಿ ವೃತ್ತಾಂತ ಚಿಂತಾಮಣಿ ವಾರ ಪತ್ರಿಕೆ ಪ್ರಾರಂಭವಾಯಿತು. ಹೀಗೆ 1926ರಲ್ಲಿ ತಾಯಿನಾಡು ಪ್ರಾರಂಭ ಆಗಿ 1927ರಲ್ಲಿ ಹೆಚ್ಚಿನ ಪ್ರಸಾರ ಸಿಕ್ಕಿ ಹೆಚ್ಚು ಮೆಚ್ಚುಗೆ ಪಡೆಯಿತು. 1932ರಲ್ಲಿ ರಜತ ಜಯಂತಿ, 1934ರಲ್ಲಿ ಚಂಗಲ್ ರಾಯ ರೆಡ್ಡಿಯವರು ಸಂಪಾದಕರಾಗಿದ್ದ ಜನವಾಣಿ ಪತ್ರಿಕೆ ಬಂತು. 1931ರಲ್ಲಿ ಪ್ರಜಾಮತ, 1929ರಲ್ಲಿ ಸಂಯುಕ್ತ ಕರ್ನಾಟಕ ಪ್ರಾರಂಭವಾಯಿತು. 1948 ರಲ್ಲಿ ಪ್ರಜಾವಾಣಿ, ಹಾಗೂ 1968ರಿಂದೀಚೆ 'ಕನ್ನಡ ಪ್ರಭ' ಪತ್ರಿಕೆಗಳು ಉತ್ತಮ ಹೆಸರಿನಲ್ಲಿ ನಡೆದು ಬರುತ್ತಿದೆ. 1965ರಲ್ಲಿ 'ಸುಧಾ' ವಾರ ಪತ್ರಿಕೆಯು ಪ್ರಾರಂಭವಾಯಿತು. 1971ರಲ್ಲಿ 'ಉದಯವಾಣಿ' ಎಂಬ ಕರಾವಳಿಯಲ್ಲಿ ಪ್ರಕಟವಾದ ಮುಂಜಾನೆ ಪತ್ರಿಕೆ ಇದಾಗಿದೆ.

ಐತಿಹಾಸಿಕವಾಗಿ ನೋಡಿದಾಗ ಪತ್ರಿಕೆಯು ಬೇರೆ ಮಾಧ್ಯಮಕ್ಕಿಂತಲೂ ಮುಂದಿದೆ. ಇದರಲ್ಲಿ ಯಾವುದೇ ಪತ್ರಿಕೆ ಆಗಿರಬಹುದು. ಪತ್ರಿಕೆಗಳು ಮನರಂಜನೆ ಹಾಗೂ ಜಾಹೀರಾತು ನೀಡುತ್ತವೆ. ಸರಕು ಮತ್ತು ಮಾರುಕಟ್ಟೆಯಲ್ಲಿನ ಉತ್ಪಾದನೆ ಖರ್ಚುಗಳ ಬಗ್ಗೆ ಸಲಹೆ ಮತ್ತು ಅಭಿಪ್ರಾಯ ನೀಡುವುದರ ಜೊತೆಗೆ ಕಲೆ ಮತ್ತು ಸಂಗೀತಗಾರರ ಪರಿಚಯಗಳನ್ನು ಕೊಡುತ್ತವೆ. ದೇವಾನುದೇವತೆಗಳ ಕಾಲದಲ್ಲಿ ನಾರದನೇ ಪ್ರಸಾರ ಮಾಧ್ಯಮ.ರಾಜ ಮಹಾರಾಜರ ಕಾಲದಲ್ಲಿ ಪಾರಿವಾಳ ಮೂಲಕ ಸಂದೇಶಗಳನ್ನು ಜೊತೆಗೆ ಡಂಗೂರು ತಮ್ಮಟೆ ಬಾರಿಸುವವರು ಪ್ರಸಾರ ಮಾಧ್ಯಮರಾಗಿದ್ದರು. ರೋಮನ್ ಚಕ್ರವರ್ತಿಗಳ ಕಾಲದಲ್ಲಿ ವಾಲ್‌ಚಾರ್ಟ್‌ಗಳ

ರೀತಿ ಬರೆದು ಭಾವಡಿಗಳಲ್ಲಿ ಅವುಗಳನ್ನು ನೇತುಹಾಕಿಸುವುದರ ಮೂಲಕ ವಿಷಯ ಪ್ರಸಾರವಾಗುತ್ತಿತ್ತು. ಮೊಗಲರ ಕಾಲದಲ್ಲಿ ಗುಪ್ತ ಸ್ಥಳಗಳಲ್ಲಿ ದೂತರಿಂದ ಸುದ್ದಿಯನ್ನು ಮುಟ್ಟಿಸುವ ವ್ಯವಸ್ಥೆ ಇತ್ತು.

ಪತ್ರಿಕೆಗಳು ಪ್ರಜಾಪ್ರಭುತ್ವ ಪ್ರಪಂಚದಲ್ಲಿ ಅತ್ಯಂತ ಉತ್ತಮವಾದ ಆಡಳಿತ ವ್ಯವಸ್ಥೆ ಎಂದು ಪರಿಗಣಿಸಲ್ಪಟ್ಟಿವೆ. ಪ್ರಜಾಪ್ರಭುತ್ವದಲ್ಲಿ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಮುಕ್ತವಾಗಿ ಹಾಗೂ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತವೆ. ಆದರೆ ಈ ಮೂರು ಅಂಗಗಳ ಕಾರ್ಯನಿರ್ವಹಣೆಯ ಉಸ್ತುವಾರಿ ಪತ್ರಿಕೋದ್ಯಮಕ್ಕೆ ಸೇರಿರುತ್ತದೆ. ಈ ಅಂಶಗಳ ಎಡರು ತೊಡರುಗಳನ್ನು ಅಮೇರಿಕಾ ದೇಶದಲ್ಲಿ ಪತ್ರಿಕೆಗಳು ಮುಕ್ತವಾಗಿ ಖಂಡಿಸುತ್ತವೆ. ಆದರೆ ಭಾರತದಲ್ಲಿ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಲ್ಲಿ ಅಂದೆರ 19 (1) A ದಲ್ಲಿ ಸೇರಿಸಲಾಗಿದೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ದೇಶಕ್ಕೆ ಗಂಡಾಂತರ ಬಂದಾಗ ಅದನ್ನು 19 (2) ಪ್ರಕಾರ ಪತ್ರಿಕೆಗಳ ಹಕ್ಕನ್ನು ಕಸಿದುಕೊಳ್ಳಬಹುದು. ಆದ್ದರಿಂದಲೇ ಪತ್ರಿಕೋದ್ಯಮನ್ನು ಪ್ರಜಾಪ್ರಭುತ್ವದ ನಾಲ್ಕನೇ ಹಾಗೂ ಮಹತ್ವದ ಅಂಗ ಎಂದು ಅರ್ಥೈಸಲಾಗಿದೆ. ಆದರೆ ಇದು ಕಾನೂನಿನ ಚೌಕಟ್ಟಿನಲ್ಲಿ ನಡೆದುಕೊಂಡು ಹೋಗಬೇಕಾಗುತ್ತದೆ. ಪತ್ರಿಕೋದ್ಯಮಿಯಾದವನು ನಿಷ್ಠಾವಂತನಾಗಿರಬೇಕು ಮತ್ತು ಮುಳ್ಳಿನ ಹಾಸಿಗೆ ಇದ್ದಹಾಗೆ ಎಲ್ಲಾ ಎಡರು-ತೊಡರುಗಳನ್ನು ಎದುರಿಸಬೇಕಾಗುತ್ತದೆ.

ಪತ್ರಿಕಾ ಸಂಸ್ಥೆಯ ವಿವಿಧ ಭಾಗಗಳು:- 1 ಸುದ್ದಿ ಸಂಪಾದಕೀಯ 2 ವ್ಯಾಪಾರ 3 ಉತ್ತೇಜನ 4 ಯಾಂತ್ರಿಕ 5 ಪರಿಸ್ಕರಣ 6 ಆಡಳಿತ 7 ಗ್ರಂಥಾಲಯ ಮತ್ತು 8 ಛಾಯಾ ಚಿತ್ರ ವಿಭಾಗಗಳು. ದೊಡ್ಡ ಪತ್ರಿಕಾಲಯದಲ್ಲಿ ಸಿಬ್ಬಂದಿಯನ್ನು ಗಮನಿಸುವುದಾದರೆ 1 ಮುಖ್ಯ ಸಂಪಾದಕ, 2 ಸಂಪಾದಕ, 3 ಸಹಾಯಕ ಸಂಪಾದಕ, 4 ಸುದ್ದಿ ಸಂಪಾದಕ, 5 ಮುಖ್ಯ ಉಪಸಂಪಾದಕ , 6 ಉಪ ಸಂಪಾದಕ, 7ಸಂಪಾದಕೀಯ ಸಹಾಯಕರು ಮತ್ತು 8 ವರದಿಗಾರರು.

ಪ್ರಸಾರ ಮಾಧ್ಯಮಗಳಲ್ಲಿ ರೇಡಿಯೋ ಚಲನಚಿತ್ರ ಹಾಗೂ ದೂರದರ್ಶನಗಳು ಮನುಷ್ಯನಿಗೆ ಅನುಕೂಲಕರ ಹಾಗೂ ಮನರಂಜನೆ ನೀಡುವಂತಹ ಮಾಧ್ಯಮಗಳಾಗಿವೆ. ದೂರರ್ಶನವಂತೂ ಸುಪ್ರಸಿದ್ಧ ಮಾಧ್ಯಮವಾಗಿದೆ. ಕಾರಣ - ವಿಷಯವನ್ನು ಕೇವಲ ಕೇಳುವುದಲ್ಲದೆ ನಿಜಸ್ಥಿತಿಯನ್ನು ಪ್ರತ್ಯಕ್ಷವಾಗಿ ನೋಡುವಂತಹದಾಗಿದೆ. ಸುದ್ದಿ ಸಮಾಚಾರಗಳ ಸ್ವರೂಪವು ಬರಹಗಾರನ ಮೇಲೆ ಅವಲಂಬಿಸಿರುತ್ತದೆ. ಯಾವ ಶೈಲಿಯಲ್ಲಿ ಯಾವ ಸುದ್ದಿ ಬರಹಗಾರ ನಿಶ್ಚಿಯಿಸಿ ಬರೆಯುತ್ತಾನೊ ಅದೇ ಒಂದು ರೀತಿಯಲ್ಲಿ ಸುದ್ದಿ ಎನಿಸಿಕೊಳ್ಳುತ್ತದೆ. ಇದರಲ್ಲಿ ನಾನಾ ಮುಖಗಳಲ್ಲಿ ಕಾಣಿಸಿಕೊಳ್ಳುವ ಸುದ್ದಿಗಳಿರುತ್ತವೆ. ಸ್ಥಳೀಯ, ರಾಜ್ಯಮಟ್ಟದ, ಪ್ರಾಂತ್ಯ ಮಟ್ಟದ, ರಾಷ್ಟ್ರಮಟ್ಟದ ಮತ್ತು ಇದರ ಜತೆಗೆ ದಿನದ ಸುದ್ದಿ, ವಾರಕೊಮ್ಮೆ ತಿಳಿಸುವ ಸುದ್ದಿ , ತಿಂಗಳಿಗೊಮ್ಮೆ ತಿಳಿಸುವ ಸುದ್ದಿ ಹೀಗೆ.

ಸುದ್ದಿಯ ಅಂಶಗಳು:

1 **ಪ್ರಾಮುಖ್ಯತೆ :** ಇಲ್ಲಿ ಪ್ರಮುಖ ವ್ಯಕ್ತಿ, ಸಂಸ್ಥೆ, ದೇಶ, ಶಿಕ್ಷಣ, ವಿಜ್ಞಾನ, ಕೃಷಿ ಮತ್ತು ಕೈಗಾರಿಕೆಗೆ ಆದ್ಯತೆ ನೀಡುವಂತದ್ದು.

2 **ಅನಿರೀಕ್ಷಿತೆ:** ನಿರೀಕ್ಷಿಸಲ್ಪಡದೆ ತಾನಾಗಿಯೇ ಬಂದುದಕ್ಕೆ ಅನಿರೀಕ್ಷಿತ ಎನ್ನುತ್ತೇವೆ. ಇದರ ಬಗ್ಗೆ ಓದುಗರಿಗೆ ಆಸಕ್ತಿ ಕಾತುರತೆ ಇರುತ್ತದೆ.

3 **ಸಮಕಾಲೀನತೆ:** ಸಂಸ್ಕೃತಿ ಮತ್ತು ನಾಗರೀಕತೆಯ ಬಗ್ಗೆ ಬದುಕಿನಲ್ಲಿ ಇಂದು ಏನಾಗುತ್ತಿದೆ ಎಂಬುದನ್ನು

ತಿಳಿಸುವುದಾಗಿರುತ್ತದೆ.

4 **ಸಕಾಲಿಕತೆ:** ಈಗ ಯಾವುದೇ ವಿಚಾರ ಶೀಘ್ರವಾಗಿ ಮುಟ್ಟಿಸುವಂತಹದ್ದಾಗಿರುವುದು.

5 **ಸ್ಥಳೀಯತೆ:** ಸ್ಥಳೀಯ ಆಗುಹೋಗುಗಳನ್ನು ತಿಳಿಸುವಂತಹದ್ದು.

6 **ಮಾನವ ಶಕ್ತಿ:** ಯಾವುದೇ ಶಕ್ತಿ ಸುದ್ದಿಯ ಓದುಗನ ಮೇಲೆ ಪರಿಣಾಮ ಬೀರದಾಗದಂತಹ ಕಾರಣಕ್ಕೆ ಮಾನವ ಶಕ್ತಿ ಬೀಳಬೇಕಾಗುತ್ತದೆ.

7 **ಪ್ರಮಾಣ ಗಾತ್ರ:** ಹೆಚ್ಚಿನ ಪ್ರಮಾಣದಲ್ಲಿ ಸರಬರಾಜು ಆಗುವಂತಹದ್ದು.

8 **ಘರ್ಷಣೆ ಅಥವಾ ದುರಂತ :** ಇಂತಹ ಸುದ್ದಿ ಜನರಲ್ಲಿ ಕುತೂಹಲ ಕೆರಳಿಸುವಂತಾಗಿರುತ್ತದೆ.

9 **ಶಾಂತಿ ಮತ್ತು ಪ್ರಗತಿ:** ಸಮಾಜದಲ್ಲಿ ಸಮಾಜಕ್ಕಾಗಿ ಮಾಡುತ್ತಿರುವ ಕಾರ್ಯಗಳಲ್ಲಿ ಮುಖಂಡರು ಎಷ್ಟರ ಮಟ್ಟಿಗೆ ಶಾಂತಿ ಕಾಪಾಡುತ್ತಿದ್ದಾರೆ ಎಂಬುದರ ಬಗ್ಗೆ ಅದರ ಮೌಲ್ಯವನ್ನು ತಿಳಿಸುವುದಾಗಿದೆ.

ಸುದ್ದಿ ಬರಹ ತತ್ವಗಳು : ಮುಖ್ಯ ಬರಹಗಾರನು ಕೆಲವು ಮೌಲ್ಯಗಳನ್ನು ಹೊಂದಿರಬೇಕು. 1 ವಸ್ತು ಮತ್ತು ವಿಷಯದ ಮೇಲೆ ಹಿಡಿತ, 2 ಬರಹ ತತ್ವ ಪಾಲಿಸುವುದು, 3 ಓದುಗರಿಗೆ ಅರ್ಥವಾಗುವಂತಹದ್ದು, 4 ಬರಹದಲ್ಲಿ ಸ್ಪಷ್ಟತೆ, 5 ಸರಳ ಹಾಗೂ ಸ್ವಚ್ಛ ಪದಗಳ ವಾಕ್ಯಗಳ ಆಯ್ಕೆ ಇರಬೇಕಾಗುತ್ತದೆ. ವ್ಯಾಕರಣ ಶುದ್ಧ ಹಾಗೂ 7 ನಿಷ್ಪಕ್ಷಪಾತವಾದ ಬರಹವಾಗಿರಬೇಕು.

ಸುದ್ದಿ ಸಂಸ್ಥೆಗಳು: ದಿನ ಪತ್ರಿಕೆಗಳಿಗೆ ಸುದ್ದಿ ಸಂಗ್ರಹ ಮಾಡಲು ಸಾಧ್ಯವಾಗುವಂತೆ ಮಾಡಲು ಹಲವು ಸುದ್ದಿ ಸಂಸ್ಥೆಗಳು ಹುಟ್ಟಿಕೊಂಡಿವೆ. ಅವುಗಳ ಕೆಲಸ ಕೇವಲ ಸುದ್ದಿಗಳನ್ನು ಒದಗಿಸುವುದು ಅಷ್ಟೆ. ಈ ಸಂಸ್ಥೆಗಳು ವಿದೇಶಗಳಿಂದಲೂ ಸುದ್ದಿಗಳನ್ನು ತರಿಸಿಕೊಳ್ಳುತ್ತವೆ. UNI, PTI, ರೈಟರ್, ಸಮಾಚಾರ್ ಭಾರತಿ, ಹಿಂದೂ ಸಮಾಚ್ ಸುದ್ದಿ ಸಂಸ್ಥೆಗಳು ಹೀಗೆ ನಾನಾ ಸಂಸ್ಥೆಗಳಿವೆ.

ಭಾರತದಲ್ಲಿ ಅನೇಕ ಸಣ್ಣ ಪುಟ್ಟ ಪತ್ರಿಕೆಗಳು ಹುಟ್ಟಿಕೊಳ್ಳುತ್ತಿವೆ. ಆದರೆ ಅವುಗಳು ಹೆಚ್ಚುಕಾಲ ಮೆಚ್ಚುಗೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ, ಅಥವಾ ಆರ್ಥಿಕ ಮುಗ್ಗಟ್ಟಿನಿಂದ ಹೆಚ್ಚು ಕಾಲ ಉಳಿಯದೆ ನಿಂತು ಹೋಗುತ್ತವೆ. ಕಾರಣ ಜಾಹೀರಾತಿನ ತೊಂದರೆ ಮತ್ತು ಕೆಲವೊಮ್ಮೆ ಆಧುನಿಕ ತಾಂತ್ರಿಕ ಜ್ಞಾನಗಳನ್ನು ಬಳಸಿಕೊಳ್ಳಲು ಉಂಟಾಗುವ ಅಸಾಧ್ಯತೆ. ಭಾರತದಾದ್ಯಂತ ಪ್ರಾಂತೀಯ ಜನಾಂಗ ತಮ್ಮ ಭಾಷೆಯ ಅಭಿವೃದ್ಧಿಯ ಹಿತಚಿಂತನೆಯಡಿ ಅದೆಷ್ಟೋ ಸುದ್ದಿ ಪತ್ರಿಕೆಗಳು ಹುಟ್ಟಿಕೊಳ್ಳುತ್ತವೆ. ಮತ್ತೆ ಮೇಲೆ ತಿಳಿಸಿದ ಕಾರಣಗಳಿಂದ ಬಿದ್ದು ಹೋಗುತ್ತವೆ. ಕೊಡಗು ಜಿಲ್ಲೆಯೊಳಗೆ ಹತ್ತಾರು ಭಾಷಾವಾರು ಸುದ್ದಿ ಪತ್ರಿಕೆಗಳು ಹುಟ್ಟಿ ಕಷ್ಟದಿಂದ ತಮ್ಮ ಬದುಕನ್ನು ಸಾಗಿಸುತ್ತಿವೆ. ವಾರದ ಪತ್ರಿಕೆಯಾಗಿ ಹುಟ್ಟಿದ ಏಕೈಕ ಗೌಡ ಅರೆಬಾಷಿಕ 'ಕೊಡಗು ಸಂಗಾತಿ' ಜಾಹೀರಾತು ಮತ್ತು ಸಹಕಾರದ ಕೊರತೆಯ ಕಾರಣ 'ಪಾಕ್ಷಿಕ' ರೂಪದಲ್ಲೂ ತನ್ನ ಪ್ರಯತ್ನದಲ್ಲಿ ಅಸಫಲತೆಯೊಂದಿಗೆ 88ತಿಂಗಳಲ್ಲೇ ಕಮರಿ ಹೋಯಿತು. 'ಸೂಜಿ' ಮತ್ತು ಗೌಡದೊನಿ ಪತ್ರಿಕೆಗಳೂ ಸಹ ಕೆಲವು ಸಮಯಗಳಲ್ಲಿ ನಿಲುಗಡೆಯಾದುದು ನಿಜವಾಗಿಯೂ ಖೇದಕರ. ಗೌಡರಂತಹ ಪ್ರಭಾವಿ ಜನಾಂಗಕ್ಕೆ ಪತ್ರಿಕೆ ಮಾಧ್ಯಮ ಅವಶ್ಯಕತೆಯೂ ಹೌದು ಅನಿವಾರ್ಯವು ಹೌದು.

◆◆◆◆◆

ಭಗಂಡೇಶ್ವರ-ತಲಕಾವೇರಿ ದೇವಸ್ಥಾನ ಪೌರಾಣಿಕ ಹಿನ್ನೆಲೆಯ ಧಾರ್ಮಿಕ ಆಚರಣೆಗಳು

-ಕುದುಕುಳಿ ಜಿ. ಭರತ್, ಭಾಗಮಂಡಲ.

ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯವು ಸ್ಕಂದ ಪುರಾಣದಲ್ಲಿ ಸ್ಕಂದ ಕ್ಷೇತ್ರವಾಗಿದ್ದು, ಇಲ್ಲಿ ಸುಬ್ರಹ್ಮಣ್ಯ ಉದ್ಭವ ಮೂರ್ತಿಯಾಗಿದೆ. ನಂತರ ಭಗಂಡಮುನಿಯ ತಪಸ್ಸಿನಿಂದ 'ಭಗಂಡೇಶ್ವರ' ಕ್ಷೇತ್ರವಾಗಿರುವುದು ಪುರಾಣ -ಇತಿಹಾಸಗಳಿಂದ ತಿಳಿದು ಬರುವುದಲ್ಲದೆ, ಹಲವಾರು ಶತಮಾನಗಳಿಂದ ಅಂದರೆ ಚೋಳರು, ಪಾಂಡ್ಯರು, ಆಳ್ವಿಕೆ ನಡೆಸಿದ ಕಾಲದಲ್ಲೇ ಇಲ್ಲಿಗೆ ತಂತ್ರಿಗಳಾಗಿ ಕೇರಳದ ನೀಲೇಶ್ವರದಿಂದ ಬರುತ್ತಿದ್ದು, ಇಂದಿಗೂ ಇದು ಮುಂದುವರಿಯುತ್ತಿದೆಯಲ್ಲದೆ, ತಲಕಾವೇರಿಯಲ್ಲಿ ಅರ್ಚಕ ಕುಟುಂಬ ಕೂಡಾ ಶತಮಾನಗಳಿಂದಲೇ ನೆಲೆ ನಿಂತು ಪೂಜೆ ಸಲ್ಲಿಸುತ್ತಾ ಬರುತ್ತಿದ್ದಾರೆ.

ಇದೇ ರೀತಿ ಶತಮಾನಗಳ ಹಿಂದೆ ಭಗಂಡೇಶ್ವರ ಕ್ಷೇತ್ರದ ಕಾವಲುಗಾರರಾಗಿ ಕೊಡಗು ರಾಜರ ಆಳ್ವಿಕೆಗೂ ಹಿಂದೆ ದೊರಗ (ಕಾವಲುಗಾರ) ಎಂಬ ಹೆಸರಿನಲ್ಲಿ ಇಂದಿನ ದರಗನ (ನಿಡ್ಯಮಲೆ ಕುಟುಂಬದವರು) ಮನೆಯವರು ಕಾರ್ಯ ನಿರ್ವಹಿಸುತ್ತಿದ್ದದ್ದು ಕಂಡುಬರುತ್ತದೆ. ಅಲ್ಲದೆ, ದೇವಸ್ಥಾನದ ಜಂಟಿ ಖಾತೆಯ ಆಸ್ತಿ ಇಂದಿಗೂ ಈ ದರಗನ ಮನೆ ಕುಟುಂಬದಲ್ಲೇ ಮುಂದುವರಿಯುತ್ತಿದೆ. ಇವರಿಗೆ ಜಮ್ಮ ಆಸ್ತಿಯು ಇರುವುದಿಲ್ಲ.

ಹೀಗೆ ಭಗಂಡೇಶ್ವರ ಕ್ಷೇತ್ರದ ತಕ್ಕರಾಗಿ ಬಳ್ಳಡ್ಕ ಕುಟುಂಬಸ್ಥರು ಮತ್ತು ತಲಕಾವೇರಿಯಲ್ಲಿ ತಕ್ಕರಾಗಿ ಕೋಡಿ ಕುಟುಂಬಸ್ಥರು ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರತೀ ವರ್ಷ ಸೆಪ್ಟೆಂಬರ್ ತಾ. 26 ರಂದು (ನಿಡ್ನಾಲ್ ತಿಂಗಳ 10) ಬಳ್ಳಡ್ಕ ಮನೆಯಿಂದ 20 ಸೇರು ಅಕ್ಕಿ ತಂದು ಸಂಪ್ರದಾಯದಂತೆ ಭಗಂಡೇಶ್ವರ ಸನ್ನಿಧಿಯಲ್ಲಿ ದೇವಸ್ಥಾನದ ಪತ್ತಾಯಕ್ಕೆ ಅಕ್ಕಿ ಹಾಕುವುದು. ನಂತರ 8 ನೇ ದಿನ ಅಕ್ಟೋಬರ್ 4 ಅಥವಾ 5 (ನಿಡ್ನಾಲ್ 18) ರಂದು ಭಗಂಡೇಶ್ವರ ಸನ್ನಿಧಿಯಲ್ಲಿ ಬಳ್ಳಡ್ಕ ತಕ್ಕರು ಊರಿನವರನ್ನು ಸೇರಿಸಿಕೊಂಡು ಬಾಳೆಗೊನೆ ಕಡಿದು ಕೊಡಗಿನಾದ್ಯಂತ ತುಲಾ ಸಂಕ್ರಮಣದ ಸಂಪ್ರದಾಯ ಮತ್ತು ಕಟ್ಟುನಿಟ್ಟಿನ ವಿವರಣೆ ನೀಡುತ್ತಾರೆ. ನಂತರ ತುಲಾ ಸಂಕ್ರಮಣದವರೆಗೆ ಪ್ರಾಣಿಹಿಂಸೆ ನಿಷೇಧ ಮತ್ತು ಶುಭ-ಅಶುಭ ಕಾರ್ಯಗಳನ್ನು ನಡೆಸುವಂತಿಲ್ಲ. ಮತ್ತು ಅದೇ ದಿನ ದೇವಸ್ಥಾನದ ಮುಂಭಾಗದಲ್ಲಿ ತಕ್ಕರ ಮನೆಯಿಂದ ತಂದ 5 ಸೇರು ಅಕ್ಕಿಯನ್ನು ಕಂಚಿನ ಉರುಳಿಯಲ್ಲಿ ಹಾಕುವುದು.

ಅಕ್ಟೋಬರ್ 14 ರಂದು (ನಿಡ್ನಾಲ್ 28) ಭಗಂಡೇಶ್ವರ ಸನ್ನಿಧಿಯಲ್ಲಿ ನಂದಾದೀಪ ಹಚ್ಚುವುದು. (ನಂದಾದೀಪ ತುಲಾ ಮಾಸವೆಲ್ಲಾ ಉರಿಯುತ್ತಿರುತ್ತದೆ) ಅಕ್ಷಯ ಪಾತ್ರೆ ಇಡುವುದು, ಕಾಣಿಕೆ ಡಬ್ಬಿಗಳನ್ನಿಡುವುದು ಮತ್ತು ಅಂದಿನಿಂದ ಭಕ್ತಾದಿಗಳಿಗೆ ದೇವಸ್ಥಾನದ ಪಡಿಯಕ್ಕಿ ಕೊಡಲಾಗುವುದು ಮತ್ತು ಅದೇ ದಿನ ಬಳ್ಳಡ್ಕ ತಕ್ಕರು ತಮ್ಮ ಕುಟುಂಬದ 5 ಜನರ ಸಹಕಾರದೊಂದಿಗೆ ಗರ್ಭಗುಡಿಗಳ ಬೀಗದ ಕೀಗಳನ್ನು ಇಟ್ಟುಕೊಂಡು, ದೇವಸ್ಥಾನದಲ್ಲಿ ವಾಸ್ತವ್ಯ ಹೂಡುತ್ತಾರೆ. ಸಂಜೆಯ ಪೂಜೆಯ ನಂತರ ಗರ್ಭಗುಡಿಗಳ ಬೀಗ ಹಾಕಿಸಿ ಕೀಗಳನ್ನು ಪಡೆದುಕೊಂಡು ಮರುದಿನ ಬೆಳಿಗ್ಗೆ ಅರ್ಚಕರಿಗೆ ಕೀ ಕೊಟ್ಟು, ಬೀಗ ತೆಗೆಸಿ ಪೂಜಾ ವಿಧಿ-ವಿಧಾನಗಳನ್ನು ಸುಸೂತ್ರವಾಗಿ ನಡೆಸುವುದು. ತಕ್ಕರ ಕುಟುಂಬದ 5 ಜನರಿಗೆ ದೇವಸ್ಥಾನದಿಂದ ಗೌರವಧನ ಮತ್ತು ವಸತಿ ವ್ಯವಸ್ಥೆಗಳನ್ನು ಮಾಡಲಾಗುವುದು.

ಅಕ್ಟೋಬರ್ 15 ನೇ ತಾರೀಕಿನಂದು ಭಗಂಡೇಶ್ವರ ದೇವಾಲಯದಿಂದ ತಲಕಾವೇರಿಯ ಕೋಡಿ ತಕ್ಕರ ವಶಕ್ಕೆ ತಲಕಾವೇರಿ ದೇವಸ್ಥಾನದ ಆಭರಣಗಳ ಹಸ್ತಾಂತರ ಮಾಡಲಾಗುತ್ತದೆ. ತಲಕಾವೇರಿಯಲ್ಲಿ ಅಂದಿನಿಂದ ಕೋಡಿ ಕುಟುಂಬದ 5 ಜನ ಪಹರೆಯವರು ಒಂದು ತಿಂಗಳ ಕಾಲ ಗರ್ಭಗುಡಿಗಳ ಬೀಗದ ಕೀಗಳನ್ನಿಟ್ಟುಕೊಂಡು ತಲಕಾವೇರಿಯಲ್ಲಿ ವಾಸ್ತವ್ಯ ಮಾಡಬೇಕಾಗುತ್ತದೆ. ಯಥಾಸ್ಥಿತಿ, ಪೂಜಾ ವಿಧಿ-ವಿಧಾನಗಳನ್ನು ನಡೆಸಬೇಕಾಗಿದೆ. ಇಲ್ಲಿಯೂ ತಕ್ಕರ ಕುಟುಂಬದವರಿಗೆ ವಸತಿ ಮತ್ತು ಗೌರವಧನ ವ್ಯವಸ್ಥೆ ಇರುತ್ತದೆ. ಎರಡೂ ದೇವಾಲಯಗಳ ತಕ್ಕರು ಸಂಪ್ರದಾಯದಂತೆ 'ಕುಪ್ಪಸ-ದಟ್ಟಿ' ಉಡುಗೆಯಲ್ಲಿರಬೇಕಾಗುತ್ತದೆ.

ಅಕ್ಟೋಬರ್ 17 ರಂದು ತೀರ್ಥೋದ್ಭವದ ಒಂದು ಗಂಟೆ ಮುಂಚಿತವಾಗಿ ಭಗಂಡೇಶ್ವರ ದೇವಾಲಯದಿಂದ ಬಳ್ಳಡ್ಕ ತಕ್ಕರು ಮತ್ತು ಅರ್ಚಕರು, ವಾದ್ಯವೃಂದದೊಂದಿಗೆ ತಲಕಾವೇರಿ ತೀರ್ಥ ಪೂಜೆಗೆ ಹೊರಡುವುದು ಸಂಪ್ರದಾಯ. ಅಲಂಕೃತ ಬೆಳ್ಳಿಯ ತೀರ್ಥ ಬಿಂದಿಗೆ ಮತ್ತು ಕಾವೇರಮ್ಮನಿಗೆ ಅಲಂಕಾರಕ್ಕೆ ಚಿನ್ನದ ಹಾರದೊಂದಿಗೆ ಹೊರಟು, ತಲಕಾವೇರಿಯಲ್ಲಿ ಇದನ್ನು ಕೋಡಿ ತಕ್ಕರಿಗೆ ಒಪ್ಪಿಸುತ್ತಾರೆ. ಕೋಡಿ ತಕ್ಕರು ಚಿನ್ನದ ಹಾರವನ್ನು ಮುಖ್ಯ ಅರ್ಚಕರಿಗೆ ಕೊಟ್ಟು, ಕಾವೇರಮ್ಮನಿಗೆ ಸಿಂಗರಿಸುತ್ತಾರೆ. ಅದೇ ಸಮಯಕ್ಕೆ ಕೋಡಿ ತಕ್ಕರು ತಮ್ಮ ಮನೆಯಿಂದ ತಂದ ಹಸುವಿನ ಹಾಲನ್ನು ಬ್ರಹ್ಮ ಕುಂಡಿಕೆಗೆ ಹಾಕುತ್ತಾರೆ ಮತ್ತು ಕೊಬ್ಬರಿಯಲ್ಲಿ ತುಪ್ಪದ ದೀಪ ಹಚ್ಚುತ್ತಾರೆ. ತೀರ್ಥೋದ್ಭವ ಆದ ನಂತರ ಮೊದಲಿಗೆ ಭಗಂಡೇಶ್ವರ ದೇವರಿಗೆ ತೀರ್ಥವನ್ನು ಬೆಳ್ಳಿಯ ಪಾತ್ರೆಯಲ್ಲಿ ತುಂಬಿಸಿ ಬಳ್ಳಡ್ಕ ತಕ್ಕರ ವಶಕ್ಕೊಪ್ಪಿಸುತ್ತಾರೆ. ಅಲ್ಲಿಂದ ಬಂದ ನಂತರ ಭಗಂಡೇಶ್ವರ ಸನ್ನಿಧಿಯಲ್ಲಿ ಪೂಜೆ ನಡೆಯುತ್ತದೆ. ಇವು ಎರಡೂ ದೇವಸ್ಥಾನಗಳಲ್ಲಿನ ಸಂಪ್ರದಾಯಗಳಾಗಿದ್ದು, ಇದಕ್ಕೆ ಯಾವುದೇ ಶಾಸನಗಳಾಗಲೀ, ಅಧಿಕೃತ ದಾಖಲೆಗಳಾಗಲೀ ಕಂಡುಬಂದಂತಿಲ್ಲ. ಬದಲಿಗೆ ಶತಮಾನಗಳಿಂದ ಆಚರಿಸಿಕೊಂಡು ಬರುತ್ತಿರುವ ಸಂಪ್ರದಾಯಗಳೇ ಆಧಾರವಾಗಿವೆ.

ಚೆಂಬು ಕಿನುಮಣಿ ದೇವಸ್ಥಾನ:

ಚೆಂಬು ಗ್ರಾಮದ ಕಿನುಮಣಿ ದೇವಸ್ಥಾನ ಮತ್ತು ಭಗಂಡೇಶ್ವರ ಸನ್ನಿಧಿಗೂ ನೇರ ಸಂಪರ್ಕವಿದ್ದು, ಇಂದಿಗೂ ಕಿನುಮಣಿ ದೇವರ ಆಯುಧ ಮತ್ತು ಆಭರಣಗಳನ್ನು ಸುಬ್ರಹ್ಮಣ್ಯ ಗುಡಿಯ ಮುಂಭಾಗದಲ್ಲಿ ಸಣ್ಣ ಗುಡಿಯೊಂದರಲ್ಲಿ ಇಡಲಾಗಿದೆ. ಪ್ರತೀ ವರ್ಷದ ಮೇ ಮತ್ತು ಡಿಸೆಂಬರ್ ತಿಂಗಳಿನಲ್ಲಿ ಈ ಆಯುಧ ಮತ್ತು ಆಭರಣಗಳೊಡನೆ ಚೆಂಬು ಕಿನುಮಣಿ ದೇವಸ್ಥಾನದಿಂದ ಬಂದ ಗ್ರಾಮಸ್ಥರು ಪೂಜೆ ಸಲ್ಲಿಸಿ, ಈ ಆಯುಧ - ಆಭರಣಗಳೊಡನೆ ಕಿನುಮಣಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ, ವಾಪಸು ತಂದಿಡುವುದು ಸಂಪ್ರದಾಯ. ಕಿನುಮಣಿ ದೇವಸ್ಥಾನದ ಆಡಳಿತ ಮುಖ್ಯೇಶ್ವರರಾಗಿ ಈಗ ಹೊಸೂರು ಕುಟುಂಬದವರಿದ್ದಾರೆ.

ಕಿನುಮಣಿ ದೇವಸ್ಥಾನದ ಪೂರ್ವ ಇತಿಹಾಸದಲ್ಲಿ ಹೇಳುವಂತೆ ತ್ರೇತಾಯುಗದ ರಾಮ ಲಕ್ಷ್ಮಣರು ತಮ್ಮ ಕಾಲಾನಂತರ ಭೂಲೋಕದಲ್ಲಿ ತಮಗೆ ದೈವಾರಾಧನೆ ಬಯಸಿ ನಾರಾಯಣ ದೇವರಲ್ಲಿ ಪ್ರಾರ್ಥಿಸಿಕೊಂಡಾಗ, ಶ್ರೀಮನ್ನಾರಾಯಣನು ಇವರೀರ್ವರನ್ನು ಗಂಗಾನದಿ ದಡದಲ್ಲಿ ಪೂಮಣಿ- ಕಿನುಮಣಿಯಾಗಿ ಸೃಷ್ಟಿಸಿ ಇವರಿಬ್ಬರು ಎಲ್ಲಾ ಕ್ಷೇತ್ರಗಳನ್ನು ದರ್ಶನ ಮಾಡುತ್ತಾ, ತಲಕಾವೇರಿಗೆ ಬಂದು 16 ವರ್ಷಗಳ ಕಾಲ ನೆಲೆ ನಿಂತಿರುತ್ತಾರೆ. ಆ ಸಂದರ್ಭದಲ್ಲಿ ಚೆಂಬು ಗ್ರಾಮದಲ್ಲಿ ಋಷಿ ಮುನಿಗಳು ರಾಕ್ಷಸರ ಉಪಟಳ ತಾಳಲಾರದೆ ಅಲ್ಲಿನ ದೇವಿ ರುದ್ರ ಚಾಮುಂಡಿಯಲ್ಲಿ ಪ್ರಾರ್ಥಿಸಿದಾಗ ಅವಳು ರಾಕ್ಷಸರೊಡನೆ ಯುದ್ಧ ಮಾಡಿ ಸೋತು ಹೋಗುತ್ತಾಳೆ. ನಂತರ ಚಾಮುಂಡಿಯು ಮಾತೆ ಕಾವೇರಿಯಲ್ಲಿ ಸಹಾಯಕ್ಕಾಗಿ ಪ್ರಾರ್ಥಿಸಿದಾಗ, ತಲಕಾವೇರಿಯಲ್ಲಿ ನೆಲೆ ನಿಂತಿದ್ದ ಕಿನುಮಣಿ ಮತ್ತು ಪೂಮಣಿ

ಅಣ್ಣ ತಮ್ಮಂದಿರನ್ನು ಯುದ್ಧಕ್ಕೆ ಕಳುಹಿಸುತ್ತಾಳೆ ಮತ್ತು ಬಿಲ್ಲು ಬಾಣ, ಕತ್ತಿಗಳನ್ನು ಸಾಗಿಸಲು ಚೆಂಬು ಸುತ್ತಮುತ್ತಲಿನ .5 ಗ್ರಾಮಗಳ ಜನರನ್ನು ಕರೆ ತರಲಾಯಿತು. ಹಾಗೆಯೇ ತಣ್ಣಿಮಾನಿ ಗ್ರಾಮದ ಸೂರ್ತಲೆ ಮತ್ತು ಕುದುಪಜೆ ಕುಟುಂಬಸ್ಥರನ್ನು ಇಲ್ಲಿಂದ ಯುದ್ಧಕ್ಕೆ ಕಳುಹಿಸಿಕೊಡಲಾಯಿತು. ಇಂದಿಗೂ ಡಿಸೆಂಬರ್ ಮತ್ತು ಮೇ ತಿಂಗಳಲ್ಲಿ ಚೆಂಬು ಐದು ಗ್ರಾಮಸ್ಥರು (ಚೆಂಬೈದು) ಉಳ್ಳಾಕುಳು ದೇವಸ್ಥಾನದಿಂದ ಭಗಂಡೇಶ್ವರ ಸನ್ನಿಧಿಗೆ ಬಂದು ಆಯುಧ-ಆಭರಣಗಳನ್ನು ತೆಗೆದುಕೊಂಡು ಹೋಗಿ ಪೂಜೆ ಸಲ್ಲಿಸಿ ವಾಪಾಸು ತಂದಿಡುವ ಸಂಪ್ರದಾಯ ತಪ್ಪದೇ ನಡೆಯುತ್ತಿದೆ. ಮತ್ತು ಸೂರ್ತಲೆ ಕುದುಪಜೆ ಕುಟುಂಬಸ್ಥರು ಕೊಡಗಿನ ಕುಪ್ಪಸ-ದಟ್ಟಿ ಧರಿಸಿ ಜೊತೆಯಲ್ಲಿಯೇ ಹೋಗಿ ಬರುತ್ತಾರೆ ಸಂಪ್ರದಾಯದಂತೆ ತಣ್ಣಿಮಾನಿ ಗ್ರಾಮದ ಕನ್ನಿಕೆ ನದಿ ದಡದಲ್ಲಿರುವ ಕಿನುಮಣಿ ಕಟ್ಟೆಯಲ್ಲಿ ಸೂರ್ತಲೆ-ಕುದುಪಜೆ ಕುಟುಂಬಸ್ಥರು ಸೇರಿ ಪೂಜೆ ಸಲ್ಲಿಸುತ್ತಾರೆ.

ಪೆರಾಜೆ ಶಾಸ್ತಾವು ದೇವಸ್ಥಾನ:

ಪೆರಾಜೆಯ ಶಾಸ್ತಾವು ದೇವಾಲಯದ ಸನ್ನಿಧಿಯಲ್ಲಿ ಕಾವೇರಿ ಗದ್ದೆ ಇದ್ದು, ಪ್ರತೀವರ್ಷದ ಚೌತಿಯ ದಿವಸ ಈ ದೇವಸ್ಥಾನದ ಸಮಿತಿ ಮತ್ತು ಊರಿನವರು ಭಗಂಡೇಶ್ವರ ಮತ್ತು ತಲಕಾವೇರಿ ಸನ್ನಿಧಿಗೆ ಕದಿರು ತರುವುದಲ್ಲದೆ, ಬೈವಾಡು ಸೇವೆ ನಡೆಸುತ್ತಾರೆ. ಈ ದೇವಸ್ಥಾನದ ಪ್ರಾಚೀನ ಇತಿಹಾಸದಂತೆ ದಕ್ಷಿಣ ಕನ್ನಡ, ಉಡುಪಿ, ಕುಂದಾಪುರ ಕಡೆಯಿಂದ ತುಲಾಮಾಸದಲ್ಲಿ ತಲಕಾವೇರಿಗೆ ಬರುವ ಭಕ್ತಾದಿಗಳಿಗೆ ಊಟ ಮತ್ತು ವಸತಿ ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತಿತ್ತೆಂಬುದಾಗಿ ತಿಳಿದುಬರುತ್ತದೆ. ಈ ದೇವಸ್ಥಾನದ ಆಡಳಿತ ಮುಖ್ತೇಶ್ವರರಾಗಿ ಪ್ರಸ್ತುತ ಲೋಕನಾಥ ಅಮೆಚೂರ್ ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ಈ ಎಲ್ಲಾ ಸಂಪ್ರದಾಯಗಳಿಗೆ ಯಾವುದೇ ಅಧಿಕೃತ ದಾಖಲೆಗಳಿಲ್ಲದಿದ್ದರೂ, ಶತಮಾನಗಳ ಇತಿಹಾಸವನ್ನು ಸಂಪ್ರದಾಯ ಬದ್ಧವಾಗಿ ದೈವಿಕ ಹಿನ್ನೆಲೆಯಲ್ಲಿ ಆಚರಿಸಿಕೊಂಡು ಬರುತ್ತಿರುವುದೇ ಒಂದು ವಿಶೇಷ ಮತ್ತು ದೈವ ಭಕ್ತಿಯ ಪ್ರತೀಕ.

ಕವನ

ಜೀವನತೇಲ್ರೆ

ಒಬ್ಬ ಶ್ರೀಮಂತ ನೆಗಾಡಿಕಂಡ್ ಹೇಳ್ದೆ-ಹಣನೇ
ಜೀವ್‌ನ

ಒಬ್ಬ ಬಡವ ಸಣ್ಣ ಸ್ವರಲಿ ಹೇಳ್ದೆ -ಒದ್ದಾಟವೇ
ಜೀವ್‌ನ

ಒಬ್ಬ ಸೋಮಾರಿ ಹಾಸಿಗೆಲಿ ಮಲ್ಕಂಡ್ ಹೇಳ್ದೆ-
ಗುಲಾಬಿಯ ಹಾಸಿಗೆ ಜೀವ್‌ನ

ಒಬ್ಬ ಸಾಧು ತನ್ನ ಭಾಷಣಲಿ ಹೇಳ್ದೆ-ದೇವ್ರ್‌ನ
ತಲ್‌ಪಿಕೆ ಇರ್‌ವ ದಾರೀನೆ ಜೀವ್‌ನ

ಒಬ್ಬ ಬಿಸಿರಕ್ತದ ಹೈದ ಹೇಳ್ದೆ- ಸುಖಾನುಭವವೇ
ಜೀವ್‌ನ ಆದರೆ

ನಂಗೆ ಮಾತ್ರ -ಬುಡ್ಸಿಕಾಗದ ಒಗಟೇ ಜೀವ್‌ನ.

-ಮುದ್ಯನ ಪುನೀತ.

◆◆◆◆◆

ಮಡಿಕೇರಿ ತಾಲೂಕಿನ ಕನ್ನಡ ಸಾಹಿತ್ಯದ ಕಿರುನೋಟ

ಲೇಖಕಿ: ದಂಬೆಕೋಡಿ ಸುಶೀಲಾ ಸುಬ್ರಮಣಿ, ಮೂರ್ನಾಡು.

-ಆಧಾರ ವಿವಿಧ ಮೂಲಗಳಿಂದ,

ಕೊಡಗು ಜಿಲ್ಲೆಕರ್ನಾಟಕದ ಅತ್ಯಂತ ಸುಂದರ ಹಾಗೂ ಸಂಪದ್ಭರಿತ ಜಿಲ್ಲೆಗಳಲ್ಲಿ ಒಂದು. ಪಶ್ಚಿಮಘಟ್ಟ ಸಾಲಿಗೆ ಸೇರಿದ ಈ ಜಿಲ್ಲೆ ಬಲುಮನಮೋಹಕ ಗಿರಿಧಾಮಗಳು, ಝರಿ, ಜಲಪಾತಗಳು, ನದಿಗಳು, ಸದಾ ಹಸಿರು ಮೆರೆಯುವ ನಿತ್ಯಹರಿದ್ವರ್ಣದ ಕಾಡುಗಳು, ಅಪೂರ್ವ ಪ್ರಾಣಿಪಕ್ಷಿಗಳನ್ನಲ್ಲದೆ, ಆಹ್ಲಾದಕರ ಹವಾಗುಣವನ್ನು ಪಡೆದಿದೆ. ಹೀಗಾಗಿಯೇ ಇದು 'ನಡೆದು ನೋಡಾ ಕೊಡಗಿನ ಬೆಡಗ' ಎಂಬ ಕವಿ ಪ್ರಶಂಸೆಗೆ ಪಾತ್ರವಾಗಿದೆ. ಕೊಡಗಿನ ಇತಿಹಾಸ ವೈವಿಧ್ಯಪೂರ್ಣವಾಗಿರುವಂತೆ ಪ್ರಾಚೀನವೂ ಆಗಿದೆ.

ಇದು ಸಂಸ್ಕೃತಿ ಸಂಪನ್ನನಾಡು. ಇಲ್ಲಿಯ ಜನರು ತಮ್ಮದೇ ಆದ ಸಂಸ್ಕೃತಿ, ಧರ್ಮ ಹಾಗೂ ಜೀವನ ರೀತಿಯನ್ನು ಹೊಂದಿದ್ದಾರೆ. ಧೈರ್ಯ, ಶೌರ್ಯ ಮತ್ತು ದೇಶಭಕ್ತಿಗೆ ಹೆಸರಾದ ಈ ನಾಡು ದೇಶಕ್ಕೆ ಅಸಂಖ್ಯಾತ ಯೋಧರನ್ನು, ಸೈನ್ಯಾಧಿಕಾರಿಗಳನ್ನೂ ನೀಡಿದೆ. ರಾಜಕೀಯ ಕ್ಷೇತ್ರಕ್ಕೂ ಈ ಜಿಲ್ಲೆಯ ಕೊಡುಗೆ ಅಪಾರ. ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡು ಹುತಾತ್ಮರಾದವರೂ ಈ ಜಿಲ್ಲೆಯಲ್ಲಿ ಹಲವರಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿಯೂ ಕೊಡಗಿನ ಕಾಣಿಕೆ ಸಾಕಷ್ಟಿದೆ. ಶಾಸನ ಕವಿಗಳ ಆದಿಯಾಗಿ ಹೊಸಗನ್ನಡ ಕವಿಗಳವರೆಗೆ ಕೊಡಗಿನ ಸಾಹಿತ್ಯ ಕೃಷಿ ಬೆಳೆದಿದೆ. ಇಲ್ಲಿ ಬೆಳೆದು ಬಂದ ಸಾಹಿತ್ಯವನ್ನು ಈ ಕೆಳಗಿನಂತೆ ವಿಂಗಡಿಸಿ ರೂಪುರೇಷೆಯನ್ನು ಗುರುತಿಸಬಹುದಾಗಿದೆ.

1. ಕೊಡಗಿನಲ್ಲಿ ಹುಟ್ಟಿ ಬೆಳೆದು ಕೊಡಗಿನಲ್ಲೇ ನೆಲೆಸಿದ ಸಾಹಿತಿಗಳು.
2. ಕೊಡಗಿನಲ್ಲಿ ಹುಟ್ಟಿ ಬೆಳೆದು ಬೇರೆಡೆಗಳಲ್ಲಿ ನೆಲೆಸಿದ ಸಾಹಿತಿಗಳು.
3. ಬೇರೆಡೆಗಳಿಂದ ಬಂದು ಕೊಡಗಿನಲ್ಲಿ ನೆಲೆಸಿದ ಸಾಹಿತಿಗಳು.
4. ಬೇರೆಡೆಗಳಿಂದ ಬಂದು ಇಲ್ಲಿ ಇದ್ದು ಹೋದ ಸಾಹಿತಿಗಳು.

ಈ ನಾಲ್ಕು ವರ್ಗದ ಸಾಹಿತಿಗಳು ರಚಿಸಿದ ಸಾಹಿತ್ಯವನ್ನು ನಾವಿಂದು ಅವಲೋಕಿಸಬೇಕು. ಕೊಡಗಿನ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಾದ ಕಾವ್ಯ, ನಾಟಕ, ಕಾದಂಬರಿ, ಸಣ್ಣಕತೆ, ಪ್ರಬಂಧ, ಪ್ರವಾಸ ಸಾಹಿತ್ಯ, ಶಿಕಾರಿ ಸಾಹಿತ್ಯ ಸಂಪಾದನೆ, ಸ್ತೋತ್ರ ಸಾಹಿತ್ಯ, ಪತ್ರಿಕಾ ಸಾಹಿತ್ಯ, ಚಲನಚಿತ್ರ ಸಾಹಿತ್ಯ, ಸಂಶೋಧನೆ, ವಿಮರ್ಶೆ, ಅನುವಾದ, ಧಾರ್ಮಿಕ ಸಾಹಿತ್ಯ, ಆತ್ಮಚರಿತ್ರೆ, ಜೀವನಚರಿತ್ರೆ, ಅಭಿನಂದನ ಗ್ರಂಥಗಳು, ಸ್ಮರಣ ಸಂಚಿಕೆಗಳು, ವಿಜ್ಞಾನ ಸಾಹಿತ್ಯ, ಇತಿಹಾಸ, ಶಿಶುಸಾಹಿತ್ಯ, ಶಾಸ್ತ್ರಸಾಹಿತ್ಯ, ಮೊದಲಾದವುಗಳನ್ನು ಇಲ್ಲಿನ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಬಹುದು.

ಕೊಡಗು ವಿಶಿಷ್ಟ ಜಾನಪದ ಸಂಪತ್ತನ್ನು ಹೊಂದಿದ ನಾಡಾಗಿದೆ. ಜನಪದ ಗೀತೆಗಳು, ಒಗಟುಗಳು, ಲಾವಣಿಗಳು, ಕಥೆಗಳು, ಕೊಡಗಿನ ಸಾಹಿತ್ಯದ ಶ್ರೀಮಂತಿಕೆಯನ್ನು ಹೆಚ್ಚಿಸಿವೆ.

ಇಷ್ಟೆಲ್ಲಾ ಸಾಹಿತ್ಯ ಪ್ರಾಕಾರಗಳು ಕೊಡಗಿನಲ್ಲಿದ್ದರೂ, ಈ ಪ್ರಬಂಧವನ್ನು ಮಡಿಕೇರಿ ತಾಲೂಕಿನ ಸಾಹಿತ್ಯ

ಕ್ಷೇತ್ರಕ್ಕೆ ಸೀಮಿತಗೊಳಿಸಿದ್ದೇನೆ.

ಕೊಡಗು ಐತಿಹಾಸಿಕ ಕಾಲದಿಂದಲೂ ಕನ್ನಡ ಭಾಷೆ ಹಾಗೂ ಸಾಹಿತ್ಯದ ಬೆಳವಣಿಗೆಗೆ ಫಲಪ್ರದಕ್ಷೇತ್ರ. ಕೊಡಗಿನ ಬಹುತೇಕ ಶಾಸನಗಳು ಕನ್ನಡ ಭಾಷೆಯಲ್ಲಿವೆ. ಕೊಡಗು ಜಿಲ್ಲೆಯ ಸಾಹಿತ್ಯಿಕ ಮೂಲ ಆಕರಗಳಲ್ಲಿ ಶಾಸನ ಬರಹಗಳು ಮುಖ್ಯವಾಗಿವೆ. ಇದು ಮಡಿಕೇರಿ ತಾಲೂಕಿಗೆ ಹೊರತಾಗಿಲ್ಲ. ಇಮ್ಮಡಿ ವೀರರಾಜೇಂದ್ರನ ಕಾಲದ ಒಂದು ಶಾಸನವು ಮಡಿಕೇರಿಯಲ್ಲಿದೆ. ಅದರಲ್ಲಿ ಮದೋನ್ಮತ್ತ ಆನೆಗಳ ಸಮೂಹದಿಂದ ಕೂಡಿದ ಅರಣ್ಯವನ್ನು ಹೊಕ್ಕ ವೀರರಾಜೇಂದ್ರನು ತನ್ನ ಪರಾಕ್ರಮದಿಂದ ಅವುಗಳ ಹಾವಳಿಯನ್ನು ತಪ್ಪಿಸಿದುದನ್ನು ಕಾವ್ಯಮಯವಾಗಿ ವರ್ಣಿಸುತ್ತದೆ. ಈ ಶಾಸನ ಬಹುಶಃ ಸಮರ್ಥ ಕವಿಯಿಂದಲೇ ರಚಿತವಾದುದು ಆಗಿರಬೇಕು.

ಕೊಡಗಿನ ಪ್ರಾಚೀನ ಕವಿಗಳ ಪರಂಪರೆಯನ್ನು ಸುಮಾರು 10ನೆಯ ಶತಮಾನದಿಂದಲೇ ಗುರುತಿಸುವ ಪ್ರಯತ್ನವನ್ನು ವಿದ್ವಾಂಸರು ಮಾಡಿದ್ದಾರೆ. ಗುಣಸೇನನೆಂಬ ಕನ್ನಡ ಕವಿಯು ಕ್ರಿ.ಶ. ಸುಮಾರು 1050ರಲ್ಲಿ ಉತ್ತರ ಕೊಡಗಿನ ಮುಳ್ಳೂರಿನಲ್ಲಿದ್ದನೆಂದು, ಈತನು ಸನಾತನ ಧರ್ಮದ ಷಡ್ದರ್ಶನಗಳಲ್ಲಿ ಪಾರಂಗತನಾಗಿದ್ದನು ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಕೊಡಗಿನ ಅರಸನಾಗಿದ್ದ ದೊಡ್ಡ ವೀರರಾಜೇಂದ್ರನು ಕನ್ನಡದಲ್ಲಿ ಬರೆಯಿಸಿದ ಕೃತಿಯೇ 'ರಾಜೇಂದ್ರನಾಮೆ'. ಕ್ರಿ.ಶ. 1810ರಿಂದ 1820ರ ವರೆಗೆ ಕೊಡಗಿನ ರಾಜನಾಗಿದ್ದ ಎರಡನೆಯ ಲಿಂಗರಾಜನು ಕವಿಯೂ, ಗ್ರಂಥಕರ್ತೃವೂ ಆಗಿದ್ದನೆಂದು ಹೇಳುತ್ತಾರೆ.

ಕ್ರಿ.ಶ. 1648ರ ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ವು ಸಾಹಿತ್ಯದಲ್ಲಿ ಕೊಡಗನ್ನು ಸ್ಪಷ್ಟವಾಗಿ ಮೂಡಿಸುವ ಮೊದಲ ಕನ್ನಡ ಕಾವ್ಯವೆಂದು ಊಹಿಸಿದ್ದಾರೆ.

'ಕೊಡಗಿನ ಇತಿಹಾಸ'ವೆಂಬ ಉಜ್ವಲ ಸಂಶೋಧನಾತ್ಮಕವಾದ ಗ್ರಂಥವನ್ನು ರಚಿಸಿದ ಕೀರ್ತಿ ಶ್ರೀ ಡಿ.ಎನ್. ಕೃಷ್ಣಯ್ಯ ಅವರಿಗೆ ಸಲ್ಲುತ್ತದೆ. ಇವರು 'ಸುಂದರನಾಡು ಕೊಡಗು' ಹಾಗೂ 'ವೀರರಾಜ ವಿಜಯ' ಎಂಬ ಕಾದಂಬರಿಯನ್ನು ಪ್ರಕಟಿಸಿದ್ದಾರೆ.

ಪ್ರಾದೇಶಿಕ ನೆಲೆಯಲ್ಲಿ ಕೊಡಗಿನ ಕನ್ನಡ ಸಾಹಿತ್ಯ ಬೆಳೆದು ಬಂದ ಸನ್ನಿವೇಶವನ್ನು ಅವಲೋಕಿಸಿದಾಗ, ವಿದ್ಯಾಭ್ಯಾಸದ ವಾತಾವರಣವೇ ವಿರಳವಾಗಿದ್ದ ಕಾಲ ಅದಾಗಿತ್ತು. ಆಂಗ್ಲರ ಆಡಳಿತಾವಧಿಯಲ್ಲಿ ಶಾಲೆಗಳು ಪ್ರಾರಂಭವಾದವು. ಕೊಡಗಿನಲ್ಲಿ ಬ್ರಿಟೀಷರು 1834ರ ಏಪ್ರಿಲ್‌ನಿಂದ 1947ರ ಆಗಸ್ಟ್ 15ರ ವರೆಗೆ ಆಳ್ವಿಕೆ ನಡೆಸಿದರು. ಆರಂಭದ ಕೃತಿಕಾರರ ಕಥಾವಸ್ತು ಇತಿಹಾಸ ಪುರಾಣಗಳೇ ಆಗಿದ್ದವು. ಕಾವ್ಯರಚನೆಗಳು ಭಕ್ತಿ ಪರಂಪರೆಯ ಹಿನ್ನೆಲೆಯಲ್ಲಿ ರೂಪಿತಗೊಂಡವು. ಕೊಡಗಿನ 'ನಾಟಕ ಕಲಾ ಪಿತಾಮಹ'ರೆಂಬ ಹೆಗ್ಗಳಿಕೆಗೆ ಪಾತ್ರರಾದ ಮಡಿಕೇರಿಯ ಕವಿ ವೆಂಕಟಾದ್ರಿ ಶಾಮರಾಯರು ದೇವರ ನಾಮ, ಕಥೆ, ಗೌರಿ ಹಾಡು, ಪದ್ಯಗಳನ್ನು ರಚಿಸಿ, ಆ ಕಾಲದ ಇತಿಮಿತಿಯಲ್ಲಿ ಅಂತರ್ಗತ ಅನುಭವವನ್ನು ಅಭಿವ್ಯಕ್ತಪಡಿಸಿದರು. ಆ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯದಲ್ಲಿ ನಾಟಕಗಳ ಭಾಷಾಂತರ ಕಾರ್ಯ ತ್ವರಿತಗತಿಯಿಂದ ಸಾಗುತ್ತಿತ್ತು. ಇಂಗ್ಲಿಷ್‌ನ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸುತ್ತಿದ್ದ ಇವರು ಕೂಡ 'ಶೇಕ್ಸ್‌ಪಿಯರ್'ನ 'ಆಸ್ ಯೂ ಲೈಕ್ ಇಟ್' ಕೃತಿಯನ್ನು 'ಕಮಲಾವತಿ ಪರಿಣಯ' ಎಂದು ಭಾಷಾಂತರಿಸಿದ್ದಾರೆ. ಪೌರಾಣಿಕ ನಾಟಕ ಬರೆಯುವುದರ ಮೂಲಕ ಜನರಲ್ಲಿ ಭಕ್ತಿ ಶ್ರದ್ಧೆಯನ್ನು ಮೂಡಿಸತೊಡಗಿದರು. ಚಂದ್ರಹಾಸ ನಾಟಕ, ಮದನಮೋಹನ ನಾಟಕ, ರತ್ನಾವಳಿ ಪರಿಣಯ,

ಕುಮುದ್ವತಿ ಪರಿಣಯ, ಇವರ ಪ್ರಮುಖ ನಾಟಕಗಳು.

ಡಾ. ಕೊರವಂಡ ಅಪ್ಪಯ್ಯ ಅವರು ಕೊಡವ ಭಾಷೆಯಲ್ಲಿ 'ಕೊಡಗರ ಕುಲಾಚಾರಾದಿ ತತ್ತ್ವೋಜ್ಜೀವಿನಿ' ಎಂಬ ಕೃತಿಯನ್ನು ಕನ್ನಡದಲ್ಲಿ 'ಇಹಪರಗ್ರಂಥ, ಅಸ್ಥಿಪಂಜರ, ವ್ಯವಸಾಯ ಬೋಧಿ, ಭಗವದ್ಗೀತೆಯ ಅನುವಾದ ಈ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವೆಲ್ಲಾ ಒಂದು ರೀತಿಯ ಮಾಹಿತಿಯನ್ನು ನೀಡುವ ಕೃತಿಗಳಾಗಿವೆ.

ಪೌರಾಣಿಕ ವಸ್ತುವನ್ನು ಆರಿಸಿ ಕೊಡವ ಭಾಷೆಯಲ್ಲಿ ನಾಲ್ಕು ನಾಟಕವನ್ನು ರಚಿಸಿದವರು ಕೊಡಗಿನ 'ಆದಿಕವಿ'ಯೆಂದು ಪ್ರಖ್ಯಾತರಾದ 'ಹರದಾಸ ಅಪ್ಪಚ್ಚಕವಿ' ಕಾವೇರಿ ನಾಟಕ, ಸಾವಿತ್ರಿ ನಾಟಕ, ಯಯಾತಿ, ರಾಜದಂಡನಾಯಕ ಹಾಗೂ ಸುಬ್ರಮಣ್ಯ ನಾಟಕಗಳನ್ನು ರಚಿಸಿದರು.

ಕೊಡವ ಭಾಷೆಯಲ್ಲಿ ಕೊಡವರ ಮೂಲ, ಬದುಕು ಮತ್ತು ಸಂಸ್ಕೃತಿಗಳನ್ನು ಕುರಿತು 'ಪಟ್ಟೋಲೆಪಳಮೆ' ಯನ್ನು ನಡಿಕೇರಿಯಂಡ ಚಿಣ್ಣಪ್ಪನವರು ಸಂಪಾದಿಸಿ ಪ್ರಕಟಿಸಿದ್ದಾರೆ. ಇವರೆಲ್ಲರೂ ಬ್ರಿಟಿಷ್ ವಸಾಹತುಶಾಹಿಯ ಸಂದರ್ಭದಲ್ಲಿ ಹುಟ್ಟಿದ ರಾಷ್ಟ್ರೀಯತೆಯಲ್ಲಿ ಹೋರಾಟಗಳಿಗೆ ಸ್ಪಂಧಿಸುತ್ತಲೇ ಸ್ಥಳೀಯ ಭಾಷೆ, ಸಾಹಿತ್ಯ, ಸಂಸ್ಕೃತಿಯ ಸಂರಕ್ಷಣೆಯನ್ನು ಮಾಡಿದವರು.

ಇದೇ ಕಾಲದ ಹೊತ್ತಿಗೆ ನವೋದಯ ಸಾಹಿತ್ಯ ಪಂಥ ಆರಂಭವಾಯಿತು. ಭಾರತೀಯರಲ್ಲಿ ಮೊದಲು ಬಂಗಾಳದಲ್ಲಿ ಕಾಣಿಸಿಕೊಂಡಿತು. ಇದು ಸಾಮಾಜಿಕ ಬದುಕನ್ನೇ ಒಳಗೊಂಡ ಸಾಹಿತ್ಯ ಪ್ರಕಾರ. ಹೊಸಬಗೆಯ ಕಾವ್ಯ, ಕತೆ, ಕಾದಂಬರಿ, ಪ್ರಬಂಧ, ನಾಟಕ, ವಿಮರ್ಶೆ ಮುಂತಾದ ಸಾಹಿತ್ಯ ವೈವಿಧ್ಯತೆಯನ್ನು ನೀಡಿತು. ನವೋದಯ ಕಾಲದ ಸಾಹಿತ್ಯದಲ್ಲಿ ನಿಸರ್ಗ ಪ್ರೇಮ ಮತ್ತು ಆಧ್ಯಾತ್ಮಿಕತೆಯ ಕಾಳಜಿಗಳು ಈ ಪಂಥದ ಕಾವ್ಯದಲ್ಲಿ ಮುಖ್ಯವಾದವು.

ಕೊಡವ ಸಾಹಿತಿಗಳ ಬರವಣಿಗೆಗಳಲ್ಲಿ ನವೋದಯದ ಛಾಯೆ ಕಾಣಿಸತೊಡಗಿತು. ಮಡಿಕೇರಿಯ ಸೆಂಟ್ರಲ್ ಹೈಸ್ಕೂಲ್‌ನಲ್ಲಿ ಮುಖ್ಯೋಪಾಧ್ಯಾಯರಾಗಿದ್ದ ಪಂಜೆಮಂಗೇಶರಾಯರು ಕವನ, ಸಣ್ಣಕತೆ, ಸಂಶೋಧನಾ ಬರಹಗಳು, ಮಕ್ಕಳ ಸಾಹಿತ್ಯ ಮೊದಲಾದವುಗಳನ್ನು ರಚಿಸಿ ಪ್ರಸಿದ್ಧರಾದರು. ಅವರ 'ಹುತ್ತರಿಹಾಡು' ಅತ್ಯುತ್ತಮ ಜನಪ್ರಿಯ ರಚನೆಯಾಗಿದೆ ಹಾಗೂ ಅವರು ತಮ್ಮ ರಚನೆಗಳ ಮೂಲಕ ಸಾಮಾಜಿಕ ಜಾಗೃತಿಯನ್ನು ಮೂಡಿಸಿದರು.

ಕ್ರಿ.ಶ. 1648ರ ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ'ವೂ ಸಾಹಿತ್ಯದಲ್ಲಿ ಕೊಡಗನ್ನು ಸ್ಪಷ್ಟವಾಗಿ ಮೂಡಿಸುವ ಮೊದಲ ಕನ್ನಡ ಕಾವ್ಯವೆಂದು ಊಹಿಸಿದ್ದಾರೆ.

ಕೊಡಗಿನಲ್ಲಿ ಕನ್ನಡ ಮತ್ತು ಕೊಡವ ಈ ಎರಡೂ ಭಾಷೆಗಳಲ್ಲಿ ಸಾಹಿತ್ಯ ರಚನೆಗೈಯಲು ಶ್ರಮಿಸಿದ ಹಲವಾರು ಹಿರಿಯ ಬರಹಗಾರರು 19ನೆಯ ಶತಮಾನದ ಉತ್ತರಾರ್ಧ ಮತ್ತು 20ನೆಯ ಶತಮಾನದ (ಆರಂಭದಲ್ಲಿ) ಪೂರ್ವಾರ್ಧದಲ್ಲಿ ಕಂಡು ಬರುತ್ತಾರೆ. ಇವರಲ್ಲಿ (ನಾಟಕ) ಕಲಾಪಿತಾಮಹರೆಂಬ ಹೆಗ್ಗಳಿಕೆಗೆ ಪಾತ್ರರಾದ ಮಡಿಕೇರಿಯ ವೆಂಕಟಾದ್ರಿ ಶಾಮರಾವ್ ಒಬ್ಬರು. ಇವರು 1894ರಿಂದ 1917ರ ವರೆಗೆ ನಾಟಕ, ದೇವರನಾಮ, ಕಥೆ, ಗೌರಿಹಾಡು ಪದ್ಯಗಳನ್ನು ರಚಿಸಿ, ಆ ಕಾಲಘಟ್ಟದಲ್ಲಿ ಸಾಹಿತ್ಯದ ಪ್ರಭೆಯನ್ನು ಕೊಡಗಿನಲ್ಲಿ ಬೀರಿದವರು.

ಮಡಿಕೇರಿ ತಾಲೂಕು ಕಡಗದಾಳು ಗ್ರಾಮದ ಡಾ. ಕೊರವಂಡ ಅಪ್ಪಯ್ಯ ಅವರು 'ನೀರಿನ ಜಲ ರತ್ನಾಕರ', 'ಗೋರಕ್ಷಣೆ', 'ಕೊಡಗರ ಕುಲಾಚಾರಾದಿ ತತ್ತ್ವೋಜ್ಜಿಜ್ಜೀವಿನಿ', 'ಇಹಪರ ಗ್ರಂಥ', 'ಅಸ್ಥಿಪಂಜರ' ಮೊದಲಾದ ಕೃತಿಗಳನ್ನು ರಚಿಸಿ, ಸಾಹಿತ್ಯ ಸೇವೆಗೈದರು.

ಮೂರ್ನಾಡುವಿನವರಾದ ಪಾಂಡಂಡ ಮುತ್ತಣ್ಣ ಅವರು 'ಕೊಡಗಿನ ಕೈಪಿಡಿ' 'ಕುಲವೃದ್ಧಿ' 'ಸ್ವರ್ಗಮಾನ', 'ನಾಗರಿಕತೆಯ ಪರಿಣಾಮ' ಎಂಬ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕೊಡಗು-ರಾಜರ ಕಾಲದಿಂದ ಕೊಡಗಿನಲ್ಲಿ ನಡೆದ ಕಾಂಗ್ರೆಸ್ ಚಳುವಳಿಯವರೆಗಿನ ವೃತ್ತಾಂತವನ್ನು ಇವರು ತಮ್ಮ 'ಕೊಡಗಿನ ಕೈಪಿಡಿ'ಯಲ್ಲಿ ನಿರೂಪಿಸಿದ್ದಾರೆ. ಬೆಟ್ಟತ್ತೂರು ಗ್ರಾಮದ ಆಪಾಡಂಡ ಗಣಪತಿ ಅವರು ಕನ್ನಡ ಮತ್ತು ಕೊಡವ ಭಾಷೆಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಕೊಡವ ಮಹಾಪುರಾಣ, ಶಿವಭಕ್ತಿಸಾರ, ವಿಷ್ಣುಭಕ್ತಿಸೋತ್ರ, ನವೀನಕಲಿಸ್ತ್ರೀ ಮಹಿಮೆ ಮೊದಲಾದವು ಇವರ ಕೃತಿಗಳು.

ಸಾಹಿತಿ ಹಾಗೂ ಶಿಕ್ಷಣ ತಜ್ಞರಾದ ಶ್ರೀಬಿದ್ದಂಡ ಸುಬ್ಬಯ್ಯ ಕುಶಾಲಪ್ಪನವರು ಕಾವೇರಿ ಕಥೆ, ಅಚ್ಚುನಾಯಕ, ಹೊನ್ನಮ್ಮನ ಕಥೆ, ಕಲ್ಯಾಟ ಅಜ್ಜಪ್ಪ, ಓಂಕಾರೇಶ್ವರ, ಒಕ್ಕಲುತನ, ಪನ್ನಂಗಾಲತಮ್ಮೆ ಮುಂತಾದ ಕೃತಿಗಳನ್ನು ರಚಿಸಿರುವರು. ಕೊಡಗಿನ ಚರಿತ್ರೆಗೆ ಹಾಗೂ ಜನಪದ ಕಥೆಗಳಿಗೆ ಹೆಚ್ಚು ಒತ್ತನ್ನು ನೀಡಿರುವದು ಕಂಡುಬರುತ್ತದೆ.

ನಡಿಕೇರಿಯಂಡ ಸುಬ್ಬಯ್ಯ ಅವರು ಸಹ ಅನೇಕ ಕಥೆ, ಕವನ, ನಾಟಕಗಳನ್ನು ರಚಿಸಿದ್ದಾರೆ. ಇವರೆಲ್ಲರ ಬರವಣಿಗೆಯಲ್ಲಿ ಆಧ್ಯಾತ್ಮಿಕ, ಸಾಮಾಜಿಕ, ಕೌಟುಂಬಿಕ ಚಿಂತನೆಯ ಕಳಕಳಿ ಇದೆ.

ಮಡಿಕೇರಿಯ ಜಿ.ಎಸ್. ಕೇಶವಾಚಾರ್ಯರು, 'ಕೊಡಗಿನ ಒಡೆಯರು' ಎಂಬ ಕೃತಿಯನ್ನು ಬರೆದಿದ್ದಾರೆ. ಕೊಡಗಿನಲ್ಲಿ ಅಧ್ಯಾಪಕರಾಗಿದ್ದಾಗ ಕನ್ನಡ, ಸಂಸ್ಕೃತ ಹಾಗೂ ಮರಾಠಿ ಭಾಷೆಗಳಲ್ಲಿ ಗ್ರಂಥಗಳನ್ನು ರಚಿಸಿದವರು ಓಡ್ಲಮನೆ ಆತ್ಮರಾಮ ಶಾಸ್ತ್ರಿಗಳು. ಕನ್ನಡದಲ್ಲಿ ಹಿಂದು ಹಿತವಿವೇಕ, ಸಂಕ್ಷೇಪ ಗೀತಾ, ಕೇತುಭಂಗ, ನಾಟಕ ಕಥೆ, ಶ್ರೀಕೃಷ್ಣಚರಿತಾಮೃತ, ರಾಮದಾಸ ಸ್ವಾಮಿಗಳ ಅವತಾರ ರಹಸ್ಯ, ಸನಾತನ ಧರ್ಮ ಅವರ ಪ್ರಮುಖ ಕೃತಿಗಳು.

ಕನ್ನಡ ಸಾಹಿತ್ಯದ ನವೋದಯ ಕಾಲದಲ್ಲಿ ಕಥಾ ಸಂಕಲನವನ್ನು ಸೃಷ್ಟಿಸಿ ಅಮರರಾದ ಗೌರಮ್ಮ ಕೊಡಗಿನ ಪ್ರಥಮ ಮಹಿಳಾ ಕಥೆಗಾರ್ತಿ. ಇವರು ಸಾಮಾಜಿಕ ಅನಿಷ್ಟ ಪದ್ಧತಿಗಳ ಮೇಲೆ ಸೌಜನ್ಯಯುತ ದಂಗೆ ಎಬ್ಬಿಸಿದರು. ಕೇವಲ ತಮ್ಮ 19ನೆಯ ವಯಸ್ಸಿನಲ್ಲಿ ಕಥಾಲೋಕಕ್ಕೆ ಪಾದಾರ್ಪಣೆ ಮಾಡಿದ ಇವರು ಶೋಷಿಸಲ್ಪಟ್ಟ, ಕಡೆಗಣಿಸಲ್ಪಟ್ಟ ಅವಹೇಳನಕ್ಕೆ ಒಳಗಾದ ಮಹಿಳೆಯರ ಹಾಗೂ ಹರೆಯದ ಯುವತಿಯರ ಕಾರ್ಪಣ್ಯತಮ ಜೀವನದ ಕುರಿತು ಸುಧಾರಣೆಯ ಖಡ್ಗವನ್ನು ಬೀಸಿದರು. ತಮ್ಮ ಕಥಾ ಸರಣಿಯಲ್ಲೇ ಸಾಮಾಜಿಕ ಪರಿವರ್ತನೆಯ ಬೀಜ ಬಿತ್ತಿದವರು ಇವರು 21 ಸಣ್ಣಕತೆ ಬರೆದಿದ್ದಾರೆ. 'ಮುನ್ನಾದಿನ', 'ಮರದ ಬೊಂಬೆ', 'ಆಹುತಿ', 'ಮನುವಿನ ರಾಣಿ' ಪ್ರಮುಖ ಕತೆಗಳಾಗಿವೆ. 'ಚಿಗುರು', 'ಕಂಬನಿ' ಇವರ ಕಥಾ ಸಂಕಲನಗಳು.

ಕೊಡಗಿನ ಸಾಹಿತ್ಯ ದುಂದುಭಿಯ ದಿವ್ಯನಾದವನ್ನು ಕನ್ನಡ ನಾಡಿನಾದ್ಯಂತ ಮೊಳಗಿಸಿದವರು ಶ್ರೀ ಎಸ್.ಆರ್. ನಾರಾಯಣರಾವ್ ಅವರು. ಭಾರತೀಸುತರೆಂಬ ಕಾವ್ಯನಾಮದಿಂದ ಪ್ರಸಿದ್ಧರಾದವರು. ಅವರು ಸುಮಾರು 28 ಸ್ವತಂತ್ರ ಕಾದಂಬರಿಗಳನ್ನು, 8 ಕಥಾಸಂಕಲನಗಳನ್ನು, 19 ಮಕ್ಕಳ ಕಥೆಗಳನ್ನು, ಹಲವು ಅನುವಾದಿತ ಕೃತಿಗಳನ್ನು ರಚಿಸಿದ್ದಾರೆ. ವಿವಿಧ ಸಾಹಿತ್ಯ ಪ್ರಾಕಾರಗಳಲ್ಲಿ ಅವರು ರಚಿಸಿದ ಕೃತಿಗಳು ಸುಮಾರು 64. 'ಎಡಕಲ್ಲು ಗುಡ್ಡದ

ಮೇಲೆ', 'ಬಯಲುದಾರಿ', 'ಗಿರಿಕನ್ಯೆ', 'ಹುಲಿಯ ಹಾಲಿನ ಮೇವು' ಮುಂತಾದ ಕೃತಿಗಳು, ಚಲನಚಿತ್ರ ಕಥಾ ವಸ್ತುಗಳಾಗಿ ಪರಿವರ್ತನೆಗೊಂಡು ಕಲಾಪ್ರೇಮಿಗಳ ಮನ್ನಣೆಯನ್ನು ಪಡೆದಿವೆ. ಮಂಗಳೂರು ವಿಶ್ವವಿದ್ಯಾನಿಲಯ ಪದವಿ ತರಗತಿಗಳಿಗೆ ಅವರ ಕಥೆಯನ್ನು ಪಠ್ಯ ಪುಸ್ತಕವನ್ನಾಗಿ ಇರಿಸಿರುವುದು ಕಥೆಗಳಲ್ಲಿನ ಸ್ವೋಪ್ರಜ್ಞತೆಗೆ ಸಾಕ್ಷಿಯಾಗಿದೆ. ಇವರ 'ಗಿರಿಕನ್ಯಾ', 'ಗಿಳಿಯು ಪಂಜರದೊಳಿಲ್ಲ' ಕಾದಂಬರಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿದೆ. ಕನ್ನಡಕ್ಕಾಗಿ ತನುಮನಗಳನ್ನು ಅರ್ಪಿಸಿ ದುಡಿದ ಮಹಾನ್ ಸಾಹಿತಿ ಇವರು.

ಡಾ|| ಐ.ಮಾ. ಮುತ್ತಣ್ಣ ಅವರು ವೀರಾಜಪೇಟೆ ತಾಲೂಕಿಗೆ ಸೇರಿದವರಾಗಿದ್ದರೂ, ಆರಂಭದಲ್ಲಿ ಕೆಲವು ಕಾಲ ಮಡಿಕೇರಿಯಲ್ಲಿದ್ದವರು. ಅವರು 60ಕ್ಕಿಂತಲೂ ಅಧಿಕ ಕೃತಿಗಳನ್ನು ಕನ್ನಡ, ಇಂಗ್ಲಿಷ್, ಕೊಡವ ಭಾಷೆಯಲ್ಲಿ ಪ್ರಕಟಿಸಿದ್ದಾರೆ. ಅವರ 'ಭಾರತ ಸಾಹಿತ್ಯ ಸಂಸ್ಕೃತಿಗೆ ಪಾಶ್ಚಾತ್ಯ ವಿದ್ವಾಂಸರ ಸೇವೆ' ಎಂಬ ಕೃತಿ ಅತ್ಯಂತ ಪ್ರಾತಿನಿಧಿಕ ಕೃತಿಯಾಗಿದೆ.

ಕೊಡಗಿನ ನಿಸರ್ಗ ಸೌಂದರ್ಯದಿಂದ ಪ್ರಭಾವಿತರಾಗಿ ತಮ್ಮ ಅನಂತ ಭಾವನೆಗಳನ್ನು ನಾಡುನುಡಿಯ ರೂಪದಲ್ಲಿ ಹೊಮ್ಮಿಸಿದ ಸಾಹಿತಿ ಶ್ರೀ. ಬಿ.ಡಿ. ಗಣಪತಿಯವರು. ಪತ್ರಾವಳಿ, ಕುಸುಮತೆಯ ಪ್ರತಿಧ್ವನಿ, ಪಂಚಾಮೃತ, ತುಂತುರು, ಮಾನವ, ಪ್ರೇಮದ ದಾರಿಯಲ್ಲಿ ಅಂತಃಕರಣ, ಕನ್ನಿಕಾವೇರಿ, ಜೀವನದರ್ಶನ ಮೊದಲಾದ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಸಾಮಾಜಿಕ ಕಾಳಜಿ ಅವರ ಕೃತಿಗಳಲ್ಲಿ ಕಂಡು ಬರುತ್ತದೆ.

'ಕಾಕೆಮಾನಿ' ಎಂಬ ಕಾವ್ಯನಾಮವನ್ನು ಹೊಂದಿದ್ದ ಶ್ರೀ ಬಿ.ಡಿ. ಸುಬ್ಬಯ್ಯ ಅವರು ಉತ್ತಮ ಕಥೆ, ಕಾದಂಬರಿಗಳನ್ನು ಬರೆದು ಪ್ರಕಟಿಸಿದ್ದಾರೆ. ಇವರು 'ಅಚ್ಚುನಾಯಕ' ಎಂಬ ಕೊಡಗು- ಕನ್ನಡ ಭಾಷಾ ಚಲನಚಿತ್ರದ ಕಥಾವಸ್ತುವನ್ನು ತಯಾರಿಸಿದವರು. ಕೋಟಿಚೆನ್ನಯ್ಯ ಬಿಲ್ಲು-ಬಾಣ ಅವರ ಪ್ರಮುಖ ಕೃತಿಗಳು.

ಶ್ರೀ ಎದುರ್ಕಳ ಶಂಕರನಾರಾಯಣ ಭಟ್ಟರು ತತ್ವಶಾಸ್ತ್ರದ ಹಿನ್ನೆಲೆಯಲ್ಲಿಯೇ ಎರಡು ಪ್ರಮುಖ ಕೃತಿಗಳನ್ನು ನೀಡಿದ್ದಾರೆ. 'ಹಿಂದೂ ಧರ್ಮದ ಪರಿಚಯ' ಎಂಬ ಕೃತಿಯಲ್ಲಿ ಭಾರತೀಯ ತತ್ವಶಾಸ್ತ್ರದ ವಿವಿಧ ಪ್ರಸ್ಥಾನಗಳನ್ನು, ಅವುಗಳ ಬಗ್ಗೆ ಒಂದು ಪರಿಣಿತ ನೋಟ ಓದುಗರಿಗೆ ಲಭ್ಯವಾಗುವಂತೆ ಆಕರ್ಷಕವಾಗಿ ಅಭಿವ್ಯಕ್ತಪಡಿಸಿದ್ದಾರೆ. ಇವರು ತಮ್ಮ 'ಕಾವೇರಿ ವೈಭವ' ಕೃತಿಯಲ್ಲಿ ಕಾವೇರಿಯ ಉಗಮದಿಂದ ಹಿಡಿದು, ಆಕೆ ಸಮುದ್ರದಲ್ಲಿ ಸಂಗಮಗೊಳ್ಳುವವರೆಗೂ ತಾವು ಪಯಣಿಸಿ ಕಾವೇರಿಯ ದಡದಲ್ಲಿ ತಲೆ ಎತ್ತಿ ನಿಂತ ಪುಣ್ಯ ಸ್ಥಳಗಳನ್ನು, ಅವುಗಳ ಮಹಿಮಾಸ್ಪದವಾದ ಸ್ಥಳ, ಪುರಾಣಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ.

ಬಹುಮುಖ ಪ್ರತಿಭೆಯ ಅಪರೂಪದ ವ್ಯಕ್ತಿಯಾಗಿ ಶ್ರೀ ಬಿ.ಎಸ್. ಗೋಪಾಲಕೃಷ್ಣ ಅವರು ತಮ್ಮ 'ಶಕ್ತಿ' ದಿನಪತ್ರಿಕೆಯ ಮೂಲಕ ಸಾಹಿತ್ಯದ ಕೃಷಿಯನ್ನು ಮಾಡಿದ ಅಗ್ರಮಾನ್ಯರು. ಮಹಾಭಾರತದ ಭೀಮ, ರತ್ನಗರ್ಭ, ಉಭಯಕುಶಲೋಪರಿ, ಚಿಂತನ, ಸೊಡರು, ಸರಳಚಿಕಿತ್ಸೆ, ಭಗ್ನತಂತು ಇವರ ಪ್ರಮುಖ ಕೃತಿಗಳಾಗಿವೆ. 'ಸೊಡರು' ಎಂಬುದು ಅವರ ಕವನ ಸಂಕಲನವಾಗಿದೆ. 'ಸತ್ಯದರ್ಶನ', 'ಶ್ರೀಕೃಷ್ಣಚರಿತೆ' ಆಧ್ಯಾತ್ಮಿಕ ಕೃತಿಗಳಾಗಿವೆ.

ತಲಕಾವೇರಿಯ ವಿದ್ವಾನ್ ನಾರಾಯಣಾಚಾರ್ಯ ಅವರು ಮಾತೆ ಕಾವೇರಿಯನ್ನು ಕುರಿತ ಮೂಲ ಸಂಸ್ಕೃತದ ಕೃತಿಯನ್ನು 'ಶ್ರೀ ಸ್ಕಾಂದಪುರಾಣಾಂತರ್ಗತ ಶ್ರೀ ಕಾವೇರಿ ಮಹಾತ್ಮ್ಯೆ' ಎಂಬ ಹೆಸರಿನಲ್ಲಿ ಕನ್ನಡಕ್ಕೆ ಭಾಷಾಂತರಿಸಿದ್ದಾರೆ.

ಶ್ರೀ ಕೋಟೇರ ಮುತ್ತಣ್ಣನವರು 'ಜಗತ್ತಿಗೊಂದೇ ಕೊಡಗು' ಎಂಬ ಸಂಶೋಧನಾಕೃತಿಯನ್ನು, ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥವನ್ನು ಬರೆದಿರುವರು.

ಕೂತಂಡ ಪಾರ್ವತಿ ಪೂವಯ್ಯನವರು ಕೂಡ ಕಥೆ, ಕವನಗಳನ್ನು ರಚಿಸಿದ್ದಾರೆ. ಪಾಂಡಂಡ ಮುತ್ತಣ್ಣನವರು 'ಕೊಡಗು ಕೈಪಿಡಿ', ಮೂರು ಚಿಕ್ಕ ಸಾಮಾಜಿಕ ನಾಟಕಗಳು ಹಾಗೂ ಇಂಗ್ಲಿಷ್‌ನಲ್ಲಿ 'ಕೂರ್ಗ್ ಅಂಡ್ ದಿ ಕೂರ್ಗ್ಸ್' ಎಂಬ ಕೃತಿಯನ್ನು ರಚಿಸಿದ್ದಾರೆ.

ಖ್ಯಾತ ಕವಿ ಮತ್ತು ಗಮಕಿ ಎಂ.ಎಸ್. ಅನಂತ ಸುಬ್ಬರಾಯರು ಕೊಡಗಿನಲ್ಲಿ ಗಮಕ ಕಲಾಸಕ್ತಿಯನ್ನು ಮೂಡಿಸಿದ್ದಲ್ಲದೆ, ಶ್ರೀಕೃಷ್ಣಚರಿತಾಮೃತ, ಶ್ರೀಮಧ್ವವಿಜಯ ಮುಂತಾದ ಕೃತಿಗಳ ಕರ್ತೃಗಳಾಗಿದ್ದಾರೆ.

ಮಡಿಕೇರಿಯ ಸರಕಾರಿ ಕಾಲೇಜಿನಲ್ಲಿ ಬಹುಕಾಲ ಸೇವೆ ಸಲ್ಲಿಸಿದ್ದ ಶ್ರೀ ಜಿ.ಟಿ. ನಾರಾಯಣರಾವ್ ಅವರು, 'ವನಸುಮ' ಎಂಬ ಸಣ್ಣಕತೆಗಳ ಸಂಕಲನವನ್ನು ಹೊರತಂದಿದ್ದಾರೆ. ನಕ್ಷತ್ರಲೋಕ, ಮಾನವ ಚಂದ್ರನ ಮೇಲೆ, ಕೊಪರ್ನಿಕಸ್, ವೈಜ್ಞಾನಿಕ ಮನೋಧರ್ಮ ಜಾತಕ ಮತ್ತು ಭವಿಷ್ಯ, ಎನ್.ಸಿ.ಸಿ. ದಿನಗಳು ಮೊದಲಾದುವು ಇವರ ಮುಖ್ಯ ಕೃತಿಗಳು. 'ಸವಾಲನ್ನು ಎದುರಿಸುವ ಛಲ' ಎಂಬ ಕೃತಿ ಮಂಗಳೂರು ವಿಶ್ವವಿದ್ಯಾನಿಲಯದ ಪದವಿ ತರಗತಿಗಳಿಗೆ ಪಠ್ಯಪುಸ್ತಕವಾಗಿತ್ತು.

ಡಾ.ಕೆ. ಕುಶಾಲಪ್ಪ ಗೌಡರು ತಮ್ಮದೇ ಆದ ಕೊಡುಗೆಯನ್ನು ಕೊಡಗಿನ ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ. ಇವರು ಪ್ರಸಿದ್ಧ ಭಾಷಾ ವಿಜ್ಞಾನಿಯಾಗಿದ್ದು, ಅನೇಕ ಕೃತಿಗಳನ್ನು ರಚಿಸಿದ್ದಾರೆ. ಅರೆಗನ್ನಡ ಭಾಷೆಯ ಬಗ್ಗೆ ಬರೆದ 'ಗೌಡ ಕನ್ನಡ', 'ಕನ್ನಡ ಭಾಷೆ' ಮತ್ತು 'ವ್ಯಾಕರಣಗಳ ಒಂದು ಅಧ್ಯಯನ' ಎಂಬ ಕೃತಿ ಪ್ರಮುಖವಾಗಿದೆ.

ಉದ್ಯೋಗ ನಿಮಿತ್ತ ಕೊಡಗಿಗೆ ಬಂದು ಸಾಹಿತ್ಯ ರಚನೆ ಮಾಡಿದವರಲ್ಲಿ ಪ್ರಮುಖವಾಗಿ ಶ್ರೀ ಎಲ್.ಎಸ್. ಶೇಷಗಿರಿರಾವ್, ಶ್ರೀ ಟಿ. ಕೇಶವ ಭಟ್, ಶ್ರೀ ಸಿದ್ಧಯ್ಯ ಪುರಾಣಿಕರು, ಡಾ. ರಾಮಾನುಜಂ, ಇವರೆಲ್ಲರೂ ತಮ್ಮದೇ ಆದ ಕೊಡುಗೆಯನ್ನು ಕೊಡಗಿನ ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ನಾಪೋಕ್ಲಿನವರಾಗಿದ್ದು, ಈಗ ಕುಶಾಲನಗರದಲ್ಲಿ ನೆಲೆಸಿರುವ ಶ್ರೀಮತಿ ಎಂ.ಎ. ನೀಲಮ್ಮನವರು ಪ್ರಮುಖ ಕತೆಗಾರ್ತಿ. 'ಯೋಗಿನಿ' ಇವರ ಕಾವ್ಯನಾಮ. 'ಅಚ್ಚುತನಾಯಕ' ಹಾಗೂ 'ಪೊನ್ನಪ್ಪ' ಎಂಬ ಕೃತಿಗಳನ್ನು ಮಾತ್ರವಲ್ಲದೆ, 'ಅಂಕುರ', 'ಮಸಣದ ಕೂಗು' ಎಂಬ ಕಥಾ ಸಂಕಲಗಳನ್ನು, 'ವಾಸ್ತವ' ಎನ್ನುವ ಕವನ ಸಂಕಲನವನ್ನು ರಚಿಸಿದ್ದಾರೆ. 'ಅರಳದ ಮೊಗ್ಗು' ಎಂಬ ಕೃತಿ ಶ್ರೀಮತಿ ಪಾಂಡಂಡ ತಂಗಮ್ಮ ಅವರ ಕವನ ಸಂಗ್ರಹವಾಗಿದೆ. ಶ್ರೀ ಅಂಬಳೆ ಸುಬ್ಬರಾವ್ ಅವರು ಮಡಿಕೇರಿಯಲ್ಲಿ ನೃತ್ಯ ಸಂಗೀತ ಶಾಲೆ ಆರಂಭಿಸಿ ಕಲೆಯ ಸುಗಂಧವನ್ನು ನಾಡಿನಾದ್ಯಂತ ಪಸರಿಸಿದವರು. 'ಶ್ರೀರಾಮಕೃಷ್ಣಚರಿತಾಮೃತ', 'ಪ್ರಾರ್ಥನೆ', 'ಗೀತ ತರಂಗ' ಇವರ ಪ್ರಮುಖ ಕೃತಿಗಳು. ಶ್ರೀಮಹಾಬಲೇಶ್ವರ ಭಟ್ ಅವರು ಕನ್ನಡದಲ್ಲಿ 'ಅವತಾರ' ಹಾಗೂ 'ಕಹಳೆ' ಎಂಬ ಸಾಮಾಜಿಕ ಚಳುವಳಿಯ ಕೃತಿಯನ್ನು ಪ್ರಕಟಿಸಿದ್ದಾರೆ.

ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ ಅವರ ಪ್ರಮುಖ ಕೃತಿಗಳು 'ಒಡೆದ ಪ್ರತಿಮೆ', 'ಸ್ವಯಂಪ್ರಭೆ', 'ಅದೃಷ್ಟದ ಹುಡುಗಿ', 'ತಕ್ಕಡಿಯ ಮುಳ್ಳು' ಮೊದಲಾದವು. ಇವರ 'ಬಂಟಮಲೆ ಕವನ' ಕೇರಳ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ತರಗತಿಗೆ ಪಠ್ಯವಾಗಿತ್ತು.

ಮಡಿಕೇರಿ ತಾಲೂಕು ಪೆರಾಜೆಯ ಎಂ.ಬಿ. ಶಿವರಾಯರು 'ನೆರಳಡಿಯಲ್ಲಿ', 'ಬಳ್ಳಿ', 'ಪುಷ್ಪಮಂದಿರ', 'ರಸನಿಧಿ', 'ಹೊಂಗನಸುಗಳು' ಎಂಬ ಕೃತಿಗಳನ್ನು ರಚಿಸಿದ್ದಾರೆ.

ಕೊಡೆಕಲ್ ವಿದ್ಯಾಧರನವರ ಕಥಾ ಸಂಕಲನ ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪನವರ ಕೊಡಗು ಗೌಡ ಸಂಸ್ಕೃತಿ ಸೋಬಾನೆ ಸಂಗ್ರಹ 'ಹಸೆಮಣೆ', ಗೌಡ ಸಂಸ್ಕೃತಿ ಆಚರಣೆಗಳ ಸಂಗ್ರಹ ಈಗ ಅನಾವರಣಗೊಳ್ಳಲಿರುವ ಅಕ್ಷಯ ಬಡುವಂಡ ಆಶಾಕುಮಾರಿಯವರ 'ಕಾಸ್ತಾಳಿ', ಪಟ್ಟಡ ಪ್ರಭಾಕರನವರ 'ನನ್ನ ಕನಸಿನ ಮಡಿಕೇರಿ', ಪೂಜಾರಿ ಮೊಣ್ಣಪ್ಪನವರ 'ಸ್ವಾತಂತ್ರ್ಯ ಹೋರಾಟ', ಬಾರಿಯಂಡ ಜೋಯಪ್ಪನವರ ಯಾರ ಬೇಟೆ ಮತ್ತು ಇತರ ಪ್ರಸಂಗಗಳು ಹಾಗೂ 'ಚಾಂಪಾ '... ಅರೆಭಾಷೆಯ ಮೊದಲ ಕಥಾ ಸಂಕಲನ ಹೊದ್ದೆಟ್ಟಿ ಭವಾನಿ ಶಂಕರನವರ ಸಂತೃಪ್ತಿ, ಕುದುರುಳಿ ಮಿಲನ್‌ನವರ 'ಭಾವಲಹರಿ' ಎಂಬ ಕವನ ಸಂಕಲನ ಅನಾವರಣಗೊಂಡಿದೆ.

ಹೀಗೆ ಕೊಡಗಿನ ಮಡಿಕೇರಿ ತಾಲೂಕಿನಲ್ಲಿ ಕನ್ನಡ ಸಾಹಿತ್ಯ ನಿಧಾನಗತಿಯಲ್ಲಿ ಪ್ರಾರಂಭವಾದರೂ, ಜೀವನಾನುಭವದೊಂದಿಗೆ, ಭಕ್ತಿ-ಶ್ರದ್ಧೆಗಳು ಸಾಹಿತ್ಯಕ್ಕೆ ಹೊಸತನವನ್ನು ತಂದುಕೊಟ್ಟಿವೆ. ಜಗದ ಚೆಲುವಿನ ಆರಾಧನೆಯೊಂದಿಗೆ ದೈವಿಕ ಅನುಭವ, ಭಾವತೀವ್ರತೆ, ಗೇಯತೆ ಇಲ್ಲಿಯ ಕವಿಗಳ ಕಾವ್ಯದಲ್ಲಿ ಮೈದಾಳಿರುವುದನ್ನು ಗುರುತಿಸಬಹುದು. (ದಟ್ಟವಾದ ಪ್ರಗತಿಶೀಲ)


ಇಲ್ಲಿಯ ಅನೇಕ ಬರಹಗಾರರು ಕಥೆ, ಕಾದಂಬರಿ, ವಿಮರ್ಶೆ, ಕವನ ಸಂಶೋಧನಾ ಬರಹಗಳನ್ನು ರಚಿಸಿ, ಪತ್ರಿಕೆಯ ಮೂಲಕ ಪ್ರಚುರಪಡಿಸುತ್ತಿರುವರು. ಪತ್ರಕರ್ತರಾದ ರಾಜೇಂದ್ರ, ಅನಂತಶಯನ ಹಾಗೂ ಚಿದ್ವಿಲಾಸ್ ಅವರುಗಳು ಪ್ರಕಟಿಸಿರುವ ಚಿಂತನಾತ್ಮಕವಾದ ವಿಮರ್ಶಾ ಲೇಖನಗಳು ಪ್ರಮುಖವಾದವು. ಜಿ.ಟಿ. ರಾಘವೇಂದ್ರರಾವ್, ಶ್ರೀ ನೆಂಪುಕೃಷ್ಣಭಟ್, ಶ್ರೀ ಉಳ್ಳಿಯಡ ಪೂವಯ್ಯ, ಶ್ರೀಮತಿ ಡಾಟಿ ಪೂವಯ್ಯ, ಶ್ರೀಮತಿ ಬೈತಡ್ಕ ಜಾನಕಿ ಬೆಳ್ಯಪ್ಪ, ಪೂಜಾರಿರ ಮೊಣ್ಣಪ್ಪ, ಪಟ್ಟಡ ಪ್ರಭಾಕರ ಎನ್.ಎಸ್. ದೇವಿಪ್ರಸಾದ್, ಜಬ್ಬಾರ್ ಸಮೋ, ಬಿ.ಆರ್. ಜೋಯಪ್ಪ, ಪೂ.ರಾ. ಶ್ರೀನಿವಾಸ್, ಸಿ.ಎಸ್. ಸುರೇಶ್, ಗಿರೀಶ್ ಕಿಗ್ಗಾಲು, ನಾಗೇಶ್ ಕಾಲೂರು, ಶ್ರೀ ಕೇಶವ ಪೆರಾಜೆ, ತಂಬಂಡ ವಿಜಯ್ ಪೂಣಚ್ಚ, ಎಂ.ಎಂ. ಮಹಮ್ಮದ್, ಜನನಿ ತಾಳತ್‌ಮನೆ, ಇನ್ನೂ ಅನೇಕ ಸಾಹಿತಿಗಳು ಈ ಕ್ಷೇತ್ರದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಕೊಡಗಿನ ಸಾಹಿತ್ಯ ವಿರಳ ಎಂಬ ಮಾತನ್ನು ಸಂಪೂರ್ಣವಾಗಿ ಹುಸಿಗೊಳಿಸಲಿದ್ದಾರೆ ಈ ಎಲ್ಲಾ ಚಿಂತನಶೀಲ ಸಾಹಿತಿಗಳು. ಎಲ್ಲರ ಹೆಸರನ್ನು ಇಲ್ಲಿ ಸೂಚಿಸಲಾಗದಿದ್ದರೂ, ಅನೇಕ ಬರಹಗಾರರು ತಮ್ಮದೇ ಆದ ನವೀನ ವೈಚಾರಿಕ ಪ್ರಜ್ಞೆಯೊಂದಿಗೆ ಬರವಣಿಗೆಯಲ್ಲಿ ತೊಡಗಿರುವುದು ಹೆಮ್ಮೆಯ ವಿಷಯ. ಇವರಲ್ಲಿ ಕನ್ನಡ ಸಾಹಿತ್ಯ ಧ್ವನಿಸಿದ್ದು, ಬದುಕಿನ ನಶ್ವರತೆಯನ್ನಲ್ಲ. ಭೋಗದ ನಶ್ವರತೆಯನ್ನು. ಈ ಸಾಹಿತ್ಯ ಮನಸ್ಸಿಗೆ ತಂದದ್ದು ಬದುಕಿನ ಪ್ರೀತಿ, ಅಧಿಕಾರ ನಿರ್ವಹಣೆಯ ರೀತಿ, ಇಂದಿನ ಉದಯೋನ್ಮುಖ ಬರಹಗಾರರು ಸಾಮಾಜಿಕ ಸಂವೇದನೆ, ಚಲನಶೀಲ ಚಿಂತನೆಗಳನ್ನು ಪ್ರತಿಪಾದಿಸತೊಡಗಿದ್ದಾರೆ.

ಕೊಡಗಿನ ಸಾಹಿತ್ಯದ ಜಲಧಾರೆ ನಿರಂತರ ಪ್ರವಹಿಸಲಿ. ಈ ನಾಡು ಮಹಾನ್ ಕವಿಗಳನ್ನು ಕಾಣುವಂತಾಗಲಿ.

◆◆◆◆◆

ಅರೆಭಾಷೆ ವಾರ್ತೆ



-ವೈ.ಡಿ. ಕೇಶವಾನಂದ,
D.y.s.p.(Rtds)ಗಾಳಿಬೀಡು.

(ಸುದ್ದಿ ಜೊಂಪೆ)

ಸನ್ 2006ನೇ ಇಸವಿ ಡಿಸಂಬರ್ ತಿಂಗಳಲ್ಲಿ ಗಾಳಿಬೀಡು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹತ್ತು ದಿನಗಳ ರಾಷ್ಟ್ರೀಯ ಸೇವಾ ಯೋಜನೆ (ಎನ್.ಎಸ್.ಎಸ್) ಶಿಬಿರ ನಡೆಯಿತು. ಈ ಶಿಬಿರದಲ್ಲಿ ಮಡಿಕೇರಿ ಎಫ್.ಎಮ್. ಕೆ.ಎಂ. ಕಾರ್ಯಪ್ಪ ಕಾಲೇಜಿನ ಸುಮಾರು 70ಮಂದಿ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಈ ಶಿಬಿರದ ನಿಮಿತ್ತ ಹತ್ತು ದಿನಕ್ಕೆ ಹಲವು ವಿವಿಧ ಕಾರ್ಯಕ್ರಮ ಹಾಗೂ ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಶಿಬಿರದ ಹತ್ತು ದಿನಗಳ ನಿತ್ಯ ಕಾರ್ಯ ಕ್ರಮಗಳಲ್ಲಿ ವಿವಿಧ ಇಲಾಖೆ, ಸಂಘ ಸಂಸ್ಥೆಗಳ ಹಾಗೂ ಸಾರ್ವಜನಿಕ ಗಣ್ಯ ವ್ಯಕ್ತಿಗಳನ್ನು ಮುಖ್ಯ ಅತಿಥಿಗಳಾಗಿ ಆಮಂತ್ರಿಸಿದ್ದರು. ಹಾಗೆಯೇ ಒಂದು ದಿನದ ಕಾರ್ಯಕ್ರಮದಲ್ಲಿ ಮಡಿಕೇರಿ ಆಕಾಶವಾಣಿ ಕೇಂದ್ರದ ಉದ್ಘೋಷಕರಾದ ಶ್ರೀ ಸುಬ್ರಾಯ ಸಂಪಾಜೆಯವರನ್ನು ಮುಖ್ಯ ಅತಿಥಿಯಾಗಿ ಆಮಂತ್ರಿಸಿದ್ದು, ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಲು ನನ್ನನ್ನು ಆಮಂತ್ರಿಸಲಾಗಿತ್ತು. ಸಭೆಯಲ್ಲಿ ಶ್ರೀ ಸುಬ್ರಾಯ ಸಂಪಾಜೆಯವರು " ಆಕಾಶವಾಣಿ" ಬಗ್ಗೆ ವಿವರವಾದ ಮಾಹಿತಿಯನ್ನು ಶಿಬಿರಾರ್ಥಿಗಳಿಗೆ ಹಾಗೂ ಸಭೆಗೆ ನೀಡಿದರು. ನಂತರ ಶಿಬಿರದ ಅಭ್ಯರ್ಥಿಗಳಲ್ಲಿ ಹಾಗೂ ನೆರೆದ ಗ್ರಾಮದ ಸಾರ್ವಜನಿಕರಲ್ಲಿ "ಆಕಾಶವಾಣಿ" ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಪ್ರಶ್ನೆಗಳಿದ್ದರೆ ಕೇಳಬಹುದೆಂದು ಕೋರಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ನಾನು ಒಂದು ಪ್ರಶ್ನೆ ಕೇಳಿದೆ. ಮಂಗಳೂರು ಆಕಾಶವಾಣಿ ಕೇಂದ್ರದಿಂದ ಸ್ಥಳೀಯ ಜನತೆಯ ಭಾಷೆಯಾದ ತುಳು ಭಾಷೆಯಲ್ಲಿ ವಾರ್ತೆ ಪ್ರಸಾರವಾಗುತ್ತಿದೆ. ಹಾಗೆಯೇ ಮಡಿಕೇರಿ ಆಕಾಶವಾಣಿ ಕೇಂದ್ರದಿಂದ ಸ್ಥಳೀಯ ಜನತೆಯ ಭಾಷೆಯಾದ " ಕೊಡವ ಭಾಷೆ"ಯಲ್ಲಿ ವಾರ್ತೆ ಪ್ರಸಾರವಾಗುತ್ತಿದೆ. ಆದರೆ ಕೊಡಗಿನಲ್ಲಿ ಸುಮಾರು ಎರಡು ಲಕ್ಷ ಜನಸಂಖ್ಯೆಯಿರುವ ಗೌಡ ಜನಾಂಗದವರ ಮಾತೃಭಾಷೆಯಾದ "ಅರೆಭಾಷೆ"ಯಲ್ಲಿ ವಾರ್ತೆ ಪ್ರಸಾರವಾಗುವ ವ್ಯವಸ್ಥೆ ಏಕೆ ಆಗಿರುವುದಿಲ್ಲವೆಂದು. ಶ್ರೀ ಸುಬ್ರಾಯ ಸಂಪಾಜೆಯವರು ಮಡಿಕೇರಿ ಆಕಾಶವಾಣಿ ಕೇಂದ್ರದಿಂದ 'ಅರೆಭಾಷೆ' ವಾರ್ತೆ ಪ್ರಸಾರವಾಗಲು ಈಗ ಮೂರು ವರ್ಷಗಳಿಂದ ಕೊಡಗು ಗೌಡ ಜನಾಂಗದ ಪ್ರಮುಖರಲ್ಲಿ ಪ್ರಸ್ತಾಪ ಮಾಡಿದಾಗ ಯಾರು ಮುಂದೆ ಬರಲಿಲ್ಲ. ಅರೆ ಭಾಷೆಯಲ್ಲಿ ವಾರ್ತೆ ಓದುವ ವ್ಯವಸ್ಥೆ ಮಾಡಲು ಅವಕಾಶವಿದೆಯೆಂಬ ಭರವಸೆ ಕೊಟ್ಟರು.

ಕೊಡಗು ಜಿಲ್ಲೆಯಲ್ಲಿ ಸುಮಾರು ಎರಡು ಲಕ್ಷ ಗೌಡ ಜನಾಂಗದವರಿದ್ದು, ಮಾತೃ ಭಾಷೆ 'ಅರೆ ಭಾಷೆ' ಆಗಿದೆ. ಕೊಡಗಿನ ನೆರೆ ಜಿಲ್ಲೆ ದಕ್ಷಿಣ ಕನ್ನಡದ ಸುಳ್ಯ, ಪುತ್ತೂರು, ಬಂಟ್ವಾಳ ಮತ್ತು ಬೆಳ್ತಂಗಡಿ ತಾಲೂಕುಗಳಲ್ಲಿ ಸುಮಾರು ನಾಲ್ಕು ಲಕ್ಷ ಗೌಡ ಜನಾಂಗದವರಿದ್ದು, ಅವರು ಅರೆಭಾಷೆ ಹಾಗೂ ತುಳು ಭಾಷೆಗಳನ್ನಾಡುತ್ತಾರೆ. ನಾವು ಕೊಡಗಿನಲ್ಲಿ ಮಾತ್ರವಲ್ಲ ನೆರೆ ಜಿಲ್ಲೆಗಳಾದ ಹಾಸನ, ಮೈಸೂರು, ಚಿಕ್ಕಮಗಳೂರು, ಮಂಡ್ಯ ಹಾಗೂ ಬೆಂಗಳೂರು ನಗರ ಪ್ರದೇಶಕ್ಕೆ ವ್ಯಾಪಾರ, ಉದ್ಯೋಗ, ಶಿಕ್ಷಣ ಹಾಗೂ ಕೈಗಾರಿಕೆಗೆಂದು ವಲಸೆ ಹೋದ

ಸಾವಿರಾರು 'ಅರೆ ಭಾಷೆ' ಮಾತಾಡುವ ಗೌಡ ಜನಾಂಗದವರಿದ್ದಾರೆ. ನಾವು ಕೊಡಗಿನಲ್ಲಿ ಇಷ್ಟು ದೊಡ್ಡ ಸಂಖ್ಯೆಯ ಜನರಿದ್ದೇ ಅರೆ ಭಾಷೆ ಮಾತಾಡಲು ಕೀಳರಿಮೆಯ ವಾತಾವರಣವಿದ್ದು, ಸಂಕೋಚ ಪಡುವ ಪರಿಸ್ಥಿತಿಯನ್ನು ಗಮನಿಸುತ್ತೇವೆ. ಆಧುನಿಕ ಯುಗದಲ್ಲಿ ಪೇಟೆ-ಪಟ್ಟಣಗಳಲ್ಲಿ ನೆಲೆಸಿರುವ ಕೊಡಗು ಗೌಡ ಜನಾಂಗದವರು, ಅದರಲ್ಲಿಯೂ ಯುವ ಜನಾಂಗ 'ಅರೆಭಾಷೆ' ಮಾತಾಡುವುದನ್ನು ನಿರ್ಲಕ್ಷಿಸಿರುವುದು ಕಂಡು ಬರುತ್ತದೆ. ಈ ಭಾಷೆಯ ಬಳಕೆ ನಶಿಸುವಂತಹ ಪರಿಸ್ಥಿತಿ ಉದ್ಭವವಾಗುತ್ತಿರುವುದನ್ನು ಗಮನಿಸಿದ ನನಗೆ ಆತಂಕವೆನಿಸಿತು. ನಾನು ಜನಾಂಗದ ಭಾಷೆ ಬಳಕೆಯಲ್ಲಿರಲು ಹಾಗೂ ಜನಾಂಗದವರಲ್ಲಿ ಆತ್ಮಸ್ಥೈರ್ಯ ತುಂಬುವತ್ತ ಕಾರ್ಯೋನ್ಮುಖವಾಗಬೇಕೆಂದು ನಿರ್ಧಾರಕ್ಕೆ ಬಂದೆನು .

ನಾನು ಕೊಡಗು ಗೌಡ ಸಮಾಜದ (ಮಡಿಕೇರಿ) ನಿರ್ದೇಶಕರುಗಳಲ್ಲಿ ಒಬ್ಬನಾಗಿದ್ದೆ. ಜನವರಿ 2007ರಲ್ಲಿ ಕೊಡಗು ಗೌಡ ಸಮಾಜದ ಮಾಸಿಕ ಸಮಿತಿ ಸಭೆಯಲ್ಲಿ ಅರೆ ಭಾಷೆಯಲ್ಲಿ ವಾರ್ತೆ ಓದುವ ವಿಚಾರವನ್ನು ಕೊಡಗು ಗೌಡ ಸಮಾಜದ ಮುಖಾಂತರ ಪ್ರಾರಂಭಿಸುವ ಪ್ರಸ್ತಾಪವನ್ನು ಸಮಿತಿ ಸಭೆಯಲ್ಲಿ ಮಂಡಿಸಿದೆನು. ಸಮಿತಿ ಅಧ್ಯಕ್ಷರಾಗಿದ್ದ ಶ್ರೀ ಪೈಕೇರ ಅನಂತರಾಮ್ ಹಾಗೂ ಸಮಿತಿ ಸದಸ್ಯರು, ಸುದೀರ್ಘವಾಗಿ ಚರ್ಚಿಸಿ, ವಿನಾಶದತ್ತ ಸಾಗುತ್ತಿದ್ದ ಅರೆಭಾಷೆಯನ್ನು ಅಭಿವೃದ್ಧಿ ಪಡಿಸಲು ತುಂಬು ಹೃದಯದಿಂದ ಒಪ್ಪಿಗೆ ನೀಡಿದರು. ಅಲ್ಲದೆ ಒಂದು ಉಪ- ಸಮಿತಿಯನ್ನು ರಚಿಸಲಾಯಿತು. ಈ ಉಪ-ಸಮಿತಿಯ ಅಧ್ಯಕ್ಷರನ್ನಾಗಿ ನನ್ನನ್ನು ಆಯ್ಕೆ ಮಾಡಿದರು. ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣ ಹಾಗೂ ಶ್ರೀ ತುಂತಜೆ ಗಣೇಶ್ ರವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಶ್ರೀ ಕೊಡೆಕಲ್ ಸಂತೋಷ್‌ರವರನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ, ಶ್ರೀಮತಿ ಪುದಿಯನೆರವನ ರೇವತಿ ರಮೇಶ್‌ರವರನ್ನು ಖಜಾಂಚಿಯಾಗಿಯೂ ಹಾಗೂ ಇತರೆ 18ಮಂದಿಯನ್ನು ಸದಸ್ಯರನ್ನಾಗಿ ಆಯ್ಕೆ ಮಾಡಿದರು. ತದನಂತರ ಈ ಉಪ-ಸಮಿತಿಗೆ " ಕೊಡಗು ಗೌಡ ಅರೆಭಾಷೆ ಅಭಿವೃದ್ಧಿ ಸಮಿತಿಯೆಂಬ ಹೆಸರನ್ನಿಡಲಾಯಿತು.

ಮಡಿಕೇರಿ ಆಕಾಶವಾಣಿ ಕೇಂದ್ರದ ಉದ್ಘೋಶಕರಾದ ಶ್ರೀ ಸುಬ್ರಾಯ ಸಂಪಾಜೆಯವರಲ್ಲಿ ವಾರ್ತೆ ಓದಲು ಬೇಕಾದ ಸಿದ್ಧತೆ ಬಗ್ಗೆ ವಿಚಾರಿಸಿದಾಗ ವಾರ್ತೆ ಓದಲು ಇಂತಿಷ್ಟು ಹಣ ಪಾವತಿ ಮಾಡುವಂತೆಯೂ, ವಾರ್ತೆ ಓದುವವರು ವಾಯ್ಸ್‌ಟೆಸ್ಟ್‌ನಲ್ಲಿ ಆಯ್ಕೆ ಆಗಬೇಕೆಂದು ತಿಳಿಸಿದರು. 2007ರ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ನಡೆದ ಕೊಡಗು ಗೌಡ ಸಮಾಜದ ಮಾಸಿಕ ಸಭೆಯಲ್ಲಿ ವಾರ್ತೆ ಓದಲು ಬೇಕಾದ ಆರ್ಥಿಕ ನೆರವನ್ನು ಗೌಡ ಸಮಾಜದಿಂದ ಕೊಡುವಂತೆ ಕೋರಲಾಯಿತು. ಅಧ್ಯಕ್ಷರಾದ ಶ್ರೀ ಪೈಕೇರ ಅನಂತ್‌ರಾಮ್‌ರವರು ತುಂಬು ಹೃದಯದಿಂದ ಐದು ಸಾವಿರ ರೂಪಾಯಿಯ ಚೆಕ್ಕನ್ನು ಸ್ಥಳದಲ್ಲೇ ನೀಡಿದ್ದಲ್ಲದೆ, ತನ್ನ ವೈಯಕ್ತಿಕ ಕಾಣಿಕೆಯಾಗಿ ಎರಡು ಸಾವಿರ ರೂಪಾಯಿಗಳನ್ನು ನೀಡಿ ಪ್ರೋತ್ಸಾಹಿಸಿದರು. ಸಭೆಯಲ್ಲಿ ಹಾಜರಿದ್ದ ಇತರೆ ಸಮಾಜದ ಸಮಿತಿ ಸದಸ್ಯರು ಉತ್ಸುಕರಾಗಿ ತಮ್ಮ ಕಾಣಿಕೆಯನ್ನು ನೀಡಿದರು. ಆ ದಿನದ ಸಭೆಯಲ್ಲಿ ರೂ. 16ಸಾವಿರ ಸಂಗ್ರಹವಾಯಿತು. ಅರೆ ಭಾಷೆಯಲ್ಲಿ ವಾರ್ತೆ ಓದುವವರು ವಾಯ್ಸ್ ಟೆಸ್ಟಿಗೆ ಹಾಜರಾಗಲು ಕೋರಲಾಯಿತು.

2007ರ ಮಾರ್ಚ್ ಮೊದಲನೆ ವಾರದಲ್ಲಿ ಅರೆಭಾಷೆ ಅಭಿವೃದ್ಧಿ ಸಮಿತಿಯ ಸದಸ್ಯರೊಂದಿಗೆ ಮಡಿಕೇರಿ ಆಕಾಶವಾಣಿ ಕೇಂದ್ರ ಸಹಾಯಕ ನಿರ್ದೇಶಕರಾದ ಶ್ರೀಮತಿ ಯೇಸುಪ್ರಿಯ ಇಂದಿರಾ ಗಜರಾಜ್ ರವನ್ನು ಅವರ ಕಚೇರಿಯಲ್ಲಿ ಭೇಟಿಯಾಗಿ ಅರೆಭಾಷೆಯಲ್ಲಿ ವಾರ್ತೆ ಓದಲು ವ್ಯವಸ್ಥೆ ಮಾಡಿಕೊಡಬೇಕೆಂದು ಕೋರಲಾಯಿತು.

ಅವರು ಬಹಳ ಸಂತೋಷದಿಂದ ಒಪ್ಪಿಗೆ ನೀಡಿ, ಮೊದಲಿಗೆ ವಾರಕ್ಕೆ ಒಂದು ಬಾರಿ ಪ್ರತಿ ಗುರುವಾರ ಬೆಳಿಗ್ಗೆ 7-15ಗಂಟೆಯಿಂದ 7-25ರವರೆಗೆ 10ನಿಮಿಷಗಳ ಅರೆಭಾಷೆಯಲ್ಲಿ ವಾರ್ತೆ ಓದುವ ಸಮಯವನ್ನು ನಿಗದಿ ಪಡಿಸಿದರು. ವಾರ್ತೆ ಓದಲು ಧ್ವನಿ ಪರೀಕ್ಷೆ ನಡೆಸಲಾಗಿ ಮೊದಲಿಗೆ ಶ್ರೀ ಪಟ್ಟಡ ಶಿವಕುಮಾರ್‌ರವರನ್ನು ಆಯ್ಕೆ ಮಾಡಿದರು. ಅದರಂತೆ ಮಾರ್ಚ್ 15, 2007ರಂದು ಮೊದಲ ಬಾರಿಗೆ ಮಡಿಕೇರಿ ಆಕಾಶವಾಣಿ ಕೇಂದ್ರದಿಂದ "ಸುದ್ದಿ ಜೊಂಪೆ" ಎಂಬ ತಲೆ ಬರಹದಲ್ಲಿ ಶ್ರೀ ಪಟ್ಟಟ ಶಿವಕುಮಾರ್‌ರವರು ಅರೆಭಾಷೆ ವಾರ್ತೆಯನ್ನು ಓದಿ, ಜನಾಂಗದ ಇತಿಹಾಸ ಪುಟವೊಂದನ್ನು ತೆರೆದರು.

ಅರೆಭಾಷೆ ವಾರ್ತೆಗೆ ಜನಾಂಗ ಬಾಂಧವರಿಂದ ಕೆಲವಾರು ಹೆಸರುಗಳು ಸೂಚಿತವಾದವು. ಕೊನೆಯಲ್ಲಿ ಮದೆ ಮಹೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಾರಿಯಂಡ ಜೋಯಪ್ಪನವರು ಸೂಚಿಸಿದ "ಸುದ್ದಿ ಜೊಂಪೆ" ಎಂಬ ಹೆಸರನ್ನು ಆಯ್ಕೆ ಮಾಡಲಾಯಿತು. ಇದಾದ ಎರಡು ತಿಂಗಳ ನಂತರ ವಾರಕ್ಕೆ ಎರಡು ದಿವಸ ಅಂದರೆ ಮೊದಲಿನ ಗುರುವಾರದ ಜೊತೆಗೆ ಅದಿತ್ಯವಾರ ರಾತ್ರಿ 7-45 ಗಂಟೆಗೆ 10ನಿಮಿಷ ಅರೆಭಾಷೆಯಲ್ಲಿ ವಾರ್ತೆ ಓದುವ ಅವಕಾಶವನ್ನು ಒದಗಿಸಿಕೊಟಿತು. ಧ್ವನಿ ಪರೀಕ್ಷೆಯಲ್ಲಿ ಶ್ರೀ ಕಟ್ಟೆಮನೆ ಸೋನಾಜಿತ್, ಶ್ರೀ ಕುಡೆಕಲ್ ಸಂತೋಷ್ ಮತ್ತು ಶ್ರೀಮತಿ ಪುದಿಯನೆರವನ ರೇವತಿ ರಮೇಶ್ ರವರು ಆಯ್ಕೆಯಾಗಿ ಸರದಿಯಂತೆ ವಾರದಲ್ಲಿ ಎರಡು ಬಾರಿ "ಸುದ್ದಿ ಜೊಂಪೆ" ಪ್ರಸಾರವಾಗಲು ಅನುಕೂಲ ಮಾಡಿಕೊಟ್ಟರು.

ಅರೆಭಾಷೆಯಲ್ಲಿ ವಾರ್ತೆ ಪ್ರಸಾರವಾಗುವುದನ್ನು ಕರ್ನಾಟಕ ರಾಜ್ಯ ವಾರ್ತಾ ಇಲಾಖೆ, ಬೆಂಗಳೂರು, ಇವರು ಗಮನಿಸಿ ಇದರ ಬಗ್ಗೆ ಮಾಹಿತಿ ಸಂಗ್ರಹಿಸಿ, ಈ ಭಾಷೆಗೆ ಪ್ರೊತ್ಸಾಹ ನೀಡುವ ಸಲುವಾಗಿ " ಸುದ್ದಿ ಜೊಂಪೆ" ಪ್ರಾಯೋಜಕತ್ವವನ್ನು ಒಂದು ವರ್ಷದ ಅವಧಿಗೆ ನಡೆಸಿಕೊಟ್ಟರು. ಜೂನ್ 2007 ರಿಂದ ಜೂನ್ 2008ರವರೆಗೆ ವಹಿಸಿಕೊಡು, ನಮ್ಮ ಆರ್ಥಿಕ ಹೊರೆಯನ್ನು ನಿಭಾಯಿಸಿ ಸಹಕರಿಸಿರುತ್ತಾರೆಂದು ಹೇಳಲು ಹರ್ಷವಾಗುತ್ತದೆ.

ಕೊಡಗು ಗೌಡ ಅರೆ ಭಾಷೆ ಅಭಿವೃದ್ಧಿ ಸಮಿತಿ ವತಿಯಿಂದ "ಅರೆಭಾಷೆ ಅಭಿವೃದ್ಧಿಗಾಗಿ 2007ಅಕ್ಟೋಬರ್ 18ರಂದು ತಲಕಾವೇರಿಯಲ್ಲಿ ತಿರ್ಥೋದ್ಭವ ಸಂದರ್ಭದಲ್ಲಿ ತಿರ್ಥೋದ್ಭವ ಕಾರ್ಯಕ್ರಮದ ವೀಕ್ಷಕ ವಿವರಣೆಯನ್ನು ಶ್ರೀ ಪಟ್ಟಡ ಶಿವಕುಮಾರ್‌ರವರು ಸಮರ್ಪಕವಾಗಿ ನೀಡಿ ಜನರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಅಲ್ಲದೆ ಮಡಿಕೇರಿ ದಸರಾ ಉತ್ಸವದ ದಶಮಂಟಪಗಳ ಮೆರವಣಿಗೆ ಸಂದರ್ಭದಲ್ಲಿ ಸಹ ಶ್ರೀ ಪಟ್ಟಡ ಶಿವಕುಮಾರ್ ರವರು ಅರೆಭಾಷೆಯಲ್ಲಿ ಸ್ವಾರಸ್ಯಕರವಾಗಿ ವೀಕ್ಷಕ ವಿವರಣೆ ನೀಡಿ ಜನರ ಪ್ರೀತಿಗೆ ಪಾತ್ರರಾಗಿರುತ್ತಾರೆ.

ಜನವರಿ 2008ರ ಮೊದಲ ವಾರದಲ್ಲಿ ಕೊಡಗು ಗೌಡ ಅರೆಭಾಷೆ ಅಭಿವೃದ್ಧಿ ಸಮಿತಿಯವರು ಸಮಿತಿ ಸಭೆ ನಡೆಸಿ, ಚರ್ಚಿಸಿ ಆಕಾಶವಾಣಿಯಲ್ಲಿ ಪ್ರತಿ ದಿವಸ" ಸುದ್ದಿ ಜೊಂಪೆ" ಪ್ರಸಾರವಾಗುವಂತೆ ತೀರ್ಮಾನಿಸಿದರು. ಈ ವಿಚಾರದಲ್ಲಿ ಮಡಿಕೇರಿ ಆಕಾಶವಾಣಿ ಕೇಂದ್ರದ ಮುಖ್ಯಸ್ಥರಾದ ಶ್ರೀಮತಿ ಯೇಸು ಪ್ರಿಯ ಇಂದಿರ ಗಜರಾಜ್ ರವರನ್ನು ಭೇಟಿ ಮಾಡಿದ್ದು, ಸಮಿತಿ ಪ್ರತಿದಿನ "ಸುದ್ದಿ ಜೊಂಪೆ" ಪ್ರಸಾರ ಮಾಡುವ ಇಂಗಿತ ವ್ಯಕ್ತಪಡಿಸಿತು. ಅವರು ಒಪ್ಪಿಗೆ ನೀಡಿದರು. ಪ್ರತಿದಿನ ರಾತ್ರಿ 7.45ಗಂಟೆಗೆ 5ನಿಮಿಷ ಸುದ್ದಿಜೊಂಪೆ ಪ್ರಸಾರವಾಗಲು ಅನುಮತಿ ನೀಡಿದರು.

ಸುದ್ದಿ ಜೊಂಪೆ ಓದಲು ಹೆಚ್ಚಿನ ಓದುಗಾರರಾಗಿ ಶ್ರೀಮತಿ ಕರ್ಣಯ್ಯನ ವಿಮಲ ರವಿ, ಶ್ರೀಮತಿ ತೊತ್ಯನ ರೋಹಿಣಿ ನಾಣಯ್ಯ ಮತ್ತು ಶ್ರೀ ಪೋತಂಡ್ರ ತೇಜ ಪ್ರಸಾದ್ ಇವರು ಧ್ವನಿ ಪರೀಕ್ಷೆಯಲ್ಲಿ ಆಯ್ಕೆಯಾದರು. ಮೊದಲಿನ ನಾಲ್ಕು ಜನ ಓದುಗರೊಂದಿಗೆ ಈ ಮೂರು ಜನರು ಸೇರ್ಪಡೆಗೊಂಡರು ಪ್ರತಿದಿನ ಒಬ್ಬೊಬ್ಬರು ಸರದಿಯಂತೆ ರಾತ್ರಿ 7-45ಗಂಟೆಗೆ ಸುದ್ದಿ ಜೊಂಪೆ ಓದುವುದೆಂದು ತೀರ್ಮಾನಿಸಲಾಯಿತು. ಜನವರಿ 15 ರ ಸಂಕ್ರಾತಿ ಹಬ್ಬದ ಶುಭ ದಿನದಂದು ನಿತ್ಯ " ಸುದ್ಧಿ ಜೊಂಪೆ" ಪ್ರಾರಂಭಗೊಂಡಿದ್ದು, ಗೌಡ ಜನಾಂಗಕ್ಕೆ ಹೆಮ್ಮೆಯ ವಿಷಯವೆಂದು ಹೇಳಲು ಸಂತೋಷ ಪಡುತ್ತೇನೆ.ಇತ್ತೀಚೆಗೆ ದೇರಳ ನವೀನ್ ,ಕೇಕಡ ಇಂದುಮತಿ ಯಾಲದಾಳು ಜಯಲಕ್ಷ್ಮಿ ವಾರ್ತೆ ಓದಲು ಆಯ್ಕೆಯಾಗಿದ್ದಾರೆ.

ಪ್ರತಿದಿನ ಅರೆಭಾಷೆ ವಾರ್ತೆ ಪ್ರಾಯೋಜಕತ್ವ ವಹಿಸಲು ತಿಂಗಳಿಗೆ ಸುಮಾರು ಆರು ಸಾವಿರ ರೂಪಾಯಿಗಳು ತಗಲುತ್ತವೆ. ಪ್ರತಿ ವಾರದಲ್ಲಿ ಗುರುವಾರ ಮತ್ತು ಆದಿತ್ಯವಾರ ಜೂನ್ 2008ರವರೆಗೆ ಕರ್ನಾಟಕ ರಾಜ್ಯ ವಾರ್ತಾ ಇಲಾಖೆ ಇದರ ಪ್ರಯೋಜಕತ್ವ ವಹಿಸಿಕೊಂಡಿತ್ತು. ವಾರದಲ್ಲಿ ಉಳಿದ 5ದಿವಸಗಳ ಸುದ್ದಿ ಜೊಂಪೆ ಪ್ರಾಯೋಜಕತ್ವವನ್ನು ವಹಿಸಿಕೊಳ್ಳಲು ಸಮಿತಿಗೆ ಹಣದ ಕೊರತೆ ಕಂಡು ಬಂದಿತು. ಅರೆಭಾಷೆ ಅಭಿವೃದ್ಧಿ ಸಮಿತಿಯ ಸಭೆ ಕರೆದು ಹಣದ ಕ್ರೋಢೀಕರಣದ ಬಗ್ಗೆ ಚರ್ಚಿಸಲಾಯಿತು. ಕೊಡಗಿನಲ್ಲಿ ಸುಮಾರು 400ರಷ್ಟು ಗೌಡ ಕುಟುಂಬಗಳಿವೆ. ಪ್ರತಿ ತಿಂಗಳು ಒಂದೊಂದು ಗೌಡ ಕುಟುಂಬವು ಸ್ವ ಇಚ್ಛೆಯಿಂದ ಮುಂದೆ ಬಂದು ಸುದ್ಧಿ ಜೊಂಪೆಯ ಪ್ರಯೋಜಕತ್ವವನ್ನು ವಹಿಸಿಕೊಳ್ಳುವಂತೆ ತೀರ್ಮಾನಿಸಲಾಯಿತು. ಮೊದಲಿಗೆ ಅರೆಭಾಷೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಯಾಲದಾಳು ಕುಟುಂಬದ ಪ್ರಾಯೋಜಕತ್ವವನ್ನು ಒಂದೂವರೆ ತಿಂಗಳು ವಹಿಸಿಕೊಳ್ಳಲು ಒಪ್ಪಿಗೆ ನೀಡಿದೆ.

2008ಮಾರ್ಚ್ ತಿಂಗಳಿಂದ ಅರೆಭಾಷೆ ಅಭಿವೃದ್ಧಿ ಸಮಿತಿಯ ಉಪಾಧ್ಯಕ್ಷರಾದ ಶ್ರೀಮತಿ ಕೂಡಕಂಡಿ ಕಾವೇರಮ್ಮ ಸೋಮಣ್ಣನವರು ಸ್ವ ಇಚ್ಚೆಯಿಂದ ಮುಂದೆ ಬಂದು ಸುದ್ದಿ ಜೊಂಪೆಯ ಪ್ರಾಯೋಜಕತ್ವವನ್ನು ಒಂದೂವರೆ ತಿಂಗಳು ಕೂಡಕಂಡಿ ಕುಟುಂಬಸ್ಥರು ಒಪ್ಪಿ, ಪ್ರೋತ್ಸಾಹ ನೀಡಿರುತ್ತಾರೆ. ಏಪ್ರಿಲ್ 15ರಿಂದ ಮೇ. 15ರವರೆಗೆ ಒಂದು ತಿಂಗಳು ಶ್ರೀ ಅಣ್ಣಮಂಡ ಜಯಕುಮಾರ್ಮಾದಪ್ಪನವರು ಮೇ 15ರಿಂದ ಜೂನ್ 15ರವರೆಗೆ ಕುಶಾಲನಗರ ನಿವಾಸಿ ಶ್ರೀ ಕ್ಯಾಚಪ್ಪನ ಮೋಹನ್‌ಕುಮಾರ್ ಮತ್ತು ಮನೆಯವರು, ಜೂನ್ 15ರಿಂದ ಜುಲೈ 15ರವರೆಗೆ ಪೇರಿಯನ ಕುಟುಂಬಸ್ಥರು ಸುದ್ದಿ ಜೊಂಪೆಯ ಪ್ರಾಯೋಜಕತ್ವವನ್ನು ವಹಿಸಿಕೊಂಡು ಭಾಷಾ ಅಭಿವೃದ್ಧಿಗೆ ಸಹಕರಿಸಿ ಪ್ರೋತ್ಸಾಹ ನೀಡಿರುತ್ತಾರೆ. ಹೀಗೆ ಪ್ರಾಯೋಜಕತ್ವ ವಹಿಸಿ ಕೊಳ್ಳಲು ಅನೇಕ ಗೌಡ ಕುಟುಂಬಗಳು ಸ್ವ ಇಚ್ಛೆಯಿಂದ ಮುಂದೆ ಬಂದಿರುವುದು ಸ್ವಾಗತಾರ್ಹ ಹಾಗೂ ಹೆಮ್ಮೆಯ ವಿಷಯವಾಗಿದೆ.

ಅರೆಭಾಷೆ ಗೌಡ ಜನಾಂಗದ ಮಾತೃ ಭಾಷೆ. ಇದನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವುದು ಗೌಡ ಜನಾಂಗದ ಪ್ರತಿಯೊಬ್ಬರ ಆದ್ಯ ಕರ್ತವ್ಯವಾಗಿದೆ. ಇದರೊಂದಿಗೆ ಗೌಡ ಜನಾಂಗದ ಎಲ್ಲರ ಸಹಾಯ, ಸಹಕಾರ, ಪ್ರೊತ್ಸಾಹ ಮತ್ತು ಅಭಿಮಾನ ಅಗತ್ಯವಾಗಿ ಬೇಕಾಗಿದೆ.

ಮಡಿಕೇರಿ ಆಕಾಶವಾಣಿ ಕೇಂದ್ರದಲ್ಲಿ ನಮ್ಮ ಮಾತೃಭಾಷೆಯಾದ ಅರೆಭಾಷೆಯಲ್ಲಿ ಸುದ್ದಿ ಜೊಂಪೆ

ಪ್ರಸಾರವಾಗಲು ಪ್ರೊತ್ಸಾಹ, ಸಹಾಯ, ಸಹಕಾರ ನೀಡಿದ ಕೊಡಗು ಗೌಡ ಸಮಾಜದ ಅಧ್ಯಕ್ಷರಾದ ಶ್ರೀ ಪೈಕೇರ ಅನಂತ ರಾಮ್ ಹಾಗೂ ಆಡಳಿತ ಮಂಡಳಿಯವರಿಗೂ, ಅರೆ ಭಾಷೆ ಅಭಿವೃದ್ಧಿ ಸಮಿತಿಯ ಸದಸ್ಯರಿಗೂ, ಅರೆಭಾಷೆ ವಾರ್ತೆ ಆಕಾಶವಾಣಿಯಲ್ಲಿ ಪ್ರಸಾರವಾಗಲು ಪ್ರಾಯೋಜಕತ್ವ ವಹಿಸಿ ಪ್ರೋತ್ಸಾಹಿಸಿದ ಕರ್ನಾಟಕ ರಾಜ್ಯ ವಾರ್ತಾ ಇಲಾಖೆಗೂ, ಯಾಲದಾಳು ಕುಟುಂಬಸ್ಥರಿಗೂ, ಕೂಡಕಂಡಿ ಕುಟುಂಬಸ್ಥರಿಗೂ, ಅಣ್ಣಮಂಡ ಜಯಕುಮಾರ್ ಮಾದಪ್ಪ, ಕ್ಯಾಚಪ್ಪನ ಮೋಹನ್‌ಕುಮಾರ್ ಮತ್ತು ಮನೆಯವರಿಗೂ, ಪೇರಿಯನ ಕುಟುಂಬಸ್ಥರಿಗೂ ಪ್ರತಿದಿನ ಅರೆಭಾಷೆಯಲ್ಲಿ ವಾರ್ತೆ ಓದುವ ಓದುಗರಿಗೂ, ವಾರ್ತೆ ಕೇಳುವವರಿಗೂ ಹಾಗೂ ಮುಖ್ಯವಾಗಿ ಅರೆಭಾಷೆ (ಸುದ್ದಿ ಜೊಂಪೆ) ಮಡಿಕೇರಿ ಆಕಾಶವಾಣಿಯಲ್ಲಿ ಪ್ರಪ್ರಥಮ ಬಾರಿಗೆ ಪ್ರಸಾರವಾಗಲು ಸಹಾಯ, ಸಹಕಾರ ಮತ್ತು ಪ್ರೋತ್ಸಾಹ ನೀಡಿ ಸಹಕರಿಸಿದ ನಿಲಯದ ಮುಖ್ಯಸ್ಥರಾದ ಶ್ರೀಮತಿ ಯೇಸು ಪ್ರಿಯ ಇಂದಿರಾ ಗಜರಾಜ್ ಮತ್ತು ಸಹೋದ್ಯೋಗಿಗಳಿಗೂ, ಪ್ರಾಯೋಜಕತ್ವವನ್ನು ನೀಡಿದ, ನೀಡುತ್ತಿರುವ ಕೊಡಗು ಗೌಡ ಸರ್ವರಿಗೂ ಜನಾಂಗದ ಪರವಾಗಿ ಹಾಗೂ ವೈಯಕ್ತಿಕವಾಗಿ ಅಭಿನಂದನೆ ಸಲ್ಲಿಸುತ್ತೇನೆ.

ಕವನ

ಹೂವಿನ ಭಾವುಕತೆ

ನನ್ನ ನಿದ್ದೆಯೆಂಬ ಹೂದೋಟದಲಿ
ಮಮತೆಯೆಂಬ ಬಳ್ಳಿಯ ಮೇಲೆ
ಹೊಸ ಚಿಗುರಿನ ಕನಸ ಹೆಣೆದಿರುವಲಿ
ಪ್ರೀತಿಯ ನೀರುಣಿಸಿದ ಜೀವವಿಹುದಲಿ
ನಿನಗೆ ನಾನು ಧನ್ಯ ಭಾವುಕತೆಯಲ್ಲಿ
ಕಂಗಳಲ್ಲಿ ಹುಣ್ಣಿಮೆಯ
ಹೊಳಪನ್ನಿಟ್ಟುಕೊಂಡು
ತುಟಿಗಳಲ್ಲಿ ತಂಗಾಳಿಯ ಮಂದಹಾಸ
ಬೀರಿಕೊಂಡು
ಕಾಲ್ಗಳಲ್ಲಿ ವಸಂತಗಳನ್ನು ಕಟ್ಟಿಕೊಂಡು
ಗೆಜ್ಜೆನಾದ ಹೊಮ್ಮಿಸುತ್ತಾ
ನಾಟ್ಯವಾಡಿಕೊಂಡು
ಸದಾ ಹೀಗೆಯೇ ಮುನ್ನಡಿಯಿಡು
ನಿನ್ನ ನಾಳೆಗಳ ಕಡೆಗೆ
ಬದುಕೆಂಬ ಹೆಬ್ಬಾಗಿಲಲ್ಲಿ
ಹೂವುಗಳು ಸದಾ ನಸುನಗುತ್ತಾ ಹೊರ
ಹೊಮ್ಮುತಲಿ
ದಿನನಿತ್ಯ ಋತುಗಳು ತೂಗಾಡುತ್ತಿರಲಿ

-ಕೋಲ್ಯಾರ್ ಸೌಮ್ಯ ದಾಸಪ್ಪ,
ಸಿದ್ದಾಪುರ.

♦♦♦♦♦

ಅಂದು ಹೊರಮಲೆನಾಡು, ಇಂದು ಗಾಳಿ ಬೀಡು!

-ಮೂಲ: ದಿ. ಯಾಲದಾಳು ದೇವಯ್ಯ,
ಸಂಗ್ರಹ: ಗಂಗಾ ಕೇಶವಾನಂದ, ಗಾಳಿಬೀಡು.



ಕವನ

ಹೊರಮಲೆ ನಾಡು ಅಳಿಸಾಯ್ತು ಗಾಳಿಬೀಡೆಂದು ಹೆಸರಾಯ್ತು
ಮೂರು ಶತಮಾನಗಳ ಹಿಂದಿನ ಕಾಲ ಅದಾಗಿತ್ತು ::
ಅಂದು ಕೊಡಗಿನ ದರ್ಬಾರ್ ದೊಡ್ಡ ವೀರಪ್ಪ ಒಡೆಯನದಾಗಿತ್ತು::
ಹೊರಮಲೆ ನಾಡು ನಂಜರಾಜರ ಆಡಳಿತದಲ್ಲಿತ್ತು::
ಹೊರಮಲೆ ನಾಡು ಮಲೆಬೀಡೆ ಆಗಿತ್ತು.

ಆಕಾಶ ಮುಟ್ಟುವ ಮರಗಳು:: ಬೆಳೆದ ಬನ ಅದಾಗಿತ್ತು::
ವನ ಸಂಪತ್ತಿನ ಜೀವ ಕೋಟೆಗಳು ಅದರಲ್ಲಿತ್ತು
ಆನೆ, ಕಾಟಿ, ಕಡವೆಗಳು: ಹುಲಿ ಚಿರತೆ ಕೆನ್ನಾಯಿಗಳು
ನಾನಾ ಜಾತಿಯ ಹಾವುಗಳು: ಕುಕ್ಕುಟ ವರ್ಗದ ಹಕ್ಕಿಗಳು:
ವನದಲ್ಲಿ ಆಶ್ರಯ ಪಡೆದಿದ್ದವು::

ಆನೆಯ ಮೇವಿಗೆ ಓಟೆ, ಬಿದಿರು: ಕಾಟಿ ಕಡವೆಗೆ ಹುಲ್ಲು ಪೊದರು:
ಹುಲಿ ಚಿರತೆಗೆ ಕಾಡಿನ ಹುಲ್ಲೆ: ನಾಡಿನ ಪಶುವೂ ಮೂಲಾಧಾರವೇ ಆಗಿತ್ತು.

ಹೊರ ಭಾಗವೆಲ್ಲಾ ಇಳಿಜಾರು ಭೂಮಿ ಗೊಂಡಾರಣ್ಯ: ಒಳಭಾಗವೆಲ್ಲಾ
ಕುರುಚಲು ಮರಗಳು, ಪಚೆ, ಬೈಲು ಭತ್ತ, ಬೆಳೆಯಲು ಸೊಗಸಿತ್ತು,
ರೈತರ ಹಿತ್ಲು ಕದಳಿ ತೋಟ,: ಕಣಿವೆಗಳೆಲ್ಲಾ ಏಲಕ್ಕಿ ತೋಟ
ಇದರೊಳಗಿರುವ ಕಿತ್ತಳೆ ನಿಂಬೆ ನೋಡಲು ಆನಂದವಾಗಿತ್ತು.

ಹಬ್ಬಿದ ಹುಲ್ಲು ಕಣಿವೆಯ ನೀರು ದನಗಳಿಗೆ ಆಶ್ರಯವಾಗಿತ್ತು

ತಲೆ ಎತ್ತಿ ಮೇಯುವ ದನಗಳ ಹಿಂಡನು ಕಾಯಲು ಬಾಲರ ಗುಂಪಿತ್ತು.

ಕೊಳಲನ್ನೂದುತ ಬಿಲ್ಲಾಟಾಡುವ ದನ ಕಾಯುವ ಬಾಲರದಾಗಿತ್ತು

ಕಾಲನು ಕೆದಕುತ ಗುಟುರನ್ನು ಹಾಕುವ ದನಗಳ ಅಬ್ಬರ ಜೋರಿತ್ತು

ಬಾಲವನ್ನೆತ್ತಿ, ನೆಗೆನೆಗೆದಾಡುವನೆ ಗುದ್ದಾಡುವ ತವಕ ಅವಕ್ಕಿತ್ತು.

ಕೊಬ್ಬಿದ ದನಗಳ ಹಿಂಡಿನ ಮೇಲೆರಗಲು ವನರಾಜನಿಗೂ ಭಯವಿತ್ತು

ಹಾಲು , ಮೊಸರು, ಬೆಣ್ಣೆ ತುಪ್ಪ ಕೆರೆಬಾವಿಗಳಂತೆ ತುಂಬಿತ್ತು.

ಪರಿಪರಿ ವಿಧದ ಭಕ್ಷ್ಯಗಳೆಲ್ಲಾ ಹಾಲು ತುಪ್ಪದಿಂದಲೇ ಕೂಡಿತ್ತು.

ಓದಲು ಬರೆಯಲು ಕಲಿಯುವ ತವಕ ರಾಜನ ವಂಶಕ್ಕೆ ನಿಗವಿತ್ತು

ಲೆಕ್ಕ ಪತ್ರವಾ ಬರೆಯುವ ಅರಮನೆ ಅಧಿಕಾರಿಯವರಿಗೆ ಬೇಕಿತ್ತು.

ಓದು ಬರಹ ಕಲಿಸುವ ಪಂಡಿತ ರಾಜರ ಆಜ್ಞೆಯಲ್ಲಿರುತ್ತಿದ್ದರು

ಓದಲು ಬರೆಯಲು ಶಾಲೆಗಳಿಲ್ಲ ಕಲಿಯುವ ತವಕ ಪ್ರಜೆಗಳಿಗಿಲ್ಲ

ವಿದ್ಯೆಯು ಬಹಳ ಹಿಂದಿತ್ತು.

ಕಣ್ಣಲ್ಲಿ ಕಂಡು ಬಾಯಲ್ಲಿ ಹೇಳಿ ಕಿವಿಯಿಂದ ಕೇಳಿ ತಿನ್ನುವುದನ್ನು

ಕಲಿತಿದ್ದರು.

ನಡೆಯಲು ಕಾಲು, ದುಡಿಯಲು ಕೈ, ನುಡಿಯಲು ಬಾಯಿ

ಎಂದೇ ತಿಳಿದಿದ್ದರು.

ಸ್ವಾರ್ಥವ ಬಿಟ್ಟು ನಿಸ್ವಾರ್ಥಿಗಳಾಗಿ ಜೀವಿಸಲು ಜನ ಅರಿತಿದ್ದರು

ಜಾತಿ-ಮತವೆಂಬ ಪೀಡೆಯ ತೊರೆದು ಎಲ್ಲಾ ಮನುಷ್ಯರೆಂದೆ

ನಂಬಿದ್ದರು.

ಕಷ್ಟ ಸುಖಗಳಲ್ಲಿ ಭಾಗಿಗಳಾಗಿ ಕೂಡಿ ಬೆರೆಯುವದು ಕಲಿತಿದ್ದರು

ಕುಡುಕರ ಕೂಟ ಕಳ್ಳರ ಕಾಟ ಇಲ್ಲದ ಕಾಲವದಾಗಿತ್ತು.

ರಾಜನೇ ತಂದೆ, ಪ್ರಜೆಗಳೆ ಮಕ್ಕಳು ತುಂಬಿದ ಕುಟುಂಬದಂತಿತ್ತು.

ಪ್ರಜೆಗಳ ಭಕ್ತಿಯ ತಿಳಿದವ ರಾಜ, ಹೊರಮಲೆ ಭಗವತಿ ದೇವಿಗೆ

ಕಲ್ಲಿನ ಗುಡಿಯೊಂದು ಕಟ್ಟಿಸಿದ್ದ, ಒಂದೆ ರಾತ್ರಿಲಿ

ಕಟ್ಟಿದ ಗುಡಿಯೆಂದು ಮಾತಿನ ಮಾಲೆಯು ಇರುತಿಹುದು

ತ್ವರಿತದಿಂದಲೇ ಕೆಲಸವಾದುದು, ನೋಡುವವರ ಮನ ಒಪ್ಪುವುದು

ಉತ್ಸವ ದಿನದಂದು ರಾಜನು ಮಂತ್ರಿಯು ಕುದುರೆಯ ಮೇಲೆ ಬರುತ್ತಿದ್ದರು.
ಪಲ್ಲಕ್ಕಿ ಮೇಲೆ ರಾಜನ ಕೂರಿಸಿ ಮೆರೆಯುವ ಉತ್ಸವ ಆದಾಗಿತ್ತು.
ಹೊರಮಲೆ ರಾಜರ ನೆನಪಿನ ಕಾಣಿಕೆ ಭಗವತಿ ಗುಡಿಯೊಂದಿರುತಿಹುದು
ರಾಜರ ನೆನಪಿಗೆ ಕೀರ್ತಿ ಪತಾಕೆ ಈಗ ಹಾರುತಿಹುದು ಪ್ರತಿ ಉತ್ಸವದಿ
ರಾಜರು ಹೋದರು ದೊರೆಗಳು ಬಂದರು: ಹೊರಮಲೆಗೆ ಕಂಟಕ
ಕಾದಿತ್ತು.

ಕಾಡನು ನೋಡಿದ ಪೌಲರ ಅಲ್ಲೇ ಠಾಣ್ಯವ ಹಾಕಿದರು
ಕಾಫಿ ತೋಟವ ಕೈಗೆತ್ತಿ ಮರ ಕಾಡೆಲ್ಲಾ ಕಡಿದ್ದಾಕಿದರು
ಕಡಿದ ಕಾಡೆಲ್ಲಾ ಒಣಗಿದ ಮೇಲೆ ಖಾಂಡವ ವನದಂತೆ ದಹಿಸಿದರು
ರಸ್ತೆಯ ಕಡಿದರು ಗುಂಡಿಯ ತೆಗೆದರು ಕಾಫಿಯ ವ್ಯವಸಾಯ
ಮಾಡಿದರು.

ಕೂಲಿಯ ಜನರ ವಾಸಕ್ಕೆ ಗುಡಿಸಲು, ದೊರೆಗಳ ವಾಸಕ್ಕೆ ಬಂಗ್ಲೆಗಳೂ
ಕಂಡ ಕಂಡ ಕಡೇ ಬಂಡಿಯ ರಸ್ತೆ ಎಲ್ಲಾ ಮಾಡಿ ಮುಗಿಸಿದರು
ಗಾಳಿಯು ಬೀಸಿತು, ಮಳೆಯು ಹುಯ್ಯುತು ಗಾಳಿಯ ರಭಸ ಜೋರಾಯ್ತು
ಗಾಳಿಯ ತಡೆಯುವ ಮರಗಳನ್ನೆಲ್ಲಾ ಮೊದಲೇ ಬೂದಿ ಮಾಡಿದ್ದರು
ಬೆಂದ ಮಣ್ಣಲಿ ಬೂದಿಯೂ ಸೇರಿ ಮಳೆಯ ನೀರಲ್ಲಿ ಕೊಚ್ಚೋಯ್ತು
ಬೀಸುವ ಗಾಳಿಯ ಹೊಡೆತವ ತಡೆಯಲು ಕಾಫಿಗಿಡಕ್ಕೆ ಸೋಲಾಯ್ತು.

ರಸಭರಿತ ಮಣ್ಣು ತೊಳೆದೋಯ್ತು ಕಾಫಿ ಗಿಡವೆಲ್ಲಾ ಹೊರಟೋಯ್ತು
ಅದು ಬಂಜರು ಭೂಮಿಯೆ ಆಗೋಯ್ತು
ಬಡಗ ದಿಕ್ಕಿನ ಗಾಳಿಗೆ ಸಿಕ್ಕಿದ ಗುಡಿಸಲುಗಳೆಲ್ಲಾ ತೇಲೋಯ್ತು
ಬಂಗ್ಲೆಗಳೆಲ್ಲಾ ತಲೆಕೆಳಗಾಯ್ತು, ದೊರೆಗಳು ಊರಿದ ಠಾಣ್ಯ
ಕಿತ್ತೋಯ್ತು.

ಬಂಡಿಯ ರಸ್ತೆ ಮುರುಕಲು ಬಂಗಲೆ ಪಲ್ಪರ್ ಮಿಷಿನುಗಳು
ಉಳಿದೋಯ್ತು.

ಗಾಳಿಗೆ ಹೆದರಿ ಓಡಿದ ದೊರೆಗಳು ಹುಲಿಬೇಟೆಗೆ ಮಾತ್ರ ಬರುತ್ತಿದ್ದರು ಗಾಳಿ ಬೇಡೆಂದು ಕರೆಕೊಟ್ಟರು. ಹೊರಮಲೆ ಎಂಬುದುಅಳಿಸೋಯ್ತು ಗಾಳಿಬೀಡೆಂದು ಹಸರಾಯ್ತು. ಸ್ಥಿರವಾಯ್ತು ಇದನ್ನು ಬರೆವ ತವಕ ನನಗಾಯ್ತು. ದೊರೆಗಳು ಮಾಡಿದ ನೀತಿಯು ಮುಗಿದೋಯ್ತು, ಹೊರಮಲೆನಾಡಿನ ಜನರದನ್ನು ಮರೆತಾಯ್ತು.

ಕವನ

ನೆನೆಯದಿರು ಓ ಮನವೆ

ನೆನೆಯದಿರು ಓ ಮನವೆ
ಬರಿದೆ ನೆನೆಯದಿರು!
ಬದುಕಿ ಬಾಳಿದ ಜೀವ
ವಿಶ್ರಾಂತಿ ಪಡೆಯುತಿರೆ
ನೆನೆದವರ ನೆಮ್ಮದಿಗೆ
ಕೊಡಲಿಯಾಗದಿರು
ಪದಮೆಟ್ಟಿ, ಎದೆಸೆಟೆಸಿ
ವಿಷ್ಲವದಿ ಪಲ್ಲವಿಸಿ
ಹೇಗೆ ತೆರಳಿದರವರು
ಕಂಪ ಚೆಲ್ಲಿ!
ಪರಿಮಳದ ಹಾದಿಯಲಿ
ನಾಸಿಕವನರಳಿಸುತಾ
ಸಾಗಿಬಿಡು ಜಾಣ ನೀ
ಇದುವೆ ಬದುಕು!
ಕರೆದೀಯೆ ಜೋಕೆ
ಮತ್ತೆ ಬರಲಾರದವರ
ಬಂದರೂ ಸಲ್ಲರವರಿಲ್ಲಿ
ಇದು ಬೇರೆ ಕಾಲ!
ಅವರ ಹಿಮ್ಮೇಳಕ್ಕೆ
ಸರಿಯಾಗಿ ಪದಚಲಿಸಿ
ಎಷ್ಟೊಂದು ಸಂಭ್ರಮಿಸಿ
ಬದುಕನೀಂಟಿದರು!
ಹಾಯಿದೋಣಿಯಲೆ
ಕಡಲದಾಟಿದರು!
ಏರಿರುವೆ ನೀ ಮನವೆ
ನೆಲಮೀರಿ ಆಗಸವ
ಆದರೂ ಬಿಟ್ಟೆಯೇಕೆ
ನಿನ್ನ ಕನಸುಗಳ!
ಏನೇನೋ ಸರ್ಕಸ್ಸು
ಉಲ್ಲಂಘಿಸಿ ಕಿವಿಮಾತು
ಏರುವಾತುರದಲ್ಲಿ
ನೆಲೆಯ ತಪ್ಪಿದ್ದೇಕೆ?
ತಪ್ಪಿಯೂ ಕರೆಯದಿರು
ಬದುಕನಾಳಿದವರ,
ಈ ನೆಲವ, ಈ ಸಿರಿಯ
ಉಳಿಸಿ ಬೆಳೆಸಿದವರ,
ನಮಗಾಗಿ ನಾಳೆಗಳ
ಚಿತ್ರ ಬರೆದವರ,
ನೆನೆಯದಿರು ನೀ ಮನವೆ
ಸಾರ್ಥಕ ಜೀವನದ
ಬೆಳಕ ಬೀರಿದವರ!

-ರಚನೆ: ಶ್ರೀಮತಿ ಶಿವದೇವಿ ಅವನೀಶ್ಚಂದ್ರ
ಸುಳ್ಯಕೋಡಿ, ಚೆಟ್ಟಿಮಾನಿ.

◆◆◆◆◆

ಒಂದು ಜನಾಂಗದ ಅಭಿವೃದ್ಧಿಯಲ್ಲಿ ಪತ್ರಿಕೆಯ ಪಾತ್ರದ ನೋವು-ನಲಿವು



ಪಟ್ಟಡ ಎಂ. ಪ್ರಭಾಕರ, ಗೌರವ ಸಂಪಾದಕ,
ಕೊಡಗು ಸಂಗಾತಿ, ಮೈಸೂರು

ಪ್ರಜಾಪ್ರಭುತ್ವದ ಯಶಸ್ಸಿಗೆ ಪತ್ರಿಕಾರಂಗದ ಪಾತ್ರ ಬಹುಮುಖ್ಯವಾದದ್ದು, ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗದ ಜೊತೆಗೆ ಪತ್ರಿಕಾರಂಗ ನಾಲ್ಕನೆಯ ಅಂಗವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಪತ್ರಿಕೆಗಳಿಲ್ಲದ ಜಗತ್ತನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ ಎಂದು ಚಿಂತಕರೊಬ್ಬರು ಉದ್ಗರಿಸಿದ್ದಾರೆ.

ಕನ್ನಡ ಪತ್ರಿಕೋದ್ಯಮವು ಸುಮಾರು 164 ವರ್ಷಗಳಷ್ಟು ಹಿಂದಿನದು. ಕ್ರಿ.ಶ. 1843ರಲ್ಲಿ ಜನ್ಮ ತಾಳಿದ " ಮಂಗಳೂರು ಸಮಾಚಾರ"ವೇ ಕನ್ನಡದ ಪ್ರಥಮ ಪತ್ರಿಕೆ. ಕನ್ನಡದ ಈ ಪ್ರಥಮ ಪತ್ರಿಕೆಯು ನಿಜವಾಗಿಯೂ ಸಮಾಚಾರ ಪತ್ರಿಕೆಯಾಗಿದ್ದಿತ್ತು. ನಾಲ್ಕೇ ಪುಟಗಳಲ್ಲಿದ್ದರೂ ಮಂಗಳೂರು ನಗರದಿಂದ ಹಿಡಿದು ಜಗತ್ತಿನ ಸುದ್ದಿಗಳವರೆಗೆ ಅದರ ಹರವು ಇದ್ದಿತು. ಜಗತ್ತಿನಲ್ಲಿ ಪತ್ರಿಕೋದ್ಯಮ ಹೊಸ ಹೊಸ ಆವಿಷ್ಕಾರ ಪಡೆದು ಅಭಿವೃದ್ಧಿ ಹೊಂದಿದಂತೆಲ್ಲಾ ಕನ್ನಡ ಪತ್ರಿಕೋದ್ಯಮವು ಸಹ ಸದೃಢವಾಗಿ ಬೆಳೆಯುತ್ತಿರುವುದನ್ನು ನಾವಿಂದು ಕಾಣಬಹುದಾಗಿದೆ. ಸ್ವಾಂತತ್ರ್ಯ ಪೂರ್ವದಿಂದಲೂ ದಿನಪತ್ರಿಕೆಗಳು, ವಾರಪತ್ರಿಕೆಗಳು, ಪಾಕ್ಷಿಕ ಪತ್ರಿಕೆಗಳು, ಮಾಸಪತ್ರಿಕೆಗಳು, ತ್ರೈಮಾಸಿಕ, ಅರೆವಾರ್ಷಿಕ, ವಾರ್ಷಿಕ ಪತ್ರಿಕೆಗಳು ಹುಟ್ಟಿಕೊಂಡು ಇಂದು ಇಡೀ ಪತ್ರಿಕಾರಂಗ ವಿಶಾಲ ವ್ಯಾಪ್ತಿಯನ್ನು ಪಡೆದುಕೊಂಡು ಬೆಳೆದಿದೆ. ಹಾಗೆಯೇ ವಿನೋದ ಪತ್ರಿಕೆಗಳು, ರಂಗಭೂಮಿಯ ಪರಿಚಯ ನೀಡುವ ರಂಗಪತ್ರಿಕೆಗಳು, ಮಕ್ಕಳ ಮನೋವಿಕಾಸನಕ್ಕಾಗಿಯೇ ಪ್ರಕಟವಾಗುತ್ತಿರುವ ಮಕ್ಕಳ ಪತ್ರಿಕೆಗಳು, ಚಲನಚಿತ್ರ ಪತ್ರಿಕೆಗಳು, ಜಾನಪದ ಪತ್ರಿಕೆಗಳು, ಶೈಕ್ಷಣಿಕ ಪತ್ರಿಕೆಗಳು, ಧಾರ್ಮಿಕ ಪತ್ರಿಕೆಗಳು, ಸಾಹಿತ್ಯಕ ಪತ್ರಿಕೆಗಳು, ವಿಜ್ಞಾನ ಪತ್ರಿಕೆಗಳು, ಸಂಶೋಧನಾ ಪತ್ರಿಕೆಗಳು, ಕೃಷಿ ಪತ್ರಿಕೆಗಳು ಹೀಗೆ ಹಲವಾರು ವರ್ಣರಂಜಿತವಾದ ವೈವಿಧ್ಯಮಯವಾಗಿ ಪ್ರಕಟವಾಗುತ್ತಾ ಓದುಗರ ಜ್ಞಾನ ದಾಹವನ್ನು ತಣಿಸುತ್ತಿವೆ. ಹಾಗೆಯೇ ಒಂದು ಜಾತಿ ಜನಾಂಗಕ್ಕೆ ಮೀಸಲಾದ ಪತ್ರಿಕೆಗಳೂ ಸಹ ಪ್ರಕಟವಾಗುತ್ತಿದ್ದು, ಜನಾಂಗದ ಅಭಿವೃದ್ಧಿಯಲ್ಲಿ ವಿಶಿಷ್ಟ ಪಾತ್ರವನ್ನು ವಹಿಸುತ್ತಿವೆ. ಒಕ್ಕಲಿಗರಲ್ಲಿ ಜಾಗೃತಿ ಮೂಡಿಸುವ ಸಲುವಾಗಿಯೇ 1907 ರಲ್ಲಿ "ಒಕ್ಕಲಿಗರ ಪತ್ರಿಕೆ" ಹುಟ್ಟಿಕೊಂಡಿತು. ಆ ಜನಾಂಗ ಎಚ್ಚೆತ್ತುಕೊಳ್ಳುವಂತೆ ಶ್ರಮಿಸಿದ ಆ ಪತ್ರಿಕೆ ಸುಮಾರು 65 ವರ್ಷಗಳ ಕಾಲ ಪ್ರಕಟವಾಯಿತು. ಈಗಲೂ ಸಹ ಆದಿಚುಂಚನಗಿರಿ ಮಠದ ವತಿಯಿಂದ ಪತ್ರಿಕೆಯೊಂದು ಪ್ರಕಟವಾಗುತ್ತಿದೆ. ಇದೇ ಮಾದರಿಯಲ್ಲಿ ಕರ್ನಾಟಕದ ಹಲವು ಜಾತಿ-ಜನಾಂಗದವರಲ್ಲಿ ಜಾಗೃತಿ ಮೂಡಿಸಲು ಹಲವಾರು ಪತ್ರಿಕೆಗಳು ಪ್ರಕಟವಾಗಿದ್ದು ಕೆಲವು ಈಗಲೂ ಸಹ ಪ್ರಕಟವಾಗುತ್ತಿವೆ.

9-4-1997ರಂದು ಕೊಡಗು ಗೌಡರ ಪಾಲಿಗೆ ಸುದಿನ, ಅಂದು ಯುಗಾದಿ, ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕೊಡಗುವ ಗೌಡ ವಿದ್ಯಾರ್ಥಿನಿಲಯದಲ್ಲಿ ಗೌಡರ ಸಮ್ಮಿಲನ, ಜಗದ ಕತ್ತಲನ್ನು ಹೋಗಲಾಡಿಸುವ ಸೂರ್ಯನಂತೆ ಗೌಡರ ಜನಮನದಲ್ಲಿ ಹೊಸ ಬೆಳಕು ಮೂಡಿಸಲು ನಡೆದಿದ್ದು "ಕೊಡಗು

ಸಂಗಾತಿ" ಪಾಕ್ಷಿಕ ಪತ್ರಿಕೆಯ ಬಿಡುಗಡೆ ಸಮಾರಂಭ. ಪತ್ರಿಕೆಯ ಗೌರವ ಸಂಪಾದಕ ಹಾಗೂ ಗೌರವ ವ್ಯವಸ್ಥಾಪಕನಾದ ನಾನು ಸ್ವಾಗತ ಭಾಷಣ ಮಾಡಿ ಪತ್ರಿಕೆಯ ಧ್ಯೇಯೋದ್ದೇಶಗಳನ್ನು ಬಿಡಿಸಿ ಹೇಳಿದೆನು, ಕೊಡಗು ಗೌಡ ಸಮಾಜ, ಮಡಿಕೇರಿಯ ಅಂದಿನ ಕಾರ್ಯದರ್ಶಿ ಪೈಕೇರ ಅನಂತರಾಮ್‌ರವರು ಜ್ಯೋತಿ ಬೆಳಗಿಸಿ ಸಮಾರಂಭವನ್ನು ಉದ್ಘಾಟಿಸಿದರು. ಮಡಿಕೇರಿ ಪುರಸಭೆಯ ಮಾಜಿ ಅಧ್ಯಕ್ಷರು, ವಕೀಲರೂ ಆದ ಮುಕ್ಕಾಟಿ ವಾಸುದೇವ್‌ರವರು ಪತ್ರಿಕೆ ಬಿಡುಗಡೆ ಮಾಡಿ ಮಾತನಾಡಿ, " ಅರೆಭಾಷೆ" ಯ ಪತ್ರಿಕೆಯ ಅಗತ್ಯತೆಯನ್ನು ಒತ್ತಿ ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಮಾಜಿ ಶಾಸಕ ಪಾಂಡನ ಸುಬ್ಬಯ್ಯನವರು ಮಾತನಾಡಿ, ಪತ್ರಿಕೆ ಯುವ ಜನಾಂಗವನ್ನು ಸಂಘಟಿಸಿ, ಅವರಿಗೆ ಉತ್ತಮ ಮಾರ್ಗದರ್ಶನ ನೀಡುವಂತಾಗಲಿ ಎಂದು ಆಶಿಸಿ ಶುಭಹಾರೈಸಿದರು ಹಾಗೂ ಸಮಾರಂಭಕ್ಕೆ ಆಗಮಿಸಿದ ಹಿತೈಷಿ ಅಮೆ ಪಾಲಾಕ್ಷನವರು ಮಾತನಾಡಿ, ಪತ್ರಿಕೆಯು ಕಟು ಸತ್ಯತೆಯಿಂದ ಕೂಡಿದ್ದು ಆರಂಭ ಶೂರತ್ವವಾಗದಿರಲಿ ಎಂಬ ಎಚ್ಚರಿಕೆಯ ಮಾತನಾಡಿದರು. ಆ ಎಲ್ಲಾ ಹಿರಿಯರ ಸಲಹೆಯನ್ನು " ಸಂಗಾತಿ" ತನ್ನ ಪ್ರಕಟಣೆಯ 8ವರ್ಷಗಳ ಕಾಲವೂ ಪಾಲಿಸಿಕೊಂಡು ಬಂದಿತು ಎನ್ನುವುದೇ ನನಗೆ ಹೆಮ್ಮೆಯ ಸಂಗತಿ, ಕೊಡಗು ಸಂಗಾತಿ ಪತ್ರಿಕೆಯ ಸಂಪಾದಕಿ ಪಟ್ಟಡ ಶೀಲಾಮಣಿ ಅವರು ಸಮಾರಂಭವನ್ನು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದ್ದರು.

"ಕೊಡಗು ಸಂಗಾತಿ"ಯ ಹುಟ್ಟು, ಬೆಳವಣಿಗೆ ಸಾಧನೆಯ ಬಗ್ಗೆ ಪತ್ರಿಕಾ ಬಳಗದವರಲ್ಲೊಬ್ಬರು ಮಂಡ್ಯ ಜಿಲ್ಲೆಯ ಖ್ಯಾತ ಸಾಹಿತಿಗಳು, ಚಿಂತಕರು ಕವಿಗಳು ಆದ ಶಿವಳ್ಳಿ ಕೆಂಪೇಗೌಡರು ಇದೇ ಸ್ಮರಣ ಸಂಚಿಕೆಯಲ್ಲಿ "ಸಂಗಾತಿ " ಅಧ್ಯಯನ ಪೂರ್ವಕ ಲೇಖನ ಬರೆದಿರುವುದರಿಂದ ವಿಷಯ ಪುನರಾವರ್ತನೆ ಆಗಬಾರದೆಂಬ ದೃಷ್ಟಿಯನ್ನಿಟ್ಟುಕೊಂಡು ನನ್ನ ಕೆಲವು ಮನದಾಳದ ಮಾತುಗಳನ್ನಷ್ಟೇ ಇಲ್ಲಿ ದಾಖಲಿಸಲು ಇಚ್ಛಿಸುತ್ತೇನೆ.

ಮೊಟ್ಟ ಮೊದಲನೆಯಾಗಿ ಈ ಪತ್ರಿಕೆ ಹೊರತರಲು-ಸಮಾಜ ಸೇವಕರು ಗೌಡ ಜನಾಂಗದ ಶೈಕ್ಷಣಿಕ ಪ್ರಗತಿಗೆ ಸೇವೆ ಸಲ್ಲಿಸಿದವರೂ ನನ್ನ ಪೂಜ್ಯ ತಂದೆಯವರು ಆದ ಪಟ್ಟಡ ಮುತ್ತಣ್ಣನವರು ನನಗೆ ಆದರ್ಶ ಹಾಗೂ ಪ್ರೇರಣ ಶಕ್ತಿ, ಒಂದು ಜನಾಂಗದ ಅಭಿವೃದ್ಧಿಯಲ್ಲಿ ಪತ್ರಿಕೆಯ ಅವಶ್ಯಕತೆ ಎಷ್ಟು ಮುಖ್ಯ ಎಂಬುದನ್ನು ಅರಿತುಕೊಳ್ಳಲು ನನಗೆ ಹೆಚ್ಚು ಸಮಯ ಬೇಕಾಗಲಿಲ್ಲ. ಎರಡನೇಯದಾಗಿ ಬ್ಯಾಂಕ್ ಒಂದರಲ್ಲಿ ಉದ್ಯೋಗಿಯಾಗಿರುವ ನನಗೆ ಪತ್ರಿಕಾ ಸಂಪಾದಕನಾಗಲು ಸಾಧ್ಯವಿರಲಿಲ್ಲ. ಆಗ ನನ್ನ ಧರ್ಮಪತ್ನಿ ಶ್ರೀಮತಿ ಪಟ್ಟಡ ಶೀಲಾಮಣಿ ಅವರು ಪತ್ರಿಕೆಗೆ ಸಂಪಾದಕಿಯಾಗಲು ಸಮ್ಮತಿ ಸೂಚಿಸಿ ಸಂಪೂರ್ಣ ಸಹಕಾರ ನೀಡಿದ್ದು, ಅವರಿಗೆ ಗೌಡ ಜನಾಂಗದ ಅಭಿವೃದ್ಧಿ ಬಗ್ಗೆ ಆದೆಷ್ಟು ಕಾಳಜಿ ಇದೆ ಎಂಬುದು ಅರಿವಾಯಿತು. ಅದಕ್ಕಾಗಿ ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಒಂದು " ಜನಾಂಗದ ಅಭಿವೃದ್ಧಿಯೇ ಒಂದು ದೇಶದ ಪ್ರಗತಿ" ಎಂಬ ಸಿದ್ಧಾಂತದಲ್ಲಿ ಸಂಪೂರ್ಣ ನಂಬಿಕೆ ಇಟ್ಟಿರುವ ನಾನು ಅದೇ ರೀತಿ ನಡೆದುಕೊಂಡು ಬಂದಿದ್ದೇನೆ.

ಕೊಡಗು ಸಂಗಾತಿ - ಅರೆ ಭಾಷೆಯನ್ನು ಪನಃಶ್ಚೇತನಗೊಳಿಸಿ, ಈ ಭಾಷೆಯ ಬಗ್ಗೆ ಜನಾಂಗದವರಲ್ಲಿ ನಿರಭಿಮಾನವನ್ನು ತೊಡೆದು ಹಾಕಲು ಪ್ರತಿ ಸಂಚಿಕೆಯಲ್ಲೂ ಏಳೆಂಟು ಪುಟಗಳನ್ನು ಮೀಸಲಾಗಿಟ್ಟಿತ್ತು.

ಕೊಡಗು ಸಂಗಾತಿ- ಗೌಡ ಜನಾಂಗದ ಧಾರ್ಮಿಕ, ಸಾಂಸ್ಕೃತಿಕ ಸಾಮಾಜಿಕ ಅಭಿವೃದ್ಧಿಗೆ ಸೂಕ್ತ ವೇದಿಕೆಯಾಗಿ ಕಾರ್ಯನಿರ್ವಹಿತು.

ಕೊಡಗು ಸಂಗಾತಿ- ತನ್ನತನ, ನನ್ನತನವನ್ನು ಮರೆಸಿ ಕೀಳರಿಮೆಯನ್ನು ಹೋಗಲಾಡಿಸಲು ಸಾಕಷ್ಟು ಹೆಣಗಿದೆ.

ಕೊಡಗು ಸಂಗಾತಿ- ಸಾಹಿತ್ಯದ , ಸಾಂಸ್ಕೃತಿಕ ಸಭೆ ಸಮಾರಂಭಗಳನ್ನು ನಡೆಸಿ ಅರೆಭಾಷೆಯಲ್ಲಿ ಮಾತನಾಡುವಂತೆ ಪ್ರೇರೆಪಿಸಿತು.

ಕೊಡಗು ಸಂಗಾತಿ- ಸಮಾಜ ಸೇವೆ ಹಾಗೂ ಕ್ರೀಡೆಯಲ್ಲಿ ಸಾಧನೆಗೈದವರ, ಪ್ರಶಸ್ತಿ ವಿಜೇತರ ಕಿರು ಪರಿಚಯವನ್ನು ಅವರ ಭಾವ ಚಿತ್ರ ಸಮೇತ ಪ್ರಕಟಿಸಿ ಅವರಲ್ಲಿ ಹುರುಪು, ಹುಮ್ಮಸು ತುಂಬಿದೆ.

ಕೊಡಗು ಸಂಗಾತಿ- ಮಾತೃಭೂಮಿಯ ರಕ್ಷಣೆಗಾಗಿ ಗಡಿಯಲ್ಲಿ ಹೋರಾಡುತ್ತಾ ಮಡಿದ ಹುತಾತ್ಮರಾದ ಕೊಡಗಿನ ವೀರಯೋಧರಿಗೆ ತಪ್ಪದೆ ಬರವಣಿಗೆಯ ಜೊತೆಗೆ ಶ್ರದ್ಧಾಂಜಲಿ ಸಲ್ಲಿಸಿದೆ.

ಕೊಡಗು ಸಂಗಾತಿ- ಜನಾಂಗದ ಏಳಿಗೆ, ಸಂಘಟನೆ, ಐಕ್ಯತೆ ಬಯಸಿ ಜಿಗಿಯಿತು. ಹೊರ ಜಗತ್ತಿಗೆ ಅಳಿಲು ಸೇವೆ ಸಲ್ಲಿಸಿತು, ಜನಾಂಗದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಿತು.

ಕೊಡಗು ಸಂಗಾತಿ- 300ಕ್ಕೂ ಹೆಚ್ಚು ಉದಯೋನ್ಮುಖ ಲೇಖಕ-ಲೇಖಕಿಯರ ಬರಹಗಳನ್ನು ಪ್ರಕಟಿಸಿ ಅವರನ್ನು ಸಾರಸ್ವತ ಲೋಕಕ್ಕೆ ಪರಿಚಯಿಸಿದೆ.

ಕೊಡಗು ಸಂಗಾತಿ- ಕೊಡಗಿನಲ್ಲಿ ಕೊಡವರಲ್ಲದೆ ಗೌಡ ಜನಾಂಗವೊಂದಿಗೆ ಹಾಗೂ ಇತರರು ಇದ್ದಾರೆ ಎಂಬುದನ್ನು ಹೊರ ಜಗತ್ತಿಗೆ ಸಾರಿ ಸಾರಿ ಹೇಳಿದೆ. ಅವರ ಆಚಾರ, ವಿಚಾರ , ಸಂಪ್ರದಾಯಗಳಿಗೆ ಹೆಚ್ಚು ಒತ್ತು ಕೊಟ್ಟು ಪ್ರಕಟಿಸಿದೆ.

ಕೊಡಗು ಸಂಗಾತಿ- ಸಾಧಿಸಿದ್ದು ಅಲ್ಪ, ಸಾಧಿಸಬೇಕಾದ್ದು ಆಗಾಧವಾಗಿದೆ ಎಂದು ಮಹದಾಸೆ ಇಟ್ಟುಕೊಂಡು ಮುನ್ನಡೆದಿತ್ತು.

ಪತ್ರಿಕೋದ್ಯಮ ತಂತಿಯ ಮೇಲಿನ ಕಸರತ್ತು, ಸ್ವಲ್ಪ ಆಯ ತಪ್ಪಿದರೂ ಕೆಳಕ್ಕೆ ಬೀಳುವ ಭೀತಿ ! ಹೊರನೋಟಕ್ಕೆ ಆಕರ್ಷಕವಾಗಿ ಕಾಣುವ ಪತ್ರಿಕಾ ಬೇಸಾಯದ ನೋವು, ನಲಿವು, ಸಂಕಷ್ಟ ಅನುಭವಿಸಿದವರಿಗೆ ಮಾತ್ರ ಗೊತ್ತು. ಪತಿಕೋದ್ಯಮ ನಷ್ಟದ ಬಾಬ್ತು ಪತ್ರಿಕಾರಂಗ ಪ್ರಕಟಣೆಯ ಖರ್ಚು ವೆಚ್ಚವನ್ನು ಸರಿದೂಗಿಸಲು ಹರಸಾಹಸ ಮಾಡಬೇಕು. ವಸ್ತು ಸ್ಥಿತಿ ಹೀಗಿದ್ದರೂ ಸಹ " ಸಂಗಾತಿ " ಜನ ಜಾಗೃತಿ ಪತ್ರಿಕೋದ್ಯಮವೇ ಸೂಕ್ತವೆಂದು ನಂಬಿ ಕಷ್ಟ ನಷ್ಟ ಸಹಿಷ್ಣುತೆಗಳಿಗೆ ಎದೆಗುಂದದೆ ಎಂಟು ವರ್ಷ ಪೂರೈಸಿತು. 150 ಸಂಚಿಕೆ ಹೊರ ಬಂತು. ಐದಾರು ಲಕ್ಷ ರೂಪಾಯಿ ನಷ್ಟವಾಯಿತು. ಹೀಗಾಗಿ ಸಂಗಾತಿ 9ನೇ ವರ್ಷಕ್ಕೆ ಪದಾರ್ಪಣೆ ಮಾಡಲಾಗಲಿಲ್ಲ. ಇದು ಜನಾಂಗದವರ ಔದಾಸೀನ್ಯದ ಫಲವೋ ? ನಮ್ಮ ದುರುದೃಷ್ಟವೋ? ಗೊತ್ತಾಗುತ್ತಿಲ್ಲ!

"ಸಂಗಾತಿ"ಗೆ 2500ಮಂದಿ ಚಂದಾದಾರರಿದ್ದರು. 250 ಪತ್ರಿಕೆಗಳನ್ನು ಪ್ರತಿನಿಧಿಗಳ ಮೂಲಕ ವಿತರಣೆ ಮಾಡಲಾಗುತಿತ್ತು. ಸದಸ್ಯರು ಪ್ರತಿವರ್ಷ ಚಂದಾಹಣ ತಪ್ಪದೆ ನೀಡುವಂತೆ ಮನವಿ ಮೇಲೆ ಮನವಿ ಮಾಡಿಕೊಂಡದ್ದಾಯಿತು. ಪತ್ರಿಕೆ ನಿಲುಗಡೆಯ ಭೀತಿಯನ್ನು ತೋಡಿಕೊಂಡದ್ದಾಯ್ತು, ವಿಷಾದದ ಛಾಯೇ ಹಾದು ಹೋಯಿತು. 8ವರ್ಷಗಳ ಕಾಲವೂ ಪತ್ರಿಕೆಗೆ ಮೆಚ್ಚುಗೆಯ ಸುರಿಮಳೆಯಾಯ್ತು. ದ್ವಿಚಕ್ರ ವಾಹನದಲ್ಲಿ ಹತ್ತಾರು ಭಾರಿ ತಿರುಗಿ ಸುಸ್ತಾದರೂ ಚಂದ ಹಣ ಮಾತ್ರ ಬರಲೇ ಇಲ್ಲ. ಬರುತ್ತಿದ್ದ ಹಣ ಪತ್ರಿಕೆಗೆ ನ್ಯೂಸ್ ಪ್ರಿಂಟ್ ಕೊಳ್ಳಲು ಸಹ ಸಾಧ್ಯವಾಗುತ್ತಿರಲಿಲ್ಲ. ನಿಗದಿತ ಸಮಯಕ್ಕೆ ಕೆಲವು ಪ್ರತಿನಿಧಿಗಳಿಂದ ಹಣ

ಸಂದಾಯವಾಗುತ್ತಿರಲಿಲ್ಲ. ಆದರೂ ಸಹ 1000 ಚಂದಾದಾರರು ಪ್ರಾಮಾಣಿಕತೆ ನಿಷ್ಠೆಯಿಂದಲೂ ಸಂಗಾತಿಯನ್ನು ನಡೆಸಿಕೊಟ್ಟಿದಕ್ಕೆ ಚಿರಋಣಿ.

ನಾನೊಬ್ಬ ಬ್ಯಾಂಕ್ ಉದ್ಯೋಗಿಯಾಗಿದ್ದರೂ ಸಹ ಪ್ರತಿನಿತ್ಯ ಸಂಜೆ ಹಾಗೂ ರಜಾದಿನಗಳನ್ನು "ಸಂಗಾತಿ"ಗಾಗಿಯೇ ಮೀಸಲಾಗಿಟ್ಟಿದ್ದೆ. ಆರ್ಥಿಕ ಸಂಕಷ್ಟ, ಅನಾರೋಗ್ಯದಲ್ಲಿಯೂ ಚಳಿ, ಮಳೆ, ಗಾಳಿಯನ್ನು ಲೆಕ್ಕಿಸದೆ ಊರೂರು ಸುತ್ತಿದೆ. ಸಂಗಾತಿಯನ್ನು ಉಳಿಸಿಕೊಳ್ಳಲು ಇನ್ನಿಲ್ಲದ ಹರಸಾಹಸ ಪಟ್ಟೆ. ಆದರೂ ಸಾಧ್ಯವಾಗಲಿಲ್ಲ. 01-09-2004ರ ಕೊನೆಯ ಸಂಚಿಕೆಯೊಂದಿಗೆ ಭಾರವಾದ ಹೃದಯದಿಂದ "ಸಂಗಾತಿ"ಯನ್ನು ಬೀಳ್ಕೊಟ್ಟೆ. ನನ್ನ ಕರುಳ ಕುಡಿಯೊಂದು ನಶಿಸಿದ ಭಾರ ನನಗಾಯಿತು.

ಪ್ರತಿ ತಿಂಗಳು ಸಹಸ್ರಾರು ಪ್ರತಿಗಳನ್ನು ಮುದ್ರಣಾಲಯದಿಂದ ಖುದ್ದಾಗಿ ಮನೆಗೆ ತರುತಿದ್ದೆ. ಒಂದೆರಡು ದಿನ ಕೋಣೆಯ ತುಂಬಾ ಸಂಗಾತಿ ಸಂಚಿಕೆಗಳೇ ತುಂಬಿರುತ್ತಿದ್ದವು. ಪತ್ರಿಕೆಗಳ ಮೇಲೆ ಚಂದಾದಾರರ ವಿಳಾಸ ಅಂಟಿಸಿ, ಸ್ಟಾಂಪ್ ಹಚ್ಚಿ ಮಡಿಚಿ, ಪಿನ್‌ಮಾಡಿ, ಬಂಡಲ್ ಕಟ್ಟಿ 10 ಕಿಲೋಮೀಟರ್ ದೂರದಲ್ಲಿರುವ ಅಂಚೆ ಕಚೇರಿಗೆ ಸಾಗಿಸುವವರೆಗೂ ಆ ಎಲ್ಲಾ ಕೆಲಸಗಳಲ್ಲಿ ನಮ್ಮ ಇಡೀ ಕುಟುಂಬ ವರ್ಗ ಸಡಗರದಿಂದ ಪಾಲ್ಗೊಳ್ಳುತ್ತಿತ್ತು. "ಸಂಗಾತಿ"ನಮ್ಮ ಕುಟುಂಬದ ಮತ್ತೊಬ್ಬ ಮುದ್ದಿನ ಮಗಳೆ ಆಗಿ ಹೋಗಿದ್ದಳು. ಆದರೆ ವಿಧಿಯಾಟದ ಮುಂದೆ ನಾವು ತಾನೇ ಏನು ಮಾಡಲು ಸಾಧ್ಯ? ಆದರೂ "ಸಂಗಾತಿ"ನನ್ನ ಸ್ಮೃತಿ ಪಟಲದಲ್ಲಿ ಹಚ್ಚಹಸುರಾಗಿ ನಳನಳಿಸುತ್ತಿದ್ದಾಳೆ. ಮನೆ ಮಗಳನ್ನು ಮರೆಯುವುದು ಹೇಗೆ ತಾನೆ ಸಾಧ್ಯ?

ಮೈಸೂರಿನ ಹಿನಕಲ್ ಅಂಚೆ, ವಿಜಯನಗರ ನಾಲ್ಕನೇ ಹಂತ, 2ನೇ ಘಟ್ಟದ ನಮ್ಮ ಮನೆಯ ಹೆರು " ಸಂಗಾತಿ ನಿಲಯ " ಮನೆ ಮುಂದಿನ ಹೆಬ್ಬಾಗಿಲಿನಲ್ಲಿ ಸಂಗಾತಿ "ಚಿಹ್ನೆ" . ಅಡ್ಡರಸ್ತೆಯ ಹೆಸರು "ಸಂಗಾತಿ" .ರಸ್ತೆ ಪಕ್ಕದ್ದು "ಸಂಗಾತಿ" ಸರ್ಕಲ್, ಸಂಗಾತಿ, ಸಂಗಾತಿ ಬರೀ ಈಗ ನೆನಪು ಮಾತ್ರ! ಮುಂದೊಂದು ದಿನ "ಸಂಗಾತಿ ಖಂಡಿತ ಮೊಮ್ಮಗಳಾಗಿ ಬರುವಳೆಂಬ ಆಶಾಕಿರಣ ನನ್ನದು. ಜನಾಂಗದ ಸರ್ವರ ಆರೈಕೆಯೊಂದಿಗೆ ಆಗ ಬೆಳಗಬಲ್ಲಳೆ? ಆಗಲೇ ನನಗದು ತೃಪ್ತಿ, ಸಂತೃಪ್ತಿ.

*-ಜೈ ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂಧವರೆ-

*ಇದೇ ರೀತಿ ಕೊಡಗು ಜಿಲ್ಲೆಯಲ್ಲಿ ಗೌಡ ಜನಾಂಗದ ಅಭಿವೃದ್ಧಿ ಮತ್ತು ಪ್ರಗತಿ ಶೀಲತೆಯನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡು ಎರಡು ಪತ್ರಿಕೆಗಳು *ಈ ಹಿಂದೆ ಪ್ರಕಟಗೊಂಡವು.

ಸುಮಾರು 1982 1983ರಲ್ಲಿ ದಂಬೆಕೋಡಿ ಮುದ್ದಪ್ಪನವರ ಮಾಲೀಕತ್ವ ಹಾಗೂ ಸಂಪಾದಕತ್ವದಲ್ಲಿ "ಸೂಜಿ" ಪಾಕ್ಷಿಕ ಪ್ರಕಟಗೊಂಡಿತು. ಆದರೆ ಕೆಲವು ಸಮಯದ ನಂತರ ಕಾರಣಾಂತರದಿಂದ ಈ ಪತ್ರಿಕೆ ನಿಲುಗಡೆಗೊಂಡಿತು.

1984ರಲ್ಲಿ ಅಮೆ ಪಾಲಾಕ್ಷ ಅವರ ಮಾಲೀಕತ್ವ ಹಾಗೂ ಸಂಪಾದಕತ್ವದಲ್ಲಿ ಇದೇ "ಸೂಜಿ" ಪತ್ರಿಕೆ ದಿನಪತ್ರಿಕೆಯಾಗಿ ಬೆಳಕು ಕಂಡಿತು. ಸುಮಾರು ಒಂದು ವರ್ಷ ಕಾಲ ಪ್ರಕಟಗೊಂಡ ಈ ದಿನ ಪತ್ರಿಕೆಯ ಪ್ರಕಟಣೆ ಕೂಡ ಸ್ಥಗಿತಗೊಂಡಿತು.

ನಂತರ 1985ರಲ್ಲಿ ಸೂದನ ಈರಪ್ಪನವರ ಮಾಲೀಕತ್ವ ಹಾಗೂ ಸಂಪಾದಕತ್ವದಲ್ಲಿ "ಗೌಡ ದೊನಿ" ಎಂಬ ಪಾಕ್ಷಿಕವೊಂದು ಬೆಂಗಳೂರಿನಿಂದ ಸುಮಾರು 6ತಿಂಗಳು ಪ್ರಕಟಗೊಂಡಿತಾದರೂ, ಕಾರಣಾಂತರದಿಂದ ಈ ಪತ್ರಿಕೆಯ ಪ್ರಕಟಣೆ ಕೂಡ ಸ್ಥಗಿತಗೊಂಡಿತು.

◆◆◆◆◆

ಗೌಡರು ಎಂದರೆ ಹೀಗೆ...



Thekkada Gulabi Janardhan
M.A.(Eng) BLIS Di Lib sc
Lecturer in English Madenadu

ಗೌಡರು ಅತ್ಯಂತ ಶ್ರಮಜೀವಿಗಳು ಛಲ ಧೈರ್ಯವುಳ್ಳವರು ಆಗಿರುವರು. ಕಾಡನ್ನೆ ಊರನ್ನಾಗಿ ಮಾಡುವವರು. ಆರಂಭದಲ್ಲಿಯೇ ರಾಗಿ, ಭತ್ತ, ಅಡಿಕೆ, ಕೊಕ್ಕೊ, ರಬ್ಬರ್ ಇತ್ಯಾದಿ ಬೆಳೆಗಳನ್ನು ಬೆಳೆಯಲಾರಂಭಿಸಿದರು. ಇತಿಹಾಸದ ಪುಟಗಳತ್ತ ದೃಷ್ಟಿ ಹರಿಸಿದಾಗ ಗೌಡರು ಪ್ರಬಲರಾಗುತ್ತ ಬ್ರಿಟಿಷರು ತಂದ ತೆರಿಗೆ ಪದ್ಧತಿಗೆ ವಿರುದ್ಧವಾಗಿ ತಲೆಯೆತ್ತಿ ಧ್ವನಿಯೆತ್ತಿ ಹೋರಾಟದಲ್ಲಿ ಭಾಗಿಯಾದರು. ಇತಿಹಾಸದಲ್ಲಿ ಅದೊಂದು 'ದಂಗೆ'ಯೆಂದು ಉಲ್ಲೇಖಗೊಂಡಿದೆ. ಬೆಳ್ಳಾರೆ ಖಜಾನೆಯನ್ನು ನಾಶಮಾಡಿ ಪುತ್ತೂರು ಪಾಣೆ ಮಂಗಳೂರನ್ನು ತಮ್ಮದಾಗಿಸಿಕೊಂಡು ಮಂಗಳೂರಿನ ಬಾವುಟ ಗುಡ್ಡೆಯಲ್ಲಿ 1837ರ ಏಪ್ರಿಲ್ 5ರಂದು ಬ್ರಿಟಿಷರ ಧ್ವಜವನ್ನು ಅವರೋಹಣ ಮಾಡಿದ ಸಾಹಸಿಗರು, ಆ ಪ್ರಮುಖರಲ್ಲಿ ಬಲಮುರಿಯ ಗುಡ್ಡೆಮನೆ ಅಪ್ಪಯ್ಯ ಗೌಡರು ಪ್ರಮುಖರು.

ಬ್ರಿಟಿಷರ ವಿರುದ್ಧ ನಡೆದ ಹೋರಾಟದ ಪರಿಣಾಮವಾಗಿ ಬ್ರಿಟಿಷರ ವಕ್ರದೃಷ್ಟಿಗೆ ಗೌಡ ಜನಾಂಗ ಬೀಳಬೇಕಾಯಿತು. ಔದ್ಯೋಗಿಕ, ಶೈಕ್ಷಣಿಕ ಮತ್ತು ಆರ್ಥಿಕವಾಗಿ ಕ್ಷೀಣಿಸಿದರು. ಉಳಿದ ಜನಾಂಗದವರು ಉನ್ನತಿಯನ್ನು ಪಡೆದರು. ಆದರೆ ಇಂದು ಸುಳ್ಯದ ಡಾ. ಕುರುಂಜಿ ವೆಂಕಟ್ರಮಣ ಗೌಡರವರ ಶೈಕ್ಷಣಿಕ ಕ್ರಾಂತಿ ನಮಗೆ ಮರುಜೀವ ತಂದು ಕೊಟ್ಟಿದೆ. 1908ರಲ್ಲಿ ಕುಂಬುಗೌಡನ ಕುಶಾಲಪ್ಪನವರ ನೇತೃತ್ವದಲ್ಲಿ ಕೊಡಗು ಗೌಡ ವಿದ್ಯಾ ಸಂಘ ಸ್ಥಾಪನೆಗೊಂಡಿತು. ಅಂದಿನ ದಿನಗಳಲ್ಲಿ ವಿದ್ಯೆಯ ಅಭಿವೃದ್ಧಿಗಾಗಿ ಕೈ ಜೋಡಿಸಿದವರು ಕೀರ್ತಿವಂತರಾದ ತೆಕ್ಕಡೆ ಸುಬ್ಬಯ್ಯ, ಕೆದಂಬಾಡಿ ಸುಬ್ರಾಯ, ಕೋರನ ಮಾದಯ್ಯ, ಪೊಡನೋಳನ ಅಯ್ಯಪ್ಪ, ತೆಕ್ಕಡೆಕಾಳಪ್ಪ, ಮೂಟೇರ ಅಣ್ಣಯ್ಯ, ಕರ್ಣಯನ ಅಪ್ಪಚ್ಚ ಮೊದಲಾದವರು ದೇಶದ ಸಮಗ್ರ ಪ್ರಗತಿಗೆ ವಿದ್ಯಾವಂಚಿತರಾದ ನಮಗೆ ಸ್ಫೂರ್ತಿದಾಯಕರು. ಪ್ರೊ. ಕೆ. ಕುಶಾಲಪ್ಪ ಗೌಡರು ಗೌಡ ಕನ್ನಡ ಎಂಬ ಕೃತಿಯನ್ನು 1970ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಪ್ರಕಟಿಸಿದ್ದಾರೆ.

ನಮ್ಮ ಜನಾಂಗದವರ ಅನುಭವ ಬುದ್ಧಿ ವಿಚಾರಗಳನ್ನು ಅಭಿವ್ಯಕ್ತಿಸುವ ಶಬ್ಧ ಸಂಪತ್ತು, ವ್ಯಾಕರಣ ಗಾದೆ, ಒಗಟು ಸಾಕಷ್ಟಿದೆ. ಶತಮಾನಗಳ ಇತಿಹಾಸವಿರುವ ಅಮೂಲ್ಯ ಬಳುವಳಿಯಾಗಿ ಬಂದಿರುವ ಅಪೂರ್ವ ಸಂಪತ್ತನ್ನು ನಾವೆಲ್ಲಾ ನಮ್ಮ ಜನಾಂಗಕ್ಕೆ ದಾಟಿಸುವ ಸ್ಫೂರ್ತಿಯಲ್ಲಿ ಇದ್ದೇವೆ. ಇಂದು ವ್ಯಾಪಾರ , ಉದ್ಯಮ, ಶಿಕ್ಷಣ, ಸಾಮಾಜಿಕ ಸಂಘಟನೆ, ರಾಜಕೀಯ ಎಲ್ಲದರಲ್ಲಿಯೂ ನಮ್ಮ ಗೌಡತ್ವ ಎದ್ದು ಕಾಣುತ್ತಿದೆ. ಹಲವಾರು ಹಿರಿಯ, ಕಿರಿಯ ನಾಯಕರು ಸಂಘಟನೆಯಲ್ಲಿ ತೊಡಗಿದ್ದಾರೆ. ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದ ಪ್ರತಿಭೆಗಳು ಈ ನೆಲದಿಂದ ಬೆಳೆದು ಅರಳಿಕೊಂಡಿವೆ.

◆◆◆◆◆

ನಾ ಕಂಡಂತೆ ಕೊಡಗು ಗೌಡ ವಿದ್ಯಾಸಂಘ



-ಶ್ರೀಮತಿ ಆನೆರ ಜಾನಕಿ ಮೋಹನ್, ಪ್ರಾಂಶುಪಾಲರು,
ಶ್ರೀ ಕಾವೇರಿ ಪ.ಪೂ. ಕಾಲೇಜು, ಭಾಗಮಂಡಲ.

ಕೊಡಗು ಗೌಡ ವಿದ್ಯಾಸಂಘ, ಗೌಡ ಸಾಂಸ್ಕೃತಿಕ ಅಕಾಡೆಮಿ ಮತ್ತು ಗೌಡ ಸಂಘ - ಈ ಮೂರು ಸಂಘಗಳು ಬೇರೆ ಬೇರೆ ಎಂದು ಗೊತ್ತಾಗಿದ್ದು ಇತ್ತೀಚೆಗೆ. ಇದರ ನಿಜ ಕಾರ್ಯರೂಪ ನನ್ನ ನಿಲುವಿಗೆ ನಿಲುಕಿದ್ದು ಶ್ರೀಯುತ ಹೊಸೂರು ರಮೇಶ್ ಜೋಯಪ್ಪನವರ ಅಧ್ಯಕ್ಷತೆಯನ್ನು ಹೊಂದಿರುವ ಆಡಳಿತ ಮಂಡಳಿ ಬಂದ ನಂತರವೇ.

ಮೊತ್ತ ಮೊದಲಿಗೆ ಇದರ ಹುಟ್ಟು - ಬೆಳವಣಿಗೆಗೆ ಸಹಕರಿಸಿರುವ, ಸಹಕರಿಸುತ್ತಿರುವ ಎಲ್ಲರಿಗೂ ನಾನು ಮನದುಂಬಿ ಅನಂತ ಪ್ರಣಾಮಗಳನ್ನು ಈ ಮೂಲಕ ಸಲ್ಲಿಸುತ್ತಿರುವೆನು.

ನಮ್ಮ ಹಿರಿಯರು ಹಾಕಿಕೊಟ್ಟಿರುವ ಮಾರ್ಗದರ್ಶನ ಕಿರಿಯರಿಗೆಲ್ಲಾ ಶ್ರೀರಕ್ಷೆಯಾಗಿದೆ. ಗೌಡ ವಿದ್ಯಾಸಂಘವು ಇಂದು ನಮ್ಮ ಜನಾಂಗದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ಪ್ರತಿಭಾವಂತರನ್ನು ಗುರುತಿಸಿ ಪ್ರೋತ್ಸಾಹಿಸುವುದು ಮಾತ್ರವಲ್ಲ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೂ ಆರ್ಥಿಕ ಧನ ಸಹಾಯವನ್ನಿತ್ತು ಸಹಕರಿಸುತ್ತಿರುವುದು ಹೆಮ್ಮೆಯೆನಿಸುತ್ತಿದೆ. ಅದರಲ್ಲೂ ಭಾಗಮಂಡಲ ನಾಡು ಎಲ್ಲಾ ಊರುಗಳಿಗಿಂತ ತುಂಬಾ ಹಿಂದುಳಿದಿರುವ ಊರು. ಈ ದಿಶೆಯಲ್ಲಿ ಅದೊಂದು ದಿವಸ ಶ್ರೀಯುತ ಹೊಸೂರು ರಮೇಶ್‌ನವರು ಆಡಳಿತ ಚುಕ್ಕಾಣಿಯನ್ನು ಕೈಗೆತ್ತಿಕೊಂಡ ಸಂದರ್ಭದಲ್ಲಿ ಭಾಗಮಂಡಲ ಪ.ಪೂ. ಕಾಲೇಜಿನಲ್ಲಿ ಫಲಿತಾಂಶವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ 10 ನೇ ತರಗತಿ ಮತ್ತು ದ್ವಿತೀಯ ಪಿ.ಯು.ಸಿ.ಯ ವಿದ್ಯಾರ್ಥಿಗಳಿಗೆ ಕಾಲೇಜಿನಲ್ಲಿಯೇ ತಾತ್ಕಾಲಿಕ ವಸತಿಗೃಹವನ್ನು ಏರ್ಪಡಿಸಿಕೊಂಡಿದ್ದೆವು. ವಿದ್ಯಾಸಂಘದ ಎಲ್ಲಾ ಕಾರ್ಯಕಾರಿ ಮಂಡಳಿಯವರು ಕಾಲೇಜಿಗೆ ಭೇಟಿ ಕೊಟ್ಟಿದ್ದರು. ಇವರಲ್ಲಿ ಹೆಚ್ಚಿನವರು ಭಾಗಮಂಡಲ ನಾಡಿನವರು. ಹಿರಿಯರು, ಉತ್ಸಾಹಿಗಳು ಹಾಗೂ ಅನುಭವಸ್ಥರು ಇದ್ದರು. ಇವರನ್ನು ಕಂಡಾಗ ನನ್ನ ಕನ್ನಡದ ಆದಿಕವಿ ಪಂಪನ ನೆನಪಾಯಿತು. ಕವಿ ತನ್ನ ನಾಡಿನ ಬಗ್ಗೆ ಹೇಗೆ ಹೇಳಿಕೊಂಡಿದ್ದಾನೆ 'ಆರಂಕುಶಮಿಟ್ಟೊಡಮಂ ನೆನೆಯುವುದೆನ್ನ ಮನಂ ಬನವಾಸಿ ದೇಶವಂ' ಎಂದು. ಹಾಗೆಯೇ ಇವರು ಈ ವಸತಿಗೃಹದಲ್ಲಿ ಕಠಿಣ ವಿಷಯಗಳಾದ ಇಂಗ್ಲಿಷ್-ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ವಿಶೇಷ ತರಗತಿಯನ್ನು ತೆಗೆದು ತರಬೇತಿಯನ್ನು ಕೊಡುವುದು. ಆ ಅಧ್ಯಾಪಕರಿಗೆ ವಿಶೇಷ ಸಂಭಾವನೆಯನ್ನು ಕೊಡುವುದೆಂದು ತಿಳಿಸಿದ್ದರು. ನಮ್ಮನ್ನು ಹುರಿದುಂಬಿಸಿ, ಪ್ರೋತ್ಸಾಹಿಸಿರುವ ವಿದ್ಯಾಸಂಘವನ್ನು ಸದಾಕಾಲ ಕಾವೇರಿ ಪ.ಪೂ. ಕಾಲೇಜಿನ ಪ್ರತಿಯೋರ್ವರೂ ಸ್ಮರಿಸುತ್ತಿರಬೇಕೆಂದು ಆಶಿಸಿ, ಇವರ ಹೆಸರಿನಲ್ಲಿ ವಿದ್ಯಾಲಯಕ್ಕೆ ಟಿ.ವಿ. ಮತ್ತು ಡಿಶ್ ತೆಗೆದಿರುತ್ತೇವೆ. ಇಂದಿಗೂ ಸುವ್ಯವಸ್ಥಿತವಾಗಿರುವುದು.

ಪ್ರಸ್ತುತ ದಿನಗಳಲ್ಲಿ ಕೇವಲ ಪ್ರತಿಭಾವಂತರನ್ನು ಮಾತ್ರವಲ್ಲ, ಅತಿಥಿಗಳನ್ನು ಸಭೆಗೆ ಕರೆಸುವ ನೆಪದಲ್ಲಿ ಇಡೀ ಜನಾಂಗಕ್ಕೆ ಎಲ್ಲರನ್ನೂ ಪರಿಚಯಿಸುತ್ತಿರುವುದು. ಇವರೆಲ್ಲರ ಸೇವೆ ಸದಾ ಸ್ಮರಣೀಯ ಹಾಗೂ ಶ್ಲಾಘನೀಯವಾದುದು.

ಇಂತಹ ಸಂಘಗಳನ್ನು ಕಟ್ಟುವುದು ಸುಲಭದ ಮಾತಲ್ಲ. ಅದಕ್ಕೆ ನೀರೆರೆದು ಪೋಷಿಸುವಲ್ಲಿ ಎಲ್ಲರ ಸಹಕಾರವೂ ಅಗತ್ಯ. ಪ್ರತಿಯೋರ್ವರೂ ತಮ್ಮ ಪಾಲಿನ ಜವಾಬ್ದಾರಿಯನ್ನರಿತು 'ನನಗೆ ನನ್ನ ಜನಾಂಗ ಏನು ಕೊಟ್ಟಿದೆ ಎಂದು ಪ್ರಶ್ನಿಸುವುದು ಬೇಡ. ಬದಲಿಗೆ ನಾನು ಜನಾಂಗಕ್ಕೆ ಏನನ್ನು ನೀಡಿರುವೆ,ಯೆಂದು ಪ್ರಶ್ನಿಸಿಕೊಂಡು ಸಹಕಾರವನ್ನು ನೀಡೋಣ.

ಬನ್ನಿ ಸ್ನೇಹಿತರೆ, ನಮ್ಮ ವಿದ್ಯಾಸಂಘ, ವಿಶ್ವಮಟ್ಟದಲ್ಲಿ ಕೀರ್ತಿಯ ಪತಾಕೆಯನ್ನು ಹಾರಿಸುವಲ್ಲಿ ಎಲ್ಲರ ತುಂಬು ಮನಸ್ಸಿನ ಸಹಕಾರವಿರಲೆಂದು ಆಶಿಸುತ್ತಾ ನನ್ನ ಅನಿಸಿಕೆಯನ್ನು ತಮ್ಮೆಲ್ಲರ ಮುಂದಿಡುತ್ತಿರುವೆನು.

ಕವನ

ಬನ್ನಿ, ಸಮಾಜ ಕಟ್ಟೋಣ



ಬನ್ನಿ, ಸಮಾಜ
ಕಟ್ಟೋಣ||
ಇದಕೆ ಸೈಟು, ಸ್ಕೆಚ್ಚು
ಬೇಕಾಗಿಲ್ಲ
ಲೋನು, ಪ್ಲಾನು
ಬೇಕಾಗಿಲ್ಲ
ಬನ್ನಿ, ಸಮಾಜ ಕಟ್ಟೋಣ||
ಇದಕೆ ಕಲ್ಲು, ಕಬ್ಬಿಣ
ಬೇಕಾಗಿಲ್ಲ
ಮರಳು, ಸಿಮೆಂಟು
ಬೇಕಾಗಿಲ್ಲ
ಬನ್ನಿ, ಸಮಾಜ ಕಟ್ಟೋಣ||
ಇದಕೆ ಇಂಜಿನಿಯರು, ಎಕ್ಸ್‌ಕಾವೇಟರು
ಬೇಕಾಗಿಲ್ಲ
ಮೊಸಾಯಿಕ್, ಟೈಲ್ಸ್
ಬೇಕಾಗಿಲ್ಲ
ಬನ್ನಿ, ಸಮಾಜ ಕಟ್ಟೋಣ||
ಇದಕೆ
ವಿಶಾಲ ಹೃದಯಗಳು ಬೇಕು
ನಿಸ್ವಾರ್ಥ ಸೇವಕರು ಬೇಕು
ನವ ಸಮಾಜದ ಕನಸಿನ ಮನಸಿನವರು ಬೇಕು
ಮನುಷ್ಯರನ್ನು ಮನುಷ್ಯರನ್ನಾಗಿ ಕಾಣುವ
ಮನುಷ್ಯರು ಬೇಕು.

- ಬಾರಿಯಂಡ ದಿವ್ಯ ಜೋಯಪ್ಪ,
ಮದೆ.

ಚುಟುಕ

ಗೆಳೆಯ

ನಿನ್ನ ಹೃದಯವೆಂಬ
ಬಾಹ್ಯಾಕಾಶದಲ್ಲಿ ಸುತ್ತಾಡಬೇಕೆಂದಿದ್ದೇನೆ
ಪ್ರೀತಿಯೆಂಬ ಆಮ್ಲಜನಕವ
ನನಗಾಗಿ ಕಾದಿರಿಸುವೆಯಾ?

ನೆನಪು

ನಾನು ಒಂಟಿಯಾಗಿರಬಹುದು ಆದರೆ
ಏಕಾಂಗಿಯಲ್ಲ
ನನ್ನ ಹೃದಯದಲ್ಲಿ ನೀನಿದ್ದೀ
ನೀನಿಲ್ಲದಿದ್ದರೂ
ನಿನ್ನ
ನೆನಪುಗಳಿವೆ

ಪುಸ್ತಕ ಪ್ರೇಮಿಗಳು ಎಲ್ಲಿದ್ದಾರೆ?

- ಬೊಳ್ಳುಮಾನಿ ಗಾಯಿತ್ರಿ ಅಪ್ಪಯ್ಯ,
ಬಲ್ಲಮಾವಟಿ.



ಇತ್ತೀಚಿನ ದಶಕದಲ್ಲಿ ಶಿಕ್ಷಿತ ವರ್ಗದವರು ಮುಖ್ಯವಾಗಿ ವಿದ್ಯಾರ್ಥಿಗಳು ಓದುವುದೇ ಕಡಿಮೆಯಾಗಿದೆ ಎಂದು ಎಲ್ಲೆಲ್ಲೂ ದೂರುಗಳು ಕೇಳಿಬರುತ್ತಿವೆ. ಜನಸಂಖ್ಯೆ ಜಾಸ್ತಿಯಾಗಿದೆ. ಅಕ್ಷರಸ್ಥರು ಕಲಿತವರು ಹೆಚ್ಚಾಗಿದ್ದಾರೆ. ಓದುವವರ ಸಂಖ್ಯೆ ಮಾತ್ರ ಕಡಿಮೆಯಾಗಿದೆ ... ಇದೇನು ವಿಚಿತ್ರ?

ಒಂದು ಮಾತನ್ನಂತೂ ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಲೇಖಕರು ವಿಮರ್ಶಕರು, ಪ್ರಕಾಶಕರು, ಮಾರಾಟಗಾರರು, ಓದುಗರು ಎಲ್ಲರೂ ಓದುವ ಒಟ್ಟು ಅವಧಿ ಕಡಿಮೆಯಾಗಿದೆ. ಇದಕ್ಕೆ ಹಲವಾರು ಕಾರಣಗಳನ್ನು ಮುಂದೊಡ್ಡಿದ್ದಾರೆ. ಆದರೆ ಈ ಕೊರತೆ ಏಕೆ ಉಂಟಾಗಿದೆ ಎಂದು ನಿಖರವಾಗಿ ಗುರುತಿಸಿ ಅದರ ವಿಶ್ಲೇಷಣೆ ಮಾಡಿ ಪರಿಹಾರ ಕಂಡುಕೊಳ್ಳುವದಕ್ಕೆ ನಾವು ಏಕೆ ಹಿಂಜರಿಯಬೇಕು?

ಮನೋರಂಜಕವಾದ ದೃಶ್ಯ ಸಮೂಹ ಮಾಧ್ಯಮಗಳಿಂದ ಜನರ ಓದುವ ಅವಧಿ ಕಡಿಮೆಯಾಗಿದೆ(ಜಪಾನ್, ಅಮೇರಿಕಗಳಲ್ಲಿ ಜನರ ಓದುವಿಕೆ ಹೆಚ್ಚಾಗಿದೆ!)

ಶಿಕ್ಷಣ ರಂಗದಲ್ಲಿ ಮಕ್ಕಳ ತಲೆಯ ಮೇಲೆ ಪುಸ್ತಕ ರಾಶಿಯನ್ನೇ ಹೊರಿಸಿ, ವಿಪರೀತ ಮನೆಕೆಲಸ ಒತ್ತಡ ಹೇರಿ, ಓದುವ ಹವ್ಯಾಸ ಉಂಟುಮಾಡುವ ಪ್ರವೃತ್ತಿಗೆ ಓದುವ ಆನಂದಕ್ಕೆ ಸಂಚಕಾರ ತಂದಿದ್ದೇವೆ. ಇಂದು ಮಕ್ಕಳನ್ನು ಅಂಥ ಅದ್ಭುತ ಪ್ರಚಂಚದ ಅನುಭವದಿಂದ ನಾವು ವಂಚಿತರನ್ನಾಗಿ ಮಾಡಿದ್ದೇವೆ. ಪುಸ್ತಕ ಓದು ಅಂದರೆ ಮಕ್ಕಳು ಬೆಚ್ಚಿ ಬೆವರುವಂತೆ ಮಾಡಿದ್ದೇವೆ.

ಗಂಭೀರವಾಗಿ ಯೋಚಿಸುವಂತೆ, ಚಿಂತಿಸುವಂತೆ, ಓದಿದ್ದನ್ನು ಮನನ ಮಾಡುವಂತಹ ವಾತಾವರಣವೇ ಇಂದು ಇಲ್ಲವಾಗಿದೆ. ತರುಣ ಜನಾಂಗ ಶೀಘ್ರವಾಗಿ ಹಣ ಸಂಪಾದಿಸುವ ಸುಲಭ ಮಾರ್ಗಗಳು ಯಾವುವು ಎಂಬುದರ ಬಗ್ಗೆ ಪ್ರತಿದಿನ ಹೊಸದಾಗಿ ಬರುತ್ತಿರುವ ಫ್ಯಾಷನ್, ಐಷಾರಾಮ, ಪಂಚಾತಾರಾ ಸಂಸ್ಕೃತಿಯ ಬಗ್ಗೆ ಹೆಚ್ಚು ಒಲುಮೆ ತೋರಿಸುತ್ತಿದ್ದಾರೆ. ಇದೆಲ್ಲದರಿಂದಾಗಿ ಓದುವುದಕ್ಕೆ ಸಮಯವೆಲ್ಲಿ? ಓದುವ ಮನಸ್ಸು ಇಲ್ಲ, ಪ್ರವೃತ್ತಿಯೂ ಇಲ್ಲ.

ಪುಸ್ತಕವೊಂದು ಆತ್ಮೀಯ ಸ್ನೇಹಿತನಂತೆ. ಅದರ ಮಹತ್ವವನ್ನೇ ತರುಣ ಜನಾಂಗ ಅರಿತಿಲ್ಲ. ಅವರು ತಿಳಿಯುವಂತೆ ನಾವು ಮಾಡಿಲ್ಲ. ಹಾಗಾಗಿ ನಮ್ಮ ತರುಣ ಜನಾಂಗಕ್ಕೆ ಬೋರ್ ಆಗುವುದೇ ಜಾಸ್ತಿ.

ಕನ್ನಡ ಪುಸ್ತಕ ಪ್ರಾಧಿಕಾರ ಇತ್ತೀಚೆಗೆ ಕನ್ನಡ ಪುಸ್ತಕೋದ್ಯಮದ ಸಂಗಾತಿಯಾಗಿ "ಪುಸ್ತಕ ಲೋಕ" ಎಂಬ ಪತ್ರಿಕೆಯನ್ನು ಆರಂಭಿಸಿದೆ. ಅನೇಕ ಖಾಸಗಿ ಪ್ರಕಾಶಕರಲ್ಲದೆ, ಅಕಾಡೆಮಿಗಳು, ಸಂಸ್ಕೃತಿ ಇಲಾಖೆ, ಪುಸ್ತಕ ಪ್ರಾಧಿಕಾರ ವಿಶ್ವ ವಿದ್ಯಾಲಯಗಳು ಪುಸ್ತಕಗಳನ್ನು ಪ್ರಕಟಿಸುತ್ತಿವೆ. ಇಷ್ಟೆಲ್ಲಾ ಆದರೂ ಪುಸ್ತಕಗಳ ಬಗ್ಗೆ ನಮಗೆ ತೀರಾ ಅಲಕ್ಷ್ಯ, ತಾತ್ಸಾರಗಳು ಬೆಳೆದಿರುವುದೇಕೆ?

ಈ ಕುರಿತು ಗ್ರಂಥಾಲಯದ ಬೆಳವಣಿಗೆಗೆ ಸಹಕಾರ, ಮಾರ್ಗದರ್ಶನ ಕೊಡುವ ಎರಡು ಸಂಸ್ಥೆಗಳು ಅದರ ಮುಖ್ಯಸ್ಥರ ವೈಯಕ್ತಿಕ ಆಸಕ್ತಿಯಿಂದಲೇ ನಡೆಯುತ್ತಿವೆ. ಬೆಂಗಳೂರಿನ ಇನ್‌ಫೋಸಿಸ್ ಫೌಂಡೇಶನ್ನಿನ

ಸುಧಾಮೂರ್ತಿ, ಎನ್.ಎಸ್. ರಾಘವನ್ ಮತ್ತು ಜಿ.ಆರ್. ನಾಯಕರವರು "ಶಾಲೆಗೊಂದು ಗ್ರಂಥಾಲಯ" ಎಂಬ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಈ ಯೋಜನೆಯ ಮುಂದುವರೆದಿದೆ. ಇಂಥವರ ಸಂಖ್ಯೆ ಕನ್ನಡದಲ್ಲಿ ಹೆಚ್ಚಾಗಲಿ.

ಕುದುರೆಯನ್ನು ನೀರಿನವರೆಗೆ ತೆಗೆದುಕೊಂಡು ಹೋಗಬಹುದು. ಆದರೆ ಅದು ನೀರು ಕುಡಿಯುವಂತೆ ಮಾಡುವುದು ಸಾಧ್ಯವೇ? ಹಿಗೊಂದು ಮಾತು ಇಂಗ್ಲೀಷ್‌ನಲ್ಲಿದೆ. ನಮ್ಮ ಜನರು ಓದುವಂತೆ ಪುಸ್ತಕ ಪ್ರೀತಿಯನ್ನು ಬೆಳೆಯುವಂತೆ ಮಾಡುವದು ಹೇಗೆ? ಈ ಕುರಿತು ನಾವು ಯೋಚಿಸಿ, ಹೊಸ ಹೊಸ ಮಾರ್ಗವನ್ನು ರೂಪಿಸಿಕೊಳ್ಳಬೇಕಾಗಬಹುದು.

ಇತ್ತೀಚೆಗೆ ಕನ್ನಡದಲ್ಲಿ ಬರವಣಿಗೆಗಳು ಆಗುತ್ತಿವೆ ನಿಜ. ಜ್ಞಾನಪೀಠ ಪ್ರಶಸ್ತಿಗಳು ಕನ್ನಡಕ್ಕೆ ಬಂದಿವೆ. ಆದರೆ ಕನ್ನಡ ಸಾಹಿತ್ಯ ಲೋಕದಲ್ಲಿ ನೆಲೆಸಿರುವ ಗುಂಪುಗಾರಿಕೆ, ರಾಜಕೀಯ, ಮತ್ಸರ ಇವು ಸಾಹಿತ್ಯದ ಮೇಲೂ ಪ್ರಭಾವ ಬೀರಿ, ಓದುಗರಿಗೆ ಸಾಹಿತ್ಯದ ಬಗ್ಗೆ ಇದ್ದ ಪವಿತ್ರ ಭಾವನೆ ಕಡಿಮೆಯಾಗಿದೆ. ನಮ್ಮ ಕೆಲವು ಸಾಹಿತಿಗಳಂತೂ ಮರಿರಾಜಕಾರಣಿಗಳಂತೆ ಆರೋಪಿಸುವದು, ದೂರುವ ಹೇಳಿಕೆಗಳನ್ನು ಪತ್ರಿಕೆಗಳಲ್ಲಿ ಕೊಟ್ಟು ಒಟ್ಟು ಸಾಹಿತ್ಯ ಪ್ರಪಂಚದ ವಾತಾವರಣವೇ ಮಲಿನವಾಗಿದೆ ಕಲುಷಿತವಾಗಿದೆ.

ಇಷ್ಟೆಲ್ಲಾ ಹಿನ್ನಲೆಯಲ್ಲಿ ಏಪ್ರಿಲ್ 23 ರಂದು ಜಾಗತಿಕ ಪುಸ್ತಕ ದಿನ ಬರುತ್ತಿದೆ. ಯುನೆಸ್ಕೋದವರು ಮಾಡಿದ ಈ ತೀರ್ಮಾನವನ್ನು ಜಗತ್ತಿನ ಪ್ರಮುಖ ಪ್ರಕಾಶಕರು ಸ್ವಾಗತಿಸಿದ್ದಾರೆ ಮಾನವನ ವಿಚಾರ, ಚಿಂತನೆ, ಅನ್ವೇಷಣೆಗಳಿಗೆ ಕಾರಣ ಪುಸ್ತಕ ಪ್ರೇಮ. ಪುಸ್ತಕ ಕೊಡುವ ಸ್ಫೂರ್ತಿ ಪ್ರೇರಣೆಗಳು ಅನನ್ಯವಾದವು. ಇಂಥ ಪುಸ್ತಕ ಪ್ರೇಮ ಬೆಳೆಸುವದಕ್ಕೆ ಸಹಾಯ ಮಾಡಬೇಕು. ಅಂತಹ ಸ್ವಯಂಪ್ರೇರಣೆ ಎಲ್ಲರಲ್ಲೂ ಮೂಡಲಿ.

ಪುಸ್ತಕಗಳನ್ನು ಉಡುಗೊರೆಯಾಗಿ , ಪ್ರೀತಿಯ ಕಾಣಿಕೆಯಾಗಿ ಕೊಡಿ.

ಕವನ

ನಮ್ಮ ವಿದ್ಯಾ ಸಂಘ

ಗೌಡ ವಿದ್ಯಾಸಂಘ
ನಮ್ಮಲ್ಲಿಹುದು ನೋಡಿ
ಕೊಡಗಿನ ಎಲ್ಲೆಡೆ
ಕಂಪನು ಬೀರಿ
ಗೌಡ ವಿದ್ಯಾಸಂಘಕೆ
ಶತಮಾನೋತ್ಸವದ
ಸಂಭ್ರಮ
ಕಣ್ತುಂಬಿ ನಲಿದೆವು
ಇಂದು ನಲಿಯೋಣ
ಮುಂದೆ ಎಂದೆಂದೂ

ಸಾವಿರಾರು ಮಕ್ಕಳು
ಪಡೆದರು ವಿದ್ಯೆ
ಶೋಭಿಪರು
ಉನ್ನತ ಹುದ್ದೆಯಲಿ
ಸಮಾಜಕೆ
ಉಪಯೋಗಿಯಾಗ್ವರು
ಬಡವ ಬಲ್ಲಿದರ
ಸೇವೆ ಗೈಯುತಲಿಹರು.

-ಅಮೆ ಕಮಲಾ ಗಣಪತಿ,
ಕುಶಾಲನಗರ.

ಐನ್‌ಮನೆ



-ಪುದಿನೆರವನ ರೇವತಿ ರಮೇಶ್,
ಮಡಿಕೇರಿ-ಕೊಡಗು.

ಅಲ್ಲೊಂದು ಕುಟುಂಬದ ಐನ್‌ಮನೆ ನೋಡಿ
ಐನ್‌ಮನೆ ಹತ್ತಿಕ್ಕೆ ಮೆಟ್ಟಿಲ್ ನೋಡಿ
ಮೆಟ್ಟ್ ಹತ್ತಿದಂಗೆ ಕಯ್ಯಾಲೆ ನೋಡಿ
ಕಯ್ಯಾಲೆಲಿ ಕಂಬನ ಐಮರ ನೋಡಿ
ಐಮರ ಕಂಬದ ಚಿತ್ತಾರ ನೋಡಿ

ಹಕ್ಕಿ ಕುದ್ದುಟ್ಟು ಆನೆ ಕೊಂಬುಟ್ಟು
ಸಿಂಹದ ಮುಖವುಟ್ಟು ದೇವರ ರೂಪುಟ್ಟು
ಕಯ್ಯಾಲೆ ದಾಟಿದಂಗೆ ಬಾಡೆನ ನೋಡಿ
ಬಾಡೆಗೆ ದಾಟಿಕ್ಕೆ ಕಟ್ಟೋಳೆ ನೋಡಿ
ಹಳೆಬರ್ ಮಾಡ್‌ದ ಕೆತ್ತನೆ ಉಟ್ಟು

ಬಳ್ಳಿಟ್ಟು ಹೂವುಟ್ಟು
ಭತ್ತದ ತೆನೆಉಟ್ಟು
ಬಾಡೆಲಿ ಹೊಸ್ಸಿದ
ದೀಪನ ನೋಡಿ
ಕುಲಗುರು ಹರಿಸಿದೆ ನಿಮ್ಮನ್ನ ನೋಡಿ

ಅಲ್ಲೊಂದು ಕೋಂಬರೆ ಇಲ್ಲೊಂದು ಕೋಂಬರೆ
ಮನೆಮಕ್ಕಳಿಗೆಲ್ಲಾ ಬೇಕಷ್ಟ್ ಕೋಂಬರೆ
ಎಲ್ಲವೂ ಸೇರುವೆ ಅಲ್ಲೊಂದು ದಿನ
ಸುಖ ದುಃಖನ ಹಂಚುವ ದಿನ
ಕೂಡಿ ಆಡಿ ನಲಿಯುವ ದಿನ

'ಊರಿಗೊಂದು ದೇವಸ್ಥಾನ, ಕುಟುಂಬಕ್ಕೊಂದು ಐನ್‌ಮನೆ' ಇದ್ ಹಿರಿಯರ ಗಾದೆ.

ಕೊಡಗ್‌ಲಿ ಪ್ರಮುಖರ್‌ತ್ತೇಳುವ ಆದಿವಾಸಿ ಗೌಡರ್ ಇಲ್ಲಿಂದ ಡೆಲ್ಲಿಯವರೆಗೂ ಇನ್ನೂ ಹೆಚ್ಚಾಗಿ ಅಂತರ್‍ರಾಷ್ಟ್ರೀಯ ಮಟ್ಟದವರೆಗೂ ಬೆಳೆದ್ ನಿಂತಳೋ. ಎಲ್ಲಿಗೂ ಹೋದರೂ ನಮ್ಮದ್ ಇದ್ ನಮ್ಮದ್, ಐನ್‌ಮನೆ ನಮ್ಮದ್, ಅರೆಭಾಷೆ ನಮ್ಮದ್, ಜಮ್ಮ ನಾನ್‌ತ್ತೇಳಿಕಂಡ್ ಅವರ ಮೂಲ ಸ್ಥಳಕ್ಕೆ ಬಂದ್ ದೇವರ್‍ನ ಬೇಡಿ ಹಿರಿಯರ ಆಶೀರ್ವಾದ ಪಡ್‌ದ್ ಹೋದನ ಮರೆಯಲೆ.

ಇಂತಹ ಒಂದು ವಿಶಿಷ್ಟ ಸಂಪ್ರದಾಯಗಳನ್ನ ಉಳಿಸಿ ಬೆಳೆಸಿಕಂಡದರಲ್ಲಿ 'ಐನ್‌ಮನೆ'ತ್ತೇಳುದು ಒಂದು.

ಈಗನಂಗೆ ಹಿಂದೆ ಸಂಸಾರ ಕುಡಿ ಒಡ್ಡ್ ಜೀವನ ಮಾಡುವ ಪದ್ಧತಿ ಇತ್ತ್‌ಲೆ. ಇದ್ದರೂ 100ಕ್ಕೆ 5 ರಷ್ಟಿದ್ದಿರುದು. ಅಜ್ಜ, ಅಜ್ಜಿ, ಮಜ, ಸೊಸೆ, ಮೊಮ್ಮಕ್ಕ, ಮರಿಮಕ್ಕ ಹಿಂಗೆ ಎಲ್ಲವೂ ಒಂದೇ ಸೂರ್‌ನಡಿ ಜೀವನ ಮಾಡ್‌ತಿದ್ದೋ. ಅಂತಹ ಒಂದು ಸೂರ್‌ನ 'ಐನ್‌ಮನೆ'ತ್ತಾ ಕರ್‌ದೋ. ಪ್ರತಿ ಒಂದು ಕುಟುಂಬಕ್ಕೆ ಒಂದು ಮನೆ ಹೆಸರ್, ಐನ್‌ಮನೆ ಇರುದು ಅಂದ್‌ಂದ ಇಂದ್‌ನವರೆಗೂ ನಾವು ಕಾಣ್ತಾ ಒಳೋ. ಆದರೆ ಇಂದ್ ಒಂದು ಕುಟುಂಬದ ಜನ ಬೇರೆ ಬೇರೆ ಕಡೆ ಹೋಗಿ ಸಂಸಾರ ಮಾಡ್ತಾ ಒಳೋ. ಆದರೂ ಯಾರು ಎಲ್ಲಿ ಹೋದರೂ, ಹಿರಿ ಅಜ್ಜ ಕಟ್ಟಿದ ಮನೆ, ಹಿರಿಯರ್ ಜೀವನ ಮಾಡ್‌ದ ಮನೆನ ಉಳಿಸಿಕಂಡ್ ಬಂದಳೋ. ಆ

ಮನೆನ ಉಳಿಸಿ ಬೆಳೆಸಿ ಅಲ್ಲಿ ಮನೆಗುರುನ ಕಾರೋಣನ ಕಾಣ್ತಾ ಒಳೋ. ಯಾವುದೇ ಒಂದು ಶುಭ, ಅಶುಭ ಕಾರ್ಯಗಳನ್ನ ಮಾಡಿಕ್ಕೆ ಆ ಮನೆ ಗುರು ಕಾರೋಣನ ಕಂಡ್, ಬೇಡಿ ಮತ್ತೆ ಸುರುಮಾಡಿವೆ. ಆದರಂದ ಐನ್‌ಮನೆನ, ಗುರುಕಾರಣರ್ ಇರುವ ಒಂದು ಪವಿತ್ರ ಸನ್ನಿಧಿತಾ ಪ್ರತಿಯೊಬ್ಬರೂ ತಿಳ್ದಳೋ. ಹಿರಿಯರ್ ಹೇಳ್ವಂಗೆ ಐನ್‌ಮನೇಲಿ ಕುಲಗುರು ಹರಿಸಿರೆ ನಮಗೆ ಇಡೀ ದೇಶ ಗೆದ್ದ್ ಬರಕ್ಕ್. ಈ ಐನ್‌ಮನೆಲಿ ಕುಟುಂಬದ ಎಲ್ಲವೂ ಸೇರಿ ವರ್ಷಲಿ ಸುಮಾರ್ ಕಾರ್ಯಕ್ರಮಗಳನ್ನ ನಡೆಸಿಕಂಡ್ ಬಂದವೆ.

ವಿಶೇಷವಾಗಿ ಹರಿಸೇವೆ, ಗೌಡರ ವಿಶೇಷ ಉತ್ಸವನ ಪ್ರತಿಯೊಂದು ಕುಟುಂಬದವು ಐನ್‌ಮನೆಗಳಿಗೆ ಬಂದ್ ಕುಟುಂಬದ ಪ್ರತಿಯೊಬ್ಬರ್ನ ಸೇರಿಸಿ ಬಂಧು -ಬಳಗ ಕರ್ದ್ ಬಹಳ ಗೌಜಿಯಿಂದ ನಡಿಸಿವೆ. ಮತ್ತೆ ಹುತ್ತರಿ ಹಬ್ಬಲಿ ಎಲ್ಲವೂ ಐನ್‌ಮನೆಲೆ ಸೇರಿ ಕದಿರ್‌ಗುತ್ತಿ ಹೊತ್ತ್ ಕದ್‌ರ್ ಕುಯ್ದ್ ತಂದ್ ಕುಟುಂಬದ ಎಲ್ಲವೊಕ್ಕೆ ಕದ್‌ರ್ ಕೊಟ್ಟ್ ಒಟ್ಟಿಗೆ ಸಿಹಿಪದಾರ್ಥಗಳನ್ನ ತಿಂದ್ ಹಬ್ಬ ಮಾಡುವೆ. ಇನ್ನ್ ನಾಟಿ ಕೆಲಸ ಆದಂಗೆ ಕೈಲ್‌ಮುಹೂರ್ತ ಹಬ್ಬನ ನಡಿಸಿವೆ. ಈ ಹಬ್ಬಲಿ ಮಾಡ್ವ ಅಡಿಗೆನ ಹಿರಿಯವುಕ್ಕೆ ಐನ್‌ಮನೆಲಿ ಎಡೆ ಇಡುವ ಸಂಪ್ರದಾಯ ಉಟ್ಟು. ಹಂಗೆ ಕಾವೇರಿ ಸಂಕ್ರಮಣಲಿ ಐನ್‌ಮನೆಗೆ ಬಂದ್ ಗುರುಕಾರಣರನ ನೆನ್‌ದ್ ಕಾವೇರಿಗೆ ಹೋಗಿ ಮೀದ್ ತೀರ್ಥ ತಂದ್ ಐನ್‌ಮನೆಲಿಟ್ಟವೆ. ಇದಲ್ಲದೆ ಕಾರ್ ತಿಂಗಲಿ ದೆವ್ವ ಕೊಡುದು, ದೆವ್ವದ ಕೋಲ ನಡುಸುದು, ಹಂಗೆ ಇನ್ನ್ ಸುಮಾರ್ ಕಾರ್‌ಬಾರ್‌ಗಳನ್ನ ಐನ್‌ಮನೆಲಿ ನಡಿಸಿವೆ.

ಇನ್ನ್ ಕುಟುಂಬಲಿ ಯಾರಾದರ್ ಸತ್ತ್ ಹೋದರೆ ಕೆಲವು ಐನ್‌ಮನೆಗೆ ತಂದ್ ಅಲ್ಲಿ ಅಂತಿಮ ಗೌರವ ಕೊಟ್ ಜಮ್ಮ ಭೂಮಿಲೆ ಮಣ್ಣ್‌ಮಾಡುವೆ. ಅಲ್ಲಿಂದ ಮಾಡಕಾದ ಕರ್ಮಾಂತರಗಳ ಈ ಮನೆಲಿ ಮಾಡಿ ಹೋದವೆ.


ಐನ್‌ಮನೆಲಿ ಮುಖ್ಯವಾಗಿ ವೆಂಕಟರಮಣ ಸ್ವಾಮಿನ ಭಂಡಾರನ ಇಟ್ಟವೆ. ಈ ಭಂಡಾರನ ಹರಿಸೇವೆ ಮಾಡ್‌ಕಾಕ್ಕನ ಕುಟುಂಬದವು ಸೇರಿ ತಿರುಪತಿಗೆ ಹೋಗಿ ಭಂಡಾರ ಒಪ್ಪಿಸಿ ಬಂದ್ ದೇವರ ಸೇವೆನ ಮನೆಲಿ ಮಾಡುವೆ.

ಐನ್‌ಮನೆಲಿ ಊರು ದೇವರ ಭಂಡಾರ ಸಹ ಇಟ್ಟವೆ. ಅದರಂದ ಐನ್‌ಮನೆನ ಒಂದು ದೇವಸ್ಥಾನ ಇದ್ದಂಗೆ ಕಾಪಾಡುವೆ. ಮೈಲಿಗೆ, ಸೂತಕ ಇದ್ದವು ಐನ್‌ಮನೆನ ಹತ್ತಿಕ್ಕಾಗದ್. ಹಂಗೆ ಐನ್‌ಮನೆಲಿ ಐಮರ ಇದ್ದರೆ, ಅದರಲ್ಲಿ ಹೆಣ್ಣ್ ಮಕ್ಕ ಕೂರ್‌ಕ್ಕಾಗದ್. ಅಲ್ಲದೆ, ಪ್ರತಿದಿನ ಬೆಳಿಗ್ಗೆ, ರಾತ್ರಿ ದೀಪ ಇಸಿ ಪೂಜೆ ಮಾಡುದರನ್ನ ತಪ್ಪಿಸಿಕ್ಕಾಗದ್. ಇಂತಹ ಸುಮಾರ್ ಕಟ್ಟ್‌ಪಾಡ್‌ಗ ಐನ್‌ಮನೆಲಿ ಉಟ್ಟು.

ಒಟ್ಟ್‌ಲಿ ಹೇಳುದಾದರೆ ಐನ್ ಮನೆತ್ತೇಳುದು ಒಂದು ಒಗ್ಗಟ್ಟಿನ ಸಂಕೇತ, ಹಿರಿಯರ ಸನ್ನಿಧಿ. ದೇವರ ಸನ್ನಿಧಿ. ಒಟ್ಟಿಗೆ ಸೇರಿ ಸುಖ-ದುಃಖಗಳನ್ನ ಹಂಚಿಕಂಡ್ ಜೀವಿಸಿದ ನೆಲೆ. ಇನ್ನೂ ಹೆಚ್ಚಿಗೆ ಹೇಳಕ್ಕುತಾದರೆ 'ಜಮ್ಮ ನಮ್ಮದ್, ಐನ್‌ಮನೆ ನಮ್ಮದ್, ಅರೆಭಾಷೆ ನಮ್ಮದ್, ನಾವು ಗೌಡರ್‌ತ್ತೇಳಿ ಹೇಳಿಕಂಡ್ ನಮ್ಮತನನ ಉಳಿಸಿಕಣೆಕ್ಕಿರುವ ಒಂದು ಪವಿತ್ರ ನೆಲೆತ್ತೇಳುದರಲ್ಲಿ ತಪ್ಪಿಲ್ಲೆ.

*****

ಪ್ರಜಾಪ್ರಭುತ್ವದ 4ನೇ ಅಂಗ ಮಾಧ್ಯಮ



-ಕುದುಕುಳಿ ಜೆ. ಭರತ,
ಭಾಗಮಂಡಲ

ಶಾಸಕಾಂಗ, ನ್ಯಾಯಾಂಗ ಮತ್ತು ಕಾರ್ಯಾಂಗದ ನಂತರ ಬರುವುದೇ ಮಾಧ್ಯಮ. ಮೊದಲಿನ ಮೂರು ಅಂಗಗಳ ಮೇಲಿನ ಹಿಡಿತ ಈ ಮಾಧ್ಯಮ ರಂಗದ್ದೆಂದರೆ ತಪ್ಪಾಗಲಾರದು. ಶಾಸಕಾಂಗದ ಪ್ರತಿನಿಧಿಗಳು ಆಗಾಗ ಬದಲಾಗುತ್ತಾರಲ್ಲದೆ, ಪಕ್ಷ, ಧೋರಣೆಗಳೂ ಬದಲಾಗುತ್ತಿರುತ್ತವೆ. ಆದರೆ ಮಾಧ್ಯಮ ಯಾವತ್ತೂ ಸ್ಥಿರವಾಗಿರುತ್ತದೆ. ನ್ಯಾಯ, ನಿಷ್ಠೆ, ಧರ್ಮ ಇವೇ ಈ ರಂಗದ ತಳಹದಿ. ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಪ್ರಜೆಗಳೇ ಪ್ರಭುಗಳು. ಭಾರತದಲ್ಲಂತೂ ಪ್ರಜೆಗಳಿಗಿರುವಷ್ಟು ಸ್ವಾತಂತ್ರ್ಯ ಪ್ರಪಂಚದ ಬೇರಾವ ರಾಷ್ಟ್ರಗಳಲ್ಲೂ ಇದ್ದಂತಿಲ್ಲ. ವಾಕ್ ಸ್ವಾತಂತ್ರ್ಯ ನಮ್ಮ ದೇಶದಲ್ಲಿನ ಸಂವಿಧಾನದತ್ತವಾದಂತ ಪ್ರಜೆಗಳ ಹಕ್ಕು. ಈ ಹಕ್ಕುಗಳನ್ನು ತಿದ್ದಿ , ತೀಡಿ, ಉಳಿಸಿ ಬೆಳೆಸುತ್ತಿರುವ ದೇಶದ ಮಹತ್ತರ ಜವಾಬ್ದಾರಿ ಹೊತ್ತಿರುವವರೇ ಮಾಧ್ಯಮಗಳು ಮತ್ತು ಪತ್ರಿಕಾ ಪ್ರತಿನಿಧಿಗಳು.

ದಿನ ಬೆಳಗಾದರೆ ಪತ್ರಿಕಾ ಅಂಗಡಿ ಮತ್ತು ಚಹಾ ಅಂಗಡಿಗಳ ಮುಂದೆ ಪತ್ರಿಕೆ ಹಿಡಿದು ನಿಂತಿರುವ ಮಂದಿ ತುಂಬಾ ಬಿಸಿಯಾಗಿದ್ದಂತೆ ಕಂಡು ಬರುತ್ತಾರೆ. ತನ್ನ ಊರು, ರಾಜ್ಯ, ದೇಶ, ಸಮಾಜ , ಧರ್ಮ ಹಾಗೂ ಎಲ್ಲಾ ವಿಚಾರಗಳನ್ನು ಮತ್ತು ಒಂದೇ ವಿಷಯದ ಬಗ್ಗೆ ಬೇರೆ ಬೇರೆ ಪತ್ರಿಕೆಗಳು ಬರೆದಂತೆ ಬೇರೆ ಬೇರೆ ದೃಷ್ಟಿಕೋನಗಳಿರುವ ಅದೇ ವಿಚಾರದ ಬಗ್ಗೆ ತಮ್ಮಲ್ಲೆ ಚರ್ಚಿಸುವಂತ ಸಂದರ್ಭಗಳು ಸಾಕಷ್ಟು ಕಂಡುಬರುತ್ತದೆ. ಹಾಗಾಗಿ ಮಾಧ್ಯಮಗಳು ಜನತೆಗೆ ಅತ್ಯಗತ್ಯವೆಂದು ಗ್ರಾಮಾಂತರಗಳಿಂದ ಹಿಡಿದು ಬೃಹತ್ ನಗರಗಳವರೆಗೂ ಮಹತ್ವ ಪಡೆದುಕೊಂಡಿದೆ.

ಮಾಧ್ಯಮವು ಪ್ರಜಾಪ್ರಭುತ್ವದ ಒಂದು, ಕಾವಲುಗಾರ ಸಂಸ್ಥೆ ಇದ್ದಂತೆ. ಇಲ್ಲಿ ರಾಜಕಾರಣಿಯಿರಲಿ, ಅಧಿಕಾರಿಗಳಿರಲಿ ಅಥವಾ ಜನಸಾಮಾನ್ಯರ ಬೇಕು ಬೇಡಿಕೆಗಳು ಮತ್ತು ಹಕ್ಕು, ಕರ್ತವ್ಯಗಳಲ್ಲಿ ಕೊರತೆಯುಂಟಾದಾಗ ತಕ್ಷಣ ಎಚ್ಚೆತ್ತುಕೊಳ್ಳುವುದು ಮಾಧ್ಯಮ. ಸಮಾಜದಲ್ಲಿನ ಓರೆಕೋರೆಗಳು, ಭ್ರಷ್ಟಾಚಾರ, ಅನ್ಯಾಯ, ಅಕ್ರಮಗಳನ್ನು ಪತ್ರಿಕೆಗಳ ಮುಖಾಂತರ ಜನರು ಮುಂದಿಡುತ್ತಾರೆ. ಮತ್ತು ಈ ಮೂಲಕ ಪತ್ರಕರ್ತ ಸಮಾಜದಲ್ಲಿ ಗೌರವಯುತ ಸ್ಥಾನ ಪಡೆಯುತ್ತಾನೆ. ಜೊತೆಯಲ್ಲೇ ಕೆಲವೊಂದು ಸಮಾಜಘಾತುಕರ ಕೆಂಗಣ್ಣಿಗೂ ಗುರಿಯಾಗುತ್ತಾರೆ. ಹಾಗಾಗಿ ಮಾಧ್ಯಮದವರ ಜೀವನ ಯಾವತ್ತೂ ನೆಮ್ಮದಿಯಿಂದಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಒಬ್ಬ ವರದಿಗಾರ ಯಾವುದೇ ಒಂದು ಕುಗ್ರಾಮದಲ್ಲಿ ಒಂದು ಘಟನೆ ನಡೆದರೂ ತನಗೆ ಲಭಿಸಿದ ಯಾವುದಾದರೊಂದು ಮೂಲದಿಂದ ಘಟನೆಯ ಜಾಡು ಹಿಡಿದು ವಿಚಾರ ತಿಳಿಯುವವರೆಗೆ ವಿರಾಮವಿಲ್ಲ. ಹಾಗಾಗಿ ಪತ್ರಕರ್ತನಾದವನು ಸಮಯಕ್ಕೆ ಸರಿಯಾಗಿ ಊಟ ಮತ್ತು ನಿದ್ರೆ ಮಾಡಿದ್ದರೆ , ಅದೇ ಅವನ ಭಾಗ್ಯವೆನ್ನಬೇಕು. ಎಲ್ಲಾ ಪತ್ರಿಕೆಗಳು ಮತ್ತು ಎಲ್ಲಾ ಪತ್ರಕರ್ತರು ಒಂದೇ ರೀತಿ ಜನಮನ್ನಣೆ ಪಡೆದಿರುತ್ತಾರೆಂದು ಹೇಳಲು ಸಾಧ್ಯವಿಲ್ಲ. ಒಂದು ವಿಚಾರದ ಬಗ್ಗೆ ಬರೆಯುವ ಪತ್ರಕರ್ತನ ಪದಪುಂಜಗಳು ಮತ್ತು ಬರವಣಿಗೆಯ

ಮೇಲಿನ ಹಿಡಿತ, ಈ ಮುಖಾಂತರ ಜನರ ಮೆಚ್ಚುಗೆ ಗಳಿಸುತ್ತಾ ಹೋಗುತ್ತಾನೆ. ಹಾಗಾಗಿ ಒಂದು ಪತ್ರಿಕೆಯಲ್ಲಿನ ಸಂಪಾದಕೀಯ ಅದು ಭೂತ, ಭವಿಷ್ಯ ಮತ್ತು ವರ್ತಮಾನಗಳ ಬಗ್ಗೆ ಜನಮೆಚ್ಚುಗೆ ಗಳಿಸಬಲ್ಲದು.

ಹೊಸದಾಗಿ ಒಂದು ಪತ್ರಿಕೆ ಅಥವಾ ದೂರದರ್ಶನ ಚಾನಲ್ ಒಂದನ್ನು ಆರಂಭಿಸಲು ಆರ್ಥಿಕ ವ್ಯವಸ್ಥೆ, ವಿಷಯ ಸಂಗ್ರಹ ಮತ್ತು ಪ್ರಚಾರದ ವ್ಯವಸ್ಥೆಗಳನ್ನು ಜಿಲ್ಲಾ ಅಥವಾ ರಾಜ್ಯ ಮಟ್ಟದಲ್ಲಿ ಪೂರ್ವತಯಾರಿ ಮಾಡಿರಬೇಕು. ಸಾಕಷ್ಟು ಪತ್ರಿಕೆಗಳು ಪ್ರಾರಂಭವಾಗಿ ಒಂದು ವಾರ ಅಥವಾ ತಿಂಗಳಲ್ಲಿ ನಿಂತು ಹೋಗುವುದಕ್ಕೆ ಕಾರಣ ಪೂರ್ವ ಯೋಜನೆ ಇಲ್ಲದೆ ಈ ರಂಗಕ್ಕೆ ಧುಮುಕಿ ಆದಂತ ಪ್ರಮಾದಗಳು. ಕೆಲವು ವರ್ಷಗಳ ಹಿಂದೆ ಹೆಸರಾಂತ ಕೈಗಾರಿಕೋದ್ಯಮಿಯೊಬ್ಬರು ಪತ್ರಿಕಾ ರಂಗಕ್ಕೆ ಕೈ ಹಾಕಿದ್ದಲ್ಲದೆ ಅಲ್ಲಿ ಪತ್ರಿಕಾದರಸವರಕ್ಕೆ ಪ್ರಾರಂಭಿಸಿ ಇಡೀ ಪತ್ರಿಕಾ ರಂಗದಲ್ಲೇ ತಳಮಳ ಉಂಟು ಮಾಡಿ ಕೊನೆಗೆ ಕೋಟಿಗಟ್ಟಲೆ ನಷ್ಟ ಅನುಭವಿಸಿ ಈ ರಂಗದಿಂದಲೇ ಹಿಂದೆ ಸರಿದಿರುವುದು ನಮಗೆಲ್ಲಾ ತಿಳಿದ ವಿಚಾರ. ಇದು ಕೂಡ ಈ ರಂಗದ ಪರಿಚಯವಲ್ಲದೆ ಹೈ ಹಾಕಿ ಮಾಡಿಕೊಂಡಂತಹ ಪ್ರಮಾದವಾಗಿದೆ. ಸಮಾಜದಲ್ಲಿ ಪತ್ರಿಕೋದ್ಯಮಿಯ ಪಾತ್ರ ಫುಟ್ಬಾಲ್ ತಂಡಗಳ ಮಧ್ಯದ ಚೆಂಡಿನಂತೆ. ಚೆಂಡಿಲ್ಲದಿದ್ದರೆ ಆಟವೇ ಇಲ್ಲ ಚೆಂಡು ಮೈದಾನದ ಮೂಲೆ ಮೂಲೆಗೂ ಪ್ರತಿಯೊಬ್ಬ ಆಟಗಾರನ ಬಳಿ ಜಿಗಿಯುತ್ತಿರುತ್ತದೆ. ಯಾವುದೇ ಆಟಗಾರ ಹಿಡಿದಿಟ್ಟುಕೊಳ್ಳುವುದಿಲ್ಲ. ಆಟಗಾರರು ಒದೆಯುತ್ತಲೇ ಇರುತ್ತಾರೆ ಚೆಂಡು ಜಿಗಿಯುತ್ತಲೇ ಇರುತ್ತದೆ. ಆಟಗಾರನ ಗುರಿ ಗೋಲಾಗಿಸುವುದು ಮಾತ್ರ. ಇಲ್ಲಿ ಚೆಂಡು ಒದೆ ತಿನ್ನುವುದು ವಿಶೇಷವೇ ಅಲ್ಲ. ಅಲ್ಲದೆ ಯಾವನೇ ಆಟಗಾರ ಚೆಂಡನ್ನು ಒದೆಯದೆ ಅಪ್ಪಿಕೊಳ್ಳುವುದಿಲ್ಲ. ಅಂತೆಯೇ ಪತ್ರಕರ್ತರು ಜನಸಾಮಾನ್ಯರು, ಅಧಿಕಾರಿಗಳು ಹಾಗೂ ರಾಜಕಾರಣಿಗಳ ಮಧ್ಯೆ ಚೆಂಡಿನ ಪಾತ್ರದಲ್ಲಿರುತ್ತಾನೆ.

ಪತ್ರಿಕಾರಂಗ ಓದುವವನಿಗೆ ಆತುರ ಕಾತರ ಸಂತಸ ನೀಡುತ್ತದೆ. ಆದರೆ ಪತ್ರಕರ್ತ ಓದುಗನ ಮನಸ್ಸನ್ನು ಹಿಡಿದಿಟ್ಟುಕೊಳ್ಳಲು ಶತಪ್ರಯತ್ನ ಪಡುತ್ತಿರುತ್ತಾನೆ. ರಾಜಕಾರಣಿಗಳ, ಅಧಿಕಾರಿ ವರ್ಗದವರ ಮತ್ತು ಜನಸಾಮಾನ್ಯರಲ್ಲಿನ ಅಕ್ರಮ ಅನ್ಯಾಯ ಭ್ರಷ್ಟಚಾರ, ಕೊಲೆ, ಸುಲಿಗೆಗಳ ವಿಚಾರಗಳನ್ನು ಬರೆಯುತ್ತಲೇ ಇರುತ್ತಾರೆ. ಇಲ್ಲಿ ಸಮಾಜದ ಮಧ್ಯೆ ಒಂದು ವರ್ಗದ ಜನರ ಕೆಂಗಣ್ಣಿಗೆ ಪಾತ್ರನಾಗುತ್ತಾನೆ. ಇಂತಹ ಸಮಾಜಘಾತುಕರಿಂದ ಮಾಧ್ಯಮ ಮಂದಿಗೆ ತೊಂದರೆಗಳು ಬಂದೆರುಗುತ್ತದೆ. ಪ್ರತಿಭಟನೆಗಳು, ನ್ಯಾಯಾಲಯದಲ್ಲಿ ಮೊಕದ್ದಮೆಗಳು, ಕ್ಯಾಮರಾ ಇನ್ನಿತರ ಸಾಮಾಗ್ರಿಗಳನ್ನು ನಾಶಪಡಿಸುವುದು ಮತ್ತು ಬೆದರಿಕೆಗಳು ಇಂತಹ ಪ್ರಸಂಗಳು ಸಾಮಾನ್ಯವಾಗಿ ನಡೆಯುತ್ತಿರುತ್ತದೆ. ಹಾಗಾಗಿ ಪತ್ರಕರ್ತನಾದವನು ಸದಾ ಎಚ್ಚರಿಕೆಯಿಂದಲೇ ಇರಲೇಬೇಕಾಗುತ್ತದೆ.

ನಮ್ಮ ದೇಶದಲ್ಲಿ ಸ್ವಾತಂತ್ರ್ಯವೆಂಬುದು ಕಂಡುಬಂದಿರುವುದು ಕೆಲವೊಮ್ಮೆ ಅಧಿಕಾರಿಗಳ, ಅಥವಾ ಪಕ್ಷ, ರಾಜಕಾರಣಿಗಳ ಅಥವಾ ಜನ ಸಾಮಾನ್ಯರ ಸ್ವೇಚ್ಛಾಚಾರವೆಂದು ಕಂಡುಬಂದಿರುವುದು ಉಂಟು. ಉದಾಹರಣೆಗೆ 1975ರ ತುರ್ತು ಪರಿಸ್ಥಿತಿ ಹೇರಿಕೆ ಮತ್ತು ಆ ಮೂಲಕ ಜನಸಾಮಾನ್ಯರ ಮತ್ತು ಮಾಧ್ಯಮಗಳ ಮೇಲೆ ಸೆನ್ಸಾರ್ ಉಪಯೋಗಿಸಿ ಸಾಕಷ್ಟು ಮಂದಿಯನ್ನು ಸೆರೆವಾಸದಲ್ಲಿಟ್ಟು ಕಾಂಗ್ರೆಸ್ ತನ್ನ ಜನವಿರೋಧಿ ನೀತಿಯನ್ನನುಸರಿಸಿ ಅಧಿಕಾರದಿಂದ ದೂರ ಉಳಿಯುವಂತಾಗಿರುವುದು. ಕೋಟ್ಯಾಂತರ ರೂಪಾಯಿ ನಕಲಿ ಛಾಪಾ ಕಾಗದದ ಹಗರಣ ನಡೆಸಿದ ತೆಲಗಿ ಮತ್ತವನ ಗುಂಪು, ಇವೆಲ್ಲಾ ಮಾಧ್ಯಮಗಳ ಮುಖಾಂತರ ಜನವಲಯದಲ್ಲಿ ಪ್ರಚಾರ ಪಡೆದು ಅಪರಾಧಿಗಳಿಗೆ ಶಿಕ್ಷೆ ಆಗುತ್ತಿರುವುದು. ಹೀಗಾಗಿ ಮಾಧ್ಯಮ ಸಮಾಜದಲ್ಲಿ ಕಾವಲು ನಾಯಿಯಂತಿದ್ದು, ಮನೆಯ

ಗೇಟಿನಲ್ಲಿ 'ನಾಯಿಗಳಿವೆ ಎಚ್ಚರಿಕೆ' ಎಂಬ ಬೋರ್ಡು ತಗಲಿಸಿದಂತೆ ಒಬ್ಬ ರಾಜಕಾರಣಿ ಅಥವಾ ಹಿರಿಯ ಅಧಿಕಾರಿಯಾಗಲಿ ಎಲ್ಲೇ ಹೋದರು ತಾನು ಮಾತನಾಡುವುದಿದ್ದರೆ ಸುತ್ತಲೂ ನೋಡಿ ಮಾಧ್ಯಮದವರನ್ನು ಗಮನಿಸಿ ಮಾತನಾಡುವುದು ರೂಢಿಯಾದಂತಿದೆ.

ಮಾಧ್ಯಮ ವೆಂಬುದು ನ್ಯಾಯದ ತಕ್ಕಡಿಯಿದ್ದಂತೆ. ಈ ರಂಗ ಯಾವತ್ತೂ ಮೋಸ ವಂಚನೆ ಮಾಡಿ ಉಳಿಯಲು ಸಾಧ್ಯವೇ ಇಲ್ಲ. ತಕ್ಕಡಿಯ ಒಂದು ಭಾಗ ಯಾವತ್ತು ಪ್ರಜೆಗಳ ಕೈಯಲ್ಲಿರುತ್ತದೆ. ಈ ರಂಗದ ಕೆಲ ಮಂದಿ ವಾಮ ಮಾರ್ಗದಲ್ಲಿ ಹಣ ಸಂಪಾದನೆಗಿಳಿದು ಕೆಲವೇ ಸಮಯದಲ್ಲಿ ಮೂಲೆ ಗುಂಪಾಗಿರುವುದನ್ನು ನೋಡಿದ್ದೇವೆ. ಹಾಗೆಂದ ಮಾತ್ರಕ್ಕೆ ಇಡೀ ಮಾಧ್ಯಮ ರಂಗ ವಾಮಮಾರ್ಗದಲ್ಲಿದೆಯೆಂದರೆ ತಪ್ಪಾಗುತ್ತದೆ. ಕೆಲ ಮಂದಿ ಪತ್ರಕರ್ತರು ಮತ್ತು ಕೆಲವು ಪತ್ರಿಕೆಗಳು ಒಂದು ರಾಜಕೀಯ ಪಕ್ಷದ ಅಥವಾ ಒಬ್ಬ ಹಿರಿಯ ಅಧಿಕಾರಿಯ ಮುಖವಾಣಿಯಂತೆ ಕಂಡು ಬರುವುದು ಉಂಟು. ಅಂತಂಹ ಪತ್ರಕರ್ತ ಆ ಪಕ್ಷ ಅಥವಾ ಆ ಅಧಿಕಾರಿಯ ಅಧಿಕಾರ ಇರುವವರೆಗೆ ಮಾತ್ರ ಇದ್ದು, ನಂತರ ತಮ್ಮ ಸತ್ವ ಕಳೆದುಕೊಳ್ಳುತ್ತಾರೆ. ಆದರೆ ಈ ಕೆಟ್ಟ ಸಂಪ್ರದಾಯಗಳು ಇಡೀ ಮಾಧ್ಯಮ ರಂಗಕ್ಕೆ ಅನ್ವಯಿಸುವುದಿಲ್ಲ.

ಕೊನೆಯದಾಗಿ ಭಾರತದಂತ ಅತಿ ದೊಡ್ಡ ಅಭಿವೃದ್ಧಿಶೀಲ ಪ್ರಜಾಪ್ರಭುತ್ವ ರಾಷ್ಟ್ರದ ಸಂವಿಧಾನದ ಬಹುಮುಖ್ಯವಾದ ಈ ನಾಲ್ಕನೇ ಅಂಗದ ರಕ್ಷಣೆ ಮತ್ತು ಅದರ ಅಭಿವೃದ್ಧಿಯ ಜವಾಬ್ದಾರಿ ಪ್ರಜೆಗಳದ್ದೇ ಆಗಿದೆ. ಕಾರಣವೆಂದರೆ 1980ರ ದಶಕದಲ್ಲಿ ಮಂಗಳೂರಿನ ಪತ್ರಕರ್ತ ರಾಘವೇಂದ್ರ ನಾಗೋರಿ ಮತ್ತವನ ಕುಟುಂಬದ ಬರ್ಬರ ಹತ್ಯೆ ಮತ್ತು ಭದ್ರಾವತಿಯ ಪತ್ರಕರ್ತ ಸಿದ್ಧರಾಮೇಶ್ ಹತ್ಯೆ ಇವುಗಳು ಪ್ರಜಾಪ್ರಭುತ್ವದ ಮೇಲೆ ನಡೆದಂತಹ ಸಂವಿಧಾನ ಬಾಹಿರ ಕೃತ್ಯಗಳು. ಈ ಕೃತ್ಯಗಳ ಹಿಂದಿನ ಕರಾಳ ಕೈಗಳಿಗೆ ಮರಣದಂಡನೆಯಂತ ಶಿಕ್ಷೆ ಆಗಲೇಬೇಕು. ಮತ್ತು ಮಾಧ್ಯಮ ಪ್ರತಿನಿಧಿಗಳಿಗೆ ಆರ್ಥಿಕ ,ಸಾಮಾಜಿಕ ಮತ್ತು ರಕ್ಷಣಾತ್ಮಕ ಭದ್ರತೆಯೊಂದಿಗೆ ನಿವೃತ್ತಿಯ ನಂತರವೂ ಸರಕಾರದಲ್ಲಿ ಈ ಭದ್ರತೆಗಳನ್ನು ಒದಗಿಸುವಂತಾಗಬೇಕು. ಹಾಗಾದರೆ ಮಾತ್ರ ಸಂವಿಧಾನದ ಈ ಅಂಗವನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಪ್ರತಿಯೊಬ್ಬ ಪ್ರಜೆಯು ಪಾಲುದಾರನಂತಾಗುತ್ತಾನೆ.

ಕವನ

ಹೂವು ಅರಳಿದಾಗ

ಆತ್ಮೀಯ ಕಂಗಳು ಮಿನುಗುತಲಿರಲು
ಝೇಂಕಾರದ ನಾದ ಸವಿ ನೀಡುತಲಿರಲು
ಪ್ರೀತಿಯ ಭಾವನೆಗಳು ಪುಟಿಯುತಲಿರಲು
ಅಮ್ಮ... ಎಂಬ ಸ್ವರ ಕೇಳಿ ಬರುತಿರಲು
ಸಾರ್ಥಕತೆಯ ಭಾವ ಮನ ತುಂಬಿರಲು
ಆ ಮಾತೆಗೆ ಹೇಳುತಿರುವಳು ಸಾವಿರ ಪ್ರಣಾಮ....
ಅನುಭವಿಸಿದ ನೋವಿನ ಕ್ಷಣಗಳು ಮರೆತಿರಲು
ತನ್ನ ಪ್ರತಿಬಿಂಬ ಆ ಮೊಗದಿ ಕಾಣುತಲಿರಲು
ಅಸಂಭವ ನಗು ಮನಕೆ ಕುತೂಹಲ ತರಲು
ಮನದ ಆಸೆಗಳು ಗಗನಕೇರುತಲಿರಲು
ಪರಿಚಯಿಸಿರುವಳು ವಿಶ್ವಕೆ ಮುಗ್ಧ ಕುಡಿಯನು....
ಬಾಳಿನ ಮೊದಲ ಹೂವು ಅರಳಲು
ಬಾಡದಿರಲೆಂದು ಸದಾ ಮನದಿ ನೆನೆಯಲು
ತನ್ನ ಹೃದಯದ ಸದ್ದು ಆ ದೇಹದಿ ಕೇಳುತಿರಲು
ಮನ ತಣಿಸುವಂಥ ಭಾವನೆ ಹೊರ ಹೊಮ್ಮಲು
ದೇವರ ಉಡುಗೊರೆ, ಪ್ರೀತಿಯ
ಶುಭಾಶಯದೊಂದಿಗೆ...

-ಯಾಲದಾಳು ಜಯಲಕ್ಷ್ಮಿ ಗಿರಿಯಪ್ಪ
ಕಡಿಯತ್ತೂರು.

ಮಕ್ಕಳೇ ಮನೆಗೆ ಮಾಣಿಕ್ಯ



-ಆಜಡ್ಕ ರಾಣಿ ಬಾಲಕೃಷ್ಣ,
ಕುಶಾಲನಗರ.

ಹುಟ್ಟು ಸಾವುಗಳ ನಡುವೆ ಇರುವ ಅಂತರವೇ ಜೀವನವೆಂದು ಹೇಳಬಹುದು. ವಂಶದ ಕುಡಿ ಭೂಮಿಗೆ ಇಳಿಯುವ ಪುಟ್ಟ ಜೀವಿ ಕಂದಮ್ಮ, ಏನು ಅರಿಯದ ಆ ಕಂದಮ್ಮನನ್ನು ಒಂಭತ್ತು ತಿಂಗಳು ಹೊತ್ತು ಸಂಕಷ್ಟದಲ್ಲಿ ಹೆಣ್ಣು ಗರ್ಭಿಣಿಯಾಗುತ್ತಾಳೆ. ಆ ಕಂದನ ಮುಖವನ್ನು ನೋಡಿ ಕಷ್ಟಕಾರ್ಪಣ್ಯಗಳನ್ನು ಮರೆತು ಲೊಚ, ಲೊಚ ಎಂದು ಮುತ್ತಿಟ್ಟು ತನ್ನ ಎದೆ ಹಾಲನ್ನು ಉಣಿಸುವಳು. ಆ ಕಂದನಿಗೆ ಏನು ಅರಿಯದು. ಪ್ರಕೃತಿಯ ನಿಯಮದಂತೆ ಕಾಲಚಕ್ರ ಉರುಳಿದಂತೆ ಮಾನವನ ಜೀವನ ಚಕ್ರವೂ ಉರುಳಿದಂತೆ ಮಗುವಿನ ಆರೈಕೆಯು ಕೂಡ, ಸಹಜವಾಗಿ ನಡೆಯುವುದು. ತನ್ನ ತಂದೆ ತಾಯಿಗಳಿಗೆ ತನ್ನ ಮಗುವಿನ ಆರೈಕೆಯಲ್ಲಿ ಮಗುವಿನ ತುಂಟಾಟ, ಕಿಲ ಕಿಲ ನಗು ಇವು ಅವುಗಳ ಮಾಧುರ್ಯವನ್ನು ಹೆಚ್ಚಿಸುತ್ತದೆ. ಕೆಲವು ದಿನ ಕಳೆದಂತೆ ಮನೆ ತುಂಬಾ ಪುಟ್ಟ ಪುಟ್ಟ ಹೆಜ್ಜೆ ಹಾಕಿಕೊಂಡು ಲಲ್ಲೆಗರೆಯುತ್ತಾ ಕಂದ ಬೆಳೆದಂತೆಲ್ಲಾ ಆ ಕಂದನ ಜ್ಞಾನಾರ್ಜನೆ ಹೆಚ್ಚುತ್ತೇ ಅಲ್ಲಿನ ವಾತಾವರಣಕ್ಕೆ ಅನುಗುಣವಾಗಿ ಮಗು ಬೆಳೆಯುತ್ತದೆ. 'ಮಕ್ಕಳೇ ಮನೆಗೆ ಮಾಣಿಕ್ಯ' ವಿದ್ದಂತೆ ಎಂದು ಹಿರಿಯರು ಹೇಳುತ್ತಾರೆ.

ಮಕ್ಕಳೇ ಇಲ್ಲದ ಮನೆ ಬಿಕೋ ಎನ್ನುತ್ತದೆ. ಮನಸ್ಸಿಗೆ ನೋವನ್ನುಂಟು ಮಾಡುತ್ತದೆ. ಮಕ್ಕಳು ಬೆಳೆದು ಬಾಲ್ಯಜೀವನವು ಮುಂದುವರೆದಂತೆಲ್ಲಾ ಅವರ ಜ್ಞಾನ ಶಕ್ತಿಯು ಕೂಡ ಹೆಚ್ಚಾಗಿ ಶಾಲೆಯ ವಾತಾವರಣ, ತಂದೆ ತಾಯಿಯ ಪ್ರೀತಿ ವಾತ್ಸಲ್ಯ ಹಾಗೂ ಗೆಳೆಯರ ಸ್ನೇಹ, ಇವೆಲ್ಲಾ ಹೊಂದಿಕೊಂಡು ಬಾಳ್ವೆಯನ್ನು ನಡೆಸಬೇಕಾಗುತ್ತದೆ. 12ವಯಸ್ಸಿನವರೆಗೆ ಮಕ್ಕಳಿಗೆ ಆಟ ಆಡಲು ಸ್ವಾತಂತ್ರ್ಯವಿದ್ದು, ಆಮೇಲೆ ಶಾಲೆಯ ಜವಾಬ್ದಾರಿ ಹೆಚ್ಚಿದಂತೆಲ್ಲಾ ಅವರ ಮನಸ್ಸು ಜ್ಞಾನಾರ್ಜನೆಯ ಕಡೆ ತಿರುಗುತ್ತದೆ. ದಿನ ಕಳೆದಂತೆಲ್ಲಾ ಮಕ್ಕಳ ಭವಿಷ್ಯವನ್ನು ರೂಪಿಸಿಕೊಳ್ಳಲು ಇಂದು ಸಾಕಷ್ಟು ಸೌಲಭ್ಯಗಳಿವೆ. ಕಂಪ್ಯೂಟರನ್ನು ಸರಕಾರ ಒದಗಿಸಿಕೊಡುತ್ತಿದೆ. ಅದರ ಪ್ರಯೋಜನವನ್ನು ಪಡಕೊಂಡಾಗ ಅವರ ಮುಖದಲ್ಲಿನ ಮಂದಹಾಸ, ಮತ್ತು ಉತ್ಸಾಹ ಹಾಗೂ ಉಲ್ಲಾಸ ಭರಿತವಾದ ಹುಮ್ಮಸ್ಸು ಆ ಮಕ್ಕಳಲ್ಲಿ ಕಾಣುತ್ತದೆ. ಮಕ್ಕಳ ಆರೋಗ್ಯಕ್ಕೆಂದು ಬಿಸಿಊಟ ವ್ಯವಸ್ಥೆ ಆಟಪಾಠಗಳು ಮತ್ತು ಯೋಗಾಸನ ಅಭ್ಯಾಸಗಳು, ನೃತ್ಯ ಇವುಗಳು ಆರೋಗ್ಯಕ್ಕೆ ಸಂಬಂಧಿಸಿದಂತಹ ಸೌಲಭ್ಯಗಳು. ಕೆಲವು ಪ್ರೇಕ್ಷಣಿ ಸ್ಥಳಗಳ ಭೇಟಿ ಮಕ್ಕಳಿಗೆ ಮನೋರಂಜನೆ ಹಾಗೂ ಸ್ಥಳ ಪರಿಚಯವಾಗುತ್ತದೆ. ಎಲ್ಲಾ ಮಕ್ಕಳಲ್ಲಿ ಐಕ್ಯತೆ ಭಾವನೆ ಮೂಡಲಿ ಎಂಬ ಕಾರಣದಿಂದ ಶಾಲೆಯಲ್ಲಿ ಸಮವಸ್ತ್ರ ಜಾರಿಗೊಳಿಸಿದೆ.

ಶಾಲೆಗೆ ಪೋಷಕರನ್ನು ಕರೆಯಿಸಿ ಅವರಿಗೆ ಸಲಹೆಯನ್ನು ನೀಡುವಂತಹ ವ್ಯವಸ್ಥೆ ಇದೆ. ಶಾಲೆಯಲ್ಲಿ ಮಕ್ಕಳನ್ನು ಸಮಾನ ರೀತಿಯಲ್ಲಿ ಕಂಡು ಅವರು ಆಟ ಪಾಠಗಳಲ್ಲಿ ಭಾಗಿಯಾಗುವಂತೆ ಪ್ರೋತ್ಸಾಹಿಸುತ್ತಾರೆ. ಚಿಕ್ಕಂದಿನಿಂದಲೇ ಮಕ್ಕಳಿಗೆ ಮನೆಯಲ್ಲಿ ಭವಿಷ್ಯವನ್ನು ರೂಪಿಸಿಕೊಳ್ಳಲು ಅನುಕೂಲವಾಗುವದು ಹಾಗೂ ದೇಶಭಕ್ತಿ ಮತ್ತು ತಮ್ಮ ಸಂಸ್ಕೃತಿಗಳು ಹಾಗೂ ರಾಷ್ಟ್ರ ಪ್ರೇಮ ಹೆಚ್ಚುವಂತೆ ತಿಳಿಹೇಳಬೇಕು. ಕೀಳರಿಮೆಯನ್ನು ಹೋಗಲಾಡಿಸಬೇಕು.

ಡಿವಿಜಿಯವರು 'ಬಾಳನ್ನು ಬೆಳಗಿಸುವ ಅಮೃತ ಸಂಜೀವಿನಿ ಪುಸ್ತಕ ಜೀವಿಗಳಿಗೆ ಆಹಾರವಿದ್ದಂತೆ. ಮನುಷ್ಯನ ಜ್ಞಾನದ ಆಹಾರ ಪುಸ್ತಕಗಳು ಎಂದಿದ್ದಾರೆ. ಮನುಷ್ಯನ ಜೀವನ ಒಳ್ಳೆಯ ಆಸ್ತಿ ಎಂದರೆ ಜ್ಞಾನ (ವಿದ್ಯೆ') ಸಾಧರಣವಾಗಿ ಎಷ್ಟು ಆಸ್ತಿ ಇದೆ ಎಂದಾಗ, ಅರಿತವರು 'ಮಕ್ಕಳೆ ನಮಗೆ ಆಸ್ತಿ' ಎನ್ನವರು ವಿದ್ಯೆಯನ್ನು ಯಾರು ಕೊಂಡುಳ್ಳಲು ಸಾಧ್ಯವಿಲ್ಲದ ಮಾತು. ಮಕ್ಕಳು ಇರುವ ಮನೆ ಪ್ರೀತಿವಾತ್ಸಲ್ಯದಿಂದ ಕೂಡಿರಬೇಕು. ಮಕ್ಕಳಿಗೆ ತಂದೆ ತಾಯಿಯರು ದಾರಿದೀಪವಾಗಿರಬೇಕು. ಮಕ್ಕಳು ವಿದ್ಯಾರ್ಜನೆ ಜ್ಯೋತಿಯಾಗಿ ಬೆಳಗಿ, ತಂದೆ ತಾಯಿಯರಿಗೆ ಪ್ರೀತಿಯ ಮಕ್ಕಳಾಗಿ, ದೇಶಕ್ಕೆ ಕೀರ್ತಿತರುವಂತಾಗಲಿ ಎಂದು ಆಶೀಸೋಣ.

ಅರೆಭಾಷೆ ಕವನ

ಶತಮಾನದ ಹೊಸ್ತಿಲ್‌ಲಿ

ಕಳ್‌ದ್ ಕಳ್‌ದ್ ಹೋಗಿ ದಿನಗ
ಮರಳಿ ಮರಳಿ ಬಂದ್ ವರ್ಷಗ
ಬಂದ್ ನಿತ್ತುಟು ನಮ್ಮ ಮುಂದೆ
ಖುಷಿಂದ, ನೂರ್ ವರ್ಷ ತುಂಬಿದ ಹಬ್ಬ

ಹಸ್‌ಗೂಸ್ ಬೆಳ್ದ್ ಬಾತ್
ಜನರ ಸಹಾಯನ ಪಡ್ದ್ ಬಾತ್
ಹಳೇ ಹಿರಿಯರ್‌ಗೆ ನಮ್‌ಸಿ ಬಾತ್
ಹೊಸ ಕಿರಿಯರ್‌ಗೆ ದಾರಿದೀಪ ಆತ್


ಬುದ್ಧಿ ಮಾತ್‌ಗಳ ಹೇಳಿ ಕೊಟ್ಟತ್
ಆಚಾರ ವಿಚಾರನ ಎತ್ತಿ ತೋರ್‌ಸಿತ್
ಕಷ್ಟಲಿದ್ದವ್ಕೆ ಕೈ ಜೋಡ್‌ಸಿತ್
ಆತ್ಮೀಯ ಭಾವದವ್ಕೆ ತಲೆಬಾಗಿತ್.

-ಕು. ಯಾಲದಾಳು ಜಯಲಕ್ಷ್ಮಿ, ಗಿರಿಯಪ್ಪ,

D/o ಗಿರಿಯಪ್ಪ ವೈ.ಜಿ.


ನಗರದ ನರಕ

ನಡಿಗೆ ಮರೆತವರು, ಬಿಟ್ಟವರು
ನಗು! ಏನದು? ಎಂದು
ಕೇಳುವವರು
ಮಹಾ ನಗರದವರಿವರು!
ಝಣ ಝಣ ಹಣ
ಗುಣ?
ಕೇಳುವವರಿಲ್ಲ, ಯಾರಿಗೂ
ಬೇಕಿಲ್ಲ
ಬೇಕಿಲ್ಲ ಯಾರಿಗೂ ಬಿ.ಪಿ. ಡಯಾಬಿಟಿಸ್
ಬಂದರೇನಂತೆ? ಉಂಟಲ್ಲ ಹಣ!
ಝಗಮಗಿಸುವ ದೀಪಗಳ ಸಾಲು
ಸಾಲು ಸಾಲು ವಾಹನಗಳು, ರೈಲುಗಳು
ಲೋಹದ ಹಕ್ಕಿಗಳು
ವೇಗ, ಅತಿ ವೇಗ- ಸಾಯುವ ತವಕ!
ಮಹಾ ನಗರದವರಿವರು!
ನಲ್ಲಿಗಳು ಬುಸುಗುಟ್ಟುತ್ತಿವೆ
ನೀರಿಲ್ಲವೆಂದು
ಚರಂಡಿಗಳು ನಾರುತ್ತಿವೆ ತನ್ನ ಕೆಲಸವೇ
ಅದೆಂದು
ಮಹಾನಗರದಲ್ಲಿ ಮಳೆ ಬಿದ್ದ ನೆಲದಲ್ಲಿ
ನನ್ನೂರ ಮಣ್ಣಿನ ವಾಸನೆಯಿಲ್ಲ
ಅಲ್ಲಿ ಹಸಿರಿಲ್ಲ
ಶುದ್ಧ ಉಸಿರಿಲ್ಲ
ಹುಡುಕುತ್ತಿದ್ದೇನೆ ಅದನ್ನೆಲ್ಲಾ....



-ಬಾರಿಯಂಡ ದೀಪಕ್ ಜೋಯಪ್ಪ, ಮದೆ.

ನಿಯೋಜಿತ ವಿವಾಹಗಳು V/S ಪ್ರೇಮ ವಿವಾಹಗಳು
(ARRANGED MARRIAGE V/S LOVE MARRIAGES)



(ಮಾಹಿತಿ ಆಧಾರಗಳಿಂದ)
ಕಾಯರ್‌ಮಾರ್ ಬಿ. ದೇವಿಪ್ರಸಾದ್,
ಹೊರೂರು ಸುಂಟಿಕೊಪ್ಪ.

ವಿವಾಹವೆಂಬುದು ಬದುಕಿನ ಒಂದು ಅವಿಭಾಜ್ಯ ಅನಿವಾರ್ಯ ಘಟನೆ. ಮೂಲತಃ ಸಂತಾನೋತ್ಪತ್ತಿಯ ದೃಷ್ಟಿಯಿಂದ ವಿವಾಹಗಳು ನೈಸರ್ಗಿಕ ಅವಶ್ಯಕತೆ ಎನಿಸಿದರೂ (Biological necessity) ಹಲವಾರು ಇತರೇ ಕಾರಣಗಳಿಂದಾಗಿ ಗಂಡು ಹೆಣ್ಣುಗಳು ಮದುವೆಯಾಗುತ್ತಾರೆ. ಮದುವೆಯೆಂಬುದು ಕೇವಲ ಲೈಂಗಿಕ ತೃಪ್ತಿಯನ್ನು ಪಡೆದುಕೊಳ್ಳಲು ಕೈಗೊಳ್ಳುವ ಪ್ರಕ್ರಿಯೆಯಲ್ಲ. ಗಂಡು ಹೆಣ್ಣು ಒಬ್ಬರನ್ನೊಬ್ಬರೊಡಗೂಡಿ ಬಾಳಿನ ಪರ್ಯಂತ ಅರ್ಧಾಂಗಿಗಳಾಗಿ ಜೀವನದ ಎಲ್ಲ ಹಂತಗಳಲ್ಲಿ ಸಮ ಮತ್ತು ಸಹಭಾಗಿಗಳಾಗಿ ಬಾಳುವ ಒಂದು ಪವಿತ್ರ ಕಲ್ಪನೆಯೇ ವಿವಾಹ. ಬಾಳಲ್ಲಿ ಸರಿಯಾದ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳದಿದ್ದರೆ ಜೀವನವೇ ಕೆಟ್ಟು ಹೋಗಬಹುದು. ಇಲ್ಲವೇ ಜೀವನ ಪರ್ಯಂತ ಕೊರಗಿ ಬಾಳುವ ಪ್ರಸಂಗ ಬರಬಹುದು. ಆದುದರಿಂದಲೇ ಬಲ್ಲವರು ಹೇಳಿದರು. "Marriages are hurriedly done, but slowly repented acts" ವೈವಾಹಿಕ ಜೀವನ ಕಹಿಯಾದಾಗ " Marriage is not a word it is a sentence a life sentence" ಎಂಬುದಾಗಿ ತಿಳಿದವರೂ ಇದ್ದಾರೆ. ಇದನ್ನೇ ಹಾಸ್ಯವಾಗಿ 'ಕರಿಮಣಿ ಕದ್ದು ಕಳ್ಳ ಸಿಕ್ಕಿ ಬಿದ್ದ' ಎಂಬ ವಾರ್ತಾ ಪತ್ರಿಕೆಯ ಸುದ್ದಿಯನ್ನು ಓದಿದ ಗಂಡ ತನಗೆ ತಾನೇ ಅಂದುಕೊಂಡನಂತೆ 'ಕರಿ ಮಣಿ ಕದ್ದು ಕಳ್ಳ ಸಿಕ್ಕಿ ಬಿದ್ದ, ಕರಿಮಣಿ ಕಟ್ಟಿ ನಾನು ಸಿಕ್ಕಿ ಬಿದ್ದೆ!

ಈ ಹಿನ್ನೆಲೆಯಲ್ಲಿ ನಮ್ಮ ಜೀವನ ಸಂಗಾತಿಯನ್ನು ಆಯ್ಕೆ ಮಾಡುವುದು ಜೀವನದ ಅತ್ಯಂತ ಮಹತ್ವದ ವಿಷಯ. ಹಿಂದಿನ ಕಾಲದಲ್ಲಿ ನಮ್ಮ ಹಿರಿಯರು ಈ ಜವಾಬ್ದಾರಿಯನ್ನು ಹೊರುತ್ತಿದ್ದರು. ವಯಸ್ಸಿಗೆ ಬಂದ ಮಕ್ಕಳನ್ನು ಕೇಳದೆಯೇ ಹಿರಿಯರು ತಮ್ಮ ಮಕ್ಕಳಿಗೆ ಅವರ ಬಾಳ ಸಂಗಾತಿಗಳನ್ನು ಆಯ್ಕೆ ಮಾಡಿ ಬಿಡುತ್ತಿದ್ದರು. ಆ ಕಾಲದಲ್ಲಿ ಗಂಡು ಹೆಣ್ಣುಗಳನ್ನು ಕೇಳಿ ಮದುವೆಯನ್ನು ನಿರ್ಧರಿಸುವ ರೂಢಿ ಇರಲಿಲ್ಲ. ಹಿರಿಯರ ಮಾತಿಗೆ, ನಿರ್ಧಾರಗಳಿಗೆ ಕಿರಿಯರು ತಲೆಬಾಗಿ ಅವರು ನಿರ್ಧರಿಸಿದ ಕನ್ಯೆ/ವರನನ್ನು ಮದುವೆಯಾಗ ಬೇಕಿತ್ತು. ಆದರೆ, ಕಾಲ, ಶಿಕ್ಷಣ, ವಿಚಾರವಂತಿಕೆಗಳು ಮುಂದುವರಿದಂತೆ ಈ ಪದ್ಧತಿ ಬಹಳ ಕಾಲ ಮುಂದುವರಿಯಲಿಲ್ಲ. ಕಾರಣ ಮದುವೆಯಾಗುವ ಹೆಣ್ಣು , ಗಂಡುಗಳ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಅವರ ಅಭಿಪ್ರಾಯಗಳಿಗೆ, ಅಭಿಲಾಷೆಗಳಿಗೆ ಮನ್ನಣೆ ಕೊಡದ ಒಂದು ರೀತಿಯ ಅನಾಗರಿಕ, ಅಧಿಕಾರಿಶಾಹಿ ಸಂಪ್ರದಾಯ ಇದಾಗಿತ್ತು.

ಮುಂದುವರಿದಂತೆ ತಮ್ಮ ಮದುವೆಯ ವಿಚಾರದಲ್ಲಿ ಹೆಣ್ಣು ಗಂಡುಗಳು ಕೂಡ ತಮ್ಮ ಅಭಿಪ್ರಾಯ, ಅನಿಸಿಕೆಗಳನ್ನು ತಿಳಿಸುವ ಸ್ವಾತಂತ್ರಕ್ಕೆ ಹೆಚ್ಚಿನ ಒತ್ತು ಕೊಟ್ಟ, ಪರಿಣಾಮವಾಗಿ ಹೆತ್ತವರು ಮಕ್ಕಳನ್ನೂ ಒಂದು ಮಾತು ಕೇಳುವ ಪರಿಪಾಠವನ್ನು ಆರಂಭಿಸಿದರು. ಕ್ರಮೇಣ ಕಾಲ ಬದಲಾದಂತೆ ಸ್ವಾತಂತ್ರ್ಯದ , ಆಧುನೀಕರಣದ ಪ್ರವಾಹಕ್ಕೆ ಸಿಕ್ಕಿದ ಯುವಕ, ಯುವತಿಯರು ತಮ್ಮ ಬಾಳ ಸಂಗಾತಿಗಳನ್ನು ತಾವೇ ಆಯ್ಕೆ

ಮಾಡಿಕೊಳ್ಳಲಾರಂಭಿಸಿದರು. ಪರಿಣಾಮವಾಗಿ ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮುಖ್ಯವಾಗಿ ವಿವಾಹಗಳು ಎರಡು ರೀತಿಯಲ್ಲಿ ರೂಪುಗೊಳ್ಳುತ್ತಿವೆ.

1. ನಿಯೋಜಿತ ವಿವಾಹಗಳು (Arranged Marriages)

2. ಪ್ರೇಮ ವಿವಾಹಗಳು (Love Marriages)

ನಿಯೋಜಿತ ವಿವಾಹಗಳಲ್ಲಿ ಮದುವೆಯಾಗಲಿರುವ ಗಂಡು ಹೆಣ್ಣುಗಳ ಅಭಿಪ್ರಾಯವೂ ಸೇರಿದಂತೆ ತಂದೆ, ತಾಯಿಗಳು ಹಾಗೂ ಕುಟುಂಬದ ಹಿರಿಯರು, ಹಿತೈಷಿಗಳು ಬಲು ದೊಡ್ಡ ಪಾತ್ರವನ್ನು ವಹಿಸುತ್ತಾರೆ. ಪ್ರೇಮ ವಿವಾಹಗಳಲ್ಲಿ ಇಬ್ಬರೂ ಪ್ರೇಮಿಗಳು ಕೈಗೊಂಡಿರುವ ನಿರ್ಧಾರದಲ್ಲಿ ಇತರರಿಗೆ ಹಸ್ತಕ್ಷೇಪದ ಅಧಿಕಾರವೂ ಇಲ್ಲ, ಅವಕಾಶವೂ ಇಲ್ಲ. ಈಗ ಎರಡೂ ಪದ್ಧತಿಯ ವಿವಾಹಗಳ ಸಾಧಕ-ಬಾಧಕಗಳ ಬಗ್ಗೆ ವಿಮರ್ಶಿಸೋಣ.

ನಿಯೋಜಿತ ವಿವಾಹಗಳು:

ಸಾಧಕಗಳು: ಇಂತಹ ವಿವಾಹಗಳು ಗಂಡು ಹೆಣ್ಣಿನ ಮಧ್ಯೆ ಮಾತ್ರವಲ್ಲದೆ ಎರಡು ಕುಟುಂಬಗಳ ನಡುವಿನ ವಿವಾಹವೆನಿಸುತ್ತದೆ. ಇಂತಹ ವಿವಾಹದಲ್ಲಿ ಕೈಗೊಂಡ ನಿರ್ಧಾರಗಳಿಗೆ ಹೆತ್ತವರ ಹಾಗೂ ಹತ್ತಿರದ ಹಿರಿಯ ಸಂಬಂಧಿಕರ ಒಪ್ಪಿಗೆ ಇರುವುದರಿಂದ ಇದು ಒಂದು ಸಾಮೂಹಿಕ ಒಪ್ಪಿಗೆಯನ್ನು ಪಡೆದ (Collective opinion) ವಿವಾಹವೆನಿಸಿ ಎಲ್ಲರ ಸಂತೋಷಕ್ಕೂ, ಜವಾಬ್ದಾರಿಗೂ ಒಳಗಾಗಿರುತ್ತದೆ. ಇಂತಹ ವಿವಾಹ ಪದ್ಧತಿಯಿಂದ ಮುಂದೆ ತಲೆದೋರಬಹುದಾದ ಎಲ್ಲಾ ಸುಖ ದುಃಖಗಳಿಗೂ, ಕಷ್ಟ-ನಷ್ಟಗಳಿಗೂ, ನೋವು-ನಲಿವುಗಳಿಗೂ ಹುಡುಗ ಮತ್ತು ಹುಡುಗಿ ಮಾತ್ರವಲ್ಲದೆ, ಅವರವರ ಕಡೆಯ ಎರಡು ಕುಟುಂಬದವರೂ ನೈತಿಕವಾಗಿ ಹೊಣೆಗಾರರಾಗುತ್ತಾರೆ. ಹಿರಿಯರ ರಕ್ಷೆ ಮತ್ತು ಪ್ರೀತಿ ಪ್ರಾಪ್ತವಾಗುತ್ತದೆ. ಮುಂದೆ ಬರಬಹುದಾದ ಏನೇ ಅನಾಹುತ, ಅವಘಡಗಳನ್ನು ಎದುರಿಸಲು ಇಡೀ ಕುಟುಂಬವೇ ನೆರವಾಗುತ್ತದೆ. ಹೆತ್ತವರು ಮತ್ತು ಬಂಧು-ಬಳಗದವರು ಯಾವತ್ತೂ ಮದುವೆಯಾಗಲಿರುವ ಮಕ್ಕಳ ಯಶಸ್ಸನ್ನು ಹಾಗೂ ಸುಭದ್ರ, ಆನಂದಮಯ ವೈವಾಹಿಕ ಜೀವನವನ್ನು ಆಶಿಸುವುದರಿಂದ ಅವರ ಆಯ್ಕೆಗಳು ಬಹುತೇಕ ತಪ್ಪಿ ಹೋಗುವುದಿಲ್ಲ. ಬಹಳ ಮಟ್ಟಿಗೆ ಅವು ಸಮಂಜಸ ಹಾಗೂ ಸಮರ್ಪಕವಾಗಿರುತ್ತದೆ. ಎಲ್ಲದಕ್ಕೂ ಮಿಗಿಲಾಗಿ ಪ್ರಬುದ್ಧರಲ್ಲದ ಕಿರಿಯರು ಮಾಡಬಹುದಾದ ಅವಸರದ ತಪ್ಪುಗಳಿಂದ, ನಿಯೋಜಿತ ವಿವಾಹ ಪದ್ಧತಿಯು ರಕ್ಷಣೆಯನ್ನೂ ಸೂಕ್ತ ಮಾರ್ಗದರ್ಶನವನ್ನೂ ನೀಡುತ್ತದೆ. ಆದುದರಿಂದಲೇ ನಮ್ಮ ದೇಶದಲ್ಲಿ ನಿಯೋಜಿತ ವಿವಾಹ ಪದ್ಧತಿಗಳು ಸರ್ವೇ ಸಾಮಾನ್ಯವಾದ ಜನಪ್ರಿಯವಾದ ಪದ್ಧತಿಯೆನಿಸಿದೆ. ಇಂತಹ ಪದ್ಧತಿಯಲ್ಲಿ ವಿವಾಹ ವಿಚ್ಛೇದನದ ಪ್ರಕರಣಗಳು ಬಹಳ ಕಡಿಮೆ.

ಬಾಧಕಗಳು: ಮದುವೆಯಾಗಲಿರುವ ಗಂಡು ಹೆಣ್ಣುಗಳಲ್ಲಿ ಒಂದಿಷ್ಟು ಒತ್ತಡವನ್ನು ಹೇರುವ ಸಂಭವಗಳು ನಿಯೋಜಿತ ವಿವಾಹ ಪದ್ಧತಿಯ ಕುಂದು ಕೊರತೆಗಳು. ವರದಕ್ಷಿಣೆಯ ರೂಪದಲ್ಲಿ ಅಥವಾ ಇನ್ನಿತರ ಲಾಭ ಮತ್ತು ಲೋಭಗಳ ದೃಷ್ಟಿಯಿಂದ ಹಿರಿಯರು ವಧೂ-ವರರನ್ನು ಆಯ್ಕೆ ಮಾಡಿದರೆ ಅದು ಒಂದು ಉತ್ತಮ ವಿವಾಹದ ಪವಿತ್ರತೆಯನ್ನು ಕಳೆದುಕೊಳ್ಳುತ್ತದೆ. ಮೇಲಾಗಿ ಗಂಡು ಹೆಣ್ಣಿಗೆ ತಮ್ಮ ಬಾಳ ಸಂಗಾತಿಯನ್ನು ಆರಿಸುವಲ್ಲಿ ಇರಬೇಕಾದ ಸ್ವಾತಂತ್ರ್ಯಕ್ಕೂ ಧಕ್ಕೆ ಬರುವ ಸಂಭವವಿದೆ. ಈ ಪದ್ಧತಿಯಲ್ಲಿ ಗಂಡು ಹೆಣ್ಣುಗಳ ಭೇಟಿಗೆ ಮತ್ತು ಮಾತುಕತೆಗಳಿಗೆ ಸಾಕಷ್ಟು ಅವಕಾಶವಿಲ್ಲದ ಕಾರಣ, ಅವರಿಬ್ಬರೂ ಒಬ್ಬರನ್ನೊಬ್ಬರು

ಅರಿತುಕೊಳ್ಳುವಲ್ಲಿ ವಿಫಲರಾಗುತ್ತಾರೆ. ಪರಿಣಾಮವಾಗಿ ಈ ಪದ್ಧತಿಯಲ್ಲಿ ಒಂದು ರೀತಿಯ ಅನಿಶ್ಚಿತತೆಯು ಅಡಗಿಕೊಂಡಿರುತ್ತದೆ.

ಪ್ರೇಮ ವಿವಾಹಗಳು

ಯುವಕ-ಯುವತಿಯರಲ್ಲಿ ಪ್ರೇಮ ಹುಟ್ಟಲು ಕಾರಣ ಬೇಕಿಲ್ಲ "ಅಂದು ಅವಳು ನನ್ನನ್ನು ನೋಡಿ ನಕ್ಕಳು, ಈಗ ನಮಗೆ ಎರಡು ಮಕ್ಕಳು. ಆದರೆ ಈಗ ಅವಳು ಕೈಗೆ ಸಿಕ್ಕಳು" ಎಂಬುದಾಗಿ ಹಾಸ್ಯರೂಪದಲ್ಲಿ ಒಬ್ಬ ಕವಿ ತನ್ನ ಪ್ರೇಮ ವಿವಾಹವನ್ನು ವಿವರಿಸಿದನಂತೆ.

ಸಾಧಕಗಳು: ಪ್ರೇಮ ವಿವಾಹ ಪದ್ಧತಿಯಲ್ಲಿ ಗಂಡು ಹೆಣ್ಣುಗಳಿಗೆ ತಮ್ಮ ಬಾಳ ಸಂಗಾತಿಯನ್ನು ತಾವೇ ಆರಿಸಿಕೊಳ್ಳುವ ಸಂಪೂರ್ಣವಾದ ಸ್ವಾತಂತ್ರ್ಯ ಲಭ್ಯವಾಗುತ್ತದೆ. ಮೇಲಾಗಿ ಒಬ್ಬರು ಇನ್ನೊಬ್ಬರನ್ನು ಬಹಳ ಕಾಲ ಬೆರೆತು, ಭೇಟಿ ಮಾಡಿ ಅರಿತುಕೊಳ್ಳುವ ಅವಕಾಶಗಳು ಹೆಚ್ಚಿರುತ್ತದೆ. ಅಂತೆಯೇ ತಮ್ಮ ಮುಂದಿನ ವೈವಾಹಿಕ ಜೀವನದ ಬಗ್ಗೆ ರೂಪು-ರೇಷೆಗಳನ್ನು ಹಾಕಿ ಕೊಳ್ಳಲು ಸೂಕ್ತ ಹಾಗೂ ಸಂಪೂರ್ಣ ಅವಕಾಶ ಲಭ್ಯವಾಗುತ್ತದೆ. ತಮ್ಮ ತಮ್ಮ ಅಭಿರುಚಿಗೆ ತಕ್ಕಂತೆ ಬಾಳ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಬಹುದಾದ ಈ ವಿವಾಹ ಪದ್ಧತಿಯಲ್ಲಿ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಪೂರ್ಣ ಮನ್ನಣೆ ಮತ್ತು ಸದಾವಕಾಶ ಲಭ್ಯವಾಗುತ್ತದೆ. ಇಂತಹ ಮದುವೆಗಳು ನೆರವೇರಿದಾಗ ಒಂದು ಜೀವ ಇನ್ನೊಂದು ಜೀವದ ಜೊತೆ ಸಂಪೂರ್ಣವಾಗಿ ಬೆರೆತು ಅನನ್ಯ ಪ್ರೇಮಿಗಳಾಗಿ ವೈವಾಹಿಕ ಜೀವನವನ್ನು ಆರಂಭಿಸಿ ಮುಂದುವರಿಯುತ್ತಾರೆ.

ಬಾಧಕಗಳು:

ಎಷ್ಟೋ ಬಾರಿ ಪ್ರೇಮ ವಿವಾಹಗಳು ಮುಂದುವರಿಯದೆ ಕುಸಿದು ಬಿದ್ದು ವಿವಾಹ ವಿಚ್ಛೇದನಗಳಲ್ಲಿ ಅಂತ್ಯಗೊಳ್ಳುವುದು ಸರ್ವೇ ಸಾಮಾನ್ಯವಾದ ವಿಷಯ. ಇದಕ್ಕೆ ಕಾರಣವಾದರೂ ಇಷ್ಟೆ: ಪ್ರೇಮದ ರೂಪದಲ್ಲಿ ಗಂಡು ಹೆಣ್ಣಿನ ಮಧ್ಯೆ ಆರಂಭವಾದ ಮೈತ್ರಿಯ ಹಿಂದೆ ಕಳ್ಳ ಕಾಮನ ಕೈವಾಡವು ಇರುತ್ತದೆ. ಗಂಡು ಹೆಣ್ಣುಗಳ ಮಧ್ಯೆ ಬರುವ ಆಕರ್ಷಣೆಯಲ್ಲಿ ಪ್ರೇಮದ (Love) ಜೊತೆ ಕಾಮವು (Lust) ಬೆರೆತು ಕೊಂಡಿರುತ್ತದೆ. 'Love at First Sight' ಎಂಬುದು ಪರಿಪಕ್ವ ಪ್ರೇಮದ ಸಂಕೇತವಲ್ಲ. ಇದು ಯೌವ್ವನದ ದಿನಗಳಲ್ಲಿ ಪ್ರೇಮದ ರೂಪದಲ್ಲಿ ಇರುವ ಒಂದು ಸೆಳೆತ. ಬಹುಪಾಲು ಇದು ದೈಹಿಕ ಆಕರ್ಷಣೆ. ಇದರಲ್ಲಿ ಕಾಮದ ವಾಸನೆ ಇದೆ. ಆದರೆ ನಿಜವಾದ ಪ್ರೀತಿ-ಪ್ರೇಮ ಬಹಳ ಸೂಕ್ಷ್ಮವಾದುದು-ನೀರಿಲ್ಲದಿದ್ದರೆ ಬಾಡುವ, ನೀರು ಹೆಚ್ಚಾದರೆ ಕೊಳೆಯುವ, ಕೊಳೆತು ನಾರುವ ಗಿಡಗಳ ಹಾಗೆ, ಆದುರಿಂದಲೇ ಹಿಂದಿನವರದು ಮೊದಲು ವಿವಾಹ, ಆ ಮೇಲೆ ಪ್ರೇಮ ಪ್ರವಾಹ, ಇಂದಿನವರದು ಮೊದಲು ಪ್ರೇಮ ಪ್ರವಾಹ, ಅಮೇಲೆ ಬೇರೆ ವಿವಾಹ! ಇದು Love 'is blind but Marriage is an eye- opener' ಎಂಬುದನ್ನು ಧೃಢೀಕರಿಸುತ್ತದೆ.

ಆರಂಭದಲ್ಲಿ ಪ್ರೇಮಿಗಳು ಒಬ್ಬರನ್ನೊಬ್ಬರನ್ನು ಮೆಚ್ಚಿಸುವ ದೃಷ್ಟಿಯಿಂದ ತಮ್ಮ ಒಳ್ಳೆಯ ಗುಣ ವಿಚಾರಗಳನ್ನಷ್ಟೇ ವ್ಯಕ್ತಪಡಿಸಿರುತ್ತಾರೆ. ಅವರವರ ನಿಜ ಸ್ವರೂಪ ಮತ್ತು ಬಣ್ಣಗಳು ಜೀವನವೆಂಬ ಬದುಲಿಗೆ ಬಿದ್ದಾಗ ಬಯಲಾಗುತ್ತದೆ. ಪರಿಣಾಮವಾಗಿ ಒಬ್ಬರು ಇನ್ನೊಬ್ಬರಿಂದ ಮೋಸ ಹೋಗಬಹುದು. Honeymoon is said to be over when husband calls his wife and tells that ' I will be late for dinner' and wife replies' food will be kept in the oven'.

ವಯಸ್ಸಿನಲ್ಲಿ ಕಿರಿಯವರಾದ ಕಾರಣ ಪ್ರೇಮಿಗಳಲ್ಲಿ ಸಹಜವಾಗಿ ವಿವೇಚನಾ ಶಕ್ತಿ ಕೊಂಚ ಕಡಿಮೆಯಾಗಿದ್ದು, ಸರಿಯಾದ ಬಾಳ ಸಂಗಾತಿಯನ್ನು ಆರಿಸುವಲ್ಲಿ ಇವರುಗಳು ತಪ್ಪು ಮಾಡುವುದು ಸರ್ವೇ ಸಾಮಾನ್ಯ. ಬಹಳಷ್ಟು ಸಲ ಹೆತ್ತವರ ಇಲ್ಲವೇ ಸಂಸಾರದಿಂದ ಹೆಚ್ಚಿನ ಪ್ರೀತಿ ಆಸರೆ, ರಕ್ಷಣೆ ಲಭ್ಯವಾಗದು. ಪರಿಣಾಮವಾಗಿ ತಾವೇ ಕೈಗೊಂಡ ನಿರ್ಧಾರಕ್ಕೆ ತಾವುಗಳೇ ಜವಾಬ್ದಾರರಾಗಿರುತ್ತಾರೆ. ಅಂತೆಯೇ ಸಂಸಾರದಿಂದ ದೂರ ಸರಿಯುವ ಪ್ರಮೇಯಗಳು ಹೆಚ್ಚಾಗುತ್ತದೆ.

ಒಟ್ಟಿನಲ್ಲಿ ಹೆತ್ತವರ ಮತ್ತು ಹಿರಿಯರ ಅನುಮತಿ ಹಾಗೂ ಅನುಮೋದನೆಯೊಂದಿಗೆ ನಡೆಯುವ ಪ್ರೇಮ ವಿವಾಹಗಳು ಎಂದೆಂದೂ ಸ್ವಾಗತಾರ್ಹ. ಪ್ರೀತಿ ಒತ್ತಾಯಕ್ಕೆ ಹುಟ್ಟಬಾರದು. ಹೂವನ್ನು ಒತ್ತಾಯದಿಂದ ಅರಳಿಸುವಂತಿಲ್ಲ.

' Love after Marriage is More important than Marriage after love' ಎಂಬುದನ್ನು ಮರೆಯಬಾರದು.

ವಿವಾಹವೆಂದರೆ ಒಂದು ಪವಿತ್ರ ಬಂಧನ ಎಂಬುದನ್ನು ತಿಳಿದು ಕೊಳ್ಳಬೇಕಾದುದು ಬಹಳ ಮುಖ್ಯ. ಸೂರ್ಯ ಚಂದ್ರನ ಸಾಕ್ಷಿಯಾಗಿ, ಅಗ್ನಿ ಸಾಕ್ಷಿಯಾಗಿ, ಹಿರಿಯರ ಅನುಮತಿ ಆಶೀರ್ವಾದಗಳೊಂದಿಗೆ, ಬಂಧು ಮಿತ್ರರ ಸಮ್ಮತಿ-ಸಮಕ್ಷಮದಲ್ಲಿ ಸಪ್ತಪದಿಯನ್ನು ತುಳಿಯುತ್ತಾ ವಧೂವರರು ಮಾಡಿಕೊಂಡ ಒಂದು ಪ್ರತಿಜ್ಞೆ. ಎಲ್ಲಾ ಕಾಲದಲ್ಲೂ ಜೊತೆ ಜೊತೆಯಾಗಿ ಇದ್ದು ಆಹಾರವನ್ನು, ಸಂಪತ್ತನ್ನು, ಸಮೃದ್ಧಿಯನ್ನು ಆರೋಗ್ಯವನ್ನು ಸಂಪಾದಿಸುತ್ತಾ ಸಂತಾನೋತ್ಪತ್ತಿಯನ್ನೂ ಮಾಡಿ, ಸ್ನೇಹಿತರಂತೆ ಸುಖ ಶಾಂತಿಯಿಂದ ಇರೋಣವೆಂದು ಮಾಡುವ ಪ್ರತಿಜ್ಞೆಯೇ ಈ ಸಪ್ತಪದಿಯ ಸಂದೇಶ. ಈ ಅರ್ಥವನ್ನು ಅರಿತು ಅದರಂತೆ ಬಾಳಿದರೆ, ನಿಯೋಜಿತ ವಿವಾಹವೇ ಇರಲಿ, ಪ್ರೇಮ ವಿವಾಹವೇ ಇರಲಿ.ಎಲ್ಲವೂ ಸುಖಮಯ.

ದೀಪ ಉರಿಯುವುದು ಸುಲಭ, ಉರಿಸಿದ ದೀಪವನ್ನು
ನಂದಿಸುವುದೂ ಸುಲಭ ಆದರೆ, ಅದು ಸದಾಕಾಲ
ಪ್ರಜ್ವಲಿಸುವಂತೆ ಕಾಯ್ದುಕೊಳ್ಳುವ ಕೆಲಸ ಮಾತ್ರ ಮಹತ್ತರ

ಸ್ವಾಮಿ ವಿವೇಕಾನಂದ.

ಕವನ

ಏನು ಮಾಡಲಿ ನಾನು?

ಸಾಗರದಷ್ಟು ವಿಶಾಲವಾದ ನಿನ್ನ ಕಂಗಳಲ್ಲಿ
ಮೀನಾಗಿ ಈಜಲೇ ನಾನು
ಕಡಲ ತೀರದಲ್ಲಿ ನೀಳವಾಗಿ ಬೆಳೆದು ಬಾಗಿದ
ತೆಂಗಿನಂತಿರುವ ಕಣ್ಣು ರೆಪ್ಪೆಗಳ ನೇವರಿಸಲೇ ನಾನು
ಎಣ್ಣೆ ಬಟ್ಟಲಲ್ಲಿ ಅದ್ದಿದ ನೇರಳೆ ಹಣ್ಣಿನಂತಿರುವ
ಕಣ್ಣು ಗುಡ್ಡೆಗಳ ನುಂಗಲೇ ನಾನು

ಸಮುದ್ರದಂತೆ ಗಂಭೀರವಾದ ನಿನ್ನ
ಮೌನದಲ್ಲೊಂದಾಗಲೇ ನಾನು
ಅಥವಾ
ತಲೆ ತಗ್ಗಿಸಿ ಒಲಿದ ಸವಿ ಮಾತಲ್ಲಿ
ಕರಗಿ ಹೋಗಲೇ ನಾನು

-ರಚನೆ: ಬೊಳ್ಳುಮಾನಿ ಗಾಯತ್ರಿ ಅಪ್ಪಯ್ಯ,
ಬಲ್ಲಮಾವಟಿ.

'ಜ್ಯೋತಿಷ್ಯ ಶಾಸ್ತ್ರ'ದ ವಿಶ್ಲೇಷಣೆ



-ಗುತ್ತಿ ಮುಂಡನ ಗಿರೀಶ್ ಕುಮಾರ್,
ಜೋತಿಷ್ಯ ನಾಟಿ ವೈದ್ಯರು,
ಮಡಿಕೇರಿ.ದೂ. 220234, ಮೊ.9448895983

ಪ್ರಪಂಚದ ನಿಗೂಢ ತತ್ವಗಳನ್ನು ತಿಳಿದುಕೊಳ್ಳಲು ಜ್ಯೋತಿಷ್ಯ ಒಂದು ದಿವ್ಯಕಣ್ಣಾಗಿದೆ. ಆದ್ದರಿಂದಲೇ ಇದನ್ನು ವೇದಾಂವೆಂದಾಂಗಗಳಲ್ಲಿ ಸೇರಿಸಿಕೊಳ್ಳಲಾಗಿದೆ. ವೇದಗಳ ಅಂಗಗಳಲ್ಲಿ ಇದು ಆರನೇ ಆಂಗವಾಗಿದೆ. ಜ್ಯೋತಿಷ್ಯ ಶಾಸ್ತ್ರವು ಅನಾದಿ ಕಾಲದಿಂದಲೇ ಸಮಾಜದ ಹಿತ, ಅಭಿವೃದ್ಧಿ , ಸಂಯಮ ನಿವೃತ್ತಿ ಮತ್ತು ಅಪ್ರತ್ಯಕ್ಷಗಳಾದ ದೈವಿಕ ಸಾನಿಧ್ಯ. ಈ ವಿಚಾರಗಳ ತಿಳುವಳಿಕೆಗಾಗಿ ಜಾತಕ, ಗೋಳ, ನಿಮಿತ್ತ, ಪ್ರಶ್ನೆ, ಮುಹೂರ್ತ, ಗಣಿತ ಎಂಬ ವಿಭಾಗಗಳ ರೂಪದಲ್ಲಿ ಕಾಲಕಾಲಕ್ಕೆ ಬೆಳೆಯುತ್ತಾ ಬಂದಿದೆ.

ಜ್ಯೋತಿಷ್ಯದ ತೇಜಸ್ಸನ್ನು ನೋಡಿಯೇ ಇದನ್ನು 'ಚಾಕ್ಷುಷ ಪ್ರತ್ಯಕ್ಷ' ಎಂದು ಕರೆಯಲಾಗಿದೆ. ಶ್ರೀಮದ್ ಶಂಕರಾಚಾರ್ಯರು ತಮ್ಮ ಗ್ರಂಥವಾದ 'ಸಿದ್ಧಾಂತ ಶಿರೋಮಣಿ'ಯಲ್ಲಿ 'ವೇದಚಕ್ಷು ಕಿಲೇಂದ ಸ್ಮತ್ ಜ್ಯೋತಿಷಮ್' ಎಂದು ಹೇಳಿದ್ದಾರೆ. (ನವಿಲಿನ ಶೋಭೆ ಅದರ ಗರಿಗಳಿಂದ ಮತ್ತು ಸರ್ಪದ ಶೋಭೆ ಅದರ ಮಣಿಯಿಂದ ಇರುವಂತೆ ,ವೇದದ ಶೋಭೆ ಜ್ಯೋತಿಷ್ಯದಿಂದ ಇದೆ.) ಭಾರತೀಯ ಜ್ಯೋತಿಷ್ಯ ವನ್ನು 'ತ್ರಿಸ್ಕಂದ' ಎಂದು ಕರೆಯಲಾಗಿದೆ.

ಜ್ಯೋತಿಷ್ಯ ಒಂದು ಉಪಯೋಗವಾದ ವಿಜ್ಞಾನ. ಜ್ಯೋತಿಷ್ಯದ ಮೂಲಕ ಮಾನವ ತನ್ನ ಭವಿಷ್ಯವನ್ನು ಅರಿತುಕೊಂಡು ಉನ್ನತಿಯ ಪಥದಲ್ಲಿ ನಡೆಯುವುದು ಸಾಧ್ಯವಾಗುತ್ತದೆ. ಜ್ಯೋತಿಷ್ಯವು ಮಾನವನ ಭೂತ, ಭವಿಷ್ಯ ಮತ್ತು ವರ್ತಮಾನದ ಸಂಪೂರ್ಣ ವಿವರಣೆಯನ್ನು ನೀಡುತ್ತದೆ. ಜ್ಯೋತಿಷ್ಯದ ಜನನ ಸಾವಿರಾರು ವರ್ಷಗಳ ಹಿಂದೆ ಭಾರತದಲ್ಲಿ ಆಯಿತು ಎಂದು ತಿಳಿದು ಬರುತ್ತದೆ. ಎರಡನೇ ಶತಮಾನದಲ್ಲಿ ಶ್ರೀ ವರಾಹ ವಿಹಿರಾಚಾರ್ಯರು 'ಬೃಹತ್ ಸಂಹಿತಾ' ಎಂಬ ಗ್ರಂಥವನ್ನು ರಚಿಸಿದರೆಂದು ತಿಳಿದುಬರುತ್ತದೆ. ಜ್ಯೋತಿಷ್ಯ ಶಾಸ್ತ್ರದ ಮೂಲಕ ಯಾವುದೇ ಮನುಷ್ಯನ ಜೀವನದಲ್ಲಿ ಬರುವ ಎಲ್ಲಾ ಪ್ರಕಾರದ ರಹಸ್ಯಗಳ ತಿಳುವಳಿಕೆ ಉಂಟಾಗುತ್ತದೆ. ಜ್ಯೋತಿಷ್ಯ ವಿದ್ಯೆಯನ್ನು ನುರಿತ ಗುರುವಿನಿಂದ ಪಡೆದರೆ ಅದಕ್ಕೊಂದು ವಿಶಿಷ್ಟವಾದ ಅನುಗ್ರಹ ಸಿಗುತ್ತದೆ.

ವಿಪ್ರಃ ಕುಲೀನಃ ಕೃತ ಸಂಸ್ಕ್ರಿಯೌಘಃ |ಸ್ವಧೀತ ವೇದಾಗಮ ತತ್ತ್ವವೇತ್ತಾ| ವರ್ಣಾಶ್ರಮಾಚಾರ ಪರೋಡಿ ದಿಕ್ಷಃ | ದಕ್ಷಸ್ತಪಸ್ವೀ ಗುರುರಾಸ್ತಿ ಕೋಸ್ತು| ಎಂಬಂತೆ ಒಳ್ಳೆಯ ಕುಲದಲ್ಲಿ ಜನಿಸಿದ ಷೋಡಶ ಸಂಸ್ಕಾರಗಳಿಂದ ಸಂಸ್ಕೃತನಾಥ, ವೇದ-ಆಗಮ- ತತ್ವ ಶಾಸ್ತ್ರಗಳ ಜ್ಞಾನವುಳ್ಳ ವರ್ಣಾಶ್ರಮ ಧರ್ಮಗಳನ್ನು ಪರಿಪಾಲಿಸುವ ದೀಕ್ಷಾ ಬದ್ಧನಾಡ, ಸಮರ್ಥನೂ-ತಪಸ್ವಿಯೂ-ಆಸ್ತಿಕನೂ ಆದವನು ಗುರುವಾಗಲಿ ಎಂದು ಜ್ಯೋತಿಷ್ಯ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ.

ಹಿಂದಿನ ಕಾಲದಲ್ಲಿ ಅನೇಕ ಋಷಿ ಮುನಿಗಳು ಜ್ಯೋತಿಷ್ಯ ಶಾಸ್ತ್ರದ ಉಪಾಸಕರಾಗಿದ್ದರು. ಬ್ರಹ್ಮ, ನಾರದ,

ವ್ಯಾಸ, ವಸಿಷ್ಠ, ಅತ್ರಿ, ಪರಾಶರ, ರೋಮಶ, ಯವನ, ಸೂರ್ಯ, ಬ್ಭುಗು, ಚ್ಯವನ, ಕಶ್ಯಪ, ಪುಲಸ್ತ್ಯ, ಮನು, ಆಚಾರ್ಯ, ಪೌಲಿಶ, ಶೌನಕ, ಅಂಗಿರಸ್ಸು, ಗರ್ಗ, ಮರೀಚಿ, ಈ 20 ಮಹರ್ಷಿಗಳು ಬ್ರಹ್ಮಾದಿ ಪರಂಪರೆಯಿಂದ ಜ್ಯೋತಿಶ್ಯಾಸ್ತ್ರ ಪ್ರವರ್ತಕರು.

ಬ್ರಹ್ಮದೇವರು ನಾರದರಿಗೂ ಚಂದ್ರನು ಶೌನಕರಿಗೂ, ವಸಿಷ್ಠರು ಮಾಂಡವ್ಯವಾಮ ದೇವರಿಗೂ ಪುರಾತನ ಜ್ಯೋತಿಶ್ಯಾಸ್ತ್ರವನ್ನು ಉಪದೇಶಿಸಿದರು. ಶ್ರೀಮನ್ನಾರಾಯಣನು ವಸಿಷ್ಠರಿಗೂ, ವ್ಯಾಸನು ರೋಮಶರಿಗೂ, ಸೂರ್ಯನು ಮಯಾಸುರರಿಗೂ, ಉಪದೇಶಿಸಿ ಈ ಜ್ಯೋತಿಷ್ಯ ಶಾಸ್ತ್ರವನ್ನು ಲೋಕಹಿತಾರ್ಥವಾಗಿ ಪ್ರಚಾರಗೊಳಿಸಿದರು. ಗುರುಶಾಪವು, ಸರ್ಪ ಶಾಪವು, ಸ್ತ್ರೀ ಶಾಪವು, ಪ್ರೇತಪೀಡೆಯ , ಬ್ರಹ್ಮಶಾಪವು, ದೇವಕೋಪವು, ಕೃತ್ರಿಮದೋಷವು, ವಾಗ್ದೋಷವು, ಜಾತಕದ ಗುಣಗಳನ್ನು ನಾಶಪಡಿಸಿ ಆಪತ್ತನ್ನುಂಟುಮಾಡುತ್ತದೆ. ಒಳ್ಳೆಯ ಮತ್ತು ಕೆಟ್ಟ ಫಲಗಳ ಪ್ರಾಪ್ತಿಗೆ ಕರ್ಮವೇ ದೈವವೆಂದು ಹೇಳಲ್ಪಟ್ಟಿದೆ. (ದೈವವೆಂದರೆ ಪೂರ್ವಜನ್ಮದಲ್ಲಿ ಮಾಡಿದ ಕರ್ಮ) ಆ ದೈವದ ಪ್ರೇರಣೆಯಿಂದ ಜೀವಾತ್ಮನು ತಾಯಿಯ ಗರ್ಭದಲ್ಲಿ ವಾಸಿಸುತ್ತಾನೆ. ಯಾವಾಗ ವ್ಯಕ್ತಿ ಜೀವನದಲ್ಲಿ ಅನುಭವಿಸಬೇಕಾದ ಸುಖದುಃಖಾದಿಗಳಿಗೆ ಅನುರೂಪವಾದ ಗ್ರಹ ಸ್ಥಿತಿಯಿದೆಯೋ, ಆ ಸಮಯದಲ್ಲೇ ಅವನು ಮಾತೃ ಗರ್ಭದಿಂದ ಭೂಮಿಯಲ್ಲಿ ಹುಟ್ಟುತ್ತಾನೆ.

ಭಾರತೀಯ ಜ್ಯೋತಿಷಿಗಳ ಅಭಿಪ್ರಾಯದಲ್ಲಿ ಮನುಷ್ಯ ಯಾವುದೇ ಗ್ರಹ, ನಕ್ಷತ್ರದ ತತ್ವ ಪ್ರಭಾವದಲ್ಲಿ ಹುಟ್ಟುತ್ತಾನೊ, ಅಥವಾ ಸಾಕಲ್ಪಟ್ಟು ದೊಡ್ಡವನಾಗುತ್ತಾನೋ, ಅವನಲ್ಲಿ ಅದೇ ತತ್ವದ ಪ್ರಧಾನತೆ ಇರುತ್ತದೆ.

ಗ್ರಹಗಳ ಪ್ರಭಾವ ಜಗತ್ತಿನ ಸಮಸ್ತ ವಸ್ತುಗಳ ಮೇಲೆ ಬೀಳುತ್ತಿದೆ. ಮತ್ತು ಯಾವ ಶಾಸ್ತ್ರ ಈ ಪ್ರಭಾವದ ವಿಶ್ಲೇಷಣೆ ಮಾಡುತ್ತದೋ ಅದರ ಹೆಸರೇ ಜ್ಯೋತಿಷ್ಯ ಶಾಶ್ತ್ರವಾಗಿದೆ. ಜ್ಯೋತಿಷ್ಯ ಗ್ರಹಗಳ ಶುಭಾಶುಭ ಪ್ರಭಾವಗಳ ಸೂಚನೆ ನೀಡುತ್ತದೆ.

ತಿಥಿ, ವಾರ, ನಕ್ಷತ್ರ, ಯೋಗ ಮತ್ತು ಕರಣ ಎಂಬ 5 ಅಂಗಗಳು ಸೇರಿದಾಗ ಪಂಚಾಂಗವೆಂಬ ಹೆಸರು ಬರುತ್ತದೆ. ಜ್ಯೋತಿಷ್ಯ ವಿಮರ್ಶೆಗೆ ಪಂಚಾಂಗವು ಅತೀ ಮುಖ್ಯ ಸಾಧನವಾಗಿದೆ. ಅಪ್ರತ್ಯಕ್ಷಾಣಿ ಶಾಸ್ತ್ರಾಣಿ ವಿವಾದಸ್ತೇಷು ಕೇವಲಂ| ಪ್ರತ್ಯಕ್ಷಂ ಜ್ಯೌತಿಷಂ ಶಾಸ್ತ್ರಂ ಚಂದ್ರಾರ್ಕೌ ಯತ್ರ ಸಾಕ್ಷಿಣೌ||ಎಂಬ ಸಿದ್ಧಾಂತ ತತ್ವವನ್ನಾಧರಿಸಿ ಪೂರ್ವಕಾಲದಲ್ಲಿ ಪಂಚಾಂಗ ತಯಾರಿಸುತ್ತಿದ್ದರು. ಯಾವುದೇ ಒಬ್ಬ ಮನುಷ್ಯ ತಾನು ಹುಟ್ಟಿದ ನಿಖರವಾದ ಸಮಯಕ್ಕನುಗುಣವಾಗಿ ಜಾತಕಾದಿಗಳನ್ನು ವಿಮರ್ಶೆ ಮಾಡಿಕೊಂಡು ಅದರಲ್ಲಿರುವ ದೋಷ, ಕಂಟಕಗಳಿಗೆ ಸೂಕ್ತ ರೀತಿಯ ಪರಿಹಾರ ಮಾಡಿಕೊಂಡು ಬಂದಲ್ಲಿ, ಅಂತಹ ವ್ಯಕ್ತಿಯ ಆಯುಷ್ಯದಲ್ಲಿ ಯಾವುದೇ ರೀತಿಯ ಅಪಾಯ ಸಂಭವಿಸಲಾರದು.

ಜಗತಿ ಪ್ರಸಾರಿತಮಿವ ಲಿಖಿತಮಿವ ಮತೌ ನಿಷಕ್ತಮಿವ ಹೃದಯೇ| ಶಾಸ್ತ್ರಂ ಯಸ್ಯ ಸಭಗಣಂ ನಾದೇಶಾ ನಿಷ್ಫಲಾಸ್ತಸ್ಯ. ಎಂಬಂತೆ ಜಗತ್ತಿನಲ್ಲಿ ಪಸರಿಸಿದಂತೆ, ಮನಸ್ಸಿನಲ್ಲಿ ಬರೆದಿಟ್ಟಂತೆ, ಹೃದಯದಲ್ಲಿ ಹಚ್ಚಿದಂತೆ, ಜ್ಯೋತಿಶ್ಯಾಸ್ತ್ರವು ಯಾರಲ್ಲಿದೆಯೋ ಅವನ ಆದೇಶಗಳು ಎಂದಿಗೂ ನಿಷ್ಫಲವಾಗುವುದಿಲ್ಲ.

ಲೋಕಾನುಗ್ರಹ ಹೇತ್ವರ್ಥಂ ಸ್ಥಿರೀಭವ ಸುಖಾಯ ನಃ|

ಸಾನ್ನಿಧ್ಯಂ ಚ ತಥಾ ದೇವ ಪ್ರತ್ಯಹಂ ಪರಿವರ್ಧಯ |

◆◆◆◆◆

ರಾಜಕೀಯದಲ್ಲಿ ಮಹಿಳೆ ಅಗತ್ಯವೆ? ಅನಗತ್ಯವೆ?



- ಕುದುಕುಳಿ ಮಿಲನ ಭರತ್,

ಭಾಗಮಂಡಲ

(ಡಾಬರ್ ವಾಟಿಕ ಅರ್ಪಿಸಿದ "ಮಿಸ್ ಈ ಟಿವಿ, ಕನ್ನಡ ವಾಹಿನಿ" ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ಮಂಡಿಸಲ್ಪಟ್ಟ ಪ್ರಬಂಧ)

ರಾಜಕೀಯದಲ್ಲಿ ಮಹಿಳೆ ಅಗತ್ಯವೆ? ಯಾ ಅನಗತ್ಯವೆ? ಎಂಬ ವಿಚಾರವನ್ನು ನಾನು ಎರಡು ರೀತಿಯಲ್ಲಿ ವಿಶ್ಲೇಷಿಸಬಯಸುತ್ತೇನೆ. 1) ರಾಜಕೀಯದಲ್ಲಿ ಸಮಾನತೆಯನ್ನು ಸಾಧಿಸಲು ಅಗತ್ಯತೆ 2) ಮಹಿಳೆಯ ಸ್ಥಿತಿಗತಿಗಳನ್ನು ಸುಧಾರಿಸಲೋಸುಗ ರಾಜಕೀಯದಲ್ಲಿ ಆಕೆಯ ಅಗತ್ಯತೆಯನ್ನು ಮನಗಾಣುವುದು.

ಈ ಶತಮಾನದ ಮಹಿಳೆ ಇಂದು ಎಲ್ಲಾ ಕ್ಷೇತ್ರದಲ್ಲೂ ತನ್ನ ಸಾಧನೆಯ ಛಾಪನ್ನು ಮೂಡಿಸಿರುವಂತೆ ರಾಜಕೀಯ ಕ್ಷೇತ್ರದಲ್ಲೂ ತನ್ನ ಸ್ಥಾನವನ್ನು ಬಲಪಡಿಸಿಕೊಳ್ಳುತ್ತಿದ್ದಾಳೆ. ಇತಿಹಾಸಕ್ಕೊಮ್ಮೆ ಕಣ್ಣು ಹಾಯಿಸಿ ನೋಡಿದರೆ, ಇಂದಿರಾ ಗಾಂಧಿ, ಅನಿಬೆಸೆಂಟ್, ವಿಜಯಕ್ಷ್ಮಿ ಪಂಡಿತ್, ಕಮಲಾದೇವಿ ಚಟ್ಟೋಪಾಧ್ಯಾಯ ಮುಂತಾದ ಮಹಿಳಾ ಮಣಿಗಳು ತಮ್ಮ ಮಿಂಚಿನ ಹೆಜ್ಜೆಗುರುತುಗಳನ್ನು ಕಾಲನ ಹಾದಿಯಲ್ಲಿ ಮೂಡಿಸಿ ಹೋಗಿದ್ದಾರೆ.

ಇಂದಿನ ಮಹಿಳಾಮಣಿಗಳಾದ ಸೋನಿಯಾಗಾಂಧಿ, ಸುಷ್ಮಾ ಸ್ವರಾಜ್, ಮಾಯಾವತಿ, ಉಮಾಭಾರತಿ, ಶೀಲಾದೀಕ್ಷಿತ್, ಜಯಲಲಿತ, ಮಮತಾ ಬ್ಯಾನರ್ಜಿ, ಮುಂತಾದವರು ತಮ್ಮದೇ ರೀತಿಯ ಪ್ರಭಾವ ಬೀರುತ್ತಿದ್ದಾರೆ. ಅಷ್ಟೇ ಏಕೆ, ರಾಜಕೀಯದಲ್ಲಿ ಮುನ್ನಡೆಯುತ್ತಿರುವ ಶೋಭ ಕರಂದ್ಲಾಜೆ, ಸುನಂದಾ ಜಯರಾಂ, ಶಕುಂತಲಾ ಶೆಟ್ಟಿ, ಸುಮಾವಸಂತ್ ಇವರೆಲ್ಲಾ ಮಹಿಳೆಯರು ಆಗಿದ್ದಾರೆ. 1994ರ ಚುನಾವಣೆಯಲ್ಲಿ ಮಹಿಳಾ ಮತವೆಂಬುದು ಪ್ರತ್ಯೇಕ ಅಸ್ಥಿತ್ವವಾಗಿ ಗೋಚರವಾಗಿತ್ತು. ಅದಕ್ಕಾಗಿ ಮತಗಟ್ಟೆಗಳ ಮುಂದೆ ಸಾಲು ಸಾಲು ಮಹಿಳೆಯರನ್ನೇ ತಂದು ನಿಲ್ಲಿಸಿತ್ತು. ಆದರೆ ಹಿಂದುಳಿದ ವರ್ಗಗಳ ರೀತಿಯಲ್ಲಾಗಲೀ ಅಲ್ಪಸಂಖ್ಯಾತರ ರೀತಿಯಲ್ಲಾಗಲೀ, ಈ ಮಹಿಳಾ ಮತಬ್ಯಾಂಕ್ ಎನ್ನುವುದು ಈವರೆಗೆ ಬೆಳೆದು ಬಂದಿಲ್ಲ ಎನ್ನುವುದು ಕಟುವಾಸ್ತವ.

ಇಂದು ಮಹಿಳೆಯೊಬ್ಬಳು ರಾಜಕೀಯ ಕ್ಷೇತ್ರದಲ್ಲಿ ಬೇರೂರಿ ಪ್ರಬಲವಾಗಿ ನಿಲ್ಲಬೇಕಾದರೆ ಇದು ಸುಲಭ ಸಾಧ್ಯದ ವಿಷಯವಲ್ಲ. ಏಕೆಂದರೆ ಯಾವ ಸ್ತ್ರೀಯೂ ಇಂದಿಗೆ ಸ್ವತಂತ್ರಳಲ್ಲ. ಆಕೆ ಪುರುಷನ ಅಂಕುಶದಿಂದ ನಿಯಂತ್ರಿಸಲ್ಪಡುವವಳು. ಯಾವುದೇ ಸ್ತ್ರೀ ಇಂದು ರಾಜಕೀಯ ಕ್ಷೇತ್ರದಲ್ಲಿ ಬಹುಕಾಲ ಬೇರೂರಿ ಬೆಳೆಯಬೇಕಾದರೆ ಅವಳಿಗೆ ಪುರುಷ ಶಕ್ತಿಯ ಬೆಂಬಲ ಬೇಕೇ ಬೇಕು. ಹೀಗಾದಾಗ ಅವಳು ಕೇವಲ ಸೂತ್ರದ ಬೊಂಬೆಯಾಗುತ್ತಾಳಷ್ಟೆ.

ಇತ್ತೀಚೆಗೆ ಹಲವಾರು ಸ್ತ್ರೀ ಮುಕ್ತಿ ಸಂಘಟನೆಗಳು ಮಹಿಳಾ ಪರ ಹೋರಾಟಗಳನ್ನು ನಡೆಸುತ್ತಾ ಬರುತ್ತಿದ್ದು, ತಮ್ಮ ಹೋರಾಟದ ಮೂಲ ಉದ್ದೇಶ, ಮಹಿಳೆಗೆ ಉನ್ನತ ಸ್ಥಾನಮಾನಗಳನ್ನು ದೊರಕಿಸಿ ಕೊಡುವುದೇ ಆಗಿದೆ ಎಂದು ತಿಳಿಸಿದ್ದಾರೆ. ಆದರೆ ಈ ಘೋಷಣೆ ಪಾಶ್ಚಿಮಾತ್ಯ ಸಂಸ್ಕೃತಿಗೆ ಸರಿಹೊಂದಬಹುದು. ಅಲ್ಲಿಯ ಸಭ್ಯತೆ ಸಂಸ್ಕೃತಿಗಿಂತ ಭಿನ್ನವಾಗಿರುವ ಭಾರತದಂತಹ ದೇಶದಲ್ಲಿ ಇದರಿಂದ ಮಹಿಳೆಯ ಉದ್ಧಾರ ಸಾಧ್ಯವೇ?

ಜಯಲಲಿತ, ಮಾಯಾವತಿ, ಉಮಾಭಾರತಿ ಮುಂತಾದವರು ತಮ್ಮದೇ ಆದ ರೀತಿಯಲ್ಲಿ ರಾಜಕೀಯದಲ್ಲಿ ಬೆಳೆಯುತ್ತಿದ್ದಾರೆ. ಶೀಲಾ ದೀಕ್ಷಿತ್ ತಮ್ಮ ವೈಧವ್ಯದಿಂದ ಕಂಗೆಟ್ಟವರಲ್ಲ, ಉಮಾಭಾರತಿ ಸನ್ಯಾಸಿನಿ. ಇನ್ನೂ ಆಳವಾಗಿ ನೋಡಿದರೆ 2004ನೇ ಸಾಲಿನ ಚುನಾವಣೆ ಮಹಿಳಾ ಪ್ರಾಬಲ್ಯ ವರ್ಷವೆಂದೇ ಬಿಂಬಿತವಾಗಿತ್ತು. ವಸುಂದರರಾಜೇ, ಮಾಯಾವತಿ, ಉಮಾಭಾರತಿಯವರ ಕೈಯಲ್ಲಿ ಅಧಿಕಾರದ ಸೂತ್ರ ಸಿಕ್ಕಿತ್ತು. ತಮ್ಮ ವಿರುದ್ಧ ಸ್ಪರ್ಧಿಸಿದ್ದ ಪುರುಷರ ರಾಜಕಾರಣಿಗಳ ವಿರುದ್ಧ ಜಯಭೇರಿಯನ್ನೇ ಬಾರಿಸಿದ್ದರು. ಮಹಿಳೆಗೆ ಕೇವಲ ಪುರುಷ ಮಾತ್ರ ಅಲ್ಲದೆ ಮಹಿಳೆಯರೂ ಹೋರಾಟ ನೀಡಿದ್ದರು ಎನ್ನುವುದನ್ನು ಸೋನಿಯಾಗಾಂಧಿ - ಸುಷ್ಮಾ ಸ್ವರಾಜ್ ಹಾಗೂ ಶಕುಂತಲಾ ಶೆಟ್ಟಿ - ಮಲ್ಲಿಕಾಪ್ರಸಾದ್‌ರಂತವರು ತೋರಿಸಿಕೊಟ್ಟಿದ್ದಾರೆ. ಆದರೆ ಈ ರೀತಿಯಾಗಿ ಉನ್ನತ ಸ್ಥಾನದಲ್ಲಿರುವ ಮಹಿಳೆಯರು ಸ್ತ್ರೀ ಶೋಷಣೆಯ ವಿರುದ್ಧ ಪ್ರಭಾವ ಬೀರುವ ಚಳುವಳಿಗಳನ್ನು ನಡೆಸಿದ್ದಾರೆಯೇ? ವರದಕ್ಷಿಣೆ, ಸತಿ ಹತ್ಯಾಕಾಂಡ ಮುಂತಾದ ಅನಿಷ್ಠ ಪದ್ಧತಿಗಳ ನಿವಾರಣೆಗಾಗಿ ತಮ್ಮ ಮನಃಪೂರ್ವಕ ಪ್ರಯತ್ನ ನಡೆಸಿದ್ದಾರೆಯೇ ಇಂದು ನಾಚಿಕೆಗೇಡಿನ ವಿಷಯವೇ ಆಗಿದೆ.

ಇನ್ನು ಮಹಿಳೆಗೆ ರಾಜಕೀಯದಲ್ಲಿ ಅಗತ್ಯತೆಯ ಸ್ಥಾನವನ್ನು ನೀಡಲೇಬೇಕು ಎಂದಾದರೆ ಇದಕ್ಕಾಗಿ ಸಮಾನತೆಯನ್ನು ಸಾಧಿಸುವಲ್ಲಿ ಆಕೆಗೆ ಮೀಸಲಾತಿಯನ್ನು ನೀಡುವ ಅಗತ್ಯವಿದೆ. ಆದರೆ ಈ ಮೀಸಲಾತಿಯನ್ನು ಪಡೆಯುವವರು ಯಾರು ಎನ್ನುವುದು ಪ್ರಶ್ನಾತೀತ. ಏಕೆಂದರೆ ಈ ಎಲ್ಲಾ ಸೌಲಭ್ಯಗಳು ಕೇವಲ ಪ್ರಭಾವಯುತ ಹಾಗೂ ಒಂದೇ ವರ್ಗದ ಜನರಿಗೆ ಮಾತ್ರ ಮೀಸಲಾಗಿ ಬಿಡುವ ಉದಾಹರಣೆಗಳೇ ಹೆಚ್ಚು. ಇದಕ್ಕೆ ನಿದರ್ಶನ ಬಿಹಾರದ ರಾಬ್ಡಿದೇವಿ ಸರ್ಕಾರ. ಇದು ಕ್ರಮೇಣ ಮಹಿಳೆಯರ ನಡುವೆ ವರ್ಗ ತಾರತಮ್ಯತೆಯ ಭೀತಿಯನ್ನು ತಂದಿಡಬಹುದು.

ರಾಜಕೀಯದಲ್ಲಿ ಮಹಿಳೆಯ ಅಗತ್ಯತೆ ಬೇಡವೇ ಬೇಡ ಎಂಬ ಕಟು ಧೋರಣೆ ಒಪ್ಪತಕ್ಕಂತಹ ವಿಷಯವಲ್ಲ. ಉದಾಹರಣೆಗೆ ಇಡೀ ರಾಜ್ಯದ ರಾಜಕೀಯವನ್ನೇ ನಡೆಸಿ ಆಳಿದ ಕಿತ್ತೂರು ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮೀಬಾಯಿ, ಛಾಂದ ಬೀಬೀ ಮುಂತಾದ ಅನೇಕ ಧೀರ ಮಹಿಳೆಯರು ಅಗತ್ಯತೆಯ ಪರಿಸ್ಥಿತಿಯಲ್ಲಿ ಖಡ್ಗ ಹಿಡಿದು ಯುದ್ಧಕ್ಕೆ ಹೊರಟ ಒಂದು ಮುಖವಾದರೆ, ಹೆತ್ತ ಮಕ್ಕಳನ್ನು ತನ್ನ ರಾಜ್ಯದ ರಕ್ಷಣೆಗಾಗಿ ಬ್ರಿಟಿಷರಿಗೆ ಒತ್ತೆಯಿಡಲು ಮುಂದಾದ ಮೈಸೂರಿನ ಹುಲಿ ಟಿಪ್ಪುವಿನ ಮಡದಿ, ಇನ್ನೊಂದೆಡೆ ಶತ್ರುಗಳಿಗೆ ತಲೆಬಾಗದೆ ಯುದ್ಧ ಮಾಡಿ ಕೊನೆಗೆ ಸಹಗಮನಕ್ಕೂ ಮುಂದಾದ ಪಂಜಾಬಿನ ವೀರ ಮಹಿಳೆ ರಾಣಿ ಪದ್ಮಿನಿ ಇತಿಹಾಸದಲ್ಲಿ ಇವರೆಲ್ಲರೂ ಅಮರರೇ. ಆಪತ್ತುಗಳು ಎದುರಾದಾಗ ರಾಜಕೀಯಕ್ಕೆ ಧುಮುಕುವ ಛಲಹೊಂದಿದ್ದ ಅಂದಿನ ಮಹಿಳೆಯರ ಧೈರ್ಯ ಸಾಹಸಗಳು ಇಂದಿನ ಮಹಿಳಾ ಕುಲಕ್ಕೆ ಸ್ಫೂರ್ತಿದಾಯಕವಾದುದು. ಮಹಿಳೆಯರ ಪಾತ್ರವಿಲ್ಲದೆ ಅಂದಿನ ರಾಜಕಾರಣ ಮುಂದುವರಿಯುವುದೂ ಕೂಡ ಕಷ್ಟವಿತ್ತು. ಇಂದಿಗೂ ಕೂಡ ಈ ಸ್ಥಿತಿ ಬದಲಾಗಿಲ್ಲ. ಆದರೆ ವ್ಯತ್ಯಾಸವಿಷ್ಟೆ. ಹೆಚ್ಚಿನ ಭಾಗ ಆಡಳಿತದ ಅಧಿಕಾರವೆಲ್ಲ ಪುರುಷ ಪ್ರಧಾನವಾಗಿರುತ್ತದೆ. ಮಹಿಳೆ ನೆಪಮಾತ್ರಕಷ್ಟೆ.

ಆದ್ದರಿಂದ ಮಹಿಳೆಯ ಉದ್ಧಾರದ ಕಾರ್ಯವನ್ನು ಮಹಿಳೆ ಕೇವಲ ರಾಜಕೀಯ ಸ್ಥಾನಮಾನಗಳಿಂದ ಸಾಧಿಸಬಲ್ಲಳು ಎನ್ನುವುದು ಒಪ್ಪತಕ್ಕಂತಹ ವಿಷಯವಲ್ಲ. ಯಾವನೇ ಒಬ್ಬ ಪ್ರಜ್ಞಾವಂತ ಪುರುಷ ರಾಜಕಾರಣಿ ಕೂಡ ಮಹಿಳೆಯ ಮೇಲಾಗುತ್ತಿರುವ ಶೋಷಣೆ ನಿವಾರಣೆಯತ್ತ, ಆಕೆಯ ಸ್ಥಿತಿ ಸುಧಾರಣೆಯತ್ತ ಕಾರ್ಯನಿರ್ವಹಿಸಬಹುದು. ಆದರೆ ಮಹಿಳೆಯು ಸಂಪೂರ್ಣವಾಗಿ ರಾಜಕೀಯದಿಂದ ದೂರ ಉಳಿಯಬೇಕು ಎನ್ನುವುದು ನನ್ನ ವಾದವಲ್ಲ. ಮಹಿಳೆಯರ ಉದ್ಧಾರದತ್ತ ಒಂದು ದಿಟ್ಟ ದನಿಯಾಗಲು, ಕಾರ್ಯದ ಮುಂಚೂಣಿ

ಪಾತ್ರ ವಹಿಸಲು ಆಕೆಯ ಅಗತ್ಯತೆ ಇದೆಯಾದರೂ ಅದಕ್ಕಿಂತ ಮುಖ್ಯವಾಗಿ ಗಮನಹರಿಸಬೇಕಾದ ಇನ್ನಷ್ಟು ವಿಷಯಗಳಿವೆ.

ಮಹಿಳೆಗೆ ಇಂದು ಬೇಕಾಗಿರುವುದು ಸಾಮಾಜಿಕ ಪರಿಹಾರ. ಅಂದರೆ, ತನ್ನ ಬದುಕನ್ನು ಕಟ್ಟುವ, ರೂಪಿಸುವ ಮತ್ತು ವಿಶ್ಲೇಷಿಸುವಂತಹ ಶಿಕ್ಷಣಕ್ರಮ ಹಾಗೂ ಪುರುಷ ಸಮಾಜ ಮಹಿಳೆಯ ಮೇಲೆ ಬಿತ್ತಿರುವ ಮೂಢನಂಬಿಕೆಗಳಿಂದ ಕೂಡಿದ ಯೋಚನಾ ಕ್ರಮದ ಬದಲಾವಣೆಯೇ ಹೊರತು, ಕೇವಲ ರಾಜಕೀಯದಲ್ಲೊಂದು ಅಗತ್ಯತೆಯ ಸ್ಥಾನ ಖಂಡಿತಾ ಅಲ್ಲ. ಕೊನೆಗೊಂದು ಮಾತು.

ಮಹಿಳಾ ಮೀಸಲಾತಿಯೆಂದು ರಾಜಕೀಯದ
ತೆರೆಮರೆಯಲ್ಲಿ ನಡೆಸುವ ಗುದ್ದಾಟ ಸಾಕಿನ್ನು,
ಮಹಿಳೆ!ಓ ಮಹಿಳೆ! ನೀನಿನ್ನು
ಅಸಮಾನತೆಯ ವಿರುದ್ಧ ಗೆದ್ದು ಬರಬೇಕು.
ತನ್ಮೂಲಕ ಭವ್ಯ ಭಾರತದ ಓಜಸ್ವಿ ನಾರಿಯಾಗಿ
ಕಂಗೊಳಿಸಬೇಕು.

ಕವನ

ಜೇನು ಹುಳು



ಜೇನು ಹುಳುವೆ ಜೇನು
ಹುಳುವೆ
ನೀನೆಷ್ಟು ಧನ್ಯ.

ಹೂರಾಶಿಯಲಿ ಕುಳಿತು
ಮಕರಂದವ ಹೀರಿ
ನೀ ಸುರಿಸುವ ಹನಿ ಎಷ್ಟೊಂದು ಮಧುರ


ನಿನ್ನೊಡನೆ ನಾ ಬರುವೆ
ನಿನ್ನ ಝೇಂಕಾರ ನಾದಕೆ
ನಲಿದು ನರ್ತಿಸುವೆ

ಮುಟ್ಟಿದವರ ನೀ ಕಚ್ಚಿ
ತೋರುವೆ ನಿನ್ನ ಸಿಟ್ಟನ್ನು
ಆದರೂ ಲೆಕ್ಕಿಸದೇ ಹೀರುವರು
ನಿನ್ನ ಮಧುರ ಹನಿಯನ್ನು
ನಿನ್ನನ್ನು ನನೆಯುವರು
ಪಾಯಸದ ಸವಿಯೂಟಕ್ಕೆ
ನಿನ್ನ ಜೇನ ಹನಿ ಎಷ್ಟೊಂದು ಮಧುರ!

ಎಷ್ಟು ಹೊಗಳಿದರೂ ಸಾಲದು
ನಿನ್ನ ಕೀರ್ತಿಯನ್ನು ನೆನೆದು
ದೇಶಾದ್ಯಂತ ಬೇಡಿಕೆಗಳೇ ಹೆಚ್ಚು
ನೀ ಸುರಿಸುವ ನಿನ್ನ ಮಧುರ ಹನಿಗೆ

-ಕೇಕಡ ಜೀವಿತ ರವೀಂದ್ರ,
ಕುಂದಚೇರಿ ಗ್ರಾಮ ಮತ್ತು ಅಂಚೆ.

ಜಾನಪದ ಸಾಹಿತ್ಯ



-ಬಿದ್ರುಪಣೆ ರಂಜಿತ್ ಪೊನ್ನಪ್ಪ,
ಕಟ್ಟೆಮಾಡು.

ನೃಪತುಂಗ ಕವಿ ಹೇಳಿದ ಮಾತು, ಚದುರರ್ ನಿಜದಿಂ ಕುರಿತೋದದೆಯುಂ, ಕಾವ್ಯ ಪ್ರಯೋಗ ಪರಿಣತ ಮತಿಗಳು, ಅಕ್ಷರಶಃ ಸತ್ಯ ಎನಿಸುತ್ತದೆ. ಏಕೆಂದರೆ ಹಿಂದಿನವರು ಅಕ್ಷರಗಳನ್ನೇ ಕಲಿಯದಿದ್ದರೂ ಬಾಯಿ ಮಾತಿನಲ್ಲಿಯೇ ಕಾವ್ಯಗಳನ್ನು ರಚಿಸುತ್ತಿದ್ದರು. ತಾವು ಕಂಡುಂಡ ಸತ್ಯವನ್ನು ಪದಗಳ ಮೂಲಕ ಬಯಲಿಗೆ ತರುತ್ತಿದ್ದರು. ಅವುಗಳೇ ಒಬ್ಬರ ಬಾಯಿಂದ ಒಬ್ಬರಿಗೆ ಎನ್ನುವಂತೆ ಹಬ್ಬಿ ಬಂದವು. ಈಗ ನಿಜವಾದ ಜೀವ ಅವಕ್ಕೆ ಬಂದಿದೆ. ಇಂತಹ ಕಾವ್ಯಗಳ ರಚನಾಕಾರರು ಇಂಥವರೇ ಎಂದು ಹೇಳುವದು ಕಷ್ಟ (ಗಾಳಿಗೆ ಗುದ್ದಿ ತ್ರಾಸಾಗುತ್ತದೆ.) ಅವರು ತಮ್ಮ ಜೀವನದಲ್ಲಿ ಕಂಡುಂಡ ಸತ್ಯವನ್ನು ಅನುಭವಿಸಿದ ಸಿಹಿ, ಕಹಿ, ನೋವು, ನಲಿವು, ಸುಖ-ದುಃಖಗಳನ್ನು ನಿತ್ಯ ಜೀವನದಲ್ಲಿ ಹಾಡುಗಳ ಮೂಲಕ ಬೆಳಕಿಗೆ ತಂದಿದ್ದಾರೆ.

ಹೆಂಗಳೆಯರು ಮತ್ತು ಗಂಡಸರು ನಿತ್ಯವೂ ತಾವು ಕಾರ್ಯದಲ್ಲಿ ತೊಡಗಿದಾಗ ದಣಿವು ಪರಿಹಾರಕ್ಕಾಗಿ ಗೊಣಗಿದ್ದು ಉಂಟು. ಕುಟ್ಟುವಾಗ, ಬೀಸುವಾಗ, ಮಕ್ಕಳನ್ನು ಸಂತೈಸುವಾಗ, ತೊಟ್ಟಿಲು ತೂಗುವಾಗ ಹಾಡಿ ನೋಪಾದಿಯಲ್ಲಿ ಸರಳ ಶೈಲಿಯಲ್ಲಿ ಏನಾದರೊಂದು ಗುಣಗುಣಿಸಿದ್ದಾರೆ. ಅದುವೇ ಇಂದು "ಜನಪದ ಸಾಹಿತ್ಯ"ದ ಹೆಸರಿನಲ್ಲಿ ಬದುಕಿ ಬಾಳುತ್ತಿದೆ. ಅದಕ್ಕೊಂದು ಹೊಸ ಜೀವ ಬಂದಿದೆ. " ಹೊಳೆ ದಂಡಿಲ್ಲಿರುವ ಕರಕಿಯ ಕುಡಿಹಂಗ" ಅದರ ಬಾಳಾಗಿದೆ. ಜನಪದದಲ್ಲಿ ಹೆಚ್ಚಾಗಿ ಹೆಣ್ಣಿನ ಬಾಳಿನ ಬಗ್ಗೆ ಅನೇಕ ಪದ್ಯಗಳಿವೆ. ಹೆಣ್ಣಾಗಿ ಅವಳು ಪ್ರೀತಿಯ ಮಡದಿಯಾಗಿ, ವಾತ್ಸಲ್ಯದ ತಾಯಿಯಾಗಿ, ಮುದ್ದಿನ ಮಗಳಾಗಿ, ಅಕ್ಕರೆಯ ಸೊಸೆಯಾಗಿ ಇನ್ನೂ ಮುಂತಾದ ಹತ್ತು ಹಲವಾರು ರೂಪಗಳಲ್ಲಿ ಕಾಣಿಸಿಕೊಂಡಿದ್ದಾಳೆ.

ಈ ಜೀವನ ಸ್ಥಿರವಲ್ಲ ಎಂಬುದನ್ನು ಕುರಿತು ಹಾಡಿದ ಹಾಡು:

" ಮರದ ಮೇಲಿನ ಪಕ್ಷಿ | ಭುರ್ರೆಂದು ಹಾರಿತ್ತ
ಸ್ಥಿರವಲ್ಲ, ಜೀವ ಅನಕೊಂಡೆ| ಈ ಮಾತು
ನನ್ನೊಳಗೆ ನಾನು ತಿಳಕೊಂಡೆ"

ಕದನವು ಒಳ್ಳೆಯದಲ್ಲ ಎಂಬುದನ್ನು ತೋರ್ಪಡಿಸುವ ಪದ:

"ಆಡಿನ ಮಲಿಹಾಂಗ| ಜೋಡಿ ನಾವಿಬ್ಬರೂ
ಆಡಬ್ಯಾಡ ತಂಗಿ ಕದನವ| ಕದನಕ
ಜೋಡಿನ ಹಕ್ಕಿ ಅಗಲ್ಯಾವ|"

ಅಳುವ ಕಂದನನ್ನು ಕಂಡು ಉದ್ಗಾರ ತೆಗೆದದ್ದು:

"ಅಳುವ ಕಂದನ ತುಟಿಯು| ಹವಳದ ಕುಡಿಹಂಗ
ಕುಡಿಹುಬ್ಬು ಬೇವಿನೆಸಳಂಗ| ಕಣ್ಣೋಟ

ಶಿವನ ಕೈಯೊಳಗು ಹೊಳದಾಂಗ|"

ಗಂಡನ ಮನೆಗೆ ಹೊರಟ ತನ್ನ ಮಗಳಿಗೆ ತಾಯಿ ಹೇಳುವ ಮಾತು:

"ಅತ್ತೆಯ ಮನೆಯಲ್ಲಿ |ತೊತ್ತಾಗಿ ಇರಬೇಕು

ಹೊತ್ತಾಗಿ ನೀಡಿದರೂ ಉಣಬೇಕು| ನನ ಮಗಳೆ

ತವರವರ ಕೀರ್ತಿ ತರಬೇಕು"

ದೇವರಲ್ಲಿ ಆಗಿನ ಹೆಣ್ಣು ಬೇಡಿಕೊಂಡದ್ದು:

ಕರುಣ ಬಂದರೆ ಕಾಯೊ| ಮರಣ ಬಂದರೆ ಒಯ್ಯೊ

ಕರುಣ ಕಲ್ಯಾಣಿ ಬಸವಣ್ಣ| ಕಾಸಿಲಿಂಗ

ಕಡೆತನಕ ಕಾಯೊ ಅಭಿಮಾನ"

ಹೀಗೆ ಜಾನಪದ ಸಾಹಿತ್ಯವು ತನ್ನ ಭದ್ರತೆಯನ್ನು ಸ್ಥಿರವಾಗಿ ಕಾಪಾಡಿಕೊಂಡು ಬಂದಿದೆ. ಉಳಿದೆಲ್ಲ ಸಾಹಿತ್ಯಕ್ಕೆ ತಾಯಿಯಾಗಿದೆ, ತಂದೆಯಾಗಿದೆ, ಗುರುವಾಗಿದೆ. ಹೀಗಾಗಿ ಇನ್ನೂ ಸಹ ಜಾನಪದ ಸಾಹಿತ್ಯವು ಜೀವಂತವಾಗಿದೆ. ದಿನದಿನಕ್ಕೂ ಅದರ ಘನತೆ ಏರುತ್ತಿದೆ. ದಾಸರ ಪದಗಳು, ಶರಣರ ವಚನಗಳು, ಜಾನಪದ ಗೀತೆಗಳು, ಸರಳ ಕನ್ನಡದಲ್ಲಿ ಮಿಗಿಲಾದ ಮಹತ್ವವನ್ನು ಪಡೆದಿದೆ. ಪಂಡಿತರಿರಲಿ, ಪಾಮರರಿರಲಿ ತಮ್ಮ ಜೀವನದಲ್ಲಿ ತಾವು ಅನುಭವಿಸಿದ ಸತ್ಯವನ್ನೇ ಗ್ರಾಮ್ಯ ಭಾಷೆಯಲ್ಲಿ ಅದಕ್ಕೆ ಸತ್ಯದ ರೂಪ ಕೊಟ್ಟು ಮಾರ್ಮಿಕವಾಗಿ ಹಾಡಿದ್ದಾರೆ. ಆದುದರಿಂದ ಜಾನಪದ ಸಾಹಿತ್ಯವು ಇಂದು ಅಧಿಕ ಪ್ರಚಾರದಲ್ಲಿದೆ. ಯುನಿವರ್ಸಿಟಿಯವರು ಕೂಡ ಎಂ.ಎ. ಕನ್ನಡ ಪರೀಕ್ಷೆಗಳಲ್ಲಿ ಜಾನಪದ ಸಾಹಿತ್ಯದ ವಿಷಯವನ್ನೂ ಸೇರಿಸಿದ್ದಾರೆ. ಆ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ, ಅದರ ಶೋಧನೆಯ ಸಂಗ್ರಹದ ಕಾರ್ಯದಲ್ಲಿ ತೊಡಗಿಸಬೇಕಾಗಿದೆ.


ಕವನ

ಮೂರು ಮಾತು

ದೇಶ, ಗೌರವ, ರಾಷ್ಟ್ರಧ್ವಜ
ಈ ಮೂರಕ್ಕೆ ಹೋರಾಡಿ
ಧರ್ಮ, ನ್ಯಾಯ, ವಿನಯ
ಈ ಮೂರಕ್ಕೆ ಗೌರವ ಕೊಡಿ
ಧೈರ್ಯ ವಾತ್ಸಲ್ಯ. ಶಿಷ್ಟಾಚಾರ
ಈ ಮೂರನ್ನು ಪ್ರೀತಿಸಿ
ಸಮಯ, ಶಕ್ತಿ, ಹಣ
ಈ ಮೂರನ್ನು ವ್ಯರ್ಥ ಮಾಡಬೇಡಿ
ವ್ಯಾಪಾರ , ಪ್ರಯಾಣ, ಮದುವೆ
ಈ ಮೂರಕ್ಕೆ ಅತುರ ಬೇಡ
ಆಸೆ, ಕೋಪ, ನಾಲಿಗೆ
ಈ ಮೂರನ್ನು ಹತೋಟಿಯಲ್ಲಿಡಿ
ಅನ್ಯಾಯ, ಅಹಂಕಾರ ಸ್ವಾಮಿದ್ರೋಹ- ಈ ಮೂರನ್ನು ಮಾಡಬೇಡಿ
ಕೆಲಸ, ನಂಬಿಕೆ, ಕರ್ತವ್ಯ
ಈ ಮೂರಕ್ಕೆ ದ್ರೋಹ ಎಸಗಬೇಡಿ
ಸಾವು, ಸೋಲು ದುಃಖ
ಈ ಮೂರಕ್ಕೆ ಸಿದ್ದವಾಗಿರಿ
ತಂದೆ, ತಾಯಿ, ದೇವರು
ಈ ಮೂರನ್ನು ಮರೆಯಬೇಡಿ.

-ಸಂಗ್ರಹ

ದೇವರು-ಭಕ್ತಿ



-ಬೈತಡ್ಕ ಎ. ಬೆಳ್ಯಪ್ಪ,
ಮಡಿಕೇರಿ.

ದೇವರು ಎಂಬುದು ವಿವಾದಾತ್ಮಕ ವಸ್ತು, ವಸ್ತು ಎನ್ನಬೇಕೊ, ಅವನು ಅವಳು ಎನ್ನಬೇಕೊ ಎನ್ನುವಲ್ಲಿಂದಲೇ ವಿವಾದ ಪ್ರಾರಂಭವಾಗುತ್ತದೆ. ನಮ್ಮ ವ್ಯವಹಾರಕ್ಕೆ 'ಅವನು' ಎನ್ನೋಣವಾದರೂ 'ಅವನು' ಇದ್ದಾನೆಯೇ? ನಿಷ್ಕೃಷ್ಟವಾದ ರೂಪ ಯಾವುದು? ಹೀಗೆ ಹಲವಾರು ಕಲ್ಪನೆಗಳಿಂದ ಮನುಷ್ಯ ಹಾಳಾಗಿರುವುದು ಎನ್ನುವ ಮಾನವರ ಪೈಕಿ ಶೇಕಡಾ 5 ಮಂದಿಗೂ ಹಾಗೂ ಉಳಿದ ಸಂಖ್ಯಾ ಬಲದಲ್ಲಿ ಬಲಿಷ್ಠರಾಗಿ ದೇವರು ಇದ್ದಾನೆ ಎನ್ನುವವರ ಕಲ್ಪನೆಗೆ ಸತ್ಯದ ಹಿನ್ನೆಲೆ ಇರಬೇಕಾದದು ಅವಶ್ಯ. ದೇವರ ಬಗ್ಗೆ ನಂಬಿಕೆ ಎಂದರೆ ವಿಶ್ವಾಸ, ಕುರುಡು ವಿಶ್ವಾಸ ಎಂದರೂ ಸರಿಯೇ. ಈ ವಿಶ್ವಾಸವು ಕುರುಡಾಗಿರುವುದರಿಂದಲೇ ದೇವರಿದ್ದಾನೆ ಎಂದು ನಂಬುವವರಲ್ಲಿ ಕೂಡ ದೇವರ ಕುರಿತು ಪರಸ್ಪರ ಭಿನ್ನಾಭಿಪ್ರಾಯಗಳಿರುವುದು. ಹಲವು ಕೋಟಿ ಜನಸಂಖ್ಯೆಯಲ್ಲಿರುವ ಹಿಂದುಗಳು ನಂಬಿರುವ ದೇವರುಗಳು ತುಂಬಾ ಸಂಖ್ಯೆಯಲ್ಲಿದ್ದಾರೆ. ಅವರಲ್ಲೆಲ್ಲ ಮುಖ್ಯನಾದವನು ಮಹಾವಿಷ್ಣು, ಕೆಲವೊಮ್ಮೆ ಭೂಮಿಗೆ ಅವತಾರವೆತ್ತಿ ಬರುತ್ತಾನೆ ಎನ್ನುವವರಿದ್ದಾರೆ. ಶಿವನೇ ಪ್ರಧಾನನು ಎನ್ನುವವರಿದ್ದಾರೆ. ಸ್ತ್ರೀ ಇಲ್ಲದೆ ಜಗತ್ತು ಉಂಟಾಗುವುದು ಹೇಗೆ? ಆದುದರಿಂದ ದೇವರುಗಳೆಲ್ಲಾ ಶ್ರೇಷ್ಠಳಾದವಳು ದೇವಿ, ಎನ್ನುವವರಿಗೂ ಕಮ್ಮಿ ಇಲ್ಲ. ದೇವರು ಇರುವನು ಎಂದು ನಂಬಿರುವವರ ಅಭಿಪ್ರಾಯದಲ್ಲಿ ದೇವರಿಗೆ ನಿರ್ಧಿಷ್ಟ ರೂಪ, ಬಣ್ಣ ಆಯುಧ ಹಾಗೂ ವಾಹನಗಳಿವೆ.

ಹಿಂದೂ ದಾರ್ಶನಿಕರು ಹಾಗೂ ಇತರರು ದೇವರ ಬಗ್ಗೆ ಬೇರೆ ಬೇರೆ ವಿಶ್ವಾಸಗಳನ್ನು ವ್ಯಕ್ತಪಡಿಸುತ್ತಾರೆ. ಇತರರ ಪ್ರಕಾರ ದೇವರು ಒಂದು ಮೂರ್ತಿಯಲ್ಲ ಅದೊಂದು ಅವ್ಯಕ್ತ ಶಕ್ತಿ. ಒಟ್ಟಿನಲ್ಲಿ ಹಿಂದೂ ಮತವು ದೇವರ ಕುರಿತು ತನ್ನ ಅನುಯಾಯಿಗಳಿಗೆ ಅತ್ಯಂತ ಉದಾರ ಪ್ರಮಾಣದಲ್ಲಿ ಸ್ವಾತಂತ್ರ್ಯ ಕೊಟ್ಟಿದೆ. ಹಿಂದೂಗಳ ದೇವರು, ಪ್ರಾಣಿ, ಪಕ್ಷಿ, ಉರಗ ಹಾಗೂ ಮನುಷ್ಯ ರೂಪದಲ್ಲಿ ಹುಟ್ಟಿದ್ದಾನೆ. ಇಲ್ಲಿ ದೇವರಲ್ಲಿ ನಂಬಿಕೆ ಎನ್ನುವುದು ಒಂದು ಪರಮಾಶ್ಚರ್ಯಕರವಾದ ವಿಚಾರ. ನಂಬುವ ವಿಚಾರದಲ್ಲಿ ಅವನ ರೂಪ, ಗುಣಗಳ ಕುರಿತಾಗಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಅವನು ನಮ್ಮನ್ನು ರಕ್ಷಿಸುತ್ತಾನೆ ಎನ್ನುವ ನಂಬಿಕೆಯ ಕುರಿತು ಬಿನ್ನಾಭಿಪ್ರಾಯ ಇಲ್ಲವೇ ಇಲ್ಲ. ರಕ್ಷಿಸುತ್ತಾನೆ ಎಂಬ ನಂಬಿಕೆಯಾದರೂ ಕಾಣಿಸದ ದೇವರಲ್ಲಿ ಇಟ್ಟ ನಂಬಿಕೆಯಂತೆ ಸಿದ್ಧಗೊಳಿಸಿದ ಕಲ್ಪನೆಗೆ ಸೇರಿದುದು. ಎಷ್ಟೋ ಭಾರಿ ಕಷ್ಟದಿಂದ ಪಾರಾದರೆ ದೇವರೇ ನಮ್ಮನ್ನು ರಕ್ಷಿಸಿದುದೆಂದು ದೃಢವಾಗಿ ನಂಬಿದಂತೆಯೂ, ಕಷ್ಟದಿಂದ ಪಾರಾಗದಿದ್ದರೆ ಅದು ನಮ್ಮ ಕರ್ಮ, ಪ್ರಾರಬ್ಧ ಅಷ್ಟು ಪ್ರಬಲವಾದದು, ದೇವರೇನು ಮಾಡಬಲ್ಲ? ಎಂದು ಅವನನ್ನು ಆಪಾದನೆಯಿಂದ ವಿಮುಕ್ತಿಗೊಳಿಸಿ ಅವನ ಮೇಲಿರುವ ವಿಶ್ವಾಸಕ್ಕೆ ಧಕ್ಕೆಯಾಗದಂತೆ ಎಚ್ಚರಿಕೆವಹಿಸಿಕೊಳ್ಳುತ್ತಾರೆ.

ಎಷ್ಟೇ ಚರ್ಚಿಸಿದರೂ ದೇವರಿದ್ದಾನೆಯೇ ಎಂಬ ಪ್ರಶ್ನೆ ಹಾಗೆಯೇ ಉಳಿಯುತ್ತದೆ. ಇದ್ದಾನೆ ಎಂದರೆ ಇಲ್ಲ ಎನ್ನುವವರನ್ನು ಒಪ್ಪಿಸುವುದು ಹೇಗೆ? ತಿಳಿಯುತ್ತಾ ಹೋದಂತೆ ಹೆಚ್ಚು ರಹಸ್ಯಮಯವಾದ ಜಟಿಲವಾದ ಬದುಕನ್ನು ಪಡೆದಿರುವ ಈ ಕೋಟಿ ವಿದಧ ಜೀವಿಗಳು, ಅವುಗಳ ಹುಟ್ಟು ಸುಖ, ದುಃಖ, ಸಾವುಗಳು, ಈ

ಭೂಮಿ, ಸಾಗರ , ಗಾಳಿ, ಬೆಳಕು, ನಕ್ಷತ್ರ, ಗ್ರಹಗಳು, ಸೂರ್ಯ- ಚಂದ್ರ, ಮಳೆ, ಬಿಸಿಲು ಹೀಗೆ ಮೊದಲಾದ ಸ್ಥಿ ಪರಿಸ್ಥಿತಿಗಳಿಗೆಲ್ಲಾ ಏನು ಕಾರಣ ಹಾಗೆಯೇ ಜಗತ್ತಿನ ಸರ್ವ ಸಮಸ್ಯೆಗಳು ವ್ಯವಸ್ಥೆ ದುರಾವಸ್ಥೆಗಳಿಗೆಲ್ಲ ಕಾರಣವನ್ನು ಒಪ್ಪಲು ದೇವರು ಒದಗದಿದ್ದರೆ ಮಾನವನಿಗೆ ಹುಚ್ಚು ಹಿಡಿಯುತ್ತಿತ್ತು. ದೇವರು ಇದ್ದಾನೆ ಎನ್ನುವುದು ಕಲ್ಪನೆಯೇ ಎನ್ನೋಣ, ಆದರೆ ಅವನಿಲ್ಲ ಎನ್ನುವುದನ್ನು ಸರಾಗವಾಗಿ ತಳ್ಳಿಬಿಡಲು ಸಾಧ್ಯವಿಲ್ಲ. ಆಸ್ತಿಕನ ಸವಾಲನ್ನು ನಾಸ್ತಿಕನೂ ಎದುರಿಸಬೇಕಾಗುತ್ತದೆ. ದೇವರು ಪ್ರಯೋಗಕ್ಕೆ ಸಿಕ್ಕುವ ವಸ್ತುವಲ್ಲ. ವಿಚಾರದಿಂದ ಮಾತ್ರ ಅದನ್ನು ಹುಡುಕಬೇಕು. ಅದೂ ಆಧಾರಪೂರ್ವಕವಾಗಿರಬೇಕು. ಇದನ್ನು ಒಪ್ಪಿಕೊಳ್ಳಲು ಒಂದು ಸ್ಥಿರನಿಯಮವನ್ನು ಅವಲಂಬಿಸಿರಬೇಕು. ಅದೇ 'ಕಾರ್ಯ ಕಾರಣ ಸಿದ್ಧಾಂತ'. ಇದು ಜಗತ್ತಿನ ಶಾಶ್ವತ ಸಿದ್ಧಾಂತ. ಜಗತ್ತಿನ ಯಾವುದೇ ರೀತಿಯ ಒಂದು ಘಟನೆ ನಡೆಯಬೇಕಾದರೆ, ಒಂದು ವಸ್ತು ನಿಷ್ಠ ವಿಷಯ ಉಂಟಾಗಬೇಕಾದರೆ, ಇರಬೇಕಾದರೆ ಇಲ್ಲದಾಗಬೇಕಾದರೆ, ಅದಕ್ಕೊಂದು ಕಾರಣ ಇರಲೇಬೇಕು. ಕಾರಣ ಇಲ್ಲದೆ ಯಾವ ಕಾರ್ಯವೂ ಆಗುವುದಿಲ್ಲ. ಕಾರಣದಿಂದ ಉಂಟಾಗುವ ಯಾವುದೇ ಆಗಲಿ ಅದನ್ನು ಕಾರ್ಯ ಎನ್ನಲಾಗುತ್ತದೆ. ಕಾರಣ ವಿಲ್ಲದೆ ಕಾರ್ಯ ಆಗುವುದಿಲ್ಲ ಆದರೆ ಕಾರ್ಯಇಲ್ಲವಾದರೂ ಕಾರಣ ವಿರಬಹುದು. ತಿನ್ನುವುದು ಕಾರ್ಯ, ದ್ವೇಷ ಕಾರಣ, ಕೊಲೆ ಕಾರ್ಯ, ಹಸಿವು ಕಾರಣ, ಹಾಗೇನೇ ಕಾರಣದಲ್ಲಿ ತಕ್ಷಣದ ಕಾರಣ ಮತ್ತು ಮೂಲ ಕಾರಣ ಎಂದಿರುತ್ತದೆ. ಅರ್ಥಾತ್ ಮೂಲ, ಕಾರಣವು ಬೇರೆ ಯಾವುದೇ ಕಾರಣದ ಕಾರ್ಯ ಆಗಿಲ್ಲದಿರುವುದರಿಂದ ಮೂಲ ಕಾರಣಕ್ಕೆ ನಾಶ ಇರುವುದಿಲ್ಲ ಅದು ಶಾಶ್ವತವಾದುದಾಗಿರುತ್ತದೆ. ಕಾರ್ಯ ನಾಶವಾಗುವ ಗುಣದಿಂದ ಕೂಡಿದೆ. ರೋಗನಾಶವಾಗುತ್ತದೆ. ರೋಗಾಣುಗಳಿಲ್ಲವಾದರೆ ರೋಗವಿಲ್ಲ. ಹಸಿವು ಇಲ್ಲವಾದರೆ ತಿನ್ನುವುದಿಲ್ಲ. ದ್ವೇಷ ಇಲ್ಲವಾದರೆ ಕೊಲೆ ಇಲ್ಲ. ಹೀಗೆ ದೀರ್ಘಸಮಾಲೋಚನೆ ಮಾಡಿದಾಗ ದೇವರು ಇದ್ದಾನೆಯೇ ಎನ್ನುವ ಪ್ರಶ್ನೆಯು ಕಾರಣ. ಅದಕ್ಕೆ ಉತ್ತರ ಕಾರ್ಯ, ಪ್ರಶ್ನೆಯಿಂದಾಗಿ ಉತ್ತರ, ಕಾರಣದಿಂದಾಗಿ ಕಾರ್ಯ. ಕಾಮಾಲೆ ರೋಗಿಗಳ ಕಣ್ಣಿಗೆ ವಸ್ತುಗಳೆಲ್ಲ ಹಳದಿ ಕಾಣಿಸುತ್ತವೆ. ಯಾಕೆ ಹಳದಿಯಾಗಿ ಕಾಣಿಸುತ್ತದೆ ಎನ್ನುವುದನ್ನು ಕಂಡು ಹಿಡಿಯಲು ವಸ್ತುಗಳನ್ನು ಪರೀಕ್ಷಿಸುವುದಕ್ಕಿಂತ ಕಣ್ಣುಗಳನ್ನು ಪರೀಕ್ಷೆಗೆ ಒಳಪಡಿಸಬೇಕು. ಕಾರ್ಯವನ್ನು ಕಂಡು ಹಿಡಿಯಲು ಕಾರಣವನ್ನು ಹುಡುಕಬೇಕು.

ಇಂದಿನ ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ತಮ್ಮ ಸಂಶೋಧನೆಯ ಮಾರ್ಗದಲ್ಲಿ ಕವಲೊಡೆಯುವುದು ಇಲ್ಲಿಯೇ, ವಿಜ್ಞಾನಿ ಜಗತ್ತನ್ನು ಪ್ರಯೋಗಕ್ಕೆ ಒಳಪಡಿಸುತ್ತಾ ಉತ್ತರಕ್ಕಾಗಿ ಪ್ರಯತ್ನಿಸುತ್ತಾನೆ. ದಾರ್ಶನಿಕರು ವ್ಯಕ್ತಿನಿಷ್ಠವಾಗಿ ಪ್ರಯತ್ನಿಸಿ ತಮ್ಮ ಅಂತರ್ಯವನ್ನು ಪ್ರಯೋಗಕ್ಕೆ ಒಳಪಡಿಸುತ್ತಾರೆ. ಅವರು ಕಾರ್ಯವನ್ನು ವಿಶ್ಲೇಷಣೆ ಮಾಡುತ್ತಾರೆ. ಇವರು ಕಾರಣವನ್ನು. ದೇವರು ಜಗತ್ತಿನ ವಸ್ತುವಲ್ಲ, ಹಾಗಾಗಿ ವಿಜ್ಞಾನಿಗಳ ಪ್ರಯೋಗಕ್ಕೆ ಸಿಕ್ಕುವುದಿಲ್ಲ. ದೇವರಿದ್ದಾನೆಯೇ ಎನ್ನುವ ಪ್ರಶ್ನೆಯನ್ನು ಕಾರಣದಲ್ಲಿ ಹುಡುಕಬೇಕು. ದೇವರು ಇದ್ದಾನೆಯೇ ಎಲ್ಲಿದ್ದಾನೆ, ಹೇಗಿದ್ದಾನೆ ಎನ್ನುವ ಪ್ರಶ್ನೆ ಎಲ್ಲಿಂದ ಬಂದಿದೆ? ನನ್ನಿಂದ. ನನ್ನಿಂದ ಏಕೆ ಬಂದಿದೆ? ತಿಳಿದುಕೊಳ್ಳುವ ಕುತೂಹಲದಿಂದ. ಕುತೂಹಲ ಏಕಿದೆ? ನಾನಿರುವುದರಿಂದ. ನಾನು ಎಂದರೆ ದಾರ್ಶನಿಕರು ಮತ್ತು ಶರೀರ ಶಾಸ್ತ್ರಜ್ಞರಿಗೆ ತಿಳಿದಿರುವಂತೆ, ನಾನುವಿನಲ್ಲಿ ದೇಹ, ಮನಸ್ಸು ಮತ್ತು ಅಹಂಕಾರಗಳು ಕೂಡಿವೆ. ದೇಹ ಐದು ಜ್ಞಾನೇಂದ್ರಿಯಗಳು ಐದು ಕರ್ಮೇಂದ್ರಿಯಗಳು ಸೇರಿ ಈ ಜಗತ್ತಿನೊಂದಿಗೆ ನೇರವಾಗಿ ವ್ಯವಹರಿಸುತ್ತವೆ. ದೇಹದ ಮೂಲಕ ಗುರುತ್ತಿಸುತ್ತಾ ಜಗತ್ತಿನ ಮೂಲಕ ಉಂಟಾದ ಸಂದೇಶಗಳನ್ನು ಜ್ಞಾನೇಂದ್ರಿಯಗಳ ಮೂಲಕ ನನ್ನೊಳಗೆ ತಲಪಿಸುತ್ತಲೇ ಇರುತ್ತದೆ. ಮನಸ್ಸು ದೇಹದೊಳಗಿದೆ ಎಂಬ ಅನುಭವವಾಗುತ್ತದೆ ಇದು ಚಂಚಲ.

ಪೂರ್ವ ಸಂಸ್ಕಾರ, ಕರ್ಮ ಅನುಗುಣವಾಗಿ ಪ್ರೀತಿ ಅಥವಾ ದ್ವೇಷವನ್ನು ಸ್ಪಂದಿಸುತ್ತಿರುತ್ತದೆ. ಬುದ್ಧಿ ಈ ಸ್ಪಂದನಗಳನ್ನು ಅನುಸರಿಸಿ ವಿಮರ್ಶಿಸಿ ಅದಕ್ಕೆ ಪ್ರತಿಕ್ರಿಯೆಯಾಗಿ ಏನು ಮಾಡಬೇಕು. ಏನು ಮಾಡಬಾರದು ಎಂದು ನಿರ್ಧರಿಸಿ ಅದಕ್ಕನುಗುಣವಾಗಿ ಕರ್ಮೇಂದ್ರಿಯಗಳು ಕೆಲಸ ಮಾಡಲು ನೆರವಾಗುತ್ತವೆ. ಆದರೆ ಅಹಂಕಾರದ ಲಕ್ಷಣವೇ ಬೇರೆ. ಅದು ಈ ದೇಹ ಮನಸ್ಸು ಬುದ್ಧಿಗಳನ್ನು ಅವು ನನ್ನವು ಎಂದುಕೊಳ್ಳುತ್ತದೆ. ಅದನ್ನೇ 'ಅಹಂ' ಎನ್ನುವುದು . ಆದರೆ ಒಂದನ್ನೊಂದು ಅವಲಂಬಿಸಿಕೊಂಡಿರುವ ಮನಸ್ಸು ಬುದ್ಧಿ ಮತ್ತು ಅಹಂಕಾರಗಳು ಬೇರೆ ಬೇರೆ ವಸ್ತುಗಳಲ್ಲ. ಒಂದೇ ಘಟಕದ ಮೂರು ಭಿನ್ನ ಭಿನ್ನ ಲಕ್ಷಣಗಳಿಗೆ ಕೊಟ್ಟ ಹೆಸರುಗಳವು. ಈ ಮೂರು ವಿಧದ ಪ್ರಕ್ರಿಯೆಗಳನ್ನು ಗುರುತಿಸಲು ಇರುವುದು ಅಂತಃಕರಣ. ಈಗ ನಾನು ಎಂದರೆ ಈ ದೇಹ ಮತ್ತು ಅಂತಃಕರಣಗಳು ಸೇರಿವೆ ಎಂದಾಯಿತ್ತಲ್ಲವೆ? ನಾನು ಎಚ್ಚರ ವಾಗಿರುವಷ್ಟು ಕಾಲ ನನ್ನ ದೇಹ ಮತ್ತು ಅಂತಃಕರಣಗಳು ಕ್ರಿಯಾಶೀಲರಾಗಿರುತ್ತದೆ. ಆದರೆ ಸ್ವಪ್ನಕಾಲದಲ್ಲಿ ದೇಹದ ಕ್ರಿಯೆ ಇರುವುದಿಲ್ಲ. ಅಂತಃಕರಣ ಮಾತ್ರ ಕ್ರಿಯಾಶೀಲವಾಗಿರುತ್ತದೆ. ಗಾಢ ನಿದ್ರೆಯಲ್ಲಿ ಎರಡೂ ಕ್ರಿಯಾ ಶೂನ್ಯವಾಗಿರುತ್ತದೆ. ಆದರೆ ಅವು ಇದ್ದುವು. ಒಂದು ವೇಳೆ ನಿದ್ರಾಕಾಲದಲ್ಲಿ ಅವುಗಳು ಇಲ್ಲವಾಗಿದ್ದರೆ ನಿದ್ರೆಗೆ ಮುಂಚಿನ ನೆನಪು ಮುಂದುವರಿದು ಬರುತ್ತಿರಲಿಲ್ಲ. ಅಂದರೆ ಅವು ಜಡವಾಗಿದ್ದುವು ಅಷ್ಟೆ. ಜಡವಾಗಿಯೂ ಕ್ರಿಯಾಶೀಲವಾಗಿರುವುದು ಅವುಗಳ ಸಹಜ ಲಕ್ಷಣ. ಹಾಗಾಗಿ ಈ ಕ್ರಿಯಾಶೀಲತೆಗೆ ಅವು ಬೇರೆ ಯಾವುದೋ ಅಗೋಚರ ವಸ್ತುವನ್ನು ಅವಲಂಬಿಸುತ್ತದೆ ಎಂದಾಯಿತು. ಆ ವಸ್ತುವೇ ಚೈತನ್ಯ ಅಥವಾ ಪ್ರಜ್ಞೆ. ಚೈತನ್ಯದ ಸಂಪರ್ಕ ಇದ್ದಾಗ ನಾನು ಕ್ರಿಯಾ ಶೀಲ, ಇಲ್ಲದಾಗ ಜಡ. ಸಾವಿನಲ್ಲಿ ನೋಡುವುದಾದರೆ ಅಂತಃಕರಣ ಇಲ್ಲದಾಗಿ ದೇಹ ಜಡವಾಗಿ ನಾಶವಾಗುತ್ತದೆ. ಹೀಗೆ ಚೇತನ ಬೆಂಬಲ ಇಲ್ಲವಾದರೆ ಅಂತಃಕರಣ ಇರುವುದಿಲ್ಲ ಅಂತಃ ಕರಣ ಇಲ್ಲವಾದರೂ ಚೇತನ ಇರುತ್ತದೆ. ಇದನ್ನು ಜಗತ್ತಿನ ಅನುಭವ ಜ್ಞಾನದಿಂದ ತಿಳಿಯಲು ಸಾಧ್ಯವಿಲ್ಲ.


ಅದರ ಅರಿವು ಬರುವುದು ಮನಸ್ಸಿನ ಮೂಲಕ. ಅಂತಃಕರಣ ಇಲ್ಲವಾದರೆ ಅಂದರೆ ಮನಸ್ಸು ಇಲ್ಲವಾದರೆ ಚೇತನಾ ಶಕ್ತಿ ಇರುತ್ತದೆಯೇ? ಎನ್ನುವುದನ್ನು ತಿಳಿಯಲು ಮನಸ್ಸೇ ಅಲ್ಲಿರುವುದಿಲ್ಲವೆಂದ ಮೇಲೆ ಮನಸ್ಸಿನ ಮೂಲವನ್ನು ಹುಡುಕುತ್ತಾ ಹೋದರೆ, ಅಂದರೆ ಹೋಗುವುದು ಚಿಂತನೆ, ಆ ಚಿಂತನೆಯ ಸಮಾಧಿ ಎನ್ನುವುದು. ಆ ಸ್ಥಿತಿಯು ಕಾಲಗಣನೆ ಸಿಕ್ಕದೆ 'ಈಗ' 'ಆಗ' ಮುಂದೆ ಎಂಬುವುದು ಇರುವುದಿಲ್ಲ. ಕಾಲಗಣನೆ ನಾಶವಾಗುವಂತದ್ದು, ಈಗ ಇದೆ, ಹಿಂದೆ ಇರಲಿಲ್ಲ ನಾಳೆ ಎಂಬುದು ನಾಶವಾಗುತ್ತದೆ. ಆದರೆ ಚೇತನ ಎಂಬುದು ಶಾಶ್ವತವಾದದು. ಅದಕ್ಕೆ ಹುಟ್ಟು ಇಲ್ಲ ನಾಶವೂ ಇಲ್ಲ. ಅರ್ಥಾತ್ ಶಾಶ್ವತವಾದ ಚೇತನದಿಂದಾಗಿ ನಾಶವಾಗುವ, ಗುಣವುಳ್ಳ ನನ್ನ ಅಂತಃಕರಣ, ನನ್ನ ದೇಹ ಮತ್ತು ನಾನು ನೋಡುವ ಜಗತ್ತು ಉಂಟಾಗಿದೆ. ಚೇತನ ಅಥವಾ ಪ್ರಜ್ಞೆ ಎಂಬ ಈ ಸ್ಥಿತಿಯನ್ನು ಜಗತ್ತಿನ ವ್ಯವಹಾರಿಕ ದೃಷ್ಟಿಯಿಂದ ಹೇಳುವಾಗ ಆ ಸ್ಥಿತಿಯನ್ನೇ ದೇವರು ಎನ್ನುವುದು.

ದೇವರೆಂಬುವನು ನಮ್ಮೊಳಗಿದ್ದಾನೊ, ನಮಗೇಕೆ ಅನುಭವ ಆಗುತ್ತಿಲ್ಲ ಅದರ ಸಂಬಂಧವನ್ನು ಪಡೆಯುವುದು ಹೇಗೆ, ಪ್ರಯೋಜನ ಏನು ಇವುಗಳನ್ನು ಪಡೆಯಲು ನಾವು ಶಾಸ್ತ್ರಗಳ ಮೊರೆ ಹೋಗಬೇಕು. ಮಾನವ ಭಗವಂತನ ಸಂಬಂಧದ ಮಾಧ್ಯಮವನ್ನು ಭಕ್ತಿ ಎಂದು ಕರೆಯಲಾಗುತ್ತದೆ. ಶುದ್ಧ ಭಕ್ತಿ ಒಂದು ಸ್ಥಿರ ಧರ್ಮ, ಭಕ್ತಿಗೆ ಸ್ಥಳ ಹೃದಯ. ಅದು ಅರಳಬೇಕು. ಅರಳಲು ಜ್ಞಾನಬೇಕು. ಆತನನ್ನು ತಮ್ಮ ಹೃದಯದೊಳಗೆ ವ್ಯಾಕುಲತೆ ತಮನಗಳೊಂದಿಗೆ ತುಂಬಿಕೊಂಡರೆ ತಾನಾಗಿಯೇ ಭಗವಂತನೊಳಗೆ ತುಂಬಿಕೊಳ್ಳುತ್ತೇವೆ. ನಾವು ಆತನಿಂದ ದೂರ ಸರಿದಷ್ಟೂ ಆ ಬಾಂಧವ್ಯ ಕಡಿತಕೊಂಡು ಸಮಸ್ಯೆಗಳು ಜಾಸ್ತಿಯಾಗುವ ಅನುಭವದ ಅರಿವು ಉಂಟಾಗುತ್ತದೆ, ಹೀಗೆ ದೇವರು ಭಕ್ತಿಯ ವಿಚಾರದಲ್ಲಿ ತಿಳಿಯಲು ಸಾಕಷ್ಟಿದೆ.

◆◆◆◆◆

ಆಯುರ್ವೇದ ವೈದ್ಯ ಪದ್ಧತಿಯ ಸೂಕ್ಷ್ಮ ಪರಿಚಯ

-ಗುತ್ತಿ ಮುಂಡನ ಶ್ರೀಮತಿ ಇಂದಿರಾ ಗಿರೀಶ್‌ಕುಮಾರ್,
ಮಡಿಕೇರಿ Ph: 220234, 9448895983



ಮಾನವನ ದೇಹವು ಸೃಷ್ಟಿಯ ಪರಿಪೂರ್ಣ ಮಾದರಿಯ ಅಸ್ಥಿಪಂಜರ. ಪರಮಾತ್ಮನು ಸೃಷ್ಟಿಯ ರಹಸ್ಯದಲ್ಲಿ ಪರಿಪೂರ್ಣವಾಗಿ ನಿಗೂಢವಾಗಿ ಸೃಷ್ಟಿಸಿದ್ದಾನೆ. ಇಂತಹ ನಿಗೂಢ ರಚನೆಗೆ ಆಪತ್ತು ಉಂಟಾದಾಗ ಔಷಧೋಪಚಾರಗಳಿಂದ ಸರಿಪಡಿಸುವುದು ನಿಯಮ. ಇಂತಹ ಔಷಧ ಪದ್ಧತಿಯಲ್ಲಿ ಆಯುರ್ವೇದ ಔಷಧ ಪದ್ಧತಿಯೂ ಒಂದು. ಆಯುರ್ವೇದ ಔಷಧ ಪದ್ಧತಿಯು ಪುರಾತನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಈ ಪದ್ಧತಿಯಿಂದ ರೋಗವು ಸ್ವಲ್ಪ ನಿಧಾನವಾಗಿ ಗುಣಹೊಂದುವುದು ಮತ್ತು ಶಾಶ್ವತ ಪರಿಹಾರ, ಯಾವುದೇ ರೀತಿಯ ತೊಂದರೆಯೂ ಇರಲಾರದು. ಪುರಾತನ ಲಿಖಿತ ದಾಖಲೆಯ ಪ್ರಕಾರ ಕ್ರಿ. ಪೂ. 4500 ರಿಂದ ಕ್ರಿ.ಪೂ. 1600 ರ ಸುಮಾರಿನಲ್ಲಿ ರಚಿತವಾದ ಋಗ್ವೇದದಲ್ಲಿ ಕೆಲವು ಔಷಧಿ ಸಸ್ಯಗಳನ್ನು. 'ಸೋಮ' ಎಂಬ ಮೂಲಿಕೆಯಿಂದಾಗುವ ಪರಿಣಾಮವನ್ನು ಪರಿಚಯಿಸಲಾಗಿದೆ. ನಂತರ ರಚಿತವಾದ ಅಥರ್ವಣವೇದದಲ್ಲಿ ಔಷಧ ಸಸ್ಯಗಳ ಬಗ್ಗೆ ಮತ್ತಷ್ಟು ವಿವರಣೆ ಸಿಗುತ್ತದೆ. ಕ್ರಿ. ಪೂ. 300-200ರ ಸುಮಾರಿಗೆ ರಚಿತವಾದ 'ಚರಕ ಸಂಹಿತೆ'ಯಲ್ಲಿ 700 ಔಷಧಿಗಳನ್ನು ಪರಿಚಯಿಸಲಾಗಿದೆ.

ಕಾಯಿಲೆಗಳು ಮಾನವನ ಶರೀರಕ್ಕೆ ಬಹು ಬೇಗನೆ ಬರಬಲ್ಲದು. ಇವನ್ನು 4 ಭಾಗಗಳಾಗಿ ವಿಂಗಡಿಸಲಾಗಿದೆ.

1. ದೇಹದ ಹೊರ ಭಾಗದಲ್ಲಿ ಕಾಣಿಸಿಕೊಳ್ಳುವ ಕಾಯಿಲೆ.
2. ದೇಹದ ಒಳಭಾಗದಲ್ಲಿ ಕಾಣಿಸಿಕೊಳ್ಳುವ ಕಾಯಿಲೆ.
3. ಮಾನಸಿಕ ಕಾಯಿಲೆಗಳು.
4. ಧಾತು ದೋಷದಿಂದ ಮತ್ತು ಆಹಾರದ ಅಸಮತೋಲನದಿಂದ ಬರುವ ಕಾಯಿಲೆ(ವಾತ, ಪಿತ್ಥ, ಕಫ,)

ಇವು ಸಮತೋಲನದಲ್ಲಿದ್ದರೆ ಮನುಷ್ಯ ಆರೋಗ್ಯವಾಗಿರುತ್ತಾನೆ. ರೋಗಿಯ ದೇಹಪರಿಶೀಲನೆ ಮತ್ತು ಮಾನಸಿಕ ಅಸಮತೋಲನವನ್ನು ಪರೀಕ್ಷಿಸುವ ಮೂಲಕ ರೋಗ ಲಕ್ಷಣಗಳನ್ನು ಕಂಡು ಹಿಡಿಯಬಹುದು. ಯಾವುದೇ ರೋಗಿಯನ್ನು ಶುಭ್ರವಾದ ಗಾಳಿ-ಬೆಳಕು ಬರುವ ಸ್ವಚ್ಛವಾದ ಪರಿಸರದಲ್ಲಿಡುವ ಮತ್ತು ಸೂಕ್ತ ಔಷಧೋಪಚಾರಗಳೊಂದಿಗೆ ರೋಗಿಯ ಸಂಬಂಧ ಪಟ್ಟವರು ಅವರೊಡನೆ ಸಂತೋಷದಿಂದ ವರ್ತನೆ ಮಾಡುವುದರಿಂದ ಮತ್ತು ಮಾತನಾಡುವುದರಿಂದ ರೋಗಿಯು ತನ್ನ ನೋವನ್ನು ಮರೆತು ಬಹಳ ಬೇಗನೆ ಚೇತರಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ. ಪೂರ್ಣಾರೋಗ್ಯದ ಸುಖಾನುಭವವು ಸುಖವಾದ ನಿದ್ರೆಯಿಂದ ಲಭಿಸುತ್ತದೆ. ಒಳ್ಳೆಯ ಆರೋಗ್ಯ ರಕ್ಷಣೆಗೆ ಹಾಗೂ ದೈಹಿಕ ಚಟುವಟಿಕೆಗಳಿಗೆ ಉತ್ತಮ ಆಹಾರ ಮತ್ತು ನಿದ್ರೆಯು ಅವಶ್ಯಕ. ಸಮಯಕ್ಕೆ ಸರಿಯಾದ ನಿದ್ರೆಯಿಂದ ಆರೋಗ್ಯ, ಶಕ್ತಿ, ಪುಷ್ಠಿ , ಜ್ಞಾನ, ವೀರ್ಯವಂತಿಕೆ ಲಭಿಸುವುದು. ಬಲ, ಕಾಂತಿ ಹಾಗೂ ಆಯುಷ್ಯದ ಲಾಭ, ಮನಸ್ಸಿನ ಪ್ರಸನ್ನ ಭಾವ, ಜಠರಾಗ್ನಿಯ ಸಮತ್ವ, ಆಹಾರ ಸೇವನೆಯ ಇಚ್ಛೆಗಳಿಗೆ, ಸೇವಿಸಿದ ಆಹಾರವು ಮೂಲವೆಂದು ಆಯುರ್ವೇದ ಸಂಹಿತೆಗಳು ಹೇಳುತ್ತವೆ. ಸುಲಭವಾಗಿ ಪಚನವಾಗುವುದು. ಮಲ-ಮೂತ್ರ ಸುಖವಾಗಿ ವಿಸರ್ಜನೆಯಾಗುವುದು, ಶರೀರದ ಮತ್ತು

ಇಂದ್ರಿಯಗಳ ಲಘುತ್ವತೆ, ಸಮಯಕ್ಕೆ ಸರಿಯಾದ ನಿದ್ರೆ ಮತ್ತು ಎಚ್ಚರವಾಗುವುದು. ಇವುಗಳೆಲ್ಲವು ಒಳ್ಳೆಯ ಆರೋಗ್ಯದ ಲಕ್ಷಣಗಳು.

ಸಕಲ ರೋಗಗಳಿಗೂ ಅಗ್ನಿಮಾಂದ್ಯ(ಅಜೀರ್ಣ)ವೇ ಕಾರಣಅಗ್ನಿಮಾಂದ್ಯದಿಂದ. ಶರೀರದಲ್ಲಿ ಪುಷ್ಟಿಹೀನತೆ, ಕಾಂತಿ ಹೀನತೆ, ಮನಸ್ಸಿನಲ್ಲಿ ಭಯ, ಆತ್ಮಹೀನತೆ, ಹೃದಯ ದೌರ್ಬಲ್ಯಗಳು ಉಂಟಾಗುತ್ತದೆ. ಹುಳಿ, ಖಾರ, ಮದ್ಯ, ಅಜೀರ್ಣ ಇವುಗಳು ಯಕೃತ್ತಿನ (Liver) ದೋಷಕ್ಕೆ ಕಾರಣವಾಗುತ್ತದೆ. ಇದರಿಂದ ಕಾಮಾಲೆ ರೋಗ ಬರುತ್ತದೆ. ಇದರ ಲಕ್ಷಣಗಳು ಕಣ್ಣು, ಚರ್ಮ, ಮೂತ್ರ, ಉಗುರುಗಳು ಹಳದಿಯಾಗುವಿಕೆ ಮತ್ತು ಮಲ ಬಿಳಿಯಾಗುವುದು. ಕಾಮಾಲೆಯನ್ನು 2 ವಿಧವಾಗಿ ವಿಂಗಡಿಸಿದೆ.

1.ಶಾಖಾಶ್ರಿತ ಕಾಮಾಲೆ: ಇದರಲ್ಲಿ ಪಿತ್ಥವು ರಕ್ತ ಮಾಂಸಗಳಲ್ಲಿ ತುಂಬಿ ಕಣ್ಣು, ಚರ್ಮ, ಉಗುರುಗಳು ಹಳದಿಯಾಗಿ ಮಲವು ಬಿಳಿಯಾಗಿರುತ್ತದೆ.

2. ಕೋಷ್ಟಾಶ್ರಿತ ಕಾಮಾಲೆ: ಇದರಲ್ಲಿ ಪಿತ್ಥವು ಹೆಚ್ಚಾಗಿ ಬೆಳೆದು ರಕ್ತ ಮಾಂಸಗಳಲ್ಲಿ ಪ್ರವೇಶಿಸಿ ಶರೀರದ ಕ್ಷೀಣತೆಗೆ ಕಾರಣವಾಗುತ್ತದೆ. ಇದರಲ್ಲಿ ಮಲಚರ್ಮ ಕಣ್ಣುಗಳಲ್ಲಿ ಲಕ್ಷಣಗಳು ಕಂಡು ಬರುವುದಿಲ್ಲ.

ಶರೀರದಲ್ಲಿ ರಕ್ತದೊತ್ತಡ (B.P.) ಅತಿಯಾದ ಮಾನಸಿಕ ಬಳಲುವಿಕೆ (Tenstion) ಅತಿಯಾದ ರಕ್ತ ಬಿಸಿಯಾಗುವುದು ಮತ್ತು ಕೆಲವು ವಾಯು ಗುಣಗಳುಳ್ಳ ಆಹಾರ ಸೇವನೆ, ಇವುಗಳಿಂದ ಪಾರ್ಶ್ವವಾಯು ರೋಗ ಬರುತ್ತದೆ. ಇದನ್ನು ಲಕ್ವಾ, ಪಕ್ಷಪಾತ, ಪಕ್ಷಘಾತ Paralysis ಎಂದೆಲ್ಲಾ ಹೇಳುವರು. ಇದರ ಲಕ್ಷಣ: ಈ ಕಾಯಿಲೆಗೆ ಒಳಗಾದ ಶರೀರದ ಭಾಗವು ಅಲುಗಾಡಿಸಲು ಆಗದೇ ನಿಷ್ಕ್ರಿಯವಾಗುವುದು.

ರೋಗ ನಿವಾರಣೆಗಾಗಿ ರಾಸಾಯನಿಕ ಸಂಯುಕ್ತಗಳನ್ನು ಔಷಧಿ ಗುಳಿಗೆಗಳ ರೂಪದಲ್ಲಿ ಸೇವಿಸುವುದರಿಂದ ತಾತ್ಕಾಲಿಕ ಪರಿಹಾರ ಸಿಕ್ಕಿದರೂ ಕಾಲಕ್ರಮೇಣವಾಗಿ ಶರೀರದ ಮೇಲೆ ದುಷ್ಪರಿಣಾಮಗಳೇ ಹೆಚ್ಚು.

ಆಯುರ್ವೇದ ವೈದ್ಯ ಪದ್ಧತಿಯಲ್ಲಿ ಮರ, ಗಿಡ ಮೂಲಿಕೆಗಳಿಂದ, ಪ್ರಾಣಿಪಕ್ಷಿಗಳಿಂದ ಭೂಮಿಯಲ್ಲಿ ಸಿಗುವ ಖನಿಜ ವಸ್ತುಗಳಿಂದ ಹಲವಾರು ಔಷಧಿಗಳನ್ನು ತಯಾರಿಸುತ್ತಾರೆ. ನಮ್ಮ ಮನೆ ಅಂಗಳದ ಕೈ ತೋಟದಲ್ಲಿ ಬೆಳೆಯುವ ಗಿಡಗಳಲ್ಲಿ ಅನೇಕ ಔಷಧಿ ಗುಣಗಳಿರುತ್ತವೆ. ಈ ನಿಟ್ಟಿನಲ್ಲಿ 'ಗಿಡಮರಗಳು ಭೂಮಿಯಲ್ಲಿ ನಮ್ಮೊಡನಿರುವುದು ನಮಗೊಂದು ಅದೃಷ್ಟ ದೇವತೆ ಇದ್ದಂತೆ' ಎಂಬ ಸುಸ್ರುತರವರ ವಾಕ್ಯ ನೆನಪಿಸಿಕೊಳ್ಳಬೇಕಾಗಿರುವುದು.

ಮನೆ ಹಿತ್ತಲಲ್ಲಿ ಅಲಂಕಾರಕ್ಕಾಗಿ ಬೆಳೆಸುವ ಗಿಡಗಳಲ್ಲಿ ಹಲವಾರು ಔಷಧಗಳಿವೆ. ಅವುಗಳಲ್ಲಿ ಕೆಲವು ಈ ರೀತಿ ಇದೆ.

1. ಬಿಳಿ ದಾಸವಾಳದ ಬೇರನ್ನು ಮಜ್ಜಿಗೆಯಲ್ಲಿ ಅರೆದು ಸೇವಿಸುವುದರಿಂದ ಮೂತ್ರ ಕೋಶದ ಕಲ್ಲು ಮತ್ತು ಸಕ್ಕರೆ ಕಾಯಿಲೆಗೆ ಪರಿಹಾರವಿದೆ.

2. ರಾತ್ರಿ ಮಲಗುವ ವೇಳೆ ಬಾಳೆ ಹಣ್ಣು ಅಥವಾ ಒಂದು ತುಂಡು ಪಪ್ಪಾಯಿ ತಿಂದರೆ ಮಲ ಬದ್ಧತೆ ನಿವಾರಣೆಯಾಗುತ್ತದೆ.

3. ದಾಸವಾಳ ಹೂವನ್ನು ಗೋ ಮೂತ್ರದಲ್ಲಿ ಅರೆದು ತಲೆಗೆ ಹಚ್ಚುವುದರಿಂದ ಕೂದಲು ಉದುರುವುದು ಕಡಿಮೆಯಾಗುತ್ತದೆ.

4.ದಾಸವಾಳ ಹೂವು ಅಥವಾ ಎಲೆಯನ್ನು ಅಕ್ಕಿ ಜೊತೆಗೆ ರೊಟ್ಟಿಮಾಡಿ ತಿನ್ನುವುದರಿಂದ ಉನ್ಮಾದ,

ಮೆದುಳಿನ ದೌರ್ಬಲ್ಯ, ರಕ್ತಬೇಧಿ, ಹೃದ್ರೋಗ ಗುಣವಾಗುತ್ತದೆ. ರಕ್ತ ಶುದ್ಧಿಯಾಗುತ್ತದೆ.

5. ಬಜೆಯನ್ನು ಅರೆದು ಹಸುವಿನ ತುಪ್ಪದೊಡನೆ ಕಲಿಸಿ ಮಕ್ಕಳಿಗೆ ಕೊಡುವುದರಿಂದ ಬುದ್ಧಿಶಕ್ತಿ , ಜ್ಞಾಪಕ ಶಕ್ತಿ ಮತ್ತು ಮಾತಿನ ಉಚ್ಛಾರಣೆ ಚೆನ್ನಾಗಿರುತ್ತದೆ.

6. ತಿಮರೆ (ಬ್ರಾಹ್ಮಿ) ಸಹ ಮಕ್ಕಳಿಗೆ ಬುದ್ಧಿಶಕ್ತಿ, ಜ್ಞಾಪಕ ಶಕ್ತಿ ಹೆಚ್ಚಿಸುತ್ತದೆ. ಮತ್ತು ಆಯುಷ್ಯವರ್ಧಕ ಸಹ ಹೌದು.

7. ಮಕ್ಕಳಿಗೆ ಹಲ್ಲು ಬರುವಾಗ ಜ್ವರ ಬಂದರೆ ಬಜೆಯನ್ನು ಅರೆದು ನೆಕ್ಕಿಸುವುದರಿಂದ ಜ್ವರ ಕಡಿಮೆಯಾಗುತ್ತದೆ.

8.ಹಾಗಲಕಾಯಿ ಅಥವಾ ಸೊಪ್ಪಿನ ರಸ ಸೇವನೆಯಿಂದ ಸಕ್ಕರೆ ಕಾಯಿಲೆ ಹತೋಟಿಗೆ ಬರುತ್ತದೆ. ಮತ್ತು ಪಿತ್ಥವು ಶಮನವಾಗುತ್ತದೆ.

9. ಮದರಂಗಿ ಸೊಪ್ಪು, ಬೆಳ್ಳುಳ್ಳಿ, ಒಳ್ಳೆಮೆಣಸು, ನಿಂಬೆರಸ ಸೇರಿಸಿ ಅರೆದು ಉಗುರು ಸುತ್ತಿಗೆ ಹಚ್ಚಿದರೆ ವಾಸಿಯಾಗುತ್ತದೆ.

10. ಕರಿ ತುಳಸಿ ರಸ 1ಚಮಚಕ್ಕೆ 1ಚಮಚ ಜೇನು ಸೇರಿಸಿ ಮಕ್ಕಳಿಗೆ ಕುಡಿಸಿದರೆ ಕಫ ಕಡಿಮೆಯಾಗುತ್ತದೆ.

ಕವನ

ಗಡಗಡ ಮಾತ್

ಚಂದ್ರ ಸೂರ್ಯಂಗೆ ಗ್ರಹಣಗಡ
ಮನ್ಸ ಮೃಗಕ್ಕೆಲ್ಲಾ ಪ್ರಾಣಗಡ
ಒಳ್ಳಂವ ಆದರೆ ಮಾನಗಡ
ಕೆಟ್ಟಂವಾದರೆ ಪೋಲಿಗಡ
ಸಿಟ್ಟ್ ಬಂದರೆ ಮನ್ಸ ಅಲ್ಲಗಡ
ಪಾಪ ಇದ್ದರೆ ಪಾಪಿಗಡ
ಮೋಕ್ಷ ಪಡಿಯಕೆ ದಾನಗಡ
ಹಣ ಇದ್ದರೆ ಅಹಂಕಾರಗಡ
ಹೊಟ್ಟೆ ಹಸಿರೆ ಊಟಗಡ
ಕುಡಿಯಕೆ ಆದರೆ ಪಾನಕಗಡ
ಜ್ಯೋತ್ಸಿ ಒಟ್ಟಿಗೆ ಸ್ನೇಹಗಡ
ಹಗೆ ಒಟ್ಟಿಗೆ ಮತ್ಸರಗಡ
ತಾನ್ ಬೆಳ್ದರೆ ಹಂಬಾಕ್‌ಗಡ
ಬೇರೆಂವ ಬೆಳ್ದರೆ ಕೇಡ್‌ಗಡ
ಹೆಣ್ಣ್ ಗಂಡ್‌ಗೆ ಪ್ರೀತಿಗಡ
ಹೈದಂಗು ಗೂಡೆಗೂ ಪ್ರೇಮಗಡ
ದೇವುರೊಟ್ಟಿಗೆ ಭಕ್ತಿಗಡ
ಮನ್ಸರೊಟ್ಟಿಗೆ ದ್ವೇಷಗಡ
ಗುಡಿ ಒಳಗೆ ಭಜನೆಗಡ
ಮನೆ ಒಳಗೆ ಜಗಳಗಡ
ಸ್ವಂತದಂವ ಸತ್ತರೆ ಚಿಂತೆಗಡ
ಆಗದಂವ ಸತ್ತರೆ ಮಾರಿ ಹೋದಂಗೆ ಗಡ
ಮದುವೆ ಆದ ಸುರುಲಿ ಗೂಡೆಗಡ
ವರ್ಷ ಕಳ್ದಂಗೆ ಪೀಡೆಗಡ
ಅವ್ವ ಮಗಳ್‌ಗೂ ವಾತ್ಸಲ್ಯಗಡ
ಅತ್ತೆಸೊಸೆಗೂ ಮತ್ಸರಗಡ
ಭೂಮಿ ಬರಡಾದರೆ ಕ್ಷಾಮಗಡ
ಧರೆ ಗಡಗಡ ನಡಿಗಿರೆ
ನಾ ಹೇಳ್ದೆಲ್ಲಾ ಶೂನ್ಯಗಡ.

-ತೆಕ್ಕಡ ಬಿ. ಕುಮಾರ (ಶಿಕ್ಷಕ)
ಮುತ್ತಾರ್ಮುಡಿ ಗ್ರಾಮ, ಮೂರ್ನಾಡು ಅಂಚೆ.

◆◆◆◆◆

ಬುದ್ಧಿಶಕ್ತಿ

-ತೇನನ ಅಶ್ವಿನಿ ರಾಜೇಶ್,

ಉಪನ್ಯಾಸಕಿ ರಾಜ್ಯ ಶಾಸ್ತ್ರ ವಿಭಾಗ,ಬೆಂಗಳೂರು.

ಮನುಷ್ಯ ತನ್ನ ಬುದ್ಧಿಶಕ್ತಿಯಿಂದ ತನ್ನ ಜನ್ಮದಾತೆ, ಆಶ್ರಯದಾತೆ ಪ್ರಕೃತಿಯ ಮೇಲೆ ಸಾಕಷ್ಟು ಹತೋಟಿ ಸಾಧಿಸಿದ್ದಾನೆ. ಪ್ರಕೃತಿಯ ಇತರ ಸೃಷ್ಟಿ ಸಲಕರಣೆಗಳನ್ನು ತನ್ನ ಸುಖಕ್ಕಾಗಿ ಉಪಯೋಗ (ಕೆಲವು ಸಾರಿ ದುರುಪಯೋಗ) ಮಾಡಿಕೊಂಡಿದ್ದಾನೆ. ಇದೇ ಬುದ್ಧಿ ಬಲದಿಂದ ಪ್ರತಿಜೀವ ಸೃಷ್ಟಿ ಮಾಡಲೂ ಯತ್ನಿಸುತ್ತಿದ್ದಾನೆ. ಆದರೆ ಎಲ್ಲರಿಗೂ ಒಂದೇ ತೆರನಾದ ಬುದ್ಧಿ ಇರುವುದಿಲ್ಲ.

ಅಗಾಧ ದೈಹಿಕ ಶಕ್ತಿ ಇದ್ದರೂ, ಬುದ್ಧಿ ಬಲವಿಲ್ಲದೆ ಅನೇಕ ಬೃಹತ್ ಜೀವಿಗಳು ಇಂದು ಹೇಳ ಹೆಸರಿಲ್ಲವಾಗಿವೆ. ಇದನ್ನು ಅರಿತು, ತನ್ನ ಏಳಿಗೆ ಸಾಮರ್ಥ್ಯಗಳ ಮೂಲವಾದ ಬುದ್ಧಿಯನ್ನು ಮನುಷ್ಯ ಆರಾಧಿಸುವುದರಲ್ಲಿ ಅಚ್ಚರಿಯಿಲ್ಲ. ಪ್ರತಿಭಾವಂತರನ್ನು ಅತ್ಯುನ್ನತ ಸ್ಥಾನದಲ್ಲಿಟ್ಟು ಗೌರವಾದರ ತೋರಿಸಿ ಕೊಂಡಾಡಿದರೆ, ಬುದ್ಧಿ ಕಡಿಮೆ ಇರುವವರನ್ನು ನಿಕೃಷ್ಟವಾಗಿ ಕಂಡು, ಪರಿಹಾಸ್ಯ ಮಾಡಲು ಹಿಂಜರಿಯುವುದಿಲ್ಲ. ಎಲ್ಲರೂ ಹೊಂದಲು ಬಯಸುವ, ಇಡೀ ಪ್ರಪಂಚದ ಚಟುವಟಿಕೆ, ವ್ಯವಹಾರಗಳನ್ನು ನಿಯಂತ್ರಿಸುತ್ತಿರುವ, ಕಣ್ಣಿಗೆ ಕಾಣದೆ ಕೈಗೆ ಸಿಕ್ಕದ ಈ ಬುದ್ಧಿಯ ಬಗ್ಗೆ ಸ್ವಲ್ಪ ತಿಳಿಯೋಣ.

ಬುದ್ಧಿವಂತಿಕೆ :

ತಾನು ಕಲಿತುದನ್ನು ಅರ್ಥ ಮಾಡಿಕೊಂಡು ಸಂದರ್ಭಕ್ಕೆ ತಕ್ಕಂತೆ ಜ್ಞಾಪಿಸಿಕೊಂಡು, ಅದನ್ನು ರಚನಾತ್ಮಕವಾಗಿ ಬಳಸಿಕೊಂಡು, ಹೊಸ ಸನ್ನಿವೇಶಗಳನ್ನು ಎದುರಿಸುವ, ಸಮಸ್ಯೆಗಳನ್ನು ಪರಿಹರಿಸುವ ಹಾಗೂ ಪರಿಸರಕ್ಕೆ ಹೊಂದಿಕೊಳ್ಳುವ ಸಾಮರ್ಥ್ಯವೇ ಬುದ್ಧಿವಂತಿಕೆ. ಈ ಸಾಮರ್ಥ್ಯದಲ್ಲಿ ಮೂರು ಬಗೆ.

1 ಅಮೂರ್ತ ಬುದ್ಧಿವಂತಿಕೆ: ಅಮೂರ್ತ ಆಲೋಚನೆ, ಚಿಹ್ನೆಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿ.

2 ಯಾಂತ್ರಿಕ ಬುದ್ಧಿವಂತಿಕೆ :ಯಾಂತ್ರಿಕ ವಿಷಯಗಳನ್ನು ಅರ್ಥ ಮಾಡಿಕೊಳ್ಳುವ ಹಾಗೂ ನಿಭಾಯಿಸುವ ಮತ್ತು ಅವುಗಳ ಬಗ್ಗೆ ಸಂಶೋಧನೆ ಮಾಡುವ ಶಕ್ತಿ.

3 ಸಾಮಾಜಿಕ ಬುದ್ಧಿವಂತಿಕೆ :ಸಮಾಜದ ಇತರರೊಂದಿಗೆ ಹೊಂದಿಕೊಂಡು ಒಳ್ಳೆಯ ಬಾಂಧವ್ಯ ಇಟ್ಟುಕೊಳ್ಳುವ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಶಕ್ತಿ.

ಮನಶಾಸ್ತ್ರಜ್ಞ:

ಪ್ರಕಾರ ಬುದ್ಧಿಸಾಮರ್ಥ್ಯ ಎರಡು ರೂಪದಲ್ಲಿರಬಹುದು. ಒಂದು ಮಾತಿನ ಮೂಲಕ ಪ್ರಕಟವಾಗುವಂತಹದು. ಇನ್ನೊಂದು ಕಾರ್ಯರೂಪದಲ್ಲಿ ಪ್ರಕಟವಾಗುವಂತಹುದು.

ಥರ್ಸ್‌ಸ್ಟೋನ್‌ದ್ವಯರ ಪ್ರಕಾರ ಬುದ್ಧಿವಂತಿಕೆಯಲ್ಲಿ ಈ ಕೆಳಗೆ ಕಾಣಿಸಿದ ಏಳು ಬಗೆಯ ಸಾಮರ್ಥ್ಯಗಳು ಅಡಗಿವೆ.

1. ಆಲೋಚಿಸಲು, ಸಂಪರ್ಕ ಬೆಳೆಸಲು ಹಾಗೂ ಮಾತುಗಳನ್ನು ಉಪಯೋಗಿಸುವ ಸಾಮರ್ಥ್ಯ.
2. ಸಂಖ್ಯೆಗಳನ್ನು ಬಳಸುವ ಸಾಮರ್ಥ್ಯ.
3. ನಕಾಶೆ ಬರೆಯುವ, ಕಟ್ಟಡದ ಯೋಜನೆಗಳನ್ನು ತಯಾರಿಸುವ, ರಸ್ತೆಗಳನ್ನು ತಿಳಿಯಬಲ್ಲ ಕ್ಷೇತ್ರ ವೀಕ್ಷಣಾ ಸಾಮರ್ಥ್ಯ.
4. ಅತಿ ಸೂಕ್ಷ್ಮವಾಗಿ, ಸಕಲ ವಿವರಗಳನ್ನು ಗಮನಿಸುವ ಸಂವೇದನಾ ಸಾಮರ್ಥ್ಯ.
5. ಚಿಹ್ನೆಗಳನ್ನು ಅರ್ಥವನ್ನು ಗುರುತಿಸಿ, ಸಕಾರಣವಾಗಿ ಯೋಚಿಸುವ ಸಾಮರ್ಥ್ಯ.
6. ನಿರರ್ಗಳವಾಗಿ ಪ್ರಭಾವಯುತವಾಗಿ ಮಾತನಾಡುವ ಸಾಮರ್ಥ್ಯ
7. ನೆನಪಿನ ಶಕ್ತಿ

ಬುದ್ಧಿಮಾಪನ : ಮನಶಾಸ್ತ್ರಜ್ಞರು ವ್ಯಕ್ತಿಯ ಬುದ್ಧಿಬಲವನ್ನು ಅಳೆಯಲು ಬಳಸುವ ಸಾಧನವೇ ಇಂಟಲಿಜೆಂಟ್ ಕೊಷಂಟ್(ಐ.ಕ್ಯೂ). ವ್ಯಕ್ತಿ ತನ್ನ ವಯಸ್ಸಿಗೆ ತಕ್ಕಂತೆ ಪಡೆದಿರಬೇಕಾದ ಸಮಸ್ಯೆಗಳನ್ನು ಬಿಡಿಸುವ ಶಕ್ತಿ, ಬುದ್ಧಿವಂತಿಕೆಯನ್ನು ಸಾವಿರಾರು ಸಾಮಾನ್ಯ ಜನರನ್ನು ಪರೀಕ್ಷಿಸಿ ನಿರ್ದಿಷ್ಟಗೊಳಿಸಲಾಗುತ್ತದೆ.

ಉದಾ: 3ವರ್ಷದ ಮಗು, ಕೇಳಿದಾಗ ತನ್ನ ಮೂಗು, ಕಣ್ಣು, ಕಿವಿಗಳನ್ನು ತೋರಿಸಬಲ್ಲುದು. 5ವರ್ಷದ ಮಗು, ನಾಣ್ಯಗಳನ್ನು ಎಣಿಸಬಲ್ಲುದು ಇತ್ಯಾದಿ.

ಇದರ ಆಧಾರದ ಮೇಲೆ ಒಬ್ಬ ವ್ಯಕ್ತಿಗೆ ಕೆಲವಾರು ನಿರ್ದಿಷ್ಟ ಸಮಸ್ಯೆಗಳನ್ನಿತ್ತು, ಆತ ಅವುಗಳನ್ನು ಎಷ್ಟು ಬೇಗ ಸರಿಯಾಗಿ ಬಿಡಿಸುತ್ತಾನೆ ಎಂದು ನೋಡಿ ಲೆಕ್ಕಹಾಕಿ ಆ ವ್ಯಕ್ತಿಯ ಮಾನಸಿಕ ವಯಸ್ಸನ್ನು ನಿರ್ಧರಿಸಲಾಗುತ್ತದೆ. ಆಗ :

$$\text{ಐ. ಕ್ಯೂ.} \frac{\text{ಮಾನಸಿಕ ವಯಸ್ಸು}}{\text{ವ್ಯಕ್ತಿಯ ವಯಸ್ಸು}} \times 100$$

ಉದಾ: 8ವರ್ಷದ ಹುಡುಗನ ಮಾನಸಿಕ ವಯಸ್ಸು 10 ಆದರೆ, ಅವನ ಐ.ಕ್ಯೂ. $^{10}/_{8}\text{x}100=125$

ಐ.ಕ್ಯೂ. ವ್ಯಕ್ತಿಯ ಪ್ರಸಕ್ತ ಸಾಮರ್ಥ್ಯವನ್ನು ಸೂಚಿಸುತ್ತದೆಯೇ ಹೊರತು ಆತನ ಭವಿಷ್ಯದ ಬುದ್ಧಿ ಸಾಮರ್ಥ್ಯವನ್ನು ಬಿಂಬಿಸುವುದಿಲ್ಲ. ಕೇವಲ ಒಂದು ಸಾರಿ ಪರೀಕ್ಷೆ ಮಾಡಿ ನಿರ್ಧರಿಸಿದ ಐ.ಕ್ಯೂ.ನಿಂದ ವ್ಯಕ್ತಿಯ ಬುದ್ಧಿ ಇಷ್ಟೇ ಎಂದು ಹೇಳಿಬಿಡುವುದು ಸಲ್ಲದು.

ಬುದ್ಧಿಮಾಂದ್ಯರು : ಬುದ್ಧಿಯ ಪ್ರಮಾಣ ಸಮಾಜದಲ್ಲಿ ಇತರರೊಡನೆ ಹೊಂದಿಕೊಳ್ಳಲು ಮತ್ತು ಜೀವನೋಪಾಯಕ್ಕೆ ಒಂದು ಉದ್ಯೋಗ ಮಾಡಲು ಆಗದಷ್ಟು ಕಡಿಮೆ ಇದ್ದರೆ ಅಂತಹವರನ್ನು ಬುದ್ಧಿಮಾಂದ್ಯರು ಎನ್ನಲಾಗುತ್ತದೆ. ವಿವಿಧ ಕಾರಣಗಳಿಂದ ಮಿದುಳಿನ ಬೆಳವಣಿಗೆ ಸರಿಯಾಗಿ ಆಗದೇ ಹೋದರೆ ಅಥವಾ ಮಿದುಳಿಗೆ ಪೆಟ್ಟಾದರೆ ಬುದ್ಧಿಮಾಂದತ್ವ ಬರುತ್ತದೆ.

ಹುಟ್ಟಿನಿಂದಲೂ ಬುದ್ಧಿ ಕಡಿಮೆ ಇರಬಹುದು.(ಪ್ರಾಥಮಿಕ ಬುದ್ಧಿ ಮಂದತ್ವ) ಅಥವಾ ಹುಟ್ಟಿದ ಮೇಲೆ ಕೆಲಕಾಲ ಸರಿಯಾಗಿದ್ದು, ಬಳಿಕ ಬುದ್ಧಿ ಬೆಳವಣಿಗೆ ನಿಲ್ಲಬಹುದು(ತರುವಾಯ ಬುದ್ಧಿಮಂದತ್ವ).

ಪ್ರಾಥಮಿಕ ಬುದ್ಧಿಮಂದತ್ವ: ವಿಜ್ಞಾನಿಗಳಿಗೆ ಇನ್ನೂ ಸ್ಪಷ್ಟವಾಗದ ಕಾರಣಗಳಿಂದ ಜೀನ್(ಜೀವವಾಹಿನಿ) ಅಥವಾ ಕ್ರೋಮೋಸೊಮ್(ಬಣ್ಣದಂಡ)ಗಳ ದೋಷದಿಂದ ಬುದ್ಧಿಮಂದತ್ವ ಬರಬಹುದು ಅಥವಾ ತಾಯಿ ಗರ್ಭಿಣಿಯಾಗಿದ್ದಾಗ, ಮುಖ್ಯವಾಗಿ ಮೊದಲ ಮೂರು ತಿಂಗಳ ಅವಧಿಯಲ್ಲಿ ಆಕೆಗೆ ಬರುವ ವೈರಸ್ ಖಾಯಿಲೆಗಳು, ಪೌಷ್ಠಿಕಾಂಶದ ಕೊರತೆ, ಹೊಟ್ಟೆಗೆ ಪೆಟ್ಟು ಇತ್ಯಾದಿಗಳಿಂದ ಭ್ರೂಣದ ಬೆಳವಣಿಗೆ ಅಡ್ಡಿಯಾಗಿ ಬುದ್ಧಿಮಂದತ್ವ ಬರಬಹುದು.

ತರುವಾಯದ ಬುದ್ಧಿಮಂದತ್ವ: ಜನನವಾಗುವ ಕ್ಷಣದವರೆಗೆ ಚೆನ್ನಾಗಿದ್ದು, ಮಿದುಳಿನ ಪೂರ್ಣ ಬೆಳವಣಿಗೆ ಹೊಂದಿದ ಶಿಶು, ಜನನ ಕಾಲದಲ್ಲಿ ಹೆರಿಗೆ ಕಷ್ಟವಾಗಿ ಆಘಾತಕ್ಕೀಡಾಗಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ತಾಯಿ ಮತ್ತು ಮಗುವಿನ ರಕ್ತಗಳ ತಪ್ಪು ಹೊಂದಾಣಿಕೆಯಿಂದ (ತಾಯಿ ರಕ್ತ Rhನೆಗೆಟಿವ್ ಮತ್ತು ಮಗುವಿನ ರಕ್ತ Rhಪಾಸಿಟಿವ್ ಗುಂಪಿಗೆ ಸೇರಿದ್ದರೆ) ಮಗುವಿನ ರಕ್ತಕಣಗಳು ನಾಶಹೊಂದುತ್ತವೆ. ಇದರ ಪರಿಣಾಮವಾಗಿ ಶಿಶುವಿಗೆ ಬರುವ ತೀವ್ರ ಕಾಮಾಲೆಯಿಂದ ಮಿದುಳು ಘಾಸಿಗೊಳ್ಳುತ್ತದೆ ಅಥವಾ ಆಗತಾನೆ ಜನಿಸಿದ ಶಿಶುವಿಗೆ ಬರಬಹುದಾದ ಫಿಟ್ಸ್, ವಿಪರೀತ ಭೇದಿ, ಪೌಷ್ಠಿಕಾಂಶದ ಕೊರತೆ, ಮಿದುಳು ಜ್ವರ ಇತ್ಯಾದಿಗಳಿಂದಲೂ ಬುದ್ಧಿಮಂದತ್ವ ಬರುತ್ತದೆ.

ಬುದ್ಧಿಮಂದತ್ವ ಪ್ರಮಾಣ: ಬುದ್ಧಿಮಂದತ್ವ ಅಲ್ಪ ಮಟ್ಟದ್ದಾಗಿರಬಹುದು ಅಥವಾ ತೀವ್ರ ಮಟ್ಟದ್ದಾಗಿರಬಹುದು. ಬುದ್ಧಿಪ್ರಮಾಣದ ಆಧಾರದ ಮೇಲೆ ಬುದ್ಧಿಮಾಂದ್ಯರನ್ನು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ.

1.ಅತಿ ತೀವ್ರ ಬುದ್ಧಿಮಂದತ್ವ 2. ತೀವ್ರ ಬುದ್ಧಿಮಂದತ್ವ 3. ಸಾಧಾರಣ ಬುದ್ಧಿಮಂದತ್ವ 4.ಅಲ್ಪಮಟ್ಟದ ಬುದ್ಧಿಮಂದತ್ವ.

ನಮ್ಮ ಬುದ್ಧಿ ಈಗಿರುವ ಮಟ್ಟದಲ್ಲಿರಲು ಕಾರಣವೇನು? ಕೆಲವರು ಮಾತ್ರ ಪ್ರತಿಭಾವಂತರಾಗಿ, ಉಳಿದವರು ಸಾಧಾರಣ ಬುದ್ಧಿವಂತರಾಗಲು ಕಾರಣವೇನು?

ಅನುವಂಶಿಕ ಮತ್ತು ವಾತಾವರಣಗಳ ಕೊಡುಗೆ : ಬುದ್ಧಿಶಕ್ತಿ ವಂಶ ಪಾರಂಪರ್ಯವಾಗಿ ಬರುವ ಗುಣವೇ ? ಪ್ರತಿಭಾವಂತರ ಮಕ್ಕಳು ಪ್ರತಿಭಾಶಾಲಿಗಳಾಗುತ್ತಾರೆಯೇ ? ಬುದ್ಧಿವಂತ ಮಾತಾಪಿತೃಗಳಿಗೆ ಹೆಡ್ಡ ಮಕ್ಕಳು ಹುಟ್ಟುವುದು ಅಪರೂಪವಲ್ಲ. (ಅನೇಕ 'ಪಂಡಿತ ಪುತ್ರ'ರನ್ನು ಕಾಣುತ್ತೇವೆ.) ಹಾಗೆಯೇ ಅವಿದ್ಯಾವಂತ ಸಾಧಾರಣ ಬುದ್ಧಿವಂತ ತಂದೆ-ತಾಯಿಗಳ ಮಕ್ಕಳು ದೊಡ್ಡ ವಿದ್ಯಾವಂತರಾಗಿ, ಬುದ್ಧಿ ಚತುರತೆಯಲ್ಲಿ ಪ್ರಾವೀಣ್ಯ ಗಳಿಸುವುದನ್ನೂ ನೋಡುತ್ತೇವೆ. ಹೀಗೆ ವ್ಯಕ್ತಿಯ ಪ್ರಸಕ್ತ ಬುದ್ಧಿಶಕ್ತಿಗೆ ವಂಶಿಕ ಗುಣಗಳ ಕೊಡುಗೆ ಎಷ್ಟು, ವಾತಾವರಣದ ಕೊಡುಗೆ ಎಷ್ಟು ಎಂದು ನಿಖರವಾಗಿ ಹೇಳುವುದು ಕಷ್ಟ. ಎರಡೂ ಮುಖ್ಯ ಎಂಬುದರಲ್ಲಿ ಮಾತ್ರ ಅನುಮಾನವಿಲ್ಲ.

ಸಂಸ್ಕೃತಿ, ಬುಡಕಟ್ಟುಗಳು ಬುದ್ಧಿ ಪ್ರಮಾಣವನ್ನು ನಿಯಂತ್ರಿಸುತ್ತವೆಯೇ?

ಜರ್ಮನ್ನರೇ ಅತಿ ಶ್ರೇಷ್ಠ ಹಾಗೂ ಅತಿ ಬುದ್ಧಿವಂತ ಜನ ಎಂದು ನಂಬಿ ಹಾವಳಿ ನಡೆಸಿದ ಹಿಟ್ಲರ್‌ನನ್ನು ಎಲ್ಲರೂ ಬಲ್ಲರು. ನಮ್ಮ ನೆಲದಲ್ಲೇ, ಬ್ರಿಟೀಷರು ತಾವೇ ಹೆಚ್ಚು ಬುದ್ಧಿವಂತರು, ಭಾರತೀಯರು ದಡ್ಡರು ಎಂದು ಹೇಳಿಕೊಂಡು ಮೆರೆಯಲಿಲ್ಲವೇ? ಆದರೆ ಇವೆಲ್ಲ ಮಿಥ್ಯ ಎಂಬುದನ್ನು ಕಾಲವೇ ತೋರಿಸಿಕೊಟ್ಟಿದೆ.

ಒಂದು ದೇಶದಲ್ಲಿ ರೂಪಿಸಿದ, ಬುದ್ಧಿಮಾಪನವನ್ನು ಇನ್ನೊಂದು ದೇಶದಲ್ಲಿ ಬೇರೊಂದು ಸಂಸ್ಕೃತಿಯ ಜನಗಳ ಬುದ್ಧಿಯನ್ನು ಅಳೆಯಲು ಉಪಯೋಗಿಸಿದರೆ ವಿಕೃತ ಫಲಿತಾಂಶಗಳು ಬರುವುದು ಸಹಜ.

ಬುದ್ಧಿಶಕ್ತಿ ಹೆಚ್ಚಿಸಲು ಔಷಧವಿಲ್ಲ : ಬುದ್ಧಿಮಾಂದ್ಯ ಮಕ್ಕಳ ತಂದೆ ತಾಯಿಗಳು ವೈದ್ಯರಲ್ಲಿಗೆ ಬಂದು ತಮ್ಮ ಮಕ್ಕಳ ಬುದ್ಧಿಶಕ್ತಿ ಹೆಚ್ಚಿಸಲು ಒಳ್ಳೆಯ ಔಷಧ, ಟಾನಿಕ್, ಮಾತ್ರೆ, ಇಂಜೆಕ್ಷನ್‌ಗಳನ್ನು ಕೊಡಬೇಕೆಂದು ಕೇಳುತ್ತಾರೆ. ವಿಶೇಷ ಬಗೆಯ ಚಿಕಿತ್ಸೆ ಅಥವಾ ಶಸ್ತ್ರಕ್ರಿಯೆಯಿಂದ ಬುದ್ಧಿಯನ್ನು ಹೆಚ್ಚಿಸಬಹುದೆಂದು ತಿಳಿದಿರುತ್ತಾರೆ. ಆದರೆ ಮೆದುಳು ಬೆಳವಣಿಗೆಯನ್ನು ಹೆಚ್ಚಿಸುವ, ಪೆಟ್ಟಿನಿಂದ ಹಾಳಾದ ಮೆದುಳು ಭಾಗವನ್ನು ಸರಿಪಡಿಸುವ ಅಥವಾ ಬುದ್ಧಿಶಕ್ತಿಯನ್ನು ಹೆಚ್ಚಿಸುವ ಔಷಧವಾಗಲೀ, ಚಿಕಿತ್ಸಾ ವಿಧಾನವಾಗಲಿ ಯಾವುದೂ ಸಧ್ಯಕ್ಕೆ ಇಲ್ಲ. ಪ್ರಕೃತಿ ಇತ್ತ ಬುದ್ಧಿಯನ್ನು ಉಪಯೋಗಿಸಿಕೊಂಡು, ಸೂಕ್ತ ತರಬೇತಿ, ಸತತ ಅಭ್ಯಾಸಗಳಿಂದ ವ್ಯಕ್ತಿಯ ಕಾರ್ಯಕೌಶಲ್ಯವನ್ನು ಹೆಚ್ಚಿಸಬಹುದು. ಮನಸ್ಸಿನ ಆತಂಕ, ಖಿನ್ನತೆಯಿಂದ ಅಥವಾ ಕಾಯಿಲೆಯಿಂದ ಬುದ್ಧಿಶಕ್ತಿ ಮಸುಕಾಗಿದ್ದರೆ, ಸೂಕ್ತ ಮಾನಸಿಕ ಚಿಕಿತ್ಸೆಯಿಂದ ಬುದ್ಧಿಶಕ್ತಿ ಮತ್ತೆ ಪ್ರಕಾಶಮಯವಾಗುವಂತೆ ಮಾಡಬಹುದು.

ಆದ್ದರಿಂದ ಪ್ರಕೃತಿದತ್ತ, ವಂಶಿಕವಾಗಿ ಬರುವ ಬುದ್ಧಿಬಲದ ಅಡಿಪಾಯದ ಮೇಲೆ ಒಳ್ಳೆಯ ಶಿಕ್ಷಣ, ಆರೋಗ್ಯಪೂರ್ಣ ವಾತಾವರಣ, ಪ್ರೋತ್ಸಾಹ, ಅವಕಾಶಗಳಿಂದ ಒಳ್ಳೆಯ ಕಟ್ಟಡ ಕಟ್ಟುವುದು ನಮ್ಮ ಕೈಯ್ಯಲ್ಲಿದೆ. ನಮ್ಮ ಬುದ್ಧಿಯ ಪೂರ್ಣ ಉಪಯೋಗ ಮಾಡಿಕೊಳ್ಳುವುದು ನಮ್ಮ ಹತೋಟಿಯಲ್ಲಿಯೇ ಇದೆ.

ಆಕರ ಗ್ರಂಥಗಳು

1.ಮನಸ್ಸು ಮತ್ತು ಮಾನಸಿಕ ಅಸ್ವಸ್ಥತೆ -ಡಾ.ಸಿ.ಆರ್.ಚಂದ್ರಶೇಖರ್,

ಕವನ

ಜೀವನದ ನೀತಿ ಸೂತ್ರಗಳು

ಗುಣವಿಲ್ಲದೆ ರೂಪ ವ್ಯರ್ಥ
ನಮ್ರತೆ ಇಲ್ಲದಿದ್ದರೆ ವಿದ್ಯೆ ವ್ಯರ್ಥ
ಉಪಯೋಗಿಸದಿದ್ದರೆ ಧನ ವ್ಯರ್ಥ
ಹಸಿವಿಲ್ಲದಿದ್ದರೆ ಭೋಜನ ವ್ಯರ್ಥ
ಪ್ರಜ್ಞೆ ಇಲ್ಲದಿದ್ದರೆ ಪ್ರತಿಭೆ ವ್ಯರ್ಥ
ಗುರಿಯಿಲ್ಲದಿದ್ದರೆ ಸಾಧನೆ ವ್ಯರ್ಥ
ಪರಮಾತ್ಮನ ಅರಿಯದಿದ್ದರೆ ಜೀವನವೇ ವ್ಯರ್ಥ
ಕ್ರೋಧ ಬುದ್ಧಿಯನ್ನು ತಿನ್ನುತ್ತದೆ
ಅಹಂಕಾರ ಜ್ಞಾನವನ್ನು ತಿನ್ನುತ್ತದೆ
ಪ್ರಾಯಶ್ಚಿತ ಪಾಪವನ್ನು ತಿನ್ನುತ್ತದೆ
ಮೋಹ ಮರ್ಯಾದೆಯನ್ನು ತಿನ್ನುತ್ತದೆ
ಲಂಚ ಗೌರವವನ್ನು ತಿನ್ನುತ್ತದೆ
ಚಿಂತೆ ಆಯುಷ್ಯವನ್ನು ತಿನ್ನುತ್ತದೆ

A Good Student

Always liked by teachers.
Greets every one with smile
Obedient to teacherr & parents
On time to school or college
Dresses neat & clean,
Studies with interest
Trusts everyone with repects.
Underrtand everything teachers taught.
Does daily home work
Eager to Know things.
Never Misbeha
Taks less in class .....

- written by
Bidrupane Ranju chinnu,
Kattemadu.

ಸ್ವಾಭಿಮಾನ



-ಡಾ. ಅರ್ಚನ ಸುಮನ್,
ಮೂಡಗದ್ದೆ.

ಕೊಡಗು ಜಿಲ್ಲೆಯಲ್ಲಿ ನಾವು ಬಹು ಸಂಖ್ಯಾತರಿದ್ದೇವೆ. ರಾಷ್ಟ್ರದ ವಿವಿಧ ಕ್ಷೇತ್ರಗಳಿಗೆ ನಮ್ಮ ಜನಾಂಗದ ಅಮೋಘ ಕೊಡುಗೆಯಿದೆ. ಇತರ ಜನಾಂಗದವರು ಹುಬ್ಬೇರಿಸುವಷ್ಟರ ಮಟ್ಟಿಗೆ ಗೌಡ ಸಮುದಾಯ ಸಮಾಜದಲ್ಲಿ ಗುರುತಿಸಿಕೊಂಡಿದೆ. ತನ್ನತನದ ಹಿರಿಮೆ ಬಹಳ ಆಳದಲ್ಲಿ ಬೇರೂರಿದೆ. ಆದರೂ ಏನೋ ಒಂದು ಕೊರತೆ ನಮ್ಮನ್ನು ಕಾಡುತ್ತಿದೆ. ಯಾವುದು ಈ ಕೊರತೆ? ಏಕೆ ಹೀಗಾಗುತ್ತಿದ್ದೆ? ಎಂಬ ಪ್ರಶ್ನೆ ಬಹಳಷ್ಟು ಚಿಂತನೆಗಳಿಗೆ ಗ್ರಾಸವಾಗುತ್ತಿದೆ.

ನಾವು ಏನೇ ಸಾಧನೆ ಮಾಡಿದ್ದರೂ, ಸಾಧನೆಯ ಹಿರಿಮೆಯಲ್ಲಿ ನಮ್ಮತನವನ್ನು ಅರ್ಥಮಾಡಿಕೊಳ್ಳಲು ನಾವು ವಿಫಲರಾಗಿದ್ದೇವೆ. ಪ್ರೋತ್ಸಾಹ ಸಿಗುತ್ತಿಲ್ಲವೇನೋ ಎಂಬ 'ಕೊರಗು' ಇದರ ಸಾಲಿಗೇ ಸೇರುತ್ತದೆ. ನಮ್ಮವರ ಸಾಧನೆ ನಮಗೇ ಅರ್ಥವಾಗುತ್ತಿಲ್ಲ ಎಂದಾದರೆ ಅದನ್ನು ಸ್ವಾಭಿಮಾನದ ಹಾದಿಯಲ್ಲಿ ನಮ್ಮ ಅಜ್ಞಾನ ಎನ್ನಬೇಕೆ? ಅಥವಾ ಕೊರಗು ಎನ್ನುವುದೇ ಸರಿಯೆ? ಅರ್ಥವಾಗುತ್ತಿಲ್ಲ.

ಕೊಡಗು ಜಿಲ್ಲೆಯ ಪ್ರಮುಖ ಜನಾಂಗಗಳ ಪೈಕಿ ಸಂಖ್ಯಾ ಬಲದಲ್ಲಿ ನಮಗೇ ಅಗ್ರಸ್ಥಾನ ಎಂಬುದು ಅಂಕಿ ಅಂಶಗಳಿಂದ ತಿಳಿಯುತ್ತದೆ. ಜಿಲ್ಲೆಯ ಮೂರು ತಾಲೂಕುಗಳ ಪೈಕಿ ಮಡಿಕೇರಿ ತಾಲೂಕಿನಲ್ಲಿ ನಮ್ಮವರ ಸಂಖ್ಯೆ ಹೆಚ್ಚು. ಸೋಮವಾರಪೇಟೆ ತಾಲೂಕಿನಲ್ಲಿ ಗೌಡರು ಹಾಗೂ ಲಿಂಗಾಯಿತರು ಸಮ ಸಂಖ್ಯೆಯಲ್ಲಿದ್ದಾರೆ. ವೀರಾಜಪೇಟೆ ತಾಲೂಕಿನಲ್ಲಿ ಕೊಡವರು ಹೆಚ್ಚಿನ ಸಂಖ್ಯೆಯಲ್ಲಿದ್ದು, ನಮ್ಮವರ ಸಂಖ್ಯೆ ವಿರಳ. ಒಟ್ಟಾರೆ ಜಿಲ್ಲೆಯಲ್ಲಿ ನಾವು ಬಹುಸಂಖ್ಯಾತರು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ನಮ್ಮಲ್ಲಿ ಒಗ್ಗಟ್ಟಿಲ್ಲ ಎನ್ನುವುದೂ ಅಷ್ಟೇ ಕಠೋರ ಸತ್ಯ. ಒಂದು ಗುಂಪಿನಲ್ಲಿ ನಾವು ಎಷ್ಟು ಮಂದಿ ಇದ್ದರೂ ಕೂಡ, ಒಗ್ಗಟ್ಟು ಕಾಯ್ದುಕೊಳ್ಳುವ ಗುಟ್ಟು ತಿಳಿದ ಇತರ ಜನಾಂಗದ ಕೆಲವೇ ಮಂದಿ ಬುದ್ಧಿವಂತರು ನಮ್ಮನ್ನು ಬೇರೆ ಬೇರೆ ದಿಕ್ಕುಗಳಲ್ಲಿ ಒಂಟಿ-ಒಂಟಿಯಾಗಿ ನಿಲ್ಲಿಸುವಲ್ಲಿ ಸಫಲರಾಗುತ್ತಿದ್ದಾರೆ. ಬೆರಳೆಣಿಕೆಯ ಮಂದಿ ಗುಂಪುಕೂಡಿ ನಿಂತು ಒಗ್ಗಟ್ಟು ಪ್ರದರ್ಶಿಸುತ್ತಾರೆ. ನಮ್ಮವರ ಕಡೆಗೆ ಬೆರಳು ತೋರಿಸಿ ನಗುತ್ತಾರೆ. ನಮ್ಮವರು ಒಂಟಿ ಎಂದು. ಇದು ವಿಪರ್ಯಾಸವಲ್ಲದೆ ಬೇರೇನು?

ವಿದ್ಯಾ ಕ್ಷೇತ್ರ ಇರಲಿ, ರಾಜಕೀಯ ರಂಗವೆ ಆಗಿರಲಿ, ರಾಷ್ಟ್ರದ ಗಡಿ ಕಾಯುವ ಸೇವೆಯೆ ಆಗಲಿ, ಸಾಮಾಜಿಕ ಕ್ಷೇತ್ರ, ಕಲಾ ಕ್ಷೇತ್ರ ಈ ಎಲ್ಲಾ ಕ್ಷೇತ್ರದಲ್ಲೂ ನಮ್ಮವರ ಕೊಡುಗೆ ಇದೆ. ರಾಷ್ಟ್ರಕ್ಕಾಗಿ ಆತ್ಮಾರ್ಪಣೆ, ಬಲಿದಾನ ಮಾಡಿಕೊಂಡವರೆಷ್ಟೋ. ರಾಷ್ಟ್ರಕ್ಕೆ ತಮ್ಮನ್ನು ಸಮರ್ಪಿಸಿಕೊಂಡ ದಿಗ್ಗಜರು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತ ಮಾತೆಯ ಪರಾಧೀನ ಕೈಗಳ ಬೇಡಿ ಕಳಚುವ ಮಹತ್ಕಾರ್ಯದಲ್ಲಿ ನೇಣಿಗೆ ಕೊರಳೊಡ್ಡಿದ ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡರಂತಹ ಕಲಿಗಳು ಕೂಡ ಕೊಡಗಿನ ಗೌಡ ಜನಾಂಗದಲ್ಲಿ ಕೀರ್ತಿಶೇಷರಾಗಿದ್ದಾರೆ. ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಉಗ್ರಗಾಮಿ ನಕ್ಸಲರನ್ನು ಹತ್ತಿಕ್ಕುವ ಮಹತ್ಕಾರ್ಯದಲ್ಲಿ ಚೆಟ್ಟಿಮಾನಿ ಕುಂದಚೇರಿ

ಗ್ರಾಮದ ಯುವಕ ಮುಕ್ಕಾಟಿ ಗುರುಪ್ರಸಾದ್ ವೀರ ಮರಣ ಹೊಂದಿದ್ದಾರೆ. ರಾಷ್ಟ್ರದ ಕೀರ್ತಿಯ ಹೊನ್ನ ಕಳಶಕ್ಕೆ ಮೆರಗು ನೀಡಿ ಅಸ್ತಂಗತರಾಗಿದ್ದಾರೆ.

ಶ್ರೀಮತಿ ತೆಕ್ಕಡೆ ಜಯಶೀಲರವರು ಪ್ರೌಢ ಶಾಲಾ ಶಿಕ್ಷಕಿಯಾಗಿ ಸಮಾಜದ ಗಮನ ಸೆಳೆದು, ರಾಷ್ಟ್ರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶ್ರೀ ಕುರುಂಜಿ ಗಂಗಾಧರ ಗೌಡರು ಕೂಡ ರಾಷ್ಟ್ರ ಪ್ರಶಸ್ತಿ ಪಡೆದ ಧೀಮಂತ ಶಿಕ್ಷಕರು. ಇತ್ತೀಚೆಗಷ್ಟೇ ಶ್ರೀ ಬಾರಿಯಂಡ ಜೋಯಪ್ಪನವರು ಅತ್ಯುತ್ತಮ ಆದರ್ಶ ಶಿಕ್ಷಕರೆಂಬ ಖ್ಯಾತಿಗೆ ಅರ್ಹತೆ ಪಡೆದು ರಾಜ್ಯ ಪ್ರಶಸ್ತಿ ಪುರಸ್ಕೃತರಾದರು. ದಿ. ದಂಬೆಕೋಡಿ ಚಿಣ್ಣಪ್ಪನವರು ಕರ್ನಾಟಕ ಸರ್ಕಾರದಲ್ಲಿ ಸಚಿವರಾಗಿದ್ದುಕೊಂಡು ಜಿಲ್ಲೆಗೆ ಕೀರ್ತಿ ತಂದ ಧೀಮಂತರು. ಶ್ರೀ ದೇವರಗುಂಡ ಸದಾನಂದ ಗೌಡರು ಈ ಕ್ಷೇತ್ರದ ಸಂಸದರಾಗಿ, ರಾಷ್ಟ್ರೀಯ ಪಕ್ಷವೊಂದರ ರಾಜ್ಯಾಧ್ಯಕ್ಷರಾಗಿ ಗೌಡ ಜನಾಂಗದ ಹಿರಿಮೆಯನ್ನು ರಾಷ್ಟ್ರ ಮಟ್ಟಕ್ಕೇರಿಸಿ ಕೊಡಗಿನ ಕೀರ್ತಿಗೆ ಮೆರಗು ನೀಡಿದ್ದಾರೆ. ಶ್ರೀ ಕೊಂಬಾರನ ಬೋಪಯ್ಯನವರು ಕರ್ನಾಟಕ ವಿಧಾನ ಸಭೆಯಲ್ಲಿ ಕೊಡಗಿನ ಪ್ರಪ್ರಥಮ ಉಪ ಸಭಾಪತಿಯಾಗಿದ್ದಾರೆ. ಶ್ರೀ ಕುಂಚಡ್ಕ ಉಲ್ಲಾಸ ಮತ್ತು ಶ್ರೀ ಕುಂಚಡ್ಕ ಮೋಹನ್‌ರವರು ಪೊಲೀಸ್ ಉನ್ನತಾಧಿಕಾರಿಗಳಾಗಿ ಸೇವೆ ಸಲ್ಲಿಸಿದ್ದಾರೆ. ಇತ್ತೀಚೆಗಷ್ಟೇ ಶ್ರೀಮತಿ ಕೋರನ ಸರಸ್ವತಿ ಪ್ರಕಾಶ್‌ರವರು ಗೌಡ ಜನಾಂಗದ ಬಗ್ಗೆ ಮಹಾ ಪ್ರಬಂಧವೊಂದನ್ನು ಬರೆದು, ಡಾಕ್ಟರೇಟ್ ಪದವಿಯನ್ನು ಮುಡಿಗೇರಿಸಿಕೊಂಡಿದ್ದಾರೆ. ಕೆದಂಬಾಡಿ ರಕ್ಷಿತ್ ಅವರು ಕೂಡ ಮಹಾ ಪ್ರಬಂಧವೊಂದನ್ನು ಬರೆದು ಡಾಕ್ಟರೇಟ್ ಪದವಿ ಗಳಿಸುವ ಮೂಲಕ ಜನಾಂಗಕ್ಕೆ ಕೀರ್ತಿ ತಂದಿದ್ದಾರೆ. ಕ್ರೀಡಾ ಕ್ಷೇತ್ರದಲ್ಲಿ ಶ್ರೀ ಹೊಸೂರು ಸೀತಾರಾಮ್, ಹೊಸೊಕ್ಲು ಚಿಣ್ಣಪ್ಪ ಶ್ರೀ ಬೆಪ್ಪುರನ ಅಣ್ಣಪ್ಪ, ಕು. ಕೊಟ್ಟಕೇರಿಯನ ವರ್ಷಾ ಶುಭಕರ್ ಮುಂತಾದವರು ಅಂತಾರಾಷ್ಟ್ರೀಮಟ್ಟದಲ್ಲಿ ಮಿಂಚಿದ್ದಾರೆ. ಶ್ರೀ ನಂಜಯ್ಯನ ದೇವಿಪ್ರಸಾದ್‌ರವರು ಉತ್ತಮ ಚಿಂತಕರೂ, ಲೇಖಕರೂ ಆಗಿದ್ದು, ಚಲನಚಿತ್ರ ನಿರ್ದೇಶಕರಾಗಿ ಖ್ಯಾತಿ ಗಳಿಸಿದ್ದಾರೆ. ಚೆರಿಯಮನೆ ನಿರಂಜನ್ ಅವರು ಇತ್ತೀಚೆಗಷ್ಟೇ ಭಾರತೀಯ ಆಡಳಿತ ಸೇವೆ (ಐಎಎಸ್) ಯಲ್ಲಿ ಅಧಿಕಾರಿಯೆಂಬ ಹೆಗ್ಗಳಿಕೆಗೆ ಪಾತ್ರ.

ಹೀಗೆ ಹಲವಷ್ಟು ಮಂದಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆಗೈದು ಜನಾಂಗದ ಸ್ವಾಭಿಮಾನಕ್ಕೆ ಗರಿಮೂಡಿಸಿ ಕೀರ್ತಿ ತಂದವರಿದ್ದಾರೆ. ನಾವು ದುರುಭಿಮಾನಿಗಳಲ್ಲ, ಅದರ ಅವಶ್ಯಕತೆಯೂ ನಮಗಿಲ್ಲ. ಆದರೆ ಸ್ವಾಭಿಮಾನ ಶೂನ್ಯರಾಗುವುದು ಸರಿಯಲ್ಲ. ನಾವು ಉಳಿದವರಿಗೆ ಮಾದರಿಯಾಗಿ ಬೆಳೆಯಬೇಕು. ಈ ದಿಸೆಯಲ್ಲಿ ನಮ್ಮ ಸಮಾಜದ ಯುವ ಪೀಳಿಗೆಗೆ ಗುರು-ಹಿರಿಯರ ಸಮಯೋಚಿತ ಸಲಹೆ, ಸೂಚನೆ, ಉತ್ತೇಜನ ಇವುಗಳ ಅವಶ್ಯಕತೆಯಿದೆ. ಈ ಮೂಲಕ ಯುವ ಜನಾಂಗದಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರತಂದು ಸಮಾಜದ ಉದ್ಧಾರಕ್ಕೆ ಅಭಿವೃದ್ಧಿಗೆ ಬಳಕೆಯಾಗುವಂತೆ ಮಾಡಿದಲ್ಲಿ ನಮಗೇ ತಿಳಿಯದಂತೆ ನಮ್ಮನ್ನು ಕಾಡುತ್ತಿರುವ ಸ್ವಾಭಿಮಾನದ ಕೊರತೆಯನ್ನು ದೂರಮಾಡಬಹುದು. ನಮ್ಮತನವನ್ನು ಕಾಯ್ದುಕೊಳ್ಳಬಹುದು. ಕತ್ತಲೆಯಿಂದ ಬೆಳಕಿನತ್ತ ನಮ್ಮ ಬದುಕು ಸಾಗಲಿ, ಜನಾಂಗದ ಕೀರ್ತಿ ಅಜರಾಮರವಾಗಲಿ.

ತಮಸೋಮ-ಜ್ಯೋತಿರ್ಗಮಯ

◆◆◆◆◆

‘ಜಾಗತೀಕರಣದ ಬಿರುನಡಿಗೆಲಿ ಸಂಸ್ಕೃತಿಗೆ ಎಡೆಯೆಲ್ಲಿ’?



-ಪಟ್ಟಡ ಶಿವಕುಮಾರ್,
ಮದೆನಾಡು.

ಅದೊಂದು ಕಾಲ ಇತ್ತ್. ಸುತ್ತಮುತ್ತ ಎಲ್ಲಾ ಇದ್ದೊ. ಅಪ್ಪ, ಅಮ್ಮ, ಪೊಪ್ಪ, ಚಾಚ, ಚಿಕ್ಕಪ್ಪ, ಸಣ್ಣಪ್ಪ, ದೊಡ್ಡಪ್ಪ, ಕುಂಞವ್ವ, ಸಣ್ಣವ್ವ, ದೊಡ್ಡವ್ವ, ಚಾಂಪ, ಚಾಮೆವ್ವ, ಅತ್ತೆ ಮಾವ ..... ಹಿಂಗೇ ಪಟ್ಟಿ ಬೆಳೀತಾ ಹೋಗ್ತಿತ್ತ್. ಆದರೆ ಇಂದ್ ಎಲ್ಲಾ ಮಾಯ! ಇರೋವು ನಾಕೇ ಜನ ಮಮ್ಮಿ, ಡ್ಯಾಡಿ, ಅಂಕಲ್, ಆಂಟಿ!

ಹೌದು , ಕಾಲ ಬದ್‌ಲಾಗ್ತಾ ಇದ್ದಂಗೆ ಕೋಲನೂ ಬದಲಾಗ್ತಾ ಉಟ್ಟು. ಈ' ಉದಾರೀಕರಣ, ಖಾಸಗೀಕರಣ, ಜಾಗತೀಕರಣ ' ಬಂದ್ ಬುಡ್ತ್ ನೋಡಿ, ಇಡೀ ಪರ್‌ಪಂಚನೇ ಹತ್ರ ಬಂದ್ ಬುಡ್ತ್. ಹಿಂದೆಲ್ಲ, ಆರ್ಮಿಗೆ ಸೇರಿ ಜಮ್ಮುಕಾಶ್ಮೀರಕ್ಕೋ, ಅಸ್ಸಾಂಗೋ ಹೋಗಿ ಬಂದರೆ ಸಾಕ್, ಅವುಕೆ ಅರೆಭಾಷೆ ಬಾಕೇಲೇ. ಕೈ ಭಾಷೆ ಕೂಡ ಹಿಂದಿಲೇ. ಆದರೆ ಈಗ ಅಮೇರಿಕಕ್ಕೋ, ಇಂಗ್ಲೆಂಡ್‌ಗೋ, ಇಲ್ಲೆ ದುಬೈಗೋ, ಹೋಗಿ ಬಂದರೂ ಅದ್ ದೊಡ್ಡ ವಿಷ್ಯನೇ ಅಲ್ಲ. ಯಾಕೆತೇಳ್ರೆ ಇಂದ್ ಇಡೀ ಪ್ರಪಂಚನೇ ನಮ್ಮ ಕೋಂಬರೆ ಒಳಗೆ ಬಂದಂಗೆ ಆವುಟು. ಇಲ್ಲಿ ಕುದ್ದ್‌ಕಂಡ್ ಬ್ಯಾರೆ ಬ್ಯಾರೆ ದೇಶಗಳ ಉದ್ಯಮಗಳ ಕೆಲ್ಸ ಮುಗ್ಸಿಕೊಟ್ಟವೆಲ್ಲಾ? ಹಂಗಿರ್‌ಕಾಕನ ದೇಶಗಳ ಮಧ್ಯೆ ಸಂಸ್ಕೃತಿಗಳ ಮಧ್ಯೆ, ಭಾಷೆಗಳ ಮಧ್ಯೆ ಯಾವುದೇ ಗಡಿ ಉಟ್ಟಾ? ದೇಶಗ ಹೋಗಲಿ ಚಂದ್ರಲೋಕಲೋ, ಮಂಗಳ ಲೋಕಲೋ ಸೈಟ್ ಬುಕ್ ಮಾಡ್ವ ಕಾಲ ಬಂದಾಗುಟು!

ಇಂತ ಹೊತ್ತ್‌ಲಿ, ಇದ್ ನಮ್ಮ ಭಾಷೆ, ಇದ್ ನಮ್ಮ ಸಂಸ್ಕೃತಿ ಇಂವ ನಮ್ಮ ನೆಂಟ, ಇದ್ ನಮ್ಮ ಹಬ್ಬ ಹಿಂಗೆಲ್ಲಾ ಹೇಳ್ತಾ ಇದ್ದರೆ ಅದರ್ನ ಕೇಳ್ವ ಪುರ್ಸೊತ್ತು ಯಾರಿಗುಟ್ಟು ಹೇಳಿ? ಇಂಟರ್‌ನೆಟ್‌ಲೇ ಭೇಟಿಯಾಗಿ, ಅಲ್ಲೇ ಫ್ರೆಂಡ್ಸ್ ಆಗಿ, ಫ್ರೆಂಡ್‌ಶಿಪ್ ಪ್ರೇಮಕ್ಕೆ ತಿರ್‍ಗಿ, ಅಲ್ಲೆಮೊದುವೆ ಮಾಡಿಕಂಬ ಕಾಲ ಬಂದಿರ್‌ಕಾಕನ ನಮ್ಮ ಜಾತಿಲೇ ಮೊದುವೆ ಆಕುತ ಅಪ್ಪ, ಅಮ್ಮ, ಹುಡ್ಕೇಂಡ್ ಇದ್ದರೆ, ಅವರ ಸ್ಥಿತಿಗೆ ಮರ್‍ಗೋಕ? ನಗಾಡೋಕ? ಹಾಂ!, ಅಂದಂಗೆ ಇನ್ನೊಂದು ವಿಷ್ಯಗೊತ್ತಾ? ವಿಜ್ಞಾನಿಗ ಈಗ ಕ್ಲೋನಿಂಗ್ ಮಾಡಿ ಸತ್ತವರ್ನ ಪುನಃ ಅದೇ ರೂಪಲಿ ಹುಟ್ಸುವ ಪ್ರಯೋಗಲಿ ಗೆದ್ದ್‌ಬುಟ್ಟೋಳಗಡ! ಇನ್ನ್ ಕೇಳೋಕಾ? ಅಲ್ಲಾ, ಇಂದೋ ನಾಳೆಯೋ ಸಾಯೋ ಮನ್ಸಾನ ಆಟನೇ ತಡ್ಕಂಬಕೆ ಆದುಲೆ, ಇನ್ನ್ ಪುನಃ ಹುಟ್ಟಿಬಾಕೆ ಅವಕಾಶ ಇದ್ದರೆ ಹೆಂಗಿರ್‍ದು?

ಹೆಂಗಾದರೂ ಪರೊಯಿಲ್ಲೆ, ದುಡ್ಡು, ಆಸ್ತಿ ಸಂಪಾದನೆ ಮಾಡೋಕುತೇಳ್ದೇ ಇಂದ್ ಎಲ್ಲರ ಗುರಿ. ಆ ರಭಸಲಿ ಅಂವ ನಮ್ಮವ, ಇಂವ ನಮ್ಮವ ತೇಳ್ವ ಭಾವನೆಯಿಲ್ಲೆ. ಅಂವ ಯಾರಂವ, ನಂಗೋತ್ತೇಲೆ ತೇಳಿ, ಎಲ್ಲರ್ನೂ ದೂರ ಮಾಡಿಕಂಡ್, ಒಂಟೊಂಟಿಯಾಗೇ ಮುನ್ನುಗ್ಗುತ್ತೊಳೊ. ಆದರೆ ಅವರ ಮೊಖಲಿ ಹಞಾರ್ ಜೀವಕಳೆ ಉಟ್ಟಾ? ಒಮ್ಮೆ ನೋಡಿ, ಅವುಕೂ, ಮೆಷಿನ್‌ಗೂ ಏನಾರ್ ವ್ಯತ್ಯಾಸ ಉಟ್ಟಾತ? ಒಂದಂತೂ ತಿಳ್ಕಣಕು, ದುಡ್ಡು ಮತ್ತೆ ಆಸ್ತಿ ಯಾಗೋಳು ಮೊನುಷನೊಟ್ಟಿಗೆ ಶಾಶ್ವತಾಗಿ ಇರ್‍ದುಲೆ, ಅದ್ ಮೊನುಷಂಗೆ ಒಳ್ಳೆದೂ ಮಾಡ್ದುಲೆ. ಆದರೆ ಅವನಲ್ಲಿರುವ ಸಂಸ್ಕೃತಿ, ಮೊನುಷತ್ವ ಉಟ್ಟಲೆ, ಅದ್ ಮಾತ್ರ ಶಾಶ್ವತವಾಗಿದ್ದದೆ.

ಬೊದ್‌ರ್‌ಕಾಕನ ಅಂವ ಮಾಡ್ದ ಒಳ್ಳೆಕೆಲ್ಸ, ಬಾಕಿದ್ದವುಕೆ ಮಾಡ್ದ ಉಪಕಾರ, ಅಂವ ಹ್ವಾದ ಮೇಲೂ ಅಂವನ ಹೆಸ್ರ್ ಹೇಳಿಕೆ ಉಳ್ಕಂಡಿದ್ದದೆ. ಮೊನ್ನೆ, ಮೊನ್ನೆ ನೋಡಿ, ಅಮೇರಿಕಲಿ ಕಂಪನಿಯೊಂದು ಮುಚ್ಚಿ ಹೋದಕೆ, ಭಾರತಲಿ ಷೇರ್ ಮಾರ್ಕೆಟ್ ಕಮ್‌ಚಿ ಮಲ್ಗಿ ಬುಟ್ಟತ್ತಲ್ಲ. ಅದರ್ಲಿ ದುಡ್ಡ್ ಸೊರ್ಗಿದವು ಪಕ ಪಕತ ಪೆಕರಗಳಂಗೆ ಮೊಕ ಪೂಜಿಕಂಡೊ. ಐಟಿ, ಬಿಟಿ ತೇಳಿಕಂಡ್ ಫಾರಿನ್ ಕಂಪನಿಗಳ್‌ಲಿ ಕೆಲ್ಸಕೆ ಸೇರ್ದವು ಬಾಲ ಸುಟ್ಟ ಕೊತ್ತಿನಂಗಾದೊ. ದುಡ್ಡ್‌ನ ಹಿಂದೆ ಓಡುವರ ಸ್ಥಿತಿ, ಇದ್‌ಕ್ಕಿಂತ ಇನ್ನಂಗೆ ಆಕೆ ಸಾಧ್ಯ ಹೇಳಿ?

ಪಂಡ್‌ಲಿ ಕೂಸ್ ತೊಟ್ಲಲಿರ್‌ಕಾಕನೇ ಮೊದುವೆ ಮಾಡ್ತಿದ್ದೊಗಡ. ಮತ್ತೆ ಆ ಪದ್ಧತಿ ನಿತ್ತರೂ ಅಪ್ಪ ಅವ್ವ ಗೂಡೆ ನೋಡಿ ಹೈದಂಗೆ ಮೊದುವೆ ಮಾಡ್ತಿದ್ದೊ, ಮೊದುವೆಗೆ ಮುಂದೆ ಹೈದ -ಗೂಡೆ ಕಂಡ್ ಕಂಬಕೇ ಇತ್ಲೆ. ಆದರೂ ದಾಂಪತ್ಯ ಬೊದುಕು ಎಷ್ಟ್ ಲಾಯಕಿರ್ತಿತ್. ಆದರೆ ಇಂದ್ ಮೊದುವೆಗೆ ಮುಂದೇ 'ಲವ್'; ಸುತ್ತಾಟ, ಎಲ್ಲಾ ಆಗಿ ಒಬ್ಬಂದೊಬ್ಬ ಒಪ್ಪಿಕಂಡ್ ಮೊದುವೆ ಆದರೂ ದಾಂಪತ್ಯ ಬೊದುಕು ಮುರ್ದ್ ಹೋಕ್ತಾ ಉಟ್ಟಲ್ಲಾ. ಯಾಕೆ ಹೇಳಿ? ಹಿಂದೆ ಕೂಡ್‌ಕುಟುಂಬ ಇರ್‌ಕಾಕನ, ಸಮಸ್ಯೆಗಳ್ನ ಇನ್ನೊಬ್ಬರತ್ರ ಹೇಳಿಕಣಿಕೆ, ಬಗೆ ಹರ್ಸಿಕಣಿಕೆ ಅವಕಾಶ ಇತ್. ಕಷ್ಟಗಳ್ನ ಕೂಡಿ ಎದ್‌ರಿಸ್ತಾ ಇದ್ದೊ. ಆದರೆ ಇಂದ್ ಹಂಗಲ್ಲ, ಕೂಡಿ ಬಾಳ್ವ ಕಾಲ ಹೋಬ್‌ಡ್ತ್, ಒಂಟಿ ಬೊದುಕಲಿ ಸಮಸ್ಯೆಗಳ್ನ ಹೇಳಿಕಂಬಕೆ ಆಗದೆ, ಬುಡ್ಸಿಕೂ ಆಗದೆ ನರಳ್ತಾ ಇದ್ದವೆ. ಸಂಸ್ಕೃತಿ ಅಭಿರುಚಿ ಬ್ಯಾರೆ ಬ್ಯಾರೆ ಆಗಿದ್ದರಂತೂ ಅವರ ಸ್ಥಿತಿ ಮರಂದ ಬಿದ್ದ ಕಪಿನಂಗಾಗೋದೆ.

ಅಂದ್ ಹಳ್ಳಿಗಳ್‌ಲಿ ಜನ ಕೂಡಾಡಿ ಕೆಲ್ಸ ಮಾಡ್ತಿದ್ದೊ. ಕೂಡು ಬ್ಯಾಟೆ ಆಡ್ತಿದ್ದೊ. ಹಬ್ಬ ಹರಿದಿನ ತೇಳ್ರೆ ತಿಂಗಳ ಮೊದ್ಲೇ ರೆಡಿಯಾಗ್ತಿದ್ದೊ. ಆದರೆ ಈಗ ಅದೆಲ್ಲ ಇತಿಹಾಸ ಸೇರೋತ್. ಮೊನುಷನ ಬದ್‌ಕ್ ಯಾಂತ್ರಿಕ ಆಗೋತ್. ತರ, ತರ ತಿಂಡಿ ಮಾಡ್ವ, ಮೊಮ್ಮಕ್ಕಳಿಗೆ ಕಥೆ ಹೇಳ್ವ, ಅಜ್ಜಿಗ ಅನಾಥಾಶ್ರಮ ಸೇರುವ ಸ್ಥಿತಿ ಬರ್ತಾ ಉಟ್ಟು. ಜನ ಕೂಡಿ ಮಾಡ್ವ ಕೆಲ್ಸಗಳ್ನ ಈಗ ಯಂತ್ರಗಳೇ ಮಾಡಿ ಮುಗ್ಸ್‌ತೊಳೊ, ಜನ್ರ ಕೆಲ್ಸ ಸುಲಭ ಆವುಟು, ಭತ್ತ ಕುಟ್ಟಿಕ್ಕಿಲ್ಲೆ, ಅಕ್ಕಿ ಬೀಸಿಕಿಲ್ಲೆ, ಮಸಾಲೆ ಕಡೆಕಿಲ್ಲೆ. ಹಂಗಾಗಿ ಜನಪದ ಸಾಹಿತ್ಯ ಹುಟ್ಟಿಕಿಲ್ಲೆ. ಹಿಂದೆಲ್ಲ ಇಸ್ಕೂಲ್ ಇಲ್ಲದಿರ್‌ಕಾಕನ ಗುರುಗಳ್ನ ಹುಡ್ಕಿಕಂಡ್ ಹೋಗಿ, ಗುರುಕುಲಲಿ ಗುರಗಳ ಸೇವೆ ಮಾಡಿಕಂಡ್, ವಿದ್ಯೆಕಲ್ತ್, ಗುರುದಕ್ಷಿಣೆ ಕೊಟ್ಟ್, ಆಶೀರ್ವಾದ ಪಡ್ದ್, ಪರಿಪೂರ್ಣತೆ ಪಡ್ದ್ ವ್ಯಕ್ತಿಯಾಗಿ ಒಬ್ಬ ಹೊರಗೆ ಬಂದರೆ, ಸಮಾಜಲಿ ಅಂವ ಎಲ್ಲನ್ರೂ ಗೌರವಿಸ್ತಿತ್, ಅಂವಂಗೂ ಗೌರವ ಇತ್. ಆದರೆ ಇಂದ್ ಗುರುಗಳೇ ವಿದ್ಯಾರ್ಥಿಗಳ್ನ ಹುಡ್ಕಿಕಂಡ್ ಹೋಗಿ, ವಿದ್ಯಾರ್ಥಿಗೇ ಗೌರವ, ಬಿಸಿಯೂಟ ಕೊಟ್ಟ್, ಪಾಠ ಹೇಳಕು. ಮನೆ ಬಾಗಿಲಿಗೆ ಶಿಕ್ಷಣ ಬಂದುಟು. ಎಲ್ಲವೂ ಅಕ್ಷರಸ್ಥರಾಗ್ತೊಳೊ. ಆದರೆ ಪರಸ್ಪರ ಗೌರವಿಸುವ ಮಾನವೀಯ ಮೊಖ ಎಲ್ಲೋ ಕಳ್ದ್ ಹೋದಂಗೆ ನೀವ್‌ಗೆ ಅನಿಸ್ತಿಲ್ಲೆಯಾ?

ಹೌದು, ನಾವಿಂದ್ ಬಾಳಷ್ಟ್ ಪ್ರಗತಿ ಸಾಧಿಸಿ ಬುಟ್ಟೊಳೊ. ಹಂಗಾಗಿ ಪಂಡ್‌ಗೆ ಹೋಲಿಸಿಕಂಡಿದ್ದರೆ ಮುಂದ್‌ವರೆಕಾಕಿಲೆ. ಆದರೆ ಮಹಾತ್ಮಾಗಾಂಧೀಜಿ ಹೇಳ್ದ ಒಂದ್ ಮಾತ್ ಗ್ಯಾನ ಮಾಡಿಕಣಕು.ಎಲ್ಲಿವರ್ಗೆ ಯಂತ್ರಗ ನಮ್ಮ ಗುಲಾಮರಾಗಿದ್ದವೆ, ಅಲ್ಲಿಯವರೆಗೆ ಮಾತ್ರ ಅವುಗಳ್ನ ಬಳ್ಸಕು, ಆದರೆ ನಾವೇ ಯಂತ್ರಗಳ ಗುಲಾಮರಾಕಾಗದ್. ಆದರೆ ಇಂದ್ ಏನಾಗುಟು? ಪ್ರಗತಿ ಹೆಸ್ರ್‌ಲಿ ನಾವೆಷ್ಟ್ ಚುರ್ಕ್‌ಲಿ ಓಡ್ತಾ ಒಳೊತೇಳ್ರೆ, ತಿರ್‌ಗಿ ಬಾಕೆ ಬೊತ್ತದಷ್ಟ್! ಒಂದ್ ತಿಂಗಳ ಪೂರ್ಕ ಜಗತ್ತಿಗೆ ಕರೆಂಟ್ ಬಾರದೇ ಇದ್ದರೆ, ಕಂಪ್ಯೂಟರ್‌ಗ ಕೆಲ್ಸ ಮಾಡದೇ ಇದ್ದರೆ, ಮೊಬೈಲ್ ಸೇವೆ ಜಾಮ್ ಆದರೆ, ಮತ್ತೆ ಈ ಪ್ರಪಂಚನ ಸೆರಿ ಮಾಡಿಕೆ ಆಕೇಲೆ, ಎಷ್ಟೇ ಆದರೂ ಕರೆಂಟ್ ಯಾಗ ಹೋದೆ? ಯಾಂತ್ರಿಕ ಬೊದುಕು ಯಾಗ ನಿತ್‌ಹೋದೆತ ಹೇಳಿಕೆ ಆದುಲೆ. ಸಂಸ್ಕೃತಿ ಮಾತ್ರ ಮೊನುಷನ ಸೊಲ್ಪ ಕಾಲ ಆದರೂ ಸಂಸ್ಕಾರಲಿ ಮುನ್ನಡ್ಸಿದೆ. ಹಂಗಾಗಿ ಜಾತಿ, ಧರ್ಮಗಳ ಸಂಕಲೆ ಬ್ಯಾಡ, ಆದರೆ ಮಾನವೀಯ ಮೌಲ್ಯಗಳ್ನ ಮೈತಳೆದ್ ಕಂಡಿರುವ ಸಂಸ್ಕೃತಿನ ಉಳ್ಸಿಕಂಡ್ ಪೋಯಿ.

ಶಿಕ್ಷಣ ವ್ಯವಸ್ಥೆ ಹಾದಿ ತಪ್ಪದಿರಲಿ



-ಶ್ರೀಮತಿ ಅಮೆ ಚಂದ್ರಮ್ಮ ಪಾಲಾಕ್ಷ,
ಮಡಿಕೇರಿ.

ದೇಶವನ್ನು ಕಾಯುತಿಹರು ಗಡಿಗಳಲ್ಲಿ ಯೋಧರು, ನಮಗೆ ಅನ್ನ ನೀಡಲು ದುಡಿಯುತಿಹರು ರೈತರು. ಇದು ಹಳೆಯ ಚಿತ್ರ ಗೀತೆಯ ಎರಡು ಸಾಲುಗಳು. ಕೇವಲ ಈ ಎರಡು ಸಾಲುಗಳು ಎಷ್ಟು ಅರ್ಥಗರ್ಭಿತವಾಗಿದೆ ಎಂದು ಆಲೋಚಿಸುವ ವ್ಯಕ್ತಿಯನ್ನು ಚಿಂತನಾ ಲೋಕಕ್ಕೆ ಎಳೆದೊಯ್ಯುತ್ತವೆ ಈ ವಾಕ್ಯಗಳು. ರೈತ-ಯೋಧ -ಕಲಿಗಳ ಶಿಲ್ಪಿಗಳೇ ಶಿಕ್ಷಕರು'ಎಂಬ ಒಂದು ಸಾಲು ಕೂಡ ಈ ಗೀತೆಯ ಸಾಲಿನಲ್ಲಿ ಸೇರ್ಪಡೆಗೊಂಡಿದ್ದರೆ ಗೀತೆಯ ಸೊಗಸು ಹೆಚ್ಚುತಿತ್ತು ಎನ್ನುವದಕ್ಕಿಂತಲೂ ಹೆಚ್ಚು ಅರ್ಥಪೂರ್ಣ ಎನಿಸುತ್ತಿತ್ತು.

ರಾಷ್ಟ್ರ ಸೇವೆ ಎಂದರೆ ದೇಶದ ಗಡಿ ಭಾಗದಲ್ಲಿ ಶತ್ರು ರಾಷ್ಟ್ರಗಳಿಂದ ನಮ್ಮ ದೇಶವನ್ನು ರಕ್ಷಿಸುವ ಕಾರ್ಯ ಮಾತ್ರ ಎಂಬ ಪ್ರಜ್ಞೆ ಈಗಲೂ ಬಹುತೇಕ ಜನರಲ್ಲಿದೆ. ಪ್ರಪಂಚವೇ ಇಂದು ಕ್ಷಿಪ್ರಗತಿಯಲ್ಲಿ ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಅಭಿವೃದ್ಧಿ ಸಾಧಿಸುತ್ತಿರುವ ಅಗ್ರರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ದೇಶ ಕೂಡ ಸ್ಥಾನ ಪಡೆದಿದೆ ಎಂಬುದು ಹೆಮ್ಮೆಯ ವಿಚಾರ, ಅದು ಭಾರತೀಯರ ಸ್ವಾಭಿಮಾನದ ಪ್ರತೀಕ ಕೂಡ.

ದೇಶದ ಪ್ರತಿಯೊಬ್ಬ ಪ್ರಜೆ ತನ್ನ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದರೆ ಸಾಕು. ನಿಸ್ಸಂಶಯವಾಗಿ ಅದು ರಾಷ್ಟ್ರ ಸೇವೆ ಎನಿಸುತ್ತದೆ. ರೈತನೇ ಇರಲಿ, ಯೋಧನೆ ಆಗಲಿ, ವೈದ್ಯ, ಶಿಕ್ಷಕ, ಮಾಲಿ, ಗುಮಾಸ್ತ, ಎಂಜಿನಿಯರ್, ಅಧಿಕಾರಿಗಳು, ವ್ಯಾಪಾರಿಗಳು, ಬ್ಯಾಂಕುಗಳು, ಕಾರ್ಖಾನೆಗಳು ಪ್ರತಿಯೊಂದು ವೃತ್ತಿಯೂ ದೇಶದ ಅಭಿವೃದ್ಧಿಯಲ್ಲಿ ತನ್ನದೇ ಆದ ಅಮೋಘ ಪಾತ್ರ ವಹಿಸುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಒಂದು ಸೂಕ್ಷ್ಮ ವಿಚಾರವಿದೆ. ಸಮಾಜದ ವಿವಿಧ ಸ್ತರಗಳಲ್ಲಿ ದುಡಿಯುವ ಕರ್ಮ ಜೀವಿಗಳ ನಿರ್ಮಾತೃಗಳು ಯಾರು? ಅವರೇ ಶಿಕ್ಷಕರು. ಹಾಗಾದರೆ ಶಿಕ್ಷಕರ ನಿರ್ಮಾತೃಗಳು ಯಾರು? ಅವರು ಕೂಡ ಶಿಕ್ಷಕರೇ.

ಶಿಕ್ಷಣ ಮಟ್ಟವನ್ನು ಉತ್ತಮ ಪಡಿಸುವ ದಿಸೆಯಲ್ಲಿ, ಶಿಕ್ಷಣ ತಜ್ಞರ ಅಭಿಪ್ರಾಯ, ಸಲಹೆಗಳ ಪ್ರಕಾರ ಶಿಕ್ಷಣ ವ್ಯವಸ್ಥೆಯಲ್ಲಿಆಗಾಗ ಮಾರ್ಪಾಡುಗಳು ಆಗುತ್ತಿರುತ್ತವೆ. ಇದು ಸ್ವಾಗತಾರ್ಹ ವಿಚಾರ. ದೇಶದ ಅಭಿವೃದ್ಧಿಯನ್ನು ಗಮನದಲ್ಲಿರಿಸಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಈ ಮಾರ್ಪಾಡುಗಳು ಅತೀ ಅವಶ್ಯಕ. ಸಂಬಂಧಿಸಿದಂತೆ ಶಿಕ್ಷಕರಿಗೆ ತರಬೇತಿಗಳನ್ನು ಕೂಡ ನೀಡಲಾಗುತ್ತದೆ.

ಆದರೆ ಇಲ್ಲಿ ಗಮನಿಸಬೇಕಾದ ಪ್ರಮುಖ ವಿಚಾರವೆಂದರೆ ಶಿಕ್ಷಕರನ್ನು ಶಿಕ್ಷಣಕ್ಕೆ ಸಂಬಂಧಿಸಿದ ವಿಚಾರಕ್ಕೆ ಮಾತ್ರ ಬಳಸಿಕೊಳ್ಳಲಾಗುತ್ತಿದೆಯೇ? ಇಲ್ಲ. ಈ ಕ್ಷೇತ್ರಕ್ಕೆ ಹೊರತಾದ ಕಾರ್ಯಗಳಿಗೆ ಕೂಡ ಬಳಸಿಕೊಳ್ಳಲಾಗುತ್ತಿದೆ. ಪ್ರಾಥಮಿಕ ಶಾಲಾ ಶಿಕ್ಷಕರ ಬವಣೆ ಇನ್ನೂ ಇದೆ. ಶಿಕ್ಷಣದ ಹಲವಾರು ಪ್ರಬೇಧಗಳು, 'ಮರಳಿ ಶಾಲೆಗೆ''ಚಿಣ್ಣರ ಅಂಗಳ' ಇತ್ಯಾದಿ. ತಮ್ಮ ಪಾಲಿನ ವಿದ್ಯಾರ್ಥಿಗಳ ಭವಿಷ್ಯದ ಹೊಣೆ ಹೊತ್ತ ಶಿಕ್ಷಕ ವೃಂದದ ದೃಢತೆ ಚಂಚಲತೆಗೊಳ್ಳಲು ಈ ವ್ಯವಸ್ಥೆಗಳು ಹಾದಿ ಮಾಡುತ್ತವೆ. ಸಾಲದೆಂಬಂತೆ 'ಅಕ್ಷರ ದಾಸೋಹ' ವ್ಯವಸ್ಥೆ. ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಈ 'ಅಕ್ಷರ ದಾಸೋಹ' ವ್ಯವಸ್ಥೆ ತೀರಾ ಅವಶ್ಯಕ. ಆದರೆ ಇದರ ನಿರ್ವಹಣೆಗೆ ಪ್ರಾಥಮಿಕ ಶಾಲಾ ಶಿಕ್ಷಕರುಗಳನ್ನು ಬಳಸಿಕೊಳ್ಳುತ್ತಿರುವ ಆಡಳಿತ ವ್ಯವಸ್ಥೆ ಮಾತ್ರ ಸರಿಯಲ್ಲ.

ಪ್ರೌಢ ಶಾಲೆಗಳಲ್ಲಿ ಹಾಗೂ ಕಾಲೇಜುಗಳಲ್ಲಿ ಆಡಳಿತಾತ್ಮಕ ಕೆಲಸ ಕಾರ್ಯಗಳಿಗೆ ಗುಮಾಸ್ತರು ಹಾಗೂ ಜವಾನರ ಹುದ್ದೆಗಳಿವೆ. ಆದರೆ ಪ್ರಾಥಮಿಕ ಶಾಲೆಗಳಲ್ಲಿ ಈ ವ್ಯವಸ್ಥೆಗೂ ಕತ್ತರಿ.

ಆದರೆ ಬೋಧನಾ ಕಾರ್ಯದ ಜೊತೆಗೆ ಈ ರೀತಿಯ ಬೋಧನೇತರ ಕೆಲಸಗಳ ಅಧಿಕ ಒತ್ತಡದಿಂದಾಗಿ ವಿದ್ಯಾರ್ಥಿಗಳ ಪಾಠ-ಪ್ರವಚನಗಳತ್ತ ಗಮನ ಹರಿಸುವದು ಶಿಕ್ಷಕರಿಗೆ ತ್ರಾಸವೆನಿಸುತ್ತದೆ. ವಿಪರ್ಯಾಸವೆಂದರೆ ಪ್ರಾಥಮಿಕ ಶಾಲೆಗಳಲ್ಲಿ ತರಗತಿಗೊಬ್ಬ ಶಿಕ್ಷಕರ ವ್ಯವಸ್ಥೆಯಿಲ್ಲ. ಬದಲಾಗಿ ಇಂತಿಷ್ಟು ವಿದ್ಯಾರ್ಥಿಗಳಿಗೆ ಇಂತಿಷ್ಟು ಶಿಕ್ಷಕರ ಎಂಬ ತಾರತಮ್ಯ ನೀತಿ. ನಗರ ಪ್ರದೇಶಗಳಲ್ಲಿ ಪ್ರತಿಯೊಂದು ತರಗತಿಯಲ್ಲಿಯೂ ಹೆಚ್ಚು ವಿದ್ಯಾರ್ಥಿಗಳಿರುತ್ತಾರೆ. ಶಿಕ್ಷಕರ ಸಂಖ್ಯೆಯೂ ಹೆಚ್ಚಿರುತ್ತದೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ತರಗತಿಗಳು ಸಂಖ್ಯೆ ಹೆಚ್ಚಿರುತ್ತದೆ. ವಿದ್ಯಾರ್ಥಿಗಳು ಸಂಖ್ಯೆ ವಿರಳವಿರುತ್ತದೆ. ಸಹಜವಾಗಿ ಶಿಕ್ಷಕರ ಸಂಖ್ಯೆ ಕಡಿಮೆಯಾಗಿ ಕೆಲಸದ ಒತ್ತಡ ಹೆಚ್ಚಾಗುತ್ತದೆ. ವಿದ್ಯಾರ್ಥಿಗಳ ಭವಿಷ್ಯದ ಮೇಲೆ ಸಹಜವಾಗಿ ದುಷ್ಪರಿಣಾಮ ಉಂಟಾಗುತ್ತದೆ.

ಶಿಕ್ಷಣ ತಜ್ಞರು ಹಾಗೂ ಆಡಳಿತ ವ್ಯವಸ್ಥೆ ಈ ದಿಸೆಯಲ್ಲಿ ಗಮನ ಹರಿಸಲೇಬೇಕಾದ ಅಗತ್ಯತೆಯಿದೆ. ಹಾಗಾದರೆ ಮಾತ್ರ ಶಿಕ್ಷಣ ವ್ಯವಸ್ಥೆಯಲ್ಲಿ ಮಾಡುವ ಮಾರ್ಪಾಡುಗಳು ಅರ್ಥಪೂರ್ಣವೆನಿಸುತ್ತವೆ. ಆ ಮೂಲಕ ರಾಷ್ಟ್ರ ಸೇವೆಯಲ್ಲಿ ಶಿಕ್ಷಕರು ತಮ್ಮ ಪಾಲಿನ ಕರ್ತವ್ಯವನ್ನು ನಿರಾತಂಕವಾಗಿ ನಿರ್ವಹಿಸಲು ಹಾದಿ ಸುಗ್ರಮಗೊಳಿಸಿದಂತಾಗುತ್ತದೆ. ವಿದ್ಯಾರ್ಥಿಗಳ ಭವಿಷ್ಯ ಉಜ್ವಲಗೊಳ್ಳುತ್ತದೆ. ಬಲಿಷ್ಠ ರಾಷ್ಟ್ರಗಳ ಸಾಲಿನಲ್ಲಿರುವ ನಮ್ಮ ದೇಶ ತನ್ನ ಗಟ್ಟಿ ನೆಲೆಯನ್ನು ಭದ್ರಗೊಳಿಸಿಕೊಳ್ಳಲು ಸಹಕಾರಿಯಾಗುತ್ತದೆ.

ಕವನ

ಸುಗ್ಗಿ ಹಾಡು

ಸುಗ್ಗಿ ಬಾತವ್ವ, ಸುಗ್ಗಿ ಬಾತವ್ವ| ಸುಗ್ಗಿ ಬಾತವ್ವ ನಮ್ಮೂರಿಗೆ|
ಲಕ್ಷ್ಮಿನ ಮನೆ ತುಂಬುಸುವ ಕಾಲ ಬಾತವ್ವ||2||
ಚಿನ್ನದ ಬಣ್ಣದ ತೆನೆನ ಹೊತ್ತ್‌ಕಂಡು|
ಗದ್ದೆ ಬಯಿಲ್‌ನ ಒಮ್ಮೆ ನೀನ್ ನೋಡು|
ಕಣ್ಣ್ ತುಂಬಾ ಒಮ್ಮೆ ಬಂದ್ ನೋಡು ||2|| ಸುಗ್ಗಿ ಬಾತವ್ವ||
ತಲೆಗೊಂದು ವಸ್ತ್ರಕಟ್ಟಿ ಕೈಲೊಂದು ಕತ್ತಿ ಹಿಡ್‌ದ್|
ಬೆಳೆ ಕೊಯಕ್ಕೆ ಹೊರಡುವ ಸಡಗರ ನೋಡು||2|| ಸುಗ್ಗಿ ಬಾತವ್ವ||
ಆಚೆಮನೆ, ಈಚೆಮನೆ ಮ್ಯಾಲೆಮನೆ ಕೆಳಗೆ ಮನೆ|
ನಡುಮನೆ ತಲೆಮನೆವು ಎಲ್ಲವು ಸೇರ್‌ದೊ|
ಸಾಲಾಗಿ ಪೈರ್‌ನ ಕೊಯಿದ್ ಹಾಕಿದೊ ||2|| ಸುಗ್ಗಿ ಬಾತವ್ವ||
ಗುಬ್ಬಚ್ಚಿ ಸಾಲ್‌ನಂಗೆ ಏರಿಮ್ಯಾಲೆ ಕುದ್‌ಕಂಡ್|
ತಂದ... ನೀರ್ ಮಜ್ಜಿಗೆನ ಎಲ್ಲವು ಕುಡ್‌ದೊ||2|| ಸುಗ್ಗಿ ಬಾತವ್ವ||
ಪೈರ್‌ನ ನಾಲ್ಕು ದಿನ ಗದ್ದೆಲೇ ಒಣಗಿಸಿ|
ದೊಡ್ಡ ದೊಡ್ಡ ಹೊರೆ ಮಾಡಿ ಹೊತ್ತ್ ತಂದೊ|
ಹುಲ್ಲು ಭತ್ತ ಕಳಲಿ ಬ್ಯಾರೆ ಮಾಡ್ದೊ ||2|| ಸುಗ್ಗಿ ಬಾತವ್ವ|\parಮರ ಕುಕ್ಕೆ ತಕಂಡ್ ಜೆಳ್ ಭತ್ತ ಬ್ಯಾರೆ ಮಾಡಿ|
ವಜನ ಭತ್ತದ ಒಂದು ರಾಶಿ ಮಾಡ್ದೊ|
ರಾಶಿ ಮುಂದೆ ಲಕ್ಷ್ಮಿನ ಗ್ಯಾನ ಮಾಡ್ದೊ ||2|| ಸುಗ್ಗಿ ಬಾತವ್ವ||
ಅಟ್ಟಕ್ಕೆ ಸಗ್‌ಣಿ ಸಾರ್‌ಸಿ ಮನೆನೆಲ್ಲ ಶುದ್ಧ ಮಾಡಿ
ನೆಲ್ಲಕ್ಕಿ ಅಡಿಲಿ ದೀಪ ಹೊತ್ಸಿದೋ ||2|| ಸುಗ್ಗಿ ಬಾತವ್ವ||
ಮೂರು ಕುಕ್ಕೆ ಭತ್ತ ತುಂಬಿ ಮೂಡನ ಬಾಗ್‌ಲ್‌ಗಾಗಿ|
ನೆಲ್ಲಕ್ಕಿ ಅಡಿಲಿ ಕುಕ್ಕೆನ ಇಸಿದೊ|
ದೀವಿಗೇಗೆ ಭತ್ತ ಹಾಕಿ ಮತ್ತೊಮ್ಮೆ ಲಕ್ಷ್ಮಿನ ಗ್ಯಾನ ಮಾಡ್ದೋ ||2|| ಸುಗ್ಗಿ ಬಾತವ್ವ|

-ರಚನೆ: ಬೊಬ್ಬೀರ ರಾಧ ಗಿರೀಶ್, ಸ್ಥಳ: ಕುಂಬಳದಾಳು.

ಡಿವೈನ್ ಪಾರ್ಕ್



-ಕುಂಬುಗೌಡನ ಮುತ್ತಮ್ಮ,
ಮೈಸೂರು

ಗುರೂಜೀ ಎಂದು ಕರೆಸಿಕೊಳ್ಳುವ ಪೂಜ್ಯರಾದ ಸ್ವಾಮಿ ವಿವೇಕಾನಂದರ ದಿವ್ಯ ಲೀಲಾ ಕ್ಷೇತ್ರವೇ ಡಿವೈನ್ ಪಾರ್ಕ್. ಲೋಕ ಕಲ್ಯಾಣಕ್ಕಾಗಿಯೇ ಡಾ. ಚಂದ್ರಶೇಖರ ಉಡುಪ ಡಾಕ್ಟರ್‌ಜೀಯವರನ್ನು ಮಾಧ್ಯಮವಾಗಿಸಿಕೊಂಡು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಶ್ರೀ ಗುರೂಜೀ ಇಂದು ಇರುವುದು ಉಡುಪಿ ಜಿಲ್ಲೆಯ ಸಾಲಿಗಾಮ ಎಂಬಲ್ಲಿ.

ಮಂದಿರಕ್ಕೆ ಹೋಗ ಬೇಕಾದರೆ 9 ಮೆಟ್ಟಿಲುಗಳನ್ನು ಇಳಿಯಬೇಕು. ಕಾಮ, ಕ್ರೋಧ, ಲೋಭ, ಮದ, ಮೋಹ, ಮತ್ಸರ, ಅಹಂಕಾರ, ಮಮಕಾರ, ಸಂಶಯ ಎಂಬ 9 ಮಂದಿಯನ್ನು ನಿಗ್ರಹಿಸು ಎಂದು ಬೇಡುತ್ತಾ ಇಳಿಯುವುದು. 15ಅಡಿ ಎತ್ತರದ ವಿವೇಕಾ ನಂದರ ಭವ್ಯ ಮೂರ್ತಿಗೆ ನಮಸ್ಕರಿಸಿ ಒಳಕ್ಕೆ ಹೋದರೆ ಪ್ರಶಾಂತವಾದ ಮಂದಿರ. ರಾಮಕೃಷ್ಣರ, ಶಾರದಾ ದೇವಿಯ, ವಿವೇಕಾನಂದರ ವಿವಿಧ ಭಂಗಿಯ ಫೋಟೋಗಳು, ಗೋಡೆಯಲ್ಲಿ 21ಕಿಂಡಿಗಳನ್ನು ಕೊರೆದು ಇಟ್ಟಿರುವ ವಿವಿಧ ದೇವರ ಚಿಕ್ಕ ವಿಗ್ರಹಗಳು, ಶಿಲುಬೆ, ಖಾಲಿಯಾದ ಒಂದು ಕಿಂಡಿ ಇರುವುದು. ಇಲ್ಲಿ ಜಗನ್ಮಾತೆಗೆ ಕುಂಕುಮಾರ್ಚನೆ. ಇಲ್ಲಿ ಬೇರೆ ಪೂಜೆ ಇಲ್ಲ 21ಹೆಡೆಗಳ ವಾಸುಕಿ ದೇವರು, ಬುಧಕೌಶಿಕಋಷಿಯ ಪ್ರತಿಮೆ ಇದೆ.

ಡಿವೈನ್ ಪಾರ್ಕ್‌ನಲ್ಲಿ ಪೂಜೆಗಳ ಪಟ್ಟಿಗಳಿಲ್ಲ. ಪೂಜಾ ಸಾಮಾಗ್ರಿ ಬೇಡ, ಗಂಟೆ ನಗಾರಿಗಳಲ್ಲಿ. ಬದಲಿಗೆ ನಾನು ಸೊನ್ನೆ ನೀನೇ ಸನ್ನೆ ಎಂಬ ವ್ಯಾಕುಲ ಮೊರೆ ಮಾತ್ರ ಇರಬೇಕು. ಮಂತ್ರಗಳಿಲ್ಲ ಮನ್ನಿಸಿ, ದಾರಿ ತೋರಿ, ನಾವು ಎಂದೆಂದೂ ನಿಮ್ಮವರು. ನಮ್ಮ ಮೇಲೆ ಕೃಪೆ ತೋರಿ ಕಾಪಾಡಿ ಎಂಬ ವಿನಮ್ರ ಮೊರೆಯ ಜೊತೆಗೆ ಭಕ್ತಿ, ಶ್ರದ್ಧೆ, ವ್ಯಾಕುಲತೆ, ತುಡಿತ ನಮ್ಮಲ್ಲಿದ್ದರೆ ಸಾಕು. ಕಾಸೂ ಖರ್ಚಿಲ್ಲದೆ ದೇವರ ಅನುಗ್ರಹ ಪಡೆಯುವ, ಸಂಚಿತ ಕುಕರ್ಮಗಳನ್ನು ಕರಗಿಸಿಕೊಳ್ಳುವ ಏಕೈಕ ತಾಣ. ಇಲ್ಲಿ ಮರಕ್ಷಾಸ್ತೋತ್ರ ಪಠಣದೊಂದಿಗೇನೇ ಕಾರ್ಯಕ್ರಮದ ಪ್ರಾರಂಭ. ಇತರ ದೇವಸ್ಥಾನಗಳಲ್ಲಿ ನಮಗಾಗಿ ಪೂಜೆ ಮಾಡಿಸಿದರೆ ಇಲ್ಲಿ ಲೋಕ ಸುಖಿನಾಭವಂತು ಎಲ್ಲರಿಗೂ ಶುಭವಾಗಲಿ, ಒಳಿತಾಗಲಿ ಎಂಬ ದೀನ ಮೊರೆ ಮಾತ್ರ.

ಇಲ್ಲಿ ತಿಂಗಳಿಗೊಮ್ಮೆ ಹಾಗೂ ವಿಶೇಷ ದಿನಗಳಲ್ಲಿ ಶ್ರೀ ಗುರೂಜಿಯಿಂದ ಡಾಕ್ಟರ್‌ಜೀಯವರಿಗೆ ಗಾಳಿಯಲ್ಲಿ ಕೇಳಿಸುವ ಸಂದೇಶ ಸುಧೆ ಇರುತ್ತದೆ. ಈ ಸಂದೇಶಗಳನ್ನು ಡಾ. ಯವರು ಪ್ಲಾಂಚೆಟ್ ಎಂಬ ಸಾಧನದ ಮೂಲಕ ಹಾಳೆಗಳಲ್ಲಿ ಬರೆದುಕೊಂಡು ನೆರೆದ ಭಕ್ತವೃಂದಕ್ಕೆ ವಿವರಿಸುತ್ತಾರೆ. ಈ ದಿವ್ಯ ಸಂದೇಶಗಳು ಪ್ರತಿ ತಿಂಗಳ ವಿವೇಕ ವೈಭವದಲ್ಲಿ ಪ್ರಕಟವಾಗುತ್ತದೆ. ಅಲ್ಲಿಂದ ಹೊರಡುವ ಪ್ರತೀ ತಿಂಗಳ ವಿವೇಕ ವೈಭವ, 4 ತಿಂಗಳ ವಿವೇಕ ಸಂಪದ, 6 ತಿಂಗಳ ಇಂಗ್ಲೀಷ್ ಭಾಷೆಯ ವಿವೇಕ ವೀಣಾ, ಬಹಳ ಉಪಯುಕ್ತ ಪತ್ರಿಕೆಗಳು. ಇವುಗಳಲ್ಲದೆ ಅನೇಕ ವಿಧದ ಆಧ್ಯಾತ್ಮಿಕ ಪುಸ್ತಕಗಳು, ಭಜನೆ ಪುಸ್ತಕಗಳೂ ದೊರಕುತ್ತವೆ.

◆◆◆◆◆

ಕಾನೂನು ಮನುಷ್ಯನ ಸಹಚರ

- ಉಳುವಾರನ ಅಮೃತಾ ಸುರೇಶ್,
ವಕೀಲರು, ಮಡಿಕೇರಿ.



ಕಾನೂನಿನ ಅಜ್ಞಾನಕ್ಕೆ ಕ್ಷಮೆಯಿಲ್ಲ. ಕಾನೂನಿನ ತಿಳುವಳಿಕೆ ಪ್ರಜ್ಞೆ ಪ್ರತಿಯೊಬ್ಬ ಪ್ರಜೆಗೂ ಇರಲೇಬೇಕು. ಹೀಗೆಂದು ಕಾನೂನು ಹೇಳುತ್ತದೆ. ಆದರೆ ವಾಸ್ತವದಲ್ಲಿ ಎಷ್ಟು ಮಂದಿಗೆ ಕಾನೂನು ಪ್ರಜ್ಞೆ ಇದೆ.

ಸುವ್ಯವಸ್ಥಿತ ಸಮಾಜಕ್ಕೆ ಕಾನೂನಿನ ಅಧಿಪತ್ಯವು ಅತ್ಯವಶ್ಯಕ. ನಮ್ಮ ದೇಶದ ಸಂವಿಧಾನವು ದೇಶಕ್ಕೆ ಉತ್ತಮ ಆಡಳಿತ ನೀಡುವ ದೃಷ್ಟಿಯಿಂದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗ ಎಂಬುದಾಗಿ ತನ್ನ ಕ್ಷೇತ್ರವನ್ನು ವಿಸ್ತರಿಸಿದೆ. ತನ್ನ ಕಾರ್ಯ ವ್ಯಾಪ್ತಿಯಲ್ಲಿ ಸ್ವತಂತ್ರವಾಗಿ ಕೆಲಸ ನಿರ್ವಹಿಸಲು ಸಾಮಾನ್ಯ ಪ್ರಜೆಗಳಿಗೆ ಕೂಡ ಅನುವು ಮಾಡಿಕೊಟ್ಟಿದೆ. ಆದರೆ ಈ ಕಾರ್ಯನಿರ್ವಹಣೆಯ ಸಿಂಧುತ್ವವನ್ನು ಪ್ರಶ್ನಿಸಲ್ಪಟ್ಟಾಗ ಅದರ ನಿರ್ಣಯದ ಹೊಣೆ ನ್ಯಾಯಾಂಗದ ಮೇಲಿರುತ್ತದೆ. ಇವೆಲ್ಲದರ ಮುಖ್ಯ ಉದ್ದೇಶ. ದೇಶದಲ್ಲಿರುವ ಜನರ ಬದುಕಿನ ಸ್ಥಿತಿಗತಿಗಳನ್ನು ಉತ್ತಮ ಪಡಿಸುವುದು. ಸಾಮಾಜಿಕ, ಆರ್ಥಿಕ, ನೈತಿಕ, ರಾಜಕೀಯ, ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯ ಸ್ಥಾನಮಾನಗಳಲ್ಲಿ ಸಮಾನತೆ ಹಾಗೂ ಸಮಾನಾವಕಾಶಗಳನ್ನು ಕಲ್ಪಿಸುವುದು ಹಾಗೂ ಸಂದರ್ಭಾನುಸಾರ ಸಮಾಜದಲ್ಲಿ ಸಾಮಾಜಿಕ ಬದಲಾವಣೆಯನ್ನು ತರುವುದಾಗಿರುತ್ತದೆ.

ಕಾನೂನಿನ ಅರಿವು ಜನರಿಗೆ ಅತ್ಯಗತ್ಯ. ಆದರೆ ಮೇಲೆ ಉಲ್ಲೇಖಿಸಿದಂತೆ ಸಮಾಜದಲ್ಲಿ ಎಷ್ಟು ಮಂದಿಗೆ ಕಾನೂನು ಪರಿಧಿಯಲ್ಲಿ ಸ್ಪಷ್ಟ ಪರಿಜ್ಞಾನವಿರುತ್ತದೆ? ಈ ದಿಸೆಯ ಅಜ್ಞಾನದಿಂದ ವಿದ್ಯಾವಂತರು ಕೂಡ ಹೊರತಾಗಿಲ್ಲ. ಅಂದ ಮೇಲೆ ನಿರಕ್ಷರಕುಕ್ಷಿಗಳ ಪಾಡೇನು?

ಇಂತಹ ಸಂದರ್ಭದಲ್ಲಿ ಜನರು ನ್ಯಾಯವಾದಿಗಳ ಸಹಾಯ ಬಯಸುತ್ತಾರೆ. ಆರೋಪಿಗಳ ಪರ ನ್ಯಾಯಾಲಯದಲ್ಲಿ ವಾದ ಮಂಡಿಸಲು ನ್ಯಾಯವಾದಿಗಳಿಗೆ ಅವಕಾಶವಿರುತ್ತದೆ. ನ್ಯಾಯವಾದಿಗಳಿಗೆ ವಕೀಲಿ ಕಾರ್ಯ ವೃತ್ತಿಯಾದರೂ, ಜನ ಸಾಮಾನ್ಯರಿಗೆ ಕಾನೂನು ಅರಿವು ಮೂಡಿಸುವಲ್ಲಿ ಸೇವಾ ಮನೋಭಾವ ಇರಲೇಬೇಕು. ಇಲ್ಲದೇ ಹೋದಲ್ಲಿ ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಇರಬೇಕು ಎಂಬ ಘೋಷವಾಕ್ಯ ಹಾಗೂ ನ್ಯಾಯವಾದಿಗಳ ಪದವಿ ಅರ್ಥ ಕಳೆದುಕೊಳ್ಳುತ್ತವೆ. ತಮ್ಮ ಹಕ್ಕುಗಳ ಬಗ್ಗೆ ಅರಿವಿದ್ದಾಗ, ಬೇರೆಯವರಿಂದ ತಮ್ಮ ಹಕ್ಕಿಗೆ ಚ್ಯುತಿ ಬರುವಂತಹ ಸಂದರ್ಭ ಬಂದೊದಗಿದರೆ ಅದನ್ನು ಯಶಸ್ವಿಯಾಗಿ ತಡೆಗಟ್ಟಲು ಅವರು ಸ್ವತಃ ಅಥವಾ ನ್ಯಾಯವಾದಿಗಳ ಮೂಲಕ ಕ್ರಮ ತೆಗೆದುಕೊಳ್ಳಬಹುದಾಗಿದೆ ಹಾಗೂ ತೀವ್ರ ಪ್ರತಿರೋಧವನ್ನು ಒಡ್ಡಲು ಅವಕಾಶವಿರುತ್ತದೆ. ಜನರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಕಾನೂನಿನ ತಿಳುವಳಿಕೆ ಹಾಗೂ ತಜ್ಞರ ಸಲಹೆ ಪಡೆಯುವದು ಅಗತ್ಯವೆನಿಸುತ್ತದೆ.

ಒಬ್ಬ ವ್ಯಕ್ತಿ ತನಗೆ ತಿಳಿದೋ ಅಥವಾ ತಿಳಿಯದೆಯೋ ತಪ್ಪೆಸಗಿದಾಗ, ಕಾನೂನಿಗೆ ವ್ಯತಿರಿಕ್ತವಾಗಿ ನಡೆದುಕೊಂಡಾಗ ಆತ ಸಮಾಜದ ಪಾಲಿಗೆ ಅಪರಾಧಿಯಾಗುತ್ತಾನೆ. ಆದರೆ ನ್ಯಾಯಾಲಯದ ದೃಷ್ಟಿಯಲ್ಲಿ

ಆರೋಪ ಸಾಬೀತಾಗುವವರೆಗೂ ಆತ ನಿರಪರಾಧಿಯೇ. ವಿಚಾರಣೆ ಸಂಪೂರ್ಣವಾಗಿ ಮುಗಿದು ತೀರ್ಪು ಹೊರಬೀಳುವವರೆಗೂ ಆತ ಆರೋಪಿ ಮಾತ್ರ. ವಿಚಾರಣೆಯಿಂದ ಆರೋಪ ರುಜುವಾತಾದ ಮೇಲೆ ಮಾತ್ರ ಆತ ಅಪರಾಧಿ ಹಾಗೂ ನ್ಯಾಯಾಲಯ ವಿಧಿಸಬಹುದಾದ ಶಿಕ್ಷೆಗೆ ಒಳಪಡಬೇಕಾಗುತ್ತದೆ. ವಿಚಾರಣಾ ಹಂತದಲ್ಲಿ ಆ ವ್ಯಕ್ತಿಯನ್ನು ನ್ಯಾಯಾಲಯ ಮಗುವಿನಂತೆ ನೋಡುತ್ತದೆ.

ನಿರಪರಾಧಿಗೆ ಶಿಕ್ಷೆಯಾಗದಂತೆ ಕಾನೂನು ಎಚ್ಚರ ವಹಿಸುತ್ತದೆ. ಆದ್ದರಿಂದಲೇ ಹಲವು ಮಂದಿ ಅಪರಾಧಿಗಳು ತಪ್ಪಿಸಿಕೊಂಡರೂ ಚಿಂತೆಯಿಲ್ಲ. ನಿರಪರಾಧಿಗೆ ಮಾತ್ರ ಶಿಕ್ಷೆಯಾಗಬಾರದು ಎಂಬುದು ಸಾಮಾನ್ಯ ಸಿದ್ಧಾಂತ. ಒಂದು ಕೋನದಿಂದ ಈ ಸಿದ್ಧಾಂತ ಸರಿ ಎನಿಸಬಹುದಾದರೂ, ಅಪರಾಧಿಗಳು ರಕ್ತ ಬೀಜಾಸುರರಂತೆ ಬೆಳೆಯಲು ಈ ನೀತಿ ಸಹಕಾರಿ ಎನ್ನಬಹುದು. ಆದ್ದರಿಂದ ಅಪರಾಧ ಪ್ರಕರಣಗಳಲ್ಲಿ ಸಾಕ್ಷ್ಯ ನುಡಿಯುವವರು ನ್ಯಾಯದ ಪರವಾಗಿ ಕಾಯಾ, ವಾಚಾ, ಮನಸಾ ನ್ಯಾಯಾಲಯದೊಂದಿಗೆ ಸಹಕರಿಸಬೇಕಾಗುತ್ತದೆ.

ವ್ಯಕ್ತಿಯೊಬ್ಬ ಕಾನೂನನ್ನು ಉಲ್ಲಂಘನೆ ಮಾಡಿದರೆ, ಅದರಿಂದಾಗುವ ಅನಾಹುತಕ್ಕೆ ಆತ ಮಾತ್ರ ಬಾಧ್ಯನಾಗುವದಿಲ್ಲ. ಸೃಷ್ಟಿಯಾಗುವ ಸಂಕಟದ ಪಾಲುದಾರಿಕೆಯಲ್ಲಿ ಆತನನ್ನು ಅವಲಂಬಿಸಿರುವ ಕುಟುಂಬದ ಸದಸ್ಯರು, ಬಲಿಪಶುಗಳಾಗಬೇಕಾಗುತ್ತದೆ. ಆರ್ಥಿಕವಾಗಿ, ಮಾನಸಿಕವಾಗಿ ದೈಹಿಕವಾಗಿ ಕುಸಿದು ಹೋಗುತ್ತಾರೆ. ಆದರೆ ಅದೇ ಕಾನೂನನ್ನು ಗೌರವಿಸಿದರೆ, ಆಧರಿಸಿದರೆ ಜೀವನ ಸುಖಮಯವಾಗಲು ಅವಕಾಶವಿದೆ. ಕಾನೂನನ್ನು ನಾವು ಗೌರವಿಸಿದರೆ, ಕಾನೂನು ನಮ್ಮನ್ನು ಗೌರವಿಸುತ್ತದೆ. ಅರ್ಥಾತ್ ರಕ್ಷಿಸುತ್ತದೆ.

ಪ್ರತಿಯೊಬ್ಬ ಜನ ಸಾಮಾನ್ಯರೂ ಕಾನೂನನ್ನು ತಿಳಿದುಕೊಳ್ಳಲೇಬೇಕು ಎಂದು ಹೇಳುವುದಾದರೆ, ಕಾನೂನು ಪದವಿ ಪಡೆಯುವ ಅಗತ್ಯ ಇದೆಯೇ ಎಂಬ ಪ್ರಶ್ನೆ ಉದ್ಭವವಾಗುತ್ತದೆ. ನಮ್ಮ ಸನಾತನ ಧರ್ಮ ಹೇಳುವಂತೆ ವ್ಯಕ್ತಿ ಕರ್ತವ್ಯವನ್ನು ನಿಯಮ, ನಿಷ್ಠೆಯಿಂದ ಮಾಡುವುದೇ ಆಗಿದೆ. ಒಬ್ಬನ ಹಾದಿಗೆ ಇನ್ನೊಬ್ಬನು ತೊಡರುಗಾಲಾಗದಂತೆ ನ್ಯಾಯ ಸಮ್ಮತವಾಗಿ ನಡೆದುಕೊಳ್ಳುವುದು ಉತ್ತಮ. ಈ ಸಂದೇಶ ಪ್ರತಿಯೊಬ್ಬ ವ್ಯಕ್ತಿ ದೇಶಕ್ಕೂ ಅನ್ವಯಿಸುತ್ತದೆ. ಇದರಿಂದ ಜಗಳ, ದೌರ್ಜನ್ಯ, ದಂಗೆ, ಕೋಮು ಗಲಭೆ, ಯುದ್ಧ ಮುಂತಾದವುಗಳನ್ನು ತಡೆಗಟ್ಟಬಹುದು. ಸಂಚಾರ ನಿಯಮಾನುಸಾರ ಸಂಚಾರ ನಿಯಂತ್ರಣ ಸ್ಥಳಗಳಲ್ಲಿ ಕೆಂಪು ದೀಪ ಬಂದಾಗ ವಾಹನ ನಿಲ್ಲಿಸದೇ ಮುಂದುವರೆದರೆ, ನಿಯಮ ಉಲ್ಲಂಘನೆಯಾಗುತ್ತದೆ. ನಿಲ್ಲಿಸಲೇಬೇಕು ಎಂಬುದು ಸಾಮಾನ್ಯ ಜ್ಞಾನ.

ದೌರ್ಜನ್ಯದಂತಹ ವಿಚಾರ ಗಮನಿಸಿದರೆ, ಮನೆಯ ಹೊರಭಾಗಕ್ಕಿಂತ ಮನೆಯೊಳಗೇ ಹೆಚ್ಚಿನಾಂಶ ದೌರ್ಜನ್ಯ ನಡೆಯುತ್ತದೆ. ಪತಿ-ಪತ್ನಿಯ ಮೇಲೆ, ಅತ್ತೆ-ಸೊಸೆಯ ಮೇಲೆ, ತಂದೆ ತಾಯಿ ತಮ್ಮ ಮಕ್ಕಳ ಮೇಲೆ ಎಸಗುವ ದೌರ್ಜನ್ಯ ಕೆಲವೊಮ್ಮೆ ವಿಕೋಪಕ್ಕೆ ಹೋಗಿರುತ್ತದೆ. ಇದು ಬರೀಗಣ್ಣಿಗೆ ಕಾಣುವ ವಿಚಾರವಲ್ಲ. ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರ ತಿಳಿಯುತ್ತದೆ. ದೇಹದೊಳಗಿನ ಹುಣ್ಣಿನಂತೆ ಮೇಲ್ನೋಟಕ್ಕೆ ಸಹಜತೆಯಿದ್ದರೂ ಅನುಭವ ಮಾತ್ರ ಯಮ ಯಾತನೆಯಾಗಿರುತ್ತದೆ. ಹೀಗೆ ಎಷ್ಟು ದಿನ ಜೀವನದ ಬಂಡಿ ಸಾಗಬಹುದು? ಸಮಾಜದ ತಳಹದಿಯೇ ಕುಟುಂಬ. ಅಂತಹ ಕುಟುಂಬದ ಬೇರು ಅಲುಗಾಡಿದರೆ ಅದು ಬಲವಾಗಿ ಬೃಹತ್ತಾಗಿ ಬೆಳೆಯಲು ಸಾಧ್ಯವೇ? ಇಂತಹ ಪರಿಸ್ಥಿಗಳನ್ನು ಮನಗಂಡ ನಮ್ಮ ಸಂವಿಧಾನದಡಿಯ ಆಡಳಿತ ಅಂಗಗಳು ದೌರ್ಜನ್ಯ ತಡೆ ಕಾಯಿದೆಯನ್ನು ಜಾರಿಗೆ ತಂದಿವೆ. ಹೀಗೆ ಪ್ರತಿಯೊಂದು ಹೆಜ್ಜೆಯಲ್ಲೂ ಕಾನೂನು ಮನುಷ್ಯನ ಸಹಚರನಂತಿದೆ.

ಕಾನೂನು ಕಾನೂನು ಪಾಲಕರು-ನ್ಯಾಯಾಲಯ- ನ್ಯಾಯವಾದಿಗಳು ಇವುಗಳದ್ದು ಅವಿನಾಭಾವ ಸಂಬಂಧ. ಮೂಲ ಹುಡುಕುತ್ತಾ ಹೋದರೆ, ಕೊನೆಯೇ ಇಲ್ಲದಂತೆ ವಾದ ಮಂಡಿಸಬಹುದು. ಆದರೆ ಸಮಾಜದಲ್ಲಿ ಇವೆಲ್ಲದರ ಮೂಲ ಉದ್ದೇಶ ಒಂದೇ. 'ಸರ್ವೇ ಜನೇ ಸುಖಿನೋಭವಂತು.'

ಅಂತ್ಯಕ್ರಿಯೆಗಳ ಆಚರಣೆ - ಗೌಡ ಸಂಪ್ರದಾಯ

- ಕೇಕಡ ಇಂದುಮತಿ ರವೀಂದ್ರ ,

ಕುಂದಚೇರಿ ಗ್ರಾಮ ಅಂಚೆ, ಚೆಟ್ಟಿಮಾನಿ.

ಹುಟ್ಟಿದ ಮೇಲೆ ಸಾವು ಖಂಡಿತ. ಅದರಲ್ಲಿ ಮಾನವ ಬುದ್ಧಿಜೀವಿ ತನ್ನ ಸಂಸ್ಕಾರವನ್ನು ಕ್ರಮ ಬದ್ಧವಾಗಿ ನಡೆಸುತ್ತಾನೆ. ಒಂದೊಂದು ಜಾತಿಯವರಲ್ಲಿ ಒಂದೊಂದು ತರಹದ ವಿಧಿ ವಿಧಾನ ಸಂಪ್ರದಾಯ ರೂಢಿಯಲ್ಲಿದೆ. ಅದರಂತೆ ನಮ್ಮ ಗೌಡ ಜನಾಂಗದವರು ತುಂಬು ಸಂಪ್ರದಾಯಸ್ಥರಾಗಿರುತ್ತಾರೆ.

ಮನೆಯಲ್ಲಿ ಯಾರಾದರೂ ತೀರಿಹೋದ ಪಕ್ಷದಲ್ಲಿ ಆ ಶವವನ್ನು ಶಾಸ್ತ್ರ ಬದ್ಧವಾಗಿ ಅಂತಿಮ ಸಂಸ್ಕಾರ ಮಾಡಲು ಮುಂದಾಗುತ್ತಾರೆ. ತೀರಿ ಹೋದ ವ್ಯಕ್ತಿಯ ಶವವನ್ನು ಸ್ನಾನ ಮಾಡಿಸಿ, ಬಿಳಿ ಬಟ್ಟೆ ತೊಡಿಸಿ ಹೂಮಾಲೆಯಿಂದ ಶೃಂಗರಿಸಿ, ಮನೆಯ ಕೈಯಾಲೆಯಲ್ಲಿ 2 ಬೆಂಚು ಜೋಡಿಸಿ, ಮಲಗಿಸುತ್ತಾರೆ. ಹೀಗೆ ಮಲಗಿಸಿದ ಶವದ ಬಲದ ಕೈ ಹತ್ತಿರ ಕುಸಲಕ್ಕೆ ಮತ್ತು ಎಡದ ಕಾಲಿನ ಹತ್ತಿರ ಕುಸುಲು ಭತ್ತವನ್ನು ಇರಿಸಿ, ಅದರ ಮೇಲೆ ಒಡೆದ ತೆಂಗಿನಕಾಯಿಯ ಎರಡು ಭಾಗದ ಒಳಗೆ ಒಳ್ಳೆಣ್ಣೆ ಮತ್ತು ಗಂಧದ ಕಡ್ಡಿಗೆ ಬಿಳಿಬಟ್ಟೆ ಸುತ್ತಿ ಅದರಿಂದ ದೀಪವನ್ನು ಉರಿಸುತ್ತಾರೆ. ಅಲ್ಲಿಂದ ಕಂಚಿನ ತಟ್ಟೆಯಲ್ಲಿ ಹಾಲು ಮತ್ತು ತುಳಸಿ ಎಲೆಯನ್ನು ಇಡುತ್ತಾರೆ. ಇದರಿಂದ ಶವದ ಬಾಯಿಗೆ ನೀರನ್ನು ಕೊಡುತ್ತಾರೆ. ಹೀಗೆ ಅಂತಿಮ ಸಂಸ್ಕಾರಕ್ಕೆ ಬಂದವರು ಬಿಳಿ ಬಟ್ಟೆ, ಅಗರ ಬತ್ತಿ, ಹೂಮಾಲೆಯನ್ನು ಶವದ ಮೇಲೆ ದುಡ್ಡನ್ನು ತಟ್ಟೆಯಲ್ಲಿ ಹಾಕುತ್ತಾರೆ ಇದು ಹಿಂದಿನ ಒಗಟು ಮತ್ತು ಆರ್ಥಿಕ ಪರಿಸ್ಥಿತಿಯನ್ನು ಎತ್ತಿತೋರಿಸುತ್ತದೆ.

ಶವವನ್ನು ಮನೆಯಿಂದ ಇಳಿಸಲು ಸಮಯ ಗಳಿಗೆಯನ್ನು ನೋಡುತ್ತಾರೆ. ರಾಹುಕಾಲದಲ್ಲಿ ಶವವನ್ನು ಇಳಿಸುವುದಿಲ್ಲ. ಹೀಗೆ ಇಳಿಸಿದ ಶವವನ್ನು ಅಂಗಳಲ್ಲಿರಿಸಿ, ಅರಶಿನ ಮಿಶ್ರಿತ ದುಡ್ಡು ಅಕ್ಕಿಯನ್ನು ಮಿಶ್ರಮಾಡಿ ಅದನ್ನು ಶವದ ಮಧ್ಯದಿಂದ ಎಡದ ಕೈಯಿಂದ ಮನೆಯವರು ಎಸೆಯುತ್ತಾರೆ. ಅಲ್ಲಿಂದ ಒಡ್ಡೊಲಗದೊಂದಿಗೆ ಅಂಗಳದಲ್ಲಿ ಶವವನ್ನು 3 ಬಾರಿ ಕುಣಿಸುತ್ತಾ ನಂತರ ಅಂತಿಮ ಸಂಸ್ಕಾರಕ್ಕೆ ಸ್ಮಶಾನಕ್ಕೆ ತೆಗೆದುಕೊಂಡು ಹೋಗುತ್ತಾರೆ.

ಸ್ಮಶಾನದಲ್ಲಿ ಸಂಪ್ರದಾಯವಾಗಿ ವಿಧಿ ವಿಧಾನಗಳನ್ನು ಮುಗಿಸಿ ಕೊನೆಗೆ ಬೆಂಕಿಯನ್ನು ಕೊಡುತ್ತಾರೆ. ಬೆಂಕಿ ಕೊಡಲು ತಂದೆ ಆಗಿದ್ದಲ್ಲಿ ಹಿರಿಯ ಮಗ ಅಥವಾ ತಾಯಿಯಾಗಿದ್ದಲ್ಲಿ ಕಿರಿಯ ಮಗ ಬೆಂಕಿಯನ್ನು ಕೊಡುತ್ತಾರೆ. ಹೀಗೆ ಶವದ ಶರೀರ ಪಂಚಭೂತಗಳಲ್ಲಿ ಲೀನವಾಗುತ್ತದೆ.

ಅಂತಿಮ ಸಂಸ್ಕಾರ ಮುಗಿಸಿ ಮನೆಗೆ ವಾಪಸ್ಸಾದ ಮೂರು ಅಥವಾ ಐದು ದಿನಗಳಲ್ಲಿ ಶುದ್ಧ ಮಾಡುವ ಕ್ರಮವನ್ನು ಇಟ್ಟುಕೊಳ್ಳುತ್ತಾರೆ. ಹಾಲು ತುಪ್ಪ ಹಾಕಿ ಕೊಳ್ಳಿಕೂಡಿಸುವುದು ಮತ್ತು ಕಾಲೆ ನೋಡಿಸುವುದು. ಈ ಶುದ್ಧ ಕಾರ್ಯಕ್ರಮದಲ್ಲಿ ಹಲವು ಮಾದರಿಯ ಕ್ರಮಗಳನ್ನು ಅನುಸರಿಸುತ್ತಾರೆ. ಮೊದಲಿನ ಕಾಲದಲ್ಲಿ ಶುದ್ಧ ಮತ್ತು ತಿಥಿ ಕರ್ಮಾಂತರವನ್ನು ಒಟ್ಟಿಗೆ ನಡೆಸುತ್ತಿದ್ದರು. ಈಗ ಸ್ವಲ್ಪ ಅನುಕೂಲದಲ್ಲಿ ಬೇರೆ ಬೇರೆ ದಿವಸ ಈ ಕಾರ್ಯವನ್ನು ಮಾಡುತ್ತಾರೆ.

ಶುದ್ಧ ಮಾಡುವ ವಿಧಾನ

ಶುದ್ಧ ಮಾಡುವ ಒಂದು ದಿವಸದ ಮೊದಲು ಸಾಯಂಕಾಲ(ಮುಸ್ಸಂಜೆ) ಹೊತ್ತಿಗೆ 'ನೀರ್ ನೆರಳು' ಇಡುವ ಕ್ರಮವಿದೆ. ಇದಕ್ಕೆ ಆ ಮನೆಯಿಂದ ಕೊಟ್ಟ ಹೆಣ್ಣು ಮಗಳಿದ್ದಲ್ಲಿ ತವರು ಮನೆಯವರು ಸರಕುಗಳನ್ನು ತರುವುದು ರೂಢಿಯಲ್ಲಿದೆ. ಆ ಸರಕಿನಲ್ಲಿ ಪ್ರತಿಯೊಂದು ಅಡುಗೆ ಪದಾರ್ಥ ಇರಬೇಕು.

ಬಾಳೆಕಾಯಿ, ಕುಂಬಳಕಾಯಿ, ಜೇನುತುಪ್ಪ, ತೆಂಗಿನ ಎಣ್ಣೆ, ಒಳ್ಳೆಣ್ಣೆ , ಎಲೆ, ಅಡಿಕೆ, ಸುಣ್ಣ, ಕುಸಲಕ್ಕಿ, ಬೆಳ್ತೆ ಅಕ್ಕಿ, ಹಪ್ಪಳ, ಬೆಲ್ಲ, ನೆಣೆ ಬತ್ತಿ, ಅಗರಬತ್ತಿ, ಹುಣಸೆ ಹಣ್ಣು, ಅರಸಿನ ಹುಡಿ, ಮೆಣಸಿನ ಹುಡಿ, ಅಕ್ಕಿಪುಡಿ, ಬೆಳ್ಳುಳ್ಳಿ, ಸಾಸಿವೆ ಇವೆರಡನ್ನು ಬಿಟ್ಟು ಇನ್ನು ಉಳಿದ ಎಲ್ಲ ವಸ್ತುವನ್ನು ಇರಿಸುತ್ತಾರೆ. ಈ ಸರಕಿಗೆ ತಂದ ಸಾಮಾನುಗಳನ್ನು ಎಲ್ಲ ವಸ್ತುಗಳಲ್ಲಿ ಸ್ವಲ್ಪ ಸ್ವಲ್ಪ ತೆಗೆದು ಬಾಳೆ ಎಲೆಯನ್ನು ಬಾಡಿಸಿ ಮಡಚಿ ಅದರಲ್ಲಿರಿಸಿ ಅದನ್ನು ಕಟ್ಟಿ ಬೇರೆ ಬೇರೆಯಾಗಿ ಅಂದರೆ, ತವರು ಮನೆ ಸರಕು, ಮನೆ ಸರಕು, ಕೊಟ್ಟ ಮಗಳ ಸರಕು ಹೀಗೆ ಅದನ್ನು ಜೋಡಿಸಿ, ನೀರುನೆರಳು ಇಡುವ ಕ್ರಮ. ನೀರ್ ನೆರಳನ್ನು ಕೋಣೆಯೊಳಗೆ ಇಡುತ್ತಾರೆ. ಈ ಜಾಗದಲ್ಲಿ ಒಂದು ಕುಪ್ಪಿಗ್ಲಾಸ್‌ನಲ್ಲಿ ನೀರು, ಒಂದು ಗ್ಲಾಸ್‌ನಲ್ಲಿ ಹಾಲು ಮತ್ತೆ ಒಂದು ಗ್ಲಾಸ್‌ನಲ್ಲಿ ಸಾರಾಯಿಯನ್ನು ಇಡುತ್ತಾರೆ. ಇದಕ್ಕೆ ಕೋಣೆಯ ಮೇಲಿನ ಬಿಟ್ಟದಿಂದ ಮೂರು ದಾರವನ್ನು ಕಟ್ಟಿ ಅದರ ತುದಿಯಲ್ಲಿ ಒಂದು ಮಸಿ ತುಂಡು ಮತ್ತೊಂದು ತುದಿಯಲ್ಲಿ ಒಂದು ಅರಸಿನ ತುಂಡಿನ ಕೊಂಬನ್ನು ಕಟ್ಟಿ ಗ್ಲಾಸಿನ ಮೇಲೆ ತೇಲಿಬಿಡುತ್ತಾರೆ. ಇನ್ನು ನೆಲದ ಮೇಲೆ ಅಕ್ಕಿಪುಡಿ ಅಥವಾ ಬೂದಿಯನ್ನು ಚೆಲ್ಲಿರುತ್ತಾರೆ. ಇದು ಯಾಕೆಂದರೆ ದೆವ್ವ ಬಂದರೆ ಗೊತ್ತಾಗುತ್ತದೆ ಎಂಬುದರ ಸಂಕೇತ ಒಂದು ನಂಬಿಕೆ. ಇದನ್ನೆಲ್ಲ ಅಲ್ಲಿಟ್ಟು ಮನೆಯಲ್ಲಿ ಕತ್ತಲು ಮಾಡಿ ಎರಡು ಬಾಗಿಲಿನ ಮೆಕಲ್ಲಿನಲ್ಲಿ ಮಗ ನಿಂತ ಮೂರುಸಾರಿ ದೆವ್ವವನ್ನು ಮನೇಗೆ ಬರಲು ಕರೆಯುತ್ತಾರೆ. ಕರೆದು ಒಳಗೆ ಬಂದು 10.15ನಿಮಿಷ ಮೌನವಾಗಿ ಇರುತ್ತಾರೆ. ಇದಾದನಂತರ ಮೆಟ್ಟುಕಲ್ಲಿನಲ್ಲಿ ನಿಂತು ಕುಂಬಳ ಕಾಯಿಯನ್ನು ಅಡ್ಡವಾಗಿ ಎರಡು ಭಾಗಗಳಾಗಿ ಮಾಡುತ್ತಾರೆ. ಹೀಗೆ ಭಾಗ ಮಾಡಿದ ಕುಂಬಳ ಕಾಯಿಯನ್ನು ಒಂದು ಭಾಗದಲ್ಲಿ ಎರಡು ಭಾಗಗಳಾಗಿ ಮಾಡಿ ಅದರ ಒಂದು ಭಾಗವನ್ನುಮಡಿವಾಳನಿಗೆ ಮತ್ತೊಂದು ಭಾಗವನ್ನು ಕ್ಷೌರಿಕನಿಗೆ ತೆಗೆದು ಇಡುತ್ತಾರೆ. ಇದು ರಾತ್ರಿಯ ಕ್ರಮ.

ಮಾರನೇ ದಿವಸ ಬೆಳಿಗ್ಗೆ ಶುದ್ಧ ದಿವಸದಂದು ಮನೆಯ ಗಂಡಸರು ಮಕ್ಕಳು ತಮ್ಮ ತಲೆ ಕೂದಲನ್ನು ತೆಗೆಯುತ್ತಾರೆ. ಆ ದಿನ ಬೆಳಿಗ್ಗೆ ಉಪಹಾರಕ್ಕೆ ರಾಗಿ ಮುದ್ದೆಯನ್ನು ತಿನ್ನಬೇಕು. ಇದು ದುಃಖದ ಮನೆಯ ಸಂಕೇತವಾಗಿರುತ್ತದೆ. ನಂತರ ಮನೆಯವರೆಲ್ಲರೂ ಸ್ನಾನ ಮಾಡಿ ಸ್ಮಶಾನಕ್ಕೆ ಹೊರಡಲು ಸಿದ್ಧವಾಗುತ್ತಾರೆ. ಹೀಗೆ ಹೊರಡುವ ಮೊದಲು ಮನೆಯ ಬಾಡೆಯಲ್ಲಿ ಒಂದು ಕಂಚಿನ ತಟ್ಟೆಯಲ್ಲಿ ಐದು ತುದಿ ಬಾಳೆ ಎಲೆ ತುಂಡು ಒಂದು ದೀಪ, ಅಗರಬತ್ತಿ ತಲೆ ತೊಳೆದ ಅಕ್ಕಿಯನ್ನು ಅರಶಿನ ಮಿಶ್ರ ಮಾಡಿ ಅದರಲ್ಲಿಡುತ್ತಾರೆ. ಈ ಎಲ್ಲಾ ವಸ್ತುಗಳನ್ನು ಬಿಳಿ ಬಟ್ಟೆಯಲ್ಲಿ ಕಟ್ಟಿ ಒಂದು ಮುಕ್ಕಾಲಿನ ಮೇಲೆ ಇಟ್ಟು ಅದರ ಸುತ್ತ ಮನೆಯವರು ಮೂರು ಸುತ್ತು ಬಂದು ಸ್ಮಶಾನಕ್ಕೆ ಹೊರಡುತ್ತಾರೆ.

ಸ್ಮಶಾನಕ್ಕೆ ಹೋದ ಮೇಲೆ ಅಲ್ಲಿ ಮಣ್ಣು, ಮತ್ತು ಶವವನ್ನು ಸುಟ್ಟ ಬೂದಿಯನ್ನು ದೂಪೆ ಮಾಡಿ ಇಡುತ್ತಾರೆ. ಈ ದೂಪೆ ಮಾಡಿದ ಜಾಗದಲ್ಲಿ ನಾಲ್ಕು ಚಿಕ್ಕ ಸರಳಿ ಮರದ ಕಂಬವನ್ನು ನೆಟ್ಟಿರುತ್ತಾರೆ. ಅದರ ಮೇಲೆ ಸರಳಿ ಸೊಪ್ಪಿನ ಚಪ್ಪರವನ್ನು ಮಾಡಿ ಅದಕ್ಕೆ ಹೂಮಾಲೆ ಹಾಕಿ ಬಿಳಿ ಬಟ್ಟೆಯನ್ನು ಹೊದಿಸುತ್ತಾರೆ.

ಅಲ್ಲಿಂದ ಶುದ್ಧಕ್ಕೆ ಮಾಡಿದ ಸಿಹಿ ಅಡುಗೆ, ಕುಂಬಳಕಾಯಿ ಮತ್ತು ಬಾಳೇಕಾಯಿ, ಹುರುಳಿ ಬೆರಸಿದ ಫಲ್ಯ ಜೊತೆಗೆ ಹಣ್ಣು ಹಂಪಲು, ನೆಂಟರಿಸ್ಟರು ತಂದ ತಿಂಡಿಇಟ್ಟು, ಅನಂತರ ಈ ಧೂಪೆಗೆ ಮೂರು ಸುತ್ತು ಅಕ್ಕಿಯನ್ನು ಚೆಲ್ಲುತ್ತಾ ಬರುತ್ತಾರೆ. ಇದಾದ ನಂತರ ಸ್ವರ್ಗ ಸಲ್ಲಿಸುವ ಒಂದು ಕ್ರಮವಿದೆ ಈಗ ಮನೆಯ ಗಂಡಸರು ಮಕ್ಕಳು ಈರುಮಂಡಿಯಲ್ಲಿ ತಲೆಗೆ ಕೈ ಹಿಡಿದುಕೊಂಡು ಕೂರುತ್ತಾರೆ. ಸ್ವರ್ಗ ಸಲ್ಲಿಸಲು ಯಾರಾದರೂ ಹಿರಿಯ ವ್ಯಕ್ತಿಗಳು ಮುಂದೆ ಬಂದು ಸತ್ತವರು, ಹಿಂದೆ ಹುಟ್ಟಿ ಬೆಳೆದು ಬದುಕಿ ಬಾಳಿರುವ ಬಗ್ಗೆ ಹೇಳುತ್ತಾರೆ. ಇದನ್ನು ಕೇಳಲು ತುಂಬ ಬೇಸರವು ಆಗುತ್ತದೆ. ಆ ಮೇಲೆ ಅಲ್ಲಿ ಕೈಯನ್ನು ಮುಗಿದು ಮನೇ ಕಡೆಗೆ ವಾಪಸ್ಸಾಗುತ್ತಾರೆ.

ಸ್ಮಶಾನದಿಂದ ಬಂದ ಮೇಲೆ ಮನೆಯವರು ಒಂದು ಕಡೆ. ನಂಟರಿಸ್ಟರು ಒಂದು ಕಡೆ ನಿಲ್ಲುತ್ತಾರೆ ಆಗ ಮಡಿವಾಳರು ಎಲ್ಲರನ್ನೂ ಶುದ್ಧ ಮಾಡಲು ಒಂದು ಚೆಂಬುವಿನಲ್ಲಿ ಪುಣ್ಯಅರ್ಚನ, ಒಂದು ಬಾಳೆ ತಟ್ಟೆಯಲ್ಲಿ ಗಂಧ ಧೂಪದ ಹೊಗೆ, ಗಂಧ ಮತ್ತು ಮಡಿಯಾದ ಬಿಳಿ ಬಟ್ಟೆ ಇವೆಲ್ಲದರಿಂದ ಶುದ್ಧ ಮಾಡುತ್ತಾರೆ. ನಂತರ ಮನೆಯೊಳಗೆ ಸಹ ಇದೇ ರೀತಿ ಮನೆಯನ್ನೆಲ್ಲ ಶುದ್ಧ ಮಾಡುತ್ತಾರೆ. ಆ ಮೇಲೆ ಊರಿನ ಒಬ್ಬ ಮಹಿಳೆ ಈ ಮನೆಯ ಒಳಗೆ ಹೋಗಿ ದೇವರ ದೀಪವನ್ನು ಉರಿಸುತ್ತಾರೆ.

ಇನ್ನು ಮಧ್ಯ ಬಾಡೆಯಲ್ಲಿ ಕುಸಲಕ್ಕಿ ಬೆಳ್‌ತಕ್ಕಿಯನ್ನು ತೀಕೆ ನಿಂತ ಮಗ ಮೊಣಕಾಲೂರಿ ಉಲ್ಪ ಆಗಿ ಎರಡು ಭಾಗ ಮಾಡಿ ಒಂದು ಭಾಗ ಮಡಿವಾಳನಿಗೆ ಇನ್ನೊಂದು ಬಾಗ ಕ್ಷೌರಿಕನಿಗೆ ಕೊಡುತ್ತಾರೆ. ಇದನ್ನು 'ಸ್ಯಾಲೆ ಅಕ್ಕಿ' ಎಂದು ಹೇಳುತ್ತಾರೆ. ಇದರ ನಂತರ ಕ್ಷೌರಿಕನು ತೀಕೆ ನಿಂತವರ ತಲೆಯ ಮೇಲೆ ಎಣ್ಣೆಯನ್ನು ಸಿರಿಯುತ್ತಾರೆ. ಆ ಎಣ್ಣೆಯೂ ನೆಲದ ಮೇಲೆ ಮೂರು ತೊಟ್ಟು ಬೀಳಬೇಕು.

ಇದಾದ ನಂತರ ಊಟದ ವ್ಯವಸ್ಥೆ ಆಗಿರುತ್ತದೆ. ಆ ಊಟಕ್ಕೆ ಅಕ್ಕಿ ಪಾಯಸ, ಹೆಸರು ಕಾಳು ಮತ್ತು ಕಡಲೆ ಬೇಳೆ ಪಾಯಸ, ಹಪ್ಪಳ ಶ್ಯಾವಿಗೆ ಪಾಯಸ, ಕುಂಬಳಕಾಯಿ ಸಾರು, ಬಾಳೆಕಾಯಿ ಮತ್ತು ಹುರುಳಿ ಕಾಳು ಮಿಶ್ರಿತ ಫಲ್ಯ ಇವೆಲ್ಲವು ಶುದ್ಧ ದಿನದ ಅಡುಗೆಯ ವಿಶೇಷತೆ ಆಗಿರುತ್ತದೆ. ಇದರ ಜೊತೆಗೆ ಇನ್ನು ಕೆಲವು ತಿಂಡಿಗಳು ನೆಂಟರಿಸ್ಟರು ತಂದ ಸಿಹಿ ವಸ್ತುಗಳು ಸಹ ಇರುತ್ತದೆ. ಮತ್ತೆ ಅನ್ನ ಸಾಂಬಾರು ಇರುತ್ತದೆ. ಇದರೊಟ್ಟಿಗೆ ಮನೆಯಿಂದ ಕೊಟ್ಟ ಹೆಣ್ಣ ಮಗಳಿದ್ದಲ್ಲಿ ಊಟಕ್ಕೆ ಕುಳತಲ್ಲಿಗೆ ಒಂದು ಚಿಕ್ಕ ಪಾತ್ರಯಲ್ಲಿ ತೆಂಗಿನಣ್ಣೆಯನ್ನು ಹಲಸಿನ ಎಲೆಯಿಂದ ಪ್ರತಿಯೊಬ್ಬರ ತಲೆಯ ಮೇಲೆ ಹುಯ್ಯುತ್ತಾರೆ. ಜೊತೆಯಲ್ಲಿ ಒಂದು ಪಟ್ಟೆಯಲ್ಲಿ ವಿಲ್ಯಾಎಲೆಯ ಹರಿದ ಒಂದು ಭಾಗ ಒಂದು ತುಂಡು ಅಡಿಕೆಯನ್ನು ಎಡದ ಕೈಯಿಂದ ಹಂಚುತ್ತಾ ಹೋಗುತ್ತಾರೆ. ಇದರೊಂದಿಗೆ ಶುದ್ಧದ ಕ್ರಮವು ಮುಗಿಯುತ್ತದೆ.

ಇನ್ನು ತಿಥಿ ಮಾಡುವ ವಿಧಾನ

ಸತ್ತು ಹದಿನಾರು ದಿವಸಕ್ಕೆ ತಿಥಿ ಕರ್ಮಾಂತರವನ್ನು ಮಾಡುತ್ತಾರೆ. ಈ ದಿನ ಬೆಳಗಿನ ಜಾವ ಐದು ಗಂಟೆಯ ಹೊತ್ತಿಗೆ ಸತ್ತವರಿಗೆ ಎಡೆ ಹಾಕುವ ಕ್ರಮ. ಇದಕ್ಕೆ ಒಂದು ದಿವಸದ ಮೊದಲೇ ಇಡ್ಲಿಗೆ (ಬಟ್‌ಲಿಟ್ಟ್) ರುಬ್ಬಿ ಇಡುತ್ತಾರೆ. ಇದನ್ನು ಅಂದಿನ ದಿವಸ ಬೇಗನೆ ಬೇಯಿಸಿ ಎಡೆ ಹಾಕಲು ರೆಡಿ ಮಾಡುತ್ತಾರೆ. ಕೋಳಿ ಕೂಗುವ ಸಮಯದಲ್ಲಿ ಇದನ್ನು ಒಂದು ಕೋಣೆಯೊಳಗೆ ಮಂಚದ ಮೇಲೆ ಐದು ಬಾಳೆಲೆಯನ್ನು ಹಾಕಿ ಅದರ ಮೇಲೆ ಉದ್ದ ಕುಡುಬು, ಪ್ಲೇಟ್‌ನಲ್ಲಿ ಬೇಯಿಸಿದ ಹಿಟ್ಟನ್ನು ಕುಯ್ಯದೇ ಹಾಗೆಯೇ ಇಟ್ಟು ಅದರ ಮೇಲೆ ಹಂದಿ ಮಾಂಸ, ಕೋಳಿ ಮಾಂಸ ಇವೆಲ್ಲವನ್ನು ಇಡುತ್ತಾರೆ. ಮಧ್ಯದಲ್ಲಿ ಸತ್ತುಹೋದವರ ಫೋಟೋವನ್ನು ಇಟ್ಟು

ಅದಕ್ಕೆ ಹೂಮಾಲೆ ಹಾಕಿ, ಅವರು ಧರಿಸುತ್ತಿದ್ದ ವಸ್ತ್ರ , ಆಭರಣ ಇತ್ಯಾದಿಯನ್ನು ಇರಿಸುತ್ತಾರೆ. ಇದಕ್ಕೆ ಬಂದ ನೆಂಟರಿಸ್ಟರೆಲ್ಲರು ಅಕ್ಕಿಯನ್ನು ಹಾಕಿ ತಾವು ತಂದ ತಿಂಡಿಯನ್ನಿಟ್ಟು ಕೈ ಮುಗಿಯುತ್ತಾರೆ. ಅಲ್ಲಿಂದ ಮಧ್ಯಾಹ್ನ ಊಟವನ್ನು ಮುಗಿಸಿ, ಅವತ್ತು ಸಂಜೆ ಗಂಟೆಯ ಮೇಲೆ ಆ ಎಡೆಯನ್ನು ಎಳೆಯುತ್ತಾರೆ. ಎಳೆದಂತಹ ಎಡೆಯನ್ನು ಊರವರು, ನೆಂಟರೂ, ಮನೆಯವರೆಲ್ಲರೂ ಸೇರಿ ಊಟ ಮಾಡಿ ತಮ್ಮ ತಮ್ಮ ಮನೆಗಳಿಗೆ ವಾಪಾಸ್ಸಾಗುತ್ತಾರೆ.

ಈ ರೀತಿಯಾಗಿ ನಮ್ಮ ಸಂಪ್ರದಾಯದಲ್ಲಿ ಶುದ್ಧ ಮತ್ತು ತಿಥಿ ಕರ್ಮಾಂಕರವನ್ನು ಕ್ರಮಬದ್ಧವಾಗಿ ಮಾಡುತ್ತಾರೆ.

ಗೀಗೀ ಪದ

ಗೀಯಗಾ...ಗಾ...ಗೀಯ...ಗಾ...ಗೀಯ
ಗೀಯ...ಗಾ
ಓಹೋ...ಗೀಯಗಾ...ಗಾಗಿಯಗಾ...ಗೀಯ...ಗೀಯ...ಗಾ...||2||
ಬಂದೋಳೋ... ನಾವು ಬಂದಳೋ...
ನಾವು ಬಂದೋಳೋ... ಗೌಡ ಸಮಾಜಕೆ|
ಅಲ್ಲಿ ಶತಮಾನೋತ್ಸವ ಹಬ್ಬ ಮಾಡಿಕೇತ...||
ಗೀಯ...ಗಾ...ಗಾ...||
ಜಾಗ ನೋಡಿ ಲಾಗ ಹಾಕ್| ಕಾಲನೋಡಿ ತಾಳಹಾಕ್|
ಜೀವನಲಿ ಒಂದು ಗುರಿ ಇಟ್‌ಕಣಕು|
||ಗೀಯ...ಗಾ...||
ಅಂಬೆಕಾಲ್ ಹಾಕಿಕಂಡ್| ಅಂಗನವಾಡಿಗೆ ಹೋಕಂಡ್|
ಅ.ಆ.ಇ.ಈ.ನ ಮಕ್ಕ ಬ್ಯಾಗ ಕಲಿಯಕು|
ಅಲ್ಲಿ ಕೊಡುವ ಪೌಷ್ಠಿಕಾಂಶನಾ... ಮಕ್ಕ ತಿಂದ್|
ಗಟ್ಟಿಮುಟ್ಟಾಗಿ ಇಂದ್ ಬ್ಯಾಗ ಬೆಳೆಯಕು|
||ಗೀಯ...ಗಾ...||
ಸಮವಸ್ತ್ರ ತೊಟ್ಟ್‌ಕಂಡ್, ಕುತ್ತಿಗೆಗೊಂದು ಟೈ ಕಟ್ಟಿ|
ಬೆನ್ನ ಮ್ಯಾಲೆ ಚೀಲ ಹೊತ್ತು ಶಾಲೆಗೋಕು|
ನೋಡವರ ಕಣ್ಣಿಗೊಂದು ಹಬ್ಬ ಆಕು|
ಮಕ್ಕಳ ನೋಡವರ ಕಣ್ಣಿಗೊಂದು ಹಬ್ಬ
ಆಕು||ಗೀಯ...ಗಾ...||
ಹೇಳ್ದೆ ಒಳ್ಳ ಮಾತ್‌ನ ಮಕ್ಕ ಕೇಳಕು|
ಜೀವನಲಿ ಮುಂದೆ ಎಂದ್ ಬಾಲ್ಯ ಮತ್ತೆ ಬಾದುವೇ|
ಮುಂದಕ್ಕೊಂದು ಗುರಿನ
ಇಟ್ಟ್‌ಕಣಕು...||ಗಿಯ...ಗಾ...||
ಕಾಲೇಜ್ ಮೆಟ್ಲ್ ಹತ್ತಿದಂಗೆ|
ಜೋಬು ತುಂಬಾ ದುಡ್ಡ್ ಇಟ್|
ಕಾಲಿಪೋಲಿಯಾಗಿ ಮಕ್ಕ ತಿರ್‌ಗ್‌ಕಾಗದ್...
ದುಸ್ಚಟಗಳಿಗೆ ಬಲಿ ಆಕಾಗದ್|
ಹೊರದೇಶದ ಉಡಿಗೆ ತೊಡಿಗೆ ತೊಟ್ಟ್‌ಕಂಡ್
ತನ್ನ ರೂಪನ ಇಂದ್ ಕಲ್‌ಕಣ್‌ಕಾಗದ್|
||ಗೀಯ...ಗಾ...||
ಡಿಗ್ರಿ ಪಾಸ್ ತ್ತೇಳಿಕಂಡ್ ಪದವಿ ಪತ್ರ
ಹಿಡ್‌ಕಂಡ್|
ಪೇಟೆ, ಪೇಟೆ ತಿರ್‌ಗೀರೆ ಯಾರ್ ಕರ್‌ದವೆ|
ಅಲ್ಲಿ ಇಲ್ಲಿ ತಿರ್‌ಗುದು ಬುಟ್ಟು| ಸ್ವಂತ ಕೆಲ್ಸನ
ಮಾಡಿಕಂಡ್|
ಚಿನ್ನದಂತ ಬೊದ್‌ಕು ಮಾಡಿಕೆ ಮಕ್ಕ
ಕಲಿಯಕು| ||ಗೀಯ...ಗಾ...||
ದೇಶದ ಬೆನ್ ಮೂಳೆ ಯೌವ್ವನಸ್ತರ್ ತೇಳಿ|
ಎದೆ ತಟ್ಟಿ ಮಕ್ಕ ಹೇಳಿಕಣಕು|
ಯೌವ್ವನಸ್ತರೆ ಅಡ್ಡದಾರಿ ಹಿಡ್‌ದರೆ|
ದೇಶದ ಗತಿ ಮುಂದೆ ಏನಾದು...|
||ಗೀಯ...ಗಾ...||

ರಚನೆ: ಬೊಬ್ಬೀರ ರಾಧ ಗಿರೀಶ್,
ಕುಂಬಳದಾಳು.

◆◆◆◆◆

ಚರಿತ್ರೆಯನ್ನು ಇರುವ ಹಾಗೆಯೇ ನೋಡೋಣ



ಸುನೀಲ್ ಕೋರನ
ಸಹ ಸಂಪಾದಕರು
ಸ್ಮರಣ ಸಂಚಿಕೆ ಸಮಿತಿ

ಅಪ್ಪಣೆ ಕೊಡಿಸಿ ಹೇಳಿದರೆ ಅದು ಇತಿಹಾಸವಾಗುವುದಿಲ್ಲ. ಅದಕ್ಕೊಂದು ಊಹಾಪೋಹದ ಸಬೂಬು ನೀಡಿದರೆ ವಿಚಾರ ಮತ್ತೂ ಕ್ಲೀಷೆಯಾಗುತ್ತದೆ. ಅದೇ ರೀತಿ ಕಲ್ಪಿತ ನಂಬಿಕೆಗೆ ಆಧಾರ ಹುಡುಕುತ್ತಾ ಹೋಗುವುದೂ, ಮೌಖಿಕ ಆಧಾರಗಳೆಂದು ಕೆಲವು ವ್ಯಕ್ತಿನಿಷ್ಠ ಸಾಕ್ಷಿಗಳನ್ನು ಕೊಡುವದೂ ಚರಿತ್ರೆಯಾಗುವದಿಲ್ಲ.

ನೀವು ಐಗೂರಿನಿಂದ ಬಂದವರು ಎನ್ನುತ್ತಾರೆ. ಅದಕ್ಕೂ ಮೊದಲು ಇಕ್ಕೇರಿಗೆ ಬಂದಿರಿ, ಇಕ್ಕೇರಿಗೆ ಬಂದಿದ್ದು ವಿಜಯ ನಗರದಿಂದ ಮತ್ತು ಅದಕ್ಕೂ ಮೊದಲು ಉತ್ತರ ಭಾರತದಲ್ಲಿ ಎಲ್ಲೆಲ್ಲೋ ಇದ್ದಿರಿ ಎನ್ನುತ್ತಾರೆ. ಸರಿ, ಏನು ಆಧಾರ? ಎಂದರೆ ದೇಶಾವರಿ ಉತ್ತರ ಸಿಗುತ್ತದೆ. ಅಲ್ಲೊಂದು ಇಲ್ಲೊಂದು ಲೇಖನದಲ್ಲಿ ಯಾರೋ ತಮಗನಿಸಿದ ಕಥೆ ಬರೆದಿದ್ದನ್ನೇ ಸಾಕ್ಷಿ ಎನ್ನುತ್ತಾರೆ. ಅವರಾದರೂ ಏನಾದರೂ ಸಂಶೋಧನೆ ಮಾಡಿದ್ದಾರೆಯೇ ಎಂದು ನೋಡಿದರೆ ಅದೂ ಇಲ್ಲ.

ಅರೆಭಾಷಿಕ ಗೌಡ ಸಮುದಾಯ ವಲಸಿಗರು ಎಂದು ಬಿಂಬಿಸಲು ಯತ್ನಿಸುತ್ತಿರುವವರು ಈ ಕುರಿತು ಮತ್ತು ವಸ್ತುನಿಷ್ಠವಾಗಿ ಗಮನ ಹರಿಸಬೇಕು. ಒಂದು ವೇಳೆ 16ನೇ ಶತಮಾನದ ನಂತರ ಸುಳ್ಯ ಪ್ರದೇಶಕ್ಕೆ ವಲಸೆ ಬಂದದ್ದೇ, ಹೌದಾದರೆ ಅವರು ಮೊದಲೂ ಅರೆಭಾಷೆಯನ್ನೇ ಮಾತನಾಡುತ್ತಿದ್ದರೇ? ಅದಕ್ಕೂ ಮೊದಲೇ ಇದ್ದರೆನ್ನಲಾದ ವಿಜಯನಗರದಲ್ಲಿ ಈ ಭಾಷೆ ಹುಟ್ಟಿತ್ತೇ ಅಥವಾ ಉತ್ತರ ಭಾರತದಲ್ಲಿ ಇವರಾಡುತ್ತಿದ್ದ ಭಾಷೆ ಯಾವದು?

ಆಯಾಯ ಪ್ರದೇಶಕ್ಕೆ ವಲಸೆ ಹೋಗುತ್ತಿರುವಾಗ ಆಯಾಯ ಭಾಷೆಗಳನ್ನು ರೂಢಿಸಿಕೊಳ್ಳತೊಡಗಿದರು ಎಂದರೆ ಅದು ಒಪ್ಪಿಕೊಳ್ಳಬಹುದಾದಂತಹ ವಾದವೇ. ಆದರೆ ಸುಳ್ಯ ಪರಿಸರಕ್ಕೆ ಅವರು ವಲಸಿಗರು ಎಂಬುದು ನಿಜವೇ ಆಗಿದ್ದರೆ ಈ ಸಮುದಾಯ ತುಳು ಭಾಷೆಯನ್ನೊ, ಕನ್ನಡವನ್ನೊ ತಮ್ಮ ಮಾತೃ ಭಾಷೆಯಾಗಿಸಿಗೊಳ್ಳಬೇಕಿತ್ತು ತಾನೇ? ಹೊಸ ಪ್ರದೇಶವೊಂದರಲ್ಲಿ ಅದೇಕೆ ಹೊಸತೊಂದು ಭಾಷೆಯನ್ನು ಹುಟ್ಟುಹಾಕುತ್ತಾರೆ?

ಸ್ವಲ್ಪ ವಿಸ್ತಾರವಾಗಿ ನೋಡೋಣ. ವಾಸ್ತವವಾಗಿ ಪ್ರಸ್ತುತ ಜಗತ್ತಿನ ಬಹುತೇಕ ಮಂದಿ ಅವರಿರುವ ಜಾಗಕ್ಕೆ ವಲಸಿಗರು ಎಂಬುದು ಐತಿಹಾಸಿಕ ಸತ್ಯವೇ. ಇದನ್ನೇನು ಪ್ರಶ್ನಿಸುವಂತಿಲ್ಲ ಅಥವಾ ವಿವಾದಗ್ರಸ್ತವಾಗಿಸಬೇಕಿಲ್ಲ. ಇವುಗಳಿಗೆಲ್ಲಾ ವೈಜ್ಞಾನಿಕ ಪುರಾವೆಗಳೂ ಇವೆ. ಉದಾಹರಣೆಗೆ ದ್ರಾವಿಡರು ಮೂಲತಃ ಉತ್ತರಿಂದ ಒತ್ತರಿಸಲ್ಪಟ್ಟವರು ಅಥವಾ ಭಾರತೀಯ ಉಪಖಂಡದ ನಾಗರೀಕತೆ ಸಿಂಧೂ ನದಿ ಕಣಿವೆಯಿಂದ ಪ್ರಭಾವಿತವಾಯಿತು ಎಂಬುದು. ಇಲ್ಲಿ ಗಮನಿಸಬೇಕಾದದ್ದು ಏನೆಂದರೆ ಒಮ್ಮೆ ದ್ರಾವಿಡರು ಅವರಿರುವ ಈಗಿನ ಪ್ರದೇಶದಲ್ಲಿ ಸ್ಥಾಪಿತರಾದರು ಎಂದ ಮೇಲೆ ತಮ್ಮ ಅಷ್ಟೂ ಸಂಸ್ಕೃತಿ, ಭಾಷೆ ಮುಂತಾದವನ್ನು ಸಂಶಯಕ್ಕೆಡೆಯಿಲ್ಲದೆ ಸ್ವಂತಿಕೆಯಿಂದ ರೂಪಿಸಿಕೊಂಡಿದ್ದಾರೆ. ಒಬ್ಬ ಕನ್ನಡಿಗನ್ನೋ, ತಮಿಳನನ್ನೋ ನೀನು ವಾಯುವ್ಯ ಭಾರತದ ವಲಸಿಗ ಎಂದು ಎಂದರೆ ಅದು ಹೇಗೆ ಸಹನೀಯವಾಗುವದಿಲ್ಲವೋ ಹಾಗೆಯೇ ಒಬ್ಬ ಅರೆಭಾಷಿಕನನ್ನು ಯಾವದೋ ಅಪರಿಚಿತ ಪ್ರದೇಶಕ್ಕೆ ಸಂಬಂಧ ಆರೋಪಿಸಿ ಚರಿತ್ರೆ ಹೇಳುವದೂ ವಿಚಿತ್ರ.

ಈ ನಿಟ್ಟಿನಲ್ಲಿ ಪುರಾವೆಗಳನ್ನು ಒದಗಿಸುವಾಗ ಶೃಂಗೇರಿ ಮತ್ತು ವೆಂಕಟರಮಣ ದೇವರ ಧಾರ್ಮಿಕ ಸಂಪರ್ಕವನ್ನು ಉಲ್ಲೇಖಿಸಲಾಗುತ್ತದೆ. ಇದಂತೂ ಹಾಸ್ಯಾಸ್ಪದ ವಾದ ಸರಣಿ. ಏಕೆಂದರೆ ವೆಂಕಟರಮಣನ ಧಾರ್ಮಿಕ ಸಾನ್ನಿಧ್ಯಕ್ಕೆ ವಿಜಯ ನಗರದಲಪ್ಪಣೆ ಬೇಕೆಂದಿಲ್ಲ. ಅದೇ ರೀತಿ ಶೃಂಗೇರಿ ಶಕ್ತಿಪೀಠವನ್ನು ಸ್ಥಾಪಿಸಿದ್ದು ಶಂಕರಾಚಾರ್ಯರು. ಅವರೇನೂ ಕನ್ನಡಿಗರಲ್ಲ. ಭಾರತದಲ್ಲಿ ಒಂದು ಕಾಲಘಟ್ಟದಲ್ಲಿ ವ್ಯಾಪಕ ಪ್ರಭಾವ ಬೀರಿದ ಭಕ್ತಿ ಪಂಥದ ಚಳುವಳಿ ಎಲ್ಲಾ ಜನಾಂಗಳಲ್ಲೂ, ಪ್ರದೇಶದಲ್ಲೂ ಪರಿಣಾಮ ಬೀರಿದೆ.

ಇನ್ನು ವಲಸೆಗೆ ಸಿಗುವ ಕಾರಣಗಳೋ ಮತ್ತೂ ಆಕ್ಷೇಪಾರ್ಹವಾದಂತಹವು. ಒಂದೊಮ್ಮೆ ವಿಜಯ ನಗರದಿಂದ ಮುಸ್ಲಿಮರ ಭಯದಿಂದ ವಲಸೆ ಬಂದರು ಎಂದರೆ ಮತ್ತೊಮ್ಮೆ ಇಕ್ಕೇರಿ, ಐಗೂರುಗಳಿಂದ ಲಿಂಗಾಯಿತರ ಪ್ರಭಾವಕ್ಕೆ ಹೆದರಿ ಬಂದರು ಎನ್ನಲಾಗುತ್ತದೆ. ಈ ನಡುವೆ ಆ ಪ್ರದೇಶಗಳಲ್ಲಿ ಬರಗಾಲ ಇತ್ತೆಂಬುದೂ ಮತ್ತೊಂದು ವಾದ. ಮತ್ತೂ ಒಂದು ವಾದದ ಪ್ರಕಾರ ಟಿಪ್ಪು ಸುಲ್ತಾನ ಕೊಡಗಿನಿಂದ ಸಾವಿರಾರು ಜನರನ್ನು ಒಯ್ದ ನಂತರ ಅವನತಿಗೀಡಾದ, ಬರಗಾಲಕ್ಕೀಡಾದ ಕೊಡಗನ್ನು ಮತ್ತೆ ಕಟ್ಟಿ ನಿಲ್ಲಿಸಲು ಸುಳ್ಯ ಪರಿಸರದಿಂದ ಕೊಡಗಿನ ರಾಜ ಗೌಡರನ್ನು ಕ್ರಮವಾಗಿ ಕರೆಸುತ್ತಾನಂತೆ.

ದಯವಿಟ್ಟು ಒಮ್ಮೆ ಆಲೋಚಿಸಿ ನೋಡಿ; ಯಾವ ಕಾರಣಗಳಿಂದ ಈ ಹಿಂದಿನ ಪ್ರದೇಶಗಳಿಂದ ಇವರನ್ನು ವಲಸಿಗರು ಎನ್ನಲಾಗುತ್ತದೋ ಅದೇ ಸಮಸ್ಯೆ ಇನ್ನೂ ಬೃಹತ್ತಾಗಿ ಇಲ್ಲಿ ಕೊಡಗಿನ ಪರಿಸರದಲ್ಲಿ ಇವರಿಗೆ ಎದುರಾಗಿದೆ. ಇಲ್ಲಿ ಟಿಪ್ಪು ಸುಲ್ತಾನನ ದಾಳಿಗೆ ಅಂಜದ ಗಂಡೆದೆಯವರು ವಿಜಯನಗರದಲ್ಲಿ ಭಯಕ್ಕೀಡಾದರೇ? ಲಿಂಗಾಯುತರ ಪ್ರಭಾವಕ್ಕೆ ಅಂಜಿ ಇಕ್ಕೇರಿ, ಐಗೂರಿನಿಂದ ಬಂದವರು ಇಲ್ಲಿ ಕೊಡಗಿನಲ್ಲಿ ಯಾರ ಅಧೀನದಲ್ಲಿದ್ದರು? ಇವೆಲ್ಲಕ್ಕಿಂತಲೂ ಮುಖ್ಯವಾಗಿ ಭಾರತದಲ್ಲಿ ಅಧಿಕೃತವಾಗಿ ಸ್ವಾತಂತ್ರ್ಯ ಹೋರಾಟ (ಸಿಪಾಯಿದಂಗೆ-1857) ಆರಂಭವಾಗುವ ಮೊದಲೇ ಇಲ್ಲಿ 1832 -1838 ರಲ್ಲಿ ಅಮರ ಸುಳ್ಯ ಕಾಟಕಾಯಿ ನಡೆಸಿ ಬ್ರಿಟಿಷರಂಥ ಬ್ರಿಟಿಷರನ್ನೇ ದಂಗು ಬಡಿಸಿದ ವೀರರಕ್ತ ಕೊಡಗು ಗೌಡರದು. ನೆನಪಿಡಿ, ಈ ಹಂತದಲ್ಲಿ ಸ್ಥಳೀಯ ಕೆಲವರ ದ್ರೋಹವಿಲ್ಲದಿದ್ದರೆ ಈ ಹೋರಾಟದಲ್ಲಿ ಅಪ್ಪಾಜಿಗೌಡ ನೇತೃತ್ವದ ಈ ಸಮುದಾಯ, ಉಳಿದವರು ಅಸಾಧ್ಯ ಎಂದುಕೊಳ್ಳುವದನ್ನು ಸಾಧಿಸಿ ತೋರಿಸುತ್ತಿತ್ತು. ಇಂತಹ ವೀರಾಗ್ರಣಿಗಳನ್ನು ಯಾರದೋ ಭಯಕ್ಕೆ, ಮುಲಾಜಿಗೆ ಬಿದ್ದು ಎಲ್ಲಿಂದಲೋ ಬೆದರಿ ಬಂದವರು ಎನ್ನುವ ಸ್ವಯಂಘೋಷಿತ ಇತಿಹಾಸಕಾರನ ಮೂರ್ಖತನಕ್ಕೂ, ಮೌಢ್ಯಕ್ಕೂ ಅನುಕಂಪ ತೋರಬೇಕು. ಕೊಡಗಿನಂತಹ ವಿಪರೀತ ಹವಾಮಾನವಿರುವ ಪ್ರದೇಶದಲ್ಲೇ ಕ್ಷಾಮವುಂಟಾದರೆ ಮತ್ತೆ ನಾಡನ್ನು ಎತ್ತಿಕಟ್ಟಬಲ್ಲವರು ಗೌಡ ಜನಾಂಗ ಎಂದು ರಾಜ ಭಾವಿಸಿ, ಆಮಂತ್ರಣ ನೀಡುವದಿದ್ದರೆ ಅದು ಕಷ್ಟ ಸಹಿಷ್ಣು, ದುಡಿಮೆಗಾರ ವರ್ಗವೂ ಆಗಿರಬೇಕು. ಅಂಥವರು ಈ ಮೊದಲು ಯಾವದೋ ಊರಲ್ಲಿ ಬರಗಾಲವೆಂದು ವಲಸೆ ಹೋದರು ಎಂದರೆ ಸರಿಯೇ? ಹೀಗೆ ಕೊಡಗಿನ ವಿಪರೀತ ಅಸಹನೀಯ ವಾತಾವರಣ, ಬ್ರಿಟಿಷ್ ವಿರೋಧ ಮತ್ತು ಟಿಪ್ಪು ಸುಲ್ತಾನನ ಬೆದರಿಕೆಗೂ ಜಗ್ಗದೆ ಒಂದು ಸಮುದಾಯ ನಾಡನ್ನು ಕಟ್ಟುತ್ತದೆ ಎಂದರೆ ಅದರ ಆತ್ಮಶಕ್ತಿ ಎಂಥಾದ್ದಿರಬೇಕು!

ಇಷ್ಟು ಹೇಳುವಾಗ ಇನ್ನೂ ಒಂದು ಐತಿಹಾಸಿಕ ಸತ್ಯವನ್ನು ಪರಿಶೀಲಿಸಬೇಕು. ಕೊಡಗಿನ ಇತಿಹಾಸದ ಕುರಿತು ಬೆಳಕು ಚೆಲ್ಲುತ್ತದೆ ಎಂದು ಭಾವಿಸಲಾಗುವ 'ರಾಜೇಂದ್ರನಾಮೆ' ಎಂಬ ರಾಜ ವಿರಚಿತ ಪುಸ್ತಕ ಬರೆಯಲ್ಪಟ್ಟಾಗ ಕೊಡಗಿನಲ್ಲಿದ್ದದುರು ಬ್ರಿಟಿಷರ ಕೈಗೊಂಬೆ ಸರಕಾರ. ಈ ಕೃತಿ ರಚನೆ ಸರಿಸುಮಾರು ಅದೇ ಕಾಲದಲ್ಲಿ ಇಂಗ್ಲೀಷ್‌ಗೂ ತರ್ಜುಮೆಯಾಗುತ್ತದೆ ಎಂದರೆ ಇಂಗ್ಲಿಷರ ಕೃಪಾದೃಷ್ಟಿಯಿಂದ ತಪ್ಪಿಸಿಕೊಂಡಿರಲು ಸಾಧ್ಯವೇ ಇಲ್ಲ. ಇದೇ ಇಂಗ್ಲೀಷರು ಅಮರ ಸುಳ್ಯ ದಂಗೆಯ ನಂತರ ಕೊಡಗು ಗೌಡರ ವಿರುದ್ಧ ಹಗೆ

ಸಾಧಿಸುತ್ತಲೇ ಬಂದರು ಮತ್ತು ಇದಕ್ಕೆ ಪೂರಕವಾಗಿ ಇಂಗ್ಲಿಷರಿಗೆ ಅಚ್ಚುಮೆಚ್ಚಿನ ಒಂದು ಸ್ಥಳೀಯ ವರ್ಗವೂ ಬೆಂಬಲಕ್ಕಿತ್ತು. ಇಂತಹ ಪರಿಸ್ಥಿತಿಯಲ್ಲಿ ಚರಿತ್ರೆಯ ಲಭ್ಯವಿರುವ ಸಾಕ್ಷ್ಯಗಳನ್ನೂ ಪೂರ್ಣವಾಗಿ ನಂಬುವಂತಿಲ್ಲ.

ಒಂದು ಮಾತಂತೂ ಸತ್ಯ. ವಿಶಾಲ ಕೊಡಗು ಪ್ರದೇಶದ ಗೌಡರ ಭಾಷೆ, ಸಂಸ್ಕೃತಿ, ಕುಡಿಯೊಡೆದದ್ದು ಇದೇ ಪ್ರದೇಶದಲ್ಲಿ. ತನ್ನ ವೀರರಮಣೀಯ ಸಂಸ್ಕಾರವನ್ನು ಸೃಷ್ಟಿಸಿಕೊಂಡದ್ದೂ ಇದೇ ಪರ್ಣಶಾಲೆಯಲ್ಲಿ. ಇದನ್ನು ಯಾವ ಇತಿಹಾಸವಾಂಚಿತನೂ ಅಲ್ಲಗಳೆಯಲಾರ. ಹಾಗೊಮ್ಮೆ ನೀವು ಮಾನವನ DNA ಹುಡುಕುತ್ತಾ ಹೋದರೆ ಸೀದಾ ಆಫ್ರಿಕಾ ಖಂಡಕ್ಕೆ ಹೊಗಬೇಕಾದೀತು! (ಅಂದಾಗ ಇಲ್ಲಿ ಅಥವ ಎಲ್ಲಿಯೂ ಮೂಲನಿವಾಸಿಗಳೇ ಸಿಗಲಿಕ್ಕಿಲ್ಲ)

ಇಲ್ಲಿ ಇನ್ನೊಂದು ಸ್ವಾರಸ್ಯವನ್ನು ಗಮನಿಸಿ ಕೊಡಗಿನ ಕುಲದೇವಿ ಎನ್ನಲ್ಪಟ್ಟವಳು ಕಾವೇರಿ. ಕಾವೇರಿಯ ಬಗೆಗೇನೂ ವಿವಾದಗಳಿಲ್ಲ ತಾನೇ. ಇಂತಹ ಕಾವೇರಿ ಮಾತೆಯ ಪ್ರಥಮ ಮಕ್ಕಳು ಕೊಡಗು ಗೌಡರು. ಹೀಗೆಂದಾಗ ಇಲ್ಲೇನೂ ಯಾವ ಜನಾಂಗವನ್ನೂ, ಜನರನ್ನೂ ಅಣಕಿಸುವ ಉದ್ದೇಶವಿಲ್ಲ. ಅದರೆ ಕೊಡಗು ಗೌಡರನ್ನು ಪಕ್ಷಪಾತಕ್ಕೆ, ಅಪವಾದಕ್ಕೆ ಈಡು ಮಾಡಿದರೆ ಪ್ರಮಾಣಕ್ಕಿದ್ದಾಳೆ ತಾಯಿ ಕಾವೇರಿ.

ಕವನ

ಕೊಡಗಿನ ಯೋಧರು



ದೇಶ ಕಾಯುವ
ಯೋಧರೆ,
ಕೆಚ್ಚೆದೆಯ ವೀರರೆ,
ನಿಮಗಿದೊ ನಮ್ಮ ನಮನ

ಶತ್ರುಗಳ ಧಾಳಿಗೆ ಎದೆಕೊಡುವ ಶೂರರೆ,
ಗಂಡುಗಲಿ ಧೀರರೆ
ನಿಮಗಿದೋ ನಮ್ಮ ನಮನ

ಉತ್ತುಂಗ ಶೃಂಗದಲಿ
ಗಿರಿ ಶಿಖರದ ನಡುವಲಿ
ತೋರುವಿರಿ ವೀರ ಸಾಹಸವ
ಮರೆಯುವಿರಿ ವೀರ ಶೂರತನವ

ಭಾರತಾಂಬೆಯ ಮಕ್ಕಳೇ
ಕೊಡಗಿನ ಸೇನಾನಿಗಳೇ
ಎದ್ದೇಳಿ ಎದ್ದು ಹೋರಾಡಿ
ಜಯವ ನೀವು ಪಡೆಯಿರಿ.

ವೀರ ಶೂರರ ನಾಡಿದು ಈ ಕೊಡಗು
ಅದೆಷ್ಟೊ ವೀರ ಪುತ್ರರ ಪಡೆದಿರುವೆ
ಮಾತೇ ಕಾವೇರಮ್ಮನ ಮಡಿಲಲಿ

ಛಲದಿಂದ ಮುನ್ನುಗ್ಗಿ ನಡೆವೆ
ಮದ್ದು ಗುಂಡಿಗೆ ಎದೆ ಕೊಡುವೆ
ನಿನ್ನನ್ನು ಪಡೆದ ಆ ಮಾತೆ
ಅದೆಷ್ಟು ಧನ್ಯಳೊ
ನಿಮಗಿರಲಿ ಭಾರತಾಂಬೆಯ ದಯೆ.

- ಕೇಕಡ ದೀಪಕ್ ರವೀಂದ್ರ,
ಕುಂದಚೇರಿ ಗ್ರಾಮ ಮತ್ತು ಅಂಚೆ.

♦♦♦♦♦

ಅರೆಭಾಷೆ ನಮ್ಮದ್

- *ಸುಮನ್ ಮೂಡಗದ್ದೆ*
ಗೋಣಿಕೊಪ್ಪ

ಸೊಗಸೇ ಸೊಗಸ್. ಅರೆಭಾಷೆಯ ಲಯ, ಅದರ ಛಂದ, ಮಣ್ಣ್‌ಗೆ ಹತ್ತ್‌ರದ ಗುಣ ನಿಜವಾಗಿ ಅನನ್ಯ. ಅರೆಭಾಷೆ ನಮ್ಮದ್. ನಮ್ಮ ಗರ್ವ.

ಹೌದಾ? ಅರೆಭಾಷೆಗೊಂದ್ ಬ್ಯಾರೆ ಹೆಸ್‌ರ್ ಕೊಡೊಕಾ? ಅರೆಭಾಷಿಕರ್ನ ಬುಟ್ಟ್ ಬೇರೆಯವ್ ಅದ್ನ ಅರೆ-ಭಾಷೆ=ಅರ್ಧ ಭಾಷೆ ಅಂತ ಅಂದ್‌ಕಂಬಕೆ ಸಾಧ್ಯವುಟ್ಟಾ? ಯಾರಾದ್ರ್ ಹಾಂಗೆ ಹೇಳ್ರೆ ನಮ್‌ಗೆ ಅದ್ರ್‌ಂದ ಕೆರಿಕಿರಿ ಅನ್ನಿದೆನಾ?

ಇರ್‌ದು. ಒಮ್ಮೊಮ್ಮೆ ಹಂಗಾದೆ. ಆದ್ರೆ ಇದ್ಕೇನ್ ಉತ್ತರಾಂತ ನಾವ್ ಯೋಚಿಸಿಕೇ ಹೊರ್‌ತ್ ಇಂಥಾ ವಿಚಾರಕೆ ನಮ್ಮ ಮೂಲ ಹೆಸರ್‌ನೇ ಬುಟ್ಟ್ ಬೇರೆ ಯಾವ್‌ದೋ ಹೆಸ್‌ರ್‌ನ ಜೋಡಿಸಿಕಂಡ್ ಪಲಾಯನ ಮಾಡೊಕೂಂತ ಅಲ್ಲ. ಈ ನಿಟ್ಟ್‌ಲಿ ಯೋಚಿಸಿರೆ ನಮ್‌ಗೆ ಕೆಲವು ನಿಜಾಂಶಗ ಗೊತ್ತಾದವೆ. ಈಗ ನೋಡಿ, ನಾವ್ ನಮ್ಮ ರಾಷ್ಟ್ರದ ಅಧ್ಯಕ್ಷರ್ನ ಏನ್‌ಂತ ಹೇಳ್‌ವೆ? ರಾಷ್ಟ್ರಪತಿ ಅಂತ ತಾನೆ?. ಅಂದ್ರೆ ರಾಷ್ಟ್ರ ಬೇರೆ, ಪತಿ ಬೇರೆ ಅಲ್ಲ-ಅದ್ 'ರಾಷ್ಟ್ರಪತಿ'. ಅದ್ ಒಂದ್ ಸ್ಥಾನದ ಹೆಸ್ರ್. ಅದನ್ನೇ ಇನ್ನೊಂದ್ ದಿಕ್ಕ್‌ಂದ ಯೋಚ್ನೆ ಮಾಡಿ. ಒಂದ್ ವೇಳೆ, ಹೆಣ್ಣ್ ಮಗುಳು ಒಬ್ಬ್ರ ಪ್ರೆಸಿಡೆಂಟ್ ಆದರೂ ಅದ್ 'ರಾಷ್ಟ್ರಪತಿ'ನೇ. ಅದ್ 'ರಾಷ್ಟ್ರ-ಪತ್ನಿ'ಂತ ಆದುಲ್ಲೆ. ಅದೇ ಥರ 'ಅರೆಭಾಷೆ'ಂತ ಹೇಳುವಂತದ್ ಒಂದೇ ಶಬ್ಧ. ಅದೆ ಬೇರೆ, ಭಾಷೆ ಬೇರೆ ಆದುಲ್ಲೆ.


ಇನ್ನ್ 'ಅರೆ' ಎನ್ನುವ ಶಬ್ಧಕೆ ಏನೇನ್ ಅರ್ಥಗ ಒಳೋ ನೋಡ್ನೊ. ಅರೆ ಅಂದರೆ ಅರ್ಧ ಅಂತ ಅರೆಭಾಷೆಲಿ ಎಲ್ಲೂ ಇಲ್ಲೆ. ಅದ್ ಕನ್ನಡಲಿ ಮಾತ್ರ ಉಟ್ಟು. ಅರೆಭಾಷೆಲಿ ಅರೆ ಅಂತ ಹೇಳ್‌ದುಕೆ ಇರುವ ಅರ್ಥ ಅಂದ್ರೆ 'ಅರೆಯುವುದು'='ತೇಯುವುದು' ಉದಾ: 'ಗಂಧ ಅರೆಯದು'. ಅಂದರೆ ಸಾಂಧ್ರವಾಗಿರುವದರ್ನ ಒರೆಗೆ ಹಚ್ಚಿ ಮತ್ತಷ್ಟ್ ಸತ್ವಶಾಲಿಯಾಗ್‌ಸುದು. ಅರ್ಥಪೂರ್ಣವಾಗಿ ಅದರ ಉಪಯೋಗ ಆದು ಅಂತ ಅರ್ಥ. ಹಂಗೇನೇ 'ಅರೆ' ಅಂತ ಹೇಳ್‌ದುಕೆ ಕಠಿಣವಾದದ್ದ್, ಕಲ್ಲ್‌ನಂತಹ ಗಟ್ಟಿತನ, ದೃಢತೆ ಹೊಂದಿರುವಂಥ ವಸ್ತು ಅಂತಾನೂ ಅರ್ಥ ಉಟ್ಟು. ಇನ್ನ್ ಅರೆ ಅಂತ ಹೇಳುವಂಥದ್ದನ್ನ ಮೆಕ್ಕ್‌ಲ್ ಮಣ್ಣ್ ಅಂತಾನೂ ಉಪಯೋಗಿಸುವೆ.

ಯಾವ್‌ದೇ ಒಂದ್ ಹೆಸ್‌ರ್‌ನ ಹಿಂಗೆಲ್ಲಾ ಒಡ್‌ದ್ ನೋಡ್‌ಕಾದ್. ವಿಪರೀತ ಅರ್ಥ ಹಚ್ಚ್‌ಕಾದ್. ಅದ್ ಕಿಡಿಗೇಡಿ ಕೃತ್ಯ ಆದೆ ಅಷ್ಟೇ. ಅಂಥವರ್ನ ಹೆಚ್ಚೆಂದ್ರೆ ಮುರ್ಖರ್‌ಂತ ಗ್ಯಾನಮಾಡಿಕಂಡ್ ನಿರ್ಲಕ್ಷ್ಯ ಮಾಡೊಕು ಅಷ್ಟೆ. ಈಗ ಬೆಂಗಳೂರು ತೇಳುವ ಹೆಸ್‌ರ್‌ಲೇ ಊರು ಅಂತ ಹೇಳ್‌ವ ಶಬ್ಧ ಉಟ್ಟು. ಆದರೂ ಬೆಂಗಳೂರ್ ನಗರ ಅಂತ ಯಾಕೆ ಹೇಳುವೆ? ಬೆಂಗ್ ನಗರ ಅಂತ ಹೇಳುಲ್ಲೆ. ಇಂತಹ ಉದಾಹರಣೆಗ ಬೇಕಷ್ಟ್ ಸಿಕ್ಕ್‌ವೆ. ನೀವೇ ಯೋಚ್ನೆ ಮಾಡಿ.

ನಮ್ಮ ಭಾಷೆ ನಮ್ಮದ್, ನಮ್ಮ ಭಾವ ನಮ್ಮದ್, ನಮ್ಮ ಲಯ ನಮ್ಮದ್, ನಮ್ಮ ಛಂದ ನಮ್ಮದ್.

♦♦♦♦♦

'ದಿಬ್ಬಣ ಹೋಕನ'



- ಅಮೆ ಕಮಲಾ ಗಣಪತಿ,
ಕುಶಾಲನಗರ.

ಹಾಸ್ಯ ಕತೆ

ಸುಮಾರ್ 60ವರ್ಷಗಳ ಹಿಂದೆ ಈಗನಂಗೆ, ಹೈದನು , ಗೂಡೆನೂ ಒಟ್ಟಿಗೇ ಕೂರ್ಸಿ, ದಂಪತಿ ಮೂರ್ತ ಮಾಡ್ವ ಕ್ರಮ ಇತ್ಲೆ. ಅವ್ರವ್ರ ಮನೆಲಿ ಬೇರೆ ಬೇರೆ ಮೂರ್ತ.

ಹೈದನ ಮನೆಲಿ ಮೂರ್ತ ಕಳ್ದ್ ಊಟೋಪಚಾರ ಆದ ಮೇಲೆ ದಿಬ್ಬಣ ಹೊರ್ಟ್ ಕೂರ್ಸಿ ಗೂಡೆ ಮನೆಗೆ ಹೋದು, ಅಲ್ಲಿ ಶಾಸ್ತ್ರ ಸಂಪ್ರದಾಯ ಎಲ್ಲಾ ಮುಗ್ಸಿ, ಗೂಡೆನ ಕರ್ಕಂಡ್ ವಾಪಾಸು ಬಾದು. ದಿಬ್ಬಣ ಹೋಕನ ಮದುವಣ, ಅಡುವಳಿ, ದಿಬ್ಬಣದ ಮುಖ್ಯಸ್ಥ, ಆ ವರ್ಷ ಮದ್ವೆಯಾದ ಹೊಸ್‌ಬರ್, ಶಾಸ್ತ್ರ ಸಂಪ್ರದಾಯ ಗೊತ್ತಿರ್ವ ಹಿರಿಯರ್ , ಮತ್ತೆ ಊರವು ನೆಂಟ್ರ್‌ತೇಳಿ 50-60 ಜನಕ್ಕೆ ಕಮ್ಮಿ ಇಲ್ಲದಂಗೆ ಹೊರಟ್ ಹೋಕನ ಮೈಸೂರು ದಸರ ಮೆರವಣಿಗೆನಂಗೆ.

ಆ ಕಾಲಲಿ ಕಾರ್, ಬಸ್ಸೆಲ್ಲ ಮೊದ್ವೆಲ್ಲಿಂದ? ಎಷ್ಟೇ ದೂರ ಇರಲಿ ನಡ್‌ಕಂಡೇ ಹೋದು , ನಡ್‌ಕಂಡೇ ಬಾದು ದೊಡ್ಡಮನೆ ಅಣ್ಣಕೂಸುನ ಮೈದ್ನ, ಮದೆನಾಡ್‌ನ. ಗೂಡೆ. ಅದೇನ್ ಬಾರಿ ದೂರ ಅಲ್ಲ . ಸುಮಾರ್ ಹತ್ತ್ ಮೈಲಾದು. ಆದರೆ ಕಾಡ್‌ದಾರಿ, ಪಾಲೆಕಾಡ್ ಚಡಾವು ಹತ್ತಿ ಬಾರನ ಬಕ್ಕ ದಾಟಿ, ಸಂಪಿಗೆ ಮೊಟ್ಟೆ ಹತ್ತಿ, ಕರಡಿ ಮೊಟ್ಟೆ ಇಳ್ದರೆ ಮದೆನಾಡ್ ಸಿಕ್ಕಿದೆ.

ನಮ್ಮ ಇಡೀ ಊರುಲಿ ಹೊಸಾರೆ ಸಣ್ಣಮ್ಮತ್ತೆನ ಮಾತ್ ಮೀರಿ ನಡೆಯುವಂಗೆ ಇಲ್ಲೆ. ಸಣ್ಣಮ್ಮತ್ತೆಗೆ ಗೊತ್ತಿಲ್ಲದ ಶಾಸ್ತ್ರ ಇಲ್ಲೆ. ಹಸೆ ಬರೆಯದು, ಸೋಬಾನ ಹಾಡ್ದು, ಹತ್ತ್‌ಕುಟುಂಬ, ಹದಿನೆಂಟ್ ಗೋತ್ರ ತೇಳಿ ಮೂರ್ತಕೆ ಕುದುರುಸುವಲ್ಲಿಂದ ಹಿಡ್ದ್ ತುಪ್ಪ ತಕಂಡ್ ಹೋಗಿ ಬಂದ್ ಆಟಿಕುದ್ರಿಕೆ ಕಳ್ಸುವಲ್ಲಿಗೆ ಮುಟ್ಟ ಸಣ್ಣಮ್ಮತ್ತೆ ಗ್ರೀನ್ ಸಿಗ್ನಲ್ ಕೊಡದೆ ಯಾವ ಜಂಬರನೂ ನಡೆಂಗಿಲ್ಲೆ. ಹಂಗೆ ಅವರ ಮಾತ್ ಕೇಳದೆ ಸೊಕ್ಕುಲಿ ಜಂಬರ ನಡ್ಸಿರೆ ಏನಾರೊಂದು ಕೇಡ್ ಉಟ್ಟೇ ಉಟ್ಟುತ ಎಲ್ಲವೂ ಹೇಳ್‌ತಿದ್ದೊ.

ಮೂರ್ತಕಳ್ತ್ ಚಪ್ಪರದ ಮೇಲ್ಕಟ್ಟ್ ಅಡಿಂದ ಮದು ಮಂಜನ ಏಳ್ಸಿದೊ. ಉಟೋಪಚಾರ ಆಗಿ ದಿಬ್ಬಣ ಹೊರಡಿಕೆ ಹೊತ್ತಾತ್, ಸಣ್ಣಮ್ಮತ್ತೆ ದಿಬ್ಬಣದ. ಮುಖ್ಯಸ್ಥರ, ಅಡುವಳಿನ, ಮತ್ತೆ ಸ್ವಲ್ಪ ಹಿರಿಯರ ಗುಡ್ಡೆ ಹಾಕಂಡ್ ಸೂಚನೆ ಕೊಡಿಕೆ ಸುರ್ ಮಾಡ್ತ್, ಬೇಗ ಬೇಗ ಹೊರ್ಡಿ. ಇಂದ್ ಶುಕ್ರಾರ. ಅಮಾಸೆ ಬೇರೆ. ಹೊತ್ತು ಕಂತಿಕೆ ಮುಂದೆ ಪಾಲೆಕಾಡ್ ಚಡಾವು ಹತ್ತಿ ಬಾರನ ಬಕ್ಕದಾಟಿ ಬುಡಕು. ಬಕ್ಕಲಿ ದೊಡ್ಡ ಚಾಕಟೆ ಮರದ ಬುಡಲಿ ಒಂದು ಅಗಲದ ಕಲ್ಲುಟ್ಟು; ಅದರ್ಲಿ, ಮೂರು ಎಲೆ, ಮೂರು ಹೋಳು ಅಡಿಕೆ ಮತ್ತೆ ಹುಂಞ ಹೊಸಪು ಮಡ್ಗಿಕೆ ಮನಿ ಮರ್ತ್ ಬುಡ್ಬಡಿತ ಸ್ವಲ್ಪ ಗಾಬರಿ ಗಾಬರ್ಲಿ ಹೇಳ್ತ್ ಅಷ್ಟ್ ಹೇಳಿ, ಮುಂದಕ್ಕೆ ಆ ಬಕ್ಕ, ಚಾಕಟೆ ಮರ ಅದರ ಬುಡದ ಕಲ್ಲ್, ಮಂಗ್ಳಾರ, ಶುಕ್ರರ ಆ ದಾರಿ ಬೀರನ ತಿರ್‌ಗಾಟನೆಲ್ಲ ವರ್ಣನೆ

ಮಾಡ್ತ್ ಶುಕ್ರಾರ ಜೊತೆಗೆ ಅಮಾಸೆ ಬೇರೆ. ಬೀರ ಕತ್ತಲಾಕನ ಆ ದಾರಿಗಾಗಿ ದಾಟ್‌ಕನ ಆ ಕಲ್ಲ್‌ಲಿ ಕುದ್ದ್, ಎರಡ್ ಆರ್ಭಟ ಕೊಟ್ಟ್ ಮುಂದಕ್ಕೆ ಹೋದುಗಡ. ಆದ್ಕೆ ಅಲ್ಲಿ ಎಲೆ ಅಡಕೆ ಮಡ್ಗಿ ಹೋದು. ಸ್ವಲ್ಪ ಹೆಚ್ಚು ಕಮ್ಮಿ ಆದರೂ ರಕ್ತ ಕಕ್ಕ್‌ಸದೆ ಬುಡುದುಲೆಗಡ. ಇದಕ್ಕೆ ಸಪೋರ್ಟಾಗಿ ಹಿಂದೆ ನಡ್ಡ ಎರಡು ಮೂರು ಕಥೆಗಳ ಉದಾಹರಣೆ ಕೊಡ್‌ಕನ ಎಂತ ಧೈರ್ಯಗಾರರಿಗೂ ಹೆದ್ರಿಕೆ ಆಗದೆ ಉಟ್ಟಾ?

ಎಲ್ಲಾ ಹೊರ್‌ಡಿಕೆ ರೆಡಿಯಾತ್. ನಾಲ್ಕೈದ್ ಹುಡ್ಗರ್ ಮಾತ್ರ ಪಿಸಿ ಪಿಸಿ ಮಾತಾಡಿಕಂಡ್ ಹಿಂದೆ , ಹಿಂದೆ ಆಡ್ತಿದ್ದೊ. ಅದರಲಿ ಎರಡ್ ಜನ ಮಿಲ್ಟ್ರಿಗೆ ಹೋಗಿಬಂದವು. ಅಜ್ಜಿ ಮಾತಿಗೆ ಬೆಲೆ ಕೊಡದೆ, ಸ್ವಲ್ಪ ಸೊಕ್ಕು ಆಡ್ತಿದ್ದೊ. ಆಡಿಕೂಡಿ ದಿಬ್ಬಣ ಹೊರಟತ್. ಒಂದು ಮೈಲಿ ಹೋದ ಮೇಲೆ ಈ ಹುಡ್‌ಗರ್ ದಿಬ್ಬಣದ ಮುಖ್ಯಸ್ಥನ ಗುಟ್ಟಲ್ಲಿ ಕರ್ದ್ "ಸಣ್ಣಪ್ಪ ನಮ್ಮ ಮನೆ ಕೆಲಸದ ಗುರುವನ ಮಲೆಗೆ ಬೈನೆಕಳ್ಳ್ ತಾಕೆ ಕಳಿಸಿ ಆವುಟು. ಹತ್ ಸೇರ್‌ನ ಗಡಿಗೆ ಮತ್ತೆ ಆರ್‌ಸೇರ್ ಹಿಡಿವ ಗುಂಬ ತುಂಬ ತರಕೂತ ಹೇಳಿಯೋಳೆ. ಸ್ವಲ್ಪ ಕುದ್ರನೊ, ಎಲ್ಲವೂ ಎರಡೆರಡ್ ಗ್ಲಾಸ್ ಹಾಕಂಡ್ ಪೋಯಿ. ದಾರಿನಡೆಯಿಕೆ ಒಳ್ಳೆದಾದೆ. ಹೇಳ್‌ಕನ ಎಲ್ಲವೂ ಒಪ್ಪಿ ಕುದ್ದೊ. ಗಂಟೆ ಒಂದು ಕಳ್ದ್, ಹೊತ್ತು ಕಂತಿಕೆ ಆತ್, ಗುರುವನ ಅಡ್ರೆಸ್ ಇಲ್ಲೆ. ಬೇಜಾರ್ ಸಿಟ್ಟ್ ಎಲ್ಲ ಒಟ್ಟಿಗೆ ಬಂದ್ ಅಡಿರಿತ್ ಗೂಡೆಗ ತೀರ ಗಂಡಸರ ಬಯ್ಯಿಕೆ ಸುರುಮಾಡ್ದೊ. ಎಲ್ಲಾ ಎದ್ದ್ ಹೊರಟೊ. ಪಾಲೆಕಾಡ್ ಚಡಾವು ಹತ್ತ್‌ಕನ ಕತ್ತಲಾಗಿ ಹೋತ್. ಈಗ ನಂಗೆ ಟಾರ್ಚ್ ಉಟ್ಟಾ ಆ ಕಾಲಲಿ? ಕಣ್ಣಿಗೆ ಬೆರಳ್ ಹೆಟ್ಟರೆ ಕಾಂಬೊದಿಲ್ಲೆ. ಇತ್ತ ಗುರುವನ ಬೈನೆಕಳ್ಳ್ ಇಲ್ಲೆ. ಅತ್ತ ಕಣ್ಣು ಕಾಂಬೊದಿಲ್ಲೆ. ಒಮ್ಮೆ ಬಾರನ ಬಕ್ಕ ದಾಟಿ ಬುಟ್ರೆ ಸಾಕಪ್ಪ ತೇಳಿ ಕೈ ಕೈ ಹಿಡ್ಕಂಡ್ ಚಾಕಟೆ ಮರದ ಹಕ್ಕಲೆ ಬಂದೊ. ಎಲ್ಲವುಕೆ ಧೈರ್ಯ ಬಾತ್.

ಎಂತರ ಹೇಳ್ದು? ಕೊಂಪುಳಿ ಮೊಟ್ಟೆಂದ. ಓ ಹೋಯಿತ ಒಂದು ಆರ್ಭಟ ಕೇಳ್ತ್. ಇಡೀ ಊರೆ ನಡ್‌ಗಿ ಹೋತು. ಒಟ್ಟಿಗೆ ಬಗ್‌ತ ಬೆಂಕಿ ಹೊತ್ತಿತ್. ಯಾರ ಕಾಲೂ ಒಂದು ಹೆಜ್ಜೆ ಮುಂದಕ್ಕೆ ಹೋದುಲೆ. ನಿತ್ತಲ್ಲೆ ನಡುಗುವೆ. ಸಣ್ಣಮ್ಮತ್ತೆನ ಮಾತ್ ಕೇಳಿದ್ದರೆ ಈ ಪಾಡ್ ಬಾತಿತ್ತ್‌ಲೆ ತ ಯಾರೊ ಒಬ್ಬ ಗೊಣಗಿತ್. ದಿಬ್ಬಣದ ಒಟ್ಟಿಗಿದ್ದ ಆಚೆಮನೆ ಅಪ್ಪುಣಿ ಬಾವ ಒಬ್ಬ ಮಾತ್ರ ಹೆದ್ರಿ ಬಡ್ಚಿ ಓಡಿ ಬುಡ್ತ್. ಐದ್ ಮಿನಿಟ್ ಆಗಿರ್ದು, ಎರಡನೆ ಆರ್ಭಟ ಕೊಡ್ತ್, ಬನ್ನೆ ಬನ್ನೆತ ಹೇಳ್ದಂಗೆ ಕೇಳ್ತ್, ಮತ್ತೆ ಬೆಂಕಿ ಹೊತ್ತಿತ್. ಅದೆಲ್ಲಿ? ಅಂದಾಜಿ. 150ಗಜ ದೂರಲಿ. ಅಷ್ಟ್ ಹೊತ್ತು ಒಬ್ಬನೊಬ್ಬ ಹಿಡ್ಕಂಡ್ ನಿತ್ತಿದ್ದವು ತೀರಾ ಚದರಿ ಬುಟ್ಟೊ. ಆ ಕತ್ತಲೆಲ್ಲಿ ಎಲ್ಲಿ ಓಡುದು? ಎಲ್ಲಿ ಅಡ್‌ಗುದು? ಯಾರ್‍ನ ಕರಿಯೊದು? ಯಾರೊಟ್ಟಿಗೆ ಮಾತಾಡ್ದು?

ಮದುವಣ್ಣ ಎಲ್ಲಿಯೋ, ಅಡುವಳಿ ಎಲ್ಲಿಯೊ? ಅವ್ರವ್ರ ರಕ್ಷಣೆ ಅವ್ರವ್ರ ಕೈಲಿ, ಅದೊಂದು ಅರಮನೆ ಕಡಂಗ. ಆ ಕತ್ತಲೆಲಿ ಎರಡೆರಡ್, ಮೂರು ಮೂರು ಜನ ತಬ್ಬಿಕಂಡ್ ಮಾತಾಡದೆ ಕುದ್ದೊ. ಸ್ವಲ್ಪ ಅಲ್‌ಗಾಡಿರೆ ದರ್ಗ್ ಸದ್ದ್‌ಕೇಳ್ರೆ ಇನ್ನೂ ಅಪಾಯ, ಯಾರೂ ಮಸ್‌ಗಿತ್‌ಲೆ. ಚಾಕಟೆ ಮರದ ಹತ್ರ ಜಾಗ ಹಿಡ್ದ ಒಂದೆರಡ್ ಜನ ಬೀರ ಒಂದೆರಡ್ ದಪ ಕೆಮ್ಮಿದಂಗೆ ಏನೋ ಗೊಣಗುಟ್ಟಿದಂಗೆ ಕೇಳಿದ್ದೊಗಡ. ಆ ಕಡಂಗಲಿ ಕೊಕ್ಕರ್ಚೆ ಬಲ್ಲೆ ತುಂಬಿತ್ತ್, ಎದ್ದ್ ಬಿದ್ದ್ ಓಡ್‌ಕನ ತಲೆಲಿದ್ದ ರುಮಾಲೆಲ್ಲ ಬಲ್ಲೆಲಿ ಕೋಸಿ ಹೋತು. ಬಟ್ಟೆ ಎಲ್ಲಾ ಹರ್ದ್ ನೇತಾಡ್ದೆ.

ಯಾರ್‍ಯಾರ್ ಎಲ್ಲಿವಳೋತ ಹುಡ್ಕಿಕೆ ಆದೆಯ? ಬಕ್ಕದಾಟಿ ಓಡಿ ಹೋದ ಅಪ್ಪುಣಿ ಬಾವ ಮಾತ್ರ ಎದ್ದ್ , ಬಿದ್ದ್ ಹರ್‌ಕಂಡ್ ಹೋಗಿ ಗದ್ದೆಬೈಲ್‌ಗೆ ಎತ್ತ್‌ಕನ ನಾಯಿಗ ಬೊಗಳ್ದು ಕೇಳಿ ಅಂದಾಜಿ ಮೇಲೆ ಕಡ್ಯದ

ಕಾಳಪ್ಪ ಮಾವನ ಮನೆಗೆ ಹೋಗಿ ಕರಿಯಕನ ಮನೆಯವು ಎದ್ದ್ ಬಂದ್ ಬಾಗಿಲ್‌ತೆಗ್ದೊ. ನೋಡ್ರೆ ಅಪ್ಪುಣಿ. ದೂರದ ನೆಂಟ ಬೇರೆ. ಅಪ್ಪುಣಿ ಬಾವ ನಡ್ಗಿದೆ. ಒಂದೇ ಒಂದು ಮಾತ್ ಹೊರ್ಡುತ್ತಿಲ್ಲೆ. ಒಳಗೆ ಕರ್ಕಂಡ್ ಹೋಗಿ ವಿಚಾರಣೆ ನಡ್ಸಿಸಿದೊ. ಅಪ್ಪುಣಿ ನಡ್‌ದ ಕತೆನೆಲ್ಲ ಕಾಳಪ್ಪ ಮಾವನೊಟ್ಟಿಗೆ ಹೇಳ್ತ್. ಅಷ್ಟೊತ್ತಿಗೆ ಗಂಟೆ ಎರಡಾಗಿರ್ದ್ದ.

ಅಪ್ಪುಣಿನ ಮಾತ್ ಕೇಳಿ ಕಡ್ಯದ ಮನೆಯವುಕೆ ನಗೆ ತಡಿಯಕಾತ್‌ಲೆ. ಅದ್ ಯಾವ ಸುಡುಗಾಡ್‌ನ ಬೀರನೆ? ನಾವೆಲ್ಲಾ ಹಗಲ್ ರಾತ್ರಿತ ಹೇಳದೆ ಆ ಬಕ್ಕದ ಕಂಡಿಲೆ ಎಷ್ಟ್ ಸತಿ ಹೋದವೆ. ಇಂದಿಗೆಮುಟ್ಟ ಬೀರನ ಕಥೆ ಹೇಳ್ದವು, ಕೇಳ್ದವು ಇಲ್ಲೆ. ಏಳ್ ಪೋಯಿ. ದಿಬ್ಬಣದ ಪಾರ್ಟಿನ ಹುಡ್ಕನೊ ತೇಳಿ ಎರಡ್ ಮೂರು ಜನ ಸೂಟೆ ಹೋಸಿಕಂಡ್ ಹೊರ್‌ಡ್‌ಕನ ಕೋಳಿ ಕೂಂಗಿತ್. ಬಕ್ಕಲಿ ಬಂದ್ ಎಲ್ಲರ ಹೆಸ್ರ್ ಹಿಡ್ದ್ ಕರಿಯಕನ ಒಬ್ಬೊಬ್ಬನೆ ಅಡಂಗಿ ಕುದ್ದಲ್ಲಿಂದ ಎದ್ದ್ ಬಂದೊ.

ಅಷ್ಟ್ ಹೊತ್ತಿಗೆ ಮದೆನಾಡ್ ಗೂಡೆ ಮನೆಲಿ ಗಾಬ್ರಿ. ದಿಬ್ಬಣ ಇನ್ನೂ ಬಾತ್ಲೆ. ಏನಾತ್? ದಾರಿಮನಿ ತಪ್ಪಿಕಂಡ್ ಮಲೆದಾರಿ ಏನಾರ್ ಹಿಡ್ದ್ ಹೋಗಿ ತೊಂದರೆ ಆಗಿರುಕುತ್ತೇಳಿ ಮೂರು ಜನ ಹುಡ್ಕಿ ಕಂಡ್ ಬರ್ತಾ ಇದ್ದೊ. ರಾತ್ರಿ ನಡ್ದ ಕಥೆ ಕೇಳಿ ಮರ್ದ್ದ ದೊನಗಾಡುದೋ ಗೊತ್ತಾತ್ಲೆ, ಆದ ಸಂಗತಿ ಯಾರಿಗೂ ಹೇಳ್ಬಡಿ. ಬೇಗ ಹೊರ್‌ಡಿ. ಗೂಡೆ ಮನೆಲಿ ಎಲ್ಲ ಗಾಬ್ರಲಿವಳೊತ್ತೇಳಿ, ಹೊರ್ಡಿಸಿರೆ ಹೆಳ್ಮಕ್ಕ ಮತ್ತೆ ಗೂಡೆಗ ನಮ್ಮ ಕುತ್ತಿಗೆ ಕೊಯ್ದ್ರೂ ನಾವು ಬಾದುಲೆ. ಸೀರೆ ತೀರಾ ಹರ್ದ್ ಹೋಗಿ, ಮಕ ಎಲ್ಲಾ ಕೊತ್ತಿ ಪರ್ಚಿದಂಗೆ ಆಗಿ ರಕ್ತ ಬಂದದೆತ ವಾಪಾಸ್ ಹೊರ್ಟೊ. ಕಾಳಪ್ಪ ಮಾವ ಏನೇನೊ ಉಪಾಯ ಮಾಡಿ ಹೊರ್ಡಿಸಿ ಅವು ದಿಬ್ಬಣದ ಒಟ್ಟಿಗೆ ಹೋಗಿ ಜಂಬರ ಎಲ್ಲ ಮುಗಿಸಿ ಗೂಡೆನ ಇಳಿಸಿ ಆಕನ ಬೆಳಿಗ್ಗೆ ಹತ್ತ್ ಗಂಟೆ. ಹುಲಿ ಬೇಟೆಗೆ ಹೋಗಿ ಬಂದವರಂಗೆ ಬಟ್ಟೆ ಬರಿ, ಹರ್ಕಡ್ , ಮೈಯೆಲ್ಲ ಗಾಯ ಮಾಡಿಕಂಡ್ ಹೈದನ ಮನೆಗೆ ಬಂದ್ ತಲ್ಪಿದೊ.

ಮಲೆಗೆ ಕಳ್‌ತಾಕೆ ಕಳಿಸಿದ ಗುರುವ ಮನೆ ಹತ್ರ ದಾರಿಲೇ ನಿತ್ತುಟ್ಟು. ರಾತ್ರಿ ನಡೆದ ವಿಷಯನ ಹಿಂಗೆ ಹೇಳ್ತ್. ನಾನ್ ಮಲೆಗೆ ಹೋಕನ ಬೆಳಿಗ್ಗೆ ಇಳಿಸಿದ ಕಳ್ಳೆಲ್ಲ ಖಾಲಿ ಆಗಿತ್ತ್. ಸಾಯಂಕಾಲ ಬೇಗ ಬೈನೆ ಕೊಂಬು ಮೂರಿ ಕಳ್ಳ್ ಇಳಿಸಿ ಪಾತ್ರೆಗಳ ತುಂಬ್ಸಿ ಕೊಟ್ನತ ಕುಡಿಯರ್ ಹೇಳ್ದೊ. ಇದ್ದನಾಲ್ಕ್ ಗ್ಲಾಸ್‌ನ ನಾನೆ ಕುಡ್‌ಕಂಡ್ ಮಲ್ಗಿದೆ. ಸಾಯಂಕಾಲದ ಕಳ್ಳ್ ಇಳಿಸಿ ಕೊಡ್‌ಕನ ಹೊತ್ತಾತ್, ವಾಪಾಸ್ ಬಾಕನ ದಾರಿ ತಪ್ಪಿ ನನ್ನ ಪಾಡ್ ಬೇಡ. ಕತ್ತಲಾದರೆ ಹೋಸಿಕತ್ತೇಳಿ ಒಂದು ವಾಟೆದ್ ಸೂಟೆ ಕೊಟ್ಟೊ. ವಾಟೆ ಸರಿ ಒಣಗದೆ ಆಗಾಗ ಕೆಟ್ಟ್ ಹೋತಿತ್ತ್. ಕೊಂಪುಳಿ ಅಜ್ಜನ ತೋಡುಕರೆ , ಗುಡ್ಡದ ಬೆಂಕಿಲಿ ಸೂಟೆ ಹೊತ್ತ್‌ಸ್‌ಕನ ನೀವು ಪಾಲೆಕಾಡ್ ಬಕ್ಕದ ಕಂಡಿಲಿ ಇದ್ದರಿ. 'ಹೋ ' ತ ಕೂಗಿ ಕರ್ದ್ ನಿತ್ತಕಣಿತ ಕರ್ದ್ ಹೇಳ್ದೆ. ನಿಮ್ಮ ಸದ್ದೇ ಇಲ್ಲೆ. ಮತ್ತೆ ಸೂಟೆ ಹೊತ್ತದೆ ಬೀಸಿಕಂಡ್ ಬಂದ್ ಬಾರನ ಬೀಮಣ್ಣನ ಮನೆ ಹತ್ರ, ಎರಡನೆ ಸಲ ಕರ್ದರೂ ನಿಮ್ಮಸದ್ದೇ ಇಲ್ಲೆ. ನಾ ಕರಿಯಕನ ಓಂಕಂಬಕೆ ಬೊತ್ತಾಗಿತ್ತಾ? ಸೀದಾ ಹೋಗಿ ಬುಡುದಾ? ನಾನ್ ಚಾಕಟೆ ಮರದ ಬುಡಲಿ ಸ್ವಲ್ಪ ಹೊತ್ತ್ ಕುದ್ದ್ ಸಾಕಾಗಿ ಮನೆಗೆ ನೆಟ್ಟಂಗೆ ಬಂದೆ. ಗಡಿಗೆ ಮತ್ತೆ ಗುಂಬ ಎರಡಲ್ಲೂ, ತುಂಬ ಉಟ್ಟು. ಸ್ವಲ್ಪ ಹುಳಿ ಬಂದಿರ್ದ್ದತ ಹೇಳಿ ಗಡಿಗೆ ತೋರ್ಸಿತ್.

ದಿಬ್ಬಣದೊಟ್ಟಿಗೆ ಹೋದವು. ಮೊಕ ಮೊಕ ನೋಡಿಕಂಡೊ. ಆಚೆಮನೆ ಅಪ್ಪುಣಿ ಬಾವ ಈಗ ಗೊತ್ತಾತ ಬಕ್ಕದ ಬೀರ ಯಾರ್‌ತ? ಹೇಳಿ ಗುರುವನ ತಲೆಗೆ ಎರಡ್ ಬುಟ್ಟತ್.

◆◆◆◆◆

' ಹೆಣ್ಣ್ ಇಂದ್ ಹುಣ್ಣು'

- *ಹೊಸೂರು ರುಕ್ಮಿಣಿ ಮೋಹನ್,*
ಮಡಿಕೇರಿ.

ಈ ಭೂ ಲೋಕಲಿ ಮನ್ಸ ತುಂಬ ಬುದ್ಧಿವಂತ ಜೀವಿ. ಮನ್ಸರ್ಲಿ ಎರಡೇ ಜಾತಿ ಒಂದ್ ಹೆಣ್ಣ್, ಇನ್ನೊಂದ್ ಗಂಡ್. ಹಿಂದೆನ ಆ ಕಾಲಲಿ ಹೆಣ್ ದೇವರ ಸಮ ಆಗಿತ್, ಹೆಂಗೆ ತೇಳ್ 'ಯತ್ರ ನಾರ್ಯಂತೆ ಪೂಜ್ಯಂತೆ ರಮಂತೆ, ತತ್ರದೇವತಃ ' ಅಂದರೆ ಎಲ್ಲಿ ಹೆಣ್‌ನ ದೇವ್ರ ಸ್ಥಾನಲಿ ಕಂಡ್‌ಕಂಡ್ ಪೂಜಿಸುವೆನೋ ಅಲ್ಲಿ ಆ ಮನೆಲಿ ದೇವ್ರು ಸನ ತುಂಬಾ ತೃಪ್ತಿಯಿಂದ ಕುದ್ದದೆ ಗಡ. ಹಿಂಗಿರ್‌ಕನ ಭಾರಿ ಹಿಂದೆ ಮನುತೇಳುವ ಶಾಸ್ತ್ರಜ್ಞ 'ಗೃಹಿಣಿ ಗೃಹಮುಚ್ಚತೆ' ಅಂದರೆ ಗೃಹಿಣಿಯಾದ ಹೆಣ್ ಬರೇ ಮನೆನ 4 ಗೋಡೆಗಳ ಮಧ್ಯ ಇರಿಕೆ ಮಾತ್ರ ಸರಿತೇಳಿತ್. ಆದರೆ ಈಗ ಅದ್ಕೆ ತದ್ವಿರುದ್ಧ ಪರಿಸ್ಥಿತಿನ ನಾವು ಕಾಣ್ತೊಳೊ.

ಒಂದು ಕಾಲಲಿ ಪೂಜ್ಯ ಸ್ಥಾನಲಿಟ್ಟದ್ದ ಹೆಣ್ಣ್‌ನ ಇಂದ್ ಸಮಾಜ ವಕ್ರದೃಷ್ಟಿಯಿಂದ ನೋಡ್ತುಟ್ಟು.ಒಬ್ಬು ಹೆಣ್ಮಗಳು ಒಂದು ಕೂಸಿಗೆ ಜನ್ಮ ಕೊಟ್ಟತ್‌ತಾದರೆ ಈ ಕ್ಷಣಲೇ ಎಲ್ಲವೂ ಕೇಳುವ ಮಾತ್ ಎಂಥ ಕೂಸುಂತಾ! ಹೆಣ್ ಕೂಸುಂತೇಳ್ರೆ ಓ! ಹೆಣ್ ಕೂಸಾತ ಇಳಿ ಸ್ವರಂದ ಕೇಳ್ವೆ, ಅದೇ ಗಂಡಾದರೆ ಓಹೋ ಗಂಡ್ ಕುಸೂನಾ 'ಕಂಗ್ರಾಜುಲೇಷನ್' ತೇಳಿ ಕೂಸುನ ಅವ್ವ, ಅಪ್ಪನ ಬೆನ್ ತಟ್ಟವೆ. ಈಗನ ಸಮಾಜಲಿ ಬರಿ ಗಂಡ್‌ಜನ ಮಾತ್ರ ಅಲ್ಲ ಇಡೀ ಮನ್ಸ ಕುಲನೇ ಹೆಣ್‌ನ ಕೀಳ್ ದೃಷ್ಟಿಂದ ನೋಡ್ತಾ ಹೆಣ್ಣ್‌ನ ಹೆಣ್ಣೇ ಅಲಕ್ಷ್ಯ ಮಾಡ್ದ್‌ತೇಳ್ರೆ ತಪ್ಪಿಲ್ಲೆ.

ಹಿಂಗಾಕೆ ಏನ್ ಕಾರಣ? ಹೆಣ್ ಕೂಸು ಹುಟ್ಟದ ಆ ಕ್ಷಣಂದಲೇ ಮನೆಗೆ ಹುಣ್ಣಾಗಿ ಕಾಡ್ದೆ. ಇದ್ ಯಾಕೆ? ಇದರ ನಿರ್ಮೂಲ್ನೆ ಹೆಂಗೆ? ಈ ಸ್ವತಂತ್ರ ದೇಶಲಿ ಯಾಕಿನ್ನೂ ಹೆಣ್ಮಕ್ಕಳಿಗೆ ಸ್ವತಂತ್ರ ಸಿಕ್ಕಿತ್ಲೆ? ಶೋಷಣೆ ಯಾಕಿನ್ನೂ ನಿತ್ತತ್ಲೆ? ಇದ್ಕೆಲ್ಲಾ ಕಾರಣ ಯಾರ್? ಇದ್ಕೆಲ್ಲಾ ಪರಿಹಾರ ಹುಡ್ಕಿ ಕಾರ್ಯರೂಪಕ್ಕೆ ತರವ್ ಯಾರ್? ಈ ಬಗ್ಗೆ ನಾವು ತೀರ್ಮಾನ ತಗೊಂಬದು ಒಂದು ಮುಖ್ಯವಾದ ಕೆಲ್ಸ.

ಹೆಣ್ಣ್‌ನ ಒಬ್ಬು ಶತ್ರುತೇಳ್ವಂಗೆ ನೋಡ್ವೆ ಯಾಕೆ? ಯಾಕೆತೇಳ್ರೆ, ಒಬ್ಬ ಹೆಣ್ಣ್ ಮಗಳ ಸಾಕುದು ಬೆಳ್ಸುದು ತುಂಬಾ ಕಷ್ಟದ ಕೆಲ್ಸ. (ಈ ಕಾಲಲಿ ಕೆಲವು ಗಂಡಸರ ಕಾಮ 2-3 ವರ್ಷದ ಹಸುಕೂಸುಗಳನ್ನೇ ಬುಟ್ಟತ್ಲೆ.) ಹೆಣ್ಮಕ್ಕ ಬೆಳಿ ಬೆಳೀತಾ ಇದ್ದಂಗೆ ಸುಮಾರ್ 11-16 ವರ್ಷ ಆಕನ ತಯಾರಿಗೆ ಬಂದವೆ. ಆಗ ಆ ಮಕ್ಕಳ ಮೇಲೆ ಸಮಾಜದ ಎಷ್ಟೋ ಜನಗಳ ಕ್ರೂರ ದೃಷ್ಟಿ ಬಿದ್ದದೆ. ಅಲ್ಲದೆ ಆ ವಯಸ್ಸ್‌ನ ಹೆಣ್ಮಕ್ಕಳ ಮನ್ಸ್ ' ಹುಚ್ಚು ಕೋಡಿ ಮನಸು; ಈ ಹದಿನಾರರ ವಯಸ್ಸು' ತೇಳ್ವಂಗೆ ಇದ್ದದೆಗಡಾ ಇದಂತೂ ಸತ್ಯ. ಆ ಹೆಣ್ಮಗ್ಳು ಒಬ್ಬೆ ತಿರ್‍ಗಾಡುವಂಗಿಲ್ಲೆ. ಯಾವ ಸ್ವ ನಿರ್ಧಾರನ ತನ್ನ ಮನದಿಚ್ಚೆನಂಗೆ ತಗಣ್ವಂಗಿಲ್ಲೆ. ಆಗ ಅಪ್ಪ -ಅವ್ವ ಮಗಳ ಪ್ರತಿ ಹೆಜ್ಜೆ ಹೆಜ್ಜೆನೂ ಅಳೆವ ಪರಿಸ್ಥಿತಿ ಬಂದದೆ. ಮಗುಳು ಮನೆಂದ ಹೊರ್‌ಪರೆ ಆ ಕ್ಷಣಂದ ಪುನಃ ಮನೆ ಸೇರ್‌ವವರೆಗೆ ಅಪ್ಪ- ಅವ್ವನ ಜೀವ ಕುದಿತಾ ಇದ್ದದೆ. ಇದರ್‌ಂದ ಹೆಣ್ಮಕ್ಕತೇಳ್ರೆ ಹೆದ್ರಿಕೆ ಹುಟ್ಟದೆ. ಅಪ್ಪ-ಅವ್ವನ ಈ ಪರಿಸ್ಥಿತಿಂದಾಗಿ ಅವರ ವರ್ತನೆಂದಾಗಿ ಆ ಹೆಣ್ಮಕ್ಕಳಿಗೆ ಅಪ್ಪ-ಅವ್ವ ಸನ ಶತ್ರುಗಳ ತರ ಕಂಡವೆ.

ಹಿರಿಯರ ಸರಿಯಾದ ಮಾರ್ಗದರ್ಶನ ಇಲ್ಲದೆ ಕೆಲವು ಅಡ್ಡದಾರಿ ಹಿಡ್ದವೆ. ಅದ್ ಅವರ ತಪ್ಪಲ್ಲ. ಅವರ ವಯಸ್‌ನ ತಪ್ಪು. ಈ ವಯ್ಸ್‌ಲಿ ಅವರ್ನ ಒಂದೋ ಅಪ್ಪ-ಅವ್ವ ಬುದ್ಧಿಹೇಳೋಕು. ಇಲ್ಲೇ ಶಾಲಾ-

ಕಾಲೇಜುಗಳಾರ್ ಗುರುಗ ತಿದೊಕು. ಇಲ್ಲೇತಾದರೆ ಅವೇ ತನ್ನ ತಾನೇ ತಿದ್ದಿ ಸರಿಪಡಿಸಿಕಣೋಕು. ಇನ್ ಹೆಣ್ಮಕ್ಕಳಿಗೆ ಅವ್ಕೆ ಬೇಕಾದಂಗೆ, ಕಾಲಕ್ಕೆ ತಕ್ಕಂಗೆ ಬಟ್ಟೆ ಬರೆ, ಚಿನ್ನಾಭರಣ ಹಿಂಗೆ ಅಲಂಕಾರದ ವಸ್ತ್ಗಳ್ಲೂ ಬಳ್ಸೋಕಾದೆ. ಆದರೆ ಅವೆಲ್ಲ ಎಲ್ಲವ್ಕೂ ಕೈಗೆತ್ತುವ ಮಟ್ಟ್ಲಿ ಇರ್ದುಲೆ. ಆದರೆ ಎಲ್ಲವರಂಗೆ ನಾವೂ ಇರೋಕುತೇಳ ಭಾವನೆ, ಆಸೆ ಹೆಣ್ಮಕ್ಕಳಿಗಿದ್ದದೆ. ಹಂಗೆ ನಮ್ಮ ಹೆಣ್ಮಕ್ಕ ಇರೋಕು ತೇಳ್ವ ಆಸೆನೂ ಅಪ್ಪ-ಅವ್ವಂಗೂ ಇದ್ದದೆ. ಇದೆಲ್ಲಾ ಈಡೇರ್ಸಿಕಣ್ದು ಕಷ್ಟ. ಹಿಂಗೆಲ್ಲಾ ಇರ್ಕನ ಹೆಣ್ ಹುಣ್ಣಾಗಿ ಕಂಡದೆ.

ಇನ್ ಹೆಣ್ಮಕ್ಕ ಮದ್ವೆ ವಯ್ಸ್‌ಗೆ ಬಾಕನ ' ಹಣ್ಣಿದ್ದ ಮರಕ್ಕೆ ಅದೆಷ್ಟೊ ಹಕ್ಕಿಗ ಬಂದವೆ' ಹಂಗೆ ಹೆಣ್ಮಕ್ಕಳ ಮನೆಗೆ ಗಂಡ್‌ಗ ಬಾದು ಸರ್ವೆ ಸಾಮಾನ್ಯ. ಆದರೆ ಬರುವ ಗಂಡ್‌ನ ಕಡೆವು ಅವರವರ ಅಂತಸ್ತಿಗೆ ತಕ್ಕಂಗೆ ಒಂದೊಂದು ತರ ಅವರ ಮನ್ಸಿಗೆ ಬಂದಂಗೆ ಕಾರ್, ಬಂಗ್ಲೆ, ಆಸ್ತಿ, ಬಂಗಾರ, ಬೆಳ್ಳಿಗಳ್ನ ಕೇಳಿವೆ. ಇದಂತೂ ಹೆಣ್‌ನ ಕಡೆವು ಸಾಮಾನ್ಯವಾಗಿ ಈಡೇರ್ಸಿಕೆ ಅಸಾಧ್ಯ ಪರಿಸ್ಥಿತಿ ಇದ್ದದೆ. ಅವರ ಬೇಡಿಕೆಗಳ್ನ ಕೇಳ್ಕನ ಹೆಣ್‌ನ ಕಡೆಯವ್ಕೆ ಅಪ್ಪ-ಅವ್ವಂಗೆ ಕೊದ್ದ ಎಣ್ಣೆನ ಮೈಮೇಲೆ ಸುರ್ದಂಗೆ ಆದೆ.

ಇನ್ ಗಂಡ್‌ನ ಕಡೆವು ಇಡೀ ಮದ್ವೆ ಖರ್ಚೆ, ಬೋರ್ಡಿಂಗ್, ಊಟೋಪಚಾರ, ಬಟ್ಟೆ ಬರೆ ಖರ್ಚೆ ಎಲ್ಲನೂ ಕೇಳಿವೆ. ಇದಂತೂ ಸಾಮಾನ್ಯ ಆಗ್ಬುಟ್ಟುಟು. ಹಿಂಗಾದರೆ ಹೆಣ್ಮಕ್ಕಳ ಮದ್ವೆ ಮಾಡ್ದು ಹೆಂಗೆ, ಗಂಡ್ ಹೆತ್ತವು ತಾವು ಹೆಣ್ಣ್ ಹೆತ್ತಿದ್ದರೂ ಆ ಬೇನೆ ಅವ್ಕೆ ಗೊತ್ತಿದ್ದರೂ ಅದ್ನ ತೀರ್ಸಿಕಣಿಕೆ. ಈ ಕಡೆಂದ ಕೇಳ್ದು ಸಾಮಾನ್ಯ ಆಗ್ಬುಟ್ಟುಟು.ಇನ್ ಹೆಣ್ ಹೆತ್ತವ್ಕೆ ನಮ್ಮ ಹೆಣ್ಮಕ್ಕ ಶ್ರೀಮಂತರ ಮನೆ ಸೇರಿ ಸುಖ-ಸಂತೋಷಂದ ಇರೋಕೂತ ಮಹಾದಾಸೆ. ಇದ್ಕಾಗಿ ಕೆಲವು ಜನ ಅಸಾಮಾನ್ಯವಾದ ನಿರ್ಧಾರ ತಗಂಡ್ ಸಾಲ-ಸೋಲ ಮಾಡಿನೋ, ಇರ್ದ ಆಸ್ತಿ-ಪಾಸ್ತಿ, ಮನೆ ಮಾರಿ ಮದ್ವೆ ಮಾಡಿವೆ. ಆ ಸಾಲಗಳ್‌ಂದ ನೊಂದ್ ಜೀವ ಕಳ್ಕಣವೂ ಅದೆಷ್ಟೋ ಜನ ಒಳೋ. ಇತ್ತ ಅಷ್ಟೆಲ್ಲಾ ಕಷ್ಟಪಟ್ಟ್, ಮದ್ವೆ ಮಾಡ್ದ ಹೆಣ್ಮಕ್ಕ ಗಂಡನ ಮನೆಲೂ ಸುಖವಾಗಿಲ್ಲದೆ ಆತ್ಮಹತ್ಯೆ ಮಾಡಿಕಣವೂ ಅದೆಷ್ಟೋ ಜನ. ಗಂಡ ಅತ್ತೆ-ಮಾವ, ಅತ್ತಿಗೆ-ನಾದಿನಿ ಸೇರಿ ಕೊಲ್ಲವೂ ಒಳೋ . ಇದಂತೂ ದಿನನಿತ್ಯ ನಾವು ಮಾಧ್ಯಮಗಳಲ್ಲಿ ಕಂಡ್ ಕೇಳ್ವ ವಿಷಯಗಳೇ ತಾನೆ? ಹಿಂಗೆ ಒಂದಿಲ್ಲೊಂದು ಕಾರಣಗಳ್‌ಂದ ಹೆಣ್ ಕಣ್ಣೀರ್‌ಲೇ ಕೈ ತೊಳಿವ ಪರಿಸ್ಥಿತಿ ಎದುರಾಗ್ತಾ ಉಟ್ಟು. ಅತ್ತ ಗಂಡನ ಕಡೆ ಹಿಂಸೆ ಸಯಿಸಿಕಾಗದೆ, ಇತ್ತ ತವುರು ಮನೆಗೆ ಬಾಕೂ ಆಗದೆ ಸ್ವತಂತ್ರ ಜೀವನ ನಡ್ಸಿನೇಂತೇಳ್ವ ಹೆಣ್ಮಕ್ಕಳ ಮೇಲೆ ಸಮಾಜದ ಜನರ ಕೆಟ್ಟ ದೃಷ್ಟಿನೂ ಬಿದ್ದದೆ.

ಈ ಎಲ್ಲಾ ಕಾರಣಂದ ಹೆಣ್ ಹುಣ್ಣಾಗಿ ಕಂಡದೆ. ಒಂದು ಕಡೆ ವರದಕ್ಷಿಣೆ ತೇಳ್ವ ಪೆಡಂಭೂತ , ಇನ್ನೊಂದು ಕಡೆ ಸಮಾಜದ ಜನರ ಕೆಂಗಣ್, ಹಿಂಗೆ ಚಕ್ರವ್ಯೂಹದ ಮಧ್ಯ ಕಾಲ ಕಳೀತಾ ಒಳೋ ಈ ಹೆಣ್ಮಕ್ಕ. ಇದರ ನಿರ್ಮೂಲನೆ ಹೆಂಗೆತೇಳ್ರೆ : ಹೆಣ್ಮಕ್ಕ ಧೈರ್ಯಂದ ಸದ್ಗುಣಗಳ್ನ ಬೆಳ್ಸಿಕಂಡ್ ಸಮಾಜದ ಅವಹೇಳನಕ್ಕೆ ಬಲಿಯಾಗದೇ ಮಾದರಿಯಾಗಿ ಬದ್ಕೋಕು. ನಾವು ವರದಕ್ಷಿಣೆ, ವರೋಪಚಾರ ಕೊಟ್ಟ್ ಮದ್ವೆ ಆದುಲೇತ ತೀರ್ಮಾನ ತಗಣೋಕು. ಗಂಡ್ಮಕ್ಕ ನಾವು ವರದಕ್ಷಿಣೆ ವರೋಪಚಾರ ತಗಂಬುಲೇ ತೇಳಿ ತೀರ್ಮಾನ ಮಾಡೋಕು. ಹೆಣ್ಣ್-ಗಂಡ್ ಎರಡೂ ಸಂಸಾರದವು ಸನ ಒಟ್ಟಿಗೆ ಸೇರಿ ಒಮ್ಮನಸ್‌ಂದ ಒಪ್ಪಿ ಸರಿಸಮ ಖರ್ಚೆಗಳ್‌ಂದ ಮದ್ವೆ ಮಾಡೋಕು. ಮದ್ವೆ ಆದ ಮೇಲೆ ಗಂಡ-ಹೆಣ್ ಅನ್ಯೋನ್ಯವಾಗಿರೋಕು. ಸಂಸಾರದವರ , ನೆರೆಹೊರೆಯವರ ಮತ್ತಿತರ ಯಾರ ಮಾತ್, ಕಂತೆ-ಪುರಾಣಗಳಿಗೆ ಕಿವಿಗೊಡದೆ ಗಂಡ -ಹೆಣ್ಣ್ ಪರಸ್ಪರ ಅರ್ಥ ಮಾಡಿಕಂಡ್ ಬಾಳ್ವೆ ಮಾಡೋಕು. ಹಿಂಗಾದರೆ ಮಾತ್ರ 'ಹೆಣ್ಣ್ ಸಂಸಾರಕ್ಕೆ ಹುಣ್ಣು', ಮಾತ್‌ನ ಸುಳ್ಳು ಮಾಡಕ್. ಇದರಂದ

ಹೆಣ್ಣಿಗೂ ಸ್ವತಂತ್ರ ಸಿಕ್ಕಿದೆ. ಮನಸ್ ಮನಸ್ ಒಂದಾದರೆ ಅದೇ ಸ್ವರ್ಗ. ಇದನ್ನ ನಾವೆಲ್ಲ ಬೆಳ್ಸ್‌ಕಂಡ್ ಅರ್ತ್‌ಕಂಡ್ ಬಾಳೋನೊ. ಬಾಳ್‌ನ ಸಾರನ ಸವಿಯನೊ.

ಕವನ

ನಮ್ಮ ಯೋಧರು



ಎಲ್ಲೋ ಇರುವರು ಇವರು
ಎಲ್ಲೋ ಇರುವರು ಅವರು
ಕೆಚ್ಚೆದೆಯ ಕಲಿಗಳು ಇವರು
ಇವರ್‍ಯಾರು ಗೊತ್ತೆ?
ಇವರೆ ಕೊಡಗಿನ ವೀರ
ಯೋಧರು.
ಇಲ್ಲಿ ಆಚರಿಸಲು ದೀಪಾವಳಿ
ಗಡಿಯಲಿ ರಕ್ತದ ಓಕುಳಿ
ಮನೆಯೆಲ್ಲಾ ಸಂತಸವಿರಲು
ನಾಡೆಲ್ಲಾ ನಲಿಯುತಲಿರಲು
ಅಲ್ಲದವರಿಗೆ ಮರಣದ ತೊಟ್ಟಿಲು
ಶತ್ರುಗಳೆಲ್ಲಾ ಮುಗಿಲೇಳಲು
ದೇಶಕೆ ಭಯವ ತರಲು
ಮನೆಮಂದಿಯ ಎಲ್ಲಾ ತೊರೆದು
ಹೋರಾಡುವರು ಪ್ರಾಣದ ಹಂಗು ತೊರೆದು
ಕುಲ ಜಾತಿಗಳೆಲ್ಲವ ಮರೆತು
ಗೆಳೆತನದಿ ಜೊತೆಯಲಿ ಬೆರೆತು
ಗಡಿ ನೆಲದಿ ಮೆರೆದವರೆಲ್ಲಾ
ವೀರ ಧೀರ ಕೊಡಗಿನ ವಾಸಿ.
ಗಾಯ ರಕ್ತವು ಆವರಿಸಿದರೂ
ವೈರಿ ಮುಗಿಸಲು ಮುಂದೋಡುವರು
ಎದುರಾದ ವೈರಿಯ ಮುಗಿಸಿ
ತಾಯಿ ಮಡಿಲಲಿ ಬಸವಳಿದಿರಲು
ಕೂಗಿ ಹೇಳುವರು ಮಾತೊಂದ
ಸುಖವಾಗಿರಿ ನಾಡಿನ ಜನರೆ
ಸುಖವಾಗಿರಿ ಕೊಡಗಿನ ಜನರೆ...

ಪಾಣತ್ತಲೆ ಪ್ರಸಾದ್ ರಾಘುವಯ್ಯ,
-56 ಕೂರ್ಗ್ ರೆಜಿಮೆಂಟ್,
ಕಾರ್ಗಿಲ್.

ನಮ್ಮೂರ ಸೊಬಗು



ಭಾಗಮಂಡಲವೆಂಬ
ನಮ್ಮ ಈ ಊರು
ಕಾವೇರಿ ನದಿಯದೇ ಇಲ್ಲಿ
ಜೋರು
ಸುತ್ತಮುತ್ತ ನೋಡಲು ಬರಿ
ಹಸಿರು
ಮಳೆಗಾಲ ಬಂತೆಂದರೆ ಬಲು ಕೆಸರು
ಚೆಲುವಾದ ಹೆಸರು ಈ ಊರಿಗೆ
ಇದು ಪ್ರಕೃತಿಯ ಸುಂದರ ಕೊಡುಗೆ
ಹರಿಯುವಳು ಕಾವೇರಿ ಮೆಲ್ಲಮೆಲ್ಲಗೆ
ದುಡಿಯುವರು ಜನತೆ ತಮ್ಮ ಪಾಡಿಗೆ
ಇರುವುದೊಂದು ಕಾವೇರಿ ವಿದ್ಯಾಮಂದಿರ
ಅಮ್ಮ ಕಾವೇರಿ ಹರಿಸಿದ ಜ್ಞಾನ ಮಂದಿರ
ರಮ್ಯ ತೋಟದ ಶೋಭೆ ಸುಂದರ
ಭವ್ಯ ಭವನವು ನೋಡಲು ಸುಂದರ
ಹರಿಯುವಳು ಕಾವೇರಿ ಬಲು ಜೋರು
ಪ್ರವಾಸಿಗರದೇ ಇಲ್ಲಿ ಕಾರು-ಬಾರು
ಹರಸುವಳು ನಮ್ಮನ್ನು ಕಾವೇರಿ ಮಾತೆ
ಅವಳೇ ನಮ್ಮೆಲ್ಲರ ಆಶ್ರಯ ದಾತೆ

-ಪಾಣತ್ತಲೆ ಕಲ್ಪನಾ ರಾಘುವಯ್ಯ,

ತಾನೊಂದು ಬಗೆದರೆ

- ಕಟ್ಟೆಮನೆ ಸ್ಮಿತ ಪೂಣಚ್ಚ,
ಕಟ್ಟೆಮಾಡು .

"**ಸು**ಜು ಏನ್ ಮಾಡ್ತ ಒಳ, ಬೇಗ ಹೊರ್ಡಿಕೆ ಆಲೆನಾ? ಕೂಸುನ ತೊಟ್ಲಿಗೆ ಹಾಕಿದ ಮೇಲೆ ಊಟಕ್ಕೇತಾ ಹೋದಾ?" ಒಂದೇ ಸಮ ಅಮ್ಮ ಬೈಯಕ್ಕೆ ಶುರು ಮಾಡ್ದೋ "ಬಂದೆ ಇರಮ್ಮಾ. ಆತ್, ಆಗಿನೇ ಬುಡ್ತ್". ಸುಜು ಅಮ್ಮನ ಮುಂದೆ ಬಂದ್ ನಿತ್ತತ್.

ಅಪ್ಸರೆ ಹಂಗೆ ಮುದ್ದಾಗಿ ತನ್ನೆತ್ತರ ಬೆಳ್ದ್‌ನಿತ್ತ ಸುಜುನ ನೋಡ್ದ ಅಮ್ಮನ ಮನ್ಸ್ ನವಿಲಂಗೆ ಕುಣಿಯಕೆ ಶುರು ಆತ್." ನೀನ್ ಹೆಂಗೆ ಹೊರಟ್ರೂ ಲಾಯ್ಕನೇ ಬುಡ್, ನಡಿ ನಡಿ, "ಅಮ್ಮ ಮಗಳು ಬಸ್ಸಿಗೆ ಹೊರಟೊ. ಬಸ್ ಸಿಕ್ಕಿ ಹೊದ್ದೂರು ತಲುಪಕನ 11ಗಂಟೆ .

ಪುನಃ ಅಮ್ಮನ ಬೈಗಳ ಶುರು ಆತ್,

"ನಿನ್ನಿಂದ ತಡ ಆತ್ ಬಾ ಜೀಪ್‌ಲಿ ಪೋಯಿ," ಸುಜು ಅಮ್ಮನ ಒಟ್ಟಿಗೆ ಜೀಪ್ ಹತ್ತಿ ಕುದ್ದತ್

ನೆಂಟರ ಮನೆ ತಲುಪಕನ 12ಗಂಟೆ ಆಗಿ ಹೋತ್.

ಆಗ ತಾನೇ ಕೂಸ್‌ನ ತೊಟ್ಲಿಗೆ ಹಾಕಿ ಮುದ್ದಾಗಿ ನಯನಾ ಅಂತ ಕರಿತಿದ್ದೊ.

ಸುಜು ಅತ್ತ ಇತ್ತ ಓಡಿಯಾಡ್‌ಕನ ಎರ್ಡ್ ಜೋಡಿ ಕಣ್ಣ್‌ಗ ಅವಳ್ನೆ ಹಿಂಬಾಲಿಸ್ತಿತ್ತ್. ಸುಜುಗೂ ಏನೋ ಖುಷಿ. ಊಟಕ್ಕೆ ಕುದ್ದಲ್ಲಿ ಅದೇ ಜೋಡಿ ಕಣ್ಣ್‌ಗಳ ಒಡೆಯ ಎದುರಲ್ಲೇ ಕುದ್ದಿತ್ತ್.

ಅಬ್ಬಾ ಇಂವ ಯಾರ್! ಎಂಥಾ ಕಣ್ಣ್! ನೋಡಿಕೆ ಎಷ್ಟ್ ಲಾಯ್ಕ ಉಟ್ಟು, ಅಂಧ್ಕ್ಂಡ್ತ್ ಸುಜು.

ಊಟ ಮುಗ್ಸಿದಂಗೆ ಪುನಃ ಅಮ್ಮಂಗೆ ಮನೆಗೆ ಹೋಕೆ ಅವಸರ.

"ಇರಮ್ಮಾ, ಸ್ವಲ್ಪ ಹೊತ್ತ್ ಇದ್ದ್ ಪೋಯಿ "ಕಣ್ಣ್‌ಗ ಆ ಕಡೆ ಈ ಕಡೇ ಹುಡ್ಕಿಯಾಡಿಕೆ ಶುರು ಮಾಡ್ತ್.

"ಈ ಮನ್ಸ ಎಲ್ಲಿ ನಾಪತ್ತೆ ಆತೋ" ಅಮ್ಮನ ಮನ್ಸಲ್ಲೆ ಬೈಕಂಡ್ ಸುಜು ಅರೆ ಮನಸ್ಸಿಂದ ಹೊರಟತ್.

ಮನೆಗೆ ಬಂದ ಸುಜುಗೆ ಅವನ್ದೇ ಧ್ಯಾನ, ಗ್ಯಾನ. ಛೇ, ಅಂವ ಯಾರ್ ಆಗಿರ್ದು, ಅವಂಗೂ ನನ್ನ ಇಷ್ಟಾತ ಕಂಡದೆ, ನನ್ನೇ ನೋಡ್ತಿತ್ತ್. ಮನಸಲ್ಲೇ ಮಂಡಿಗೆ ಮೆಲ್ತಾ ಕುದ್ದಿತ್ ಸುಜು.

ಅಷ್ಟ್ರಲಿ ಅಮ್ಮನ ಬೈಗಳ ಪುನ ಶುರು ಆತ್,

"ಏನ್ ಮಾಡ್ತೊಳ ಸುಜು, ಪರೀಕ್ಷೆ ಹತ್ರ ಬಾತ್, ಓದಿಕೆ ಆಲೆನಾ?"

ದ್ವಿತೀಯ ಪಿಯುಸಿ ಪರೀಕ್ಷೆಗೆ ತಯಾರಾಕೆ ಶುರು ಮಾಡ್ತ್ ಸುಜು.

ಪರೀಕ್ಷೆನ ಲಾಯ್ಕನೇ ಮಾಡ್ದ ಸುಜು ಫಲಿತಾಂಶ ಯಾಗ ಬಂದೆನೋ ಅಂತ ಕಾಯ್ತಿತ್ತ್.

ರಜೆಲಿ ಮಜ ಮಾಡ್ನ ಅಂದ್ಕಂಡ ಸುಜುಗೆ ಅಮ್ಮನ ಕೂಗು ಕೇಳಿ ಎಚ್ಚರ ಆತ್. "ಮನೇಲೇ ಎಂತ ಮಾಡ್ಯ

ಕಂಪ್ಯೂಟರ್ ಕ್ಲಾಸ್‌ಗೆ ಸೇರ್ಕ," ಅಮ್ಮನ ಮಾತ್ನ ಕೇಳಿ ಸುಜು, ಛೇ ನನ್ನಿಷ್ಟದಂಗೆ ಒಂದು ನಡಿಯುದುಲೆತ್ತೇಳ್‌ಕಂಡ್ ಕಂಪ್ಯೂಟರ್‌ಗೆ ಸೇರ್ಕಣ್ತ್.

ಕಂಪ್ಯೂಟರ್ ಕ್ಲಾಸಿಗೆ ಹೋದ ಸುಜು,

"ಅಯಯೋ, ಪುಸ್ತಕ ಮನೇಲೇ ಮರ್ತುಹೋತ್ ತೇಳಿ ಮನೆಗೆ ವಾಪಾಸ್ ಬಾತ್.

ಮನೆ ಮುಂದೆ ಕಾರ್ ನಿತ್ತಿತ್ತ್. ಓ ಯಾರೋ ಬಂದೊಳೋ ! ಯಾರಿರ್ದು? ಅಂದ್ಕಡ್ ಒಳಗಡೆ ಹೋದ ಸುಜುಗೆ ನಕ್ಷತ್ರ ಹೊಳ್ದಂಗೆ ಆತ್.

ಅದೇ ಸುಂದರ ಕಣ್ಣ್‌ಗಳ ಒಡೆಯ, ಕನಸಿನ ರಾಜಕುಮಾರ ತುಟಿಲೇ ನಗ್ತಾ ಕುದ್ದಿತ್ತ್. ಅವ್ನ ನೋಡ್ದ ಸುಜು ಮನ್ಸ್, ಹಕ್ಕಿಹಂಗೆ ಹಾರಿಕೆ ಶುರು ಮಾಡ್ತ್.

ಅಯ್ಯೋ ದೇವ್ರೆ, ಇಂವ ಹೆಂಗೆ ಇಲ್ಲಿತ್ತೇತ್ತೇಳ್‌ಕಂಡ್ ಒಳಗೆ ಓಡಿ ಹೋತ್, ಜತೆಲಿದ್ದವು ನೆಗಾಡಿಕೆ ಶುರು ಮಾಡ್ವೊ.

ಅಮ್ಮ ಸಿಹಿ ದನೀಲಿ ಸುಜು ಬಾಮ್ಮಾ, ಇಲ್ಲಿ ನೋಡು ಇವೆಲ್ಲಾ ನಿನ್ನ ನೋಡಿಕೇತಾ ಬಂದೊಳೋ.

ಖುಷಿ ತಡ್ಕಣಿಕಾಗದೆ ಸುಜು

"ಏಕೆ ಅಮ್ಮಾ"

ಬಾ ಪರ್ಚ್ಯ ಮಾಡ್ಸಿನೆ, ಹಿಂದೆನೇ ಹೋತ್ ಸುಜು. ಎಳ್ಕಂಡ್ ಹೋದಂಗೆ ಹೋದ ಅಮ್ಮ ಅದೇ ಹೈದನ ಮುಂದೆ ಸುಜುನ ನಿಲ್ಸ್‌ಕನ ಅವ್ಳಮೈಯೆಲ್ಲಾ ಪುಳಕ.

ನೋಡು, ಇಂವ ಸನ್ನುತೇಳಿ. ಇವ್ನ ಅಣ್ಣ ಮಿಲಿಟರಿ ಹೈದ, ಅಂವಂಗೆ ನೀನೆ ಸರ್‍ಯಾದ ಗೂಡೆತ ಹೇಳಿ ನಿನ್ನ ಹುಡ್ಕಿ ಹುಡ್ಕಿ ಇಲ್ಲಿಗೆ ಬಂದುಟ್ಟು. ನಿನ್ನನ್ನ ಅತ್ತಿಗೆ ಮಾಡ್ಕಣಿಕೆ ಹೊರ್‍ಟುಟ್ಟು, ನಿನ್ನ ಹುಡ್ಕಿಕೆ ಎಷ್ಟ್ ಕಷ್ಟ ಪಟ್ಟುಟ್ಟು ಗೊತ್ತುಟ್ಟಾ....

ಅಮ್ಮನ ದನಿ ಮುಂದಕ್ಕೆ ಕೇಳ್‌ದಾತ್ ಸುಜುಗೆ.

ಆ ಸುಂದರ ಹೈದ.

"ನನ್ನ ಅತ್ತಿಗೆ ಆಕೆ ನೀವೇ ಸರೀ ತೇಳೆ ತುಂಬಾ ವಿಚಾರ್ಸಿ ಹುಡ್‌ಕಿಕಂಡ್ ಬಂದೊಳೆ, ನಿಮ್ಮ ಒಪ್ಪಿಗೆ ಹೇಳಿ", ಅವ್ನ ಮಧುರ ದನಿಗೆ ಗಾಬರಿ ಬಿದ್ದ್ ಹಾಂ ಅಂದ್‌ಬಿಡ್ತ್ ಸುಜು.

ಅವ್ನ ಜತೆಲಿದ್ದವೆಲ್ಲಾ ಚಪ್ಪಾಳೆ ಹೊಡ್ವೊ,

ಒಂದು ಗೂಡೆ ಎದ್ದ್ ಬಂದ್,

"ಹೆದರ್ಕಬೇಡ, ನನ್ನ ದೊಡ್ಡಣ್ಣ ಚಿನ್ನದಂತಂವ, ಇನ್ನೇನ್ ಒಂದು ವಾರಲಿ ಬಂದದೆ ರಜೇಲಿ, ನಿಮ್ಮ ಇಷ್ಟಾನ ಇಂದ್ ಫೋನ್‌ಲಿ ತಿಳ್ಸಿ"ತ್ತೇಳಿ ಒಂದೇ ಸಮನೆ ಬಡಬಡ್ಸಿತ್.

ಸುಜನ ಅಮ್ಮ ಸಕ್ಕರೆ ತಂದ್

ನನ್ನ ಸುಜುಗೆ ನಿಮ್ಮಂಥ ಸಂಬಂಧ ಸಿಕ್ಕಿದೇತ ಅಂದ್ಕಣ್ತ್ಲೆ ಅಲ್ಲೆನೇ ಸುಜು. ಸುಜು ಮೌನವಾಗಿ ಬುಡ್ತ್. ಮುಂದೆನ ಯಾವ್ದೇ ಮಾತ್ ಕಥೆ ಅವ್ಳಿಗೆ ಕೇಳ್ಸಿತೇಲೆ. ಅವಳ ಹೃದಯ ಕಿವಿಗ ಕಲ್ಲಾಗಿ ಬಿಡ್ತ್. ಎಲ್ಲಾ ಅಮ್ಮನಿಷ್ಟದಂಗೆ ಅಗ್ಲಿತೇಳಿ ಮನ್ಸಲೇ ಸುಜು ಹೇಳಿಕಣತ್ ತಾನೊಂದು ಬಗೆದ್ರೆ ದೈವ ಮತ್ತೊಂದ್ ಬಗೆದದೆ. ತಾನೆ

◆◆◆◆◆

ಪ್ರೀತಿ

-ತೆಕ್ಕಡೆ ಬಿ. ಕುಮಾರ್ (ಶಿಕ್ಷಕ)
ಮುತ್ತಾರ್ಮುಡಿ ಗ್ರಾಮ,
ಮೂರ್ನಾಡು ಅಂಚೆ.

ಪ್ರೀತಿ ತೇಳ್ವ ಬದ್‌ಕ್‌ನ ಜೀವ ಜಲ. ಪ್ರೀತಿ ಇದ್ ಇಲ್ಲದೆ ಇರ್‌ಕಿಲೆ ಬದ್‌ಕಿಗೆ ಒಂದು ಅರ್ಥ. ಹಂಗೆನೇ ಯಾವುದೇ ಗೊತ್ತು ಗುರಿನ ಪಥ, ವಯಸ್, ದೇಹ, ಮನ್ಸ್ ಪ್ರೀತಿ ಒಂದಕೊಂದು ತಾಳೆ ಹಾಕಿ ನೋಡದ, ಪರಸ್ಪರ ದೈಹಿಕ ಆಕರ್ಷಣೆ ಮಟ್ಟಲಿ ನಿಲ್ಲದ, ಮೂರು ಮಾತ್‌ಲಿ ಬಣ್ಣಿಸಿಕಾಗದ, ಮುನ್ನೂರು ಮಾತಾಗೆ ಉಳೆವ ಸಹ ಹೃದಯಗಳ ಸಂಗಮ. ಪ್ರೀತಿ ಯಾಗ? ಎಲ್ಲಿ? ಹೆಂಗೆ? ಸಾಕ್ಷಾತ್ಕಾರ ಆತ್‌ತಾ ಊಹೆಗೂ ಸಿಕ್ಕದ ಸಂಗತಿ. ನಿಯಮಿತ ಶಕ್ತಿಗ ನಿರ್ದೇಶಿಸಿಕಾಕಿಲೆ, ನಿಗ್ರಹಿಸಿಕಾಕಿಲೆ, ನಿಯಂತ್ರಿಸಿಕಾಕಿಲೆ, ನಾಶಪಡಿಸಿಕೆ ಆಕಿಲೆ. ಸ್ವಚ್ಛಂದ ಹೊಳೆನಂಗೆ, ತನ್ನ ಒಡಲ್‌ನೊಳಗೆ ಹುಟ್ಟಿ ಇಷ್ಟಬಂದ ಕಡೆಗೆ ಹರಿಯಕ್ಕೆ ಸುರುಮಾಡ್ವೆ. ಕಲ್ಲ್ ಬಂಡೆಗಳ್‌ನ ಸೀಳಿ, ಕಂದರದ ಎತ್ತರಕ್ಕೆ ಹಾರಿ, ಜಲಪಾತಾಗಿ ಶೃತಿ ಮಾಡ್ತಾ ಶಾಂತ ಸಾಗರಲಿ ಲೀನ ಆದೆ. ಅಲೆಗಳ ಹಂಗೆ ನೆಂಪುಗ ಮತ್ತೆ ಆ ಹೊಳೆನ ಹುಡುಕುವ ಪ್ರಯತ್ನಲಿ ತರಂಗ ಆದೆ. ಪ್ರೀತಿ ಕಣ್ಣ್‌ನ ಸೆಳೆವ ಜಲಧಾರೆ, ಅವರ್ಣೀಯ, ಅತೀ ಅದ್ಭುತ ಅನುಭವ. ತನ್ನ ಎದೆ ಒಳಗೆ ಮಿಡೆವ ಲಯ. ಬದ್‌ಕ್‌ನ ನೂರೆಂಟು ಬ್ಯಾನೆಗಳ ನಡುನ ಖುಷಿ, ಸರಸ ಸಲ್ಲಾಪದ ವಸಂತ.

ನಿಶ್ಚಿಂತೆ ನೆರಳ್ ಕೊಡುವ ಆಶ್ರಯ. ಅಪಸ್ವರಗಳ ಜಗತ್‌ಂದ ಕಿನ್ನರ ಲೋಕಕ್ಕೆ ಕರ್‌ಕಂಡ್ ಹೋವ ಯಕ್ಷಿಣಿ. ಸುಮಧುರ ಸಂಗೀತ. ಸುಧೆನ ಸುರ್ದ್ ಸೋತ ಹೃದಯನ ಸಂತೈಸುವ ಅಮೃತ ಧಾರೆ. ಉಸ್‌ರ್‌ನ ಆರಂಭಂದ ಹಿಡ್ದ್ ಅಂತ್ಯದವರೆಗೆ ಎದೆಗೂಡ್‌ಲಿ ಅಲ್ಲಾಡದೆ ಕುದ್ದ ಪ್ರೀತಿ ತೇಳುವ ಕ್ರಿಯೆನ ಚಾಲಕ, ನಿಯಂತ್ರಕ, ನಿರ್ದೇಶಕ, ಬೆಚ್ಚಂಗಿರುವ ಭಾವ, ನವ ಚೈತ್ರದ ಜೀವ. ಹಂಚಿಕಂಡಷ್ಟ್ ಹೆಚ್ಚಾಗುವ ಕುಣ್ತ ಹಗುರ ಆವ ಬೇನೆ. ಇದ್ ಜೀವನದ ಸೂರ್ಯ ಹುಟ್ಟಿಕೆ ಮುಂದೆ ಹುಟ್ಟುವ ಅರುಣರಾಗ. ಮಂಜಿನ ಹನಿನ ಎತ್ತಿ ಕಣ್ಣ್‌ಗೆ ಒತ್ತಿಕಂಡ್ ಕಣ್ಣ್ ಮುಚ್ಚಿ ಅನುಭವಿಸುವ ಸುಖ. ಆದರ್‌ಂದ ಪ್ರೀತಿ ತೇಳ್ವ ಎಲ್ಲರ ಅಂತರಾಳಂದ ಹೊರಗೆ ಬಂದ್ ಸಕಲ ಜೀವಗಳ ಒಟ್ಟಿಗೆ ಹಂಚಿಕಂಡರೆ ಅದೇ ಸ್ವರ್ಗ. ಮಿಕ್ಕಿದೆಲ್ಲ ನರ್‌ಕ.

*****

ಹೊಸ ಅಕ್ಕಿ ಮಹತ್ವ

-ನಾಟೋಳನ(ಬೈತಡ್ಕ) ದೇವಮ್ಮ ಮೊಣ್ಣಪ್ಪ,
ಹೊಸ ಬಡಾವಣೆ, ಮಡಿಕೇರಿ.



ಹೊಸ ಭತ್ತನ ಒಕ್ಕಲ್ ಕಣಂದ ಐನ್‌ಮನೆ ಪಟ್ಟೆದಾರ್ತಿ ಹೊಸ ಕುಕ್ಕೆ ತುಂಬಾ ತಲೇಲಿ ಹೊತ್ತ್‌ಕಂಡ್ ಬಂದ್, ಐನ್‌ಮನೆ ನಡು ಬಾಡೇಲಿ ನೆಲಕ್ಕಿ ತೂಗು ದೀಪದ ಕೆಳಗೆ ಹಾಸಿ ಮುಕ್ಕಾಲ್ ಮೇಲೆ ಹೊಸ ಭತ್ತ ಕುಕ್ಕೆನ ಇಸ್ಸುವೆ. 5ಕಾಳ್ ಭತ್ತನಾ ತೆಗ್ದ್ ಉರಿವ ದೀಪಕ್ಕೂ ಸೂರ್ಯಂಗೂ, ಅಟ್ಟಕ್ಕು ಹಾಕಿ ಮನೆ ದೇವ್ರುನ ಭೂಮಿ ತಾಯಿನ ಪ್ರಾರ್ಥಿಸುವೆ.

ಹಿಂದೆನ ಕಾಲಲಿ ಜನ ಸಂಘ ಜೀವಿಗ ಅಗಿದ್ದೊ, ಜನ್ರ್‌ಲಿ ಒಗ್ಗಟ್ ಒಬ್ಬಂಗೊಬ್ಬಂಗೆ ಸಹಕಾರ ಸಹಾನುಭೂತಿ ತುಂಬಾ ಇತ್ತ್. ಗುರು-ಹಿರಿಯವುಕೆ ಗೌರವ, ಮರ್ಯಾದೆ, ದೇವ್ರುಲಿ ಭಯ ಭಕ್ತಿ ತುಂಬಾ ಇತ್ತ್. ಹೊಸ ಭತ್ತನ ಕುಟ್ಟುವ ದಿನ ಮನೆ ಪಟ್ಟೆದಾರ್ತಿ ಕುಟುಂಬದ ಹೆಣ್ ಮಕ್ಕಳ್‌ನೆಲ್ಲಾ ಒಟ್ಟಿಗೆ ಸೇರ್ಸಿ ತೆಲೆಗೆ ಎಣ್ಣೆ ಬಾಯಿಗೆ ಎಲೆ ಅಡಿಕೆ ಕೊಟ್ಟ್ ಕುಸಿಂದ ರಾಟೆಂದಾಗಲಿ, ಕೈ ಒನ್‌ಕೆಂದಾಗ್ಲಿ ಕುಟ್ಟಿದ ಅಕ್ಕಿ ಬೆಳ್ಳಂಗಾಕೆ ಒರ್‌ಳ್ ಕಲ್‌ಲಿ ತೊಳ್ಸ್‌ಕಂಡ್ ಸುವ್ವಿ ಸೋಭಾನೆ, ಕಥೆಗಳ್ನ ಹಾಸ್ಯದ ಮಾತ್‌ಗಳ ಹೇಳಿಕಂಡ್ ನೋಡಿಕೆ ಭಾರೀ ಲಾಯಿಕ ಖುಷಿ ಕಾಂಬತ್ತಿತ್, ಕುಟ್ಟಿದ ಹೊಸ ಅಕ್ಕಿನಾ ಸುರೂಲಿ ಅವ್ರವ್ರ ಗ್ರಾಮ ದೇವ್ರುಗಳಿಗೆ, ಇಗ್ಗುತ್ತಪ್ಪ -ಕಾವೇರಮ್ಮನ ದೇವಸ್ಥಾನಕ್ಕೆ ನೈವೇದ್ಯಕ್ಕಾಗಿ ಆಯಾ ಅರ್ಚಕರೆ ಕೊಟ್ಟುವೆ.

ಹೊಸ ಅಕ್ಕಿ ಉಣ್ಣುವ ಆ ದಿನ ಹೆಂಗ್ಸ್‌ಗೆಲ್ಲಾ ಸೇರಿಕಂಡ್ ಮನೆಗೆ ಅಂಗಳಕೆಲ್ಲಾ ಸೆಗಣಿ ಸಾರ್ಸಿ ಶುದ್ಧ ಮಾಡಿ, ಮನೆ ಜನಗೆಲ್ಲಾ ಮಡಿ ಉಟ್ಟ್ ಹಬ್ಬದ ಸಂಭ್ರಮಲಿ ಹೊಸ ಅಕ್ಕಿ ಪಾಯ್ಸ, ಅನ್ನ, ತರ-ತರದ ತರ್‌ಕಾರಿ ಗೈಪು, ಪಲ್ಯ, ಶುಂಠಿ ಪಜ್ಜಿನೂ ಮಾಡುವೆ. ಪಾಯ್ಸಕೆ ಸಣ್ಣ 3ಕಲ್‌ನೂ ಹಾಕುವೆ. ಅಡ್‌ಗೆ ಆದ ಮೇಲೆ ಒಂದು ಕೊಡಿ ಬಾಳೆಗೆ ಮಾಡ್‌ದ ಎಲ್ಲಾ ಅಡ್ಗೆನ ಸ್ವಲ್ಪ-ಸ್ವಲ್ಪ ಹಾಕಿ ಬಾಳೆಲೆನಾ ಸುತ್ತಿ ಒಲೆ ಒಳಗೆ ಹಾಕುವೆ.

ಮತ್ತೆ ಐನ್‌ಮನೆ ಪಟ್ಟೆದಾರ ನೆಲ್ಲಕ್ಕಿಲಿ ಮಡ್ಗಿದ ದೀಪಕ್ಕೆ ಎಲ್ಲವು ಸೇರಿ ಅಕ್ಕಿ ಹಾಕಿ ಗುರು ಕಾರೋಣನ, ಕುಲದೇವ್ರುನ, ಇಗುತ್ತಪ್ಪ, ಕಾವೇರಮ್ಮನ ಪ್ರಾರ್ಥನೆ ಮಾಡುವೆ. ಅಲ್ಲಿಂದ ಒಂದು ಕೊಡಿ ಬಾಳೆಲೇಲಿ ಮಾಡ್ದ ಅಡಿಗೆನೆಲ್ಲಾ ಹಾಕಂಡ್ ಗೊತ್ತ್ ಮಾಡ್‌ದ ಜಾಗಲಿ ಎಡೆ ಮಡ್ಗುವೆ. ಮತ್ತೆ ಐನ್‌ಮನೆ ನಡುಬಾಡೆ ಒಳ ಮುಂದು ಸುತ್ತಾ ಬಾಳೆಲೆ ಹಾಸಿ ಎಲ್ಲವೂ ಉಂಬಕ್ಕೆ ಕುದ್ದವೆ. ಪಾಯ್ಸಕ್ಕೆ ತುಪ್ಪ-ಜೇನ್, ಹಪ್ಪಳ, ರಸಬಾಳೆ ಹಣ್ , ಅನ್ನಕ್ಕೆ 15-20 ತರದ ತರಕಾರಿ ಗೆಂಡೆ, ಗೆಣ್ಸ್, ಕಾಳ್‌ಗಳ ಗೈಪು, ಪಲ್ಯಗಳ ಇಕ್ಕಿ ಆದ ಮೇಲೆ ಆ ಮನೇಲಿ 1ವರ್ಷದ ಒಳಗಿರುವ ಹಸು ಕೂಸ್‌ಗಳ್ನ ಪ್ರತಿ ಒಬ್ಬರ ಬಾಳೆಲೆ ಮುಂದೆ ಕೂಸ್‌ಗಳ ಅವ್ವಂದರ್ ತಕ್ಕಂಡ್ ಹೋದವೆ. ಆಗ ಕೂಸ್ನ ಬಾಯಿಗೆ ಪಾಯ್ಸನ ಎಲ್ಲವೂ ನೆಕ್ಕುಸುವೆ. ಹೊಸ ಮನುಷ್ಯ ಹೊಸಕ್ಕಿ ಅನ್ನ ಉಂಡು 100 ವರ್ಷ ಬಾಳ್, ಚಿನ್ನದಂಗೆ ಹೊಳ್ದ್ ಜೇನ್‌ನಂಗೆ ಮಾತಾಡ್ ಕೂಸುತಾ ಹಿರಿಯವು ಆಶೀರ್ವಾದ ಮಾಡ್ವೆ, ಮಕ್ಕ ದೇವ್ರು ಸಮಾತ ಹೇಳ್ವೆ.

ಇದೆಲ್ಲಾ ಆದ ಮೇಲೆ ಐನ್‌ಮನೆ ಪಟ್ಟೆದಾರ ಮನೆ ಮಕ್ಕಳ್ಗೆಲ್ಲ ಊಟ ಎತ್ತಿತ್ತಾತಾ ಕೇಳ್ದ ಮೇಲೆನೇ ಊಟ ಮಾಡುಕ್ಕುತ್ತ ನಿಯಮ ಉಟ್ಟು. ಪಾಯ್ಸಲಿ ಕಲ್ಲ್ ಸಿಕ್ಕಿದವು ನಂಗೆ ಕಲ್ಲ್ ಆಯುಷ್ಯತಾ ಹೇಳಿಕಂಡ್ ತಮಾಷೆ ಮಾಡಿಕಂಡ್ ಖುಷಿಂದ ಊಟ ಮಾಡುವೆ. ಇನ್ ಉಂಡು ಎಲ್ಲವ್ರದ್ ಆದ ಮೇಲೆ ಕೈ ಬಾಯಿ ಒಪ್ಪಿತಾ, ಹೇಳ್ದ್ ಮೇಲೆ ಉಂಬಕ್ಕೆ ಕುದ್ದಲಿಂದ ಏಳುಕ್ಕುತಾ ಉಟ್ಟು. ಇನ್ ಮಾರನೆ ದಿನ ಬೊಳಿ ಬುಡುಕನ ದನದ

ಹಟ್ಟಿಲಿ ದನ -ಕರ್‌ಗಳಿಗೆ ರಕ್ಷಣೆ ಕೊಡುವ ಅಂಗರ ದೇವ್ರುನ ಪ್ರಾರ್ಥಿಸುವೆ. 12ವರ್ಷದ ಒಳ್ಗಿರ್ವ ಮಕ್ಕಳ ಕೈಲಿ ಹಟ್ಟಿದ್ ಮೆಟ್ಟ್ ಕಲ್ಲಿಗೆ ತೆಂಗಿನಕಾಯಿ ಒಡ್ಸ್, ಹಟ್ಟಿ ಗೋಡೆ ಮೇಲೆ ಶುದ್ಧ ಮಾಡಿ ದೀಪ ಮಡ್ಗಿ, ಕೊಡಿ ಬಾಳೆಲೆಲಿ ಎಡೆ ಮಡ್ಗುವೆ. ಇದಾದ ಮಾರಣೆ ದಿನ ವಿಶೇಷತ್ತೇಳ್ರೆ ಹೊಸ ಅಕ್ಕಿದ್ ಕಡುಂಬು, ಮಾಸ ಗೈಪು , ಹಸಿ ಮೀನ್ ಗೈಪುನೊಟ್ಟಿಗೆ ಎಲ್ಲವೂ ಸೇರಿ ಒಟ್ಟಿಗೆ ಊಟ ಮಾಡುವೆ, ಕೆಲವು ಕಡೆ ಈ ಪದ್ಧತಿ ಈಗಲೂ ಉಟ್ಟು. ಹೆಚ್ಚಿನ ಕಡೆ ಮರೆಯಾಗಿ ಹೋಗುಟ್ಟು, ಈಗನ ಮಕ್ಕಳ್ಗೆ ಗೊತ್ತೇ ಇಲ್ಲೆ.

ಹೊಸ ಬತ್ತನ ಕಡಿಕೆಗೆ, ಪತ್ತಾಯಕೆ ಹಾಕ್‌ಕನ ಒಳ್ಳೆ ದಿನ, ಶುಭ ಘಳಿಗೆ ಬೆಳಿಗ್ಗೆನ ಹೊತ್ತು ಚೊಂಬುಕ್ಕ ಹಕ್ಕಿ ಮರ್‌ಡ್‌ಕ್ಕನೇ ಹಾಕೊಕುತಾ ನಿಯಮ ಉಟ್ಟು. ಹಂಗೇನೇ ಪತ್ತಾಯಂದ ಭತ್ತ ತೆಗೆಯಕ್ಕನ ಮಧ್ಯಾನದ ಹೊತ್ತು ಸಾಂಯ್ಕಾಲದ ಹೊತ್ತು, ಸೋಮವಾರ, ಶುಕ್ರವಾರ ಎಲ್ಲಾ ತೆಗೆಯಕ್ಕಾಗದ್.

ಹಿಂದೆನ ಕಾಲಲಿ ಭತ್ತ ಹಣದ ಬೆಳೆ ಆದ ಕಾರಣ, ಹೊಸ ಅಕ್ಕಿನ ವಿಳ್ಯೆದೆಲೆ ವ್ಯಾಪಾರದವಂಗೆ ಮಾರಿ ಈ ವರ್ಷದ ಲೇವಾ ದೇವಿ ಶುರು ಮಾಡ್‌ತ್ತಿದ್ದೊ, ಗೌಡುಗಳ ಮುಖ್ಯ ಕಸ್ಬು ಬೇಸಾಯನೇ ಆಗಿತ್. ಆದರೆ ಈಗ ಮಾತ್ರ ಬೇಸಾಯ ಸಾಯ್ತಾ ಉಟ್ಟು. ಈಗ ಗದ್ದೆಗೆಲ್ಲಾ ಶುಂಠಿ, ಕಾಫಿ, ಅಡಿಕೆ ತೋಟಗ ಆಗುಟ್ಟು. ಹುತ್ರಿ ಹಬ್ಬಕ್ಕೆ ಕದ್‌ರ್ ತೆಗೆಯಕ್ಕೆ ಗದ್ದೆ ನಾಟಿ ಮಾಡದೆ ಕೆಲವು ಕಡೆ ಕಟ್ಟಡಗ ನಿರ್ಮಾಣ ಆಗುಟ್ಟು.

ಹಿಂದೆನ ಅಕ್ಕಿ ಭತ್ತದ ಮಹತ್ವದ ಕಾಣದಂಗೆ ಆಗುಟ್ಟು. ಮುಂದೆ ಪೀಳಿಗೆಗೆ ಭತ್ತ ಕುಟ್ಟುದು ತ್ತೇಳ್ರೆ ಏನ್‌ತ್ತೇ ಗೊತ್ತಾಕಿಲ್ಲೆ. ಈಗ ಗದ್ದೆ ನೆಟ್ಟವು ಒಕ್ಕಲ್ ಕಣಂದೆ ಜೀಪುಲಿ, ಲಾರಿಲಿ ಮಿಲ್‌ಗೆ ಭತ್ತನ ಅಕ್ಕಿ ಮಾಡಿಕೆ ತಕ್ಕಂಡ್ ಹೋದವೆ. ಭತ್ತ ತೇಳ್ರೆ ಧಾನ್ಯ ಲಕ್ಷ್ಮಿ, ಅದ್ರಂದ ಇದರ್‍ನ ಪವಿತ್ರತಾ, ಪೂಜ್ಯತಾ ಭಾವನೆಂದ ಕಾಂಬೊತ್ತಿದ್ದೊ. ಈಗ ಇದ್‌ಕೆಲ್ಲಾ ಬೆಲೆ ಇಲ್ಲದಾಗಿಟ್ಟು.

ಕವನ

ಕಾಪಾಡು ಶಾರದಾ ಮಾತೆ




ಕೊಡಗಿನ ನಾಡಿನಲಿ
ನಾಡಿನ ಗೌಡರಲಿ
ವಿದ್ಯಾ ಸಂಘವು
ಬೆಳಗುತಿರಲಿ
ನೂರು ವರುಷ
ತುಂಬಿರುವಲ್ಲಿ
ಕಾಪಾಡು ಶಾರದಾ ಮಾತೆ||ಕಾ||
ಹಿರಿಯ ಮಾತಾಪಿತರು
ನೆಲೆಯೂರಿಸಿರುವ ವಿದ್ಯಾಸಂಘವನು
ಅಂದಿನಿಂದ ಇಂದಿಗೂ ಅವರ
ಹಾದಿಯನು
ಬೆಳಗುತ್ತಿರುವ ಜನಾಂಗದ ಪೀಳಿಗೆಯನ್ನು
ಕಾಪಾಡು ಶಾರದಾ ಮಾತೆ||ಕಾಪಾಡು||

ಕೊಡಗಿನ ಗೌಡರ ಕೀರ್ತಿಯಲಿ
ಶತಮಾನೋತ್ಸವದ ಸಂಭ್ರಮದಲಿ
ಎಂದೆಂದೂ ಜ್ಯೋತಿ ಬೆಳಗುತಲಿರಲಿ
ಕಾಪಾಡುತಲಿರಲಿ ಕುಲದೇವರು
ಬದುಕಿ ಬಾಳುತಿರುವ ನಿಮ್ಮೊಡಲಲ್ಲಿ
ಕಾಪಾಡು ಶಾರದಾ ಮಾತೆ ||ಕಾ||

-ನಂಗಾರು ವಿ. ಶಾರದ ಧರ್ಮಪ್ಪ,
ಕುಶಾಲನಗರ.

ಎರಡಕ್ಷರದ ಮಹಿಮೆ



- ಕರ್ಣಯ್ಯನ ವಿಮಲ ರವಿ,
ಮಡಿಕೇರಿ.

"ಬ್ರಹ್ಮ" ಎಂಬ ಎರಡಕ್ಷರದ ದೇವನು "ಲೀಲೆ" ಎಂಬ ಎರಡಕ್ಷರದ "ಬೀಜ"ವನ್ನು "ಭೂಮಿ"ಯಲ್ಲಿ ಬಿತ್ತಿದಾಗ, ಗಂಡು, ಹೆಣ್ಣು ಎಂಬ ಎರಡಕ್ಷರಗಳ ಶಿಶುಗಳಾಗುತ್ತವೆ. ಆ ಶಿಶುಗಳಿಗೆ "ತಾಯಿ" ಎಂಬ ಕಾಮಧೇನು "ಸ್ತನ" ಎಂಬ ಫಲದಿಂದ "ಕ್ಷೀರ" ಎಂಬ ಅಮೃತ ಉಣಿಸಿದಾಗ "ಬಾಲ್ಯ"ದ ಆರಂಭವಾಗುತ್ತದೆ. ತಂದೆ, ತಾಯಿ , ಅಣ್ಣ , ಅಕ್ಕ, ತಮ್ಮ, ತಂಗಿ ಎಂಬ ಎರಡಕ್ಷರಗಳ ಬಳಗದವರೊಂದಿಗೆ "ನಗು" "ಅಳು"ಗಳು ಹೂ ಚೆಲ್ಲುತ್ತಾ ಮುಂದಡಿಯಿಡುತ್ತಾರೆ.

ನಂತರ "ಶಾಲೆ" ಎಂಬ ಎರಡಕ್ಷರದ ದೇಗುಲ ಸೇರಿ "ಗುರು" ಎಂಬ ದೇವನಲ್ಲಿ "ಜ್ಞಾನ"ದ ಪ್ರಭಾವದಿಂದ "ಗುಣ"ನಡೆ -ನುಡಿ "ವಿದ್ಯೆ"ಗಳ ಫಲವನ್ನು ಪಡೆಯುತ್ತಾ ಯೌವ್ವನದಲ್ಲಿ ಕಾಲಿಡುತ್ತಾರೆ. ವಧು-ವರರು ಮರ ಬಳ್ಳಿಗಳಂತೆ "ಲಗ್ನ"ದಿಂದ ಬಂಧಿತರಾಗುತ್ತಾರೆ ನಂತರ "ಪತಿ-ಪತ್ನಿ" ಎಂಬೆರಡಕ್ಷರಗಳ "ಹಂಸ"ಗಳಾಗಿ "ಪ್ರೀತಿ ಪ್ರೇಮ"ಗಳ ಶರಧಿಯಲ್ಲಿ ನಲಿದ ಫಲವಾಗಿ "ಮಗು" ಎಂಬ "ಫಲ"ವನ್ನು ಪಡೆಯುತ್ತಾರೆ. ಈ ರೀತಿ ಸುಖ-ದುಃಖಗಳೆಂಬ "ಬೇವು-ಬೆಲ್ಲ"ವನ್ನು ಸವಿಯುತ್ತಾ ಸಂಸಾರದ "ನಾವೆ"ಯನ್ನು ಸಾಗಿಸುತ್ತಾ "ಬಾಳು"ಎಂಬ ಎರಡಕ್ಷರದ ದಾರಿಯನ್ನು ಸವೆಸುತ್ತಾ "ಮುಕ್ತಿ" ಎಂಬೆರಡಕ್ಷರದ ದೇವರ ಪಾದದಲ್ಲಿ ಲೀನವಾಗುತ್ತಾರೆ.

ಇದೇ "ಜೀವ"ಜಗತ್ತಿನಲ್ಲಿ ಎರಡಕ್ಷರದ ಮಹಿಮೆ.

ಕವನ

ಮಡಿಕೇರಿ ಗೌಡ ಬೋರ್ಡಿಂಗ್

ಈ ಮಂಜಿನ ಮಂಟಿಲಿ
ಯಾಕೆ ಒಬ್ಬನೆ ನಿತ್ತೊಳ
ತಿರುಮಲೆ ಮೇಲಿರುವ
ತಿಮ್ಮಪ್ಪನಂಗೆ?
ಅಂದ್ ಪುಡ್ಕನೆ ಇದ್ದಂವ
ಇಂದ್ಯಾಕೆ ಹಿಂಗಾದ
ನಾಣೆದ ಹೊರಿಯಕ್ಕಿನಂಗೆ!
ಹಿಂದೊಮ್ಮೆ ನಿಂದಾಗಿತ್
ತುಂಬಿದ ಮನೆ
ಬರುವ ಹೋಗುವ
ಅಪ್ಪ ಅವ್ವಂದರ
ಸಡಗರ ಸಂಭ್ರಮಕೆ
ನಿನ್ನಂಗಳ ತುಂಬೆಲ್ಲ
ಮಕ್ಕಳದೆ ಗುಲ್ಲು
ಕಾಗೆ ಗೂಡಿಗೆ
ಕಲ್ಲ್ ಬಿದ್ದಂಗೆ
ಅಂದ್ ನೀನಾಗಿದ್ದ
ಅಪ್ಪ ಅವ್ವ ಅವುಕೆಲ್ಲ
ಓದ್ಸಿ ಬರ್ಸಿ ಮುಂದಕೆ
ತರ್ತಿದ್ದ ಅವರ್ನೆಲ್ಲ
ಇಂದ್ ಲೋಕ ಬದ್ಲಾಗುಟು
ಎಲ್ಲೆಲ್ಲೂ ಶಾಲೆ ಕಾಲೇಜ್
ಹಾಸ್ಟೆಲ್ ಬಂದುಟು
ನಿನ್ನ ಮನೆ ಖಾಲಿ ಆಕಂಡುಟ್ಟು
ಏರಿಳಿತ ನಮ್ಮ ನೆಳಲಿದ್ದಂಗೆ
ಹೆಂಗಿದ್ದರು ಆ ಸುಂದರಬಾಳ್
ಕಣ್ ಮುಂದೆ ಕಾಣ್‌ತಿರಲಿ
ನಮ್ಮಿಬ್ಬರಿಗೆ ಹಿಂದೆನಂಗೆ

-ಕುಲ್ಲಚನ ಕಾರ್ಯಪ್ಪ, ಕುಂಬಳದಾಳು

ಪೆದ್ದವ್ವ



-ಪೊಡನೋಳಡ ರತ್ನಾವತಿ ರಮೇಶ್,
ಜಂಬೂರು ಗ್ರಾಮ.

ಮಕ್ಕಳ ಕಥೆ

ಒಂದ್ ಗುಡ್ಸಲ್‌ಲಿ ಅವ್ವ ಮತ್ತೆ ಮಂಞ ವಾಸ ಮಾಡಿ ಕಂಡ್ ಇದ್ದೊ ಅವ್ಕೆ ಊಟಕ್ಕೆ ತುಂಬಾ ಕಷ್ಟಇತ್ತ್. ಆಗ ಅವ್ವ-ಮಂಞ ಸೇರಿಕಂಡ್ " ನಾವು ಹಿಂಗೇ. ಎಷ್ಟ್ ದಿನ ಇರ್ದು ಹೆಂಗಾರ್ ಮಾಡಿ ಮನೆ ಮನೆಂದ ಅಕ್ಕಿ ಕೇಳಿಕಂಡ್ ಬರನೋಂತ ಮಾತಾಡಿಕಂಡೊ" ಅಲ್ಲಿ ಇಲ್ಲಿ ಅಕ್ಕಿ ಕೇಳಿರಸ್ತೆಲಿ ತಂದಾಕನ ತುಂಬಾ ಅಕ್ಕಿ ಆತ್, ಇನ್ನ್ ನಮಿಗೆ ದುಡ್ಡಿಗೆ ಸನ ಕಷ್ಟ. ಈ ಅಕ್ಕಿಲಿ ನೀರ್‌ದೋಸೆ ಮಾಡಿ ಪೇಟೆ ರತ್ರ ಕುದ್ದ್ ಮಾರಿಕೆ ತುಂಬಾ ದುಡ್ಡು ಸಿಕ್ಕಿದೆತೇಳಿಕಂಡ್ ಅವ್ವ ಮಂಞನ ಮನೆಲಿ ಇರ್‌ತೇಳಿ, ದೋಸೆ ಮಾಡಿ ಮಾರಿಕೆ ತಕಂಡ್ ಹೋಗಿ ಪೇಟೆಲಿ ಕುದ್ದ್‌ಕಂತ್‌ಗಡ.

ದೋಸೆನ ತಕಣಿಕೆ ಯಾರ್ ಹತ್ರ ಬಾತ್ಲೆ, ಸಾಯಂಕಾಲ ಗಂಟ ಪೇಟೆಲಿ ಇದ್ದ್ ಅವ್ವ ಮನೆಗೆ ವಾಪಾಸಾತ್‌ಗಡ ಮಾರ್‍ನೆ ದಿನ ಬೆಳಿಗ್ಗೆ ಪುನಾ ದೋಸೆ ತಕಂಡ್ ಮಾರಿಕೆ ಪೇಟೆಗೆ ಹೋತ್. ಆಗೊಳೂ ಸನ ಯಾರ್ ದೋಸೆ ತಕಣಿಕೆ ಅವ್ವನ ಹತ್ರ ಬಾತ್ಲೆ, ಅವ್ವಂಗೆ ಬೇಜಾರ ಆತ್. ಅಷ್ಟೊತ್ತಿಗೆ ಒಂದು ನಾಯಿ ಹತ್ರ ಬಾತ್ ಕುಂಯ್-ಕುಂಯ್ ತೇಳಿ ಬಾಲ ಅಲ್ಲಾಡ್ಸಿತ್‌ಗಡ. ಆಗ ನಾಯಿನೊಟ್ಟಿಗೆ " ನಿಂಗೆ ದೋಸೆ ಬೇಕಾ, ಬೇಕರೆ ದುಡ್ಡ್ ಕೊಟ್ಟ್ ತಕ್ಕಂಡ್ ಹೋಗು ದೋಸೆನ ಖಾಲಿ ಮಾಡಿ ದುಡ್ಡ್ ಕೊಡದೆ ಕುಂಯ್-ಕುಂಯ್ ತೇಳಿ ನಾಯಿ ಓಡಿ ಹೋತ್.

ಅವ್ವ ಮನೆಗೆ ಬಂದ್ ನಾಳೆ ದೋಸೆ ತಕಬಾಕ್ಕೆ ಹೇಳಿಟು. ಎಲ್ಲಾ ದುಡ್ಡು ನಾಳೆ ಸಿಕ್ಕಿದೆ " ತೇಳಿ ಪುನಃ ದೋಸೆ ತಕಂಡ್ ಪೇಟೆಗೆ ಹೋತ್‌ಗಡ. ಅಷ್ಟೊತ್ತಿಗೆ ನಾಯಿನೂ ಅಲ್ಲಿಗೆ ಬಾತ್‌ಗಡ ಆಗ ಅವ್ವ ಕೇಳ್ತ್ ನಾಯಿ, ನೀನ್ ಇಂದ್ ಪೂರ್ತಿ ದುಡ್ಡುಕೊಟ್ಟಿಯಾತ? ಆಗ ನಾಯಿ ಕುಂಯ್-ಕುಂಯ್ ತೇಳ್ತ್‌ಗಡ ಒಹೋ ಇಂದ್ ನಾಯಿ ನಂಗೆ ಪೂರ ದುಡ್ಡು ಕೊಟ್ಟದೆತೇಳಿ ಕುಷಿ ಪಟ್ಟ್‌ಕಂಡ್ ಮನೆಂದ ತಂದ ದೋಸೆನೆಲ್ಲಾ ನಾಯಿಗೆ ಕೊಟ್ಟತ್‌ಗಡ ಈ ದಿನ ಕೂಡ ನಾಯಿ ಅದೆತರ ಮಾಡಿ ಓಡಿ ಹೋತ್. ಅವ್ವ ನಿರಾಶೆ ಪಟ್ಟ್‌ಕಂಡ್ ಮನೆಗೆ ಬಂದ್ ಬೇಜರ ಮಾಡ್ತ್‌ಗಡ.

ಚುಟುಕು

ನೆನಪುಗಳು

ಮೊಗೆದಷ್ಟು
ತುಂಬುತಿರುವ
ಕಡುಬೇಸಿಗೆಯಲ್ಲು
ತಂಪೆನಿಸುವ
ತಡಕಾಡಿದಷ್ಟು
ಕಾಲಿಗೆಟುಕದ ತಳಕಾಣದ ಕೊಳ.

◆◆◆◆◆

ಸುನಂದ



-ಸುಳ್ಳಕೋಡಿ ಚಿಂತನ್ ನಾಣಯ್ಯ,
ಕಾಟಕೇರಿ.

ಟಣ್...ಟಣ್...ಟಣ್... ಗೋಡೆಗಡಿಯಾರ ಹನ್ನೊಂದು ಬಾರ್‌ಸಿತ್. ಸುನಂದ ತನ್ನ ಕನ್‌ಸ್‌ಂದ ಒಮ್ಮೆಲೆ ಎಚ್ಚರ ಆತ್. ಗಡಿಯಾರ ಕಡೆ ನೋಡ್‌ಕಾಕನ ಗಡಿಯಾರ ಟಕ್...ಟಕ್‌ತ ತನ್ನ ಕಾರ್ಯ ಮಾಡ್ತ ಇತ್ತ್. ತಕ್ಷಣ ಸುನಂದಂಗೆ ಇನ್ನೇನ್ ನನ್ನ ಗಂಡ ಮಕ್ಕ ಊಟಕೆ ಬಂದವೆಲ್ಲಾತೇಳಿಕಂಡ್ ಅಡ್‌ಗೆ ಮನೆಗೆ ಹೋತು. ಅವಳ ಕೈ ಅಡ್‌ಗೆ ಕೆಲಸ ಮಾಡ್ತಾ ಇತ್ತ್. ಅವಳ ಮನ್‌ಸ್ ಎಲ್ಲೋ ಹೋಗಿತ್ತ್.

ಸುನಂದ ಶ್ರೀಮಂತ ಕುಟುಂಬಲಿ ಹುಟ್ಟಿತ್‌ಲೆ, ಆದ್ರೆ ದೊಡ್ಡಮನೆತನಲಿ ಬೆಳ್ದವಳು. ಅಪ್ಪ ವಾಸುದೇವರಾಯರ್ ಒಂದು ಆಫೀಸ್‌ಲಿ ಗುಮಾಸ್ತ ಆಕಂಡ್ ಕೆಲ್ಸ ಮಾಡ್ತಿತ್ತ್. ಮನೆ ತುಂಬಾ ಮಕ್ಕ. ಬರುವ ಸಂಬಳ 200 ರೂ. ಅದರ್‌ಲಿ ಹೆಂಗೊ ಅವನ ಹೆಣ್ಣ್ ಕಮಲಮ್ಮ ತನ್ನ ಬುದ್ಧಿವಂತಿಕೆಂದ ಜೀವನ ಮಾಡ್ತಇತ್ತ್. ಎಷ್ಟೇ ಪ್ರಯತ್ನ ಪಟ್ರ್ ತಿಂಗಳ ಕೊನೆಗೆ ಒಪ್ಪೊತ್ತೂಟ ಮಾಡತ್ಕಾಗಿತ್ತ್. ಆದ್ರೆ ಕಮಲಮ್ಮ ಈ ವಿಷಯನ ಗಂಡಂಗೆ ಹೇಳ್ತನೇ ಇತ್ಲೆ. ಗಂಡ ಕೆಲಸಕ್ಕೆ ಹೋದ ಮೇಲೆ ದೊಡ್ಡ ಮಗಳಿಗೆ ಮನೆಕೆಲಸನ್ನೆಲ್ಲಾ ಕೊಟ್ಟ್ ನೆರೆಕರೆ ಮನೆಗೆಲ್ಲಾ ಹೋಗಿ ಅಷ್ಟಿಷ್ಟ್‌ತ ಕೆಲಸ ಮಾಡಿ ಸಂಪಾದ್‌ಸ್ತಿತ್ತ್. ಇದ್ ತಿಂಗಳ ಕಡೆಗೆ ಉಪಯೋಗ ಆಗ್ತಿತ್ತ್. ಆದ್ರೆ ಈ ವಿಷಯನ ಗಂಡಂಗೆ ಹೇಳ್ತನೇ ಇತ್ಲೆ. ಎಲ್ಲಿ ಗಂಡ ಬೈದ್ ಬುಟ್ಟವೇತ ಹೆದರ್‌ಕಂಡ್ ಮಕ್ಕಳಿಗೂ ಹೇಳಿತ್ತ್ ಅಪ್ಪಂಗೆ ಹೇಳಿಕೆ ಬೊತ್ತ್‌ತ.

ವಾಸುದೇವರಾಯರ ಮತ್ತೆ ಕಮಲಮ್ಮನ ಮೂರನೇ ಮಗಳೇ ಈ ಸುನಂದ. ಅದೇ ನಾನ್ ಹೇಳ್ದಲ್ಲಾ ನನ್ನ ಈ ಕಥೆನ ಬರೆಯಕ್ಕೆ ಸ್ಫೂರ್ತಿಯಾದವ್‌ಳ್. ದೊಡ್ಡವ್ಳು ಶಾಂತಿ, ಎರಡ್ನೆದ್ ಕೇಶವ. ಸುನಂದಳ ಹಿಂದೆ ಮೂರು ತಂಗಿಯರೆಂದ್ರ್ ಒಳೊ. ಶಾಂತಿ ತುಂಬಾ ಮೃದು ಸ್ವಭಾವದ್. ಅದ್‌ಕ್ಕೆ ಮನೆವಿಷಯೆಲ್ಲಾ ಗೊತ್ತಿರುದಕ್ಕೆ ಎಂತಕೂ ಹಠ ಮಾಡ್ತಿತ್ಲೆ. ಏಳನೆ ಕ್ಲಾಸ್‌ಲೆ ಸ್ಕೂಲ್ ಬುಟ್ಟ ಶಾಂತಿ, ಮನೆಕೆಲ್‌ಸಲಿ ಬಾರೀ ಜಾಣೆ. ಸ್ಕೂಲ್ ಬುಟ್ಟ ಮೂರೇ ವರ್ಷಲಿ ಮದ್‌ವೆ ಆತ್. ಗಂಡನ ಕಡೆ ಅಷ್ಟ್ ಶ್ರೀಮಂತಿಕೆ ಇಲ್ದೇ ಇದ್ರು ಊಟ-ಬಟ್ಟೆಗೇನ್ ಕಮ್ಮಿ ಇತ್ಲೆ. ಇದ್ದ್‌ದ್ರಲ್ಲೇ ನೆಮ್ಮದಿ ಜೀವನ ಮಾಡ್ತ ಇದ್ದೊ.

ಎರಡ್ನೆಯವ ಕೇಶವ ಓದುದ್ರಲಿ ಬಾರಿ ಹುಷಾರ್. ಪ್ರತೀ ವರ್ಷ ಕೂಡ ಒಳ್ಳೆ ಅಂಕಗಳ್‌ನ ಪಡಿತಿತ್ತ್. ಮುಂದೆ ಓದಕುತ ಬಾರಿ ಆಸೆ ಪಡ್ತ ಇತ್ತ್. ಆದ್ರೆ ಎಂತ ಮಾಡ್ವು? ಮನೆ ಕಡೆ ಸರಿಯಿಲ್ಲೆಲ್ಲತ ಬೇಸರಪಟ್ಟ್‌ಕಣ್‌ತಿತ್. ಅಪ್ಪ-ಅಮ್ಮಂಗೂ ಅದೇ ಚಿಂತೆ ಆತ್. ಎಸ್.ಎಸ್.ಎಲ್.ಸಿ. ಓದಿದ್ ಸಾಕ್‌ತ ಅಪ್ಪ-ಅಮ್ಮ ಹೇಳಿಕೆ ಸುರು ಮಾಡ್ದೊ. ಆದ್ರೆ ಕೇಶವ ತನ್ನ ಹಠನ ಬುಟ್ಟಿತ್ಲೆ. ಕಡೆಗೆ ಅಮ್ಮ ಕಷ್ಟಪಟ್ಟ್ ಜೋಡ್‌ಸ್‌ದ ಹಣನ ಕದ್ದ್‌ಕಂಡ್ ಓಡಿಹೋತ್. ಅಷ್ಟರಲ್ಲೇ ಸುನಂದ ಕೂಡ ಎಸ್.ಎಸ್.ಎಲ್.ಸಿ. ಗೆ ಕಾಲಿಟ್ಟಿತ್. ಮನೆ ಪರಿಸ್ಥಿತಿನ ತಿಳಿದ ಅವ್‌ಳ್ ತನ್ನ ಆಸೆನೆಲ್ಲಾ ಅಡಗಿಸಿಟ್ಟ್‌ಕಂಡ್ತ್. ಪಾಠದ ಕಡೆ ಹೆಚ್ಚ್ ಗಮನ ಕೊಡ್ತಾ ಇತ್ತ್. ಯಾರೊಟ್ಟಿಗೂ ಜಗಳ ಆಡ್‌ತಿತ್ಲೆ. ಎಲ್ಲರಕ್ಕಲೆ ನೆಗಾಡಿಕಂಡೆ ಇರ್‌ತ್ತಿತ್ತ್. ಇದರ್‌ಂದ ಅವಳ ಸ್ನೇಹಕ್ಕಾಗಿ ಎಲ್ಲ ಹಾತೊರೆತಿದ್ದೊ.

ಎಸ್.ಎಸ್.ಎಲ್.ಸಿ. ನ ಪ್ರಥಮ ದರ್ಜೆಲಿ ಪಾಸಾದ ಸುನಂದ ಉಳ್‌ದವರಂಗೆ ತಾನ್ ಕಾಲೇಜ್‌ಗೆ ಹೋಕುತ ಆಸೆ ಪಟ್‌ಕಂಡ್ ಇತ್ತ್. ಆದ್ರೆ ಎಂತ ಮಾಡ್ಟು? ಮನೇಲಿ ಬುಡಿಕಿಲೇತ ಗ್ಯಾನ ಮಾಡಿ ನೊಂದ್‌ಕಂಡ್ ತಾನೆ ನಾಲ್ಕಾರ್ ಮನೆಲಿ ಮನೆಪಾಠ ಮಾಡಿಕೆ ಸುರುಮಾಡ್ತ್. ಇದ್ರಂದ ಅವಳ್‌ಗೆ ಅಷ್ಟಿಷ್ಟ್‌ತ ಸಂಪಾದನೆ ಆಗ್ತಿತ್ತ್. ಜೊತೆಗೆ ಅಪ್ಪಂಗೂ ಸಹಾಯ ಆಗ್ತಿತ್ತ್. ಮದುವೆ ಆಗಿ ಗಂಡನ ಮನೆಲಿ ಸುಖವಾಗಿ ಬಾಳಕಾದ ಮಗಳ್ ನಮಿಗೋಸ್ಕರ ಕಷ್ಟಪಡ್ತ ಉಟ್ಟಲ್ಲತ ರಾಯರ್ ಮನ್‌ಸ್‌ಲೇ ನೊಂದ್‌ಕಣ್ಣ್‌ತ್ತಿದ್ದೊ. ಕಡೆಗೆ ಸುನಂದಂಗೆ ಅಪ್ಪನ ಆಫೀಸ್‌ಲೆ ಕೆಲ್‌ಸ ಸಿಕ್ತ್. ಆದ್ರೂ ರಾಯರ್‌ಗೆ ಒಂದ್ ಗ್ಯಾನ ತಲೆಲಿ ಕೊರಿತನೆ ಇತ್ತ್. ಅದೇನ್‌ತ ಹೇಳ್ರೆ ಮನೆ ಬುಟ್ಟ್ ಹೋದ ಮಂಜನ ಬಗ್ಗೆ ಮತ್ತೆ ಸುನಂದಳ ಮದುವೆ ಬಗ್ಗೆ.

ಅವರ ಕುಟುಂಬಕ್ಕೆ ದೇವರಂಗೆ ಆಧಾರಗಿ ಬಂದವತ್ತ್‌ೇಳ್ರೆ ಪ್ರಕಾಶ. ಶ್ರೀಮಂತಿಕೆಲಿ ಬೆಳ್ದ ಅಂವ, ಸಣ್ಣವನಿರ್‌ಕಾಕಲೆ ಅಪ್ಪ-ಅಮ್ಮ ತೀರಿ ಹೋದೊ. ಹಿಂಗಾಗಿ ಅವ ಚಿಕ್ಕಪ್ಪನ ಆಶ್ರಯಲೆ ಬೆಳ್ತ್. ಹೆಂಗೊ ಕಷ್ಟಪಟ್ಟ್ ಬಿ.ಎ. ಮಾಡ್ತ್. ಇಲ್ಲಿಗೆ ಓದಿದ್ ಸಾಕ್‌ತ ಗ್ಯಾನ ಮಾಡಿಕಂಡ್ ತನ್ನ ತೋಟ ಗದ್ದೆಗಳ್ನ ಚಿಕ್ಕಪ್ಪನ ಕೈಯಿಂದ ತನ್ನ ವಶಕ್ಕೆ ತಗಂಡ್ ಕೆಲ್ಸ ಮಾಡ್ತ್. ಒಂಟಿಯಾಗಿದ್ದ ಈ ಹೈದ ಎಲ್ಲಿ ಕೆಟ್ಟ್ ಹೋದೆತ ಗ್ಯಾನ ಮಾಡ್ದ ಚಿಕ್ಕಪ್ಪ ಅವಂಗೆ ಮದ್‌ವೆ ಮಾಡಿಕೆ ನಿರ್ಧಾರ ಮಾಡ್ತ್. ಇದ್‌ರ ಬಗ್ಗೆ ಪ್ರಕಾಶನ ಕೇಳ್‌ಕಾಕನ ಅವ ನಾನ್ ಬಡವಳ್ನೇ ಮದ್‌ವೆ ಆದುತ ಹಟ ಹಿಡ್ತ್.

ಸುನಂದ ನೋಡಿಕೆ ಸಣಕಲಾದ್ರೂ ಜೀವಕಳೆ ತುಂಬಿತ್ತ್. ನೋಡ್‌ವವ್‌ಕ್ಕೆ ಪುನಃ ಪುನಃ ನೋಡೊಕುತ ಆಗ್ತಿತ್ತ್. ರಾಯರ್ ಮದ್‌ವೆಗೆ ಒಪ್ಪಿಕೊಂಡೊ. ಅವ್‌ಳ್ ಒಪ್ಪಿತ್. ಅದೂ ಅಲ್ದೆ ಶಾಂತಿನ ಮದ್‌ವೆ ಮಾಡಿಕೆ ಮಾಡ್ದ ಸಾಲ ಎಲ್ಲಾ ತೀರಿತ್ತ್. ಅಲ್ಲದೆ, ಅಲ್ಪ ಸ್ವಲ್ಪ ಹಣ ಉಳ್ದಿತ್ತ್. ಹಂಗಾಗಿ ರಾಯರ್ ಬೇಗ ಮದ್‌ವೆಗೆ ಒಪ್ಪಿಕಂಡೊ. ಹಿಂಗೆ ಎಲ್ಲರ್ ಒಪ್ಪಿಗೆ ಕೊಟ್ಟ ಮೇಲೆ ಪ್ರಕಾಶ -ಸುನಂದ ಮದುವೆ ಛತ್ರಲಿ ಸಣ್ಣದಾಗಿ ಆತ್. ತನ್ನ ಕೆಲ್‌ಸಕೆ ರಾಜೀನಾಮೆ ಕೊಟ್ಟ್ ಸುನಂದ ಪ್ರಕಾಶನ ಮನ್‌ಸ್‌ನ ಒಡತಿಯಾತ್.

ಇಂದ್ ಸುನಂದ ಸುಖಲಿ ಉಟ್ಟು. ದೇವರಂತ ಗಂಡ, ಮುತ್ತಿನಂತ ಎರಡ್ ಮಕ್ಕ. ತಂಗಿಯರ ಮದ್‌ವೆ ಸಹ ಆತ್. ಅಪ್ಪ -ಅಮ್ಮಂಗೆ ಪ್ರಕಾಶ ತಿಂಗ ತಿಂಗ ಖರ್ಚಿಗೆ ಹಣ ಕಳ್‌ಸ್ತಿತ್ತ್. ಇದ್‌ರ್ದ ಅವ್‌ಕೆ ಯಾವ ತೊಂದರೇನ್ ಇತ್ಲೆ. ಆದ್ರೆ ಸುನಂದಂಗೆ ಅವ್‌ಳ ಮನ್‌ಸ್‌ನ ಬೇಸರ ಪಡ್‌ನ್‌ತ ಇದ್ದ ವಿಷಯ ತೇಳ್ರೆ ಅಣ್ಣನ ನೆನ್‌ಪ್. ಏನಾತ್?, ಎಲ್ಲಿ ಉಟ್ಟುತನೂ ಗೊತ್ಲೆ.

ಸ್ಕೂಲ್‌ಂದ ಬಂದ ಮಕ್ಕ ಕೈಕಾಲ್ ತೊಳ್ದ್ ಊಟಕೆ ಕುದ್ದೊ. ಗಂಡನು ಕುದ್ದತ್. ಎಲ್ಲವ್ಕೂ ಸುನಂದ ಮೌನವಾಗಿಯೇ ಊಟ ಇಕ್ಕಿತ್. ಇಷ್ಟ್ ದಿನ ಮಾತಲೇ ಕಾಲ ಕಳೆತಿದ್ದ ನನ್ನ ಹೆಣ್ಣ್‌ಗೆ ಇಂದೇನಾತ್‌ತ ಪ್ರಕಾಶಂಗೆ ಆಶ್ಚರ್ಯ ಆತ್. ಕೊನೆಗೂ ಕೇಳೇ ಬುಡ್ತ್. 'ಎಂತಾತ್ ಸುನಂದ ಸೌಖ್ಯ ಇಲ್ಲೇನ?' 'ಇಲ್ಲೆ ಸರಿಯಾಗೊಳೆ ' 'ಇಲ್ಲೆ ನಿನ ಮುಖ ಬಾಡಿಟು ಮುಂದೆ ಇದ್ದಂಗೆ ಇಂದ್ ಇಲ್ಲೆ ನೀನ್'ತ ಹೇಳ್‌ಕಾಕನ ಸುನಂದ 'ಹಂಗೇನಿಲ್ಲೆ ಹಂಗೆ ಹಳೆದೆಲ್ಲಾ ಗ್ಯಾನಾತ್‌ತ ಹೇಳ್‌ಕನ ಪ್ರಕಾಶಂಗೆ ಕಾಗದ ಬಂದದ್ ಗ್ಯಾನಾತ್. ಅದ್ನ ಹೇಳ್‌ಕಾಕನ ಗಂಡ ಊಟ ಮಾಡ್ತ ಉಟ್ಟುತನೂ ಗ್ಯಾನ ಮಾಡ್ದೆ ಹೋಗಿ ಕಾಗದ ಓದಿಕೆ ಸುರು ಮಾಡ್ತ್.

ಇತ್ತ ಇಷ್ಟ್ ಹೊತ್ತಾದ್ರು ಯಾಕೆ ಬಾತ್ಲೆತ. ಪ್ರಕಾಶ ಊಟ ಮಾಡಿ ಹೋಗಿ ನೋಡ್‌ಕಾಕನ ಸುನಂದಳ ಮುಖಲಿ ಹೋದ ಕಳೆ ಬಂದಿತ್ತ್. ಎಂಥತ ಕೇಳ್‌ಕಾಕನ ಸುನಂದ ಕಾಗದಲ್ಲಿದ್ದಲೆಲ್ಲಾ ಹೇಳ್ತ್. ಕೊನೆಗೂ ಸುನಂದಂಗೆ ಇದ್ದ ಒಂದ್ ಕೊರ್‌ಗ್ ಇಲ್ಲದಾತ್. ಸುನಂದಂಗೆ ಹೇಳಿಕೆ ಆಗದಷ್ಟ್ ಖುಷಿ ಆತ್. ಇದ್ನ ನೋಡ್ದ ಪ್ರಕಾಶ ತನ್ನಲ್ಲೇ ನಗಾಡಿಕಂಡ್ ಪೇಪರ್ ಓದಿಕೆ ಸುರು ಮಾಡ್ತ್.

◆◆◆◆◆

ದಕ್ಷಿಣೆ

-ಉಗ್ರಾಣಿ ನಮಿತ ಅಯ್ಯಪ್ಪ,
ಮದೆನಾಡು, ಮಡಿಕೇರಿ.

ಅರೆಭಾಷೆ ಕಥೆ

ಮೂಡಣದ ಕಡೆಯಿಂದ ಸೂರ್ಯ ಎದ್ದಿತ್. ಹುಂಜ ತನ್ನ ಅಲರಾಂನ ಹೊಡಿತಾ ಇತ್ತ್. ಅದ್ ಒಂದು ಸುಂದರವಾದ ಬೆಳಗಿನ ಹೊತ್ತು. ಆಗ ತಾನೇ ಮದುವೆ ಆಗಿ ಲಕ್ಷ್ಮಿ ತನ್ನ ಗಂಡನ ಮನೆ ಸೇರಿ ಒಂದು ತಿಂಗ ಕಳಿತಾ ಬಂದಿತ್. ಅವುಳಿಗೆ ಇನ್ನೂ ಅಲ್ಲಿನ ವಿಷಯಗಳ ಬಗ್ಗೆ ಹೆಚ್ಚಿಗೆ ಗೊತ್ತಿತ್ತೆಲ್ಲ.

ಲಕ್ಷ್ಮಿ ತನ್ನ ಅಪ್ಪ ಅವ್ವಂಗೆ ಎರಡನೇ ಮಗಳು ಆಗಿತ್ತ್. ಮತ್ತೆ ಅವುಳ ಅಣ್ಣನೂ ಇತ್ತ್. ಲಕ್ಷ್ಮಿಗೆ ಕಷ್ಟ ಸುಖಗಳ ಬಗ್ಗೆ ಗೊತ್ತಿದ್ದರೂ ಹೆಚ್ಚಿಗೆ ಏನೂ ಗೊತ್ತಿತ್ತೆಲ್ಲ. ಒಟ್ಟಿನಲ್ಲಿ ಹೇಳಕುತೇಳಿರೆ ತವುರು ಮನೆಯ ತಣ್ಣನೆಯ ಗಾಳಿಲಿ ಬೆಳ್ದವಳ್ ಯಾರ್ಂದ್ರನೂ ಬಯ್ಸಿಕಂಡವಳ್ಲ.

ಲಕ್ಷ್ಮಿ ತನ್ನ ಗಂಡನೊಟ್ಟಿಗೆ ಸುಖವಾಗಿ ಬಾಳಿ ಬದುಕುವ ಕನಸ್‌ನ ಹೊತ್ತ್ ತವುರು ಮನೆಯ ಮೆಟ್ಲ್‌ಲ್ ಇದ್ ಅಗ್ನಿ ಸಾಕ್ಷಿಯಾಗಿ ತಾಳಿನ ಕಟ್ಟಿಸಿಕಂಡ ಕಿರಣತ ಹೇಳುವ ಹೈದನ ಮದುವೆ ಆತ್. ಲಕ್ಷ್ಮಿನ ಮದುವೆಲಿ ಗಂಡನ ಮನೆಯವು ಹೇಳ್‌ದ ಎಲ್ಲಾ ಆಸೆಗಳನ್ನಾ ಪೂರೈಸಿಕೆ ಆಗದಿದ್ದರೂ, ಮಗಳ ಸುಖಕ್ಕಾಗಿ ತವರು ಮನೆಯವು ಸಾಲ ಮಾಡಿ ಪೂರೈಸಿದ್ದೊ. ಲಕ್ಷ್ಮಿ ಗಂಡನ ಮನೆಲಿ ಎಲ್ಲಾ ಕೆಲ್ಸಗಳನ್ನ ಅಚ್ಚ್‌ಕಟ್ಟಾಗಿ ನಿರ್ವಹಿಸ್‌ತ್ತಾ ಇತ್ತ್. ಆದ್ರೆ ಲಕ್ಷ್ಮಿನ ಅತ್ತೆನ ಆಸೆಗೆ ಮಾತ್ರ ಅಂತ್ಯನೇ ಇಲ್ಲದಾತ್. ಲಕ್ಷ್ಮಿ ಮಾಡ್‌ದ ಕೆಲ್ಸ ಸರಿ ಇದ್ದರೂ ಅದರ್‌ಲಿ ತಪ್ಪು ಹುಡುಕಿ ಅತ್ತೆ ಕಾಟಕೊಡಿಕೆ ಸುರು ಮಾಡ್‌ತ್. ಲಕ್ಷ್ಮಿ ಮಾತ್ರ ಅತ್ತೆನ ಈ ಕಾಟನ ತಲೆಗೆ ಹಾಕಣದೇ ಎಲ್ಲಾ ಕೆಲ್ಸಗಳನ್ನ ಮಾಡಿಕಂಡ್ ಇತ್ತ್.

ಲಕ್ಷ್ಮೀನ ಗಂಡ ಕಿರಣ ಮಾತ್ರ ಅವ್ವ ಹೇಳ್‌ದ ಹಂಗೆನೇ ಕೇಳ್‌ತಾ ಇತ್ತ್. ಹಂಗೇ ಇರ್‌ಕನ ಲಕ್ಷ್ಮಿಗೆ ಒಂದು ದಿನ ವಿಪರೀತ ಜ್ವರ ಬಾತ್. ಲಕ್ಷ್ಮಿ ಗಂಡನೊಟ್ಟಿಗೆ ಹೇಳ್‌ತ್. ಅವನೋ ಅದನ್ನ ಸಹ ಅವ್ವನೊಟ್ಟಿಗೆ ಹೇಳ್‌ತ್. ಆಗ ಲಕ್ಷ್ಮಿನ ಅತ್ತೆ ಅವುಳಿಗೆ ತವುರು ಮನೆಗೆ ಹೋಕೆ ಗ್ಯಾನ ಬಂದಿರುದು ಅದಿಕೆ ಹಂಗೆ ಹೇಳ್‌ತ ಉಟ್ಟುತಾ ಹೇಳ್‌ತ್. ಮತ್ತೆ ಲಕ್ಷ್ಮಿ ಅತ್ತೆನೊಟ್ಟಿಗೆ ಏನು ಹೇಳದೆ ಗಂಡನೊಟ್ಟಿಗೆ ಹೇಳಿ ಆಸ್ಪತ್ರೆಗೆ ಹೋತ್. ಅಲ್ಲಿ ಡಾಕ್ಟರ್ ಟೈಫಾಯ್ಡ್ ಜ್ವರ ಬಂದಿರುವುದರ್‌ಂದ ರೆಸ್ಟ್ ತಕಣಕೂತ ಹೇಳ್ದೊ. ಲಕ್ಷ್ಮಿ ಆಸ್ಪತ್ರೆಂದ ಸೀದಾ ತನ್ನ ತವರು ಮನೆಗೆ ಹೋತ್. ತವರು ಮನೆಲಿ ಲಕ್ಷ್ಮಿ ಅತ್ತೆ ಕೊಡವ ಯಾವ ಕಷ್ಟನೂ ಅಪ್ಪ ಅವ್ವನೊಟ್ಟಿಗೆ ಹೇಳಿಕಣದೆ ಮುಂದೇನ ಹಂಗೇನೆ ಖುಷೀಲಿ ಇತ್ತ್. ಹಿಂಗೆ ಇರ್‌ಕನ ಜ್ವರನೂ ವಾಸಿ ಆತ್. ಮತ್ತೆ ಲಕ್ಷ್ಮಿ ಬೇಜಾರಲಿ ಗಂಡನ ಮನೆಗೆ ಬಾತ್.

ಇಲ್ಲಿ ಅತ್ತೆನ ಉಪದ್ರ ಉತ್ತುಂಗಕ್ಕೆ ಏರಿತ್ತ್. ದಿನಂದ ದಿನಕ್ಕೆ ಇದ್ ಜಾಸ್ತಿ ಆಗ್‌ತಾ ಬಾತ್. 'ನಿನ್ನ ಮನೆಂದ ಕೊಟ್ಟ ದುಡ್ಡು ಮತ್ತೆ ಚಿನ್ನ ಯಾರಿಗೆ ಎತ್ತಿದೆ' ಓಡಾಡಿಕೆ ಒಂದು ಕಾರ್ ಕೊಡಿಕೆ ಹೇಳ್‌ತ ಸುರು ಮಾಡ್‌ತ್. ಲಕ್ಷ್ಮಿಗೆ ಇದನ್ನೆಲ್ಲಾ ಕೇಳಿಕಂಡ್ ಸಹಿಸಿಕಣಿಕೆ ಶಕ್ತೀನೆ ಇಲ್ಲದಾತ್. ತನ್ನ ತವರು ಮನೆಲಿ ಮದುವೆಗೆ ಮಾಡ್‌ದ ಸಾಲನೇ ತೀರ್‌ತ್‌ಲೇತಾ ಗ್ಯಾನ ಮಾಡಿಕಂಡ್ ಬ್ಯಾಜರ ಪಟ್ಟತ್. ಈ ಕಷ್ಟಕ್ಕೆಲ್ಲಾ ಒಂದೇ ಉತ್ತರತಾ ಗ್ಯಾನ ಮಾಡಿಕಂಡ್ ಅರ್ಧ ಡಜನ್ ನಿದ್ರೆಮಾತ್ರೆನ ನೀರಿನೊಟ್ಟಿಗೆ ತನ್ನ ಹೊಟ್ಟೆಗೆ ಸೇರಿಸಿ ಕಂಡತ್. ಇನ್ನೊಂದು ಕೈಲಿ ಒಂದು ಕಾಗದನ ಹಿಡ್‌ದ್ ರೂಂ ಬಾಗ್‌ಲ್ ಹಾಕಿ ಚಿರನಿದ್ರೆಗೆ ಶರಣಾತ್. ಇತ್ತ ಕಾಗದ ಓದಿದ ಊರ್‌ನವು ಮತ್ತೆ ಲಕ್ಷ್ಮಿಯ ತವರು ಮನೆಯವು ಪೊಲೀಸ್‌ಗೆ ಪುಕಾರ್ ಕೊಟ್ಟೊ. ಗಂಡ ಮತ್ತೆ ಅತ್ತೆ ಪೊಲೀಸ್ ನಂಟ್ರಾದೊ.

ಬದುಕು-ಬವಣೆ

-ಬಿ.ಆರ್.ಜೋಯಪ್ಪ, ಮದೆ

ಕೃಪೆ: ಕೆಂಡಸಂಪಿಗೆ ಡಾಟ್‌ಕಾಮ್

ಕಾಟಿಬೆಟ್ಟದ ಸುತ್ತಲಿನ ನಾಡು ಬರಗಾಲವನ್ನು ಅನುಭವಿಸಿದ ಕಹಿಯನ್ನು ಮರೆಯಲು ಸಾಧ್ಯವಿಲ್ಲ. ಆ ನಾಡು ಹಿಂದೆ ಜಲಪ್ರಳಯವನ್ನು ಕಂಡಿತ್ತು. ಅಂತಹ ನಾಡಿಗೆ ಬರಗಾಲವೂ ಅಪ್ಪಳಿಸಿ ಜನರನ್ನು ತತ್ತರಿಸುವಂತೆ ಮಾಡಿತ್ತು.

ಕೃಷಿಯ ಮಾತಿರಲಿ, ಕುಡಿಯುವ ನೀರಿಗೂ ಪರದಾಟವಾಯಿತು. ಅಕ್ಕಿ, ರಾಗಿ ಮುಗಿದು ಹೊತ್ತು ಕಳೆಯುವುದೇ ಕಷ್ಟವಾಯಿತು. ಬೀಸುವ ಒಣಗಾಳಿ, ಬಿಸಿಲಿನ ಝಳ, ಹೊಟ್ಟೆಯಲ್ಲಿ ಹಸಿವಿನ ಅಗ್ನಿ, ಹೊರಗೆ ಒಣಗಿನಿಂತ ಕಾಡು. ಬೆಂಕಿ ಬಿದ್ದರೆ ಸರ್ವನಾಶ. ಯಾವ ಕೃಷಿಯೂ ಇಲ್ಲದೆ ಬಣಗೊಡುವ ಗದ್ದೆ.

ಜಲಪ್ರಳಯ ಕಂಡ ನೆಲಕ್ಕೆ ಆ ವರ್ಷ ನೀರು ಹನಿಯಲಿಲ್ಲ. 'ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ, ನಾಲ್ಕು ಹನಿಯ ಚೆಲ್ಲಿ 'ಎಂದು ಕವಿ ಬರೆದುದು ಅದಕ್ಕೆ ತಾನೆ? ಆದರೆ ಅಂದು ಚಲಿಸಿದ್ದ ಮೋಡಗಳು ಬಿಳಿಯ ಬಣ್ಣದ್ದು ಇರಬಹುದು. ನಾನಾಗ ಪುಟಾಣಿ. ಬಿಳಿಕಪ್ಪು ಮೋಡದ ಬಗ್ಗೆ ನನಗೆ ಗೊತ್ತಿರಲಾರದು. ಆದರೆ ಹೊಟ್ಟೆ ತುಂಬಿಸಲು ಪಟ್ಟಪಾಡು ಮಾತ್ರ ಮರೆಯಲು ಸಾಧ್ಯವಿಲ್ಲ. ತೋಡು ತೊರೆಗಳೆಲ್ಲ ಬತ್ತಿಹೋದವು. ಆ ಊರಿನಲ್ಲಿ ಜೋಡುಕಟ್ಟೆ ಕೆರೆ ಹೆಸರುವಾಸಿಯಾದುದು. ನೀರು ಥಳಗೊಡುತ್ತಿದ್ದ ಕೆರೆ ಒಣಗಿತು. ಅದರ ನಡುವೆ ದಾರಿಯಾಯಿತು! ಕಾಡು ಪ್ರಾಣಿಗಳು ಅಲೆದಾಡತೊಡಗಿದವು.

ನಮ್ಮ ಬಾವಿ ಬತ್ತಿ ಹೋಯಿತು. ನಾವು ನೀರಿಗೆ ಬೇರೆಯವರ ಗದ್ದೆಯಲ್ಲಿದ್ದ ಬಾವಿಗೆ ಹೋಗುತ್ತಿದ್ದೆವು. ಕೊನೆಗೆ ಬಾವಿಗೆ ಇಳಿದು ನೀರನ್ನು ಚೊಂಬಿನಿಂದ ಬಿಂದಿಗೆಗೆ ತುಂಬಿಸಿಕೊಳ್ಳುವಂತಾಯಿತು. ಕಾಡಾನೆಗಳು ನಮಗಿದ್ದ ಗುಟುಕು ನೀರನ್ನು ಹೀರಿಬಿಡುತ್ತಿದ್ದವು. ಒಮ್ಮೆ ಅಕ್ಕ, ನಾನು ಮತ್ತು ಅವ್ವ ಬೆಳಗ್ಗಿನ ಜಾವ ಎದ್ದು ಬಾವಿಗೆ ಹೋದೆವು. ಆ ಹೊತ್ತಿನಲ್ಲಿ ಒಂದಷ್ಟು ನೀರಿರುತ್ತದೆ. ಹಾಗಾಗಿ ಒಂದು ಬಿಂದಿಗೆ ನೀರು ಸಿಗಬಹುದೆಂದು ಲಗುಬಗೆಯಿಂದ ಇಣುಕಿದೆವು. ಆದರೇನು?ನಮಗಿಂತ ಮೊದಲೇ ಕಾಡಾನೆಗಳು ಇದ್ದ ನೀರನ್ನು ಕುಡಿದಿದ್ದವು.

ಕಾಡಾನೆಗಳ ಸಿಂಡು(ವಾಸನೆ)ಅಲ್ಲೆಲ್ಲಾ ಹರಡಿತ್ತು. ಹೆಜ್ಜೆಗಳು ಅಲ್ಲೆಲ್ಲಾ ಮೂಡಿದ್ದವು. ಆದರೆ ನಮ್ಮ ದಾರಿಗೆ ಅಡ್ಡವಾಗಲಿಲ್ಲ.

ನಮಗೆ ತಿನ್ನಲಿಕ್ಕೇನುಂಟು ? ಇದ್ದ ಕಾಳು ಮುಗಿದಿತ್ತು. ಕೈಯಲ್ಲಿ ಕಾಸಿಲ್ಲ. ಹಾಗೆಂದು ಯಾರಲ್ಲಿಗೂ ಹೋಗಲಿಲ್ಲ. ನಮ್ಮಲ್ಲಿಗೆ ಯಾರೂ ಬಂದ ನೆನಪಿಲ್ಲ. ಬಹುಶಃ ಎಲ್ಲಾ ಕಡೆ ಇದೇ ಪಾಡು ಇದ್ದಿರಬೇಕು.

ಗಟ್ಟಿ ನೆಲದಲ್ಲಿ ಕಾಡು ಗೆಣಸು ಅಗೆಯುವುದು ಸುಲಭದ ಮಾತಲ್ಲ. ಆದರೆ ಹಸಿವು ಕೇಳಬೇಕಲ್ಲ?ಅವ್ವ ನಮ್ಮನ್ನು ಹಸಿವಿನಿಂದ ಬಿಟ್ಟವಳಲ್ಲ. ಅವ್ವನ ಹಿಂದೆ ನಾವೂ ಕಾಡಿಗೆ ಹೋಗುತ್ತಿದ್ದೆವು. ಗೆಣಸು ತಂದು ಬೇಯಿಸಿ ತಿನ್ನುತ್ತಿದ್ದೆವು. ಬಾಳೆಕಾಯಿ, ಸಿಹಿಕುಂಬಳ, ಕೆಸುವಿನ ಗೆಡ್ಡೆ ಇವುಗಳನ್ನು ಬೇಯಿಸಿ, ಕೆಲವೊಮ್ಮೆ ಸುಟ್ಟು ತಿಂದಿದ್ದೇವೆ.

ಒಣಗಾಳಿ, ಬಿಸಿಲ ಝಳ, ಚಡಪಡಿಕೆ, ಮಳೆಯ ಸೂಚನೆ ಇಲ್ಲವೇ ಇಲ್ಲ. ಎಲ್ಲಾ ಮುಗಿದ ಮೇಲೆ

ಮುಂದೇನು? ಅಬ್ಬಾ! ಪ್ರಕೃತಿಯ ವಿಸ್ಮಯಕ್ಕೆ ಶಿರಬಾಗಲೇಬೇಕು. ಆ ನಮ್ಮ ಕಾಡಿನಲ್ಲಿ ಬೆಳೆದು ನಿಂತ ಮುಳ್ಳು ಬಿದಿರಿನ ಮೆಳೆಗಳು ಹೂ ಬಿಟ್ಟು ನಳನಳಿಸಿದವು! ಕಾಳು ಕಟ್ಟಿ ತೆನೆಬಾಗಿತು. ಒಣಗಿದ ಕಾಳು ಉದುರಲು ಗಾಳಿಗಾಗಿ ಕಾಯುತ್ತಿತ್ತು. ನೀರು ಹನಿಯದ ನಾಡಿನಲ್ಲಿ ಬಿದಿರು ಅಕ್ಕಿಯ ಸುಗ್ಗಿ! ನಾವು ಖಾಲಿ ಹೊಟ್ಟೆ ಖಾಲಿ ಬುಟ್ಟಿಯೊಡನೆ ಕಾಡಿನತ್ತ ಹೊರಟೆವು. ಬಿದಿರು ಮೆಳೆಯ ಸುತ್ತ ಕಸಕಡ್ಡಿ ತೆಗೆದವು. ಗುಡಿಸಿ ಅಂಗಳದಂತೆ ಮಾಡಿದೆವು. ಬೀಸುವ ಗಾಳಿಗೆ ಉದುರುವ ಕಾಳಿಗೆ ಕಾದು ಕುಳಿತೆವು. ಕಾಳು ಉದುರುತ್ತಿದ್ದಂತೆ ಗುಡಿಸಿ ಗುಡ್ಡೆ ಮಾಡಿದೆವು. ಅದೆಂತಹ ಉತ್ಸಾಹ!ಸಂಭ್ರಮ!ಜೀವಮಾನದ ಮೊದಲ ಆಹಾರ, ಬಿದಿರು ಅಕ್ಕಿಯ ಅನ್ನ ತಿನ್ನಲು ಬಾಯ್ತೆರೆದ ಮಕ್ಕಳು...

ಕಾಳನ್ನು ಬುಟ್ಟಿಗೆ ತುಂಬಿದೆವು. ಮನೆಗೆ ತಂದು ಕುಟ್ಟಿದೆವು. ಅವ್ವ ಅನ್ನಕ್ಕಿಟ್ಟಳು. ಅದು ಬೇಯಲು ಹೊತ್ತೆಷ್ಟು?ಅಕ್ಕ ಮತ್ತು ನಾನು ಒಲೆಯ ಮುಂದೆ ಕುಳಿತ ಆ ದಿನಗಳು ಇನ್ನೂ ಕಣ್ಣ ಮುಂದೆ ಕಟ್ಟುತ್ತಿದೆ. ನಾನಂತೂ ಅವ್ವನನ್ನು 'ಅವ್ವಾ ಹಸಿವು , ಇಕ್ಕವ್ವಾ'ಎನ್ನದೆ ಬಿಡಲಿಲ್ಲ. ಪಾಪ, ಆಕೆ ಏನು ಮಾಡಬೇಕು?ಹಸಿವು ತೀವ್ರವಾಯಿತೇ ವಿನಃ ಅಕ್ಕಿ ಕೂಡಲೇ ಬೇಯಲಿಲ್ಲ. ಕುಸುಲಕ್ಕಿ (ಸ್ಟೀಂ ರೈಸ್)ಯಾದರೂ ಬೇಗ ಬೇಯಬಹುದು, ಇದು ಅದಕ್ಕಿಂತಲೂ ತಡ. ಕೊನೆಗಂತೂ ತಟ್ಟೆಯಲ್ಲಿ ಬಿದಿರಕ್ಕಿಯ ಅನ್ನ! ನಮ್ಮ ಮಾಮೂಲಿ ಅನ್ನದಂತೆ ಮೃದುವಾಗಿರಲಿಲ್ಲ. ಗೋಧಿಯನ್ನು ಬೇಯಿಸಿ ತಿಂದರೆ ಹೇಗಾಗುತ್ತದೋ ಹಾಗೆ ಆಯಿತು. ಹೇಗಾದರೂ ಇರಲಿ, ಹೊತ್ತಿಗೆ ತುತ್ತು ಸಿಕ್ಕಿತಲ್ಲಾ! ಬಿದಿರಕ್ಕಿ ಮುಗಿವವರೆಗೂ ನಮಗೆ ಅದೇ ಊಟಕ್ಕಾಯಿತು.

ಈ ನಡುವೆ ಕೆಲವು ದನಗಳನ್ನು ಸಿಕ್ಕಿದ ದುಡ್ಡಿಗೆ ಮಾರಿದೆವು. ನಮ್ಮ ಪ್ರೀತಿಯ ಚಿಟ್ಟೆ ಹಸುವನ್ನು ಮಾರುವಾಗಲಂತೂ ನಾವು ಇಷ್ಟೇ ಅತ್ತಿದ್ದೇವೆಂದು ಹೇಳಲಾಗದು.

ಹೇಗೆ ಹೇಗೋ ಬರಗಾಲದ ಬವಣೆಯಿಂದ ಜೀವ ಉಳಿಸಿಕೊಂಡೆವು. ಮಳೆ ಹನಿಯತೊಡಗಿತು. ಹಸಿರು ಹರಡಿಕೊಳ್ಳತೊಡಗಿತು. ತೋಡು, ತೊರೆ, ಕೆರೆ ತುಂಬಿಕೊಳ್ಳತೊಡಗಿದವು. ರಟ್ಟೆಗಟ್ಟಿ ಇದ್ದವರು ಕೂಡಲೆ ಕೃಷಿ ಕೆಲಸದಲ್ಲಿ ತೊಡಗಿದರು. ಆದರೆ ಅನ್ನಕೊಟ್ಟ ಬಿದಿರು ಮೆಳೆಗಳು ಸಾಯತೊಡಗಿದವು!ಕೇವಲ ಒಂದೆರೆಡು ಮೆಳೆಗಳಲ್ಲ. ಆ ಸುತ್ತಲಿದ್ದ ಎಲ್ಲಾ ಮೆಳೆಗಳು ಸತ್ತೇಹೋದವು. ಬಿದಿರು ತನ್ನ ಜೀವಿತದಲ್ಲಿ ಒಮ್ಮೆ ಮಾತ್ರ ಫಸಲು ಕೊಡುತ್ತದೆ. ನಂತರ ಮರುವರ್ಷ ಸಾಯುತ್ತದೆಯಂತೆ. ಹಾಗೆ ಆ ಎಲ್ಲಾ ಮೆಳೆಗಳು ಜೀವಕ್ಕೆ ಜೀವಕೊಟ್ಟು ಸತ್ತುಹೋದವು.

ಒಣಗಿದ ಬಿದಿರನ್ನು ಕಡಿಯುವ ಕೆಲಸ ಆ ಊರಿನವರಿಗೆ ಸಿಕ್ಕಿತು. ನೂರಾರು ಲೋಡುಗಟ್ಟಲೆ ಬಿದಿರು ಕಾರ್ಖಾನೆ ಸೇರಿತು.

◆◆◆◆◆

ಮರೆಯಲಾಗದ ಅನುಭವ

-ಕು.ಯಾಲದಾಳು ಜಯಲಕ್ಷ್ಮಿ ಗಿರಿಯಪ್ಪ
ಕಡಿಯತ್ತೂರು ಗ್ರಾಮ, ಕಾರುಗುಂದ.



ದೂರದ ಬೆಟ್ಟವನ್ನು ನೋಡುತ್ತಾ, ಸುತ್ತಮುತ್ತ ಆವರಿಸಿದ್ದ ವನಗಳ ರಾಶಿಗಳನ್ನು ಎಣಿಸುತ್ತಾ, ತಂಪಾಗಿ ಬೀಸುತ್ತಿದ್ದ ಗಾಳಿಯ ಸವಿಯನ್ನು ಸವಿಯುತ್ತಾ ಸಿಂಚನ ಹಾಗೂ ಶಮಿತ ಸಂಪಿಗೆ ಮರದಡಿಯಲ್ಲಿ ಕುಳಿತಿದ್ದರು.

ಸಿಂಚನ ಬಾಲ್ಯದಿಂದಲೂ ಕಥೆಗಳನ್ನು ಬರೆಯುವ ಹವ್ಯಾಸವನ್ನು ಇಟ್ಟುಕೊಂಡಿದ್ದಳು. ಚಿಕ್ಕಮಕ್ಕಳ ಕಥೆಯನ್ನು ಬರೆಯುತ್ತಾ ಸರಿದಂತೆ ದೊಡ್ಡಕಥೆಯನ್ನು ಬರೆಯಲಾರಂಭಿಸಿದಳು. ಹೀಗೆ ಅವಳಲ್ಲಿದೊಡ್ಡ ಕಥೆಗಾರ್ತಿಯಾಗಬೇಕೆಂಬ ಹಂಬಲ ಮನೆ ಮಾಡಿತು. ದಿನಪತ್ರಿಕೆಯಲ್ಲಿ ಬರುವ ಕಥೆಗಳನ್ನೆಲ್ಲಾ ಓದುವುದರಲ್ಲಿ ಶಮಿತ ಮೊದಲಿನವಳಾಗಿದ್ದಳು. ಯಾವಾಗಲೂ ಬೆಳಿಗ್ಗೆ ಎದ್ದು ದಿನಪತ್ರಿಕೆಯನ್ನು ಓದುವ ಶಮಿತ ಕಥೆಗಳು ಪ್ರಕಟವಾಗುವ ದಿನವನ್ನಂತೂ ಕಾಯುತ್ತಾ ಕುಳಿತಿರುತ್ತಿದ್ದಳು. ಒಮ್ಮೆ ಕಥೆಯನ್ನು ಓದುತ್ತಾ ಹೋದಂತೆ ಅದರ ಲೇಖಕಿಯ ಹೆಸರನ್ನು ಓದಿದಳು. ಆ ಕಥೆಯಂತೂ ಅವಳ ಪೂರ್ಣ ಮನಸ್ಸನ್ನು ಗೆದ್ದಿತ್ತು. ಆ ಕಥೆಯ ಲೇಖಕಿ ಈ ಸಿಂಚನ ಆಗಿದ್ದಳು. ಶಮಿತಳಿಗೆ ಕಥೆಗಾರ್ತಿ ಆಗಬೇಕೆಂಬ ಆಸೆ ಇದ್ದರೂ, ಅವಳಿಂದ ಬರೆಯಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲಾ ರೀತಿಯ ಕಥೆಗಳು ಅವಳ ಮನದಲ್ಲಿ ಹುದುಗಿತ್ತು. ಅವಳು ಮುದ್ದಾಗಿ ಬರೆಯುತ್ತಿದ್ದ ತನ್ನ ಕೈಯ ಬೆರಳುಗಳನ್ನು ಕಳೆದುಕೊಂಡಿದ್ದಳು. ಹೀಗೆ ಕಥೆಯನ್ನು ಓದುತ್ತಿದ್ದ ಶಮಿತಳಿಗೆ ಸಿಂಚನಳನ್ನು ಭೇಟಿಮಾಡಬೇಕೆಂಬ ಆಸೆಯಾಯಿತು. ಅವಳು ದಿನಪತ್ರಿಕೆಯ ಕಾರ್ಯಾಲಯಕ್ಕೆ ಹೋಗಿ ಅವಳ ವಿಳಾಸವನ್ನು ತಂದಳು. ನಂತರ ಒಂದೊಂದೇ ಪತ್ರವನ್ನು ತನ್ನ ತಮ್ಮನ ಕೈಯಿಂದ ಬರೆಯಿಸಿ ಅವಳೊಂದಿಗೆ ಮಾತನಾಡುತ್ತಿದ್ದಳು. ಪತ್ರಗಳ ರಾಶಿಯೊಂದಿಗೆ ಅವರ ಗೆಳೆತನ ಬೆಳೆಯಲಾರಂಭಿಸಿತು. ಕೊನೆಯಲ್ಲೊಂದು ದಿನ ಭೇಟಿಯಾಗಲು ಇಬ್ಬರೂ ಒಂದು ಸ್ಥಳವನ್ನು ನಿರ್ಧರಿಸಿ, ಪರಸ್ಪರ ಭೇಟಿಯಾದರು. ಅಂದಿನಿಂದ ಅವರಿಬ್ಬರೂ ತುಂಬಾ ಹತ್ತಿರದ ಗೆಳತಿಯರಾದರು.

ಅದೊಂದು ದಿನ ಶಮಿತ ಸಿಂಚನಳಲ್ಲಿ ಒಂದು ಬೇಡಿಕೆಯನ್ನು ಮುಂದಿಟ್ಟಳು. ಅವಳ ಆ ಬೇಡಿಕೆಯೆಂದರೆ ತಾನು ನಿಜವಾಗಿ ಅನುಭವಿಸಿದ ಮರೆಯಲಾಗದಂಥ ಒಂದು ಕಥೆಯನ್ನು ಬರೆಯಬೇಕಾಗಿತ್ತು. ಆ ಕಥೆಯನ್ನು ಎಲ್ಲಾ ಜನರು ಓದಿ ತನ್ನ ಗೆಳತಿಯ ಮೆಚ್ಚುಗೆಯನ್ನು ಪಡೆಯಬೇಕೆಂಬುದಾಗಿತ್ತು. ಅಭಿಮಾನಿಯಾದ ಶಮಿತ ಗೆಳತಿಯಾದ ಸಿಂಚನಳಿಗೆ ತನ್ನ ಕಥೆಯನ್ನು ಹೇಳುತ್ತಾ ಸ್ಫೂರ್ತಿಯನ್ನು ನೀಡಿದಳು. ಅದೊಂದು ಸುಂದರವಾದ, ವಿಶಾಲವಾದ ಅರಮನೆಯಂತಹ ಮನೆಯಾಗಿತ್ತು. ಆ ಮನೆಯಲ್ಲಿ ಸುಖ-ಸಂತೋಷದಿಂದ ಕೂಡಿದ್ದ ಎರಡು ಕುಟುಂಬಗಳಿದ್ದವು. ಒಂದು ಕುಟುಂಬದ ಯಜಮಾನನ ಸ್ಥಾನವನ್ನು ಗಣೇಶ ವಹಿಸಿದ್ದರು. ಇನ್ನೊಂದು ಕುಟುಂಬದಲ್ಲಿ ವೆಂಕಟರಮಣ ಅವರ ತಮ್ಮನಾಗಿ ತಮ್ಮ ಕುಟುಂಬವನ್ನು ಸಾಗಿಸುತ್ತಿದ್ದರು. ಬಾಲ್ಯದಿಂದಲೂ ಇಬ್ಬರೇ ಅಣ್ಣ ತಮ್ಮಂದಿರಾಗಿದ್ದರೂ ಸ್ನೇಹಿತರಂತೆ ಜೊತೆಯವರಾಗಿದ್ದರು. ಅವರಿಬ್ಬರಿಗೂ ಮುದ್ದಾದ ಒಬ್ಬಳೇ ಒಬ್ಬಳು ತಂಗಿಯಿದ್ದಳು. ಈ ಮೂವರು ಬಾಲ್ಯದಲ್ಲಿದ್ದಾಗ ಒಬ್ಬರನ್ನೊಬ್ಬರು ಬಿಟ್ಟಿರುತ್ತಿರಲಿಲ್ಲ. ತಮ್ಮ ಅಪ್ಪ,

ಅಮ್ಮಂದಿರಿಗೆ ಸ್ವಲ್ಪವೂ ಕಷ್ಟ ನೋವುಗಳನ್ನು ಕೊಡದೆ ಅವರು ಹೇಳುವ ಬುದ್ಧಿಮಾತುಗಳನ್ನು ಗಮನದಲ್ಲಿಟ್ಟು ಕೇಳಿ ಅದನ್ನೇ ಅನುಸರಿಸುತ್ತಿದ್ದರು. ಅವರು ಹೇಳಿದ ಎಲ್ಲಾ ಕೆಲಸಗಳನ್ನು ನಾ ಮುಂದು ತಾನು ಮುಂದು ಎಂದು ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ಮಾಡಿ ಮುಗಿಸುತ್ತಿದ್ದರು. ಹೀಗೆ ಸುಖದಿಂದಿದ್ದ ಕುಟುಂಬ ಬಾಲ್ಯದ ದಿನಗಳಲ್ಲೇ ಸಾಗಲು ಸಾಧ್ಯವೇ ? ಮೂವರು ಮಕ್ಕಳು ಬೆಳೆದು ದೊಡ್ಡವರಾದರು. ಇಬ್ಬರು ಅಣ್ಣ ತಮ್ಮಂದಿರ ಮುದ್ದಿನ ತಂಗಿ ವಿಸ್ಮಯಳನ್ನು ವಿವಾಹ ಮಾಡಿ ಗಂಡನ ಮನೆಗೆ ಕಳಿಸಿದರು. ತನ್ನ ನೋವು ತುಂಬಿದ ಅಳಲನ್ನು ಯಾರೊಡನೆಯೂ ಹೇಳಿಕೊಳ್ಳದೆ ಮನಸ್ಸಿನಲ್ಲಿಯೇ ಮುಚ್ಚಿಟ್ಟುಕೊಂಡು ಮೆಲ್ಲನೆ ಗಂಡನ ಮನೆಗೆ ತೆರಳಿದಳು. ಕೆಲವೇ ವರ್ಷಗಳಲ್ಲಿ ಅಣ್ಣ ಗಣೇಶನಿಗೆ ವಿವಾಹ ಮಾಡಿದರು. ಆ ಮನೆಗೆ ಜಗನ್ನಾಥ ಹಾಗೂ ಶ್ಯಾಮಲರವರ ಮೊದಲ ಸೊಸೆಯಾಗಿ ತನ್ಮಯ ಬಲಗಾಲನ್ನಿಟ್ಟು ಮನೆಯನ್ನು ಪ್ರವೇಶಿಸಿದಳು. ತಮ್ಮ ಮಗಳು ವಿಸ್ಮಯಳನ್ನು ಕಳಿಸಿ ತನ್ಮಯಳ ಪ್ರೀತಿಯನ್ನು ಇಬ್ಬರೂ ಸಂಪಾದಿಸಿಕೊಂಡರು. ಮನೆಗೆ ಬಂದ ಲಕ್ಷ್ಮಿಯಂತೆ ಸುಖವಾಗಿ ಜೀವನ ನಡೆಸುತ್ತಿದ್ದ ಆ ಕುಟುಂಬಕ್ಕೆ ಇನ್ನೊಂದು ಸೊಸೆಯನ್ನು ಆರಿಸಿ ತರಲಾಯಿತು. ಅವಳೇ ಆ ಮನೆಗೆ ತಕ್ಕ ಸೊಸೆಯಾಗಿ ಆ ದೇವರು ಆರಿಸಿದ ಕಲ್ಪಿತ ಆಗಿದ್ದಳು. ತನ್ಮಯ ಹಾಗೂ ಕಲ್ಪಿತ ಇಬ್ಬರೂ ಬೇರೆ ಬೇರೆ ಮನೆಗಳಿಂದ ಬಂದರೂ ಕೂಡ ಒಂದೇ ತಾಯಿ ಮಕ್ಕಳಂತಿದ್ದರು. ಹೀಗೆ ಕೆಲವು ವರ್ಷಗಳು ಸರಿದಾಗ ಅಣ್ಣ-ತಮ್ಮಂದಿರಲ್ಲಿ ಉಂಟಾದ ಚಿಕ್ಕ ವಿರಸದಿಂದಾಗಿ ತಮ್ಮಿಬ್ಬರ ಅಪ್ಪ ಹಾಗೂ ಅಮ್ಮನವರಿಬ್ಬರೂ ತಂಗಿ ವಿಸ್ಮಯಳ ಮನೆಯನ್ನು ಸೇರಬೇಕಾಯಿತು. ಅಂದಿನಿಂದ ಒಂದಾಗಿದ್ದ ಆ ಮನೆಯ ಮಧ್ಯೆ ಬಿರುಕು ಉಂಟಾಗಿ ಮಧ್ಯದಲ್ಲಿ ಗೋಡೆಯನ್ನು ನಿರ್ಮಿಸಿ, ಒಂದೇ ಕೆರೆಯ ನೀರನ್ನು ಎರಡು ಬದಿಗಳಲ್ಲಿ ಹರಿಸಲಾಯಿತು. ಅಕ್ಕ ತಂಗಿಯರಂತಿದ್ದ ತನ್ಮಯ, ಕಲ್ಪಿತ ತನ್ನ ಗಂಡಂದಿರು ಹೇಳುವ ಮಾತಿಗೆ ಕಿವಿಕೊಟ್ಟು ಶತ್ರುಗಳಾದರು. ಅಷ್ಟರಲ್ಲೇ ವಿಸ್ಮಯಳಿಗೆ ಜನಿಸಿದ ಮಗಳು ಅನಿಕೇತನಳಿಗೆ ಮೂರು ವರ್ಷ ಆಗಲಾರಂಭಿಸಿತು. ತನ್ನ ತವರು ಮನೆಯಲ್ಲಿ ನಡೆದ ಈ ರೀತಿಯ ದುರವಸ್ಥೆ ಕೇಳಿದ ವಿಸ್ಮಯ ತುಂಬಾ ನೊಂದುಕೊಂಡಳು. ಅಣ್ಣ-ತಮ್ಮ ಎನ್ನುವುದನ್ನು ಮರೆತು ಸ್ನೇಹಿತರಾಗಿದ್ದ ಇವರು ಯಾಕೆ ಈ ರೀತಿ ದಿಕ್ಕಾಪಾಲಾದರೆಂದು ಯೋಚಿಸುತ್ತಾ ಅವಳು ಕಣ್ಣೀರಿನ ಧಾರೆಯನ್ನು ಹರಿಸಿದಳು. ಅವರಿಬ್ಬರ ಒಗ್ಗಟ್ಟಿಗೆ ಆ ದೇವರಲ್ಲಿ ಹರಕೆಯಿತ್ತಳು. ಇವರಿಬ್ಬರ ಕಲಹದಲ್ಲಿ ಸಾಕಿ ಬೆಳೆಸಿದ ಅಪ್ಪ-ಅಮ್ಮನವರನ್ನು ಸಾಕಲಾರದೆ ಹೋದರಲ್ಲ ಅಂದುಕೊಂಡಳು. ಗಣೇಶ ಹಾಗೂ ತನ್ಮಯ ದಂಪತಿಗಳಿಗೆ ಮಕ್ಕಳಿರಲಿಲ್ಲ. ಹೀಗಿರುವಾಗ ಕಲ್ಪಿತ ಮುದ್ದಾದ ಗಂಡು ಮಗುವನ್ನು ಪರಿಚಯಿಸಿದಳು. ಆ ಮಗು ಬೆಳೆಯುತ್ತಿದ್ದಂತೆ ತನ್ಮಯಳಿಗೆ ಅದನ್ನು ಎತ್ತಿ ಮುದ್ದಾಡಬೇಕೆಂಬ ಹಂಬಲವುಂಟಾಯಿತು. ಆದರೇನು ಮಾಡುವುದು ಬೆದರಿಕೆಗೆ ತಲೆತಗ್ಗಿಸಬೇಕಾಯಿತು.

ದಿನಗಳು ಸರಿದಂತೆ ಪುಟ್ಟ ಬಾಲಕನನ್ನು ಎತ್ತಿಕೊಳ್ಳಲೆಂದು ತನ್ಮಯ ಹೋದಾಗ ಅವಳ ಕೈಗೆ ಏನೋ ಪೆಟ್ಟಾದಂತಾಯಿತು. ತಿರುಗಿದಾಗ ಗಂಡನ ತಮ್ಮ ತನ್ನ ಮಗುವನ್ನು ಮುಟ್ಟಬಾರದೆಂದು ಒಂದು ದೊಣ್ಣೆಯನ್ನು ಅವಳಿಗೆಂದೇ ಎಸೆದಿದ್ದನು. ಇದರಿಂದಾಗಿ ಉರಿಯುತ್ತಿದ್ದ ಬೆಂಕಿ ಪುನಃ ತುಪ್ಪ ಸುರಿದಂತಾಗಿತ್ತು. ಮರುದಿನವೇ ಅಣ್ಣ-ತಮ್ಮಂದಿರು ಕತ್ತಿ, ಕೊಡಲಿ ಹಿಡಿದು ಜಗಳಕ್ಕೆ ನಿಂತರು. ಜನರೆಲ್ಲಾ ಸೇರಿ ಸಮಾಧಾನ ಮಾಡಿ ಶಾಂತಿಯಾಗುವಂತೆ ಮಾಡಿದರು. ಒಂದು ತಿಂಗಳ ನಂತರ ವಿಸ್ಮಯ ತನ್ನ ತಂದೆ ಸ್ವರ್ಗಸ್ಥರಾದರೆಂದು ಅಣ್ಣಂದಿರಿಗೆ ತಿಳಿಸಿದಾಗ ಇಬ್ಬರೂ ಅವರವರ ಪತ್ನಿಯರನ್ನು ಕಳಿಸಿ ಸ್ವಾರ್ಥಿಗಳಾದರು. ಆದರೂ ಮನದಲ್ಲಿ ಇಬ್ಬರೂ ಮರುಗಿದರು. ಅಪ್ಪನ ಸಾವಿಗೆ ಬಾರದ ನೀವು ತನ್ನ ಸಾವಿಗೂ ಬರಬಾರದೆಂದು ವಿಸ್ಮಯ ಕಟ್ಟಪ್ಪಣೆ ಮಾಡಿದಳು.

